ವಿಷಯಾನುಕ್ರಮಣಿಕೆ

ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ

ಸಂಖ್ಯೆ—೩೧

ಶ್ರೀ ವ್ಯಾಸಮಹರ್ಷಿ ಪ್ರಣೀತಂ

ಶ್ರೀ

ವರಾಹಮಹಾಪುರಾಣಂ

(ಕನ್ನಡ ಅನುವಾದ ವಿವರಣೆಗಳೊಡನೆ)

ಐದನೆಯ ಭಾಗ

(೧೮೧—೨೧೮ ಅಧ್ಯಾಯಗಳು)

ಅನುವಾದಕ :

ಆಸ್ಥಾನ ವಿದ್ವಾನ್, ಮ. ರ. ವರದಾಚಾರ್ಯ

ವಿಶ್ರಾಂತ ಕರ್ಣಾಟಾಧ್ಯಾಪಕ, ಮಹಾರಾಜರವರ ಕಾಲೇಜ್, ಮೈಸೂರು.

ಮೈಸೂರು :

ಶ್ರೀ ಹನುಮಾನ್ ಪವರ್ ಪ್ರೆಸ್,

೧೯೪೮

॥ ಶ್ರೀರಸ್ತು ॥

ಮುನ್ನುಡಿ

ಶ್ರೀವರಾಹಮಹಾಪುರಾಣರತ್ನಮಾಲೆಯಲ್ಲಿ ಐದನೆಯ ರತ್ನವಾದ ಇದು ನಾಯಕಮಣಿ ಅಥವಾ ಪದಕವಾಗಿ ಮಾಲೆಯನ್ನು ಪೂರ್ಣಗೊಳಿಸಿ, ಹೊಳೆಯುತ್ತ ಕರ್ಣಾಟ ಭೂದೇವಿಯ ಕೊರಳನ್ನು ಅಲಂಕರಿಸುವುದಾಗಿದೆ.

ಈ ಸಂಪುಟವು ಪರಮಾತ್ಮನ ಅರ್ಚಾವತಾರವಿಚಾರದಿಂದ ಆರಂಭವಾಗುವುದು. ಎಂದರೆ ದಾರುಶಿಲಾಮೃತ್ಕಾಂಸ್ಯರಜತಸುವರ್ಣಾದಿಗಳಿಂದ ದೇವಮೂರ್ತಿಗಳನ್ನು ನಿರ್ಮಿಸುವ ಪ್ರತಿಷ್ಠೆಮಾಡುವ ಮತ್ತು ಪೂಜಿಸುವ ವಿಧಾನವು ಮೊದಲು ಉಕ್ತವಾಗಿದೆ. ಬಳಿಕ ಸ್ವರ್ಗಾದಿಲೋಕಗಳ ಮತ್ತು ದೇವಮನುಷ್ಯಾದಿಗಳ ಸೃಷ್ಟಿವಿಚಾರವಿದೆ. ಅನಂತರ ನಚಿಕೇತಮುನಿಯ ಉಪಾಖ್ಯಾನದ ಮೂಲಕ ಯಮಲೋಕ, ಪಾಪಪುಣ್ಯಗಳು, ಪತಿವ್ರತಾ ಮಹಿಮೆ, ಪಾಪಪರಿಹಾರಕವೂ ಸುಕೃತಪ್ರದವೂ ಆದ ಗೋಸೇವೆ, ಸೂರ್ಯನಮಸ್ಕಾರ, ಏಕಾದಶೀದ್ವಾದಶ್ಯಾದಿವ್ರತಗಳು ಇವುಗಳ ವಿಚಾರವು ಮನೋಹರವಾದ ಕಥೆಗಳೊಡನೆ ವಿಶದವಾಗಿವೆ. ಆಮೇಲೆ ಗೋಕರ್ಣೇಶ್ವರಮಹಿಮೆಯು ಚಿತ್ರಿತವಾಗಿ, ಫಲಶ್ರುತಿಯಿಂದ ಪುರಾಣವು ಪರಿಪೂರ್ಣವಾಗುವುದು.

ಮಕ್ಕಳ ವಿಷಯದಲ್ಲಿ ತಾಯಿತಂದೆಗಳಿಬ್ಬರಿಗೂ ವಾತ್ಸಲ್ಯವಿದ್ದರೂ ತಂದೆಯು ಮಕ್ಕಳ ತಪ್ಪಿತಕ್ಕಾಗಿ ಕೋಪಿಸಿ, ಅವರನ್ನು ದಂಡಿಸಲು ಯತ್ನಿಸಬಹುದು. ತಾಯಿಯಾದರೆ ಆ ತಪ್ಪುಗಳನ್ನೂ ಮನ್ನಿಸಿ, ದಂಡಿಸದೆ ಮಕ್ಕಳನ್ನು ಕಾಪಾಡುವಂತೆ ಪತಿಯನ್ನು ಪ್ರಾರ್ಥಿಸಿ ಮರೆಹಾಕಿಕೊಳ್ಳುವಳಲ್ಲವೆ! ಅಂತೆಯೇ ಲೋಕಜನನಿಯಾದ ಭೂದೇವಿಯು ತನ್ನ ಪ್ರಜೆಗಳ ಅಪರಾಧಗಳನ್ನು ಕ್ಷಮಿಸುವಂತೆಯೂ ಅವರ ಶ್ರೇಯಸ್ಸಿಗೆ ಅತಿಸುಲಭವಾದ ಉಪಾಯವನ್ನು ಹೇಳುವಂತೆಯೂ ತನ್ನ ಪತಿಯಾದ (ಶ್ರೀವರಾಹ) ಪರಮಾತ್ಮನನ್ನು ಪ್ರಾರ್ಥಿಸುವಳು.

ಸಾಮಾನ್ಯಮನುಷ್ಯರು ಕರ್ಮಜ್ಞಾನಯೋಗಗಳಿಂದ ಮೋಕ್ಷವನ್ನು ಸಂಪಾದಿಸುವುದೂ ಮರಣಕಾಲದಲ್ಲಿ ಪ್ರಜ್ಞೆಯೇ ಇರುವುದಿಲ್ಲವಾದುದರಿಂದ ಆಗ ಪರಮಾತ್ಮನ ಸ್ಮರಣೆಯೂ ದುರ್ಲಭ. ಆದುದರಿಂದ ಮನುಷ್ಯರು ಆರೋಗರಾಗಿ ಪ್ರಜ್ಞೆಸರಿಯಾಗಿರುವಾಗ ಭಕ್ತಿಯಿಂದ ಪರಮಾತ್ಮನ ಸ್ಮರಣೆಯನ್ನು ಮಾಡುತ್ತಿದ್ದ ಮಾತ್ರದಲ್ಲೇ ಅವರಿಗೆ ಪರಮಗತಿಯು ಲಭಿಸುವುದು. ಎಂಬ ಸರ್ವಸುಲಭವಾದ ವರವನ್ನು ಶ್ರೀವರಾಹದೇವನಿಂದ ಪಡೆಯುವಳು. ಇದೇ ಶ್ರೀವರಾಹಮಹಾಪುರಾಣದ ಪರಮಫಲವಾಗಿರುವುದು. ಆದುದರಿಂದ ಶ್ರೀವರಾಹಮಹಾಪುರಾಣವು ಮೊದಲು ಕರ್ಮಜ್ಞಾನ ಭಕ್ತಿಯೋಗಗಳನ್ನು ಹೇಳಿ, ಕಡೆಗೆ

" ಸರ್ವಧರ್ಮಾನ್ ಪರಿತಜ್ಯ ಮಾಮೇಕಂ ಶರಣಂವ್ರಜ " ।
" ಅಹಂತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ" ॥

ಎಂದು ಅಭಯವನ್ನು ಕೊಡುವ ಶ್ರೀಭಗವದ್ಗೀತೆಯಂತಿದೆಯೆಂದು ಹೇಳಬಹುದು. ಹೀಗಿರುವುದರಿಂದಲೇ ಶ್ರೀವ್ಯಾಸಮಹರ್ಷಿಗಳೇ " ಪುರಾಣಾನಾಂಹಿ ಸರ್ವೇಷಾಂ ವಾರಾಹಂ ಘೃತಸನ್ನಿಭಂ " ಎಂದೂ " ವಾರಾಹಂ ಪರಮಾದ್ಭುತಂ " ಎಂದೂ ಹೇಳಿರುವರು.

ಇಂತಹ ಪುರಾಣಶಿರೋಮಣಿಯು ಸರ್ವರಿಗೂ ಸುಲಭವಾಗಿ ದೊರೆಯುವಂತೆ ಮಾಡಿ, ಉಪಕರಿಸುತ್ತಿರುವ ಆಳುವ ಮಹಾಸ್ವಾಮಿಯವರು ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್, ಜಿ. ಸಿ. ಬಿ., ಜಿ. ಸಿ. ಎಸ್. ಐ. ಮಹಾಪ್ರಭುಗಳವರಿಗೂ, ಅವರ ಕುಟುಂಬಕ್ಕೂ ಆಶ್ರಿತರಿಗೂ ಪರಮಾತ್ಮನು ಆಯುರಾರೋಗ್ಯಾದಿ ಸಕಲ ಸನ್ಮಂಗಳಗಳನ್ನೂ ದಯೆಪಾಲಿಸಲೆಂದು ಪ್ರಾರ್ಥಿಸುವೆನು.

ಸರ್ವಧಾರಿಸಂ॥ ಶ್ರಾ॥
ಕೃಷ್ಣೈಕಾದಶೀ
ಸೋಮವಾರ
30—8—1948

ಅನುವಾದಕ
ಮಡೇನೂರ ರಘುನಾಥಾಚಾರ್ಯರ ಮಗ ವರದಾಚಾರ್ಯ
ಆಸ್ಥಾನ ವಿದ್ವಾನ್.

॥ ಶ್ರೀರಸ್ತು ॥

ಶ್ರೀ ವರಾಹಮಹಾಪುರಾಣದಲ್ಲಿ ಐದನೆಯ ಭಾಗದ

ವಿಷಯಾನುಕ್ರಮಣಿಕೆ

	ಪುಟಸಂಖ್ಯೆ
ನೂರೆಂಬತ್ತೊಂದನೆಯ ಅಧ್ಯಾಯ	
ಪರಮಾತ್ಮನ ಅರ್ಚಾವತಾರವಿಚಾರವಾಗಿ ಭೂದೇವಿಯ ಪ್ರಶ್ನೆಗೆ ಶ್ರೀವರಾಹದೇವನ ಉತ್ತರದಲ್ಲಿ ದಾರುಮಯ ಮೂರ್ತಿಯ ನಿರ್ಮಾಣಪ್ರತಿಷ್ಠಾಕ್ರಮಗಳು.	1-6
ನೂರೆಂಬತ್ತೆರಡನೆಯ ಅಧ್ಯಾಯ	
ಶಿಲಾಮೂರ್ತಿನಿರ್ಮಾಣಪ್ರತಿಷ್ಠಾವಿಧಿಫಲಾದಿಗಳು.	7-18
ನೂರೆಂಬತ್ತಮೂರನೆಯ ಅಧ್ಯಾಯ	
ಮೃನ್ಮಯಮೂರ್ತಿನಿರ್ಮಾಣಪ್ರತಿಷ್ಠಾಪೂಜಾವಿಧಾನಾದಿಗಳು.	19-27
ನೂರೆಂಬತ್ತನಾಲ್ಕನೆಯ ಅಧ್ಯಾಯ	
ತಾಮ್ರಪ್ರತಿಮಾಸ್ಥಾಪನಪೂಜಾದಿವಿಧಿ.	28-35
ನೂರೆಂಬತ್ತೈದನೆಯ ಅಧ್ಯಾಯ	
ಕಾಸ್ಯ(ಕಂಚಿನ) ವಿಗ್ರಹಪ್ರತಿಷ್ಠಾದಿವಿಧಿ.	36-43
ನೂರೆಂಬತ್ತಾರನೆಯ ಅಧ್ಯಾಯ	
ರಜತ(ಬೆಳ್ಳಿಯ) ವಿಗ್ರಹಪ್ರತಿಷ್ಠಾದಿವಿಧಿ.	44-52
ಸುವರ್ಣ(ಚಿನ್ನದ) ,, ,,	53
ಮನೆಯಲ್ಲಿ ಪೂಜಿಸಬಹುದಾದ ವಿಗ್ರಹಗಳ ಮತ್ತು ಸಾಲಗ್ರಾಮಮೂರ್ತಿಗಳ ಗಣನೆ ಮತ್ತು ಸಾಲಗ್ರಾಮದಾನ ವಿಷ್ಣುಪಾದತೀರ್ಥಗಳ ಮಹಿಮೆ.	54-58

ಪುಟಸಂಖ್ಯೆ

ನೂರೆಂಬತ್ತೇಳನೆಯ ಅಧ್ಯಾಯ

ಪಿತೃಯಜ್ಞ (ಶ್ರಾದ್ಧೋತ್ಪತ್ತಿ), ತ್ರಿಮೂರ್ತಿಗಳ ಉದಯ ಚಾತುರ್ವರ್ಣ್ಯಸೃಷ್ಟಿ, ನಿಮಿಯು ಮಗನಿಗೆ ಶ್ರಾದ್ಧವನ್ನು ಮಾಡಿದುದು. ಮನುಷ್ಯರ ಮರಣಕಾಲದಲ್ಲೂ ಆಮೇಲೂ ಮಾಡಬೇಕಾದ ಕಾರ್ಯಗಳು. 59–86

ನೂರೆಂಬತ್ತೆಂಟನೆಯ ಅಧ್ಯಾಯ

ಉತ್ತರಕ್ರಿಯಾವಿಚಾರ. 87–110

ನೂರೆಂಬತ್ತೊಂಬತ್ತನೆಯ ಅಧ್ಯಾಯ

ಪ್ರೇತಶ್ರಾದ್ಧಭೋಜನಪ್ರಾಯಶ್ಚಿತ್ತ, (ಶ್ರಾದ್ಧನಿಮಂತ್ರಣಾನರ್ಹರು, ಸತ್ಪಾತ್ರದಾನಾದಿಮಹಿಮೆ, ಮೇಧಾತಿಥಿಯೆಂಬ ರಾಜನು ಪಿತೃಗಳಿಗೆ ಶ್ರಾದ್ಧಮಾಡಿದುದು. 111–124

ನೂರತೊಂಬತ್ತನೆಯ ಅಧ್ಯಾಯ

ಶ್ರಾದ್ಧವಿಚಾರ—ಬ್ರಹ್ಮರುದ್ರವಿಷ್ಣುಗಳೇ ಪಿತೃಪಿತಾಮಹಪ್ರಪಿತಾಮಹನಾಮದಿಂದ ಆವಾಹಿತರಾಗುವರೆಂಬುದು, ಶ್ರಾದ್ಧದಲ್ಲಿ ಅಗ್ನಿಯಲ್ಲಿ ಹೋಮಮಾಡಬೇಕಾದುದಕ್ಕೆ ಕಾರಣ, ನಿಮಂತ್ರಣಾರ್ಹಾನರ್ಹರು, ದೋಷಪ್ರಾಯಶ್ಚಿತ್ತಾದಿಗಳು. 125–154

ನೂರತೊಂಬತ್ತೊಂದನೆಯ ಅಧ್ಯಾಯ

ಮಧುಪರ್ಕೋತ್ಪತ್ತಿ ಮತ್ತು ದಾನವಿಚಾರ. 155–160

ನೂರತೊಂಬತ್ತೆರಡನೆಯ ಅಧ್ಯಾಯ

ಸರ್ವಶಾಂತಿವರ್ಣನೆ, ಮಧುಪರ್ಕವಿಚಾರ. 161–170

ನೂರತೊಂಬತ್ತಮೂರನೆಯ ಅಧ್ಯಾಯ.

ನಚಿಕೇತನ ಯಮಪುರಪ್ರಯಾಣವರ್ಣನೆ. 171–182

ನೂರ ತೊಂಬತ್ತನಾಲ್ಕನೆಯ ಅಧ್ಯಾಯ

ನಚಿಕೇತನ ಪುನರಾಗಮನವರ್ಣನೆ. 183–190

ಪುಟಸಂಖ್ಯೆ

ನೂರ ತೊಂಬತ್ತೈದನೆಯ ಅಧ್ಯಾಯ

ನಚಿಕೇತನು ತಂದೆಗೂ ಋಷಿಗಳಿಗೂ ಯಮಲೋಕದ ವಿಚಾರ ವಾಗಿ ಹೇಳಲಾರಂಭಿಸಿದುದು ಮತ್ತು ಅವರ ಪ್ರಶ್ನೆ. 191-197

ನೂರ ತೊಂಬತ್ತಾರನೆಯ ಅಧ್ಯಾಯ

ನಚಿಕೇತನು ಹೇಳಿದ ಯಮಪುರವರ್ಣನೆ. 198-207

ನೂರ ತೊಂಬತ್ತೇಳನೆಯ ಅಧ್ಯಾಯ

ಯಮಪುರದ ಗೋಪುರಗಳು, ಯಮಸಭೆ, ಸಭಿಕರರೂಪ ಗುಣಕಾರ್ಯಗಳು. 208-218

ನೂರ ತೊಂಬತ್ತೆಂಟನೆಯ ಅಧ್ಯಾಯ

ಯಮರಾಜನು ನಚಿಕೇತನಿಗೆ ಮಾಡಿದ ಆದರ, ನಚಿಕೇತನು ಮಾಡಿದ ಯಮಸ್ತುತಿ. 219-224

ನಚಿಕೇತನು ನೋಡಿದ ಪಾಪಿಗಳ ಯಾತನೆ ಮತ್ತು ಪುಣ್ಯಶಾಲಿಗಳ ಸೌಖ್ಯಾದಿಗಳು. 225-236

ನೂರ ತೊಂಬತ್ತೊಂಬತ್ತನೆಯ ಅಧ್ಯಾಯ

ನರಕಯಾತನೆಯ ವಿವರ. 237-245

ಇನ್ನೂರನೆಯ ಅಧ್ಯಾಯ

ನರಕಯಾತನೆ ಸಹಕಾರವನ ಯಮಚುಲ್ಲೀಯಕುಂಡ ಶೂಲಗ್ರಹಪರ್ವತಗಳ ವರ್ಣನೆ. 246-261

ಇನ್ನೂರೊಂದನೆಯ ಅಧ್ಯಾಯ

ನರಕದಲ್ಲಿ ಪಾಪಿಗಳನ್ನು ಹಿಂಸಿಸಿ ಸೋತು, ಇನ್ನು ದಂಡಿಸ ಲಾರೆವೆಂದ ದೂತರನ್ನು ಶಿಕ್ಷಿಸಲು ಚಿತ್ರಗುಪ್ತನು ನೇಮಿಸಿದ ಮಂದೇಹರೆಂಬ ರಾಕ್ಷಸರಿಗೂ ಆ ದೂತರಿಗೂ ನಡೆದ ಘೋರಯುದ್ಧ ವರ್ಣನೆ. 262-273

ಇನ್ನೂರೆರಡನೆಯ ಅಧ್ಯಾಯ

ನಚಿಕೇತನು ಹೇಳಿದ ನಾರಕಿಗಳಿಗಾಗುವ ದಂಡನೆಯ ಮತ್ತು ಕರ್ಮಪರಿಪಾಕದ ವಿಚಾರ. 274-291

ಪುಟಸಂಖ್ಯೆ

ಇನ್ನೂರಮೂರನೆಯ ಅಧ್ಯಾಯ

ನರಕದಲ್ಲಿ ಚಿತ್ರಗುಪ್ತನು ತನ್ನ ಅಧೀನರಿಗೆ ಹೇಳಿದ ಪಾಪಗಳ ಅವುಗಳನ್ನು ಮಾಡಿದವರಿಗಾಗುವ ದಂಡನೆಯು ಮತ್ತು ಜನ್ಮಾಂತರಾದಿಗಳ ವಿಚಾರ. 292-305

ಇನ್ನೂರನಾಲ್ಕನೆಯ ಅಧ್ಯಾಯ

ನಚಿಕೇತನು ವಿವರಿಸಿದ, ಭೂಲೋಕದಿಂದ ಮನುಷ್ಯರನ್ನೆಳೆದು ತರಲು ದೂತರಿಗೆ ಚಿತ್ರಗುಪ್ತನು ಮಾಡಿದ ಆಜ್ಞೆ. 306-311

ಇನ್ನೂರೈದನೆಯ ಅಧ್ಯಾಯ

ಯಮನೂ ಚಿತ್ರಗುಪ್ತನು ವಿವರಿಸಿದ ಶುಭಾಶುಭಕರ್ಮಿಗಳ ಸ್ಥಾನಫಲಾದಿಗಳು. 312-318

ಇನ್ನೂರಆರನೆಯ ಅಧ್ಯಾಯ

ಪುಣ್ಯಶಾಲಿಗಳಿಗೆ ಲಭಿಸುವ ಸುಖಗೌರವಗಳು, ಗೋಮಹಿಮೆ. 319-327

ಇನ್ನೂರೇಳನೆಯ ಅಧ್ಯಾಯ

ಮನುಷ್ಯರು ಯಾವ ಯಾವ ಧರ್ಮವ್ರತಾದಿಗಳಿಂದ ನರಕವನ್ನು ತಪ್ಪಿಸಿಕೊಂಡು ಅಮರತ್ವವನ್ನು ಪಡೆಯುವರೆಂದು ಪ್ರಶ್ನಿಸಿದ ನಾರದಮುನಿಗೆ ಯಮಧರ್ಮರಾಜನು ಹೇಳಿದ ವಿವಿಧ ಧರ್ಮಫಲಗಳು. 328-340

ಇನ್ನೂರೆಂಟನೆಯ ಅಧ್ಯಾಯ

ಯಮರಾಜನೂ ಸೂರ್ಯನೂ ಅತ್ಯಂತ ಭಯಭಕ್ತಿಯಿಂದ ಪೂಜಿಸಿದ ಪತಿವ್ರತೆಯಾದ ಜನಕಪತ್ನಿಯ ಮಹಿಮೆ. 341-360

ಇನ್ನೂರೊಂಬತ್ತನೆಯ ಅಧ್ಯಾಯ

ಯಮನು ಹೇಳಿದ ಪತಿವ್ರತಾಸಾಮಾನ್ಯಧರ್ಮ ಮತ್ತು ಮಹಿಮೆ. 361-365

ಪುಟಸಂಖ್ಯೆ

ಇನ್ನೂರಹತ್ತನೆಯ ಅಧ್ಯಾಯ

ನಾರದರ ಪ್ರಶ್ನೆ, ಯಮಧರ್ಮರಾಜನು ಹೇಳಿದ ಪಾಪಪುಣ್ಯ ಕರ್ಮವಿವರಣೆ ಮತ್ತು ಪ್ರಾಣಾಯಾಮ ದೇವವಂದನಾದಿ ಪಾಪಪರಿಹಾರೋಪಾಯಗಳು. 366-379

ಇನ್ನೂರಹನ್ನೊಂದನೆಯ ಅಧ್ಯಾಯ

ಯಮಧರ್ಮನು ನಾರದಮುನಿಗೆ ಹೇಳಿದ ಪಾಪಪರಿಹಾರಕ ವಾದ ಗೋಸೇವೆ, ಸೂರ್ಯನಮಸ್ಕಾರ, ಪುಣ್ಯತೀರ್ಥಸ್ನಾನ, ಏಕಾದಶೀವ್ರತಾದಿಗಳು. ಉತ್ಥಾನೈಕಾದಶೀ ದ್ವಾದಶೀ ವ್ರತವು ಮುಕ್ತಿಪ್ರದವೂ ಆದುದೆಂಬುದನ್ನೂ ವಿಷ್ಣುಭಕ್ತರ ಮಹಿಮೆಯನ್ನೂ ತಿಳಿಸುವ ವರಾಹೋಕ್ತಿ. 391-400

ಇನ್ನೂರಹನ್ನೆರಡನೆಯ ಅಧ್ಯಾಯ

ಯಮನು ನಚಿಕೇತನನ್ನು ಗೌರವಿಸಿ ಹಿಂದಕ್ಕೆ ಕಳುಹಿಸಿದ ಬಗೆ ನಚಿಕೇತನ ಭಾಷಣವನ್ನು ಕೇಳಿದ ಋಷ್ಯಾದಿಗಳ ಸ್ಥಿತಿ. 401-405

ಇನ್ನೂರಹದಿಮೂರನೆಯ ಅಧ್ಯಾಯ

ಬ್ರಹ್ಮನು ಸನತ್ಕುಮಾರಮುನಿಗೆ ಗೋಕರ್ಣೇಶ್ವರಮಹಿಮೆಯನ್ನು ವಿವರಿಸುತ್ತ ಹೇಳಿದ, ಅತ್ಯುಗ್ರತಪದಿಂದ ಶಂಕರನನ್ನೊಲಿಸಿ ಗಣೇಶ್ವರಪದವಿಯನ್ನು ಪಡೆದ ನಂದಿ ಮಹರ್ಷಿಯ ಕಥೆ 406-424

ಇನ್ನೂರಹದಿನಾಲ್ಕನೆಯ ಅಧ್ಯಾಯ

ಗೋಕರ್ಣೇಶ್ವರಮಹಿಮೆಯಲ್ಲಿ ನಂದಿಕೇಶ್ವರವರಪ್ರದಾನ ವರ್ಣನೆ, ದೇವೇಂದ್ರನು ಬ್ರಹ್ಮವಿಷ್ಣುಗಳೊಡನೆ ಈಶ್ವರ ದರ್ಶನಕ್ಕಾಗಿ ನಂದಿಯಿದ್ದ ಆಶ್ರಮಕ್ಕೆ ಬಂದು, ನಂದಿಯನ್ನು ಪೂಜಿಸಿ, ಶಂಕರನೆಲ್ಲಿರುವನೆಂದು ಪ್ರಶ್ನಿಸಿದುದು. 425-443

ಪುಟಸಂಖ್ಯೆ

ಇನ್ನೂರಹದಿನೈದನೆಯ ಅಧ್ಯಾಯ

ಗೋಕರ್ಣೇಶ್ವರನಮಹಿಮೆ—ವಿಷ್ಣುಬ್ರಹ್ಮೇಂದ್ರಾದಿಗಳು ಶಂಕರನನ್ನು ಮೂರುಲೋಕದಲ್ಲೂ ಅರಸಿ ಕಾಣದೆ ಕಡೆಗೆ ಶ್ಲೇಷ್ಮಾತಕವೆಂಬ ವನದಲ್ಲಿ ಮೃಗ(ಜಿಂಕೆಯು) ರೂಪದಿಂದ ವಿಹರಿಸುತ್ತಿದ್ದ ಆಶಿವನನ್ನು ಸಂದರ್ಶಿಸಿದುದು, ತ್ವರೆಯಿಂದ ವಿಷ್ಣು ಬ್ರಹ್ಮೇಂದ್ರರು ಅನುಕ್ರಮವಾಗಿ ಮೃಗದ ಕೊಂಬಿನ ಆದಿಮಧ್ಯಾಂತ್ಯಭಾಗಗಳನ್ನು ಹಿಡಿದುಕೊಳ್ಳಲು ಆ ಕೊಂಬು ಮೂರುತುಂಡಾಗಿ ಅವರ ಕೈಗೆ ಬಂದುದು. ಅದೃಶ್ಯನಾಗಿ ಅಂತರಿಕ್ಷದಲ್ಲಿ ನಿಂತು ಅವರಿಗೆ ಶಿವನು ಹೇಳಿದ ಶೈಲೇಶ್ವರಕ್ಷೇತ್ರಾದಿಗಳ ಮಹಿಮೆ. 444-468

ಇನ್ನೂರಹದಿನಾರನೆಯ ಅಧ್ಯಾಯ

ಮೃಗರೂಪಧರನಾದ ಈಶ್ವರನ ಶೃಂಗದ ಮೂರುತುಂಡುಗಳು ಪ್ರತಿಷ್ಠಿತವಾದ ಪ್ರದೇಶಗಳೇ ಶೃಂಗೇಶ್ವರ ಉತ್ತರ ಗೋಕರ್ಣೇಶ್ವರ ದಕ್ಷಿಣಗೋಕರ್ಣೇಶ್ವರಕ್ಷೇತ್ರಗಳಾದುದು ಮತ್ತು ಅವುಗಳಮಹಿಮೆ. 468-474

ಇನ್ನೂರಹದಿನೇಳನೆಯ ಅಧ್ಯಾಯ

ಶ್ರೀಧರಣೀವರಾಹ ಸಂವಾದ ಫಲಶ್ರುತಿ. 475-483

ಇನ್ನೂರಹದಿನೆಂಟನೆಯ ಅಧ್ಯಾಯ

ವರಾಹಪುರಾಣ ವೃತ್ತಾಂತಸಂಗ್ರಹ. 484-490

ಶ್ರೀ ವರಾಹಪುರಾಣದಲ್ಲಿ ಐದನೆಯ ಭಾಗದ ಮುಖ್ಯ ವಿಷಯಗಳ

ವರ್ಣಾನುಕ್ರಮವಾದ ವಿಷಯ ಸೂಚಿಕೆ

ವಿಷಯ	ಆರಂಭದ ಅಧ್ಯಾಯ	ಪುಟ
ಅಸಿಪತ್ರವನ	200	250
ಉತ್ಥಾನೈಕಾದಶೀ ದ್ವಾದಶೀವ್ರತ	211	395
ಏಕಾದಶೀ ದ್ವಾದಶೀವ್ರತ	,,	388
ಕಾಂಸ್ಯಾರ್ಚಾಸ್ಥಾಪನೆ	185	35
ಕುಂಭೀಪಾಕನರಕ	200	249
ಕೂಟಶಾಲ್ಮಲೀವೃಕ್ಷ	,,	250
ಗೋಕರ್ಣೇಶ್ವರಮಹಿಮೆ	213	407
,, ಕ್ಷೇತ್ರ(ಉತ್ತರದ್ದು)	216	469
,, ,, (ದಕ್ಷಿಣದ್ದು)	,,	473
ಜನಕರಾಜಪತ್ನಿಯ ಮಹಿಮೆ	208	341
ಜನಮೇಜಯ ವೈಶಂಪಾಯನಸಂವಾದ	193	171
ತಾಮ್ರಾರ್ಚಾಸ್ಥಾಪನೆ	184	28
ತ್ರಿಮೂರ್ತಿಗಳ ಅವತಾರ	187	62
ದಕ್ಷಿಣಗೋಕರ್ಣಕ್ಷೇತ್ರ	216	473
ದಾರು(ಮರದ) ಮೂರ್ತಿನಿರ್ಮಾಣಪ್ರತಿಷ್ಠಾದಿವಿಧಿ	181	1
ದೇವತೆಗಳು ಶಿವನ ಶೃಂಗವನ್ನು ಪಡೆದುದು	215	450
ಧರಣೀವರಾಹ ಸಂವಾದಫಲ	217	477

ವಿಷಯ	ಆರಂಭದ ಅಧ್ಯಾಯ	ಪುಟ
ನಚಿಕೇತೋದ್ದಾಲಕಸಂವಾದ	193	173
ನಚಿಕೇತೋಪಾಖ್ಯಾನ	,,	171
ನಚಿಕೇತನು ಯಮಪುರಿಗೆ ಪ್ರಯಾಣಮಾಡಿದುದು	,,	,,
ನಚಿಕೇತನ ಪುನರಾಗಮನ	194	183
ನಚಿಕೇತನನ್ನು ಋಷ್ಯಾದಿಗಳು ಪ್ರಶ್ನಿಸಿದುದು	,,	187
ನಚಿಕೇತನಿಗೆ ಯಮನ ಸತ್ಕಾರ	199	219
ನಚಿಕೇತನ ಯಮಸ್ತುತಿ	198	24
ನಚಿಕೇತನ ಯಮಪುರವರ್ಣನೆ	195	191
ನಂದಿಮಹರ್ಷಿಯ ತಪಸ್ಸು	213	412
ನರಕದುಃಖವರ್ಣನೆ (ನಚಿಕೇತನು ಹೇಳಿದುದು)	198	227
ನಿಮಿ ಮಗನಿಗೆ ಶ್ರಾದ್ಧಮಾಡಿದುದು	187	66
ಪತಿವ್ರತೋಪಾಖ್ಯಾನ	208	341
ಪತಿವ್ರತಾಮಹಿಮೆ	209	361
ಪಾಪನಾಶೋಪಾಯ ನಿರೂಪಣೆ	210	366
ಪಿತೃಯಜ್ಞ	187	59
ಪಿತ್ರಾದಿಗಳು ಬ್ರಹ್ಮರುದ್ರವಿಷ್ಣ್ವಾತ್ಮಕರೆಂಬುದು	197	142
ಪಿಂಡಕಲ್ಪಶ್ರಾದ್ಧೋತ್ಪತ್ತಿ	187	87
ಪುರಾಣವೃತ್ತಾಂತಸಂಗ್ರಹ	218	481
ಬ್ರಹ್ಮಸನತ್ಕುಮಾರಸಂವಾದ (ಗೋಕರ್ಣೇಶ ವಿಚಾರ)	213	406

ವಿಷಯ	ಆರಂಭದ ಅಧ್ಯಾಯ	ಪುಟ
ಮಧುಪರ್ಕಸೇವನೆಯ ಮಹಿಮೆ	187	83
ಮಧುಪರ್ಕನಿರ್ಮಾಣಾದಿವಿಧಿ	192	165
ಮುಂಜವತ್ಪರ್ವತ	212	408
ಮೃನ್ಮಯಾರ್ಚಾಸ್ಥಾಪನೆ	183	19
ಮೃತರಿಗೆ ದುಃಖಿಸಬಾರದೆಂಬುದು	187	72
ಮೃಗರೂಪಧರ ಶಂಕರದರ್ಶನ	215	449
ಮೇಧಾತಿಥಿಯು ಶ್ರಾದ್ಧಮಾಡಿದುದು.	189	116
ಯಮಪುರವರ್ಣನೆ (ನಚಿಕೇತನಿಂದ)	196	198
ಯಮಲೋಕದ ಪಾಪಿಗಳವರ್ಣನೆ	195	191
ಯಮ ನಾರದಸಂವಾದ	207	328
ರಜತ(ಬೆಳ್ಳಿಯ) ಮೂರ್ತಿಸ್ಥಾಪನೆ	186	44
ರಾವಣನು ಗೋಕರ್ಣೇಶ್ವರನನ್ನು ಆರಾಧಿಸಿದುದು	216	472
ವೈತರಣೀನದಿ	200	251
ಶಂಕರನು ಮೃಗರೂಪಧರನಾದುದು	214	430
ಶ್ರಾದ್ಧ(ಪಿತೃಯಜ್ಞ)	190	125
ಶ್ರಾದ್ಧಾರ್ಹಾನರ್ಹಸ್ಥಳಾದಿಗಳು	188	92
ಶ್ರಾದ್ಧಪಙ್ಕ್ತಿಗನರ್ಹರು	190	145
ಶಿಲಾದೇವ ಮೂರ್ತಿಪ್ರತಿಷ್ಠೆ	187	7
ಶುಭಾಶುಭಫಲಕೀರ್ತನೆ (ಯಮನಿಂದ)	205	312

ವಿಷಯ	ಆರಂಭದ ಅಧ್ಯಾಯ	ಪುಟ
ಶೂಲಗ್ರಹ ಪರ್ವತ	200	25
ಶೃಂಗೇಶ್ವರಕ್ಷೇತ್ರ	216	470
ಶ್ಲೇಷ್ಮಾತಕ ವನಮಹಿಮೆ	214	430
ಶ್ರೈಲೇಶ್ವರಕ್ಷೇತ್ರ	215	455
ಸತ್ಯಮಹಿಮೆ (ನಚಿಕೇತನು ತಂದೆಗೆ ಹೇಳಿದುದು)	193	178
ಸರ್ವಶಾಂತಿ	192	161
ಸಾಲಗ್ರಾಮ ಪೂಜಾನಿಯಮ	182	55
ಸುಂದರಿಕಾತೀರ್ಥ	215	465
ಸುವರ್ಣಮೂರ್ತಿ ಪೂಜೆ	186	53

॥ ಶ್ರೀರಸ್ತು ॥

ಶ್ರೀ ವ ರಾ ಹ ಪು ರಾ ಣ ಂ

ಏಕಾಶೀತ್ಯಧಿಕಶತತಮೋಽಧ್ಯಾಯಃ

ಅಥ ಮಧುಕಾಷ್ಠಾರ್ಚಾ ಸ್ಥಾಪನಂ

॥ ಸೂತ ಉವಾಚ ॥

ಏವಂ ಶ್ರುತ್ವಾ ಪರಂ ಸ್ಥಾನಂ ಸಾ ಮಹೀ ಸಂಶಿತವ್ರತಾ ।
ಸರ್ವಕ್ಷೇತ್ರವಿಭಾಗೇಷು ಯಚ್ಚ ವೈ ಪರಮೋ ವಿಧಿಃ ॥
ಸಂಶ್ರುತ್ಯ ವಿಸ್ಮಯಾವಿಷ್ಟಾ ಪ್ರತ್ಯುವಾಚ ವಸುಂಧರಾ ॥ ೧ ॥

॥ ಧರಣ್ಯುವಾಚ ॥

ಅಹೋ ಕ್ಷೇತ್ರ ಪ್ರಭಾವೋ ವೈ ಯಸ್ತ್ವಯಾ ಸಮುದಾಹೃತಃ ।
ಯಂ ಶ್ರುತ್ವಾ ದೇವ ತತ್ವೇನ ಜಾತಾಸ್ಮಿ ವಿಗತಜ್ವರಾ ॥ ೨ ॥

ನೂರೆಂಬತ್ತೊಂದನೆಯ ಅಧ್ಯಾಯ

ಹಿಪ್ಪೆಯ ಮರದ ದೇವಮೂರ್ತಿಯ ಸ್ಥಾಪನೆ

೧. ಸೂತಮುನಿ—ತೀಕ್ಷ್ಣವ್ರತೆಯಾದ ಆ ಭೂದೇವಿಯು ಉತ್ತಮ ಕ್ಷೇತ್ರಗಳನ್ನೂ, ಆಯಾಕ್ಷೇತ್ರಗಳಲ್ಲಿ ಮಾಡಬೇಕಾದ ಉತ್ತಮ ವಿಧಿಯನ್ನೂ ಚೆನ್ನಾಗಿ ಕೇಳಿ, ಆಶ್ಚರ್ಯಗೊಂಡವಳಾಗಿ ಶ್ರೀ ವರಾಹನೊಡನೆ ಮಾತನಾಡಿದಳು.

೨. ಭೂದೇವಿ—ದೇವಾ, ನೀನು ಹೇಳಿದ ಕ್ಷೇತ್ರಪ್ರಭಾವವು ಆಶ್ಚರ್ಯಕರವಾಗಿದೆ, ಅದನ್ನು ಕೇಳಿ ನಿಜವಾಗಿ ತಾಪರಹಿತಳಾದೆನು.

ಏತಂ ಮೇ ಪರಮಂ ಗುಹ್ಯಂ ಯನ್ನಿತ್ಯಂ ಹೃದಿ ವರ್ತತೇ ।
ಮಮ ಪ್ರೀತ್ಯರ್ಥಮಖಿಲಂ ತದ್ವಿಷ್ಣೋ ವಕ್ತುಮರ್ಹಸಿ ॥ ೩ ॥

ಕಥಂ ತಿಷ್ಠಸಿ ಕಾಷ್ಠೇಷು ಶೈಲಮೃನ್ಮಯಜೇಷು ಚ ।
ತಾಮ್ರೇ ಕಾಂಸ್ಯೇ ಚ ರೌಪ್ಯೇ ಚ ತಿಷ್ಠಸಿ ಸ್ಥಾಪಿತಃ ಕಥಂ ॥ ೪ ॥

ಸೌವರ್ಣೇಷು ಚ ಸರ್ವೇಷು ತಿಷ್ಠಸಿ ಸ್ಥಾಪಿತಃ ಕಥಂ ॥ ೫ ॥

ಬ್ರಹ್ಮಚಾರೀ ಸಮಾಸಾದ್ಯ ಕಥಂ ತಿಷ್ಠಸಿ ಮಾಧವ ।
ದಂತರತ್ನೇ ಸಮಾಸಾದ್ಯ ಕಥಂ ಸಂತಿಷ್ಠತೇ ಭವಾನ್ ॥ ೬ ॥

ಕಥಂ ತಿಷ್ಠಸಿ ವಾಸೇನ್ಯೇ ಭಿತ್ತಿಸಂಸ್ಥೋ ಜನಾರ್ದನಃ ।
ಭೂಮಿಸಂಸ್ಥೋ ಮಹಾಭಾಗ ವಿಧಿದೃಷ್ಟೇನ ಕರ್ಮಣಾ ॥ ೭ ॥

ಏವಂ ಧರಾವಚಃ ಶ್ರುತ್ವಾ ಪ್ರತ್ಯುವಾಚಾದಿಸೂಕರಃ ॥ ೮ ॥

---

೩. ಆದರೆ ನನ್ನ ಮನಸ್ಸಿನಲ್ಲಿ ಅತಿ ರಹಸ್ಯವಾದ ಒಂದು ವಿಚಾರವು ಯಾವಾಗಲೂ ಇದೆ. ವಿಷ್ಣುವೇ ನನ್ನಲ್ಲಿ ನಿನಗಿರುವ ಅತಿ ಪ್ರೀತಿಯಿಂದ ಅದೆಲ್ಲವನ್ನೂ ನೀನೇ ಹೇಳಬೇಕು.

೪-೫. ಪರಮಾತ್ಮನಾದ ನೀನು ಮರ, ಕಲ್ಲು, ಮಣ್ಣು, ತಾಮ್ರ, ಬೆಳ್ಳಿ, ಚಿನ್ನ ಮತ್ತು ಕಂಚು ಇವುಗಳಿಂದಾದ ವಿಗ್ರಹಗಳಲ್ಲಿ ಹೇಗೆ ಪ್ರತಿಷ್ಠಿತನಾಗಿರುವೆ?

೬. ಮಾಧವಾ, ನೀನು ಬ್ರಹ್ಮಚಾರಿಯಾಗಿ ಆ ವಿಗ್ರಹಗಳನ್ನು ಸೇರಿ ಹೇಗೆ ಇರುವೆ? ದಂತ ಅಥವಾ ರತ್ನದ ವಿಗ್ರಹವನ್ನು ಸೇರಿ ಹೇಗೆ ಇರುವೆ?

೭-೮. ಪೂಜ್ಯನೆ, ಜನಾರ್ದನನಾದ ನೀನು ಗೋಡೆಗಳಲ್ಲೂ ಭೂಮಿಯಲ್ಲೂ ವಿಧಿಯಲ್ಲಿ ಹೇಳಿರುವ ಕರ್ಮದಿಂದ ಹೇಗೆ ಸೇವ್ಯನಾಗಿ ನೆಲಸುವೆ? ಭೂದೇವಿಯ ಈ ಮಾತನ್ನು ಕೇಳಿ ಆದಿವರಾಹನು ಮಾರ್ನುಡಿದನು.

॥ ಶ್ರೀ ವರಾಹ ಉವಾಚ ॥

ಪ್ರತಿಮಾ ಯಸ್ಯ ಕರ್ತವ್ಯಾ ತದಾನೀಯ ವಸುಂಧರೇ ।
ಪ್ರತಿಮಾಂಕಾರಯೇಚ್ಚೈವ ಲಕ್ಷಣೋಕ್ತಾಂ ವಸುಂಧರೇ ॥ ೯ ॥

ಅರ್ಚಾಶುದ್ಧಿಂ ತತಃ ಕೃತ್ವಾ ಪ್ರತಿಷ್ಠಾಪ್ಯ ವಿಧಾನತಃ ।
ತತಃ ಸಂಪೂಜಯೇದ್ದೇವಿ ಸಂಸಾರಭವಮುಕ್ತಯೇ ॥ ೧೦ ॥

ತತ್ರ ಕಾಷ್ಠೇಷು ಮಧುಕಮಾನೀಯ ಚ ವಸುಂಧರೇ ।
ಕೃತ್ವಾ ತತ್ಪ್ರತಿಮಾಂಚೈವ ಪ್ರತಿಷ್ಠಾವಿಧಿನಾರ್ಚಯೇತ್ ॥
ತಾಂಸ್ತು ದದ್ಯಾತ್ತು ಗಂಧಾಂಶ್ಚ ಯೇ ಮಯಾ ಸಮುದಾಹೃತಾಃ ॥ ೧೧ ॥

ಕರ್ಪೂರಂ ಕುಂಕುಮಂಚೈವ ತ್ವಚಂಚಾಗುರುಮೇವ ಚ ।
ರಸಂಚ ಚಂದನಂಚೈವ ಸಿಲ್ಹಕೋಶೀರಕಂ ತಥಾ ॥
ಏತೈರ್ವಿಲೇಪನಂ ÷ದದ್ಯಾದರ್ಚಕಸ್ತು ವಿಚಕ್ಷಣಃ ॥ ೧೨ ॥

---

೯. ಶ್ರೀವರಾಹ—ವಸುಂಧರೇ, ಮರವೇ ಮೊದಲಾದ ಯಾವುದರ ಪ್ರತಿಮೆಯನ್ನು ಮಾಡಬೇಕೋ ಅದನ್ನು ತಂದು ಲಕ್ಷಣ ಶಾಸ್ತ್ರದಲ್ಲಿ ಹೇಳಿರುವಂತೆ ವಿಗ್ರಹವನ್ನು ಮಾಡಬೇಕು

೧೦. ದೇವೀ, ಬಳಿಕ ವಿಧಿಯಿಂದ ಮೂರ್ತಿ ಶುದ್ಧಿಯನ್ನು ಮಾಡಿ ಪ್ರತಿಷ್ಠೆಮಾಡಿ, ಸಂಸಾರ ವಿಮೋಚನೆಗಾಗಿ ಆಮೂರ್ತಿಯನ್ನು ಚೆನ್ನಾಗಿ ಪೂಜಿಸಬೇಕು.

೧೧ ವಸುಂಧರೇ, ಹಿಂದೆ ಹೇಳಿದವುಗಳಲ್ಲಿ ಮರದ ವಿಗ್ರಹವನ್ನು ಮಾಡುವಾಗ (ಮಧುಕ) ಹಿಪ್ಪೆಯ ಮರವನ್ನು ತಂದು ಅದರಿಂದ ಮೂರ್ತಿಯನ್ನು ಮಾಡಿ, ಪ್ರತಿಷ್ಠಾವಿಧಿಯಿಂದ ಪೂಜಿಸಬೇಕು. ನಾನು ಹೇಳಿದ ಆ ಗಂಧಗಳನ್ನು ಲೇಪಿಸಬೇಕು.

೧೨. ತಿಳಿವಳಿಕೆಯುಳ್ಳ ಅರ್ಚಕನು ಪೂಜೆಯಲ್ಲಿ ಪಚ್ಚಕರ್ಪೂರ, ಕುಂಕುಮಕೇಸರಿ, ಅಗುರುಚಕ್ಕೆ, ಚಂದನರಸ, ಹಾಲುಮಡ್ಡಿ, ಲಾಮಂಚ ಇವುಗಳಿಂದ ಮಾಡಿದ ಗಂಧವನ್ನು ದೇವನಿಗೆ ಲೇಪಿಸಬೇಕು.

÷ ದದ್ಯಾದರ್ಚಿತಸ್ತು.

ಸ್ವಸ್ತಿಕಂ ವರ್ಧಮಾನಂಚ ಶ್ರೀವತ್ಸಂ ಕೌಸ್ತುಭಂ ತಥಾ ॥ ೧೩ ॥

ವಿಧಾನಪೂರ್ವಕಂ ಚೈವ ಮಂಗಲ್ಯಂಚೈವ ಪಾಯಸಂ ।
ವರ್ತಿಸ್ತಿಲಫಲಂಚೈವ ಕರ್ಮಣ್ಯಾನಿ ನ ಸಂಶಯಃ ॥
ಏವಂ ಸರ್ವಂ ತತೋ ದದ್ಯಾತ್ಪೂಜಾಯಾಂ ವಿಹಿತಂ ಶುಭಂ ॥ ೧೪ ॥

ಕರ್ಮಣಾ ವಿಧಿ ದೃಷ್ಟೇನ ಶುದ್ಧೋ ಭಾಗವತಃ ಶುಚಿಃ ।
ಪ್ರಾಣಾಯಾಮಂ ತತಃ ಕೃತ್ವಾ ಇಮಂ ಮಂತ್ರಮುದೀರಯೇತ್ ॥ ೧೫ ॥

ಯೋऽಸೌ ಭವಾಂಸ್ತಿಷ್ಠತೇ ಸರ್ವಯೋಗಪ್ರಧಾನತಃ ।
ಸಸಂಭ್ರಮಂ ಲೋಕೇ ಸುಪ್ರತೀತಸ್ತಿಷ್ಠ ಕಾಷ್ಠೇ ಸತ್ವಂ ಭುವಿ ॥ ೧೬ ॥

ಏವಂ ಸಂಸ್ಥಾಪನಂಕೃತ್ವಾ ಕಾಷ್ಠಸ್ಯ ಪ್ರತಿಮಾಸು ಚ ॥ ೧೭ ॥

ಪುನಃ ಪ್ರದಕ್ಷಿಣೀಕೃತ್ಯ ಶುದ್ಧೈರ್ಭಗವತೈಃ ಸಹ ।
ಪ್ರಜ್ವಾಲ್ಯ ದೀಪಂ ತತ್ರೈವ ಚಾಚಾರ್ಯಾಃ ಸಮ್ಮುಖಂ ಸ್ಥಿತಃ ॥ ೧೮ ॥

೧೩–೧೪. ವಿಧಿಪೂರ್ವಕವಾಗಿ ಸ್ವಸ್ತಿಕ, ವರ್ಧಮಾನ, ಶ್ರೀವತ್ಸ, ಕೌಸ್ತುಭ ಇವೇ ಮೊದಲಾದ ಮಂಗಳ ಚಿಹ್ನೆಗಳನ್ನೂ, ಪಾಯಸ, ದೀಪ, ತಿಲ ಫಲ ಮೊದಲಾದ ಕರ್ಮಾರ್ಹವಾದ ಶುಭವಸ್ತುಗಳೆಲ್ಲವನ್ನೂ ಪೂಜೆಯಲ್ಲಿ ಅರ್ಪಿಸಬೇಕು.

೧೫–೧೬. ಶುದ್ಧನೂ, ಶುಚಿಯೂ ಆದ ಭಾಗವತನು ವಿಧ್ಯುಕ್ತಕರ್ಮದಿಂದ, ಪ್ರಾಣಾಯಾಮವನ್ನು ಮಾಡಿ, "ಸ್ವಾಮೀ ಸರ್ವಯೋಗಗಳಲ್ಲೂ ಮುಖ್ಯನಾಗಿರುವ ನೀನು ಭೂಲೋಕದಲ್ಲಿ ಈ ಮರದ ವಿಗ್ರಹದಲ್ಲಿ ಸಂಭ್ರಮದಿಂದ ನೆಲಸಿ, ಪ್ರಸಿದ್ಧನಾಗು." ಎಂಬ ಅರ್ಥದ ಮೇಲಿನ (೧೬ನೆಯ ಶ್ಲೋಕ) ಮಂತ್ರವನ್ನು ಹೇಳಬೇಕು.

೧೭. ಹೀಗೆ ಮರದ ಪ್ರತಿಮೆಗಳಲ್ಲಿ ದೇವರನ್ನು ಪ್ರತಿಷ್ಠೆಮಾಡಬೇಕು.

೧೮–೨೦. ಮತ್ತೆ ಶುದ್ಧರಾದ ಭಾಗವತರೊಡನೆ ದೇವನನ್ನು ಪ್ರದಕ್ಷಿಣ ಮಾಡಿ, ದೀಪವನ್ನು ಹತ್ತಿಸಿ ಅಲ್ಲೇ ದೇವಮೂರ್ತಿಯ ಮುಂದೆ ನಿಂತು, ಮೇಲಿ

ನೋರ್ಧ್ವಂ ನ ತಿರ್ಯಗೀಕ್ಷೇತ ಕಾಮಕ್ರೋಧವಿವರ್ಜಿತಃ |
ನಮೋ ನಾರಾಯಣಾಯೇತಿ ಇಮಂ ಮಂತ್ರಮುದೀರಯೇತ್ || ೧೯ ||

ಕುರ್ಯಾತ್ಸಂಸ್ಕರಣಂ ತೇಷಾಂ ವಿಧಿದೃಷ್ಟೇನ ಕರ್ಮಣಾ || ೨೦ ||

ಮಂತ್ರಃ—

ಯೋಽಸೌ ಭವಾನ್ ಸರ್ವಜನಪ್ರವೀರ
ಗತಿಃ ಪ್ರಭುಸ್ತ್ವಂ ವಸಸಿಹ್ಯಮೋಘ |
ಅನೇನ ಮಂತ್ರೇಣ ಚ ಲೋಕನಾಥ ॥
ಸಂಸ್ಥಾಪಿತಸ್ತಿಷ್ಠ ಚ ವಾಸುದೇವ || ೨೧ ||

ಸರ್ವಮೇವಂ ತತಃ ಕೃತ್ವಾ ಮಮ ಸಂಸ್ಥಾಪನಕ್ರಿಯಾಂ |
ಪೂಜ್ಯಾ ಭಾಗವತಾಃ ಸರ್ವೇ ಯೇ ತತ್ರ ಸಮುಪಾಗತಾಃ || ೨೨ ||

ಯಾಗಲಿ ಪಕ್ಕವನ್ನಾಗಲಿ ನೋಡದೆ ಕಾಮಕ್ರೋಧಗಳನ್ನು ಬಿಟ್ಟು 'ನಮೋ ನಾರಾಯಣಾಯ' ಎಂದು ಈ ಮುಂದಿನ ಮಂತ್ರವನ್ನು ಹೇಳಿ ವಿಧಿಯಲ್ಲಿ ಹೇಳಿರುವಂತೆ ಆ ವಿಗ್ರಹಗಳಿಗೆ ಸಂಸ್ಕರಣವನ್ನು ಮಾಡಬೇಕು.

೨೧–೨೨. "ಸರ್ವಜನಪ್ರವೀರ, ಲೋಕನಾಥ, ಅಮೋಘ, ವಾಸುದೇವ, ಲೋಕಕ್ಕೆ ಪ್ರಭುವೂ ಗತಿಯೂ ಆಗಿರುವ ನೀನು ಈ ಮಂತ್ರದಿಂದ ಪ್ರತಿಷ್ಠಿತನಾಗು." ಎಂಬ ಅರ್ಥದ—

"ಯೋಽಸೌ ಭವಾನ್ ಸರ್ವಜನಪ್ರವೀರ ಗತಿಃ ಪ್ರಭುಸ್ತ್ವಂ ವಸಸಿಹ್ಯಮೋಘ |
ಅನೇನ ಮಂತ್ರೇಣ ಚ ಲೋಕನಾಥ ಸಂಸ್ಥಾಪಿತಸ್ತಿಷ್ಠ ಚ ವಾಸುದೇವ ||"

ಎಂಬ ಮಂತ್ರದಿಂದ ನನ್ನ ಪ್ರತಿಷ್ಠೆಯ ಕಾರ್ಯವೆಲ್ಲವನ್ನೂ ಮಾಡಿ, ಬಳಿಕ ಅಲ್ಲಿಗೆ ಬಂದಿರುವ ಭಾಗವತರೆಲ್ಲರನ್ನೂ ಪೂಜಿಸಬೇಕು.

ಗಂಧಮಾಲ್ಯೈರರ್ಚಯಿತ್ವಾ ಉಪಲೇಪೈಶ್ಚ ಭೋಜನೈಃ ।
ಕುರ್ಯಾತ್ಸಂಸ್ಕರಣಂ ತೇಷಾಂ ವಿಧಿದೃಷ್ಟೇನ ಕರ್ಮಣಾ ॥ ೨೩ ॥

ಏತತ್ಕರ್ಮವಿಧಾನೇನ ಮಧುಕಾಷ್ಠಸ್ಯ ಸುಂದರಿ ।
ಧರ್ಮಸಂಸ್ಥಾಪನಾರ್ಥಾಯ ಏತತ್ತೇ ಕಥಿತಂ ಮಯಾ ॥ ೨೪ ॥

ಯಸ್ತ್ವನೇನ ವಿಧಾನೇನ ಅರ್ಚಾಂ ಕಾಷ್ಠಸ್ಯ ಸ್ಥಾಪಯೇತ್ ।
ಸ ನಗಚ್ಛತಿ ಸಂಸಾರಂ ಮಮ ಲೋಕಂ ಚ ಗಚ್ಛತಿ ॥ ೨೫ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಮಧುಕಾಷ್ಠಾರ್ಚಾಸ್ಥಾಪನಂ
ನಾಮ ಏಕಾಶೀತ್ಯಧಿಕ ಶತತಮೋಽಧ್ಯಾಯಃ

---

೨೩. ಅವರನ್ನು ಗಂಧಮಾಲ್ಯಾನಲೇಪನಗಳಿಂದಲೂ ಭೋಜನಗಳಿಂದಲೂ ವಿಧಿಪೂರ್ವಕವಾಗಿ ಆದರಿಸಬೇಕು.

೨೪. ಸುಂದರೀ—ಈ ಕರ್ಮವಿಧಾನದಿಂದ ಮಧುಕಾಷ್ಠ (ಹಿಪ್ಪೆಯ ಮರ)ದ ಮೂರ್ತಿಯನ್ನು ಪ್ರತಿಷ್ಠೆಮಾಡಬೇಕು. ಧರ್ಮಸಂಸ್ಥಾಪನೆಗಾಗಿ ಇದನ್ನು ನಿನಗೆ ಹೇಳಿದ್ದೇನೆ.

೨೫. ಈ ವಿಧಾನದಿಂದ ಮರದ ವಿಗ್ರಹವನ್ನು ಸ್ಥಾಪಿಸುವವರು ಮತ್ತೆ ಸಂಸಾರವನ್ನು ಪಡೆಯದೆ ನನ್ನ ಲೋಕವನ್ನು ಸೇರುವರು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಮರ, ಕಲ್ಲು, ತಾಮ್ರ, ಚಿನ್ನ, ಬೆಳ್ಳಿ, ಕಂಚು ಮೊದಲಾದವುಗಳ ದೇವ ವಿಗ್ರಹವನ್ನು ಹೇಗೆ ಸ್ಥಾಪಿಸಬೇಕೆಂಬುದೇ ಮೊದಲಾದ ವಿಚಾರಗಳನ್ನು ಕೇಳಿದ ಭೂದೇವಿಗೆ ಮರದ ಪೂಜಾಮೂರ್ತಿಯ ಪ್ರತಿಷ್ಠೆಯ ಕ್ರಮವನ್ನು ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೆಂಬತ್ತೊಂದನೆಯ ಅಧ್ಯಾಯ.

॥ ಶ್ರೀಃ ॥

ದ್ವಶೀತ್ಯಧಿಕಶತತಮೋಧ್ಯಾಯಃ

ಅಥ ಶೈಲಾರ್ಚಾಸ್ಥಾಪನಂ

॥ ಶ್ರೀವರಾಹ ಉವಾಚ ॥

ಪುನರನ್ಯತ್ಪ್ರವಕ್ಷಾಮಿ ತಚ್ಛೃಣುಷ್ವ ವಸುಂಧರೇ ।
ಯಥಾ ತಿಷ್ಠಾಮಿ ಶೈಲೇಷು ಪ್ರತಿಮಾಯಾಮಿತಸ್ತತಃ ॥ ೧ ॥

ಸುರೂಪಾಂಚ ಶಿಲಾಂ ದೃಷ್ಟ್ವಾ ನಿಃಶಲ್ಯಾಂ ಸುಪರೀಕ್ಷಿತಾಂ ।
ತತ್ರ ದಕ್ಷಂ ರೂಪಕಾರಂ ಶೀಘ್ರಂಚ ವಿನಿಯೋಜಯೇತ್ ॥ ೨ ॥

ಶೀಘ್ರಮಾಲಿಖ್ಯ ತಂ ತತ್ರ ಶ್ವೇತವರ್ತಿಕಯಾ ನರಃ ।
ಪ್ರದಕ್ಷಿಣಾಂ ತತಃ ಕೃತ್ವಾ ಪೂಜಯೇದಕ್ಷತಾದಿಭಿಃ ॥ ೩ ॥

ನೂರೆಂಬತ್ತೆರಡನೆಯ ಅಧ್ಯಾಯ.

ಶಿಲೆಯ ದೇವಮೂರ್ತಿಪ್ರತಿಷ್ಠೆಯ ಕ್ರಮವು

೧. ಶ್ರೀವರಾಹ—ವಸುಂಧರೇ, ಇನ್ನು ನಾನು ಅಲ್ಲಲ್ಲೇ ಶಿಲಾಮೂರ್ತಿಗಳಲ್ಲಿ ಹೇಗೆ ನೆಲೆಸುವೆನೆಂಬುದನ್ನು ಹೇಳುವೆನು ಕೇಳು.

೨. ದೋಷವಿಲ್ಲದೆ ಚೆನ್ನಾಗಿರುವ, ಉತ್ತಮವಾಗಿ ವಿಗ್ರಹಕ್ಕೆ ತಕ್ಕ ಶಿಲೆಯನ್ನು ಚೆನ್ನಾಗಿ ಪರೀಕ್ಷಿಸಿ ನೋಡಿ, ವಿಗ್ರಹವನ್ನು ಮಾಡುವ ಶಿಲ್ಪಿಯನ್ನು ಬೇಗನೆ ನಿಯಮಿಸಬೇಕು.

೩. ಬೇಗನೆ ಮೂರ್ತಿಯನ್ನು ಬಿಳಿಯ ಬತ್ತಿಯಿಂದ, ಬರೆದು ಪ್ರದಕ್ಷಿಣ ಮಾಡಿ, ಬಳಿಕ ಅಕ್ಷತೆ ಮೊದಲಾದುವುಗಳಿಂದ ಪೂಜಿಸಬೇಕು.

ದೀಪಕಂಚ ತತೋ ದದ್ಯಾದ್ಬಲಿಂ ದಧ್ಯೋದನೇನ ಚ |
ನಮೋ ನಾರಾಯಣಾಯೇತಿ ಉಕ್ತ್ವಾ ಮಂತ್ರಮುದೀರಯೇತ್ || ೪ ||

ಮಂತ್ರ—

ಯೋಽಸೌ ಭವಾನ್ಸರ್ವ ಜನಪ್ರವೀರ
ಸೋಮಾಗ್ನಿ ತೇಜಾಃ ಸುಮತಿಪ್ರಧಾನಃ |
ಏತೇನ ಮಂತ್ರೇಣ ತು ವಾಸುದೇವ ||
ಪ್ರತಿಷ್ಠಿತೋ ವರ್ಧಯ ಕೀರ್ತಿ ರಾಶಿಂ ||
ಪ್ರವರ ಅಯುತ ವರಾಹ ಜಯ ಜಯ ವರ್ಧಸ್ವ || ೫ ||

ಅನನ್ಯೈವ ತು ಮಂತ್ರೇಣ ಕರ್ತವ್ಯಂ ಯಸ್ಯ ಯಾದೃಶಂ |
ಏವಂ ರೂಪಂ ತತಃ ಕೃತ್ವಾ ದೇವಂ ನಾರಾಯಣಂ ಪ್ರಭುಂ ||
ತತೋ ವೈ ಸ್ಥಾಪಯೇತ್ತತ್ರ ಪೂರ್ವಾಭಿಮುಖಮೇವ ತು || ೬ ||

೪–೬. ಆಮೇಲೆ ದೀಪವನ್ನು ಹಚ್ಚಿಸಿ ದಧ್ಯೋದನ (ಮೊಸರನ್ನ) ದಿಂದ ಬಲಿಯನ್ನರ್ಪಿಸಬೇಕು. 'ನಮೋ ನಾರಾಯಣಾಯ' ಎಂದು ಹೇಳಿ, "ಸರ್ವಜನಪ್ರವೀರನೇ, ವಾಸುದೇವನೇ, ಚಂದ್ರಾಗ್ನಿಗಳಂತೆ ತೇಜಸ್ವಿಯೂ ಸುಬುದ್ಧಿಯುಳ್ಳವರಲ್ಲಿ ಅಗ್ರೇಸರನೂ ಆದ ನೀನು ಈ ಮಂತ್ರದಿಂದ ಪ್ರತಿಷ್ಠಿತನಾಗಿ ನಿನ್ನ ಕೀರ್ತಿರಾಶಿಯನ್ನು ಬೆಳೆಸು. ಪ್ರವರ, ಅಯುತ, ವರಾಹ, ವರ್ಧಿಸು. ಜಯ ಜಯ." ಎಂಬ ಅರ್ಥದ—

"ಯೋಽಸೌ ಭವಾನ್ಸರ್ವಜನಪ್ರವೀರ ಸೋಮಾಗ್ನಿ ತೇಜಾಃ ಸುಮತಿ ಪ್ರಧಾನಃ |
ಏತೇನ ಮಂತ್ರೇಣ ತು ವಾಸುದೇವ ಪ್ರತಿಷ್ಠಿತೋ ವರ್ಧಯ ಕೀರ್ತಿರಾಶಿಂ ||
ಪ್ರವರ ಅಯುತ ವರಾಹ ಜಯ ಜಯ ವರ್ಧಸ್ವ" ಎಂಬ ಮಂತ್ರದಿಂದ

ಪ್ರಭುವಾದ ನಾರಾಯಣನ ಅನೇಕ ಅವತಾರಗಳಲ್ಲಿ ಯಾರಿಗೆ ಯಾವ ಮೂರ್ತಿ ಇಷ್ಟವೋ ಆ ಮೂರ್ತಿಯನ್ನು ಮಾಡಿಸಿ ಪೂರ್ವಾಭಿಮುಖವಾಗಿ ಸ್ಥಾಪಿಸಬೇಕು.

ಅಹೋರಾತ್ರಮುಷಿತ್ವೈವಂ ಶುಕ್ಲವಸ್ತ್ರೇಣ ಭೂಷಿತಃ ॥ ೭ ॥

ಶುಕ್ಲಯಜ್ಞೋಪವೀತೀ ಚ ಕೃತ್ವಾ ವೈ ದಂತಧಾವನಂ ।
ಸರ್ವಗಂಧೋದಕಂ ಗೃಹ್ಯ ಇಮಂ ಮಂತ್ರಮುದಾಹರೇತ್ ॥ ೮ ॥

ಮಂತ್ರಃ—

ಯೋಽಸೌ ಭವಾಂಸ್ತಿಷ್ಠತಿ ಸರ್ವರೂಪ ।
ಮಾಯಾಬಲಂ ಸರ್ವಜಗತ್ಸ್ವರೂಪಂ ॥
ಏತೇನ ಮಂತ್ರೇಣ ಜಗತ್ಸ್ವರೂಪ ।
ಸಂಪೂಜಿತಸ್ತಿಷ್ಠಸಿ ಲೋಕನಾಥ ॥

ಕರಣಧಾರಣಪ್ರವಧ್ಯಮುದಾಹರಣಮಪರಾಜಿತಮಜರಾಮರ ।
ಸಂಪೂಜ್ಯ ಸ್ನಾಪಯಾತ್ಮಾನಮನೇನ ಮಂತ್ರೇಣ ಓಂ ನಮೋ
ವಾಸುದೇವಾಯ ॥ ೯ ॥

೭–೧೦. ಬಿಳಿಯದಾದ ವಸ್ತ್ರದಿಂದಲೂ ಯಜ್ಞೋಪವೀತದಿಂದಲೂ ಅಲಂಕರಿಸಿ, ದೇವನ ಸನ್ನಿಧಿಯಲ್ಲಿ ಹಗಲೂ ರಾತ್ರೆಯೂ ಇದ್ದು, ಹಲ್ಲನ್ನು ಶುದ್ಧಗೊಳಿಸಿ ಸರ್ವಗಂಧೋದಕವನ್ನು ತೆಗೆದುಕೊಂಡು "ಸರ್ವರೂಪನೇ, ಜಗತ್ಸ್ವರೂಪನೇ, ಲೋಕನಾಥ, ಮಾಯಾಬಲದಿಂದ ಸರ್ವಜಗತ್ಸ್ವರೂಪನಾಗಿರುವ ನೀನು ಈ ಮಂತ್ರದಿಂದ ಪೂಜಿತನಾಗಿರುತ್ತೀಯೆ, ಮುಪ್ಪು ಮರಣವೂ ಇಲ್ಲದವನೇ ಇಂದ್ರಿಯಾಗೋಚರವಾದುದಕ್ಕೆ ಸ್ಥಿರವಾದ ಉದಾಹರಣೆಯಾಗಿಯೂ ಪರಾಜಯವಿಲ್ಲದುದಾಗಿಯೂ ಇರುವ ನಿನ್ನ ರೂಪವನ್ನು ಈ ಮಂತ್ರದಿಂದ ಅಭಿಷೇಕಮಾಡಿಸಿ ಪೂಜೆಯನ್ನು ಸ್ವೀಕರಿಸು. ಓಂ ವಾಸುದೇವನಿಗೆ ನಮಸ್ಕಾರ" ಎಂಬ ಅರ್ಥದ

ಯೋಽಸೌ ಭವಾಂಸ್ತಿಷ್ಠತಿ ಸರ್ವರೂಪ ಮಾಯಾ ಬಲಂ ಸರ್ವಜಗತ್ಸ್ವರೂಪಂ ।
ಏತೇನ ಮಂತ್ರೇಣ ಜಗತ್ಸ್ವರೂಪ ಸಂಪೂಜಿತಸ್ತಿಷ್ಠತಿ ಲೋಕನಾಥ ॥
ಕರಣಧಾರಣ ಪ್ರವಧ್ಯ ಮುದಾಹರಣ ಮಪರಾಜಿತ ಮಜರಾಮರ ।
ಸಂಪೂಜ್ಯ ಸ್ನಾಪಯಾತ್ಮಾನಮನೇನ ಮಂತ್ರೇಣ ಓಂ ನಮೋ ವಾಸುದೇವಾಯ॥

ಎಂಬ ಮಂತ್ರವನ್ನು ಹೇಳಿ ಅಭಿಷೇಕಮಾಡಿ ಪೂಜಿಸಬೇಕು.

ಏವಂತು ಸ್ಥಾಪನಂ ಕೃತ್ವಾ ಶಿಲಾಯಾಂ ಮಮ ಸುಂದರಿ ||
ತತೋಽಧಿವಾಸನಂ ಕಾರ್ಯಂ ಪೂರ್ವಪ್ರೋಷ್ಠಪದಾಸು ಚ || ೧೦ ||

ಯೋ ಮಾಂ ಸಂಸ್ಥಾಪಯೇದ್ದೇವೀ ಮಮ ಕರ್ಮಪರಾಯಣಃ |
ಸ ಯಾತಿ ವೈಷ್ಣವಂ ಲೋಕಂ ನಾತ್ರ ಕಾರ್ಯಾ ವಿಚಾರಣಾ || ೧೧ ||

ಯಾವಕಂ ಪಾಯಸಂ ಭುಕ್ತ್ವಾ ಅಹೋರಾತ್ರಂ ಸಮಾಪಯೇತ್ |
ತತಃ ಪಶ್ಚಿಮಸಂಧ್ಯಾಯಾಂ ದದ್ಯಾಚ್ಚತ್ವಾರಿ ದೀಪಕಾನ್ || ೧೨ ||

ಪಂಚಗವ್ಯಂಚ ಗಂಧಂಚ ವಾರಿಣಾ ಸಹ ಮಿಶ್ರಯೇತ್ |
ಚತುರಃ ಕಲಶಾಂಶ್ಚೈವ ಸ್ಥಾಪಯೇತ್ಪಾದಮೂಲತಃ || ೧೩ ||

ಗೀತವಾದಿತ್ರಘೋಷೇಣ ಉತ್ಸವಂ ತತ್ರ ಕಾರಯೇತ್ |
ಬ್ರಾಹ್ಮಣೈಃ ಸಾಮಗೈಸ್ತತ್ರ ವೇದಘೋಷಂತು ಕಾರಯೇತ್ || ೧೪ ||

---

೧೦. ಸುಂದರೀ, ಹೀಗೆ ಶಿಲೆಯ ವಿಗ್ರಹದಲ್ಲಿ ನನ್ನನ್ನು ಸಾವಕಾಶಮಾಡದೆ ಪೂರ್ವಾಭಾದ್ರಪದನಕ್ಷತ್ರದಲ್ಲಾದರೂ ಪ್ರತಿಷ್ಠೆಮಾಡಿ ಬಳಿಕ ಗಂಧಧೂಪಾದಿಗಳಿಂದ ಸಂಸ್ಕರಿಸಬೇಕು.

೧೧. ದೇವೀ, ನನ್ನನ್ನು ಹೀಗೆ ಪ್ರತಿಷ್ಠೆಮಾಡುವ ನನ್ನ ಕರ್ಮನಿರತರು ವಿಷ್ಣುಲೋಕವನ್ನು ಸೇರುವರು. ಇದರಲ್ಲಿ ವಿಮರ್ಶೆ ಬೇಕಿಲ್ಲ.

೧೨. ಪ್ರತಿಷ್ಠಾಪಕನು ಯವೆಯ ಪಾಯಸವನ್ನು ಸೇವಿಸಿ, ಅಹೋರಾತ್ರಿಯನ್ನು ಕಳೆಯಬೇಕು. ಸಾಯಂಕಾಲ ನಾಲ್ಕು ದೀಪಗಳನ್ನು ದೇವರ ಮುಂದೆ ಹತ್ತಿಸಬೇಕು.

೧೩. ಪಂಚಗವ್ಯವನ್ನೂ, ಗಂಧವನ್ನೂ ನೀರಿನೊಡನೆ ಮಿಶ್ರಮಾಡಿ ದೇವರ ಪಾದ ಮೂಲದಲ್ಲಿ ನಾಲ್ಕು ಕಲಶಗಳನ್ನು ಸ್ಥಾಪಿಸಬೇಕು.

೧೪. ಗೀತವಾದ್ಯಗಳ ಧ್ವನಿಯಿಂದ ಅಲ್ಲಿ ಉತ್ಸವವನ್ನು ಮಾಡಿಸಬೇಕು. ಸಾಮವೇದವನ್ನು ಗಾನಮಾಡುವ ಬ್ರಾಹ್ಮಣರಿಂದ ವೇದಘೋಷವನ್ನು ಮಾಡಿಸಬೇಕು.

ಬ್ರಹ್ಮಾಕ್ಷರಸಹಸ್ರಾಣಿ ಪಠತಾಂ ಬ್ರಹ್ಮವಾದಿನಾಂ ।
ಯೇಷಾಂ ಪಠಿತಶಬ್ದೇನ ಶುಭಗೀತಸ್ವರೇಣ ಚ ।
ಆಗಮಿಷ್ಯಾಮ್ಯಹಂ ದೇವಿ ಮಂತ್ರಪಾಠೋ ಮಮ ಪ್ರಿಯಃ ॥ ೧೫ ॥

ನಿಶ್ಶಬ್ದಂಚ ತತಃ ಕೃತ್ವಾ ಸ್ಥಾಪ್ಯೋ ಭಾಗವತೈಃ ಸಹ ॥ ೧೬ ॥

ಪುನರಾವಾಹನಂ ಕುರ್ಯಾನ್ಮಂತ್ರೇಣಾನೇನ ಸುವ್ರತಃ ॥
ಆಗಚ್ಛ ಹೇ ದೇವ ಸುಮಂತ್ರಯುಕ್ತಃ ।
ಪಂಚೇಂದ್ರಿಯೈಃ ಷಟ್ಸು ತಥಾ ಪ್ರಧಾನಃ ॥ ೧೭ ॥

ಏತೇಷು ಭೂತೇಷು ಚ ಸಂವಿಧಾತಾ ।
†ಆವಾಹಿತಸ್ತ್ವಿಷ್ಟಸಿ ಲೋಕನಾಥ ॥ ೧೮ ॥

---

೧೫ ದೇವಿ, ಬ್ರಹ್ಮವಾದಿಗಳು ಹೇಳುವ ಬ್ರಹ್ಮಾಕ್ಷರ (ವೇದ) ಸಹಸ್ರಗಳ ಶ್ರವಣದಿಂದಲೂ ಮಂಗಳಕರವಾದ ಗಾನಸ್ವರದಿಂದಲೂ ನಾನು ಬರುವೆನು. ಮಂತ್ರ ಪಾಠವು ನನಗೆ ಪ್ರಿಯವಾದುದು.

೧೬. ಬಳಿಕ ಗೀತವಾದ್ಯಾದಿಗಳ ಶಬ್ದವನ್ನು ನಿಲ್ಲಿಸಿ ಭಾಗವತರೊಡನೆ ಸ್ಥಾಪಿಸಬೇಕು.

೧೭–೧೮. ‘ ಓ ದೇವ, ಲೋಕನಾಥ ಪಂಚೋಪನಿಷನ್ಮಂತ್ರದಲ್ಲೂ ಶಿಕ್ಷಾದಿಷಡಂಗಗಳಲ್ಲೂ ಪ್ರಧಾನ ಪ್ರತಿಪಾದ್ಯನೂ ಪಂಚೇಂದ್ರಿಯಗಳುಳ್ಳ ಸರ್ವ ಪ್ರಾಣಿಗಳಿಗೂ ವಿಧಾಯಕನೂ ಆದ ನೀನು ಆವಾಹಿತನಾಗಿ ಇಲ್ಲಿ ದಯೆಮಾಡಿ ನೆಲೆಸು.’ ಎಂಬ ಅರ್ಥದ—

“ಆಗಚ್ಛ ಹೇ ದೇವ ಸುಮಂತ್ರಯುಕ್ತಃ ಪಂಚೇಂದ್ರಿಯೈಃ ಷಟ್ಸು ತಥಾ ಪ್ರಧಾನಃ॥ ಏತೇಷು ಭೂತೇಷು ಚ ಸಂವಿಧಾತಾ । ಆವಾಹಿತಸ್ತ್ವಿಷ್ಟಸಿ ಲೋಕನಾಥ ॥ ”

ಈ ಮಂತ್ರದಿಂದ ಸುವ್ರತಿಯಾದವನು ದೇವನನ್ನು ಆವಾಹಿಸಬೇಕು.

---

† ಆವಾಸಿತಃ.

ಅನನ್ಯೈವ ತು ಮಂತ್ರೇಣ ಸಮಿತ್ತಿಲಘೃತೇನ ಚ |
ನುಧುನಾ ಚೈವ ಹೋತವ್ಯಮಷ್ಟೋತ್ತರಶತಾಹುತೀಃ || ೧೯ ||

ಏವಂ ಕೃತೇ ವಿಧಾನೇ ಭವಾಮಿ ಸನ್ನಿಹಿತಃ ಸ್ವಯಂ |
ವ್ಯತೀತಾಯಾಂತು ಶರ್ವರ್ಯಾಂ ಪ್ರಭಾತೇ ವಿಮಲೇ ತತಃ |
ಪಂಚಗವ್ಯಂ ತತ್ರಃ ಪ್ರಾಶ್ಯ ಮಂತ್ರೇಣ ವಿಧಿಪೂರ್ವಕಂ || ೨೦ ||

ಸರ್ವಗಂಧೈಶ್ಚ ಲಾಜೈಶ್ಚ ಪಂಚಗವ್ಯಜಲಂ ತಥಾ |
ತತಃ ಪ್ರಾಸಾದೇ ಸ್ಥಾಪ್ಯೋಽಹಂ ಗೀತವಾದಿತ್ರಮಂಗಲೈಃ || ೨೧ ||

ಸರ್ವಗಂಧಾಂಸ್ತತೋ ಗೃಹ್ಯ ಇಮಂ ಮಂತ್ರಮುದಾಹರೇತ್ || ೨೨ ||

ಮಂತ್ರಃ—

ಯೋಽಸೌ ಭವಾನ್ ಲಕ್ಷಣ ಲಕ್ಷಿತಶ್ಚ |
ಲಕ್ಷ್ಮ್ಯಾ ಚ ಯುಕ್ತಃ ಸತತಂ ಪುರಾಣಃ ||

---

೧೯. ಇದೇ ಮಂತ್ರದಿಂದಲೇ ಸಮಿತ್ತು ಎಳ್ಳು ತುಪ್ಪಗಳಿಂದಲೂ, ಜೇನುತುಪ್ಪದಿಂದಲೂ ನೂರೆಂಟು ಆಹುತಿಗಳನ್ನೂ ಹೋಮಮಾಡಬೇಕು.

೨೦. ಹೀಗೆ ವಿಧಾನಮಾಡಿದ ಬಳಿಕ ನಾನು ಅಲ್ಲಿ ಸಿದ್ಧನಾಗಿರುವೆನು. ಆ ರಾತ್ರಿಯು ಕಳೆದು ಬೆಳಗಾದ ಬಳಿಕ ಮಂತ್ರದಿಂದ ವಿಧಿಪೂರ್ವಕವಾಗಿ ಪಂಚಗವ್ಯವನ್ನು ಸೇವಿಸಬೇಕು.

೨೧. ಬಳಿಕ ಸರ್ವಗಂಧ, ಅರಳು, ಪಂಚಗವ್ಯ ಇವುಗಳೊಡನೆಯೂ, ಗೀತವಾದ್ಯ ಮಂಗಳಗಳೊಡನೆಯೂ ನನ್ನನ್ನು ದೇವಾಲಯದಲ್ಲಿ ಸ್ಥಾಪಿಸಬೇಕು.

೨೨–೨೪. ಸರ್ವಗಂಧಗಳನ್ನು ತೆಗೆದುಕೊಂಡು, " ಸರ್ವಸುಲಕ್ಷಣಗಳುಳ್ಳವನೂ ಸದಾ ಲಕ್ಷ್ಮಿಯಿಂದೊಡಗೂಡಿದವನೂ, ಪುರಾಣ ಪುರುಷನೂ ಅತ್ಯತಿ

ಅತ್ರ ಪ್ರಾಸಾದೇ ಸುಸಮಿದ್ಧತೇಜಾ ।
ಪ್ರವೇಶಮಾಯಾಹಿ ನಮೋನಮಸ್ತೇ ॥ ೨೩ ॥

ತತ ಏತೇನ ಮಂತ್ರೇಣ ಪ್ರಾಸಾದಂ ಪ್ರವಿವೇಶಯೇತ್ ।
ಪ್ರತಿಮಾ ಸ್ಥಾಪಿತವ್ಯಾ ನೋ ಮಧ್ಯೇ ನ ತು ವಿಪಾರ್ಶ್ವತಃ ॥ ೨೪ ॥

ಏವಂ ಸಂಸ್ಥಾಪನಂ ಕೃತ್ವಾ ದದ್ಯಾದುದ್ವರ್ತನಂ ವಿಭೋಃ ।
ಚಂದನಂ ಕುಂಕುಮಂಚೈವ ಮಿಶ್ರಂಕಾಲೇಯಕೇನ ಚ ॥
ಏವಂಚೋದ್ವರ್ತನಂ ಕೃತ್ವಾ ಇಮಂ ಮಂತ್ರಮುದಾಹರೇತ್ ॥ ೨೫ ॥

ಯೋಽಸೌ ಭವಾನ್ಸರ್ವ ಜಗತ್ಪ್ರಧಾನಃ
ಸಂಪೂಜಿತೋ ಬ್ರಹ್ಮ ಬೃಹಸ್ಪತಿಭ್ಯಾಂ ।

ಶಯುತೇಜನೂ ಆದ ನೀನು ಈ ದೇವಾಲಯದಲ್ಲಿ ಪ್ರವೇಶಿಸು. ನಿನಗೆ ನಮಸ್ಕಾರ, ನಮಸ್ಕಾರ" ಎಂಬ ಅರ್ಥದ—

"ಯೋಽಸೌಭವಾನ್ ಲಕ್ಷಣ ಲಕ್ಷಿತಶ್ಚ ಲಕ್ಷ್ಮ್ಯಾ ಶ್ರಿಯಾ ಚ ಯುಕ್ತಃ ಸತತಂ ಪುರಾಣಃ ॥
ಅತ್ರ ಪ್ರಾಸಾದೇ ಸುಸಮಿದ್ಧ ತೇಜಾಃ ಪ್ರವೇಶಮಾಯಾಹಿ ನಮೋ ನಮಸ್ತೇ ॥"

ಎಂಬ ಮಂತ್ರದಿಂದ ದೇವಾಲಯಕ್ಕೆ ಬಿಜಮಾಡಿಸಬೇಕು ನನ್ನ ಮೂರ್ತಿಯನ್ನು ಗರ್ಭಗೃಹದ ಬಾಗಿಲೆದುರಿಗೆ ಸ್ಥಾಪಿಸಬೇಕೇ ಹೊರತು ಪಾರ್ಶ್ವದಲ್ಲಿ ಸ್ಥಾಪಿಸಬಾರದು.

೨೫–೨೬. ಹೀಗೆ ಪ್ರತಿಷ್ಠೆಮಾಡಿ, ವಿಭುವಿಗೆ ಚಂದನ ಕುಂಕುಮಕೇಸರಿ, ಕರಿಯ ಅಗುರು ಚಕ್ಕೆ, ಇವುಗಳ ಮಿಶ್ರದ ಸ್ನಾನದ ಪುಡಿಯನ್ನು ಉಜ್ಜಬೇಕು. ಉಜ್ಜಿ "ಲೋಕನಾಥ, ಸರ್ವಜಗತ್ಪ್ರಧಾನನೂ ಬ್ರಹ್ಮಬೃಹಸ್ಪತಿಗಳಿಂದ ಸಂಪೂಜಿತನೂ ಸರ್ವವಂದಿತನೂ, ಸರ್ವಕಾರಣನೂ ಮಂತ್ರಯುತನೂ ಆದ ನೀನು ಸುಖದಿಂದ ಇಲ್ಲಿ ಬಿಜಯಮಾಡಿಸು" ಎಂಬ ಅರ್ಥವುಳ್ಳ—

ಪ್ರವಂದಿತಃ ಕಾರಣಂ ಮಂತ್ರಯುಕ್ತಃ ||
ಸುಖಾಗತಂ ತಿಷ್ಠ ಸು ಲೋಕನಾಥ || ೨೬ ||

ಏವಂ ಸಂಸ್ಥಾಪನಂ ಕೃತ್ವಾ ಗಂಧಮಾಲ್ಯೈಶ್ಚ ಪೂಜಯೇತ್ |
ಶುಕ್ಲವಸ್ತ್ರಾಣಿ ಮೇ ದದ್ಯಾದಿಮಂ ಮಂತ್ರಮುದಾಹರೇತ್ || ೨೭ ||

ಮಂತ್ರಃ—

ವಸ್ತ್ರಾಣಿ ದೇವೇಶ ಗೃಹಾಣ ತಾನಿ
ಮಯಾ ಸುಭಕ್ತ್ಯಾ ರಚಿತಾನಿ ಯಾನಿ |
ಇಮಾನಿ ಸಂಧಾರಯ ವಿಶ್ವಮೂರ್ತೇ ||
ಪ್ರಸೀದ ಮಹ್ಯಂಚ ನಮೋ ನಮಸ್ತೇ || ೨೮ ||

"ಯೋಽಸೌ ಭವಾನ್ಸರ್ವ ಜಗತ್ಪ್ರಧಾನಃ | ಸಂಪೂಜಿತೋ ಬ್ರಹ್ಮಬೃಹಸ್ಪತಿ ಭ್ಯಾಂ || ಪ್ರವಂದಿತಃ ಕಾರಣಂ ಮಂತ್ರಯುಕ್ತಃ | ಸುಖಾಗತಂ ತಿಷ್ಠ ಸುಲೋಕನಾಥ ||" ಎಂಬ ಮಂತ್ರವನ್ನು ಹೇಳಬೇಕು.

೨೭–೨೮. ಸ್ಥಾಪನೆಮಾಡಿ ಗಂಧಪುಷ್ಪಮಾಲ್ಯಾದಿಗಳಿಂದ ಪೂಜಿಸಬೇಕು. ಬಿಳಿಯದಾದ ವಸ್ತ್ರಗಳನ್ನು ನನಗೆ ಧರಿಸಬೇಕು. ಧರಿಸುವಾಗ 'ದೇವೇಶ, ವಿಶ್ವಮೂರ್ತೀ, ನಾನು ಬಹುಭಕ್ತಿಯಿಂದ ಅರ್ಪಿಸುವ ಈ ವಸ್ತ್ರಗಳನ್ನು ಸ್ವೀಕರಿಸಿ ಧರಿಸು. ನನಗೆ ಪ್ರಸನ್ನನಾಗು, ನಿನಗೆ ನಮಸ್ಕಾರ, ನಮಸ್ಕಾರ.' ಎಂಬ ಅರ್ಥದ—

" ವಸ್ತ್ರಾಣಿ ದೇವೇಶ ಗೃಹಾಣ ತಾನಿ | ಮಯಾ ಸುಭಕ್ತ್ಯಾ ರಚಿತಾನಿ ಯಾನಿ || ಇಮಾನಿ ಸಂಧಾರಯ ವಿಶ್ವಮೂರ್ತೇ | ಪ್ರಸೀದ ಮಹ್ಯಂಚ ನಮೋ ನಮಸ್ತೇ || "

ಎಂಬ ಮಂತ್ರವನ್ನು ಹೇಳಬೇಕು.

ಏವಂ ವಸ್ತ್ರಾಣಿ ಮೇ ದದ್ಯಾದ್ವಿಧಿದೃಷ್ಟೇನ ಕರ್ಮಣಾ |
ಧೂಪನಂ ಮೇ ತತೋ ದದ್ಯಾತ್ಕುಂಕುಮಾಗುರುಮಿಶ್ರಿತಂ ||
ಏವಂತು ಧೂಪನಂ ದದ್ಯಾದಿಮಂ ಮಂತ್ರಮುದೀರಯೇತ್ || ೨೯ ||

ಮಂತ್ರಃ—

ಅಸಾವನಾದಿಃ ಪುರುಷಃ ಪುರಾಣೋ
ನಾರಾಯಣಃ ಸರ್ವಜಗತ್ಪ್ರಧಾನಃ |
ಗಂಧಂಚ ಮಾಲ್ಯಾನಿ ಚ ಧೂಪದೀಪೌ ||
ಗೃಹಾಣ ದೇವೇಶ ನಮೋ ನಮಸ್ತೇ || ೩೦ ||

ಏವಂ ಪೂಜಾಂ ತತಃ ಕೃತ್ವಾ ಪ್ರಾಪಣಂಚ ನಿವೇದಯೇತ್ |
ಪೂರ್ವೋಕ್ತೇನ ವಿಧಾನೇನ ಪ್ರಾಪಣಂಚೋಪಕಲ್ಪ್ಯ ಚ || ೩೧ ||

೨೯–೩೦. ವಿಧ್ಯುಕ್ತವಾಗಿ ಹೀಗೆ ವಸ್ತ್ರಗಳನ್ನು ನನಗೆ ಧರಿಸಬೇಕು. ಬಳಿಕ ಕುಂಕುಮಾಗುರು ಮಿಶ್ರವಾದ ಧೂಪವನ್ನು ಹಾಕಬೇಕು. ಧೂಪವನ್ನರ್ಪಿಸುವಾಗ “ದೇವೇಶ, ಅನಾದಿಯೂ ಪುರಾಣಪುರುಷನೂ, ಸರ್ವಜಗತ್ಪ್ರಧಾನನೂ ಆದ ನಾರಾಯಣ, ನೀನು ಈ ಗಂಧವನ್ನೂ ಮಾಲೆಗಳನ್ನೂ ಧೂಪದೀಪಗಳನ್ನೂ ಪರಿಗ್ರಹಿಸು.” ಎಂಬ ಅರ್ಥದ—

“ಅಸಾವನಾದಿಃ ಪುರುಷಃ ಪುರಾಣೋ | ನಾರಾಯಣಃ ಸರ್ವ ಜಗತ್ಪ್ರಧಾನಃ || ಗಂಧಂಚ ಮಾಲ್ಯಾನಿಚ ಧೂಪದೀಪೌ | ಗೃಹಾಣ ದೇವೇಶ ನಮೋ ನಮಸ್ತೇ ||”

ಎಂಬ ಮಂತ್ರವನ್ನು ಹೇಳಬೇಕು.

೩೧–೩೨. ಹೀಗೆ ಗಂಧಪುಷ್ಪಾದಿಗಳಿಂದ ಅರ್ಚಿಸಿ ಬಳಿಕ ನೈವೇದ್ಯವನ್ನು ಅರ್ಪಿಸಬೇಕು. ಪಂಡಿತನಾದವನು ನೈವೇದ್ಯವನ್ನು ಹಿಂದೆ ಹೇಳಿರುವ

ಪೂರ್ವೋಕ್ತೇನೈವ ಮಂತ್ರೇಣ ದದ್ಯಾತ್ತ್ಪಾಪಣಕಂಬುಧಃ ।
ಪ್ರಾಪಣಾಂತೇ ಚಾಚಮನಂ ದದ್ಯಾದ್ದೇಹವಿಶುದ್ಧಯೇ ॥
ಶಾಂತಿಜಾಪಸ್ತತಃ ಕಾರ್ಯಃ ಸರ್ವಕಾರ್ಯಾರ್ಥಸಿದ್ಧಿದಃ ॥ ೩೨ ॥

ಮಂತ್ರಃ—

ಓಂ ತ್ವಂ ವೈ ಸುಶಾಂತಿಂ ಕುರು ಲೋಕನಾಥ
ರಾಜ್ಞಃ ಸ ರಾಷ್ಟ್ರಸ್ಯ ಚ ಬ್ರಾಹ್ಮಣಾನಾಂ ।
ಬಾಲೇಷು ವೃದ್ಧೇಷು ಗವಾಂ ಗಣೇಷು ॥
ಕನ್ಯಾಸು ಶಾಂತಿಂಚ ಪ್ರತಿವ್ರತಾಸು ॥ ೩೩ ॥

ರೋಗಾ ವಿನಶ್ಯಂತು ಚ ಸ್ಸರ್ವತಶ್ಚ
ಕೃಷೀವಲಾನಾಂಚ ಕೃಷಿಃ ಸದಾಸ್ಯಾತ್ ।
ಸುಭಿಕ್ಷಯುಕ್ತಾಶ್ಚ ಸದಾ ಹಿ ಲೋಕಾಃ ॥
ಕಾಲೇ ಸುವೃಷ್ಟಿರ್ಭವಿತಾ ಚ ಶಾಂತಿಃ ॥ ೩೪ ॥

ವಿಧಾನದಿಂದ ಸಿದ್ಧಪಡಿಸಿ, ಹಿಂದೆ ಹೇಳಿರುವ ಮಂತ್ರದಿಂದಲೇ ಅರ್ಪಿಸಬೇಕು. ನೈವೇದ್ಯವನ್ನು ಅರ್ಪಿಸಿದ ಬಳಿಕ ದೇಹಪರಿಶುದ್ಧಿಗಾಗಿ ಆಚಮನವನ್ನು ಅರ್ಪಿಸಬೇಕು. ಬಳಿಕ ಸರ್ವಕಾರ್ಯಾರ್ಥಸಿದ್ಧಿಯನ್ನುಂಟುಮಾಡುವ ಶಾಂತಿ ಜಪವನ್ನು ಮಾಡಬೇಕು.

೩೩. "ಓಂ ಲೋಕನಾಥನೇ ಸರಾಷ್ಟ್ರನಾದ ರಾಜನಿಗೂ, ಬ್ರಾಹ್ಮಣರಿಗೂ, ಬಾಲರಿಗೂ, ವೃದ್ಧರಿಗೂ, ಗೋಸಮೂಹಕ್ಕೂ, ಕನ್ನೆಯರಿಗೂ ಪತಿವ್ರತೆಯರಿಗೂ ಸುಶಾಂತಿಯನ್ನುಂಟುಮಾಡು.

೩೪. ಎಲ್ಲೆಲ್ಲೂ ರೋಗಗಳು ನಾಶವಾಗಲಿ, ಕೃಷಿಕರ ವ್ಯವಸಾಯವು ಯಾವಾಗಲೂ ಚೆನ್ನಾಗಲಿ. ಸಕಾಲದಲ್ಲಿ ಮಳೆಯಾಗಲಿ. ಲೋಕವು ಯಾವಾಗಲೂ ಸುಭಿಕ್ಷವುಳ್ಳದಾಗಲಿ. ಎಂಬ ಅರ್ಥವನ್ನುಳ್ಳ ಮೇಲಿನ "ಓಂ ತ್ವಂ" ಎಂಬ (೩೩ ಮತ್ತು ೩೪ ನೆಯ) ಮಂತ್ರವನ್ನು ಜಪಿಸಬೇಕು.

ಏವಂ ವಿಧಿಂ ತತಃ ಕೃತ್ವಾ ವಿಧಿದೃಷ್ಟೇನ ಕರ್ಮಣಾ ।
ಸಂಪೂಜ್ಯ ತತ್ರ ದೇವೇಶಂ ಬ್ರಾಹ್ಮಣಾನ್ಭೋಜಯೇದ್ವ್ರತೀ ॥ ೩೫ ॥

ದೀನಾನಾಥಾನ್ಪ್ರತೆರ್ಪ್ಯಾಥ ಯಥಾ ವಿಭವಶಕ್ತಿತಃ ।
ಯ ಏತೇನ ವಿಧಾನೇನ ಕುರ್ಯಾತ್ಸಂಸ್ಥಾಪನಂ ಮಮ ॥ ೩೬ ॥

ಯಾವಂತೋ ಮಮ ಗಾತ್ರೇಷು ಜಾಯಂತೇ ಜಲಬಿಂದವಃ ॥
ತಾವದ್ವರ್ಷಸಹಸ್ರಾಣಿ ಮಮ ಲೋಕೇಷು ತಿಷ್ಠತಿ ॥ ೩೭ ॥

ಯೋ ಮಾಂ ಸಂಸ್ಥಾಪಯೇದ್ಭೂಮೇ ಸರ್ವಾಹಂಕಾರವರ್ಜಿತಃ ॥
ತಾರಿತಂಚ ಕುಲಂತೇನ ಸಪ್ತ ಸಪ್ತ ಚ ಸಪ್ತತಿಃ ॥ ೩೮ ॥

---

೩೫. ವಿಧಿಯಲ್ಲಿ ಹೇಳಿರುವಂತೆ ದೇವೇಶನಾದ ನನ್ನನ್ನು ಹೀಗೆ ಪ್ರತಿಷ್ಠೆ ಮಾಡಿ ಪೂಜಿಸಿ ಬಳಿಕ ಬ್ರಾಹ್ಮಣರಿಗೆ ಭೋಜನಮಾಡಿಸಬೇಕು.

೩೬–೩೭. ದೀನರನ್ನೂ ಅನಾಥರನ್ನೂ ತನ್ನ ಅನುಕೂಲಕ್ಕೆ ತಕ್ಕಂತೆ ತೃಪ್ತಿಪಡಿಸಿ, ಈ ವಿಧಾನದಿಂದ ನನ್ನನ್ನು ಪ್ರತಿಷ್ಠೆಮಾಡಿಸುವವನು ನನ್ನ ದೇಹದಲ್ಲಿ ಎಷ್ಟು ಜಲಬಿಂದುಗಳುದಿಸುವುವೋ ಅಷ್ಟುಸಾವಿರವರ್ಷಗಳಕಾಲ ನನ್ನ ಲೋಕಗಳಲ್ಲಿ ನೆಲಸುವನು.

೩೮. ಭೂಮಿ, ಸರ್ವಾಹಂಕಾರಗಳನ್ನೂ ಬಿಟ್ಟು, ನನ್ನನ್ನು ಸ್ಥಾಪಿಸುವವನು ತನ್ನ ಎಂಬತ್ತನಾಲ್ಕು ಕುಲವನ್ನು ಸಂಸಾರಸಾಗರದಿಂದ ದಾಟಿಸುವನು.

ಏತತ್ತೇ ಕಥಿತಂ ಭದ್ರೇ ಶೈಲಿಕಾಸ್ಥಾಪನಂ ಮಮ ।
ಧರ್ಮಸಂಧಾರಣಾರ್ಥಾಯ ಮಮ ಭಕ್ತಸುಖಾಯ ಚ ॥ ೩೯ ॥

ಇತಿ ಶ್ರೀವರಾಹಪುರಾಣೇ ಶೈಲಾರ್ಚಾಸ್ಥಾಪನಂ ನಾಮ
ದ್ವಶೀತ್ಯಧಿಕಶತತಮೋಽಧ್ಯಾಯಃ

---

೩೯. ಮಂಗಳೇ, ನನ್ನ ಶಿಲಾಮೂರ್ತಿಸ್ಥಾಪನೆಯ ಈ ವಿಚಾರವನ್ನು ಧರ್ಮಸಂಸ್ಥಾಪನೆಗಾಗಿಯೂ ನನ್ನ ಭಕ್ತರ ಸುಖಕ್ಕಾಗಿಯೂ ನಿನಗೆ ಹೇಳಿದುದಾಯಿತು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ—ಶಿಲೆಯಿಂದ ದೇವವಿಗ್ರಹವನ್ನು ಮಾಡುವ ಕ್ರಮವನ್ನೂ, ಮಾಡಿದ ಮೂರ್ತಿಯನ್ನು ಪ್ರತಿಷ್ಠೆಮಾಡಿ ಪೂಜಿಸು ಕ್ರಮವನ್ನೂ, ರಾಜನೇ ಮೊದಲಾದ ಸರ್ವರಿಗೂ ಶ್ರೇಯಃಪ್ರಾರ್ಥನೆ ಮಾಡುವ ಬಗೆಯನ್ನೂ, ದೇವಮೂರ್ತಿಯನ್ನು ಪ್ರತಿಷ್ಠೆಮಾಡುವುದರಿಂದಾಗುವ ಫಲಗಳನ್ನೂ ತಿಳಿಸುವನು.

ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ನೂರೆಂಬತ್ತೆರಡನೆಯ ಅಧ್ಯಾಯ.

॥ ಶ್ರೀರಸ್ತು ॥

ತ್ರ್ಯಶೀತ್ಯಧಿಕಶತತಮೋಽಧ್ಯಾಯಃ
ಅಥಮೃನ್ಮಯಾರ್ಚಾ ಸ್ಥಾಪನಂ

॥ ಶ್ರೀ ವರಾಹ ಉವಾಚ ॥

ಪುನರನ್ಯತ್ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ತಿಷ್ಠಾಮಿ ಮೃನ್ಮಯಾಂಚಾಪಿ ಪ್ರತಿಮಾಂ ಪೂಜನೇಚ್ಛಯಾ ॥ ೧ ॥

ಅರ್ಚಾಂಚ ಮೃನ್ಮಯೀಂಕೃತ್ವಾ ಸುಸ್ಫುಟಾಂಚಾಪ್ಯಖಂಡಿತಾಂ ।
ನಾಧಿಕಾಂ ವಾಮನಾಂಚಾಪಿ ನ ವಕ್ರಾಂಕಾರಯೇದ್ಬುಧಃ ॥ ೨ ॥

ಈದೃಶೀಂ ಪ್ರತಿಮಾಂ ಕೃತ್ವಾ ಮಮಕರ್ಮಪರಾಯಣಃ ।
ಭೂಮೇ ಸರ್ವಾಣಿ ಕರ್ಮಾಣಿ ಯಥಾ ಮಾ ರೋಚತೇ ತಥಾ ॥ ೩ ॥

ನೂರೆಂಬತ್ತಮೂರನೆಯ ಅಧ್ಯಾಯ
ಮಣ್ಣಿನ ದೇವಮೂರ್ತಿಯ ಸ್ಥಾಪನೆ

೧. ಶ್ರೀವರಾಹ—ವಸುಂಧರೇ, ಇನ್ನೂ ಬೇರೆ ಹೇಳುತ್ತೇನೆ. ಕೇಳು. ಪೂಜೆಯ ಇಚ್ಛೆಯಿಂದ ನಾನು ಮೃನ್ಮಯ (ಮಣ್ಣಿನ) ವಿಗ್ರಹದಲ್ಲೂ ನೆಲೆಸುವೆನು.

೨–೩. ಮಣ್ಣಿನಿಂದ ಅತಿಸ್ಫುಟವಾಗಿಯೂ, ಪೂರ್ಣವಾಗಿಯೂ (ಭಿನ್ನವಿಲ್ಲದೆಯೂ) ಅತ್ಯುನ್ನತವಾಗಿಯಾಗಲಿ, ಬಹುಕುಳ್ಳಾಗಿಯಾಗಲಿ ಇಲ್ಲದಿರುವಂತೆಯೂ, ವಕ್ರವಿಲ್ಲದಿರುವಂತೆಯೂ ನನ್ನ ಪ್ರತಿಮೆಯನ್ನು ಮಾಡಿ ನನ್ನ ಕರ್ಮನಿರತನಾದವನು ನನಗೆ ರುಚಿಸುವಂತೆ ಪ್ರತಿಷ್ಠೆ, ಪೂಜೆ ಮೊದಲಾದ ಸರ್ವಕರ್ಮಗಳನ್ನೂ ಮಾಡಬಹುದು.

ಕಾಷ್ಠಾನಾಮಪ್ಯಲಾಭೇತು ಮೃನ್ಮಯೀಂ ತತ್ರ ಕಾರಯೇತ್ ।
ಶೈಲಜಾಂ ವಾ ತತೋ ಭೂಮೇ ಮಮ ಕರ್ಮಪರಾಯಣಃ ॥ ೪ ॥

ತಾಮ್ರೇಣ ಕಾಂಸ್ಯರೌಪ್ಯೇಣ ಸೌವರ್ಣತ್ರಪುರೀತಿಭಿಃ ।
ಕುರ್ವಂತಿ ಶುಭಕರ್ಮಾಣಃ ಕೋವಿದಃ ಪ್ರತಿಮಾಂ ಶುಭಾಃ ॥ ೫ ॥

ಅರ್ಚನಂತ್ವಪರಂ ವೇದ್ಯಾಂ ಮಮ ಕರ್ಮ ಪರಿಗ್ರಹಾತ್ ।
ಕೇಚಿಲ್ಲೋಕಾಪವಾದೇನ ಖ್ಯಾತ್ಯೈ ಕುರ್ವಂತಿ ಕೇಚನ ॥ ೬ ॥

ಗೃಹಂಚಾಲೋಚ್ಯ ಕಶ್ಚಿನ್ಮಾಂ ಪೂಜಯೇತ್ಕಾಮನಾಪರಃ ।
ಪೂಜಯೇದ್ಯದಿ ವಾ ಚಕ್ರಂ ಮಮ ತೇಜೋಂಶಸಂಭವಂ ॥ ೭ ॥

---

೪. ಭೂಮಿ, ಶಿಲಾಮೂರ್ತಿಯನ್ನು ಮಾಡುವುದಕ್ಕೆ ಅವಕಾಶವಿಲ್ಲದೆ, ಸರಿಯಾದ ಮರವೂ ದೊರೆಯದಿದ್ದರೆ, ನನ್ನ ಕರ್ಮದಲ್ಲಿ ನಿರತನಾದವನು ಮೃನ್ಮಯಮೂರ್ತಿಯನ್ನು ಮಾಡಿಸಬೇಕು.

೫. ಶುಭಕರ್ಮಿಗಳಾದ ವಿದ್ವಾಂಸರು ತಾಮ್ರದಿಂದಲೂ, ಕಂಚಿನಿಂದಲೂ, ಬೆಳ್ಳಿಯಿಂದಲೂ ಚಿನ್ನದಿಂದಲೂ, ಸೀಸದಿಂದಲೂ, ಹಿತ್ತಾಳೆಯಿಂದಲೂ, ಶುಭವಾದ ನನ್ನ ಪ್ರತಿಮೆಯನ್ನು ಮಾಡುವರು.

೬. ವೇದಿಕೆಗಳಲ್ಲಿ ಕರ್ಮಗಳನ್ನಾಚರಿಸುವಾಗ ನನ್ನನ್ನು ಪೂಜಿಸುವುದು ಬೇರೊಂದು ವಿಧ. ಕೆಲವರು ಲೋಕಾಪವಾದಭೀತಿಯಿಂದಲೂ, ಕೆಲವರು ಪ್ರಖ್ಯಾತಿಗಾಗಿಯೂ ನನ್ನನ್ನು ಪೂಜಿಸುವರು.

೭-೮. ಒಬ್ಬೊಬ್ಬರು ಮನೆಯ ವಿಚಾರವನ್ನಾಲೋಚಿಸಿ ಒಳ್ಳೆಯ ದಾಗಬೇಕೆಂಬ ಆಸೆಯುಳ್ಳವರಾಗಿ (ಕಾಮಿಗಳಾಗಿ ನನ್ನನ್ನು ಪೂಜಿಸಿದರೂ ನನ್ನ

ಭೂಮೇ ಏವಂ ವಿಜಾನೀಹಿ ಸ್ಥಾಪಿತೋಽಹಂ ನ ಸಂಶಯಃ ।
ಸಂಪದಸ್ತು ಪ್ರಯಚ್ಛಾಮಿ ಪೂಜಿತೋಽಹಂ ಧರಾಧರೇ ॥ ೮ ॥

ಮಂತ್ರೈರ್ವಾ ವಿಧಿಪೂರ್ವೇಣ ಯೋ ಮೇ ಕರ್ಮಾಣಿ ಕಾರಯೇತ್।
ಯಂ ಯಂ ಫಲಂ ಸಮುದ್ದಿಶ್ಯ ಮಾಂ ಪೂಜಯತಿ ಮಾನವಃ ॥ ೯ ॥

ತತ್ತತ್ಫಲಂಪ್ರಯಚ್ಛಾಮಿ ಪ್ರಸನ್ನೇನಾಂತರಾತ್ಮನಾ ।
ಮಮ ಚೈವ ಪ್ರಸಾದೇನ ಪ್ರಾಪ್ನೋತಿ ಗತಿಮುತ್ತಮಾಂ ॥ ೧೦ ॥

ಮದ್ಭಕ್ತಃ ಸತತಂ ನಿತ್ಯಂ ಕರ್ಮಣಾ ಪರಿವೇಷ್ಟಿತಃ ।
ಸ ವೈ ಮತ್ಪರಿತೋಷಾರ್ಥಂ ಮನಸ್ಯೇವ ಪ್ರಪೂಜಯೇತ್ ॥ ೧೧ ॥

ದದ್ಯಾಜ್ಜಲಾಂಜಲಿಂ ಮಹ್ಯಂ ತೇನ ಮೇ ಪ್ರೀತಿರುತ್ತಮಾ ।
ತಸ್ಯ ಕಿಂ ಸುಮನೋಭಿಶ್ಚ ಜಾಪ್ಯೇನ ನಿಯಮೇನ ಕಿಂ ॥ ೧೨ ॥

ತೇಜೋಂಶದಿಂದುದಿಸಿದ ಚಕ್ರವನ್ನು ಪೂಜಿಸಿದರೂ ನನ್ನನ್ನು ಪ್ರತಿಷ್ಠೆಮಾಡಿದಂತೆಯೇ ಎಂದು ತಿಳಿ. ಇದರಲ್ಲಿ ಸಂದೇಹವಿಲ್ಲ. ಧರಾಧರೇ, ಪೂಜಿತನಾದ ನಾನು ಸಂಪತ್ತನ್ನು ಕೊಡುವೆನು.

೯-೧೦. ಯಾರು ಯಾವ ಯಾವ ಫಲವನ್ನುದ್ದೇಶಿಸಿ ವಿಧಿಪೂರ್ವಕವಾಗಿ ಮಂತ್ರಗಳಿಂದ ನನ್ನ ಕರ್ಮಗಳನ್ನು ಮಾಡುವರೋ ಅಥವಾ ಪೂಜಿಸುವರೋ ಅವರಿಗೆ ಆಯಾಫಲವನ್ನು ಸಂತುಷ್ಟವಾದ ಮನದಿಂದ (ಪ್ರಸನ್ನಾಂತರಾತ್ಮದಿಂದ) ಕೊಡುವೆನು. ಅಲ್ಲದೆ ಅವರು ನನ್ನ ಅನುಗ್ರಹದಿಂದ ಉತ್ತಮಗತಿಯನ್ನು ಪಡೆಯುವರು.

೧೧. ಸದಾ ಕರ್ಮದಿಂದ ಆವೃತನಾಗಿರುವ ನನ್ನ ಭಕ್ತನು ನನ್ನ ಪರಿತೃಪ್ತಿಗಾಗಿ ಯಾವಾಗಲೂ ಮನಸ್ಸಿನಲ್ಲೇ ಪೂಜಿಸಬೇಕು.

೧೨. ಭಕ್ತನು ಕೊಡುವ ಬೊಗಸೆಯ ನೀರಿನ ಅರ್ಘ್ಯದಿಂದ ನನಗೆ ಅತಿಯಾದ ಪ್ರೀತಿಯಾಗುವುದು. ಅಂತಹವನಿಗೆ ಹೂಗಳಿಂದಲಾಗಲಿ ಜಪನಿಯಮಗಳಿಂದಲಾಗಲಿ ಆಗಬೇಕಾದುದೇನು !

ಮಹ್ಯಂ ಚಿಂತಯತೇ ನಿತ್ಯಂ ನಿಭೃತೇನಾಂತರಾತ್ಮನಾ ।
ತಸ್ಯಕಾಮಂ ಪ್ರಯಚ್ಛಾಮಿ ದಿವ್ಯಾನ್ಭೋಗಾನ್ಮನೋರಮಾನ್ ॥
ಏತತ್ತೇ ಸರ್ವಮಾಖ್ಯಾತಂ ಸುಗೋಪ್ಯಂಚ ಪ್ರಯತ್ನತಃ ॥ ೧೩ ॥

ಮೃನ್ಮಯೀಂ ಪ್ರತಿಮಾಂ ಕೃತ್ವಾ ಮಮಕರ್ಮಸುನಿಷ್ಠಿತಃ ।
ಶ್ರವಣೇ ಚೈವ ನಕ್ಷತ್ರೇ ಕುರ್ಯಾತ್ತಸ್ಯಾಧಿವಾಸನಂ ॥ ೧೪ ॥

ಪೂರ್ವೋಕ್ತೇನ ವಿಧಾನೇನ ಸ್ಥಾಪಯೇನ್ಮಂತ್ರಪೂರ್ವಕಂ ॥ ೧೫ ॥

ಪಂಚಗವ್ಯಂಚ ಗಂಧಂಚ ವಾರಿಣಾ ಸಹ ಮಿಶ್ರಯೇತ್ ।
ತತೋ ಮೇ ಸ್ನಪನಂ ಕಾರ್ಯಮಿಮಂ ಮಂತ್ರಮುದಾಹರೇತ್ ॥ ೧೬ ॥

ಮಂತ್ರಃ— ಯೋಽಸೌ ಭವಾನ್ಸರ್ವ ಜಗತ್ಪ್ರಕರ್ತಾ ।
ಯಸ್ಯ ಪ್ರಸಾದೇನ ಭವಂತಿ ಲೋಕಾಃ ॥
ಸ ತ್ವಂ ಕುರುಷ್ವಾಚ್ಯುತ ಮತ್ಪ್ರಸಾದಂ ।
ತ್ವಂತಿಷ್ಠ ಚಾರ್ಚಾಸು ಚ ಮೃನ್ಮಯೀಷು ॥ ೧೭ ॥

---

೧೩. ಯಾವಾಗಲೂ ಪೂರ್ಣಮನಸ್ಸಿನಿಂದ ನನ್ನನ್ನು ಧ್ಯಾನಿಸುವವರಿಗೆ ಬೇಕಾದ ಇಷ್ಟಾರ್ಥಗಳನ್ನೂ ಮನೋಹರವಾದ ದಿವ್ಯಭೋಗಗಳನ್ನೂ ಕೊಡುವೆನು. ಅತಿರಹಸ್ಯವಾದ ಈ ವಿಚಾರವನ್ನೆಲ್ಲಾ ನಿನಗೆ ಹೇಳಿದೆನು.

೧೪–೧೫ ನನ್ನ ಕರ್ಮಗಳಲ್ಲಿ ನಿಷ್ಠನಾದವನು ಮೃನ್ಮಯ ವಿಗ್ರಹವನ್ನು ಮಾಡಿ, ಶ್ರವಣನಕ್ಷತ್ರದಲ್ಲಿ ಆ ವಿಗ್ರಹಕ್ಕೆ ಗಂಧ ಧೂಪಾದಿಗಳಿಂದ ಸಂಸ್ಕಾರವನ್ನು ಮಾಡಬೇಕು. ಪೂರ್ವದಲ್ಲಿ ಹೇಳಿರುವ ಕ್ರಮದಿಂದ ಮಂತ್ರಪೂರ್ವಕವಾಗಿ ಪ್ರತಿಷ್ಠೆಮಾಡಬೇಕು.

೧೬–೧೭. ಪಂಚಗವ್ಯವನ್ನೂ ಗಂಧವನ್ನೂ ನೀರಿನೊಡನೆ ಸೇರಿಸಬೇಕು. ಬಳಿಕ ನನಗೆ "ಪೂಜ್ಯನಾದ ಯಾರು ಸರ್ವಜಗತ್ಪ್ರಕರ್ತೃವೋ, ಯಾರ ಅನುಗ್ರಹದಿಂದ ಲೋಕಗಳು ಜೀವಿಸುವುವೋ, ಅಂತಹ ನಾಶರಹಿತನಾದ ಸ್ವಾಮಿಯೇ, ನೀನು ನನ್ನಲ್ಲಿ ಕೃಪೆಯಿಡು. ಈ ಮೃನ್ಮಯವಿಗ್ರಹದಲ್ಲಿ ನೆಲಸು" ಎಂಬ ಅರ್ಥದ "ಯೋಽಸೌಭವಾನ್‌ಚ ಮೃನ್ಮಯೀಷು" ಎಂಬ ಮೇಲಿನ (೧೭ ನೆಯ) ಮಂತ್ರವನ್ನು ಹೇಳಿ ಅಭಿಷೇಕಮಾಡಬೇಕು.

ಕಾರಣ ಕಾರಣ ಹ್ಯಗ್ರತೇಜಸಂ ದ್ಯುತಿಮಂತಂ ಮಹಾಪುರುಷಂ ನಮೋ ನಮಃ ।
ಅನೇನ ಮಂತ್ರೇಣ ವೇಶ್ಮನಿ ಪ್ರವಿಶ್ಯ ಸ್ಥಾಪನಂ ಕುರ್ಯಾತ್ ॥ ೧೮ ॥

ಅನೇನೈವತುಮಂತ್ರೇಣ ಸ್ಥಾಪಯೇನ್ಮಾಂಸಮಾಹಿತಃ ।
ಪೂರ್ವವತ್ಸ್ಥಾಪಯೇತ್ತತ್ರ ಚತುರಃ ಕಲಶಾನ್ಪುರಾ ॥
ಚತುರಸ್ತಾನ್ ಗೃಹೀತ್ವಾ ಚ ಇಮಂ ಮಂತ್ರಮುದಾಹರೇತ್ ॥ ೧೯ ॥

ಮಂತ್ರಃ—
ಓಂ ವರುಣ ಸಮುದ್ರಂ ಲಬ್ಧ್ವಾ ಸಂಪೂಜಿತೋ ಹ್ಯಾತ್ಮಪ್ರತಿಪ್ರಸನ್ನಃ ।
ಅಗ್ನಿಶ್ಚ ಭೂಮಿಶ್ಚ ರಸಾಶ್ಚ ಸರ್ವೇ ಭವಂತಿ ಯಸ್ಮಾತ್ ಸತತಂ ನಮಸ್ಯೆ॥
ಏತೇನ ಮಂತ್ರೇಣ ಮಮಾಭಿಷೇಕಂ ಪ್ರಾಪ್ತಂ ವರಿಷ್ಠಂ ಹಿ ಸ ಊರ್ಧ್ವಬಾಹುಃ ॥ ೨೦ ॥

---

೧೮. ಕಾರಣಕಾರಣನೂ, ಅತಿತೇಜಸ್ವಿಯೂ, ಕಾಂತಿವಂತನೂ ಆದ ಮಹಾಪುರುಷನಿಗೆ ನಮಸ್ಕಾರ, ಎಂಬ 'ಅರ್ಥದ ಕಾರಣ ಕಾರಣ ನಮೋನಮಃ' ಎಂಬ ಮೇಲಿನ (೧೮ ನೆಯ) ಮಂತ್ರದಿಂದ ಆಲಯದಲ್ಲಿ ಪ್ರವೇಶಿಸಿ ಮೂರ್ತಿಯನ್ನು ಸ್ಥಾಪಿಸಬೇಕು.

೧೯–೨೦. ಈ ಮಂತ್ರದಿಂದಲೇ ಶಾಂತನಾಗಿ ನನ್ನನ್ನು ಸ್ಥಾಪಿಸಬೇಕು. ಪೂರ್ವದಂತೆ ಅಲ್ಲಿ ದೇವರಮುಂದೆ ನಾಲ್ಕು ಕಲಶಗಳನ್ನು ಸ್ಥಾಪಿಸಬೇಕು. ಅವುಗಳನ್ನು ಕೈಗೆ ತೆಗೆದುಕೊಂಡು 'ಓಂ ವರುಣಶರೀರಕನಾದ ದೇವನೇ, ಸಮುದ್ರೋದಕವನ್ನು ತಂದು ನನ್ನಿಂದ ಸಂಪೂಜಿತನಾದ ನೀನು ನನಗೆ ಅತಿಪ್ರಸನ್ನನಾಗು. ಅಗ್ನಿಯೂ, ಭೂಮಿಯೂ ಸರ್ವರಸಗಳೂ ಯಾರಿಂದ ಉದಿಸಿರುವವೊ ಆ ನಿನ್ನನ್ನು ಯಾವಾಗಲೂ ನಮಸ್ಕರಿಸುತ್ತೇನೆ.' ಎಂಬ ಅರ್ಥವುಳ್ಳ.

ಓಂ ವರುಣ ಸಮುದ್ರಂ ಲಬ್ಧ್ವಾಸಂಪೂಜಿತೋ ಹ್ಯಾತ್ಮಪ್ರತಿಪ್ರಸನ್ನಃ ।
ಅಗ್ನಿಶ್ಚ ಭೂಮಿಶ್ಚ ರಸಾಶ್ಚ ಸರ್ವೇಭವಂತಿ ಯಸ್ಮಾತ್ ಸತತಂ ನಮಸ್ಯೇ ॥೨೦॥

ಎಂಬ ಮಂತ್ರದಿಂದ ಕಲಶಗಳನ್ನು ತಲೆಯಿಂದಮೇಲಕ್ಕೆತ್ತಿ ಹಿಡಿದು ಕೊಂಡು ನನಗೆ ಮಾಡುವ ಅಭಿಷೇಕವು ಶ್ರೇಷ್ಠವಾದುದು.

ಏವಮಾಸ್ನಾಪ್ಯ ವಿಧಿವನ್ಮಮಕರ್ಮಪರಾಯಣಃ ।
ಪೂರ್ವೋಕ್ತವಿಧಿನಾ ಚೈವ ಗಂಧಮಾಲ್ಯೈಶ್ಚ ಪೂಜಯೇತ್ ॥ ೨೦ ॥

ಅಗುರುಂ ಚೈವ ಧೂಪಂಚ ಸಕರ್ಪೂರಂ ಸ ಕುಂಕುಮಂ ।
ನಮೋ ನಾರಾಯಣಾಯೇತಿ ಉಕ್ತ್ವಾ ಧೂಪಂ ಪ್ರಕಲ್ಪಯೇತ್ ॥ ೨೨ ॥

ಧೂಪಂ ದತ್ವಾ ಯಥಾನ್ಯಾಯಂ ಪೀತಂ ವಸ್ತ್ರಂತು ದಾಪಯೇತ್ ।
ನಮೋ ನಾರಾಯಣಾಯೇತಿ ಉಕ್ತ್ವಾ ಮಂತ್ರಮುದಾಹರೇತ್ ॥ ೨೩ ॥

ಮಂತ್ರಃ—

ವಸ್ತ್ರೇಣ ಪೀತೇನ ಸದಾ ಪ್ರಸನ್ನೋ ಯಸ್ಮಿನ್ಪ್ರಸನ್ನೇ ತು ಜಗತ್ಪ್ರಸನ್ನಂ ।
ಗೃಹ್ಣಾತು ವಸ್ತ್ರಂ ಸುಮುಖಃ ಪ್ರಸನ್ನೋ ದೇವಃ ಸದಾಪಾತು ಭವಸ್ಯ ಬಂಧಾತ್ ॥ ೨೪ ॥

---

೨೧. ನನ್ನ ಕರ್ಮಗಳಲ್ಲಿ ನಿರತನಾದವನು ಹೀಗೆ ವಿಧಿಯಂತೆ ಅಭಿಷೇಕವನ್ನು ಮಾಡಿ, ಹಿಂದೆ ಹೇಳಿರುವ ನಿಯಮದಂತೆ, ಗಂಧಮಾಲೆಗಳಿಂದಲೂ ಪೂಜಿಸಬೇಕು.

೨೨. ಕರ್ಪೂರ ಕುಂಕುಮ ಕೇಸರಿಗಳಿಂದ ಕೂಡಿದ ಅಗುರು ಧೂಪವನ್ನು 'ನಮೋ ನಾರಾಯಣಾಯ' ಎಂದು ಹೇಳಿ, ಅರ್ಪಿಸಬೇಕು.

೨೩–೨೪. ಧೂಪವನ್ನು ಕ್ರಮವಾಗಿ ಅರ್ಪಿಸಿ, ಪೀತ (ಹಳದಿಯ) ವಸ್ತ್ರವನ್ನು ಧರಿಸಬೇಕು 'ನಮೋ ನಾರಾಯಣಾಯ ಎಂದು ಹೇಳಿ 'ಯಾರು ಪ್ರಸನ್ನನಾಗಲಾಗಿ, ಜಗತ್ತೇ ಒಲಿಯುವುದೋ, ಯಾರು ಯಾವಾಗಲೂ ಪೀತಾಂಬರಧಾರಿಯಾಗಿ ಮನೋಹರನಾಗಿರುವನೋ, ಅಂತಹ ಸ್ವಾಮಿಯಾದ ನೀನು, ನಾನು ಅರ್ಪಿಸುವ ವಸ್ತ್ರವನ್ನು ಅನುಗ್ರಹದಿಂದ ಪರಿಗ್ರಹಿಸಿ, ನನ್ನನ್ನು ಸಂಸಾರ ಬಂಧನದಿಂದ ಸಂತತವಾಗಿ ರಕ್ಷಿಸು, ಎಂಬ ಅರ್ಥವುಳ್ಳ ಮೇಲಿನ 'ವಸ್ತ್ರೇಣ ಪೀತೇನ ಬಂಧಾತ್' ಎಂಬ ಮಂತ್ರವನ್ನು ಹೇಳಬೇಕು.

ತತ ಏತೇನ ಮಂತ್ರೇಣ ವಸ್ತ್ರಂ ದದ್ಯಾದ್ಯಥೋಚಿತಂ ।
ಧೂಪದೀಪಾದಿಭಿಃ ಪೂಜ್ಯ ಪ್ರಾಪಣಂ ಪರಿಕಲ್ಪಯೇತ್ ॥ ೨೫ ॥

ಪೂರ್ವೋಕ್ತೇನ ವಿಧಾನೇನ ದದ್ಯಾತ್ಪ್ರಾಪಣಕಂ ನರಃ ।
ಪಶ್ಚಾದಾಚಮನಂ ದದ್ಯಾನ್ಮಂತ್ರಪೂರ್ವಂ ಪ್ರಯತ್ನತಃ ॥ ೨೬ ॥

ಮಂತ್ರಃ—
ಶಾಂತಿರ್ಭವತು ದೇವಾನಾಂ ಬ್ರಹ್ಮಕ್ಷತ್ರ ವಿಶಾಂತಥಾ ।
ಶಾಂತಿರ್ಭವತು ವೃದ್ಧಾನಾಂ ಬಾಲಾನಾಂ ಶಾಂತಿರುತ್ತಮಾ ॥
ದೇವೋ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಪೂರಿತಾ ॥ ೨೭ ॥

ಅನನ್ಯೈವ ತು ಮಂತ್ರೇಣ ಶಾಂತಿಂ ಕೃತ್ವಾ ವಿಧಾನತಃ ॥ ೨೮ ॥

ಪಶ್ಚಾತ್ ಭಾಗವತಾನ್ಪೂಜ್ಯ ತತೋ ಬ್ರಾಹ್ಮಣಪೂಜನಂ ।
ಶಿರಸಾ ವಂದನಂ ಕಾರ್ಯಂ ದಕ್ಷಿಣಾಭಿಃ ಪ್ರಪೂಜ್ಯ ಚ ॥ ೨೯ ॥

---

೨೫. ಈ ಮಂತ್ರದಿಂದ ವಸ್ತ್ರವನ್ನು ತಕ್ಕಂತೆ ಧರಿಸಬೇಕು. ಬಳಿಕ ಧೂಪದೀಪಾದಿಗಳಿಂದ ಪೂಜಿಸಿ, ನೈವೇದ್ಯವನ್ನು ಸಿದ್ಧಪಡಿಸಬೇಕು.

೨೬. ಹಿಂದೆ ಹೇಳಿರುವ ನಿಯಮದಂತೆ ನೈವೇದ್ಯವನ್ನು ಅರ್ಪಿಸಬೇಕು. ಬಳಿಕ ಮಂತ್ರಪೂರ್ವಕವಾಗಿ ಪ್ರಯತ್ನದಿಂದ ಆಚಮನವನ್ನು ಅರ್ಪಿಸಬೇಕು.

೨೭–೨೮. 'ದೇವತೆಗಳಿಗೂ, ಬ್ರಾಹ್ಮಣರಿಗೂ, ಕ್ಷತ್ರಿಯರಿಗೂ, ವೈಶ್ಯರಿಗೂ ಶಾಂತಿಯಾಗಲಿ, ವೃದ್ಧರಿಗೂ ಶಾಂತಿಯಾಗಲಿ, ಬಾಲರಿಗೆ ಉತ್ತಮಶಾಂತಿಯಾಗಲಿ. ದೇವನಾದ ಇಂದ್ರನು ಮಳೆಯನ್ನು ಸುರಿಸಲಿ. ಭೂಮಿಯು ಸಸ್ಯಪೂರ್ಣವಾಗಲಿ.' ಎಂಬ ಅರ್ಥವುಳ್ಳ ಮೇಲಿನ 'ಶಾಂತಿರ್ಭವತು ದೇವಾನಾಂ ಪೃಥಿವೀ ಸಸ್ಯಪೂರಿತಾ' ಎಂಬ ಮಂತ್ರದಿಂದ ವಿಧಿಯಂತೆ ಶಾಂತಿಯನ್ನು ಮಾಡಬೇಕು.

೨೯. ಬಳಿಕ ಭಗವದ್ಭಕ್ತರನ್ನು ಪೂಜಿಸಿ ಆಮೇಲೆ ಬ್ರಾಹ್ಮಣರನ್ನು ಪೂಜಿಸಬೇಕು. ಅವರನ್ನು ದಕ್ಷಿಣಾದಿಗಳಿಂದ ಪೂಜಿಸಿ, ಶಿರಸ್ಸಿನಿಂದ ವಂದಿಸಬೇಕು.

ಅಚ್ಛಿದ್ರಂ ವಾಚ್ಯ ಪಶ್ಚಾಚ್ಚ ಕುರ್ಯಾದೇವಂ ವಿಸರ್ಜನಂ ।
ಏವಂ ವಿಸರ್ಜನಂ ಕೃತ್ವಾ ಯೇ ಚ ತತ್ರ ಸಮಾಗತಾಃ ॥
ಪೂಜಯೇತ್ತಾಂಶ್ಚ ವಿಧಿವದ್ವಸ್ತ್ರಾಲಂಕಾರಭೂಷಣೈಃ ॥ ೩೦ ॥

ಪೂಜಯೀತ ಗುರುಂ ತತ್ರ ಯದೀಚ್ಛೇನ್ಮಮ ಸಾಮ್ಯತಾಂ ।
ಯೋ ಗುರುಂ ಪೂಜಯೇದ್ಭಕ್ತ್ಯಾ ವಿಧಿದೃಷ್ಟೇನ ಕರ್ಮಣಾ ॥ ೩೧ ॥

ತೇನಾಹಂ ಪೂಜಿತೋ ನಿತ್ಯಂ ದೇವಿ ಸತ್ಯಂ ಬ್ರವೀಮಿ ತೇ ॥ ೩೨ ॥

ತುಷ್ಟೋ ದದಾತಿ ಕೃಚ್ಛ್ರೇಣ ಗ್ರಾಮಮಾತ್ರಂ ನರಾಧಿಪಃ ।
ಆಬ್ರಹ್ಮಪದಪರ್ಯಂತಂ ಹೇಲಯಾ ಯಚ್ಛತೇ ಗುರುಃ ॥ ೩೩ ॥

ತಥೈವ ಮಮ ಶಾಸ್ತ್ರೇಷು ಮನ್ಯೈವ ವಚನಾಚ್ಛುಭೇ ।
ಸರ್ವಶಾಸ್ತ್ರೇಷು ಕಲ್ಯಾಣಿ ಗುರುಪೂಜಾ ವ್ಯವಸ್ಥಿತಾ ॥ ೩೪ ॥

---

೩೦. ಬಳಿಕ ಬ್ರಾಹ್ಮಣರನ್ನೂ ಭಾಗವತರನ್ನೂ ಉಪಚಾರೋಕ್ತಿಯಿಂದ ಕಳುಹಿಸಿ, ದೇವಸನ್ನಿಧಿಗೆ ಬಂದಿರುವ ಇತರರನ್ನೂ ವಸ್ತ್ರಾಲಂಕಾರಭೂಷಣಾದಿಗಳಿಂದ ವಿಧಿಯಂತೆ ಪೂಜಿಸಬೇಕು.

೩೧–೩೨. ನನ್ನ ಸಾಮ್ಯವನ್ನು ಬಯಸುವುದಾದರೆ ದೇವಪ್ರತಿಷ್ಠಾಪಕನು ದೇವಾಲಯದಲ್ಲೇ ಗುರುವನ್ನೂ ಪೂಜಿಸಬೇಕು. ದೇವೀ, ನಿನಗೆ ಸತ್ಯವನ್ನು ಹೇಳುತ್ತೇನೆ. ಯಾರು ಭಕ್ತಿಯಿಂದ ನಿಯಮದಂತೆ ಗುರುವನ್ನು ಪೂಜಿಸುವನೋ ಅವನು ನನ್ನನ್ನು ನಿತ್ಯವೂ ಪೂಜಿಸಿದವನಾಗುವನು.

೩೩. ಸಂತುಷ್ಟನಾದ ದೊರೆಯು ಒಬ್ಬನಿಗೆ ಒಂದು ಗ್ರಾಮವನ್ನು ಮಾತ್ರ ಕಷ್ಟದಿಂದ ಕೊಟ್ಟಾನು. ಗುರುವಾದರೋ ಬ್ರಹ್ಮಪದದವರಿಗೂ ಲೀಲೆಯಿಂದ ಕೊಡುವನು.

೩೪. ಮಂಗಳೇ, ನನ್ನ ಸರ್ವಶಾಸ್ತ್ರಗಳಲ್ಲೂ, ನನ್ನ ಮಾತಿನಿಂದಲೇ ಹಾಗೆ ಗುರುಪೂಜೆಯು ಸ್ಥಾಪಿತವಾಗಿದೆ.

ಯ ಏತೇನ ವಿಧಾನೇನ ಕುರ್ಯಾತ್ಸಂಸ್ಥಾಪನಂ ಮಮ ।
ತಾರಿತಾನಿ ಕುಲಾನ್ಯೇವ ತೀಣಿ ತ್ರಿಂಶಚ್ಚ ಸಪ್ತತಿಃ ॥ ೩೫ ॥

ಪೂಜಾಯಾಂ ಮಮ ಮಾರ್ಗೇಷು ಪತಂತಿ ಜಲಬಿಂದವಃ ।
ತಾವದ್ವರ್ಷಸಹಸ್ರಾಣಿ ಮಮ ಲೋಕೇಷು ಮೋದತೇ ॥ ೩೬ ॥

ಏವಂ ತೇ ಕಥಿತಂ ಭೂಮೇ ಸ್ಥಾಪನಂ ಮೃನ್ಮಯಸ್ಯ ತು ।
ಕಥಯಿಷ್ಯಾಮಿ ತೇ ಹ್ಯನ್ಯತ್ಸರ್ವಭಾಗವತಪ್ರಿಯಂ ॥ ೩೭ ॥

ಇತಿ ಶ್ರೀವರಾಹಪುರಾಣೇ ಮೃನ್ಮಯಾರ್ಚಾಸ್ಥಾಪನಂ ನಾಮ
ತ್ರ್ಯಶೀತ್ಯಧಿಕಶತತಮೋಽಧ್ಯಾಯಃ

---

೩೫. ಈ ವಿಧಾನದಿಂದ ಯಾರು ನನ್ನ ವಿಗ್ರಹವನ್ನು ಪ್ರತಿಷ್ಠೆಮಾಡುವನೋ ಅವನು ತನ್ನ ನೂರಮೂರು ಕುಲಗಳನ್ನು ಸಂಸಾರಸಾಗರದಿಂದ ದಾಟಿಸುವನು.

೩೬. ಪೂಜೆಮಾಡುವಾಗ ಅಭಿಷೇಕದಲ್ಲಿ ನನ್ನಮೇಲೆ ಎಷ್ಟು ಜಲಬಿಂದುಗಳು ಬೀಳುವುವೋ ಅಷ್ಟುಸಾವಿರವರ್ಷಕಾಲ ಸ್ಥಾಪಕನು ನನ್ನ ಲೋಕಗಳಲ್ಲಿ ಆನಂದಪಡುವನು.

೩೭. ಭೂದೇವಿ, ಹೀಗೆ ಮೃನ್ಮಯಮೂರ್ತಿಯ ಸ್ಥಾಪನೆಯ ವಿಚಾರವನ್ನು ನಿನಗೆ ಹೇಳಿದೆನು. ಸರ್ವಭಾಗವತರಿಗೂ ಪ್ರಿಯವಾದ ಬೇರೆಯ ಮೂರ್ತಿಗಳ ವಿಚಾರವನ್ನೂ ನಿನಗೆ ಹೇಳುವೆನು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಮೃನ್ಮಯದೇವಮೂರ್ತಿಯನ್ನು ಪ್ರತಿಷ್ಠೆಮಾಡುವ ವಿಧಾನವನ್ನೂ, ಪೂಜಾಕ್ರಮವನ್ನೂ ಮಂತ್ರಗಳೊಡನೆ ಹೇಳಿ ಮೃನ್ಮಯಮೂರ್ತಿಯನ್ನು ಪ್ರತಿಷ್ಠೆಮಾಡಿಸುವುದರಿಂದಾಗುವ ಫಲವನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೆಂಬತ್ತಮೂರನೆಯ ಅಧ್ಯಾಯ.

॥ ಶ್ರೀರಸ್ತು ॥

ಚತುರಶೀತ್ಯಧಿಕಶತತಮೋಽಧ್ಯಾಯಃ

ಅಥ ತಾಮ್ರಾರ್ಚಾಸ್ಥಾಪನಂ

॥ ಶ್ರೀವರಾಹ ಉವಾಚ ॥

ತಾಮ್ರೇಣ ಪ್ರತಿಮಾಂ ಕೃತ್ವಾ ಸುರೂಪಾಂಚೈವ ಭಾಸ್ವರಾಂ ।
ಉಚಿತೇನೋಪಚಾರೇಣ ವೇಶ್ಮಮಧ್ಯಮುಪಾನಯೇತ್ ॥ ೧ ॥

ತತೋ ವೇಶ್ಮನ್ಯುಪಾಗಮ್ಯ ಸ್ಥಾಪಯಿತ್ವಾ ಉದಙ್ಮುಖಃ ।
ಚಿತ್ರಾಯಾಂಚೈವ ನಕ್ಷತ್ರೇ ಕುರ್ಯಾಚ್ಚೈವಾಧಿವಾಸನಂ ॥ ೨ ॥

ನೂರೆಂಬತ್ತನಾಲ್ಕನೆಯ ಅಧ್ಯಾಯ

ತಾಮ್ರಪ್ರತಿಮೆಯ ಸ್ಥಾಪನೆ

೧. ಶ್ರೀವರಾಹ—ತಾಮ್ರದಿಂದ ಸುಂದರವಾಗಿ ಹೊಳೆಯುವ ದೇವ ಮೂರ್ತಿಯನ್ನು ಮಾಡಿಸಿ, ಉಚಿತವಾದ ಉಪಚಾರದಿಂದ ಆಲಯದ ಮಧ್ಯಕ್ಕೆ ಬಿಜಮಾಡಿಸಿಕೊಂಡು ಬರಬೇಕು.

೨. ಆಲಯದ ನಡುವೆ ಉತ್ತರಾಭಿಮುಖವಾಗಿ ಚಿತ್ರಾನಕ್ಷತ್ರದಲ್ಲಿ ಮೂರ್ತಿಯನ್ನು ಬಿಜಮಾಡಿಸಿ, ಗಂಧಧೂಪಾದಿಗಳಿಂದ ಸಂಸ್ಕರಿಸಬೇಕು.

ಜಲಂಚ ಸರ್ವಗಂಧೇನ ಪಂಚಗವ್ಯೇನ ಮಿಶ್ರಿತಂ ।
ಸ್ನಾಪಯೇಚ್ಚ ತತೋ ಮಾಂ ವೈ ಇಮಂ ಮಂತ್ರಮುದಾಹರೇತ್ ॥ ೩ ॥

ಮಂತ್ರಃ—

ಯೋಽಸೌ ಭವಾಂಸ್ತಿಷ್ಠತಿ ಸಾರಭೂತಃ ।
ತ್ವಂ ತಾಮ್ರಕೇ ತಿಷ್ಠಸಿ ನೇತ್ರಭೂತಃ
ಆಗಚ್ಛ ಮೂರ್ತೌ ಸಹ ಪಂಚಭೂತೈಃ ।
ಮಯಾ ಚ ಪಾತ್ರೈಃ ಸಹ ವಿಶ್ವಧಾಮನ್ ॥ ೪ ॥

ಅನೇನೈವ ತು ಮಂತ್ರೇಣ ಸ್ಥಾಪಯಿತ್ವಾ ಯಶಸ್ವಿನಿ ।
ಪೂರ್ವನ್ಯಾಯೇನ ಕರ್ತವ್ಯಮಧಿವಾಸನ ಪೂಜನಂ ॥ ೫ ॥

ವ್ಯತೀತಾಯಾಂಚ ಶರ್ವರ್ಯಾಮುದಿತೇ ಚ ದಿವಾಕರೇ ।
ಋಚಾ ಶುದ್ಧಿಂ ವಿಧಾಯಾಥ ಸ್ನಾಪಯೇನ್ಮಂತ್ರಪೂರ್ವಕಂ ॥ ೬ ॥

೩-೪. ಸರ್ವಗಂಧದಿಂದಲೂ ಪಂಚಗವ್ಯದಿಂದಲೂ ಮಿಶ್ರವಾದ ನೀರಿನಿಂದ 'ವಿಶ್ವಧಾಮನೇ, ತಾಮ್ರದಲ್ಲಿ ಸಾರಭೂತನೂ ನೇತ್ರಭೂತನೂ ಆಗಿರುವ ಮತ್ತು ಪಂಚಭೂತಮೂರ್ತಿಗಳೊಡನೆಯೂ ನನ್ನೊಡನೆಯೂ ಇರುವ ನೀನು ಈ ತಾಮ್ರಮೂರ್ತಿಯಲ್ಲಿ ಬಂದು ನೆಲೆಸು.' ಎಂಬ ಅರ್ಥವುಳ್ಳ ಮೇಲಿನ 'ಯೋಽಸೌಭವಾಂಸ್ತಿಷ್ಠತಿ ವಿಶ್ವಧಾಮನ್', ಎಂಬ (೪ ನೆಯ) ಮಂತ್ರದಿಂದ ಅಭಿಷೇಕವನ್ನು ಮಾಡಬೇಕು.

೫. ಯಶೋವತೀ, ಮೇಲಿನ ಮಂತ್ರದಿಂದ ಅಭಿಷೇಕವನ್ನು ಮಾಡಿ, ಹಿಂದೆ ದಾರುಶಿಲಾದಿಮೂರ್ತಿಗಳಿಗೆ ಹೇಳಿರುವಂತೆಯೇ, ಗಂಧಾದಿ ಸಂಸ್ಕಾರವನ್ನೂ ಪೂಜೆಯನ್ನೂ ಮಾಡಬೇಕು.

೬. ಆ ರಾತ್ರಿಯು ಕಳೆದು ಸೂರ್ಯೋದಯವಾಗಲಾಗಿ, ವೇದದಿಂದ ಶುದ್ಧಿಗೊಳಿಸಿ, ಬಳಿಕ ಮಂತ್ರಪೂರ್ವಕವಾಗಿ ಅಭಿಷೇಕವನ್ನು ಮಾಡಬೇಕು.

ಬ್ರಾಹ್ಮಣಾ ವೇದಪಾಠಾಂಶ್ಚ ಕುರ್ಯುರ್ಸ್ತತ್ರ ಸಮಾಗತಾಃ ।
ಬಹೂನಿ ಮಂಗಲಾನ್ಯತ್ರ ಮಂಟಪೇ ಸ್ಥಾಪಯೇತ್ತತಃ ॥ ೭ ॥

ಸುಗಂಧದ್ರವ್ಯಸಂಯುಕ್ತಂ ಜಲಂಚಾದಾಯ ಪೂಜಕಃ ।
ತತೋ ಮೇ ಸ್ನಪನಂಕಾರ್ಯಮಿಮಂ ಮಂತ್ರಮುದಾಹರೇತ್ ॥ ೮ ॥

ಮಂತ್ರಃ—

ಓಂ ಯೋಸೌ ಭವಾನ್ಸರ್ವ ವರಃ ಪ್ರಭುಶ್ಚ ।
ಮಾಯಾಬಲೋ ಯೋಗಬಲಪ್ರಧಾನಃ ॥
ಆಗಚ್ಛ ಶೀಘ್ರಂಚ ಮಮ ಪ್ರಿಯಾಯ ।
ಸಂತಿಷ್ಠ ತಾಮ್ರೇಷ್ವಪಿ ಲೋಕನಾಥ ॥ ೯ ॥

ಜ್ವಲನ ಪವನತುಲ್ಯಾವನ ಭಾವನ ತಪನ ಶ್ವಾಸನ ಸ್ವಯಂ ।
ತಿಷ್ಠ ಭಗವನ್ ಪುರುಷೋತ್ತಮ ಓಂ ಇತಿ ॥ ೧೦ ॥

---

೭. ಅಲ್ಲಿಗೆ ಬಂದಿರುವ ಬ್ರಾಹ್ಮಣರು ವೇದಘೋಷವನ್ನು ಮಾಡಬೇಕು. ಬಳಿಕ ಹಲವು ಮಂಗಳದ್ರವ್ಯಗಳನ್ನು ಅಲ್ಲಿ ಮಂಟಪದಲ್ಲಿ ತಂದಿಡಬೇಕು.

೮-೧೦. ಅರ್ಚಕನು ಸುಗಂಧದ್ರವ್ಯದಿಂದ ಕೂಡಿದ ನೀರನ್ನು ತೆಗೆದುಕೊಂಡು, 'ಲೋಕನಾಥನೇ, ಸರ್ವೋತ್ತಮನೂ, ಪ್ರಭುವೂ, ಆಶ್ಚರ್ಯಕರವಾದ ಬಲವುಳ್ಳವನೂ, ಯೋಗಬಲ ಪ್ರಧಾನನೂ ಆದ ನೀನು ನನ್ನ ಹಿತಕ್ಕಾಗಿ ಬೇಗ ಬಂದು, ಈ ತಾಮ್ರವಿಗ್ರಹಗಳಲ್ಲೂ ನೆಲೆಸು. ಓಂ, ವಾಯ್ವಗ್ನಿಸದೃಶನೇ, ರಕ್ಷಣಸ್ವಭಾವನೇ, ಸೂರ್ಯನಿಗೂ ಪ್ರಾಣವಾಯುಭೂತನೇ, ಭಗವಂತ, ಪುರುಷೋತ್ತಮಾ, ನೀನು ಇಲ್ಲಿರು.' ಎಂಬ ಅರ್ಥವುಳ್ಳ 'ಯೋಸೌಭವಾನ್ ಸರ್ವಪ್ರಭುಶ್ಚ ಪುರುಷೋತ್ತಮ ಓಂ' ಎಂಬ ಮೇಲಿನ (೯-೧೦ ನೆಯಶ್ಲೋಕ) ಮಂತ್ರವನ್ನು ಹೇಳಿ ನನಗೆ ಸ್ನಾನಮಾಡಿಸಬೇಕು.

ತತೋ ದ್ವಾರಮುಪಾಗಮ್ಯ ವೇಶ್ಮ ಶೀಘ್ರಂ ಪ್ರವೇಶಯೇತ್ ।
ಆಸನೇ ಚಾಪಿ ಮಾಂ ಸ್ಥಾಪ್ಯ ಪೂಜಯೇದ್ಭಕ್ತಿಪೂರ್ವಕಂ ।
ಮಂತ್ರೇಣಾನೇನ ಮಾಂ ಸ್ಥಾಪ್ಯ ಗಂಧಪುಷ್ಪಾದಿದೀಪಕೈಃ ॥ ೧೧ ॥

ಸ್ಥಾಪನಮಂತ್ರಃ—

ಓಂ ಪ್ರಕಾಶಪ್ರಕಾಶ ಜಗತ್ಪ್ರಕಾಶ ವಿಜ್ಞಾನಮಯಾನಂದಮಯ ।
ತ್ರೈಲೋಕ್ಯನಾಥಾತ್ರಾಗಚ್ಛ ಸಂತಿಷ್ಠತಾಂ ಭವಾನ್ ಪುರುಷೋತ್ತಮ
ಮನಾವ ಇತಿ ॥ ೧೨ ॥

ಅನೇನ ಸ್ಥಾಪನಂ ಕೃತ್ವಾ ಮಮ ಶಾಸ್ತ್ರಾನುಸಾರತಃ ।
ಶುಕ್ಲವಸ್ತ್ರಂ ಸಮಾದಾಯ ಇಮಂ ಮಂತ್ರಮುದಾಹರೇತ್ ॥ ೧೩ ॥

೧೧–೧೨. ಬಳಿಕ ಗರ್ಭಗೃಹದ್ವಾರವನ್ನು ಸಮೀಪಿಸಿ ನನ್ನನ್ನು ಒಳಕ್ಕೆ ಬಿಜಮಾಡಿಸಿ, "ಓಂ ಪ್ರಕಾಶ ಪ್ರಕಾಶನೇ, ಜಗತ್ಪ್ರಕಾಶನೇ, ವಿಜ್ಞಾನಮಯ, ಆನಂದಮಯ, ತ್ರಿಲೋಕನಾಥ, ಪುರುಷೋತ್ತಮ, ಇಲ್ಲಿಬಂದು ನೆಲೆಸಿ, ನನ್ನನ್ನು ರಕ್ಷಿಸು." ಎಂಬ ಅರ್ಥವುಳ್ಳ ಓಂ ಪ್ರಕಾಶ ಜಗತ್ಪ್ರಕಾಶ ಪುರುಷೋತ್ತಮ ಮಾನವ ಇತಿ, ಎಂಬ ಮೇಲಿನ ಮಂತ್ರದಿಂದ ನನ್ನನ್ನು ಪೀಠದಲ್ಲಿ ಸ್ಥಾಪಿಸಿ, ಗಂಧ ಪುಷ್ಪಾದಿಗಳಿಂದ ಭಕ್ತಿಯಿಂದ ಪೂಜಿಸಬೇಕು.

೧೩–೧೪. ಮೇಲಿನ ಮಂತ್ರದಿಂದ ಶಾಸ್ತ್ರಾನುಸಾರವಾಗಿ ನನ್ನನ್ನು ಸ್ಥಾಪಿಸಿ, ಬಿಳಿಯದಾದ ವಸ್ತ್ರವನ್ನು ತೆಗೆದುಕೊಂಡು 'ದೇವಲೋಕ ನಾಥನೇ, ನೀನು ಶುದ್ಧನೂ ಸರ್ವಾಂತರ್ಯಾಮಿಯೂ, ಪುರಾಣಪುರುಷನೂ ಜಗತ್ತುಗಳಲ್ಲಿ ತತ್ವವೂ ಆಗಿರುವೆ ನಾನು ಪ್ರೀತಿಯಿಂದ ಅರ್ಪಿಸುವ ಈ ವಸ್ತ್ರಗಳನ್ನು

ಮಂತ್ರಃ—

ಓಂ ಶುದ್ಧಸ್ತ್ವಮಾತ್ಮಾ ಪುರುಷಃ ಪುರಾಣೋ |
ಜಗತ್ಸು ತತ್ವಂ ಸುರಲೋಕನಾಥ |
ವಸ್ತ್ರಾಣಿ ಗೃಹ್ಣೀಷ್ವ ಮಮ ಪ್ರಿಯಾಣಿ |
ನಮೋಽಸ್ತು ತಸ್ಮೈ ಪುರುಷೋತ್ತಮಾಯ || ೧೪ ||

ವಸ್ತ್ರೈರ್ವಿಭೂಷಿತಂ ಕೃತ್ವಾ ಮಮಕರ್ಮಪರಾಯಣಃ |
ಯಥಾನ್ಯಾಯೇನ ಮೇ ಶೀಘ್ರಂ ಅರ್ಚನಂ ತತ್ರ ಕಾರಯೇತ್ || ೧೫ ||

ಅರ್ಚನಾಲಂಕೃತಂ ಕೃತ್ವಾ ಗಂಧಧೂಪಾದಿಭಿಃ ಪ್ರಭುಂ |
ಸಂಪೂಜ್ಯ ವಿಧಿವಾನ್ಮಾಂತು ನೈವೇದ್ಯಂ ಪರಿಕಲ್ಪಯೇತ್ ||
ದತ್ವಾ ಸ್ವಾದು ಚ ನೈವೇದ್ಯಂ ಶಾಂತಿಪಾಠಂತು ಕಾರಯೇತ್ || ೧೬ ||

ಪರಿಗ್ರಹಿಸು. ಪುರುಷೋತ್ತಮನಾದ ನಿನಗೆ ವಂದನೆ' ಎಂಬ ಅರ್ಥವುಳ್ಳ ಮೇಲಿನ "ಓಂ ಶುದ್ಧಸ್ತ್ವಮಾತ್ಮಾಪುರುಷಃ ಪುರುಷೋತ್ತಮಾಯ" ಎಂಬ (೧೪ ನೆಯ) ಮಂತ್ರವನ್ನು ಹೇಳಬೇಕು.

೧೫. ನನ್ನ ಕರ್ಮಗಳಲ್ಲಿ ನಿರತನಾದವನು ಮೇಲಿನ ಮಂತ್ರದಿಂದ ನನಗೆ ವಸ್ತ್ರವನ್ನಲಕರಿಸಿ, ಶಾಸ್ತ್ರೋಕ್ತವಾಗಿ ಬೇಗನೆ ಅರ್ಚನೆಯನ್ನು ಮಾಡಿಸ ಬೇಕು.

೧೬. ಗಂಧಧೂಪಾದಿಗಳಿಂದ ಪ್ರಭುವಾದ ನನ್ನನ್ನು ಅರ್ಚಿಸಿ ಅಲಂಕರಿಸಿ ಶಾಸ್ತ್ರೋಕ್ತವಾಗಿ ಪೂಜಿಸಿ, ರುಚಿಯಾದ ನೈವೇದ್ಯವನ್ನು ಸಿದ್ಧಪಡಿಸಿ ಅರ್ಪಿಸಿ, ಶಾಂತಿವಾಚನವನ್ನು ಮಾಡಿಸಬೇಕು.

ಮಂತ್ರ:—

ಶಾಂತಿರ್ಭವತು ದೇವಾನಾಂ ವಿಪ್ರಾಣಾಂ ಶಾಂತಿರುತ್ತಮಾ ।
ಶಾಂತಿರ್ಭವತು ರಾಜ್ಞಾಂ ಚ ಸರಾಷ್ಟ್ರಾಣಾಂ ತಥಾ ವಿಶಾಂ ॥ ೧೭ ॥

ಬಾಲಾನಾಂ *ಹಿ ವಿಪನ್ನಾನಾಂ ಗರ್ಭಿಣೀನಾಂಚ ದೇಹಿನಾಂ ।
ಶಾಂತಿರ್ಭವತು ದೇವೇಶ ತ್ವತ್ಪ್ರಸಾದಾನ್ಮಮಾಖಿಲಾ ॥ ೧೮ ॥

ಏವಂ ಶಾಂತಿಂ ಪಠಿತ್ವಾ ತು ಬ್ರಾಹ್ಮಣಾಂಸ್ತತ್ರ ಪೂಜಯೇತ್ ॥ ೧೯ ॥

ಗುರುಂ ಭಾಗವತಂಚೈವಂ ಅರ್ಚಯೇಚ್ಚ ಯಥಾವಿಧಿ ।
ಬ್ರಾಹ್ಮಣಾನ್ಭೋಜಯೇತ್ತತ್ರ ಯಥೋತ್ಪನ್ನೇನ ಮಾಧವಿ ॥ ೨೦ ॥

ವಿಶೇಷೇಣ ಗುರುಂ ಪೂಜ್ಯ ವಸ್ತ್ರಾಲಂಕಾರ ಭೋಜನೈಃ ।
ತೇನಾಹಂ ಪೂಜಿತೋ ಭೂಮೇ ಸತ್ಯಮೇತದ್ಬ್ರವೀಮಿ ತೇ ॥ ೨೧ ॥

೧೭–೧೯. 'ದೇವೇಶಾ, ನಿನ್ನ ಅನುಗ್ರಹದಿಂದ ದೇವತೆಗಳಿಗೆ ಶಾಂತಿಯಾಗಲಿ, ಬ್ರಾಹ್ಮಣರಿಗೆ ಉತ್ತಮಶಾಂತಿಯುಂಟಾಗಲಿ, ಸರಾಷ್ಟ್ರರಾದ ರಾಜರಿಗೂ ಶಾಂತಿಯಾಗಲಿ. ಅಲ್ಲದೆ ವೈಶ್ಯರಿಗೂ ವಿಪತ್ತಿಗೊಳಗಾಗಿರುವ ಬಾಲಕರಿಗೂ ಗರ್ಭಿಣಿಯರಿಗೂ ಸಮಸ್ತ ಪ್ರಾಣಿಗಳಿಗೂ ಶಾಂತಿಯೊದಗಲಿ. ನನಗೂ ಸಕಲ ವಿಧವಾದ ಶಾಂತಿ ಲಭಿಸಲಿ.' ಎಂದು ಶಾಂತಿವಾಕ್ಯವನ್ನು ಹೇಳಿ ಬಳಿಕ ಬ್ರಾಹ್ಮಣರನ್ನು ಪೂಜಿಸಬೇಕು.

೨೦. ಮಾಧವೀ, ಗುರುವನ್ನೂ ಭಾಗವತನನ್ನೂ ನಿಯಮದಂತೆ ಅರ್ಚಿಸಬೇಕು. ಬ್ರಾಹ್ಮಣರಿಗೆ ಯಥಾಶಕ್ತಿಯಾಗಿ ಭೋಜನಮಾಡಿಸಬೇಕು.

೨೧. ಭೂಮಿ, ನಿನಗೆ ನಿಜವಾಗಿ ಹೇಳುತ್ತೇನೆ. ಒಬ್ಬನು ಗುರುವನ್ನು ವಸ್ತ್ರಾಲಂಕಾರಭೋಜನಾದಿಗಳಿಂದ ವಿಶೇಷವಾಗಿ ಪೂಜಿಸಿದರೆ, ಅವನಿಂದ ನಾನು ಪೂಜಿತನಾಗುವೆನು.

---

* ವ್ರೀಹಿಪಣ್ಯಾನಾಂ

ಗುರುರ್ಯಸ್ಯ ನ ತುಷ್ಟೋ ವೈ ತಸ್ಮಾದ್ದೂರತರೋ ಹ್ಯಹಂ ॥ ೨೨ ॥

ಯ ಏತೇನ ವಿಧಾನೇನ ಕುರ್ಯಾತ್ಸಂಸ್ಥಾಪನಂ ಮಮ ।
ತಾರಿತಂಚ ಕುಲಂ ತೇನ ನವಭಿಃ ಸಪ್ತವಿಂಶತಿಃ ॥ ೨೩ ॥

ಏತತ್ತೇ ಕಥಿತಂ ಭದ್ರೇ ತಾಮ್ರಾರ್ಚಾಸ್ಥಾಪನಂ ಮಮ ।
ಕಥಯಿಷ್ಯಾಮಿ ತೇ ಹ್ಯೇವಂ ಕಾರ್ತ್ಸ್ನ್ಯೇನ ಪ್ರತಿಮಾರ್ಚನಂ ॥ ೨೪ ॥

ಜಲಸ್ಯ ಬಿಂದವೋ ಯಾವನ್ಮಮ ಸ್ನಾನೇ ಚ ಸುಂದರಿ ।
ತಾವದ್ವರ್ಷಸಹಸ್ರಾಣಿ ಮಮ ಲೋಕೇ ಮಹೀಯತೇ ॥ ೨೫ ॥

ಇತಿ ಶ್ರೀವರಾಹಪುರಾಣೇ ತಾಮ್ರಾರ್ಚಾಸ್ಥಾಪನಂ ನಾಮ
ಚತುರಶೀತ್ಯಧಿಕಶತತಮೋಽಧ್ಯಾಯಃ

---

೨೨. ಯಾರು ಗುರುವನ್ನು ಸಂತೋಷಪಡಿಸುವುದಿಲ್ಲವೊ, ಅವನಿಗೆ ದೇವನಾದ ನಾನು ಬಹು ದೂರದಲ್ಲಿರುವೆನು.

೨೩. ಈ ವಿಧಾನದಿಂದ ನನ್ನನ್ನು ಪ್ರತಿಷ್ಠೆಮಾಡುವವನು ತನಗೆ ಸಂಬಂಧಪಡುವ ಮೂವತ್ತಾರುಕುಲಗಳನ್ನೂ ಉತ್ತಾರಣಗೊಳಿಸುವನು.

೨೪. ಮಂಗಳೆ, ತಾಮ್ರದಿಂದ ನನ್ನ ಮೂರ್ತಿಯನ್ನು ಪ್ರತಿಷ್ಠೆಮಾಡುವ ಈ ವಿಧಿಯನ್ನು ನಿನಗೆ ಹೇಳಿದುದಾಯಿತು. ಹೀಗೆಯೇ ವಿಗ್ರಹಪೂಜೆಯ ವಿಚಾರವೆಲ್ಲವನ್ನೂ ನಿನಗೆ ಹೇಳುತ್ತೇನೆ.

೨೫. ಸುಂದರಿ, ನನಗೆ ಅಭಿಷೇಕಮಾಡುವಾಗ ಎಷ್ಟು ಜಲಬಿಂದುಗಳು ಬೀಳುವುವೊ ಅಷ್ಟುಸಾವಿರ ವರ್ಷಗಳಕಾಲ ಅಭಿಷೇಕಮಾಡಿದವನು ನನ್ನ ಲೋಕದಲ್ಲಿ ವಾಸಿಸುವನು.

ಅಧ್ಯಾಯದ ಸಾರಾಂಶ—

ಶ್ರೀವರಾಹನು ಭೂದೇವಿಗೆ ತಾಮ್ರದ ದೇವಮೂರ್ತಿಯ ಪ್ರತಿಷ್ಠಾಕ್ರಮವನ್ನು ವಿವರಿಸಿರುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ಎಂಭತ್ತನಾಲ್ಕನೆಯ ಅಧ್ಯಾಯ

|| ಶ್ರೀರಸ್ತು ||

ಪಂಚಾಶೀತ್ಯಧಿಕಶತತಮೋಧ್ಯಾಯಃ

ಅಥ ಕಾಂಸ್ಯಾರ್ಚಾಸ್ಥಾಪನಂ

|| ಶ್ರೀವರಾಹ ಉವಾಚ ||

ಕಾಂಸ್ಯೇನ ಪ್ರತಿಮಾಂ ಕೃತ್ವಾ ಸುರೂಪಾಂ ಸುಪ್ರತಿಷ್ಠಿತಾಂ ।
ಸರ್ವಾಂಗಾವಯವೈರ್ಯುಕ್ತಾಂ ವಿಮಲಾಂ ಕರ್ಮನಿರ್ಮಿತಾಂ || ೧ ||

ಜ್ಯೇಷ್ಠಾಯಾಂ ಚೈವ ನಕ್ಷತ್ರೇ ಮಮ ವೇಶ್ಮನ್ಯುಪಾನಯೇತ್ ।
ಗೀತವಾದಿತ್ರಶಬ್ದೇನ ಬಹುಭಿರ್ಮಂಗಲೈಸ್ತಥಾ || ೨ ||

ಅರ್ಘ್ಯಂ ಗೃಹ್ಯ ಯಥಾನ್ಯಾಯಮಿಮಂ ಮಂತ್ರಮುದಾಹರೇತ್ || ೩ ||

ನೂರ ಎಂಬತ್ತೈದನೆಯ ಅಧ್ಯಾಯ

ಕಂಚಿನ ವಿಗ್ರಹದ ಸ್ಥಾಪನೆ

೧–೨. ಕಂಚಿನಿಂದ, ಸುಂದರವೂ, ದೃಢವೂ, ಸರ್ವಾಂಗೋಪಾಂಗಗಳಿಂದ ಕೂಡಿದುದೂ, ಪರಿಶುದ್ಧವೂ ಆದ ದೇವಪ್ರತಿಮೆಯನ್ನು ಮಾಡಿಸಿ, ಜ್ಯೇಷ್ಠಾನಕ್ಷತ್ರದಲ್ಲಿ. ಗೀತಾವಾದ್ಯಾದಿಬಹುಮಂಗಳಗಳಿಂದ ಆಲಯಕ್ಕೆ ಬಿಜಮಾಡಿಸಬೇಕು.

೩. ಅರ್ಘ್ಯವನ್ನು ಸರಿಯಾಗಿ ತೆಗೆದುಕೊಂಡು ಈ ಮುಂದಿನ ಮಂತ್ರವನ್ನು ಹೇಳಬೇಕು.

ಯೋಽಸೌ ಭವಾನ್ಸರ್ವಯಜ್ಞೇಷು ಪೂಜ್ಯೋ
ಧ್ಯೇಯೋ ಗೋಪ್ತಾ ವಿಶ್ವಕಾಮೋ ಮಹಾತ್ಮಾ ।
ಪ್ರಸನ್ನಾತ್ಮಾ ಭಗವಾನ್ಮೇ ಪ್ರಸನ್ನಃ
ಸುಪೂಜಿತಸ್ತಿಷ್ಠ ಹಿ ಲೋಕನಾಥ ॥ ೪ ॥

ಅರ್ಘ್ಯಂ ದತ್ವಾ ಯಥಾನ್ಯಾಯಂ ಸ್ಥಾಪಯೇತ್ತದುದಙ್ಮುಖಃ ।
ಯಥಾನ್ಯಾಯೇನ ಸಂಸ್ಥಾಪ್ಯ ಕುರ್ಯಾಚ್ಚೈವಾಧಿವಾಸನಂ ॥ ೫ ॥

ಚತುರಃ ಕಲಶಾಂಶ್ಚೈವ ಪಂಚಗವ್ಯಸಮನ್ವಿತಾನ್ ।
ಸರ್ವಗಂಧೈಶ್ಚ ಲಾಜೈಶ್ಚ ಮಧುನಾ ಚ ವಿಶೇಷತಃ ॥ ೬ ॥

ಚತುರಃ ಕಲಶಾನ್ಪೂರ್ಯ ಸ್ನಾನಾರ್ಥಂ ಮೇ ಸಮಂತ್ರಕಂ ॥ ೭ ॥

ತತಶ್ಚಾಸ್ತಂಗತೇ ಸೂರ್ಯೇ ಶುದ್ಧೈರ್ಭಾಗವತೈಸ್ಸಹ ।
ಕುರ್ಯಾತ್ಸಂಸ್ಥಾಪನಂ ತತ್ರ ಮಮಾಚಾರ್ಯಾಸ್ತು ಪೂಜಕಃ ॥ ೮ ॥

---

೪. 'ಲೋಕನಾಥ, ಸರ್ವಯಜ್ಞಗಳಲ್ಲೂ ಪೂಜ್ಯನೂ, ಧ್ಯಾನಿಸಲ್ಪಡುವನೂ ಲೋಕರಕ್ಷಕನೂ ವಿಶ್ವಕಾಮನೂ ಮಹಾತ್ಮನೂ ಪ್ರಸನ್ನಾತ್ಮನೂ, ಭಗವಂತನೂ ಆದ ನೀನು ನನಗೆ ಪ್ರಸನ್ನನಾಗಿ ನನ್ನಿಂದ ಸಂಪೂಜಿತನಾಗಿ ಇಲ್ಲಿ ನೆಲೆಸು.'

೫. ಹೀಗೆ ಹೇಳಿ, ಅರ್ಘ್ಯವನ್ನು ಕ್ರಮವಾಗಿ ಅರ್ಪಿಸಿ ಮೂರ್ತಿಯನ್ನು ಉತ್ತರಾಭಿಮುಖವಾಗಿ ನಿಲ್ಲಿಸಬೇಕು. ಕ್ರಮವಾಗಿ ಗಂಧಧೂಪಾದಿಗಳಿಂದ ಸಂಸ್ಕರಿಸಬೇಕು.

೬–೭. ಪಂಚಗವ್ಯದಿಂದಲೂ, ವಿಶೇಷವಾಗಿ ಸರ್ವಗಂಧಗಳಿಂದಲೂ, ಅರಳಿನಿಂದಲೂ, ಜೇನುತುಪ್ಪದಿಂದಲೂ ತುಂಬಿದ ನಾಲ್ಕು ಕಲಶಗಳನ್ನು ನನ್ನ ಸ್ನಾನಕ್ಕಾಗಿ ಸಮಂತ್ರಕವಾಗಿ ಸಿದ್ಧಪಡಿಸಬೇಕು.

೮–೯. ಸೂರ್ಯನು ಅಸ್ತನಾದ ಬಳಿಕ ನನ್ನ ಮೂರ್ತಿಪೂಜಕನು ಶುದ್ಧರಾದ ಭಾಗವತರೊಡನೆ ಕಲಶಗಳನ್ನು ತೆಗೆದುಕೊಂಡು 'ನಮೋ

ಗೃಹೀತ್ವಾ ಕಲಶಾಂಸ್ತತ್ರ ಶುದ್ಧಾನ್ಭಾಗವತಾಂಸ್ತಥಾ ।
ನಮೋ ನಾರಾಯಣಾಯೇತಿ ಉಕ್ತ್ವಾ ಮಂತ್ರಮುದಾಹರೇತ್ ॥ ೯ ॥

ಮಂತ್ರಃ—

ಆದಿರ್ಭವಾನ್ಬ್ರಹ್ಮಯುಗಾಂತಕಲ್ಪಃ
ಸರ್ವೇಷು ಕಾಲೇಷ್ವಪಿ ಕಲ್ಪಭೂತಃ ।
ಏಕೋ ಭವಾನ್ನಾಸ್ತಿ ಕಶ್ಚಿದ್ದ್ವಿತೀಯಃ
ಉಪಾಗತಸ್ತಿಷ್ಠ ಹಿ ಲೋಕನಾಥ ॥ ೧೦ ॥

ವಿಕಾರ ಅವಿಕಾರ ಅಕಾರ ಸಕಾರ ಶಕಾರ ।
ಷಕಾರ ಸ್ವಚ್ಛಂದರೂಪಃ ಕ್ಷರಮಕ್ಷರಂ ॥
ಧೃತಿರೂಪಃ ಅರೂಪಮಿತಿ ನಮಃ ಪುರುಷೋತ್ತಮಾಯೇತಿ ॥ ೧೧ ॥

ವ್ಯತೀತಾಯಾಂ ತು ಶರ್ವರ್ಯಾಮುದಿತೇ ಚ ದಿವಾಕರೇ ।
ಅಶ್ವೇನ ಚ ಮುಹೂರ್ತೇನ ಪ್ರಾಪ್ತೇ ಮೂಲೇಷು ಚೋತ್ತರೇ ॥ ೧೨ ॥

ನಾರಾಯಣಾಯ' ಎಂದು ಹೇಳಿ, 'ಲೋಕನಾಥನೇ, ಲೋಕಕ್ಕೆ ಆದಿಯೂ ಬ್ರಹ್ಮಯುಗಸಂಹಾರಕನೂ ಸರ್ವಕಾಲದಲ್ಲೂ ಸಕಲಪ್ರದನೂ ಆಗಿರುವವನು ನೀನೊಬ್ಬನೇ ಹೊರತು ಮತ್ತೊಬ್ಬರಿಲ್ಲ. ಇಲ್ಲಿ ದಯಮಾಡಿ ನೆಲಸು.

೧೦–೧೧. ನಿರ್ವಿಕಾರನೂ, ಲೋಕಾನುಗ್ರಹಾರ್ಥವಾಗಿ ಮತ್ಸ್ಯಾದಿ ವಿಕಾರರೂಪನೂ ಅಕ್ಷರರೂಪನೂ ಸ್ವಚ್ಛಂದರೂಪನೂ, ಧೃತಿರೂಪನೂ ಅರೂಪನೂ ಸರ್ವರೂಪನೂ ಆದ ಪುರುಷೋತ್ತಮನಿಗೆ ನಮಸ್ಕಾರ' ಎಂಬ ಅರ್ಥವುಳ್ಳ 'ಆದಿರ್ಭವಾನ್ ಬ್ರಹ್ಮಯುಗಾಂತ ಕಲ್ಪಃ' ಎಂಬ (೧೦–೧೧ ನೆಯ ಶ್ಲೋಕ) ಮಂತ್ರವನ್ನು ಉಚ್ಚರಿಸಬೇಕು.

೧೨–೧೩. ಸುಂದರೀ, ಆ ದಿನ ರಾತ್ರಿಯು ಕಳೆದು ಸೂರ್ಯೋದಯವಾಗಲಾಗಿ ಮುಂದೆ ಮೂಲಾನಕ್ಷತ್ರದಲ್ಲಿ ಅಶ್ವಮುಹೂರ್ತದಲ್ಲಿ, ನನ್ನ ಶಾಸ್ತ್ರದಲ್ಲಿ

ಪೂರ್ವೋಕ್ತೇನ ವಿಧಾನೇನ ಮಮ ಶಾಸ್ತ್ರಾನುದರ್ಶಿನಾ ।
ಸ್ಥಾಪಯೇದ್ದ್ವಾರಮೂಲೇ ತು ಮಮ ವೇಶ್ಮನಿ ಸುಂದರಿ ॥ ೧೩ ॥

ಸರ್ವಶಾಂತ್ಯುದಕಂ ಗೃಹ್ಯ ಸರ್ವಗಂಧಫಲಾನಿ ಚ ।
ನಮೋ ನಾರಾಯಣಾಯೇತಿ ಉಕ್ತ್ವಾ ಮಂತ್ರಮುದಾಹರೇತ್ ॥ ೧೪ ॥

ಮಂತ್ರಃ—

ಓಂ ಇಂದ್ರೋ ಭವಾಸ್ತ್ವಂ ಚ ಯಮಃ ಕುಬೇರೋ
ಜಲೇಶ್ವರಸ್ಸೋಮಬೃಹಸ್ಪತೀ ಚ ।
ಶುಕ್ರಶ್ಶನೈಶ್ಚರಬುಧೌ ಸಹ ಸೈಂಹಿಕೇಯಃ
ಕೇತೂ ರವಿಶ್ಚೈವ ಧರಾತ್ಮಜಸ್ತ್ವಂ ॥ ೧೫ ॥

ತಥೈವ ಸರ್ವೌಷಧಯೋ ಜಲಾನಿ
ವಾಯುಶ್ಚ ಪೃಥ್ವೀ ಚ ಸ ವಾಯುಸಾರಥಿಃ ।
ನಾಗಾಸ್ಸಯಕ್ಷಾಶ್ಚ ದಿಶಶ್ಚ ಸರ್ವಾ
ಸ್ತಸ್ಮೈ ನಮಸ್ತೇ ಪುರುಷೋತ್ತಮಾಯ ॥ ೧೬ ॥

ಹಿಂದೆ ಹೇಳಿರುವ ವಿಧಾನದಿಂದ, ನನ್ನ ಗೃಹದಲ್ಲಿ ಬಾಗಿಲ ಹತ್ತಿರ ನನ್ನನ್ನು ಸ್ಥಾಪಿಸಬೇಕು.

೧೪-೧೬. ಸರ್ವಶಾಂತ್ಯುದಕವನ್ನೂ, ಸರ್ವಗಂಧಫಲಾದಿಗಳನ್ನೂ ತೆಗೆದುಕೊಂಡು, 'ನಮೋ ನಾರಾಯಣಾಯ' ಎಂದು ಹೇಳಿ, 'ಓಂ, ದಿಕ್ಪಾಲಕರಾದ ಇಂದ್ರನೂ, ಯಮನೂ ವರುಣನೂ ಕುಬೇರನೂ ನೀನೇ, ನವಗ್ರಹಗಳಾದ ಸೂರ್ಯಚಂದ್ರಕುಜಬುಧಗುರುಶುಕ್ರಶನಿರಾಹುಕೇತುಗಳೂ ನೀನೇ, ಅಲ್ಲದೆ ಸರ್ವೌಷಧಿಯೂ ಪೃಥಿವಿಯೇ ಮೊದಲಾದ ಪಂಚಭೂತಗಳೂ ನಾಗರೂ, ಯಕ್ಷರೂ, ಸರ್ವದಿಕ್ಕುಗಳೂ ನೀನೇ ಆಗಿರುವೆ. ಹೀಗೆ ಪುರುಷೋತ್ತಮನಾಗಿರುವ ನಿನಗೆ ನಮಸ್ಕಾರ.' ಎಂಬ ಅರ್ಥವುಳ್ಳ 'ಓಂ ಇಂದ್ರೋಭವಾನ್........ನಮಸ್ತೇ ಪುರುಷೋತ್ತಮಾಯ' ಎಂಬ ಮೇಲಿನ (೧೫-೧೬ ನೆಯ ಶ್ಲೋಕ) ಮಂತ್ರದಿಂದ

ಅನೇನೈವ ತು ಮಂತ್ರೇಣ ಕೃತ್ವಾ ಕರ್ಮ ಸುಪುಷ್ಕಲಂ ।
ಮಮ ತಾಂ ಪ್ರತಿಮಾಂ ಗೃಹ್ಯ ತತೋ ವೇಶ್ಮನ್ಯುಪಾನಯೇತ್ ॥ ೧೭ ॥

ಏಕಾಂತೇ ಸ್ನಾಪಯೇನ್ಮಾಂ ಚ ಜಲೈಃ ಪೂರ್ವಾಭಿಮಂತ್ರಿತೈಃ ।
ಪ್ರಗೃಹ್ಯ ಕಲಶೇಭ್ಯಶ್ಚ ಜಲಂ ಗಂಧಸಮನ್ವಿತಂ ।
ಗಾತ್ರಸಂಶೋಧನಾರ್ಥಾಯ ಇಮಂ ಮಂತ್ರಮುದಾಹರೇತ್ ॥ ೧೮ ॥

ಮಂತ್ರಃ—

ಸರಾಂಸಿ ಯೇ ತೇ ಚ ಸಮುಸ್ತಸಾಗರಾ
ನದ್ಯಶ್ಚ ತೀರ್ಥಾನಿ ಚ ಪುಷ್ಕರಾಣಿ ।
ಆಯಾಂತು ತಾನ್ಯೇವ ತವ ಪ್ರಸಾದಾ
ಚ್ಛುದ್ಧ್ಯೈ ಚ ಮೇ ಸ್ಯುಃ ಪುರುಷೋತ್ತಮಾಯ ॥ ೧೯ ॥

ಏವಂ ಮಾಂ ಸ್ನಾಪ್ಯ ವಿಧಿನಾ ಮಮ ಕರ್ಮಾನುಸಾರಿಣಃ ।
ಏವಂ ನ್ಯಾಯೇನ ಮಾಂ ತತ್ರ ಅರ್ಚಯಿತ್ವಾ ಯಥೋಚಿತಂ ॥ ೨೦ ॥

ಅಭಿಷೇಕ ಕರ್ಮವನ್ನು ಪೂರ್ಣವಾಗಿ ಮಾಡಿ, ಬಳಿಕ ನನ್ನ ಪ್ರತಿಮೆಯನ್ನು ಆಲಯದೊಳಗೆ ಬಿಜಮಾಡಿಸಬೇಕು.

೧೮-೧೯. ಏಕಾಂತದಲ್ಲಿ ಕಲಶಗಳಿಂದ ಗಂಧದಿಂದ ಸುವಾಸಿತವಾಗಿ ಹಿಂದೆಯೇ ಅಭಿಮಂತ್ರಿಸಿರುವ ನೀರನ್ನು ತೆಗೆದುಕೊಂಡು ದೇಹಶುದ್ಧಿಗಾಗಿ ಸ್ನಾನವನ್ನು ಮಾಡಿಸಬೇಕು. ಆಗ "ಸ್ವಾಮೀ, ನಿನ್ನ ಅನುಗ್ರಹದಿಂದ ಭೂಮಿಯಮೇಲಿರುವ ಸರೋವರಗಳೂ, ಸಮುಸ್ತಸಾಗರಗಳೂ, ನದಿಗಳೂ, ಕೊಳಗಳೂ ಪುರುಷೋತ್ತಮನಾದ ನಿನ್ನ ಅಭಿಷೇಕಕ್ಕಾಗಿಯೂ ಮತ್ತು ನನ್ನ ಶುದ್ಧಿಗಾಗಿಯೂ ನನ್ನ ಬಳಿಗೆ ಬರಲಿ" ಎಂಬ ಅರ್ಥದ 'ಸರಾಂಸಿ ಯೇ ತೇ ಚ ....ಪುರುಷೋತ್ತಮಾಯ' ಎಂಬ ಮೇಲಿನ (೧೯ ನೆಯ ಶ್ಲೋಕ) ಮಂತ್ರವನ್ನು ಹೇಳಬೇಕು.

೨೦-೨೧. ಹೀಗೆ ಹೇಳಿ, ನನ್ನ ಕರ್ಮಾನುಸಾರಿಗಳು ನನಗೆ ವಿಧಿಯಂತೆ ಅಭಿಷೇಕವನ್ನು ಮಾಡಿ ಬಳಿಕ ಶಾಸ್ತ್ರೋಕ್ತವಾಗಿ ಗಂಧಪುಷ್ಪಾದಿಗಳಿಂದ ತಮ್ಮ

ಗಂಧಧೂಪಾದಿಭಿಶ್ಚೈವ ಯಥಾವಿಭವಶಕ್ತಿತಃ ।
ಪಶ್ಚಾದ್ವಸ್ತ್ರಾಣಿ ಮೇ ದದ್ಯಾನ್ಮಮ ಗಾತ್ರಸುಖಾನಿ ಚ ॥ ೨೧ ॥

ತಾನ್ಯಾನಯಿತ್ವಾ ವಸ್ತ್ರಾಣಿ ಮಮಾಗ್ರೇ ಸ್ಥಾಪಯೇನ್ನರಃ ।
ಉಭೌ ತೌ ಚರಣೌ ನತ್ವಾ ಇಮಂ ಮಂತ್ರಮುದಾಹರೇತ್ ॥ ೨೨ ॥

ಮಂತ್ರಃ—

ಓಂ ವಸ್ತ್ರಾಣಿ ದೇವೇಂದ್ರ ಮಯಾಹೃತಾನಿ
ಸೂಕ್ಷ್ಮಾಣಿ ಸೌಮ್ಯಾನಿ ಸುಖಾವಹಾನಿ ।
ಗಾತ್ರಸ್ಯ ಸಂತುಷ್ಟಿಕರಾಣಿ ತುಭ್ಯಂ
ಗೃಹ್ಣೀಷ್ವ ದೇವೇಶ ಸುಲೋಕನಾಥ

ವೇದೋಪವೇದ ಋಗ್ವೇದ ಯಜುರ್ವೇದ ಸಾಮವೇದ ।
ಅಥರ್ವಣವೇದ ಸಂಸ್ಕೃತ ಇತಿ ನಮಃ ಪರಂಪರಾಯೇತಿ ॥ ೨೩ ॥

ಅರ್ಚಿತಾಲಂಕೃತಂ ಕೃತ್ವಾ ಪೂರ್ವನ್ಯಾಯೇನ ಸುಂದರಿ ।
ಪಶ್ಚಾನ್ಮೇ ಪ್ರಾಪಣಂ ದದ್ಯಾನ್ಮಂತ್ರವದ್ವಿಧಿಪೂರ್ವಕಂ ॥ ೨೪ ॥

ಶಕ್ತ್ಯಾನುಸಾರವಾಗಿ ಅರ್ಚಿಸಿ, ಆಮೇಲೆ ನನ್ನ ದೇಹಕ್ಕೆ ಸುಖಕರವಾದ ವಸ್ತ್ರಗಳನ್ನು ನನಗೆ ಧರಿಸಬೇಕು.

೨೨-೨೩. ಧರಿಸುವ ವಸ್ತ್ರಗಳನ್ನು ತಂದು ನನ್ನೆದುರಿಗೆ ಇಡಬೇಕು. ಎರಡು ಕಾಲುಗಳಿಗೂ ನಮಸ್ಕರಿಸಿ "ಓಂ ದೇವೇಶ, ಲೋಕನಾಥ, ದೇವೇಂದ್ರಾ, ನಾನು ತಂದಿರುವ ಸೂಕ್ಷ್ಮವೂ, ಸೌಮ್ಯವೂ, ನಿನ್ನ ದೇಹಕ್ಕೆ ಸುಖಕರವೂ, ನಿನಗೆ ಸಂತೋಷಕರವೂ ಆದ ಈ ವಸ್ತ್ರಗಳನ್ನು ಪರಿಗ್ರಹಿಸು" ಎಂಬ ಅರ್ಥದ 'ಓಂ ವಸ್ತ್ರಾಣಿ ದೇವೇಂದ್ರ............ಸುಲೋಕನಾಥ' ಎಂಬ ಮೇಲಿನ ಮಂತ್ರವನ್ನು ಹೇಳಬೇಕು.

೨೪. ಸುಂದರೀ, ಹಿಂದೆ ಹೇಳಿರುವಂತೆ ಪೂಜಿಸಿ ಅಲಂಕಾರಮಾಡಿ ಬಳಿಕ ಮಂತ್ರದಿಂದ ವಿಧಿಪೂರ್ವಕವಾಗಿ ನನಗೆ ನೈವೇದ್ಯವನ್ನರ್ಪಿಸಬೇಕು.

ದತ್ವಾ ಪ್ರಾಶಣಕಂ ತತ್ರ ದದ್ಯಾದಾಚಮನಂ ತತಃ ।
ಶಾಂತಿಪಾಠಶ್ಚ ವೈ ಕಾರ್ಯೋ ಮಂತ್ರೇಣಾನೇನ ಸುಂದರಿ ॥ ೨೫ ॥

ವಿದ್ಯಾಸ್ಸರ್ವೇ ಬ್ರಹ್ಮ ಚ ಬ್ರಾಹ್ಮಣಾಶ್ಚ
ಗೃಹಾಸ್ಸರ್ವೇ ಸರಿತಸ್ಸಾಗರಾಶ್ಚ ।
ಇಂದ್ರಾದ್ಯಷ್ಟೌ ಲೋಕಪಾಲಾಶ್ಚ ಸರ್ವೇ
ಪೂರ್ವೋಕ್ತಾ ಯೇ ಸರ್ವಶಾಂತಿಂ ಚ ಕುರ್ಯುಃ ॥ ೨೬ ॥

ಆಯಾಮ ಯಮ ಕಾಮದಮ ವಾಮ ಓಂ ನಮಃ ।
ಪುರುಷೋತ್ತಮಾಯೇತಿ ॥ ೨೭ ॥

ವೃತ್ತೇಷ್ವೇವೋಪಚಾರೇಷು ಮಮ ಕುರ್ಯಾತ್ಪ್ರದಕ್ಷಿಣಂ ।
ಅಭಿವಾದ್ಯ ಸ್ತುತಿಂ ಚಾಪಿ ಕೃತ್ವಾ ಭಾಗವತಾಂಚ್ಛುಚೀನ್
ಸಂಪೂಜ್ಯ ಬ್ರಾಹ್ಮಣಾನ್ಪಶ್ಚಾದ್ಭೋಜಯೇತ್ಪಾಯಸಾದಿಭಿಃ ॥ ೨೮ ॥

೨೫–೨೭. ನೈವೇದ್ಯವನ್ನರ್ಪಿಸಿದ ಬಳಿಕ ಆಚಮನೀಯವನ್ನೂ ಅರ್ಪಿಸಬೇಕು. ಸುಂದರೀ, “ಸರ್ವವಿದ್ಯೆಗಳೂ, ಬ್ರಹ್ಮನೂ, ಬ್ರಾಹ್ಮಣರೂ, ಹಿಂದೆ ಹೇಳಿರುವ ಸರ್ವಗ್ರಹಗಳೂ, ನದಿಗಳೂ, ಸಾಗರಗಳೂ, ಇಂದ್ರನೇ ಮೊದಲಾದ ಅಷ್ಟದಿಕ್ಪಾಲಕರೂ ಸರ್ವಶಾಂತಿಯನ್ನೂ ಮಾಡಲಿ” ಎಂಬ ಅರ್ಥದ ‘ವಿದ್ಯಾಸ್ಸರ್ವೇ ಬ್ರಹ್ಮ ಚ ಬ್ರಾಹ್ಮಣಾಶ್ಚ............ಸರ್ವಶಾಂತಿಂ ಚ ಕುರ್ಯುಃ’ ಎಂಬ ಮೇಲಿನ (೨೬ ನೆಯ ಶ್ಲೋಕ) ಮಂತ್ರದಿಂದ ಶಾಂತಿವಾಚನವನ್ನು ಮಾಡಬೇಕು.

೨೮. ಈ ಉಪಚಾರಗಳೆಲ್ಲವೂ ಆದ ಬಳಿಕ ನನ್ನನ್ನು ಪ್ರದಕ್ಷಿಣೆಮಾಡಬೇಕು. ಶುದ್ಧರಾದ ಭಾಗವತರನ್ನು ನಮಸ್ಕರಿಸಿ, ಸ್ತುತಿಸಿ, ಪೂಜಿಸಿ ಬಳಿಕ ಬ್ರಾಹ್ಮಣರಿಗೆ ಪಾಯಸಾದಿಗಳಿಂದ ಭೋಜನಮಾಡಿಸಬೇಕು.

ತೇಭ್ಯಶ್ಶಾಂತ್ಯುದಕಂ ಗೃಹ್ಯ ದ್ವಿಜೇಭ್ಯಃ ಕಮಲೇಕ್ಷಣೇ ।
ದದ್ಯಾದಭ್ಯುಕ್ಷಣಂ ಮಹ್ಯಂ ತೇನಾಹಂ ಪೂಜಿತೋಽಭವಂ ॥ ೨೯ ॥

ಸರ್ವಾನ್ವಿಸರ್ಜಯಿತ್ವಾ ತು ಕುರ್ಯಾದ್ವೈ ಗುರುಪೂಜನಂ ।
ಅಂಗುಲೀಯಕವಾಸೋಭಿರ್ದಾನಸನ್ಮಾನನಾದಿಭಿಃ ॥ ೩೦ ॥

ಯೋ ಗುರುಂ ಪೂಜಯೇದ್ಭೂಮೇ ಭಕ್ತಿಯುಕ್ತೇನ ಚೇತಸಾ ।
ತೇನಾಹಂ ಪೂಜಿತೋ ದೇವಿ ಏವಮೇತನ್ನ ಸಂಶಯಃ ॥ ೩೧ ॥

ಬ್ರಾಹ್ಮಣಾನ್ಮಮ ಭಕ್ತಾನ್ಯೋ ಗುರೂಂಶ್ಚೈವ ಹಿ ನಿಂದತಿ ।
ನಾಶಯಿಷ್ಯಾಮಿ ತಂ ದೇವಿ ಸತ್ಯಮೇತದ್ಬ್ರವೀಮಿ ತೇ ॥ ೩೨ ॥

ಜಲಸ್ಯ ಬಿಂದವೋ ಯಾವನ್ಮಮ ಗಾತ್ರೇಷು ತಿಷ್ಠತಿ ।
ತಾವದ್ವರ್ಷಸಹಸ್ರಾಣಿ ಮಮ ಲೋಕೇಷು ತಿಷ್ಠತಿ ॥ ೩೩ ॥

---

೨೯. ಕಮಲಾಕ್ಷೀ, ಆ ಬ್ರಾಹ್ಮಣರಿಂದ ಶಾಂತ್ಯುದಕವನ್ನು ತೆಗೆದುಕೊಂಡು ನನಗೆ ಪ್ರೋಕ್ಷಿಸಬೇಕು. ಆದರಿಂದ ನಾನು ಪೂಜಿತನಾಗುವೆನು

೩೦. ಎಲ್ಲರನ್ನೂ ಅಲ್ಲಿಂದ ಕಳುಹಿಸಿ ವಸ್ತ್ರಾಂಗುಳೀಯಕದಾನ ಸನ್ಮಾನಾದಿಗಳಿಂದ ಗುರುವನ್ನು ಪೂಜಿಸಬೇಕು.

೩೧. ಭೂದೇವೀ, ಯಾರು ಗುರುವನ್ನು ಭಕ್ತಿಯುತವಾದ ಮನಸ್ಸಿನಿಂದ ಪೂಜಿಸುವನೋ ಅವನಿಂದ ನಾನು ಪೂಜಿತನಾಗುವೆನೆಂಬುದರಲ್ಲಿ ಸಂಶಯವಿಲ್ಲ.

೩೨. ದೇವೀ, ನಿನಗೆ ನಿಜವಾಗಿ ಹೇಳುತ್ತೇನೆ. ನನ್ನ ಭಕ್ತರಾದ ಬ್ರಾಹ್ಮಣರನ್ನೂ, ಗುರುವನ್ನೂ ಯಾರು ನಿಂದಿಸುವನೋ ಅವನನ್ನು ನಾನು ನಾಶಮಾಡುವೆನು.

೩೩–೩೪. ಯಾರು ಈ ವಿಧಾನದಿಂದ ನನ್ನನ್ನು ಸ್ಥಾಪಿಸುವರೋ ಅವರು ನನಗೆ ಅಭಿಷೇಕಮಾಡುವಾಗ ಎಷ್ಟು ಜಲಬಿಂದುಗಳು ನನ್ನ ಅವಯವಗಳಲ್ಲಿ

ಯ ಏತೇನ ವಿಧಾನೇನ ಸ್ಥಾಪಯಿಷ್ಯತಿ ಮಾಂ ನರಃ ।
ತಾರಿತಂ ಚ ಕುಲಂ ತೇನ ಪಿತೃಜಂ ಮಾತೃಜಂ ತಥಾ ॥ ೩೪ ॥

ಏತತ್ತೇ ಕಥಿತಂ ಭದ್ರೇ ಕಾಂಸ್ಯೇನ ಸ್ಥಾಪನಂ ಮಮ ।
ಕಥಯಿಷ್ಯಾಮಿ ತೇ ಹ್ಯೇವಂ ರೌಪ್ಯೇಣ ಸ್ಥಾಪನಂ ಮಮ ॥ ೩೫ ॥

ಇತಿ ಶ್ರೀವರಾಹಪುರಾಣೇ ಕಾಂಸ್ಯಪ್ರತಿಮಾಸ್ಥಾಪನವಿಧಿರ್ನಾಮ
ಪಂಚಾಶೀತ್ಯಧಿಕಶತತಮೋಽಧ್ಯಾಯಃ

ನಿಲ್ಲುವುವೋ ಅಷ್ಟುಸಾವಿರ ವರ್ಷಗಳ ಕಾಲ ನನ್ನ ಲೋಕದಲ್ಲಿ ನಿಲ್ಲುವರು. ಅಲ್ಲದೆ ಅವರು ತಮ್ಮ ಪಿತೃಮಾತೃಕುಲವೆರಡನ್ನೂ ಸಂಸಾರ ಸಾಗರದಿಂದ ದಾಟಿಸುವರು.

೩೫. ಭದ್ರೇ, ನನ್ನ ಕಾಂಸ್ಯಮಯಮೂರ್ತಿಯನ್ನು ಸ್ಥಾಪಿಸುವ ಈ ಕ್ರಮವನ್ನು ನಿನಗೆ ಹೇಳಿದುದಾಯಿತು. ಹೀಗೆಯೇ ಬೆಳ್ಳಿಯ ಮೂರ್ತಿಯನ್ನು ಸ್ಥಾಪಿಸುವ ವಿಧಾನವನ್ನೂ ಹೇಳುವೆನು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಕಾಂಸ್ಯಮಯ (ಕಂಚಿನ) ದೇವ ಮೂರ್ತಿಯ ನಿರ್ಮಾಣ ಪ್ರತಿಷ್ಠಾದಿ ವಿಧಾನವನ್ನು ಸಮಂತ್ರಕವಾಗಿ ಹೇಳಿ, ಪ್ರತಿಷ್ಠೆಮಾಡಿಸುವವರಿಗೆ ಆಗುವ ಫಲವನ್ನೂ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೆಂಬತ್ತೈದನೆಯ ಅಧ್ಯಾಯ

॥ ಶ್ರೀರಸ್ತು ॥

ಷಡಶೀತ್ಯಧಿಕಶತತಮೋಽಧ್ಯಾಯಃ

ಅಥ ರಜತಾರ್ಚಾಸ್ಥಾಪನಂ

॥ ಶ್ರೀವರಾಹ ಉವಾಚ ॥

ರಾಜತೀಂ ಪ್ರತಿಮಾಂ ಕುರ್ಯಾತ್ಸ್ವರೂಪಾಂ ನಿರ್ಮಲಾಂ ಶುಚಿಂ ।
ಅಶ್ಲಿಷ್ಟಾಂ ಚೈವ ನಿರ್ದೋಷಾಂ ಸರ್ವತಃ ಪರಿನಿಷ್ಠಿತಾಂ ॥ ೧ ॥

ಚಂದ್ರಪಾಂಡುರಸಂಕಾಶಾಂ ಸುಶ್ಲಕ್ಷ್ಣಾಂ ನಿಘೃಣಾಂ ಶುಭಾಂ ।
ಶ್ರಿಯಾ ಯುಕ್ತಾಂ ಮನೋಜ್ಞಾಂ ಚ ದಿಪ್ಯಮಾನಾಂ ದಿಶೋದಶ ॥ ೨ ॥

ನೂರ ಎಂಭತ್ತಾರನೆಯ ಅಧ್ಯಾಯ

ಬೆಳ್ಳಿಯ ವಿಗ್ರಹದ ಸ್ಥಾಪನೆ

೧-೨. ಶ್ರೀವರಾಹ—ಸುಂದರವೂ, ನಿರ್ಮಲವೂ, ಶುದ್ಧವೂ, ಅಂಗೋಪಾಂಗಗಳೆಲ್ಲವೂ ವ್ಯಕ್ತವಾಗಿರುವುದೂ, ಕಳಂಕರಹಿತವೂ, ಎಲ್ಲಾ ಭಾಗದಲ್ಲೂ ಪೂರ್ಣವಾಗಿರುವುದೂ, ಚಂದ್ರನಂತೆ ಬೆಳ್ಳಗಿರುವುದೂ, ನುಣುಪಾಗಿರುವುದೂ, ಸೌಮ್ಯವೂ, ಶುಭವೂ, ದಯಾಯುತವೂ, ಕಾಂತಿಯುತವೂ, ಮನೋಹರವಾಗಿ ಹತ್ತು ದಿಕ್ಕುಗಳನ್ನೂ ಪ್ರಕಾಶಗೊಳಿಸುವುದೂ ಆದ ದೇವ ವಿಗ್ರಹವನ್ನು ಬೆಳ್ಳಿಯಿಂದ ಮಾಡಿಸಬೇಕು.

ಈದೃಶೀಂ ಪ್ರತಿಮಾಂ ಕೃತ್ವಾ ಮಮ ಕರ್ಮಪರಾಯಣಃ ।
ಗೀತವಾದಿತ್ರಶಬ್ದೇನ ಶಂಖದುಂದುಭಿನಿಸ್ವನೈಃ ॥
ಸ್ತುತಿಭಿರ್ಮಂಗಲೈಶ್ಚೈವ ಮಮ ವೇಶ್ಮನ್ಯುಪಾನಯೇತ್ ॥ ೩ ॥

ಅರ್ಘ್ಯಪಾದ್ಯಾದಿಕಂ ಗೃಹ್ಯ ಇಮಂ ಮಂತ್ರಮುದಾಹರೇತ್ ॥ ೪ ॥

ಮಂತ್ರಃ—

ಓಂ ಯಸ್ಸರ್ವಲೋಕೇಷ್ವಪಿ ಸರ್ವಮರ್ಘ್ಯಂ
ಪೂಜ್ಯಶ್ಚ ಮಾನ್ಯಶ್ಚ ದಿವೌಕಸಾಮಪಿ ।
ಉಪಾಗತೋ ಗೃಹ್ಯ ಇದಂ ಮಮಾರ್ಘ್ಯಂ
ಪ್ರಸೀದ ಮಾಂ ತಿಷ್ಠತು ಲೋಕನಾಥ ॥ ೫ ॥

ಯೋ ರಾಜತೇ ಯಜ್ಞಪತಿಶ್ಚ ಯಜ್ಞೇ
ಸೂರ್ಯೋದಯೇ ಮಮ ಕರ್ಮಾಗ್ನಿಹೋತ್ರಂ ।
ಮಂದಶ್ಚೇತಿ ಆದಿಮಧ್ಯಸ್ವರೂಪಾಯೇತಿ ॥ ೬ ॥

೩–೪. ನನ್ನ ಕರ್ಮಗಳಲ್ಲಿ ನಿರತನಾದವನು ಇಂತಹ ಪ್ರತಿಮೆಯನ್ನು ಮಾಡಿಸಿ, ಗೀತಾವಾದ್ಯಶಂಖದುಂದುಭಿಗಳ ಧ್ವನಿಯೊಡನೆಯೂ, ಸ್ತೋತ್ರ ಮಂಗಳವಸ್ತುಗಳೊಡನೆಯೂ ನನ್ನ ಆಲಯಕ್ಕೆ ಬಿಜಮಾಡಿಸಬೇಕು. ಅರ್ಘ್ಯ ಪಾದ್ಯಾದಿಗಳನ್ನು ಕೈಗೆ ತೆಗೆದುಕೊಳ್ಳಬೇಕು.

೫–೬. 'ಲೋಕನಾಥ ಸರ್ವಲೋಕಗಳಲ್ಲೂ ಸಕಲ ಪೂಜೆಯನ್ನೂ ಪಡೆಯುವವನೂ ದೇವತೆಗಳಿಗೂ ಪೂಜ್ಯನೂ ಮಾನ್ಯನೂ ಯಜ್ಞದಲ್ಲಿ ಯಜ್ಞ ಪತಿಯಾಗಿ ಪ್ರಾತಃಕಾಲದಲ್ಲಿ ನನ್ನ ಅಗ್ನಿಹೋತ್ರ ಕರ್ಮವೂ ಅನಾದ್ಯನಂತನೂ ಆಗಿರುವ ನೀನು ಇಲ್ಲಿ ಬಂದು ಈ ನನ್ನ ಅರ್ಘ್ಯವನ್ನು ಪರಿಗ್ರಹಿಸಿ ನನ್ನಲ್ಲಿ ಪ್ರಸನ್ನನಾಗಿರು.' ಎಂಬ ಅರ್ಥದ ಮೇಲಿನ (೫–೬ ನೆಯ) ಮಂತ್ರವನ್ನುಚ್ಚರಿಸ ಬೇಕು.

ತತ ಏತೇನ ಮಂತ್ರೇಣ ಅರ್ಘ್ಯಂ ದತ್ವಾ ಯಥಾವಿಧಿ ।
ಸುಸ್ನಾತೋಲಂಕೃತಶ್ಚೈವ ಸ್ಥಾಪಯೇತ್ತ್ವಾಮುದಙ್ಮುಖಃ ॥ ೭ ॥

ಅಶ್ಲೇಷಾಸು ಚ ನಕ್ಷತ್ರರಾಶೌ ಕರ್ಕಟಿಕೇ ಸ್ಥಿತೇ ।
ಅಸ್ತಂಗತೇ ದಿನಕರೇ ಸ್ವಜನೇ ಯಜತಿ ಸ್ಥಿರೇ।
ತತ್ರಾಧಿವಾಸನಂ ಕುರ್ಯಾದ್ವಿಧಿವನ್ಮಂತ್ರಪೂರ್ವಕಂ ॥ ೮ ॥

ಚತ್ವಾರಃ ಕಲಶಾಸ್ತತ್ರ ಚಂದನೋದಕಮಿಶ್ರಿತಾಃ ।
ಸರ್ವೌಷಧಿಸಮಾಯುಕ್ತಾಃ ಸಹಕಾರವಿಭೂಷಿತಾಃ ॥ ೯ ॥

ತತಸ್ತೇ ಕರ್ಮಿಣಸ್ಸರ್ವೇ ಮಮ ಶಾಸ್ತ್ರಾನುಸಾರಿಣಃ ।
ಗುರೋಸ್ತು ವಚನಾದ್ದೇವಿ ಮನೋಜ್ಞಾನ್ಸುಖಶೀತಲಾನ್ ॥ ೧೦ ॥

ನಮೋ ನಾರಾಯಣಾಯೇತಿ ಉಕ್ತ್ವಾ ಮಂತ್ರಮುದಾಹರೇತ್ ॥ ೧೧ ॥

---

೭. ಸರಿಯಾಗಿ ಸ್ನಾನಮಾಡಿದವನು ಈ ಮಂತ್ರದಿಂದ ವಿಧಿಯಂತೆ ಅರ್ಘ್ಯವನ್ನರ್ಪಿಸಿ, ಅಲಂಕರಿಸಿ, ನನ್ನನ್ನು ಉತ್ತರಾಭಿಮುಖನಾಗಿ ಬಿಜಮಾಡಿಸಬೇಕು.

೮. ಆಶ್ಲೇಷಾನಕ್ಷತ್ರವೂ, ಕರ್ಕಾಟಕರಾಶಿಯೂ ಇರುವಾಗ ಸ್ಥಾಪಕನ ಜನಗಳು ಸ್ಥಿರವಾಗಿ ಪೂಜಿಸುತ್ತಿರಲಾಗಿ ಸೂರ್ಯನು ಅಸ್ತನಾಗಲು ಅಲ್ಲಿ ಯಥಾವಿಧಿಯಾಗಿ ಮಂತ್ರಪೂರ್ವಕವಾಗಿ ಗಂಧ ಧೂಪಾದಿಗಳಿಂದ ಅಧಿವಾಸನ (ಸಂಸ್ಕಾರ)ವನ್ನು ಮಾಡಬೇಕು.

೯. ಅಲ್ಲಿ ಗಂಧೋದಕಪೂರ್ಣಗಳೂ, ಸರ್ವೌಷಧಿಯುತಗಳೂ, ಮಾವಿನ ತಳಿರುಗಳಿಂದ ಲಂಕೃತಗಳೂ ಆದ ನಾಲ್ಕು ಕಲಶಗಳನ್ನು ಸ್ಥಾಪಿಸಬೇಕು.

೧೦-೧೨. ದೇವೀ, ಬಳಿಕ ಅಲ್ಲಿ ನನ್ನ ಸೇವಾಕಾರ್ಯಕ್ಕಾಗಿರುವವರೆಲ್ಲರೂ ಶಾಸ್ತ್ರಾನುಸಾರವಾಗಿ ಗುರುವಿನ ಅನುಜ್ಞೆಯಿಂದ ಮನೋಹರಗಳೂ ಸುಖಶೀತಲಗಳೂ ಆಗಿರುವ ಕಲಶಗಳನ್ನೆತ್ತಿಕೊಂಡು 'ನಮೋ ನಾರಾಯಣಾಯ' ಎಂದು, " ಸವವಲೋಕೈಕಕರ್ತೃವೂ, ಸರ್ವಾಧ್ಯಕ್ಷನೂ, ಸರ್ವರೂಪನೂ,

ಮಂತ್ರಃ—

ಯೋಽಸೌ ಭವಾನ್ಸರ್ವಲೋಕೈಕಕರ್ತಾ
ಸರ್ವಾಧ್ಯಕ್ಷಸ್ಸರ್ವರೂಪೈಕರೂಪಃ ।
ಆಯಾತು ಮೂರ್ತ್ಯಾ ಸಹಿತೋ ಮಯಾ ಚ
ಧ್ರುವಾದಿಭಿರ್ಲೋಕಪಾಲೈಸ್ತು ಪೂಜ್ಯಃ ॥
ನಮೋಽನಂತಾಯೇತಿ ॥ ೧೨ ॥

ವ್ಯತೀತಾಯಾಂ ತು ಶರ್ವರ್ಯಾಮುದಿತೇ ಸೂರ್ಯಮಂಡಲೇ ।
ದಿಶಾಸು ಚ ಪ್ರಸನ್ನಾಸು ದ್ವಾರಮೂಲಮುಪಾನಯೇತ್ ॥ ೧೩ ॥

ಏವಂ ಸಂಸ್ಥಾಪನಂ ಕೃತ್ವಾ ಮಮ ಕರ್ಮಾನುಸಾರಿಣಃ ।
ಘಟೈಃ ಪೂರ್ಣೈರ್ಯಥಾನ್ಯಾಯಂ ಕುರ್ಯಾತ್ತತ್ರಾಭಿಷೇಚನಂ ॥ ೧೪ ॥

ಅಭಿಷಿಚ್ಯ ತತಃ ಪಶ್ಚಾತ್ ಸ್ಥಾಪಯೇತ ವಿಧಾನತಃ ।
ನಮೋ ನಾರಾಯಣಾಯೇತಿ ಉಕ್ತ್ವಾ ಮಂತ್ರಮುದಾಹರೇತ್ ॥ ೧೫ ॥

ಏಕರೂಪನೂ ಧ್ರುವನೇ ಮೊದಲಾದ ಲೋಕಪಾಲಕರಿಂದಲೂ ನನ್ನಿಂದಲೂ ಪೂಜ್ಯನೂ ಆದ ದೇವನೇ, ಈ ಬೆಳ್ಳಿಯ ಮೂರ್ತಿಯಲ್ಲಿ ಬಂದು ನೆಲೆಸು. ಅನಂತನಾದ ನಿನಗೆ ವಂದನೆ '' ಎಂಬ ಅರ್ಥದ ಯೋಸೌಭವಾನ್ ....ನಮೋಽನಂತಾಯ ' ಎಂಬ ಮಂತ್ರವನ್ನು ಹೇಳಬೇಕು.

೧೩. ಆ ರಾತ್ರಿಯು ಕಳೆದು ಸೂರ್ಯನು ಉದಯಿಸಿ, ದಿಕ್ಕುಗಳೆಲ್ಲವೂ ಪ್ರಸನ್ನವಾಗಿರುವಾಗ ನನ್ನನ್ನು ಆಲಯದ ಬಾಗಿಲಿನ ಹತ್ತಿರಕ್ಕೆ ಬಿಜಮಾಡಿಸಬೇಕು.

೧೪. ನನ್ನ ಕರ್ಮವನ್ನನುಸರಿಸುವವರು ಹಾಗೆ ಬಿಜಮಾಡಿಸಿ, ಪೂರ್ಣ ಕಲಶಗಳಿಂದ ಶಾಸ್ತ್ರದಂತೆ ನನಗೆ ಅಲ್ಲಿ ಅಭಿಷೇಕವನ್ನು ಮಾಡಬೇಕು.

೧೫–೧೬. ಅಭಿಷೇಕಮಾಡಿದ ಬಳಿಕ ವಿಧಿಯಂತೆ ಸ್ಥಾಪಿಸಬೇಕು. ಅಭಿಷೇಕಮಾಡುವಾಗ ' ನಮೋ ನಾರಾಯಣಾಯ ' ಎಂದು '' ಸುರಶ್ರೇಷ್ಠನೇ,

ಮಂತ್ರಃ—

ಗಂಗಾದಿಭ್ಯೋ ನದೀಭ್ಯಶ್ಚ ಸಾಗರೇಭ್ಯೋ ಮಯಾ ಹೃತಂ ।
ಸ್ನಾನಾಯ ತೇ ಸುರಶ್ರೇಷ್ಠ ಕರ್ಪೂರಾವಾಸಿತಂ ಜಲಂ ॥ ೧೬ ॥

ಏವಂ ಸ್ನಾಪ್ಯ ವಿಧಾನೇನ ಗೃಹಸ್ಯಾಭ್ಯಂತರಂ ನಯೇತ್ ॥ ೧೭ ॥

ಸ್ಥಾಪನಾ ತತ್ರ ಮೇ ಕಾರ್ಯಾ ಮಂತ್ರೇಣಾನೇನ ಸುಂದರಿ ॥ ೧೮ ॥

ಮಂತ್ರಃ—

ವೇದ್ಯೈರ್ವೇದ್ಯೋ ವೇದವಿದ್ಭಿಶ್ಚ ಪೂಜ್ಯೋ
ಯಜ್ಞಾತ್ಮಕೋ ಯಜ್ಞಫಲಪ್ರದಾತಾ ।
ಯಜ್ಞಾರ್ಥಂ ತ್ವಾಮಾಹ್ವಯೇ ದೇವದೇವ
ಮೂರ್ತಾವಸ್ಯಾಂ ತಿಷ್ಠ ಸುಲೋಕನಾಥ ॥
ಧನಜನರೂಪ್ಯಸ್ವರ್ಣ ಅನಂತಾಯ ನಮ ಇತಿ ॥ ೧೯ ॥

ಇದು ನಿನ್ನ ಅಭಿಷೇಕಕ್ಕಾಗಿ ನಾನು ಗಂಗಾದಿನದಿಗಳಿಂದಲೂ ಸಾಗರಗಳಿಂದಲೂ ತಂದು ಪಚ್ಚಕರ್ಪೂರದಿಂದ ಸುವಾಸನೆಗೊಳಿಸಿರುವ ತೀರ್ಥ " ಎಂಬ ಅರ್ಥದ " ಗಂಗಾದಿ ಭ್ಯೋನದೀಭಿಶ್ಚ................ಜಲಂ " ಎಂಬ ಮೇಲಿನ (೧೬ ನೆಯ ಶ್ಲೋಕ) ಮಂತ್ರವನ್ನು ಹೇಳಬೇಕು.

೧೭-೧೯. ಹೀಗೆ ವಿಧಿಯಂತೆ ಅಭಿಷೇಕಮಾಡಿ, ನನ್ನ ಆಲಯದೊಳಕ್ಕೆ ಬಿಜಮಾಡಿಸಬೇಕು. ಸುಂದರೀ, ಅಲ್ಲಿ ನನ್ನನ್ನು ' ದೇವ ದೇವ, ಲೋಕನಾಥ, ವೇದವೇದ್ಯನೂ ವೇದಜ್ಞರಿಂದ ಪೂಜ್ಯನೂ, ಯಜ್ಞಾತ್ಮಕನೂ, ಯಜ್ಞಫಲ ಪ್ರದಾಯಕನೂ ಆದ ನಿನ್ನನ್ನು ಪೂಜಿಸುವುದಕ್ಕಾಗಿ ಆವಾಹಿಸುತ್ತೇನೆ. ದಯಮಾಡಿ, ಈ ಬೆಳ್ಳಿಯ ವಿಗ್ರಹದಲ್ಲಿ ನೆಲೆಸು. ಸರ್ವರೂಪನೂ ಅನಂತನೂ ಆದ ನಿನಗೆ ವಂದನೆ' ಎಂಬ ಅರ್ಥವುಳ್ಳ " ವೇದ್ಯೈರ್ವೇದ್ಯಃ................ ಅನಂತಾಯನಮಃ " ಎಂಬ ಮೇಲಿನ (೧೯ ನೆಯ ಶ್ಲೋಕ) ಮಂತ್ರದಿಂದ ನೆಲೆಗೊಳಿಸಬೇಕು.

ಏವಂ ಸಂಸ್ಥಾಪನಂ ಕೃತ್ವಾ ಪ್ರಹೃಷ್ಟೇನಾಂತರಾತ್ಮನಾ ।
ಅರ್ಚಯಿತ್ವಾ ಯಥಾನ್ಯಾಯಂ ಪೂರ್ವೋಕ್ತವಿಧಿನಾ ನರಃ ॥
ನೀಲವಸ್ತ್ರಾಣಿ ಮೇ ದದ್ಯಾತ್ ಪ್ರಿಯಾಣಿ ಮಮ ಭೂಷಣಂ ॥ ೨೦ ॥

ತತೋ ವಸ್ತ್ರಾಣ್ಯುಪಾದಾಯ ಜಾನುಭ್ಯಾಂ ಪತಿತೋ ಭುವಿ ।
ನಮೋ ನಾರಾಯಣಾಯೇತಿ ಉಕ್ತ್ವಾ *ಮಂತ್ರಮುದಾಹರೇತ್ ॥ ೨೧ ॥

ಮಂತ್ರಃ—

ಯೋಽಸೌ ಭವಾಂಶ್ಚಂದ್ರರಶ್ಮಿಪ್ರಕಾಶಃ
ಶಂಖೇನ ಕುಂದೇನ ಸಮಾನವರ್ಣಃ ।
ಕ್ಷೀರೋಜ್ಜ್ವಲಃ ಕೌಮುದವರ್ಣ ದೇವ
ವಸ್ತ್ರಾಣಿ ಗೃಹ್ಣೀಷ್ವ ಮಮ ಪ್ರಿಯಾಯ ॥ ೨೨ ॥

---

೨೦. ಹೀಗೆ ಅತಿಸಂತೋಷವುಳ್ಳ ಮನಸ್ಸಿನಿಂದ ನನ್ನ ಮೂರ್ತಿಯನ್ನು ಪ್ರತಿಷ್ಠೆಮಾಡಿ, ಹಿಂದೆ ಹೇಳಿರುವ ವಿಧಿಯಿಂದ ಅರ್ಚಿಸಿ, ನನಗೆ ಪ್ರಿಯವೂ, ಭೂಷಣವೂ ಆದ ನೀಲವಸ್ತ್ರಗಳನ್ನು ಧರಿಸಬೇಕು.

೨೧-೨೩. ನೀಲವಸ್ತ್ರಗಳನ್ನು ಕೈಯ್ಯಲ್ಲಿ ಹಿಡಿದುಕೊಂಡು ನನ್ನ ಮುಂದೆ ಮೊಳಕಾಲೂರಿ ನಿಂತು 'ನಮೋ ನಾರಾಯಣಾಯ' ಎಂದು 'ಚಂದ್ರಕಿರಣದಂತೆಯೂ ಕ್ಷೀರದಂತೆಯೂ ಪ್ರಕಾಶವುಳ್ಳವನೂ' ಶಂಖಕುಂದಕುಸುಮ ಸಮಾನವರ್ಣನೂ ಆದ ದೇವನೇ, ನನ್ನ ಹಿತಕ್ಕಾಗಿ ಈ ವಸ್ತ್ರಗಳನ್ನು ಪರಿಗ್ರಹಿಸು. ನೀನು ಮತ್ಸ್ಯಾದಿ ವೇಷಧರನೂ, ಸುವೇಷವುಳ್ಳವನೂ, ಅನಂತನೂ, ಅಮರನೂ, ಸರ್ವಕಾರಣನೂ, ಭಕ್ತಸುಲಭನೂ ದುರ್ಲಭನೂ, ಶ್ರೇಷ್ಠನೂ ಸುವರ್ಚಸ್ವಿಯೂ ಆಗಿರುವೆ. 'ಎಂಬ ಅರ್ಥದ' ಯೋಽಸೌಭವಾನ್ ಚಂದ್ರರಶ್ಮಿ

---

* ಕಾಮಮುದಾಹರೇತ್

ವೇಷಃ ಸುವೇಷಃ ಅನಂತಃ ಅಮರಃ ಮಾರಣಃ ।
ಕಾರಣಃ ಸುಲಭಃ ದುರ್ಲಭಃ ಶ್ರೇಷ್ಠಃ ಸುವರ್ಚಾ ಇತಿ ॥ ೨೩ ॥

ಅನೇನೈವ ತು ಮಂತ್ರೇಣ ದತ್ವಾ ವಸ್ತ್ರಾಣಿ ಮೇ ಶುಚಿಃ ।
ತತೋ ಮೇ ಪ್ರಾಶನಂ ದದ್ಯಾದ್ಭಕ್ತಿಯುಕ್ತೇ ಚೇತಸಾ ॥
ನಮೋ ನಾರಾಯಣಾಯೇತಿ ಇಮಂ ಮಂತ್ರಮುದಾಹರೇತ್ ॥ ೨೪ ॥

ಶಾಲ್ಯನ್ನಂ ಪಾಯಸೈರ್ಯುಕ್ತಂ ಸಿತಯಾ ಚ ಘೃತೇನ ಚ ।
ಪ್ರಾಶನಂ ಗೃಹ್ಯತಾಂ ದೇವ ಅನಂತ ಪುರುಷೋತ್ತಮ ॥ ೨೫ ॥

ದತ್ವಾ ತು ಮಮ ನೈವೇದ್ಯಂ ದದ್ಯಾದಾಚಮನಂ ಬುಧಃ ।
ಸರ್ವಲೋಕಹಿತಾರ್ಥಾಯ ಶಾಂತಿಪಾಠಮುದಾಹರೇತ್ ॥ ೨೬ ॥

ಪ್ರಕಾಶಃ..................ಸುವರ್ಚಾಃ ॥ ' ಎಂಬ ಮೇಲಿನ (೨೨-೨೩ ನೆಯ ಶ್ಲೋಕ) ಮಂತ್ರವನ್ನು ಹೇಳಬೇಕು

೨೪-೨೫. ಈ ಮೇಲಿನ ಮಂತ್ರದಿಂದ ನನಗೆ ಶುಚಿಯಾಗಿ ವಸ್ತ್ರಗಳನ್ನು ಧರಿಸಿ, ಬಳಿಕ ಭಕ್ತಿಯುತವಾದ ಮನಸ್ಸಿನಿಂದ ನನಗೆ ನೈವೇದ್ಯವನ್ನರ್ಪಿಸಬೇಕು. ಅರ್ಪಿಸುವಾಗ ' ನಮೋ ನಾರಾಯಣಾಯ ' ಎಂದು ದೇವ, ಅನಂತ, ಪುರುಷೋತ್ತಮಾ, ಬೆಳ್ಳಗಿರುವ ತುಪ್ಪದಿಂದಲೂ ಪಾಯಸದಿಂದಲೂ ಕೂಡಿದ ಶಾಲ್ಯನ್ನನೈವೇದ್ಯವನ್ನು ಪರಿಗ್ರಹಿಸು. ಎಂಬ ಅರ್ಥದ " ಶಾಲ್ಯನ್ನಂಪಾಯಸೈರ್ಯುಕ್ತಂ ಸಿತಯಾಚ ಘೃತೇನಚ ಪ್ರಾಶನಂ ಗೃಹ್ಯತಾಂ ದೇವ ಅನಂತ ಪುರುಷೋತ್ತಮ ॥ " ಎಂಬ ಮಂತ್ರವನ್ನು ಹೇಳಬೇಕು.

೨೬. ವಿದ್ವಾಂಸನು ನನಗೆ ನೈವೇದ್ಯವನ್ನರ್ಪಿಸಿ, ಬಳಿಕ ಆಚಮನವನ್ನು ಅರ್ಪಿಸಬೇಕು. ಸರ್ವಲೋಕಹಿತಾರ್ಥವಾಗಿ, ಮುಂದಿನ ಶಾಂತಿವಚನವನ್ನು ಹೇಳಬೇಕು.

ಓಂ ಶಾಂತಿಂ ಕರೋತಿ ಬ್ರಹ್ಮಾ ಚ ರುದ್ರೋ ವಿಷ್ಣುರ್ಭಾಸ್ಕರಃ ।
ರಾತ್ರಿಶ್ಚೈವ ತು ಸಂಧ್ಯೇ ದ್ವೇ ನಕ್ಷತ್ರಾಣಿ ಗ್ರಹಾ ದಿಶಃ ॥ ೨೭ ॥

ಅಚಲ ಚಂಚಲ ಸಚಲ ಖೇಚಲ ಪ್ರಚಲ ಅರವಿಂದಪ್ರಭ ।
ಉದ್ಭವ ಚೇತಿ ನಮಃ ಸಂಸ್ಥಾಪಿತಾನಾಂ ವಾಸುದೇವ ಇತಿ ॥ ೨೮ ॥

ಕೃತ್ವಾ ವೈ ಶಾಂತಿಕಂ ತತ್ರ ಸರ್ವಪಾಪಪ್ರಣಾಶನಂ ।
ಪೂಜ್ಯ ಭಾಗವತಾಂಸ್ತತ್ರ ಯಥಾವಿಭವಶಕ್ತಿತಃ ॥ ೨೯ ॥

ಬ್ರಾಹ್ಮಣಾನ್ಭೋಜಯೇತ್ತತ್ರ ಗುರುಂ ಮಂತ್ರೇಣ ಪೂಜಯೇತ್ ।
ತೇಭ್ಯಃ ಶಾಂತ್ಯುದಕಂ ಗೃಹ್ಯ ಕುರ್ಯಾದಭ್ಯುಕ್ಷಣಂ ತತಃ ॥ ೩೦ ॥

ಬ್ರಾಹ್ಮಣಾನ್ ಸ್ವಜನಂ ಚೈವ ಅಭಿವಾದ್ಯ ಕೃತಾಂಜಲಿಃ ।
ಶೀಘ್ರಂ ವಿಸರ್ಜಯೇತ್ತಾಂಶ್ಚ ಯೇ ತತ್ರ ಸಮುಪಾಗತಾಃ ॥ ೩೧ ॥

---

೨೭. ' ಓಂ ಬ್ರಹ್ಮನೂ, ವಿಷ್ಣುವೂ ರುದ್ರನೂ, ಸೂರ್ಯನೂ, ದ್ವಿಸಂಧ್ಯೆಗಳೂ ರಾತ್ರಿಯೂ, ನಕ್ಷತ್ರಗಳೂ ಗ್ರಹಗಳೂ, ದಿಕ್ಕುಗಳೂ ಶಾಂತಿಯನ್ನು ಮಾಡುತ್ತಾರೆ. ಅಚಲ, ಚಂಚಲ, ಸಚಲ, ಆಕಾಶಚಲ, ಪ್ರಚಲ, ಅರವಿಂದಪ್ರಭ, ವಾಸುದೇವ, ನಿನ್ನನ್ನು ಪ್ರತಿಷ್ಠೆಮಾಡಿದವರಿಗೆ ಪ್ರತ್ಯಕ್ಷನಾಗು. ನಿನಗೆ ನಮಸ್ಕಾರ. '

೨೯–೩೦. ಸರ್ವಪಾಪನಾಶಕವಾದ ಶಾಂತಿಯನ್ನು ಮಾಡಿ, ಅಲ್ಲಿಯೇ ತನ್ನ ಅನುಕೂಲಕ್ಕೆ ತಕ್ಕಹಾಗೆ ಭಾಗವತರನ್ನು ಪೂಜಿಸಿ, ಬ್ರಾಹ್ಮಣರಿಗೆ ಭೋಜನಮಾಡಿಸಬೇಕು. ಗುರುವನ್ನು ಮಂತ್ರದಿಂದ ಪೂಜಿಸಬೇಕು. ಅವರಿಂದ ಶಾಂತ್ಯುದಕವನ್ನು ತೆಗೆದುಕೊಂಡು ಪ್ರೋಕ್ಷಿಸಬೇಕು.

೩೧. ಬಳಿಕ ಬ್ರಾಹ್ಮಣರನ್ನೂ, ಸ್ವಜನರನ್ನೂ ನಮಸ್ಕರಿಸಿ, ಕೈಮುಗಿದು ಕಳುಹಿಸಿ, ಅಲ್ಲಿ ಬಂದಿರುವ ಇತರರನ್ನೂ ಕಳುಹಿಸಬೇಕು.

ತತೋ ಗುರುಶ್ಚ ಸಂಪೂಜ್ಯಃ ದಾನಮಾನಾದಿಭಿರ್ವಿಭುಃ ।*
ಗುರೌ ಸಂಪೂಜಿತೇ ತತ್ರ ಮಮ ಪೂಜಾ ಕೃತಾ ಭವೇತ್ ॥ ೩೨ ॥

ಜಲಸ್ಯ ಬಿಂದವೋ ಯೇಽನ್ನಭೋಜನಾಂತೇ ಪತಂತಿ ಹಿ ।
ತಾವದ್ವರ್ಷಸಹಸ್ರಾಣಿ ವಿಷ್ಣುಲೋಕೇ ಸ ಮೋದತೇ ॥ ೩೩ ॥

ಯ ಏತೇನ ವಿಧಾನೇನ ಪೂಜಯೇನ್ಮತಿಮಾನ್ನರಃ ।
ಉದ್ಧೃತಂ ಚ ಕುಲಂ ತೇನ ಪಿತೃಜಂ ಮಾತೃಜಂ ತಥಾ ॥ ೩೪ ॥

ಅನೇನ ವಿಧಿನಾ ದೇವಿ ರೌಪ್ಯಾರ್ಚಾಸ್ಥಾಪನಂ ಮಮ ।
ಸುವರ್ಣಸ್ಯ ಪ್ರವಕ್ಷ್ಯಾಮಿ ಸ್ಥಾಪನಂ ಮಮ ಸುಪ್ರಿಯಂ ॥ ೩೫ ॥

---

೩೨. ಬಳಿಕ ವಿಭುವಾದ ಗುರುವನ್ನು ದಾನಮಾನಾದಿಗಳಿಂದ ಸರಿಯಾಗಿ ಪೂಜಿಸಬೇಕು. ಅಲ್ಲಿ ಗುರುವನ್ನು ಪೂಜಿಸಿದರೆ ನನ್ನ ಪೂಜೆಯನ್ನು ಮಾಡಿದಂತಾಗುವುದು.

೩೩. ಅನ್ನಭೋಜನದ ಕಡೆಯಲ್ಲಿ ಎಷ್ಟು ಜಲಬಿಂದುಗಳು ಬೀಳುವುವೋ ಅಷ್ಟು ಸಹಸ್ರವರ್ಷಕಾಲ ಸ್ಥಾಪಕನು ವಿಷ್ಣುಲೋಕದಲ್ಲಿ ಸಂತೋಷಪಡುವನು.

೩೪. ಈ ವಿಧಾನದಿಂದ ಬೆಳ್ಳಿಯ ವಿಗ್ರಹಪ್ರತಿಷ್ಠೆಯನ್ನು ಮಾಡಿಸಿ ಪೂಜೆಮಾಡಿಸುವವನು ತಂದೆಯ ಮತ್ತು ತಾಯಿಯ ಎರಡು ಕುಲಗಳನ್ನೂ ಉದ್ಧಾರಮಾಡುವನು.

೩೫. ದೇವೀ, ಬೆಳ್ಳಿಯ ನನ್ನ ವಿಗ್ರಹವನ್ನು ಸ್ಥಾಪಿಸುವುದು ಈ ವಿಧಿಯಿಂದ. ನನಗೆ ಅತಿಪ್ರಿಯವಾದ ಸುವರ್ಣವಿಗ್ರಹದ ಸ್ಥಾಪನೆಯ ವಿಚಾರವನ್ನು ಇನ್ನು ಹೇಳುತ್ತೇನೆ.

---

* ತತೋ ಗುರುಂ ಚ ಸಂಪೂಜ್ಯ ದಾನಮಾನಾದಿಭಿರ್ವಿಭುಂ ।

ಯಥೈವ ರಾಜತೀಂ ಕುರ್ಯಾತ್ತಥೈವ ಚ ಸುವರ್ಣಿಕಾಂ ।
ತೇನೈವ ವಿಧಿನಾ ಸರ್ವಂ ಕುರ್ಯಾದಾವಾಹನಾದಿಕಂ ॥ ೩೬ ॥

ಯತ್ಫಲಂ ದಾರುಶೈಲಾದಿನಾಮ್ನಾ ಕಾಂಸ್ಯಾದಿರಾಜತೇ ।
ತತ್ಫಲಂ ಕೋಟಿಗುಣಿತಂ ಸೌವರ್ಣಸ್ಯ ಪ್ರಪೂಜನೇ ॥ ೩೭ ॥

ಕುಲಾನಿ ತಾರಯೇತ್ಸುಭ್ರು ಅಯುತಾನ್ಯೇಕವಿಂಶತಿಂ ।
ಯಾತಿ ಮಲ್ಲಯುತಾಂ ಭೂಮೇ ಪುನರಾವೃತ್ತಿವರ್ಜಿತಃ ॥ ೩೮ ॥

ಏತತ್ತೇ ಕಥಿತಂ ಭೂಮೇ ಯತ್ತ್ವಯಾ ಪರಿಪೃಚ್ಛಿತಂ ।
ರಹಸ್ಯಂ ವಿಪುಲಶ್ರೋಣಿ ಕಿಮನ್ಯತ್ಕಥಯಾಮಿ ತೇ ॥ ೩೯ ॥

---

೩೬. ಬೆಳ್ಳಿಯಿಂದ ಮಾಡಿಸುವಂತೆಯೇ ಚಿನ್ನದಿಂದಲೂ ವಿಗ್ರಹವನ್ನು ಮಾಡಿಸಬೇಕು. ಅದೇ ವಿಧಿಯಿಂದಲೇ ಆವಾಹನಾದಿಗಳೆಲ್ಲವನ್ನೂ ಮಾಡಬೇಕು.

೩೭. ಮರ, ಕಲ್ಲು, ಕಂಚು, ಬೆಳ್ಳಿ, ಮೊದಲಾದುವುಗಳಿಂದಾದ ನನ್ನ ವಿಗ್ರಹವನ್ನು ಪೂಜಿಸುವುದರಿಂದಾಗುವ ಫಲದ ಕೋಟಿಯಷ್ಟು ಫಲವು ಸುವರ್ಣ ಮೂರ್ತಿಯನ್ನು ಪೂಜಿಸುವುದರಿಂದಾಗುವುದು.

೩೮. ಸುಭ್ರೂ,* ಸುವರ್ಣಮೂರ್ತಿಯನ್ನು ಸ್ಥಾಪಿಸುವವನು ತನ್ನ ಹತ್ತುಸಾವಿರದ ಇಪ್ಪತ್ತೊಂದು ಕುಲಗಳನ್ನೂ ಜನ್ಮಸಾಗರದಿಂದ ದಾಟಿಸುವನು. ತಾನು ಪುನರಾವೃತ್ತಿಯಿಲ್ಲದವನಾಗಿ ನನ್ನಲ್ಲಿ ಐಕ್ಯನಾಗುವನು.

೩೯. ಭೂಮೀ, ಸುಶ್ರೋಣೀ, ನೀನು ಕೇಳಿದ ಈ ವಿಚಾರವನ್ನು ನಿನಗೆ ಹೇಳಿದುದಾಯಿತು. ಬೇರಾವ ರಹಸ್ಯವನ್ನು ನಿನಗೆ ಹೇಳಲಿ ?

---

* ಸುಭ್ರು ಸುಂದರವಾದ ಹುಬ್ಬುಳ್ಳವಳು.

|| ಭೂಮಿರುವಾಚ ||

ಉಕ್ತಾ ಯಾಃ ಪ್ರತಿಮಾಸ್ಸರ್ವಾಸ್ಸುವರ್ಣಾದಿವಿನಿರ್ಮಿತಾಃ ।
ತಾಸು ತಿಷ್ಠಸಿ ಸರ್ವಾಸು ಸಾಲಗ್ರಾಮೇ ಚ ಸರ್ವದಾ || ೪೦ ||

ಕತಿ ಪೂಜ್ಯಾ ಗೃಹಾದೌ ಚ ಅವಿಶೇಷಸ್ತು ಪೂಜನೇ ।
ವಿಶೇಷೋ ವಾ ಭವಾತ್ತನ್ಮೇ ರಹಸ್ಯಂ ವದ ಮಾಧವ || ೪೧ ||

ಶಿವಾದಿಪೂಜನೇ ಕೇವಾ ಸಂಖ್ಯಾತಾಸ್ತಚ್ಚ ಮೇ ವದ || ೪೨ ||

|| ಶ್ರೀವರಾಹ ಉವಾಚ ||

ಗೃಹೇ ಲಿಂಗದ್ವಯಂ ನಾರ್ಚ್ಯಂ ಸಾಲಗ್ರಾಮತ್ರಯಂ ತಥಾ ।
ದ್ವೇ ಚಕ್ರೇ ದ್ವಾರಕಾಯಾಸ್ತು ನಾರ್ಚ್ಯಂ ಸೂರ್ಯದ್ವಯಂ ತಥಾ|| ೪೩ ||

---

೪೦. ಭೂದೇವಿ—ದೇವಾ, ನೀನು ಹೇಳಿದ ಸುವರ್ಣಾದಿಗಳಿಂದ ನಿರ್ಮಿತವಾದ ಎಲ್ಲಾ ಪ್ರತಿಮೆಗಳಲ್ಲಿಯೂ, ಸಾಲಗ್ರಾಮಗಳಲ್ಲಿಯೂ ನೀನು ಯಾವಾಗಲೂ ಇರುವೆ.

೪೧. ಮಾಧವಾ, ಮನೆಯೇ ಮೊದಲಾದುವುಗಳಲ್ಲಿ ಪೂಜಿಸುವಾಗ ಎಷ್ಟು ಸಾಲಗ್ರಾಮಗಳನ್ನು ಪೂಜಿಸಬೇಕು ? ವಿಶೇಷವೇನಾದರೂ ಉಂಟೆ ? ಆ ರಹಸ್ಯವನ್ನು ನನಗೆ ಹೇಳು.

೪೨. ಶಿವಾದಿಗಳ ಪೂಜೆಯಲ್ಲಿಯೂ ಅವರ ಸಂಖ್ಯಾನಿಯಮವುಂಟೆ ? ಅದನ್ನೂ ನನಗೆ ಹೇಳು.

೪೩. ಶ್ರೀವರಾಹ—ಮನೆಯಲ್ಲಿ ಎರಡು ಲಿಂಗಗಳನ್ನೂ, ಮೂರು ಸಾಲಗ್ರಾಮಗಳನ್ನೂ ಪೂಜಿಸಬಾರದು. ದ್ವಾರಕೆಯ ಎರಡು ಚಕ್ರಗಳನ್ನೂ ಇಬ್ಬರು ಸೂರ್ಯರನ್ನೂ ಪೂಜಿಸಬಾರದು.

ಗಣೇಶತ್ರಿತಯಂ ನಾರ್ಚ್ಯಂ ಶಕ್ತಿತ್ರಿತಯಮೇವ ಚ ।
ಸಾಲಿಗ್ರಾಮಯುಗಂ ಪೂಜ್ಯಂ ಯುಗ್ಮೇಷು ದ್ವಿತಯಂ ನ ಹಿ ॥ ೪೪ ॥

ವಿಷಮಾ ನೈವ ಪೂಜ್ಯಾಃ ಸ್ಯುರ್ವಿಷಮೇ ಏಕ ಏವ ಹಿ ॥ ೪೫ ॥

ಗೃಹೇಽಗ್ನಿದಗ್ಧಾ ಭಗ್ನಾ ವಾ ನೈವ ಪೂಜ್ಯಾ ವಸುಂಧರೇ ।
ಆಸಾಂ ತು ಪೂಜನಾದ್ಗೇಹೇ ಉದ್ವೇಗಂ ಪ್ರಾಪ್ನುಯಾದ್ಗೃಹೀ ॥ ೪೬ ॥

ಸಾಲಗ್ರಾಮಶಿಲಾಭಗ್ನಾ ಪೂಜನೀಯಾ ಸಚಕ್ರಕಾ ।
ಖಂಡಿತಾ ಸ್ಫುಟಿತಾ ವಾಪಿ ಸಾಲಗ್ರಾಮಶಿಲಾ ಶುಭಾ ॥ ೪೭ ॥

ಶಿಲಾ ದ್ವಾದಶ ವೈ ದೇವಿ ಸಾಲಗ್ರಾಮಸಮುದ್ಭವಾಃ ।
ವಿಧಿವತ್ಪೂಜಿತಾ ಯೇನ ತಸ್ಯ ಪುಣ್ಯಂ ವದಾಮಿ ತೇ ॥ ೪೮ ॥

---

೪೪. ಮೂವರು ವಿನಾಯಕರನ್ನೂ, ಶಕ್ತಿಯರನ್ನೂ ಪೂಜಿಸಬಾರದು. ಸಮಸಂಖ್ಯೆಯ ಸಾಲಗ್ರಾಮಮೂರ್ತಿಗಳನ್ನೇ ಪೂಜಿಸಬೇಕು. ಆದರೆ ಸಮ ಸಂಖ್ಯೆಯಲ್ಲಿಯೂ ಎರಡು ಸಾಲಗ್ರಾಮಗಳನ್ನು ಮಾತ್ರ ಪೂಜಿಸಬಾರದು.

೪೫. ವಿಷಮಸಂಖ್ಯೆಯಲ್ಲಿ ಒಂದು ಸಾಲಗ್ರಾಮಮೂರ್ತಿಯನ್ನು ಮಾತ್ರ ಪೂಜಿಸಬಹುದು. ಬೇರೆಯ ವಿಷಮಸಂಖ್ಯೆಯ ಮೂರ್ತಿಗಳನ್ನು ಪೂಜಿಸಲೇ ಬಾರದು.

೪೬. ಬೆಂಕಿಯಿಂದ ಸುಟ್ಟ ಅಥವಾ ಭಿನ್ನವಾದ ಮೂರ್ತಿಗಳನ್ನು ಮನೆಯಲ್ಲಿ ಪೂಜಿಸಲೇ ಬಾರದು. ವಸುಂಧರೇ, ಅವರ ಪೂಜೆಯಿಂದ ಗೃಹಸ್ಥನು ಉದ್ವೇಗವನ್ನು ಪಡೆಯುವನು.

೪೭. ಸಾಲಗ್ರಾಮಶಿಲೆಯು ಒಡೆದಿದ್ದರೂ ಚಕ್ರಸಹಿತವಾಗಿದ್ದರೆ ಎಂದರೆ ಚಕ್ರವು ಭಿನ್ನವಾಗದಿದ್ದರೆ ಪೂಜ್ಯವಾದುದು ಸಚಕ್ರವಾಗಿದ್ದರೆ ಒಡೆದ ಅಥವಾ ಕತ್ತರಿಸಿ ಹೋಗಿರುವ ಸಾಲಗ್ರಾಮಶಿಲೆಯೂ ಶುಭವಾದುದು.

೪೮. ಒಂದು ಕ್ಷೇತ್ರ (ಹನ್ನೆರಡು) ಸಾಲಗ್ರಾಮಗಳನ್ನು ವಿಧಿಯಂತೆ ಪೂಜಿಸುವವನ ಪುಣ್ಯವನ್ನು ನಿನಗೆ ಹೇಳುತ್ತೇನೆ.

ಕೋಟಿದ್ವಾದಶಲಿಂಗೈಸ್ತು ಪೂಜಿತೈಃ ಸ್ವರ್ಣಪಂಕಜೈಃ ।
ಯತ್ಸ್ಯಾದ್ದ್ವಾದಶಕಲ್ಪೈಸ್ತು ದಿನೇನೈಕೇನ ತದ್ಭವೇತ್ ॥ ೪೯ ॥

ಯಃ ಪುನಃ ಪೂಜಯೇದ್ಭಕ್ತ್ಯಾ ಸಾಲಗ್ರಾಮಶಿಲಾಶತಂ ।
ತತ್ಫಲಂ ನೈವ ಶಕ್ನೋಽಹಂ ವಕ್ತುಂ ವರ್ಷಶತೈರಪಿ ॥ ೫೦ ॥

ಸರ್ವೈರ್ವರ್ಣೈಸ್ತು ಸಂಪೂಜ್ಯಾಃ ಪ್ರತಿಮಾಸ್ಸರ್ವದೇವತಾಃ ।
ಲಿಂಗಾನ್ಯಪಿ ತು ಪೂಜ್ಯಾನಿ ಮಣಿಭಿಃ ಕಲ್ಪಿತಾಸ್ತಥಾ ॥ ೫೧ ॥

ಸಾಲಗ್ರಾಮೋ ನ ಸ್ಪ್ರಷ್ಟವ್ಯೋ ಹೀನವರ್ಣೈರ್ವಸುಂಧರೇ ।
ಸ್ತ್ರೀಶೂದ್ರಕರಸಂಸ್ಪರ್ಶೋ ವಜ್ರಸ್ಪರ್ಶಾಧಿಕೋ ಮತಃ ॥ ೫೨ ॥

ಮೋಹಾದ್ಯಸ್ಸಂಸ್ಪೃಶೇಚ್ಛೂದ್ರೋ ಯೋಷಿದ್ವಾಪಿ ಕದಾಚನ ।
ಪಚ್ಯತೇ ನರಕೇ ಘೋರೇ ಯಾವದಾಭೂತಸಂಪ್ಲವಂ ॥ ೫೩ ॥

---

೪೯. ಹನ್ನೆರಡುಕೋಟಿ ಲಿಂಗಗಳನ್ನು ಸ್ವರ್ಣಕಮಲ (ಹೊಂದಾವರೆ) ಗಳಿಂದ ಹನ್ನೆರಡುಕಲ್ಪಗಳಕಾಲ ಪೂಜಿಸುವುದರಿಂದಾಗುವ ಫಲವು ಒಂದು ಕ್ಷೇತ್ರ ಸಾಲಗ್ರಾಮುವನ್ನು ಒಂದುದಿನ ಪೂಜಿಸುವುದರಿಂದಲೇ ಆಗುವುದು.

೫೦. ಭಕ್ತಿಯಿಂದ ನೂರು ಸಾಲಗ್ರಾಮುಗಳನ್ನು ಪೂಜಿಸುವುದರಿಂದಾಗುವ ಫಲವನ್ನು ನಾನು ನೂರು ವರ್ಷಗಳಿಂದಲೂ ಹೇಳಿ ಮುಗಿಸಲಾರೆನು.

೫೧. ವಸುಂಧರೇ, ಸರ್ವದೇವತೆಗಳ ಪ್ರತಿಮೆಗಳನ್ನೂ ಮಣಿಗಳಿಂದ ಕಲ್ಪಿತವಾದ ಲಿಂಗಗಳನ್ನೂ ಸರ್ವವರ್ಣಗಳವರೂ ಪೂಜಿಸಬಹುದು.

೫೨. ಸಾಲಗ್ರಾಮುವನ್ನು ಮಾತ್ರ ಹೀನವರ್ಣದವರು ಮುಟ್ಟಬಾರದು. ಸಾಲಗ್ರಾಮಕ್ಕೆ ಸ್ತ್ರೀಶೂದ್ರರ ಹಸ್ತಸ್ಪರ್ಶವು ವಜ್ರಾಯುಧಸ್ಪರ್ಶಕ್ಕಿಂತಲೂ ಕಠಿನವಾದುದೆನಿಸುವುದು.

೫೩. ಶೂದ್ರರಾಗಲಿ, ಸ್ತ್ರೀಯರಾಗಲಿ, ಮೋಹದಿಂದ ಸಾಲಗ್ರಾಮುವನ್ನು ಮುಟ್ಟಿದರೆ ಪ್ರಳಯಕಾಲದವರೆಗೂ ಅವರು ಘೋರನರಕದಲ್ಲಿ ಬೇಯುವರು.

ಯದಿ ಭಕ್ತಿರ್ಭವೇತ್ತಸ್ಯ ಸ್ತ್ರೀಣಾಂ ವಾಪಿ ವಸುಂಧರೇ ।
ದೂರಾದೇವಾಸ್ಪೃಶನ್ಪೂಜಾಂ ಕಾರಯೇತ್ಸುಸಮಾಹಿತಃ ॥ ೫೪ ॥

ಚರಣಾಮೃತಪಾನೇನ ಸರ್ವಪಾಪಕ್ಷಯೋ ಭವೇತ್ ।
ಅಭಕ್ಷ್ಯಂ ಶಿವನಿರ್ಮಾಲ್ಯಂ ಪತ್ರಂ ಪುಷ್ಪಂ ಫಲಂ ಜಲಂ
ಸಾಲಗ್ರಾಮಶಿಲಾಯೋಗಾತ್ಪಾವನಂ ತದ್ಭವೇತ್ಸದಾ ॥ ೫೫ ॥

ದದ್ಯಾದ್ಭಕ್ತಾಯ ಯೋ ದೇವಿ ಸಾಲಗ್ರಾಮಶಿಲಾಂ ನರಃ ।
ಸುವರ್ಣಸಹಿತಾಂ ತಸ್ಯ ಯತ್ಪುಣ್ಯಂ ತಚ್ಛೃಣುಷ್ವ ಮೇ ॥ ೫೬ ॥

ಸುವರ್ಣಸಹಿತಾ ಭೂಮಿಸ್ಸಪರ್ವತವನಾಕರಾ ।
ಸಸಮುದ್ರಾ ಭವೇದ್ದತ್ತಾ ಸತ್ಪಾತ್ರಾಯ ವಸುಂಧರೇ ॥ ೫೭ ॥

---

೫೪. ವಸುಂಧರೇ, ಶೂದ್ರರಿಗೂ, ಸ್ತ್ರೀಯರಿಗೂ ಭಕ್ತಿಯುಂಟಾಗಿ ಪೂಜಿಸಲು ಕುತೂಹಲವಾದರೆ, ಸಾಲಗ್ರಾಮವನ್ನು ಮುಟ್ಟದಂತೆ ದೂರದಿಂದಲೇ ಅವರಿಂದ ಶಾಂತನಾಗಿ ಪೂಜೆಯನ್ನು ಮಾಡಿಸಬೇಕು.

೫೫. ಪರಮಾತ್ಮನ ಚರಣಾಮೃತಪಾನದಿಂದ ಸರ್ವಪಾಪಗಳೂ ನಾಶವಾಗುವುವು. ಶಿವನಿರ್ಮಾಲ್ಯವು ಅಸೇವ್ಯವಾದುದು. ಶಿವಾರ್ಪಿತವಾದ ಪತ್ರವೂ, ಪುಷ್ಪವೂ, ಫಲವೂ, ಜಲವೂ, ಸಾಲಗ್ರಾಮಶಿಲಾಸಂಬಂಧದಿಂದ ಪಾವನವಾಗುವುದು.

೫೬. ದೇವೀ, ಸುವರ್ಣಸಹಿತವಾಗಿ ಸಾಲಗ್ರಾಮಮೂರ್ತಿಯನ್ನು ಭಕ್ತನಾದವನಿಗೆ ದಾನಮಾಡುವವನು ಪಡೆಯುವ ಪುಣ್ಯವನ್ನು ಹೇಳುತ್ತೇನೆ. ಕೇಳು.

೫೭. ವಸುಂಧರೇ, ಸಾಲಗ್ರಾಮದಾನಮಾಡಿದರೆ ಪರ್ವತವನಗಳಿಂದಲೂ ಸಮುದ್ರದಿಂದಲೂ ಕೂಡಿದ ಭೂಮಂಡಲವನ್ನೇ ಸುವರ್ಣಸಹಿತವಾಗಿ ಸತ್ಪಾತ್ರಕ್ಕೆ ದಾನಮಾಡಿದಂತಾಗುವುದು.

ಸಾಲಗ್ರಾಮಶಿಲಾಯಾಸ್ತು ಮೂಲ್ಯಮುದ್ಘಾಟಯೇತ್ಕ್ವಚಿತ್ ।
ವಿಕ್ರೇತಾ ಕ್ರಯಕರ್ತಾ ಚ ನರಕೇ ನೀಯತೇ ಧ್ರುವಂ ॥ ೫೮ ॥

ಪೂಜಾಫಲಂ ನ ಶಕ್ನೋತಿ ವಕ್ತುಂ ವರ್ಷಶತೈರಪಿ ॥ ೫೯ ॥

ಏತತ್ತೇ ಕಥಿತಂ ಗುಹ್ಯಂ ಪ್ರತಿಮಾಸ್ಥಾಪನಂ ಪ್ರತಿ ।
ಸಾಲಗ್ರಾಮೇ ವಿಶೇಷಶ್ಚ ಲಿಂಗಾದೀನಾಂ ಚ ಯೋ ಭವೇತ್ ॥
ಪೂಜನಾದೌ ವಿಧಿಶ್ಚಾಪಿ ಕಿಮನ್ಯಚ್ಛ್ರೋತುಮಿಚ್ಛಸಿ ॥ ೬೦ ॥

ಇತಿ ಶ್ರೀವರಾಹಪುರಾಣೇ ಪ್ರಾಗಿತಿಹಾಸೇ ಭಗವಚ್ಛಾಸ್ತ್ರೇ ರೌಪ್ಯಸೌವರ್ಣಾರ್ಚಾಸ್ಥಾಪನಂ ನಾಮ ಷಡಶೀತ್ಯಧಿಕಶತತಮೋಽಧ್ಯಾಯಃ

೫೮–೫೯. ಸಾಲಗ್ರಾಮಶಿಲೆಯ ಬೆಲೆಯನ್ನು ಪ್ರಕಟಿಸಿ ವಿಕ್ರಯಿಸುವವನೂ, ಕೊಂಡುಕೊಳ್ಳುವವನೂ ನಿಜವಾಗಿಯೂ ನರಕಕ್ಕೆ ಹೋಗುವರು. ಸಾಲಗ್ರಾಮಮೂರ್ತಿಯ ಪೂಜಾಫಲವನ್ನು ನೂರುವರ್ಷಗಳಲ್ಲಿಯೂ ಹೇಳಲು ಸಾಧ್ಯವಿಲ್ಲ.

೬೦. ದೇವೀ, ರಹಸ್ಯವಾದ ಈ ದೇವವಿಗ್ರಹಪ್ರತಿಷ್ಠೆಯ ವಿಚಾರವನ್ನೂ ಸಾಲಗ್ರಾಮಗಳ ಮತ್ತು ಲಿಂಗಾದಿಗಳ ವಿಶೇಷವೇನೆಂಬುದನ್ನೂ, ದೇವ ಪೂಜಾದಿಗಳ ವಿಧಿಯನ್ನೂ ನಿನಗೆ ಹೇಳಿದುದಾಯಿತು. ಬೇರಾವುದನ್ನು ಕೇಳಲಿಚ್ಛಿಸುವೆ ?

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಬೆಳ್ಳಿಯ ಮತ್ತು ಚಿನ್ನದ ವಿಗ್ರಹಗಳ ನಿರ್ಮಾಣಕ್ರಮವನ್ನೂ, ಸಮಂತ್ರವಾಗಿ ಪ್ರತಿಷ್ಠೆಮಾಡುವ ಮತ್ತು ಪೂಜಿಸುವ ವಿಧಾನವನ್ನೂ, ಪ್ರತಿಷ್ಠಾಫಲವನ್ನೂ, ಮನೆಗಳಲ್ಲಿ ಪೂಜಿಸಬಹುದಾದ ದೇವ ಮೂರ್ತಿಗಳ ಸಂಖ್ಯೆಯನ್ನೂ, ಸಾಲಗ್ರಾಮಮೂರ್ತಿಯಲ್ಲಿ ಏಕಮೂರ್ತಿಯನ್ನಾಗಲಿ, ದ್ವಿಮೂರ್ತಿಗಳನ್ನು ಬಿಟ್ಟು ಬೇರೆಯ ಸಮಸಂಖ್ಯಾ ಮೂರ್ತಿಗಳನ್ನಾಗಲಿ ಪೂಜಿಸಬೇಕೆಂಬುದನ್ನೂ, ಸಾಲಿಗ್ರಾಮದ ದ್ವಾದಶಮೂರ್ತಿಗಳ ಮತ್ತು ಶತಮೂರ್ತಿಗಳ ಪೂಜಾಮಹಿಮೆಯನ್ನೂ, ಸುವರ್ಣಸಹಿತವಾಗಿ ಸಾಲಗ್ರಾಮವನ್ನು ದಾನಮಾಡುವುದರ ಫಲವನ್ನೂ, ವಿಷ್ಣುಪಾದತೀರ್ಥಮಹಿಮೆ ಮೊದಲಾದ ವಿಚಾರಗಳನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೆಂಬತ್ತಾರನೆಯ ಅಧ್ಯಾಯ.

॥ ಶ್ರೀರಸ್ತು ॥

ಸಪ್ತಾಶೀತ್ಯಧಿಕಶತತಮೋಽಧ್ಯಾಯಃ

ಅಥ ಪಿತೃಯಜ್ಞಃ

॥ ಸೂತ ಉವಾಚ ॥

ಏವಂ ನಾರಾಯಣಾಚ್ಛ್ರುತ್ವಾ ಸಾ ಮಹೀ ಸಂಶಿತವ್ರತಾ ।
ಕರಾಭ್ಯಾಮಂಜಲಿಂ ಕೃತ್ವಾ ಮಾಧವಂ ಪುನರಬ್ರವೀತ್ ॥ ೧ ॥

॥ ಧರಣ್ಯುವಾಚ ॥

ಶ್ರುತಮೇತನ್ಮಯಾಖ್ಯಾನಂ ಕ್ಷೇತ್ರಸ್ಯ ಚ ಮಹತ್ಫಲಂ ।
ಏಕಂ ಮೇ ಪರಮಂ ಗುಹ್ಯಂ ತದ್ಭವಾನ್ವಕ್ತುಮರ್ಹತಿ ॥ ೨ ॥

ನೂರೆಂಬತ್ತೇಳನೆಯ ಅಧ್ಯಾಯ

ಪಿತೃಯಜ್ಞ.

೧. ತೀಕ್ಷ್ಣವ್ರತೆಯಾದ ಆ ಭೂದೇವಿಯು ಲಕ್ಷ್ಮೀಪತಿಯಾದ ನಾರಾಯಣನಿಂದ ವಿಗ್ರಹಸ್ಥಾಪನಾದಿವಿಚಾರಗಳನ್ನು ಕೇಳಿ, ಆತನಿಗೆ ಕೈಮುಗಿದು, ಮತ್ತೆ ಮಾತನಾಡಿದಳು.

೨-೩. ಭೂದೇವಿ—ನೀನು ಹೇಳಿದ ಈ ಮಹಾಖ್ಯಾನವನ್ನೂ, ಕ್ಷೇತ್ರದ ಮಹಾಫಲವನ್ನೂ ನಾನು ಕೇಳಿದೆನು. ಪರಮರಹಸ್ಯವಾದ ಪಿತೃಯಜ್ಞದ

ಪಿತೃಯಜ್ಞಸ್ಯ ಮಾಹಾತ್ಮ್ಯಂ ಸೋಮದತ್ತೋ ನರಾಧಿಪಃ ।
ಮೃಗಯಾಂ ಸಮುಪಾಗಮ್ಯ ಯತ್ತ್ವಯಾ ಪೂರ್ವಭಾಷಿತಂ ॥ ೩ ॥

ಕೋ ಗುಣಃ ಪಿತೃಯಜ್ಞಸ್ಯ ಕಥಮೇವ ಪ್ರಯುಜ್ಯತೇ ।
ಕೇನ ಚೋತ್ಪಾದಿತಂ ಶ್ರಾದ್ಧಂ ಕಸ್ಮಿನ್ನರ್ಥೇ ಕಿಮಾತ್ಮಕಂ ॥ ೪ ॥

ಏತದಿಚ್ಛಾಮ್ಯಹಂ ಶ್ರೋತುಂ ವಿಸ್ತರೇಣ ವದಸ್ವ ಮೇ ॥ ೫ ॥

॥ ಶ್ರೀವರಾಹ ಉವಾಚ ॥

ಸಾಧು ಭೂಮೇ ಮಹಾಭಾಗೇ ಯನ್ಮಾಂ ತ್ವಂ ಪರಿಪೃಚ್ಛಸಿ ।
ಮೋಹಿತಾಸಿ ವರಾರೋಹೇ ಭಾರಾಕ್ರಾಂತಾ ವಸುಂಧರೇ ।
ದಿವ್ಯಾಂ ದದಾಮಿ ತೇ ಬುದ್ಧಿಂ ಶೃಣು ಸುಂದರಿ ತತ್ತ್ವತಃ ॥ ೬ ॥

ಕಥಯಿಷ್ಯಾಮಿ ತೇ ಹ್ಯೇವಂ ಶ್ರಾದ್ಧೋತ್ಪತ್ತಿವಿನಿಶ್ಚಯಂ ।
ಆದೌ ಸ್ವರ್ಗಸ್ಯ ಚೋತ್ಪತ್ತಿಂ ದೇವಾನಾಂ ಚ ವರಾನನೇ ॥ ೭ ॥

ಮಹಿಮೆಯೊಂದನ್ನು ನೀನು ನನಗೆ ಹೇಳಬೇಕು. ಸೋಮದತ್ತನೆಂಬ ದೊರೆಯು ಬೇಟೆಗೆ ಬಂದನೆಂದು ನೀನು ಹಿಂದೆ ಹೇಳಿದೆ.

೪-೫. ಪಿತೃಯಜ್ಞದ ಗುಣವೇನು ? ಅದನ್ನು ಮಾಡುವುದು ಹೇಗೆ ? ಯಾರು ಯಾರಿಗಾಗಿ ಯಾವ ರೀತಿಯಾಗಿ ಶ್ರಾದ್ಧವನ್ನು ಕಲ್ಪಿಸಿದರು ? ನಾನು ಇದನ್ನು ವಿಸ್ತಾರವಾಗಿ ಕೇಳಲು ಬಯಸುತ್ತೇನೆ. ಹೇಳು.

೬. ಶ್ರೀವರಾಹ—ಮಹಾಭಾಗ್ಯೇ, ಭೂಮೀ, ನೀನು ನನ್ನನ್ನು ಕೇಳುತ್ತಿದ್ದೀಯೆ. ಒಳ್ಳೆಯದಾಯಿತು. ವರಾರೋಹೇ, ವಸುಂಧರೇ, ನೀನು ಭಾರವನ್ನು ಹೊತ್ತು ಮೋಹಿತಳಾಗಿರುವೆ. ನಿನಗೆ ದಿವ್ಯಬುದ್ಧಿಯನ್ನು ಕೊಡುತ್ತೇನೆ. (ನಿಜವಾಗಿ) ತಾತ್ವಿಕವಾಗಿ ಕೇಳು.

೭ ವರಾನನೇ, ಶ್ರಾದ್ಧೋತ್ಪತ್ತಿನಿರ್ಣಯವಿಚಾರವನ್ನು ನಿನಗೆ ಹೇಳುವೆನು. ಆದರೆ ಮೊದಲು ಸ್ವರ್ಗದ ಮತ್ತು ದೇವತೆಗಳ ಉತ್ಪತ್ತಿಯನ್ನು ಹೇಳುತ್ತೇನೆ.

ನಿಷ್ಪ್ರಭೇಽಸ್ಮಿನ್ನಿರಾಲೋಕೇ ಸರ್ವತಸ್ತಮಸಾವೃತೇ ।
ಸ್ರಷ್ಟುಂ ವೈ ಬುದ್ಧಿರುತ್ಪನ್ನಾ ತ್ರೈಲೋಕ್ಯಂ ಸಚರಾಚರಂ ॥ ೮ ॥

ಸೋಽಹಂ ಚ ಶೇಷಪರ್ಯಂಕೇ ಏಕಶ್ಚೈವ ಪರಾಙ್ಮುಖಃ ।
ಸ್ವಪಾಮಿ ಚ ವರಾರೋಹೇ ಅನಂತಶಯನೇ ಹ್ಯಹಂ ॥ ೯ ॥

ನಿದ್ರಾಂ ಮಾಯಾಮಯೀಂ ಕೃತ್ವಾ ಜಾಗರ್ಮಿ ಚ ಸ್ವಪಾಮಿ ವಾ ।
ವಿಷ್ಣುಮಾಯಾಮಯಂ ಕೃತ್ವಾ ಜಾನಾಸಿ ತ್ವಂ ನ ಧಾರಿಣಿ ॥ ೧೦ ॥

ಯುಗಂ ಯುಗಸಹಸ್ರಾಣಿ ಯಾಸ್ಯಂತಿ ಚ ಗತಾನಿ ಚ ।
ನ ತ್ವಂ ಮಮ ವಿಜಾನಾಸಿ ಜ್ಞಾತುಂ ಮಾಯಾಂ ಯಶಸ್ವಿನಿ ॥ ೧೧ ॥

ಧಾರಿತಂ ಮಮ ಸುಶ್ರೋಣಿ ದಿವಾ ಪಂಚಶತಾನಿ ಚ ।
ವಾರಾಹಂ ರೂಪಮಾದಾಯ ನ ಜಾನಾಸಿ ಹಿ ಭಾಮಿನಿ ॥ ೧೨ ॥

---

೮. ಕಾಂತಿಯೂ, ಬೆಳಕೂ ಇಲ್ಲದೆ ಎಲ್ಲೆಲ್ಲೂ ತಕ್ಕಲೆ ಆವರಿಸಿರಲಾಗಿ ನನಗೆ ಚರಾಚರಗಳಿಂದಕೂಡಿದ ಮೂರುಲೋಕಗಳನ್ನೂ ಸೃಷ್ಟಿಸಬೇಕೆಂಬ ಬುದ್ಧಿಯುಂಟಾಯಿತು.

೯. ವರಾರೋಹೇ, ಆ ಕಾಲದಲ್ಲಿ ನಾನೂ ಒಬ್ಬನೇ ಶೇಷಶಯ್ಯೆಯಲ್ಲಿ ಲೋಕ ಪರಾಙ್ಮುಖನಾಗಿ ಮಲಗಿದ್ದೆನು.

೧೦. ಮಾಯಾಮಯವಾದ ನಿದ್ದೆಯನ್ನು ಮಾಡಿ ಮಲಗುತ್ತಲೂ, ಎಚ್ಚರಗೊಳ್ಳುತ್ತಲೂ ಇದ್ದೆನು. ವಿಷ್ಣುಮಾಯಾಮಯಳಾದ ನೀನು ಅದನ್ನು ಅರಿಯೆ.

೧೧. ಕೀರ್ತಿವಂತೇ, ಯುಗವೂ, ಸಾವಿರಾರುಯುಗಗಳೂ ಬಂದು ಕಳೆದುಹೋದುವು. ಆದರೂ ನೀನು ನನ್ನ ಮಾಯೆಯನ್ನು ತಿಳಿಯೆ.

೧೨. ಭಾಮಿನೀ, ಸುಶ್ರೋಣೀ, ನಾನು ವರಾಹರೂಪವನ್ನು ಧರಿಸಿ ನಿನ್ನನ್ನು ಐದುನೂರು ದಿನ ಧರಿಸಿದುದೂ ನಿನಗೆ ತಿಳಿಯದು.

ಯನ್ಮಾಂ ಪೃಚ್ಛಸಿ ವೈ ಜ್ಞಾತುಮಾತ್ಮಾನಂ ಚ ಯಶಸ್ವಿನಿ |
ಏಕಮೂರ್ತಿಸ್ತ್ರಿಧಾ ಜಾತೋ ಬ್ರಹ್ಮವಿಷ್ಣುಹರಾತ್ಮಕಃ || ೧೩ ||

ಕ್ರೋಧಹೇತೋರ್ಮಯಾ ಸೃಷ್ಟ ಈಶ್ವರೋಽಸುರನಾಶನಃ |
ಮಮ ನಾಭ್ಯಾಸಮುತ್ಪನ್ನಃ ಪದ್ಮಗರ್ಭಃ ಪಿತಾಮಹಃ || ೧೪ ||

ಏವಂ ತ್ರಯೋ ವಯಂ ದೇವಾಃ ಕೃತ್ವಾ ಹ್ಯೇಕಾರ್ಣವಾಂ ಮಹೀಂ |
ತಿಷ್ಠಾಮಃ ಪರಮಪ್ರೀತ್ಯಾ ಮಾಯಾಂ ಕೃತ್ವಾ ತು ವೈಷ್ಣವೀಂ || ೧೫ ||

ಸರ್ವಂ ತಜ್ಜಲಪೂರ್ಣಂ ತು ನ ಚಾಜ್ಞಾಯತ ಕಿಂಚನ |
ವಟಮೇಕಂ ವರ್ಜಯಿತ್ವಾ ವಿಷ್ಣುಮೂಲಂ ಯಶೋದ್ರುಮಂ || ೧೬ ||

ತಿಷ್ಠಾಮಿ ವಟವೃಕ್ಷೇಽಹಂ ಮಾಯಯಾ ಬಾಲರೂಪಧೃಕ್ |
ಪಶ್ಯಾಮಿ ಚ ಜಗತ್ಸರ್ವಂ ತ್ರೈಲೋಕ್ಯಂ ಯನ್ಮಯಾ ಕೃತಂ || ೧೭ ||

---

೧೩. ಯಶೋವತೀ, ನನ್ನನ್ನು, ಅಥವಾ ಆತ್ಮವಿಚಾರವನ್ನು ಅರಿಯ ಬೇಕೆಂದು ನೀನು ಕೇಳುತ್ತಿರುವುದರಿಂದ ಹೇಳುವೆನು. ಏಕಮೂರ್ತಿಯಾದ ನಾನು ಬ್ರಹ್ಮವಿಷ್ಣುಶಿವಾತ್ಮಕನಾಗಿ ಮೂರುರೂಪವುಳ್ಳವನಾದೆನು.

೧೪. ಕೋಪಕ್ಕಾಗಿ ಅಸುರನಾಶಕನಾದ ಈಶ್ವರನನ್ನು ಸೃಷ್ಟಿಸಿದೆನು. ನನ್ನ ನಾಭಿಕಮಲದಲ್ಲಿ ಪಿತಾಮಹನೆನಿಸಿಕೊಳ್ಳುವ ಬ್ರಹ್ಮನುದಿಸಿದನು.

೧೫. ಹೀಗಾದ ನಾವು ತ್ರಿಮೂರ್ತಿಗಳೂ ವೈಷ್ಣವಮಾಯೆಯಿಂದ ಭೂಮಿಯನ್ನು ಏಕಾರ್ಣವವನ್ನಾಗಿ ಮಾಡಿ, ಪರಮಪ್ರೀತಿಯಿಂದಿದ್ದೆವು.

೧೬. ಎಲ್ಲವೂ, ಜಲಮಯವಾಗಿದ್ದಿತು. ವಿಷ್ಣುಮೂಲವೂ, ಯಶಃ ಕಾಂಡವೂಉಳ್ಳ ವಟ(ಆಲ)ವೊಂದು ಹೊರತು ಬೇರಾವುದೂ ಕಾಣು (ತಿಳಿಯು)ತ್ತಿರಲಿಲ್ಲ.

೧೭. ನಾನು ಮಾಯೆಯಿಂದ ಬಾಲರೂಪವನ್ನು ಧರಿಸಿ, ಆಲದಮರದ ಮೇಲೆ ಇದ್ದು, ನನ್ನಿಂದಾದ ಮೂರುಲೋಕಗಳನ್ನೂ ನೋಡುತ್ತಿದ್ದೆನು.

ಧಾರಯಾಮಿ ವರಾರೋಹೇ ಜಾನಾಸಿ ತ್ವಂ ಧರೇ ಶುಭೇ |
ಕಾಲೇನ ತು ತದಾ ದೇವಿ ಕೃತ್ವಾ ವೈ ವಡವಾಮುಖಂ ||
ವಿನಿಸ್ಸೃತಂ ಜಲಂ ತತ್ರ ಮಾಯಯಾ ತದನಂತರಂ || ೧೮ ||

ಪ್ರಲಯೇ ಚ ವಿನಿರ್ವೃತ್ತೇ ಬ್ರಹ್ಮಾ ಲೋಕಪಿತಾಮಃ |
ಮುಹೂರ್ತಂ ಧ್ಯಾನಮಾಸ್ಥಾಯ ಭಾಷಿತೋ ವಚನಂ ಮಯಾ || ೧೯ ||

ಶ್ರೀಘ್ರಮುತ್ಪಾದಯ ಬ್ರಹ್ಮನ್ದೇವತಾಸುರಮಾನುಷಾನ್ || ೨೦ ||

ಏವಮುಕ್ತೋ ಮಯಾ ದೇವಿ ಗೃಹ್ಯ ತತ್ರ ಕಮಂಡಲುಂ |
ಉಪಸ್ಪೃಶ್ಯ ಶುಚಿರ್ಭೂತ್ವಾ ಬ್ರಹ್ಮಾಚೋತ್ಪಾದಯತ್ಸುರಾನ್ || ೨೧ ||

ಆದಿತ್ಯಾ ವಸವೋ ರುದ್ರಾ ಅಶ್ವಿನೌ ಚ ಮರುದ್ಗಣಾಃ ।
ತಾರಣಾರ್ಥಂ ಚ ಸರ್ವೇಷಾಂ ಬ್ರಾಹ್ಮಣಾನ್ಭುವಿ ದೈವತಾನ್ || ೨೨ ||

---

೧೮. ಧರೇ ಶುಭೇ, ವರಾರೋಹೇ ಆಗಿನಿಂದ ನಿನ್ನನ್ನು ಧರಿಸುತ್ತೇನೆಂಬುದನ್ನು ಈಗ ನೀನು ತಿಳಿಯುತ್ತೀಯೆ. ದೇವೀ, ನಾನು ಆಗ ಬಡಬಾಮುಖವನ್ನು ಮಾಯೆಯಿಂದ ಸೃಷ್ಟಿಸಿದೆನು. ಆಮೇಲೆ ಅಲ್ಲಿ ನೀರು ಹೊರಟು ಹೋಯಿತು.

೧೯–೨೦. ಪ್ರಳಯವು ಕಳೆದುಹೋಗಲಾಗಿ ಲೋಕಪಿತಾಮಹನಾದ ಬ್ರಹ್ಮನಿಗೆ ನಾನು ಮುಹೂರ್ತಕಾಲ ಆಲೋಚಿಸಿ, 'ಬ್ರಹ್ಮನೇ, ದೇವಾಸುರನರರನ್ನು ಬೇಗನೆ ಸೃಜಿಸು.' ಎಂದು ಹೇಳಿದೆನು.

೨೧. ದೇವಿ, ಹಾಗೆ ನನ್ನಿಂದ ಹೇಳಿಸಿಕೊಂಡ ಆತನು ಕಮಂಡಲುವನ್ನು ತೆಗೆದುಕೊಂಡು, ಅಲ್ಲೇ ಆಚಮನವನ್ನು ಮಾಡಿ, ಶುಚಿಯಾಗಿ ದೇವತೆಗಳನ್ನು ಸೃಷ್ಟಿಸಿದನು.

೨೨ ಬಳಿಕ, ಆದಿತ್ಯರೂ, ವಸುಗಳೂ, ರುದ್ರರೂ, ಅಶ್ವಿನೀದೇವರೂ, ಮರುದ್ಗಣದವರೂ ಸೃಷ್ಟರಾದರು. ಎಲ್ಲರ ತಾರಣಾರ್ಥವಾಗಿ ಭೂಲೋಕದಲ್ಲಿ ದೇವತೆಗಳಾದ ಬ್ರಾಹ್ಮಣರನ್ನೂ ಬ್ರಹ್ಮನು ಸೃಷ್ಟಿಸಿದನು.

ಬಾಹುಭ್ಯಾಂ ಕ್ಷತ್ರಮುತ್ಪನ್ನಂ ವೈಶ್ಯಾ ಊರುವಿನಿಸ್ಸೃತಾಃ ।
ಪದ್ಭ್ಯಾಂ ವಿನಿಸ್ಸೃತಾಶ್ಶೂದ್ರಾಸ್ಸರ್ವವರ್ಣೋಪಚಾರಕಾಃ ॥ ೨೩ ॥

ದೇವತಾಶ್ಚಾಸುರಾ ದೇವಿ ಜಾತಾಸ್ತೇ ಬ್ರಹ್ಮಣಸ್ತಥಾ ।
ದೇವತಾ ಹ್ಯಸುರಾಸ್ಸರ್ವೇ ತಪೋವೀರ್ಯಬಲಾನ್ವಿತಾಃ ॥ ೨೪ ॥

ಆದಿತ್ಯಾ ವಸವೋ ರುದ್ರಾ ಅಶ್ವಿನೌ ಚ ಮರುದ್ಗಣಾಃ ।
ದೇವತಾಸ್ತು ತ್ರಯಸ್ತ್ರಿಂಶದದಿತ್ಯಾಂ ಜನಯನ್ಪುರಾ ॥ ೨೫ ॥

ದಿತ್ಯಾ ಚ ಜನಿತಾಃ ಪುತ್ರಾ ಅಸುರಾಸ್ಸುರಶತ್ರವಃ ।
ಪ್ರಜಾಪತಿಶ್ಚಾಜನಯದೃಷೀಂಶ್ಚೈವ ತಪೋಧನಾನ್ ॥ ೨೬ ॥

ತೇಜಸಾ ಭಾಸ್ಕರಾಕಾರಾಸ್ಸರ್ವೇ ಶಾಸ್ತ್ರವಿದೋದ್ವಿಜಾಃ ।
ತೇಷಾಂ ಪುತ್ರಾಶ್ಚ ಪೌತ್ರಾಶ್ಚ ಜನಿತಾ ಬ್ರಹ್ಮಸೂನುನಾ ॥ ೨೭ ॥

---

೨೩. ಬ್ರಹ್ಮನ ಬಾಹುಗಳಿಂದ ಕ್ಷತ್ರಿಯರುದಿಸಿದರು. ವೈಶ್ಯರು ತೊಡೆಯಿಂದುದಿಸಿದರು. ಸರ್ವವರ್ಣದವರ ಉಪಚಾರಕರಾದ ಶೂದ್ರರು ಪಾದಗಳಿಂದುದಿಸಿದರು.

೨೪ ದೇವೀ, ಆ ದೇವತೆಗಳೂ ರಾಕ್ಷಸರೂ ಬ್ರಹ್ಮನಿಂದುದಿಸಿದರು. ದೇವಾಸುರರೆಲ್ಲರೂ ತಪೋವೀರ್ಯಬಲಗಳುಳ್ಳವರು.

೨೫. ಆದಿತ್ಯರು, ವಸುಗಳು, ರುದ್ರರು, ಅಶ್ವೀನಿದೇವತೆಗಳು, ಮರುತ್ತುಗಳ ಗುಂಪಿನವರು ಎಂಬ ಮೂವತ್ತಮೂರು (ಬಗೆಯ) ದೇವತೆಗಳು ಕಶ್ಯಪರಿಂದ ಅದಿತಿದೇವಿಯಲ್ಲಿ ಪೂರ್ವದಲ್ಲಿ ಜನಿಸಿದರು.

೨೬. ಕಶ್ಯಪಪತ್ನಿಯಾದ ದಿತಿದೇವಿಯಲ್ಲಿ ಸುರದ್ವೇಷಿಗಳಾದ ಅಸುರರು ಜನಿಸಿದರು. ಬ್ರಹ್ಮನು ತಪೋಧನರಾದ ಋಷಿಗಳನ್ನೂ ಸೃಷ್ಟಿಸಿದನು.

೨೭. ತೇಜದಿಂದ ಸೂರ್ಯಾಕಾರರೂ, ಶಾಸ್ತ್ರಜ್ಞರೂ ಆದ ಎಲ್ಲಾ ದ್ವಿಜರೂ, ಅವರ ಮಕ್ಕಳು ಮೊಮ್ಮಕ್ಕಳೂ ಬ್ರಹ್ಮಪುತ್ರನಿಂದ ಜನಿಸಿದರು.

ನಿಮೇಸ್ತು ವಂಶಸಂಭೂತೋ ಆತ್ರೇಯ ಇತಿ ವಿಶ್ರುತಃ ।
ಜಾತಮಾತ್ರೋ ಮಹಾತ್ಮಾ ಸ ಶ್ರೀಮಾಂಶ್ಚಾಪಿ ತಪೋನಿಧಿಃ ॥ ೨೮ ॥

ಏಕಚಿತ್ತಂ ಸಮಾಧಾಯ ತಪಶ್ಚರತಿ ನಿಶ್ಚಲಃ ।
ಪಂಚಾಗ್ನಿರ್ವಾಯುಭಕ್ಷಶ್ಚ ಏಕಪಾದೋರ್ಧ್ವಬಾಹುಕಃ ॥ ೨೯ ॥

ಶೀರ್ಣಪರ್ಣಾಂಬುಭಕ್ಷಶ್ಚ ಶಿಶಿರೇ ಚ ಜಲೇಶಯಃ ।
ಸ ಕೃಚ್ಛ್ರೇ ಫಲಭಕ್ಷಶ್ಚ ಪುನಶ್ಚಾಂದ್ರಾಯಣಂ ಚರನ್ ॥ ೩೦ ॥

ವರ್ಷಾಣಾಂ ಚ ಸಹಸ್ರಾಣಿ ತಪಸ್ತಪ್ತ್ವಾ ವಸುಂಧರೇ ।
ಮೃತ್ಯುಕಾಲಮನುಪ್ರಾಪ್ತಸ್ತತಃ ಪಂಚತ್ವಮಾಗತಃ ॥ ೩೧ ॥

---

೨೮. ನಿಮಿಯೆಂಬ ಮುನಿಯ ವಂಶದಲ್ಲಿ ಜನಿಸಿ, ಶ್ರೀಮಂತನೆಂದೂ, ಆತ್ರೇಯನೆಂದೂ ಪ್ರಸಿದ್ಧನಾದ ಋಷಿಯು, ಜನಿಸಿದಾಗಲೇ ಮಹಾತ್ಮನೂ ತಪೋನಿಧಿಯೂ ಆಗಿದ್ದನು.

೨೯. ಆ ಮುನಿಯು ಏಕಚಿತ್ತನಾಗಿ, ಪಂಚಾಗ್ನಿಮಧ್ಯದಲ್ಲಿ ಸ್ಥಿರನಾಗಿ ಒಂದು ಕಾಲಿನಲ್ಲಿ ನಿಂತು, ವಾಯುಭಕ್ಷ (ನಿರಾಹಾರ) ನಾಗಿ, ತೋಳುಗಳನ್ನು ಮೇಲೆತ್ತಿ ತಪಸ್ಸನ್ನು ಮಾಡುತ್ತಿದ್ದನು.

೩೦. ಆತನು ಕೆಲವುಕಾಲ ಚಳಿಗಾಲದಲ್ಲ ನೀರಿನಲ್ಲಿ ನಿಂತೂ, ಸಣ್ಣ ಸಣ್ಣ ಅಥವಾ ಸೀಳಿದ ಎಲೆಗಳನ್ನು ತಿನ್ನುತ್ತಲೂ, ನಿರಾಹಾರನಾಗಿಯೂ, ಕಷ್ಟವಾದಲ್ಲಿ ಫಲಗಳನ್ನು ಸೇವಿಸುತ್ತಲೂ ತಪಸ್ಸನ್ನು ಮಾಡಿ, ಚಾಂದ್ರಾಯಣ ವ್ರತವನ್ನು ಮಾಡುತ್ತಿದ್ದನು.

೩೧. ವಸುಂಧರೇ, ಹೀಗೆ ಆ ಆತ್ರೇಯನು ಸಾವಿರ ವರ್ಷಕಾಲ ತಪಸ್ಸನ್ನು ಮಾಡಿ, ಮರಣಕಾಲವೊದಗಲಾಗಿ ಪಂಚತ್ವವನ್ನೈದಿದನು.

ನಷ್ಟಂ ಚ ತಂ ಸುತಂ ದೃಷ್ಟ್ವಾ ನಿಮೇಶ್ಶೋಕ ಉಪಾವಿಶತ್ |
ಪುತ್ರಶೋಕಾಭಿಸಂಯುಕ್ತೋ ದಿವಾರಾತ್ರೌ ಚ ಚಿಂತಯನ್ || ೩೨ ||

ನಿಮಿಃ ಕೃತ್ವಾ ತತಶ್ಶೋಕಂ ವಿಧಾನಾತ್ತತ್ರ ಮಾಧವಿ |
ತಂ ಮನೋಗತಸಂಕಲ್ಪಂ ತ್ರಿರಾತ್ರೇ ಪ್ರತ್ಯಪದ್ಯತ || ೩೩ ||

ತಸ್ಯ ಪ್ರತಿವಿಶುದ್ಧಸ್ಯ ಮಾಘಮಾಸೇ ತು ದ್ವಾದಶೀಂ |
ಮಾನಸಂ ಸೃಜ್ಯ ವಿಷಯಂ ಬುದ್ಧಿರ್ವಿಸ್ತಾರಗಾಮಿನೀ || ೩೪ ||

ಸ ನಿಮಿಶ್ಚಿಂತಯಾಮಾಸ ಶ್ರಾದ್ಧಕಲ್ಪಂ ಸಮಾಹಿತಃ |
ಯಾನಿ ತಸ್ಯೈವ ಭೋಜ್ಯಾನಿ ಮೂಲಾನಿ ಚ ಫಲಾನಿ ಚ || ೩೫ ||

ಯಾನಿ ಕಾನಿ ಚ ಭಕ್ಷ್ಯಾಣಿ ನವಶ್ಚ ರಸಸಂಭವಃ |
ಯಾನಿ ತಸ್ಯೈವ ಚೇಷ್ಟಾನಿ ಸರ್ವಮೇತದುದಾಹರೇತ್ || ೩೬ ||

---

೩೨. ಆ ಪುತ್ರನು ಮೃತನಾದುದನ್ನು ನೋಡಿ, ನಿಮಿಗೆ ದುಃಖವುಂಟಾಯಿತು. ಪುತ್ರಶೋಕದಿಂದ ಕೂಡಿದ ಆತನು ಹಗಲೂ ರಾತ್ರಿಯೂ ಚಿಂತಿಸುತ್ತಿದ್ದನು.

೩೩. ಮಾಧವೀ, ನಿಮಿಯು ದುಃಖಿಸಿ ಬಳಿಕ ಮೂರು ರಾತ್ರಿಗಳಲ್ಲಿ ಮನಸ್ಸಿಗೆ ತೋರಿದ ವಿಧಿವತ್ತಾದ ಒಂದು ಉದ್ದೇಶ (ಸಂಕಲ್ಪ) ವನ್ನು ಪಡೆದನು.

೩೪. ನಿಮಿಯ ವಿಶಾಲವಾಗಿ ಗಮಿಸುವ ಬುದ್ಧಿಯು ವಿಶುದ್ಧನಾದ ಅವನಿಗೆ, ಮಾಘಮಾಸದ ದ್ವಾದಶಿಯನ್ನು ಮನಸ್ಸಿಗೆ ತಂದಿತು.

೩೫–೩೬. ಆ ನಿಮಿಯು ಸಮಾಧಾನದಿಂದ ಶ್ರಾದ್ಧಕಲ್ಪವನ್ನು ಯೋಚಿಸಿದನು. ಯಾವ ಗೆಣಸುಗಳೂ, ಹಣ್ಣುಕಾಯಿಗಳೂ, ಭಕ್ಷ್ಯಗಳೂ, ಹೊಸದಾದ ರಸದ್ರವ್ಯಗಳೂ ಶ್ರೀಮಂತನಿಗೆ ಭೋಜ್ಯಗಳಾಗಿಯೂ, ಇಷ್ಟವಾದುವುಗಳಾಗಿಯೂ ಇದ್ದುವೋ ಅವೆಲ್ಲವನ್ನೂ ಸಿದ್ಧಪಡಿಸಲು ಹೇಳಿದನು.

ಆಮಂತ್ರ್ಯ +ಬ್ರಾಹ್ಮಣಾನ್ಪೂರ್ವಂ ಶುಚಿರ್ಭೂತ್ವಾ ಸಮಾಹಿತಃ |
ದಕ್ಷಿಣಾವರ್ತತಸ್ಸರ್ವಮಕರೋದೃಷಿಸತ್ತಮಃ || ೩೭ ||

ಸಪ್ತಕೃತ್ವಾ ತತಸ್ತತ್ರ ಯುಗಪತ್ಸಮುಪಾವಿಶತ್ |
ದತ್ವಾತು ಮಾಂಸಶಾಕಾನಿ ಮೂಲಾನಿ ಚ ಫಲಾನಿಚ || ೩೮ ||

ಪೂಜಯಿತ್ವಾ ತು ವಿಪ್ರಾನ್ಸ ಸಪ್ತಕೃತ್ವಶ್ಚ ಸುಂದರಿ |
ಕೃತ್ವಾ ತು ದಕ್ಷಿಣಾಗ್ರಾಂಶ್ಚ ಕುಶಾಂಶ್ಚ ಪ್ರಯತಶ್ಶುಚಿಃ |
ಪ್ರದದೌ ಶ್ರೀಮತೇ ಪಿಂಡಂ ನಾಮಗೋತ್ರಮುದಾಹರನ್ || ೩೯ ||

ತತ್ಕೃತ್ವಾ ಸ ಮುನಿಶ್ರೇಷ್ಠೋ ಧರ್ಮಸಂಕಲ್ಪಮಾತ್ಮನಃ || ೪೦ ||

ಏವಂ ದಿನೇ ಗತೇ ಭದ್ರೇ ಹ್ಯಸ್ತಂ ಪ್ರಾಪ್ತೇ ದಿವಾಕರೇ |
ಬ್ರಹ್ಮಕರ್ಮೋತ್ತಮಂ ದಿವ್ಯಂ ಭಾವಸಾಧ್ಯಮುಪಾಸತ || ೪೧ ||

---

೩೭. ಮೊದಲು ಬ್ರಾಹ್ಮಣರಿಗೆ ಹೇಳಿ, ಕರೆಯಿಸಿ, ಶುಚಿಯಾಗಿ ಸಮಾಧಾನದಿಂದ ಋಷಿವರ್ಯನಾದ ಆ ನಿಮಿಯು (ಉತ್ತರ ಕ್ರಿಯೆಯನ್ನು) ಶ್ರಾದ್ಧವನ್ನೆಲ್ಲಾ ಅಪ್ರದಕ್ಷಿಣವಾಗಿ ಮಾಡಿದನು.

೩೮–೩೯. ಸುಂದರೀ, ಶ್ರಾದ್ಧದಲ್ಲಿ ಒಟ್ಟಿಗೆ ಏಳು ಜನ ಬ್ರಾಹ್ಮಣರನ್ನು ಕುಳ್ಳಿರಿಸಿದನು. ಅವರಿಗೆ ಮಾಂಸಶಾಕಮೂಲಫಲಗಳನ್ನು ಕೊಟ್ಟು, ಅವರೇಳು ಜನರನ್ನೂ ಪೂಜಿಸಿ, ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹಾಸಿ, ನಾಮ ಗೋತ್ರಗಳನ್ನು ಹೇಳಿ ಶ್ರೀಮಂತ (ಆತ್ರೇಯ) ನಿಗೆ ಪಿಂಡವನ್ನು ಹಾಕಿದನು.

೪೦–೪೧. ಮುನಿವರ್ಯನಾದ ಆ ನಿಮಿಯು ಧರ್ಮೋದ್ದೇಶವುಳ್ಳವನಾಗಿ ಆ ಶ್ರಾದ್ಧವನ್ನು ಮಾಡಿ, ಹಗಲು ಕಳೆದು ಸೂರ್ಯನು ಅಸ್ತನಾಗಲು ಭಾವ ಸಾಧ್ಯವೂ, ದಿವ್ಯವೂ ಆದ ಉತ್ತಮ ಬ್ರಹ್ಮಕರ್ಮವನ್ನು ಎಂದರೆ ಸಂಧ್ಯಾವಂದನೆಯನ್ನು ಮಾಡಿದನು.

\+ ಬ್ರಾಹ್ಮಣಂ

+ಏಕಾಕೀ ಯತಚಿತ್ತಾತ್ಮಾ ನಿರಾಶೀ ನಿಷ್ಪರಿಗ್ರಹಃ ।
ಶುಚೌ ದೇಶೇ ಪ್ರತಿಷ್ಠಾಪ್ಯ ಸ್ಥಿರಮಾಸನ ಮಾತ್ಮನಃ ॥ ೪೨ ॥

ನಾತ್ಯುಚ್ಛ್ರಿತಂ ನಾತಿನೀಚಂ ಚ ಚೇಲಾಜಿನಕುಶೋತ್ತರಂ ।
ತತ್ರೈಕಾಗ್ರಂ ಮನಃಕೃತ್ವಾ ಯತಚಿತ್ತೇಂದ್ರಿಯಃ ಜಿತೇಂದ್ರಿಯಃ ।
ಉಪವಿಶ್ಯಾಸನೇಽಯುಂಜದ್ಯೋಗಮಾತ್ಮವಿಶುದ್ಧಯೇ ॥ ೪೩ ॥

ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿತಃ ।
ಸಂಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ ॥ ೪೪ ॥

+ಪ್ರಶಾಂತಾತ್ಮಾ ವಿಗತಭೀರ್ಬ್ರಹ್ಮಚಾರೀ ವ್ರತೇ ಸ್ಥಿತಃ ।
ಸಂಯಮ್ಯ ಮಯಿ ಚಿತ್ತಂ ಯೋ ಯುಕ್ತ ಆಸೀತ ಮತ್ಪರಃ ॥ ೪೫ ॥

ಪ್ರಯುಂಜೀತ ಸದಾತ್ಮಾನಂ ಮದ್ಭಕ್ತೋ ನಾನ್ಯಮಾನಸಃ ॥ ೪೬ ॥

೪೨-೪೩. ಏಕಾಂಗಿಯೂ, ಮನೋದೇಹೇಂದ್ರಿಯಗಳನ್ನು ಸ್ವಾಧೀನ ಪಡಿಸಿಕೊಂಡವನೂ, ನಿರಾಶನೂ, ಅಪೇಕ್ಷಿಸಿ ಯಾವುದನ್ನೂ ಸ್ವೀಕರಿಸಿದವನೂ, ಜಿತೇಂದ್ರಿಯನೂ ಆಗಿ ಶುದ್ಧವಾದ ಸ್ಥಳದಲ್ಲಿ ತನಗೆ ಬಹಳ ಎತ್ತರವಾಗಯಾಗಲಿ, ಕುಳ್ಳಾಗಿಯಾಗಲಿ ಇಲ್ಲದ ವಸ್ತ್ರ ಕೃಷ್ಣಾಜಿನ ದರ್ಭೆಗಳನ್ನು ಹಾಸಿದ ಸ್ಥಿರವಾದ ಪೀಠವನ್ನು ಇಡಿಸಿ, ಅದರಲ್ಲಿ ಏಕಾಗ್ರಮನದಿಂದ ಕುಳಿತು ಬಂಧನಿವೃತ್ತಿ (ಆತ್ಮವಿಶುದ್ಧಿ) ಗಾಗಿ ಯೋಗವನ್ನಾಚರಿಸಬೇಕು.

೪೪-೪೬. ಯೋಗಿಯು ಮೈತಲೆ ಕತ್ತುಗಳನ್ನು ಚಲಿಸದಂತೆ ಸರಿಯಾಗಿ ನಿಲ್ಲಿಸಿ, ಚಲಿಸದೆ ಸ್ಥಿರವಾಗಿ ಕುಳಿತು, ಅತ್ತಿತ್ತ ನೋಡದೆ, ತನ್ನ ಮೂಗಿನ ತುದಿಯನ್ನು ನೊಡುತ್ತ, ಶಾಂತಾ (ಪ್ರಶಾಶಾ) ತ್ಮನೂ, ಭಯರಹಿತನೂ, ಬ್ರಹ್ಮಚರ್ಯವ್ರತದಲ್ಲಿರುವವನೂ ಆಗಿ, ಮನಸ್ಸು ವಿಷಯಗಳಲ್ಲಿ ಹೋಗದಂತೆ ತಡದು, ನನ್ನಲ್ಲಿಯೇ ಚಿತ್ತವನ್ನು ನಿಲ್ಲಿಸಿ, ನನ್ನನ್ನೇ ಆಸಕ್ತನಾಗಿ ಚಿಂತಿಸುತ್ತ ಇರಬೇಕು. ನನ್ನ ಭಕ್ತನು ಅನನ್ಯಮನಸ್ಕನಾಗಿ ಯಾವಾಗಲೂ ನನ್ನಲ್ಲಿಯೇ ಅದನ್ನಿಡಬೇಕು. ನಿಮಿಯು ಈ ರೀತಿಯಾಗಿ ಯೋಗವನ್ನಾಚರಿಸಿದನು.

÷ ೪೨-೪೫= ಭಗವದ್ಗೀತೆ ಅ. ೬, ಶ್ಲೋಕ ೧೦-೧೪.

\+ ಪ್ರಶಾಶಾತ್ಮಾ

ಏವಂ ನಿವೃತ್ತಸಂಧ್ಯಾಯಾಂ ತತೋ ರಾತ್ರಿರುಪಾಗತಾ || ೪೭ ||

ಪುನಶ್ಚಿಂತಿತುಮಾರಬ್ಧಃ ಶೋಕಸಂವಿಗ್ನಮಾನಸಃ |
ಕೃತ್ವಾ ತು ಪಿಂಡಸಂಕಲ್ಪಂ ಪಶ್ಚಾತ್ತಾಪಂ ಚಕಾರಹ || ೪೮ ||

ಅಕೃತಂ ಮುನಿಭಿಸ್ಸರ್ವಂ ಕಿಂ ಮಯಾ ತದನುಷ್ಠಿತಂ |
ನಿವಾಪಕರ್ಮ ಹ್ಯಶುಚಿ ಪುತ್ರಾರ್ಥೇ ವಿನಿಯೋಜಿತಂ |
ಅಹೋ ಸ್ನೇಹಪ್ರಭಾವೇಣ ಮಯಾ ಚಾಕೃತಬುದ್ಧಿನಾ || ೪೯ ||

ಕಥಂ ತೇ ಮುನಯಶ್ಶಾಪಾತ್ಪ್ರದಹೇಯುರ್ನ ಮಾಮಿತಿ |
ಸದೇವಾಸುರಗಂಧರ್ವಪಿಶಾಚೋರಗರಾಕ್ಷಸಾಃ || ೫೦ ||

ಕಿಂ ವಕ್ಷ್ಯಂತಿ ಚ ಮಾಂ ಸರ್ವೇ ಯೇ ವೈ ಪಿತೃಪದೇ ಸ್ಥಿತಾಃ |
ಏವಂ ವಿಚಿಂತ್ಯಮಾನಸ್ಯ ಗತಾ ರಾತ್ರಿರ್ವಸುಂಧರೇ || ೫೧ ||

೪೭–೪೮. ಹೀಗೆ ಸಂಜೆ ಕಳೆಯಲು ಬಳಿಕ ರಾತ್ರಿಯಾಯಿತು. ಶೋಕದಿಂದ ಭಯಗೊಂಡ ಮನಸ್ಸುಳ್ಳ ಆ ನಿಮಿಯು ಮತ್ತೆ ಮುಂದಿನಂತೆ ಚಿಂತಿಸಲಾರಂಭಿಸಿದನು. ಪಿಂಡಸಂಕಲ್ಪವನ್ನು ಮೊದಲು ಮಾಡಿ ಆಗ ಪಶ್ಚಾತ್ತಾಪಗೊಂಡನು.

೪೯. "ಮುನಿಗಳು ಮಾಡದಿರುವುದನ್ನೆಲ್ಲಾ ನಾನೇಕೆ ಮಾಡಿದೆನು! ಅಯ್ಯೋ ವಾತ್ಸಲ್ಯದ ಪ್ರಭಾವದಿಂದ ಬುದ್ಧಿಹೀನನಾದ ನನ್ನಿಂದ ಅಶುಚಿಯಾದ ನಿವಾಪ (ಪಿತೃತರ್ಪಣ) ಕರ್ಮವು ಪುತ್ರನಿಗೆ ಉಪಯೋಗಿಸಲ್ಪಟ್ಟಿತು.

೫೦–೫೧. ಆ ಋಷಿಗಳು ನನ್ನನ್ನು ಹೇಗೆತಾನೆ ಶಾಪಾಗ್ನಿಯಿಂದ ಸುಡದಿರುವರು! ದೇವಾಸುರಗಂಧರ್ವಯಕ್ಷಪಿಶಾಚೋರಗರಾಕ್ಷಸ ಸಹಿತರಾದ ಎಲ್ಲರೂ ಅಲ್ಲದೆ ಪಿತೃಲೋಕದಲ್ಲಿರುವವರೂ ನನ್ನನ್ನೇನೆಂದಾರು!" ಎಂದು ಹೀಗೆ ಆತನು ಚಿಂತಿಸುತ್ತಿರಲು ರಾತ್ರಿಯು ಕಳೆದುಹೋಯಿತು.

ಪೂರ್ವಸಂಧ್ಯಾನುಸಂಪ್ರಾಪ್ತಾ ಉದಿತೇ ಚ ದಿವಾಕರೇ ।
ಸಂಧ್ಯಾವಿಧಿಂ ವಿನಿರ್ವರ್ತ್ಯ ಹುತ್ವಾಗ್ನೀನ್ದ್ವಿಜಸತ್ತಮಃ ॥ ೫೨ ॥

ಪುನಶ್ಚಿಂತಾಂ ಪ್ರಪನ್ನಸ್ಸ ಆತ್ರೇಯೋ ಹ್ಯತಿದುಃಖಿತಃ ।
ಏಕಾಕೀ ಭಾಷತೇ ತತ್ರ ಶೋಕಪೀಡಿತಮಾನಸಃ ॥ ೫೩ ॥

ಧಿಗ್ವಯೋ ಧಿಕ್ಚ ಮೇ ಕರ್ಮ ಧಿಗ್ಬಲಂ ಧಿಕ್ಚ ಜೀವಿತಂ ।
ಪುತ್ರಂ ಸರ್ವಸುಖೈರ್ಯುಕ್ತಂ ಜೀವಿತಂ ಹಿ ನ ದೃಶ್ಯತೇ ॥ ೫೪ ॥

ನರಕಂ ಪೂತಿಕಾಖ್ಯಾತಂ ಹೃದಿ ದುಃಖಂ ವಿದುರ್ಬುಧಾಃ ।
ಪರಿತ್ರಾಣಂ ತತಃ ಪುತ್ರಾದಿಚ್ಛಂತೀಹ ಪರತ್ರ ಚ ॥ ೫೫ ॥

ಪೂಜಯಿತ್ವಾ ತು ದೇವಾಂಶ್ಚ ದತ್ವಾ ದಾನಂ ತ್ವನೇಕಶಃ ।
ಹುತ್ವಾಗ್ನಿಂ ವಿಧಿವಚ್ಚೈವ ಸ್ವರ್ಗಂ ತು ಲಭತೇ ನರಃ ॥ ೫೬ ॥

೫೨–೫೩. ಪ್ರಾತಸ್ಸಂಧ್ಯಾಕಾಲವೊದಗಿತು. ಸೂರ್ಯನು ಉದಯಿಸಲಾಗಿ ದ್ವಿಜೋತ್ತಮನಾದ ಆತನು ಸಂಧ್ಯಾವಂದನ ವಿಧಿಯನ್ನು ನೆರವೇರಿಸಿ, ಅಗ್ನಿಹೋತ್ರವನ್ನು ಮಾಡಿ, ಮತ್ತೆ ಆತ್ರೇಯನ ಚಿಂತೆಯನ್ನು ಪಡೆದವನಾಗಿ ಬಹು ದುಃಖಿತನಾದನು. ಶೋಕಪೀಡತವಾದ ಮನಸ್ಸಿನ ಆತನು ಅಲ್ಲಿ ಏಕಾಂಗಿಯಾಗಿ ತನಗೆ ತಾನೇ ಹೀಗೆ ಹೇಳಿಕೊಂಡನು.

೫೪. "ಛೀ! ನನ್ನ ವಯಸ್ಸೂ, ಕರ್ಮವೂ, ಬಲವೂ, ಜೀವನವೂ, ನಿಂದ್ಯವಾದುದು. ಸರ್ವಸುಖಗಳಿಂದ ಕೂಡಿ ಜೀವಿಸುತ್ತಿರುವ ಪುತ್ರನನ್ನು ಕಾಣೆನು!

೫೫. ಹೃದಯದ ದುಃಖವನ್ನೇ ಪೂತಿಕವೆಂಬ ಹೆಸರುಳ್ಳ ನರಕವೆಂದು ಪಂಡಿತರು ತಿಳಿಯುವರು. ಮಗನ ದೆಸೆಯಿಂದ ಆ ದುಃಖನರಕದಿಂದ ರಕ್ಷಣೆಯನ್ನು ಇಹಪರಗಳಲ್ಲಿ ಬಯಸುವರು.

೫೬–೫೮. ಮನುಷ್ಯನು ದೇವತೆಗಳನ್ನು ಪೂಜಿಸಿ, ಅನೇಕವಾಗಿ ದಾನಗಳನ್ನು ಕೊಟ್ಟು, ವಿಧಿಯಂತೆ ಅಗ್ನಿಹೋತ್ರಾದಿಗಳನ್ನು ಮಾಡಿ ಸ್ವರ್ಗವನ್ನು

ಪುತ್ರೇಣ ಲಭತೇ ಯೇನ ಪೌತ್ರೇಣ ಚ ಪಿತಾಮಹಾಃ |
ಅಥ ಪುತ್ರಸ್ಯ ಪೌತ್ರೇಣ ಮೋದಂತೇ ಪ್ರಪಿತಾಮಹಾಃ || ೫೭ ||

ಪುತ್ರೇಣ ಶ್ರೀಮತಾ ಹೀನೋ ನಾಹಂ ಜೀವಿತುಮುತ್ಸಹೇ || ೫೮ ||

ಏತಸ್ಮಿನ್ನಂತರೇ ದೇವಿ ನಾರದೋ ದ್ವಿಜಸತ್ತಮಃ |
ಜಗಾಮ ತಾಪಸಾರಣ್ಯಮೃಷ್ಯಾಶ್ರಮವಿಭೂಷಿತಂ |
ಸರ್ವಕಾಮಯುತಂ ರಮ್ಯಂ ಬಹುಪುಷ್ಪಫಲೋದಕಂ || ೫೯ ||

÷ಆಗತಂ ಸ್ವಾಶ್ರಮಪದಂ ಭ್ರಾಜಮಾನಂ ಸ್ವತೇಜಸಾ |
ತಂ ದೃಷ್ಟ್ವಾ ಪೂಜಯಾಮಾಸ ಸ್ವಾಗತೇನಾಥ ಧರ್ಮವಿತ್ || ೬೦ ||

ತಸ್ಮೈ ದತ್ವಾ ಪಾದ್ಯಮರ್ಘ್ಯಂ ಆಸನೇ ಚೋಪವೇಶ್ಯ ಚ |
ಉಪವಿಶ್ಯಾಸನೇ ದೇವಿ ನಾರದೋ ವಾಕ್ಯಮಬ್ರವೀತ್ || ೬೧ ||

ಪಡೆಯುವನು. ಮಗನಿಂದ ತಂದೆಯೂ, ಮೊಮ್ಮಗನಿಂದ ಅಜ್ಜಂದಿರೂ, ಮರಿ ಮಗನಿಂದ ಮುತ್ತಜ್ಜಂದಿರೂ ಸ್ವರ್ಗಕ್ಕಿಂತಲೂ ಹೆಚ್ಚಾದ ಸಂತೋಷವನ್ನು ಪಡೆಯುವರು. ಅಂತಹ ಪುತ್ರನಾದ ಶ್ರೀಮಂತನನ್ನು ಕಳೆಕೊಂಡ ನನಗೆ ಬದುಕುವುದರಲ್ಲಿಯೇ ಉತ್ಸಾಹವಿಲ್ಲ."

೫೯. ದೇವೀ, ನಿಮಿಯು ಹಾಗೆ ಮಾತನಾಡಿಕೊಳ್ಳುತ್ತಿರುವಷ್ಟರಲ್ಲಿಯೇ ದ್ವಿಜಸತ್ತಮನಾದ ನಾರದನು ಸರ್ವಕಾಮಸಮೃದ್ಧಿಯುಳ್ಳದೂ, ಬೇಕಾದಹಾಗೆ ಹೂ ಹಣ್ಣು ಕಾಯಿ ನೀರುಗಳುಳ್ಳದೂ, ಮನೋಹರವೂ, ಋಷ್ಯಾಶ್ರಮಗಳಿಂದ ಲಂಕೃತವೂ ಆದ ಆ ನಿಮಿಯ ತಪೋವನಕ್ಕೆ ಹೋದನು.

೬೦-೬೧. ತನ್ನ ಆಶ್ರಮಕ್ಕೆ ಬಂದು ,ತೇಜಸ್ಸಿನಿಂದ ಹೊಳೆಯುತ್ತಿರುವ ಆ ನಾರದನನ್ನು ನೋಡಿ, ಧರ್ಮಜ್ಞನಾದ ಆ ನಿಮಿಯು ಸುಖಾಗಮನವನ್ನು ಕೇಳಿ, ಆತನಿಗೆ ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು, ಪೀಠದಲ್ಲಿ ಕುಳ್ಳಿರಿಸಿ ಪೂಜಿಸಿದನು. ದೇವೀ, ನಾರದನು ಪೀಠದಲ್ಲಿ ಕುಳಿತು ಮುಂದಿನ ಮಾತನಾಡಿದನು.

÷ ತತ್ರವಿಶ್ಯಾಶ್ರಮಪದಂ

॥ ನಾರದ ಉವಾಚ ॥

ನಿಮೇ ಶೃಣು ಮಹಾಪ್ರಾಜ್ಞ ಶೋಕಮುತ್ಸೃಜ್ಯ ದೂರತಃ ।
×ಅಶೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾನ್ನಾವಬುಧ್ಯಸೇ ॥ ೬೨ ॥

×ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ ॥ ೬೩ ॥

ಮೃತಂ ವಾ ಯದಿ ವಾ ನಷ್ಟಂ ಯೋ ಯಾಂತಮನುಶೋಚತಿ ।
ಅಮಿತ್ರಾಸ್ತಸ್ಯ ಹೃಷ್ಯಂತಿ ಸ ಚಾಪಿ ನ ನಿವರ್ತತೇ ।
ಅಮರತ್ವಂ ನ ಪಶ್ಯಾಮಿ ತ್ರೈಲೋಕ್ಯೇ ಸಚರಾಚರೇ ॥ ೬೪ ॥

ದೇವತಾಸುರಗಂಧರ್ವಾ ಮಾನುಷಾ ಮೃಗಪಕ್ಷಿಣಃ ।
ಸರ್ವೇ ಕಾಲವಶಂ ಯಾಂತಿ ಸರ್ವೇ ಕಾಲಮುದೀಕ್ಷತೇ ॥ ೬೫ ॥

೬೨–೬೩. ನಾರದ—ಮಹಾಪ್ರಾಜ್ಞನಾದ ನಿಮಿಯೇ, ಕೇಳು. ದುಃಖವನ್ನು ದೂರದಲ್ಲಿ ಬಿಡು. ×ಯಾರಿಗಾಗಿ ದುಃಖಿಸಬಾರದೋ ಅವರಿಗಾಗಿ ನೀನು ದುಃಖಿಸುತ್ತೀಯೆ. ನೀನು ಜ್ಞಾನಿಯಾಗಿದ್ದರೂ ಇದನ್ನು ತಿಳಿಯುವುದಿಲ್ಲ. ಜ್ಞಾನಿಗಳಾದವರು ಮೃತರನ್ನಾಗಲಿ, ಜೀವಿಸಿರುವವರನ್ನಾಗಲಿ ಕುರಿತು ದುಃಖಿಸುವುದಿಲ್ಲ.

೬೪. ಮೃತನಾಗಿಯೋ, ಎಲ್ಲಿಯೋ ಹೋಗಿಯೋ ನಷ್ಟನಾದವನನ್ನು ಕುರಿತು ದುಃಖಿಸುತ್ತಿದ್ದರೆ, ದುಃಖಿಸುವವನ ಶತ್ರುಗಳು ಅದಕ್ಕೆ ಸಂತೋಷ ಪಡುತ್ತಾರೆ. ಆದರೂ ಮೃತನಾಗಿಹೋದವನು ಹಿಂದಿರುಗಿ ಬರುವುದಿಲ್ಲ. ಚರಾಚರಗಳಿಂದ ಕೂಡಿದ ಮೂರುಲೋಕದಲ್ಲೂ ಎಲ್ಲೂ ಮರಣವಿಲ್ಲದಿರುವುದನ್ನು ನಾನು ಕಂಡಿಲ್ಲ.

೬೫. ದೇವತೆಗಳೂ, ಅಸುರರೂ, ಗಂಧರ್ವರೂ, ಮನುಷ್ಯರೂ, ಮೃಗಪಕ್ಷಿಗಳೂ ಎಲ್ಲರೂ ಕಾಲ (ಯಮ) ವಶರಾಗುವರು. ಎಲ್ಲರೂ ಕಾಲ (ಮರಣ) ವನ್ನು ಕಾಣುವರು.

+ ಭ. ಗೀ. ಅ, ೨. ಶ್ಲೋ. ೧೧.

ಜಾತಸ್ಯ ಸರ್ವಭೂತಸ್ಯ ಕಾಲೋ ಮೃತ್ಯುರುಪಸ್ಥಿತಃ ।
ಅವಶ್ಯಂ ಚೈವ ಗಂತವ್ಯಂ ಕೃತಾಂತವಿಹಿತೇನ ಚ ॥ ೬೬ ॥

ತವ ಪುತ್ರೋ ಮಹಾತ್ಮಾನ್ವೈ ಶ್ರೀಮಾನ್ನಾಮ ಶ್ರಿಯೋ ನಿಧಿಃ ।
ಪೂರ್ಣಂ ವರ್ಷಸಹಸ್ರಂ ತು ತಪಃ ಕೃತ್ವಾ ಸುದಶ್ಚರಂ ।
ಮೃತ್ಯುಕಾಲಮನುಪ್ರಾಪ್ಯ ಗತೋ ದಿವ್ಯಾಂ ಪರಾಂ ಗತಿಂ ॥ ೬೭ ॥

ಏತತ್ಸರ್ವಂ ವಿದಿತ್ವಾ ತು ನಾನುಶೋಚಿತುಮರ್ಹಸಿ ॥ ೬೮ ॥

ನಾರದೇನೈವಮುಕ್ತೇ ತು ಶ್ರುತ್ವಾ ಸ ದ್ವಿಜಸತ್ತಮಃ ।
ಪ್ರಣಮ್ಯ ಶಿರಸಾ ಪಾದೌ ನಿಮಿರುದ್ವಿಗ್ನಮಾನಸಃ ॥ ೬೯ ॥

ಭೀತೋ ಗದ್ಗದಯಾ ವಾಚಾ ನಿಶ್ವಸಂಶ್ಚ ಮುಹುರ್ಮುಹುಃ ।
ಸವ್ರೀಡೋ ಭಾಷತೇ ವಿಪ್ರಃ ಕಾರುಣ್ಯೇನ ಸಮನ್ವಿತಃ ॥ ೭೦ ॥

---

೬೬. ಹುಟ್ಟಿದ ಪ್ರಾಣಿಗಳೆಲ್ಲಕ್ಕೂ ಮೃತ್ಯುಕಾಲವು ಬರುವುದು. ಯಮನಿಂದ ಗೊತ್ತಾದ ಆ ಕಾಲದಲ್ಲಿ ಖಂಡಿತವಾಗಿಯೂ ಹೋಗಲೇಬೇಕು.

೬೭–೬೮. ಮಹಾತ್ಮನೂ, ಶ್ರೀನಿಧಿಯೂ ಆದ ಶ್ರೀಮಂತನೆಂಬ ನಿನ್ನ ಪುತ್ರನು ಸಾವಿರ ವರ್ಷಗಳು ಪೂರ್ಣವಾಗಿ ಅತಿಕಠಿಣವಾದ ತಪಸ್ಸನ್ನು ಮಾಡಿ ಮರಣಕಾಲವು ಬರಲು ದಿವ್ಯವಾದ ಪರಮಗತಿಯನ್ನು ಪಡೆದನು. ಇದೆಲ್ಲವನ್ನೂ ತಿಳಿದಾದರೂ ನೀನು ದುಃಖಿಸದಿರಬೇಕು.

೬೯–೭೦. ನಾರದನು ಹೀಗೆ ಹೇಳಿದುದನ್ನು ಕೇಳಿ, ಬ್ರಾಹ್ಮಣೋತ್ತಮನಾದ ಆ ನಿಮಿಯು ನಾರದನ ಪಾದಗಳಿಗೆ ತಲೆಬಾಗಿ ವಂದಿಸಿ, ಖೇದಗೊಂಡ ಮನಸ್ಸುಳ್ಳವನೂ, ಭೀತನೂ, ಕರುಣೆಯೂ ಲಜ್ಜೆಯೂ ಉಳ್ಳವನೂ ಆಗಿ ಮತ್ತೆಮತ್ತೆ ನಿಟ್ಟುಸಿರನ್ನು ಬಿಡುತ್ತ, ಗದ್ಗದಧ್ವನಿಯಿಂದ ಮುಂದಿನ ಮಾತನಾಡಿದನು.

ಅಹೋ ಮುನಿವರಶ್ರೇಷ್ಠ ಅಹೋ ಧರ್ಮವಿದಾಂ ವರ ।
ಸಾಂತ್ವಿತೋಽಸ್ಮಿ ತ್ವಯಾ ವಿಪ್ರ ವಚನೈರ್ಮಧುರಾಕ್ಷರೈಃ ॥ ೭೧ ॥

ಪ್ರಣಯಾತ್ಸೌಹೃದಾದ್ವಾಪಿ ಸ್ನೇಹಾದ್ವಕ್ಷ್ಯಾಮಿ ತಚ್ಛೃಣು ।
ಶೋಕೋ ನಿರಂತರಂ ಚಿತ್ತೇ ಮಮ್ಮೈತದ್ಧೃದಿ ವರ್ತತೇ ।
ಕೃತಸ್ನೇಹಸ್ಯ ಪುತ್ರಾರ್ಥೇ ಮಯಾ ಸಂಕಲ್ಪ್ಯ ಯತ್ಕೃತಂ ॥ ೭೨ ॥

ತರ್ಪಯಿತ್ವಾ ದ್ವಿಜಾನ್ಸಪ್ತ ಅನ್ನಾದ್ಯೇನ ಫಲೇನ ಚ ।
ಪಶ್ಚಾದ್ವಿಸರ್ಜಿತಂ ಪಿಂಡಂ ದರ್ಭಾನಾಸ್ತೀರ್ಯ ಭೂತಲೇ ॥ ೭೩ ॥

ಉದಕಾನಯನಂ ಚೈವ ಹ್ಯಪಸವ್ಯೇನ ವಾಸಿತಂ ॥ ೭೪ ॥

ಶೋಕಸ್ಯ ತು ಪ್ರಭಾವೇಣ ಏತತ್ಕರ್ಮ ಮಯಾಕೃತಂ ।
ಅನಾರ್ಯಜುಷ್ಟಮಸ್ವರ್ಗ್ಯಮಕೀರ್ತಿಕರಣಂ ದ್ವಿಜ । ॥ ೭೫ ॥

---

೭೧. "ಆಹಾ ! ಮುನಿವರೋತ್ತಮನೇ, ಅಹೋ ! ಧರ್ಮಜ್ಞಾಗ್ರಣಿಯೇ, ಮಧುರಾಕ್ಷರಗಳುಳ್ಳ ನಿನ್ನ ಮಾತಿನಿಂದ ನನ್ನನ್ನು ಸಂತೈಸಿದೆ.

೭೨. ಪ್ರೀತಿಯಿಂದಾಗಲಿ, ಸ್ನೇಹದಿಂದಾಗಲಿ ನಾನು ಹೇಳುವುದನ್ನು ಕೇಳು. ಪ್ರೀತಿಯನ್ನಿಟ್ಟಿದ್ದ ಪುತ್ರನಿಗೋಸ್ಕರ ನಾನು ಉದ್ದೇಶಿಸಿ ಮಾಡಿದ ಕಾರ್ಯಕ್ಕಾಗಿ ನನ್ನ ಚಿತ್ತದಲ್ಲೂ, ಮನದಲ್ಲೂ ಶೋಕವು ಯಾವಾಗಲೂ ಇರುವುದಾಗಿದೆ.

೭೩–೭೪. ಏಳುಜನ ಬ್ರಾಹ್ಮಣರನ್ನು ಅನ್ನಾದಿಗಳಿಂದಲೂ, ಫಲಗಳಿಂದಲೂ ತೃಪ್ತಿಪಡಿಸಿ ಬಳಿಕ ನೆಲದಮೇಲೆ ದರ್ಭೆಯನ್ನು ಹಾಸಿ, ಅದರಮೇಲೆ ಪಿಂಡವನ್ನು ಹಾಕಿದೆನು. ಜಲಾಂಜಲಿಯನ್ನೂ ಅಪಸವ್ಯ (ಅಪ್ರದಕ್ಷಿಣ) ವಾಗಿ ಕೊಟ್ಟೆನು.

೭೫. ಬ್ರಾಹ್ಮಣೋತ್ತಮಾ, ಅನಾರ್ಯರು ಆಶ್ರಯಿಸುವುದಾಗಿಯೂ, ಪರಲೋಕ ಗಮನವನ್ನು ತಪ್ಪಿಸುವುದಾಗಿಯೂ, ಅಪಯಶಸ್ಸನ್ನುಂಟುಮಾಡುವುದಾಗಿಯೂ ಇರುವ ಈ ಕಾರ್ಯವನ್ನು ಶೋಕದ ಪ್ರಭಾವದಿಂದ ನಾನು ಮಾಡಿಬಿಟ್ಟೆನು.

ನಷ್ಟಬುದ್ಧಿಸ್ಮೃತಿಸತ್ತ್ವೋ ಹ್ಯಜ್ಞಾನೇನ ವಿಮೋಹಿತಃ ।
ನ ಚ ಶ್ರುತಂ ಮಯಾಪೂರ್ವಂ ನ ದೇವಋಷಿಭಿಃ ಕೃತಂ ॥ ೭೬ ॥

ಭಯಂ ತೀವ್ರಂ ಪ್ರಪಶ್ಯಾಮಿ ಮುನಿಶಾಪಾತ್ಸುದಾರುಣಾತ್ ॥ ೭೭ ॥

॥ ನಾರದ ಉವಾಚ ॥

ನ ಭೇತವ್ಯಂ ದ್ವಿಜಶ್ರೇಷ್ಠ ಪಿತರಂ ಶರಣಂ ವ್ರಜ ।
ಅಧರ್ಮಂ ನ ಚ ಪಶ್ಯಾಮಿ ಧರ್ಮೋ ನೈವಾತ್ರ ಸಂಶಯಃ ॥ ೭೮ ॥

ನಾರದೇನೈವಮುಕ್ತಸ್ತು ನಿಮಿಧ್ಯಾನಮುಪಾವಿಶತ್ ।
ಕರ್ಮಣಾ ಮನಸಾ ವಾಚಾ ಪಿತರಂ ಶರಣಂ ಗತಃ ॥
ತತೋಽತಿಚಿಂತಯಾಮಾಸ ವಂಶಕರ್ತಾರಮಾತ್ಮನಃ ॥ ೭೯ ॥

ಧ್ಯಾಯಮಾನಸ್ತತೋಽಸ್ಯಾಶು ಆಜಗಾಮ ತಪೋಧನಂ ॥ ೮೦ ॥

೭೬–೭೭. ಬುದ್ಧಿಯನ್ನೂ, ಸ್ಮೃತಿಯನ್ನೂ, ಸತ್ವವನ್ನೂ ಕಳೆದುಕೊಂಡು ಅಜ್ಞಾನದಿಂದ ವಿಮೋಹಿತನಾದೆನು. ಮೊದಲು ವೇದಗಳಲ್ಲಿ ಹೇಳಿದೆಯೆ ಎಂಬುದನ್ನಾಗಲಿ, ಋಷಿಗಳು ಮಾಡಿರುವರೇ ಎಂಬುದನ್ನಾಗಲಿ, ಕೇಳಲಿಲ್ಲ. ಅತ್ಯುಗ್ರವಾದ ಋಷಿಶಾಪವೆಲ್ಲಿಬರುವುದೋ ಎಂದು ಬಹಳವಾಗಿ ಭಯಗೊಂಡಿರುವೆನು.''

೭೮. ನಾರದ—ದ್ವಿಜೋತ್ತಮನೇ, ಹೆದರಬೇಕಾದುದಿಲ್ಲ. ನಿನ್ನ ತಂದೆಯನ್ನು ಮರೆಹೋಗು. ನೀನು ಮಾಡಿರುವುದರಲ್ಲಿ ಅಧರ್ಮವೇನೂ ನನಗೆ ಕಾಣುವುದಿಲ್ಲ. ಧರ್ಮವೇ ಆಗಿದೆಯೆಂಬುದರಲ್ಲಿ ಸಂಶಯವಿಲ್ಲ.

೭೯. ನಾರದನು ಹೀಗೆ ಹೇಳಲು, ನಿಮಿಯು ಮನೋವಾಕ್ಕರ್ಮಗಳೆಲ್ಲವರಿಂದಲೂ ತಂದೆಗೆ ಶರಣಾಗತನಾಗಿ ತನ್ನ ವಂಶಕರ್ತೃವಾದ ಅವನನ್ನು ಬಹಳವಾಗಿ ಸ್ಮರಿಸಿದನು.

೮೦–೮೧. ನಿಮಿಯಿಂದ ಸ್ಮೃತನಾದ ಆತನ ತಂದೆಯು (ದತ್ತಾತ್ರೇಯನು) ಬೇಗನೆ ಅವನೆಡೆಗೆ ಬಂದು, ಪುತ್ರಶೋಕದಿಂದ ತಾಪಗೊಂಡಿರುವ

ಪುತ್ರಶೋಕೇನ ಸಂತಪ್ತಂ ಪುತ್ರಂ ದೃಷ್ಟ್ವಾ ತಪೋಧನಂ ।
ಪುತ್ರಮಾಶ್ವಾಸಯಾಮಾಸ ವಾಗ್ಭಿರಿಷ್ಟಾಭಿರವ್ಯಯೈಃ ॥ ೮೧ ॥

ನಿಮೇ ಸಂಕಲ್ಪಿತಸ್ತೇಽಯಂ ಪಿತೃಯಜ್ಞಸ್ತಪೋಧನ ।
ಪಿತೃಯಜ್ಞೇತಿ ನಿರ್ದಿಷ್ಟೋ ಧರ್ಮೋಽಯಂ ಬ್ರಹ್ಮಣಾಸ್ವಯಂ ।
ತತೋ ಹ್ಯತಿತರೋ ಧರ್ಮಃ ಕ್ರತುರೇಕಃ ಪ್ರತಿಷ್ಠಿತಃ ॥ ೮೨ ॥

ಕೃತಸ್ಸ್ವಯಂಭುವಾ ಪೂರ್ವಂ ಶ್ರಾದ್ಧಂ ಯೋ ವಿಧಿವತ್ತಮಃ ॥ ೮೩ ॥

ಶೃಣ್ವತೋ ನಾರದಸ್ಯಾಪಿ ವಿಧಿಂ ವಿಧಿವಿದಾಂ ವರಃ ।
ಶ್ರಾದ್ಧಕರ್ಮವಿಧಿಂ ಚೈವ ಪ್ರೇತಕರ್ಮ ಚ ಯಾ ಕ್ರಿಯಾ ॥ ೮೪ ॥

ಶೃಣು ಸುಂದರಿ ತತ್ತ್ವೇನ ಯಥಾ ದಾತಾ ಸಪುತ್ರಕಃ ।
ಮಮ ಚೈವ ಪ್ರಸಾದೇನ ತಸ್ಯ ಬುದ್ಧಿಂ ದದಾಮ್ಯಹಂ ॥ ೮೫ ॥

ತಪೋಧನನಾದ ತನ್ನ ಆ ಮಗನನ್ನು ಕಂಡು, ಸಾರ್ಥಕವೂ, ಹಿತವೂ ಆದ ಮಾತಿನಿಂದ ಸಮಾಧಾನಪಡಿಸಿದನು.

೮೨. "ತಪೋಧನನಾದ ನಿಮಿಯೇ, ನೀನು ಉದ್ದೇಶಿಸಿದ ಈ ಪಿತೃಯಜ್ಞವು, ಬ್ರಹ್ಮನು ತಾನೇ ಪಿತೃಯಜ್ಞವೆಂದು ಹೇಳಿ ತೋರಿಸಿರುವ ಧರ್ಮವಾಗಿದೆ. ಅದಕ್ಕಿಂತ ಉತ್ತಮವಾದ ಧರ್ಮವು ಯಜ್ಞವೊಂದು ಮಾತ್ರವೇ ಇದೆ.

೮೩–೮೪. ಬ್ರಹ್ಮನು ಪೂರ್ವದಲ್ಲಿ ವಿಧಿವಿಹಿತವಾದುವುಗಳಲ್ಲಿ ಅತಿಮುಖ್ಯವಾದ ಶ್ರಾದ್ಧವನ್ನು ಮಾಡಿದನು" ಎಂದು ನಾರದನು ಕೇಳುತ್ತಿರುವ ಹಾಗೆಯೇ ಸಪುತ್ರಕನೂ, ವಿಧಿಗಳನ್ನರಿತವರಲ್ಲಿ ಉತ್ತಮನೂ ಆದ ಆ ದತ್ತಾತ್ರೇಯನು ಶ್ರಾದ್ಧಕರ್ಮವಿಧಿಯನ್ನೂ, ಪ್ರೇತಕರ್ಮದಲ್ಲಿ ಮಾಡಬೇಕಾದುದನ್ನೂ ಹೇಳಿದನು.

೮೫. ಸುಂದರೀ, ಅವನು ಇನ್ನೂ ಏನು ಹೇಳಿದನೆಂಬುದನ್ನು ನಿಜವಾಗಿ ಕೇಳು. ನಾನು ಅನುಗ್ರಹದಿಂದ ಅವನಿಗೆ ಹೇಳಲು ಬುದ್ಧಿಯನ್ನು ಕೊಟ್ಟೆನು.

ಜಾತಸ್ಯ ಸರ್ವಭೂತಸ್ಯಕಾಲಮೃತ್ಯುರುಪಸ್ಥಿತಃ ।
ಅವಶ್ಯಮೇವ ಗಂತವ್ಯಂ ಧರ್ಮರಾಜಸ್ಯ ಶಾಸನಾತ್ ।
ಅಮರತ್ವಂ ನ ಪಶ್ಯಾಮಿ ÷ಪಿಪೀಲಾದಿಷು ಜಂತುಷು ॥ ೮೬ ॥

ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ ।
ಮೋಕ್ಷಃ ಕರ್ಮವಿಶೇಷೇಣ ಪ್ರಾಯಶ್ಚಿತ್ತೇನ ಚ ಧ್ರುವಂ ॥ ೮೭ ॥

ಸತ್ವಂ ರಜಸ್ತಮಶ್ಚೈವ ತ್ರಯಶ್ಶಾರೀರಜಾಸ್ಮೃತಾಃ ।
ಅಲ್ಪಾಯುಷೋ ನರಾಃ ಪಶ್ಚಾದ್ಭವಿಷ್ಯಂತಿ ಯುಗಕ್ಷಯೇ ॥ ೮೮ ॥

ಸಾತ್ವಿಕಂ ನಾವಬುಧ್ಯಂತಿ ಕರ್ಮದೋಷೇಣ ತಾಮಸಃ ।
ತಾಮಸಂ ನರಕಂ ವಿಂದ್ಯಾತ್ತಿರ್ಯಗ್ಯೋನಿಂ ಚ ರಾಕ್ಷಸೀಂ ॥ ೮೯ ॥

---

೮೬. ಹುಟ್ಟಿದ ಎಲ್ಲಾ ಪ್ರಾಣಿಗೂ ಕಾಲದಲ್ಲಿ ಮರಣವೊದಗುವುದು. ಯಮಧರ್ಮರಾಯನ ಆಜ್ಞೆಯಂತೆ ಆಗ ಹೋಗಲೇಬೇಕು. ಇರುವೆಗಳೇ ಮೊದಲಾದ ಯಾವ ಜಂತುಗಳಿಗೂ ಮರಣವಿಲ್ಲದಿರುವುದನ್ನು ನಾನು ಕಂಡುದಿಲ್ಲ.

೮೭. ಹುಟ್ಟಿದವನಿಗೆ ಮರಣವೂ, ಮೃತನಾದವನಿಗೆ ಮತ್ತೆ ಜನ್ಮವೂ ಸಿದ್ಧವಾಗಿರುವುದು. ಆದರೆ ಕರ್ಮವಿಶೇಷದಿಂದಲೂ, ಪ್ರಾಯಶ್ಚಿತ್ತದಿಂದಲೂ ಮೋಕ್ಷವು ಸಿದ್ಧವಾಗಿರುವುದು.

೮೮. ಸತ್ವರಜಸ್ತಮೋಗುಣಗಳೆಂಬ ಮೂರೂ ಪ್ರಾಣಿಗಳಲ್ಲಿರುವುವುಗಳೆನಿಸಿಕೊಂಡಿವೆ. ಯುಗದ ಕಡೆಯಲ್ಲಿ ಮನುಷ್ಯರು ಅಲ್ಪವಾದ ಆಯುಸ್ಸುಳ್ಳವರಾಗುವರು.

೮೯. ತಮೋಗುಣವುಳ್ಳವನು ತನ್ನ ಕರ್ಮದೋಷದಿಂದ ಸಾತ್ವಿಕ ವಿಚಾರವನ್ನರಿಯುವುದಲ್ಲ. ತಮೋಗುಣವುಳ್ಳವನು ನರಕವನ್ನು ತಿರ್ಯಗ್ರಾಕ್ಷಸ ಜನ್ಮಗಳನ್ನೂ ಪಡೆಯುವನು.

÷ ಪಿಪೀಲಾದೀನಿ ಜಂತವಃ

ಸಾತ್ವಿಕಂ ಮುಕ್ತಿಯಾನಾಯ ಯಾಂತಿ ವೇದವಿದೋ ಜನಾಃ ।
ಧರ್ಮಜ್ಞಾನಂ ತಥೈಶ್ವರ್ಯಂ ವೈರಾಗ್ಯಮಿತಿ ಸಾತ್ವಿಕಂ ॥ ೯೦ ॥

ಕ್ರೂರೋ ಭೀರುರ್ವಿಷಾದೀ ಚ ಹಿಂಸಕೋ ನಿರಪತ್ರಪಃ ।
ಅಜ್ಞಾನಾಂಧಶ್ಚ ಪೈಶಾಚಮೇತೇಷಾಂ ತಾಮಸಾ ಗುಣಾಃ ॥ ೯೧ ॥

ತಾಮಸಂ ತದ್ವಿಜಾನೀಯಾದುಚ್ಯಮಾನೋ ನ ಬುಧ್ಯತಿ ।
ದುರ್ಮದೋಽಶ್ರದ್ಧಧಾನಶ್ಚ ವಿಜ್ಞೇಯಾಸ್ತಾಮಸಾ ನರಾಃ ॥ ೯೨ ॥

ಪ್ರಬಲೋ ವಾಚಿ ಯುಕ್ತಶ್ಚ ಚಲಬುದ್ಧಿಸ್ಸದಾಯುತಃ ।
ಶೂರಸ್ಸರ್ವೇಷು ವ್ಯಕ್ತಾತ್ಮಾ ವಿಜ್ಞೇಯಾ ರಾಜಸಾ ನರಾಃ ॥ ೯೩ ॥

---

೯೦. ವೇದಜ್ಞರಾದ ಜನರು ಸಾತ್ವಿಕಗುಣ (ಸ್ವಭಾವ)ವನ್ನು ಮುಕ್ತಿಗೆ ಹೋಗಲು ಸಾಧನ (ವಾಹನ)ವಾಗಿ ಪಡೆಯುವರು. ಧರ್ಮಜ್ಞಾನ, ಐಶ್ವರ್ಯ ವೈರಾಗ್ಯವೆಂಬಿವು ಸಾತ್ವಿಕಸ್ವಭಾವ (ಗುಣ)ಗಳು.

೯೧. ಕ್ರೂರಿ, ಭೀರು, ದುಃಖಿ, ಹಿಂಸಕ, ಲಜ್ಜೆಯಿಲ್ಲದವನು, ಅಜ್ಞಾನಿಯೆಂಬ ಕುರುಡ, ಉನ್ಮತ್ತ (ಪೈಶಾಚ) ಇವರಿಗೆ ತಾಮಸಗುಣಗಳಿರುವುವು.

೯೨. ಜ್ಞಾನಿಗಳು ಹೇಳುವುದನ್ನು ಕೇಳದಿರುವವನನ್ನು ತಾಮಸನೆಂದರಿಯಬೇಕು ದುರ್ಮದವುಳ್ಳವನನ್ನೂ, ದೇವರಲ್ಲಿ ನಂಬಿಕೆಯಿಲ್ಲದವನನ್ನೂ ತಾಮಸ ಮನುಷ್ಯರೆಂದರಿಯಬೇಕು.

೯೩. ಪ್ರಬಲ, ವಾಚಾಳಿ, ಚಂಚಲಬುದ್ಧಿಯುಳ್ಳವನು, ಯಾವಾಗಲೂ ಕಾರ್ಯಪ್ರಯತ್ನವುಳ್ಳವನು, ಶೂರನು, ಎಲ್ಲರಲ್ಲೂ (ಎಲ್ಲದರಲ್ಲೂ) ಪ್ರಸಿದ್ಧನಾದವನು ಇವರನ್ನೆಲ್ಲಾ ರಾಜಸಮನುಷ್ಯರೆಂದರಿಯಬೇಕು.

ಕ್ಷಾಂತೋ ದಾಂತೋ ವಿಶುದ್ಧಾತ್ಮಾ ವಿಜ್ಞೇಯಶ್ಶ್ರದ್ಧಯಾನ್ವಿತಃ ।
ತಪಸ್ಸ್ವಾಧ್ಯಾಯಶೀಲಶ್ಚ ಏತೇಷಾಂ ಸಾತ್ವಿಕಾ ಗುಣಾಃ ॥ ೯೪ ॥

ಏವಂ ಸಂಚಿಂತಯಾನಸ್ತ್ವಂ ನ ಶೋಕಂ ಕರ್ತುಮರ್ಹಸಿ ।
ತ್ಯಜ ಶೋಕಂ ಮಹಾಭಾಗ ಶೋಕಸ್ಸರ್ವವಿನಾಶನಃ ॥ ೯೫ ॥

ಶೋಕೋ ದಹತಿ ಗಾತ್ರಾಣಿ ಬುದ್ಧಿಶ್ಶೋಕೇನ ನಶ್ಯತಿ ।
ಲಜ್ಜಾ ಧೃತಿಶ್ಚ ಧರ್ಮಶ್ಚ ಶ್ರೀಃ ಕೀರ್ತಿಶ್ಚ ಸ್ಮೃತಿರ್ನಯಃ ॥ ೯೬ ॥

ತ್ಯಜಂತಿ ಸರ್ವಧರ್ಮಾಶ್ಚ ಶೋಕೇನೋಪಹತಂ ನರಂ ।
ಏವಂ ಶೋಕಂ ತ್ಯಜಿತ್ವಾ ತು ನಿಶ್ಶೋಕೋ ಭವ ಪುತ್ರಕ ॥ ೯೭ ॥

---

೯೪. ಕ್ಷಮೆಯೂ ಇಂದ್ರಿಯನಿಗ್ರಹವೂ ಉಳ್ಳವರು, ಪರಿಶುದ್ಧಾತ್ಮರು, ಆಸ್ತಿಕರು, ತಪಸ್ಸು ಶಾಸ್ತ್ರಾಭ್ಯಾಸ ಇವುಗಳಲ್ಲಿ ನಿರತರಾದವರು ಇವರ ಗುಣಗಳನ್ನು ಸಾತ್ವಿಕಗುಣಗಳೆಂದು ತಿಳಿಯಬೇಕು.

೯೫. ನೀನು ಇದನ್ನು ಹೀಗೆ ಆಲೋಚಿಸುವವನಾಗಿ ದುಃಖಿಸದಿರಬೇಕು. ಮಹಾಭಾಗ್ಯನೇ, ಶೋಕವನ್ನು ಬಿಡು. ಶೋಕವು ಸರ್ವವ(ರ)ನ್ನೂ ನಾಶಮಾಡುವುದು.

೯೬–೯೭. ಶೋಕವು ದೇಹಗಳನ್ನು ಸುಟ್ಟುಬಿಡುವುದು. ಬುದ್ಧಿಯನ್ನು ನಾಶಮಾಡುವುದು. ಲಜ್ಜೆ, ಧೈರ್ಯ, ಧರ್ಮ, ಐಶ್ವರ್ಯ, ಕೀರ್ತಿ, ಜ್ಞಾಪಕ (ಶಕ್ತಿ), ನೀತಿ ಇವೂ ಇತರ ಎಲ್ಲಾ ಧರ್ಮಗಳೂ ದುಃಖಪೀಡಿತನಾದ ಮನುಷ್ಯನನ್ನು ಬಿಟ್ಟುಬಿಡುವುವು. ಆದುದರಿಂದ ಪುತ್ರನೇ, ನೀನು ದುಃಖವನ್ನು ಬಿಟ್ಟು, ಅಶೋಕನಾಗು" ಎಂದನು.

ಮೂಢಸ್ಸ್ನೇಹಪ್ರಭಾವೇಣ ಕೃತ್ವಾ ಹಿಂಸಾನೃತೇ ತಥಾ ।
ಪಚ್ಯತೇ ನರಕೇ ಘೋರೇ ಹ್ಯಾತ್ಮದೋಷೈರ್ವಸುಂಧರೇ ॥ ೯೮ ॥

ಸ್ನೇಹಂ ಸರ್ವೇಷು ಸಂಯಮ್ಯ ಬುದ್ಧಿಂ ಧರ್ಮೇ ನಿಯೋಜಯೇತ್ ।
ಧರ್ಮಂ ಲೋಕಹಿತಾರ್ಥಾಯ ಶೃಣು ಸತ್ಯಂ ಬ್ರವೀಮ್ಯಹಂ ॥ ೯೯ ॥

ಚತುರ್ವರ್ಣಸ್ಯ ವಕ್ಷ್ಯಾಮಿ ಯಚ್ಚ ಸ್ವಾಯಂಭುವೋಽಬ್ರವೀತ್ ।
ನೇಮಿಪ್ರಭೃತಿನಾಮೇವಂ ಯೇನ ಶ್ರಾದ್ಧಂ ಪ್ರವರ್ತತೇ ॥ ೧೦೦ ॥

ಕಂಠಸ್ಥಾನಂ ಗತೇ ಜೀವೇ ಭೀತಿವಿಭ್ರಾಂತಮಾನಸಃ ।
ಜ್ಞಾತ್ವಾ ಚ ವಿಹ್ವಲಂ ತತ್ರ ಶೀಘ್ರಂ ನಿಸ್ಸಾರಯೇದ್ಗೃಹಾತ್ ॥ ೧೦೧ ॥

---

೯೮. ಭೂದೇವೀ, ಮೂಢನಾದವನು ಅನುರಾಗದ ಪ್ರಭಾವದಿಂದ, ಸುಳ್ಳುಹೇಳಿಯೂ, ಹಿಂಸಾಕೃತ್ಯಗಳನ್ನು ಮಾಡಿಯೂ ತನ್ನ ತಪ್ಪಿನಿಂದಲೇ ಘೋರನರಕದಲ್ಲಿ ಬೇಯುವನು.

೯೯. ಪರಮಾತ್ಮನಲ್ಲಿ ಹೊರತು ಉಳಿದ ಎಲ್ಲರಲ್ಲೂ ಸ್ನೇಹವನ್ನು ಬಿಟ್ಟು, ಬುದ್ಧಿಯನ್ನು ಧರ್ಮದಲ್ಲಿ ಉಪಯೋಗಿಸಬೇಕು. ಲೋಕಾಹಿತಾರ್ಥವಾಗಿ ಸತ್ಯವಾದ ಧರ್ಮವನ್ನು ಹೇಳುತ್ತೇನೆ.

೧೦೦. ಬ್ರಾಹ್ಮಣಾದಿಗಳಾದ ನಾಲ್ಕುವರ್ಣದವರಿಗೂ ಬ್ರಹ್ಮನು ಹೇಳಿದ ಮತ್ತು ನಿಮಿಯ ಮಗ ಶ್ರೀಮಂತನೇ ಮೊದಲಾದವರಿಗೆ ಆರಂಭವಾದ ಶ್ರಾದ್ಧವಿಚಾರವನ್ನು ಹೇಳುತ್ತೇನೆ.

೧೦೧. ಯಾರಿಗಾದರೂ ಜೀವವು ಕಂಠಗತವಾದರೆ ಮರಣವಾಗುವುದೆಂದು ತಿಳಿದು ಹೆದರಿ ಭ್ರಾಂತಮನಸ್ಕರಾಗುವವರು ಪರವಶನಾಗಿರುವ ರೋಗಿಯನ್ನು ಬೇಗನೆ ಮನೆಯಿಂದ ಹೊರಕ್ಕೆ ಬಿಡಬೇಕು.

ಕುಶಾಸ್ತರಣಶಾಯೀ ಚ ದಿಶಸ್ಸರ್ವಾ ನ ಪಶ್ಯತಿ |
ಲಬ್ಧಸ್ಮೃತಿರ್ಮುಹೂರ್ತಂ ತು ಯಾವಜ್ಜೀವೋ ನ †ನಶ್ಯತಿ |
ವಾಚಯೇತ್ಸ್ನೇಹಭಾವೇನ ಭೂಮಿದೇವಾ ದ್ವಿಜಾತಯಃ || ೧೦೨ ||

ಸುವರ್ಣೇನ ಹಿ ಯುಕ್ತಂ ತು ಯಥೋತ್ಪನ್ನೇನ ಮಾಧವಿ |
ಪರಲೋಕಹಿತಾರ್ಥಾಯ ಗೋಪ್ರದಾನಂ ವಿಶಿಷ್ಯತೇ || ೧೦೩ ||

ಸರ್ವದೇವಮಯಾ ಗಾವ ಈಶ್ವರೇಣಾವತಾರಿತಾಃ |
ಅಮೃತಂ ಕ್ಷರಯಂತ್ಯಶ್ಚ ಪ್ರಚರಂತಿ ಮಹೀತಲೇ || ೧೦೪ ||

ಏತಾಸಾಂ ಚೈವ ದಾನೇನ ಶೀಘ್ರಂ ಮುಚ್ಯೇತ ಕಿಲ್ಬಿಷಾತ್ || ೧೦೫ ||

---

೧೦೨. ಹೊರಗಡೆಯಲ್ಲಿ ದರ್ಭೆಯ ಹಾಸಿಗೆಯಮೇಲೆ ಮಲಗಿದ ಮರಣೋನ್ಮುಖನು ಎಲ್ಲಾ ಕಡೆಯನ್ನೂ ನೋಡುವುದಿಲ್ಲ. ಒಂದುವೇಳೆ ಅವನಿಗೆ ಜ್ಞಾನವು ಬಂದರೆ ಸ್ವಲ್ಪಕಾಲ ಪ್ರಾಣಗಳು ಹೋಗದಿರುವವರೆಗೂ ಭೂದೇವರಾದ ದ್ವಿಜರು ಸ್ನೇಹಪೂರ್ವಕವಾಗಿ ಅವನನ್ನು ಮಾತನಾಡಿಸಬೇಕು.

೧೦೩. ಮಾಧವೀ, ಮರಣೋನ್ಮುಖನಿಗೆ ಪರಲೋಕದಲ್ಲಿ ಹಿತವಾಗುವುದಕ್ಕಾಗಿ ಅವನ ಅನುಕೂಲಕ್ಕೆ ತಕ್ಕಷ್ಟು ಸುವರ್ಣದೊಡನೆ ಗೋದಾನ ಮಾಡುವುದು ಉತ್ತಮ.

೧೦೪–೧೦೫. ಸರ್ವದೇವಮಯಗಳಾದ ಗೋವುಗಳನ್ನು ಈಶ್ವರನು ಈ ಲೋಕಕ್ಕೆ ತಂದಿಳಿಸಿದನು. ಅವು ಅಮೃತವನ್ನು ಕರೆಯುತ್ತ ಭೂಮಂಡಲದಲ್ಲಿ ಸಂಚರಿಸುವುವು. ಅವನ್ನು ದಾನಮಾಡುವುದರಿಂದ ರೋಗಿಯು ಬೇಗನೆ ಪಾಪದಿಂದ ವಿಮುಕ್ತನಾಗುವನು.

---

† ನ ಪಶ್ಯತಿ

ಪಶ್ಚಾಚ್ಛ್ರುತಿಪಥಂ ದಿವ್ಯಮುತ್ಕರ್ಣೇನ ಚ ಶ್ರಾವಯೇತ್ ।
ಯಾವತ್ಪ್ರಾಣಾನ್ಪ್ರಮುಂಚೇತ ಕೃತ್ವಾ ಕರ್ಮ ಸುದುಷ್ಕರಂ ॥ ೧೦೬ ॥

ದೃಷ್ಟ್ವಾ ಸುವಿಹ್ವಲಂ ಹ್ಯೇನಂ ಮಮ ಮಾರ್ಗಾನುಸಾರಿಣಂ ।
ಪ್ರಯಾಣಕಾಲೇ ತು ನರೋ ಮಂತ್ರೇಣ ವಿಧಿಪೂರ್ವಕಂ ॥ ೧೦೭ ॥

ಮಂತ್ರೇಣಾನೇನ ಕರ್ತವ್ಯಂ ಸರ್ವಸಂಸಾರಮೋಕ್ಷಣಂ ।
ಮಧುಪರ್ಕಂ ತ್ವರನ್ಗೃಹ್ಯ ಚೇಮಂ ಮಂತ್ರಮುದಾಹರೇತ್ ॥ ೧೦೮ ॥

ಮಂತ್ರಃ—

ಓಂ ಗೃಹ್ಣೀಷ್ವ ಮೇ ಸುವಿಮಲಂ ಮಧುಪರ್ಕಮಾದ್ಯಂ ।
ಸಂಸಾರನಾಶನಕರಂ ತ್ವಮೃತೇನ ತುಲ್ಯಂ ।
ನಾರಾಯಣೇನ ರಚಿತಂ ಭಗವತ್ಪ್ರಿಯಾಣಾಂ ।
ದಾಹೇ ಚ ಶಾಂತಿಕರಣಂ ಸುರಲೋಕಪೂಜ್ಯಂ ॥ ೧೦೯ ॥

---

೧೦೬. ಗೋದಾನವನ್ನು ಮಾಡಿದ ಬಳಿಕ ಪ್ರಯತ್ನಪೂರ್ವಕವಾಗಿ ಕಷ್ಟಪಟ್ಟಾದರೂ ರೋಗಿಯ ಕಿವಿಯಲ್ಲಿ ದಿವ್ಯಮಂತ್ರವನ್ನು ಗಟ್ಟಿಯಾಗಿ ಹೇಳಿ, ಪ್ರಾಣಬಿಡುವವರೆಗೂ ಅವನಿಂದ ಕೇಳಿಸಬೇಕು.

೧೦೭–೧೦೯. ನನ್ನಮಾರ್ಗವನ್ನನುಸರಿಸುವವನೂ, ದೇಹದಮೇಲೆ ಸ್ಮೃತಿಯಿಲ್ಲದವನೂ ಆಗಿರುವವನನ್ನು ನೋಡಿ, ಅವನ ಮರಣಕಾಲದಲ್ಲಿ ಸರ್ವ ಸಂಸಾರ ವಿಮೋಚಕವಾದ ಮಧುಪರ್ಕವನ್ನು ವಿಧಿಪೂರ್ವಕವಾಗಿ ಬೇಗನೆ ತೆಗೆದುಕೊಂಡು "ಬಹು ಪರಿಶುದ್ಧವೂ ಸಂಸಾರ ನಾಶಕರವೂ ನಾರಾಯಣ ಕಲ್ಪಿತವೂ ಭಾಗವತರಿಗೆ ತಾಪಶಾಂತಿಕರವೂ ದೇವಲೋಕಪೂಜ್ಯವೂ ಅಮೃತ ಸಮಾನವೂ ಆದ ನಾನು ಕೊಡುವ ಈ ಮಧುಪರ್ಕವನ್ನು ಪರಿಗ್ರಹಿಸು" ಎಂಬ ಅರ್ಥದ "ಓಂ ಗೃಹೀಷ್ವಮೆ............ಸುರಲೋಕ ಪೂಜ್ಯಂ" ಎಂಬ ಮೇಲಿನ (೧೦೯ ನೆಯ) ಮಂತ್ರವನ್ನು ಹೇಳಬೇಕು.

ತತ ಏತೇನ ಮಂತ್ರೇಣ ದದ್ಯಾದ್ವೈ ಮಧುಪರ್ಕಕಂ ।
ಮೃತ್ಯುಕಾಲೇ ತು ಪುರುಷೋ ಪರಲೋಕಸುಖಾವಹಂ ॥ ೧೧೦ ॥

ಏವಂ ವಿನಿಸ್ಸೃತೇ ಪ್ರಾಣೇ ಸಂಸಾರಂ ಚ ನ ಗಚ್ಛತಿ |
ನಷ್ಟಸಂಜ್ಞಂ ಸಮುದ್ದಿಶ್ಯ ಜ್ಞಾತ್ವಾ ಮೃತ್ಯುವಶಂ ಗತಂ ॥ ೧೧೧ ॥

ಮಹಾವನಸ್ಪತಿಂ ಗತ್ವಾ ಗಂಧಾಂಶ್ಚ ವಿವಿಧಾನಪಿ ।
ಘೃತತೈಲಸಮಾಯುಕ್ತಂ ಕೃತ್ವಾ ವೈ ದೇಹಶೋಧನಂ ।
ತೇಜೋವ್ಯಯಕರಂ ಚಾಸ್ಯ ತತ್ಸರ್ವಂ ಪರಿಕಲ್ಪಯೇತ್ ॥ ೧೧೨ ॥

ದಕ್ಷಿಣಾಯಾಂ ಶಿರಃ ಕೃತ್ವಾ ಸಲಿಲೇ ಸನ್ನಿಧಾಪ್ಯ ಚ |
ತೀರ್ಥಾದ್ಯಾವಾಹನಂ ಕೃತ್ವಾ ಸ್ನಾಪನಂ ತಸ್ಯ ಕಾರಯೇತ್ ॥ ೧೧೩ ॥

ಗಯಾದೀನಿ ಚ ತೀರ್ಥಾನಿ ಯೇ ಚ ಪುಣ್ಯಾಶ್ಶಿಲೋಚ್ಚಯಾಃ ॥ ೧೧೪ ॥

---

೧೧೦. ಮೇಲಿನ ಮಂತ್ರದಿಂದ ಮರಣಕಾಲದಲ್ಲಿ ಪರಲೋಕ ಸುಖವನ್ನುಂಟುಮಾಡುವ ಮಧುಪರ್ಕವನ್ನು ರೋಗಿಗೆ ಕೊಡಬೇಕು.

೧೧೧–೧೧೨. ಹಾಗೆ ಮಧುಪರ್ಕವನ್ನು ಸೇವಿಸಿ, ಪ್ರಾಣಬಿಟ್ಟರೆ ಮತ್ತೆ ಜನ್ಮಸಂಸಾರವನ್ನು ಪಡೆಯುವುದಿಲ್ಲ. ಮೃತನಾದುದನ್ನು ತಿಳಿದು, ಅವನ ದೇಹಸಂಸ್ಕಾರಕ್ಕಾಗಿ ಮಹಾವೃಕ್ಷಗಳ ಹತ್ತಿರ ಹೋಗಿ ಬಗೆಬಗೆಯ ಗಂಧಗಳನ್ನು ತಂದು ಎಣ್ಣೆ ತುಪ್ಪಗಳೊಡನೆ ಸೇರಿಸಿ, ಮೃತನ ದೇಹಶೋಧನಮಾಡಿ, ತೇಜಸ್ಸು ಕೆಡದಂತೆ ಗಂಧಾದಿಗಳನ್ನು ಲೇಪಿಸಬೇಕು.

೧೧೩–೧೧೪. ಬಳಿಕ ದೇಹವನ್ನು ನೀರಿನ ಹತ್ತಿರದಲ್ಲಿ ದಕ್ಷಿಣಕ್ಕೆ ತಲೆಯನ್ನು ಮಾಡಿರಿಸಿ, ಗಯಾತೀರ್ಥಾದಿಗಳನ್ನೂ, ಪುಣ್ಯಶೈಲಗಳನ್ನೂ ಆವಾಹನೆ ಮಾಡಿ ಆ ನೀರಿನಿಂದ ಆ ದೇಹಕ್ಕೆ ಸ್ನಾನಮಾಡಿಸಬೇಕು.

ಕುರುಕ್ಷೇತ್ರಂ ಚ ಗಂಗಾ ಚ ಯಮುನಾ ಚ ಸರಿದ್ವರಾ ।
ಕೌಶಿಕೀ ಚ ಪಯೋಷ್ಣೀ ಚ ಸರ್ವಪಾಪಪ್ರಣಾಶಿನೀ ॥ ೧೧೫ ॥

ಗಂಡಕೀ ಭದ್ರನಾಮಾ ಚ ಸರಯೂರ್ಬಲದಾ ತಥಾ ।
ವನಾನಿ ನವ ವಾರಾಹೇ ತೀರ್ಥೇ ಪಿಂಡಾರಕೇ ತಥಾ ॥ ೧೧೬ ॥

ಪೃಥಿವ್ಯಾಂ ಯಾನಿ ತೀರ್ಥಾನಿ ಚತ್ವಾರಸ್ಸಾಗರಾಸ್ತಥಾ ।
ಸರ್ವಾಣಿ ಮನಸಾ ಧ್ಯಾತ್ವಾ ಸ್ನಾನಮೇವಂ ತು ಕಾರಯೇತ್ ॥ ೧೧೭ ॥

ಪ್ರಾಣೈರ್ಹತಂ ತು ತಂ ಜ್ಞಾತ್ವಾ ಚಿತಾಂ ಕೃತ್ವಾ ವಿಧಾನತಃ ।
ತಸ್ಯಾ ಉಪರಿ ಸಂಸ್ಥಾಪ್ಯ ದಕ್ಷಿಣಾಗ್ರಂ ಶಿರಸ್ತಥಾ ॥ ೧೧೮ ॥

ದಿವ್ಯಾನಗ್ನಿಮುಖಾನ್ಧ್ಯಾತ್ವಾ ಗೃಹ್ಯ ಹಸ್ತೇ ಹುತಾಶನಂ ।
ಪ್ರಜ್ವಾಲ್ಯ ವಿಧಿವತ್ತತ್ರ ಮಂತ್ರಮೇತದುದಾಹರೇತ್ ॥ ೧೧೯ ॥

೧೧೫-೧೧೭. ಕುರುಕ್ಷೇತ್ರ, ನದಿಗಳಲ್ಲಿ ಉತ್ತಮವಾದ ಗಂಗೆ, ಯಮುನೆ, ಕೌಶಿಕಿ, ಪಯೋಷ್ಣಿ, ಸರ್ವಪಾಪನಾಶಿನಿಯಾದ ಗಂಡಕಿ, ಭದ್ರೆ, ಸರಯು, ಬಲದೆ, ಈ ವರಾಹಪುರಾಣದಲ್ಲಿ ಹೇಳಿರುವ ಒಂಬತ್ತು ವನಗಳು, ಪಿಂಡಾರಕ ತೀರ್ಥಗಳು, ನಾಲ್ಕು ಸಾಗರಗಳು, ಭೂಮಿಯ ಮೇಲಿರುವ ಇತರ ಎಲ್ಲಾ ತೀರ್ಥಗಳು, ಇವುಗಳೆಲ್ಲವನ್ನೂ ಮನಸ್ಸಿನಲ್ಲಿ ಧ್ಯಾನಿಸಿ, ಮೃತನ ದೇಹಕ್ಕೆ ಸ್ನಾನಮಾಡಿಸಬೇಕು.

೧೧೮-೧೨೧. ಪ್ರಾಣಗಳು ಹೋಗಿರುವುದನ್ನು ಸರಿಯಾಗಿ ಅರಿತು, ವಿಧಿಗನುಸಾರವಾಗಿ ಚಿತೆಯನ್ನು ಮಾಡಿ, ಅದರಮೇಲೆ ದಕ್ಷಿಣದಿಕ್ಕಿಗೆ ತಲೆಯನ್ನು ಮಾಡಿ, ಶವವನ್ನು ಇಟ್ಟು, ದಿವ್ಯರಾದ ಅಗ್ನಿಯೇ ಮೊದಲಾದವರನ್ನು ಸ್ಮರಿಸಿ, ಕೈಯಿಂದ ಅಗ್ನಿಯನ್ನು ತೆಗೆದುಕೊಂಡು ವಿಧಿಯಂತೆ ಚಿತಿಯನ್ನು ಹತ್ತಿಸಿ

ಕೃತ್ವಾ ಸುದುಷ್ಕರಂ ಕರ್ಮ ಜಾನತಾ ವಾಪ್ಯಜಾನತಾ ।
ಮೃತ್ಯುಕಾಲವಶಂ ಪ್ರಾಪ್ಯ ನರಃ ಪಂಚತ್ವಮಾಗತಃ ॥ ೧೨೦ ॥

ಧರ್ಮಾಧರ್ಮಸಮಾಯುಕ್ತೋ ಲೋಭಮೋಹಸಮಾವೃತಃ ।
ದಹ ಚೈತಸ್ಯ ಗಾತ್ರಾಣಿ ದೇವಲೋಕಂ ಸ ಗಚ್ಛತು ॥ ೧೨೧ ॥

ಏವಮುಕ್ತ್ವಾ ತತಶ್ಶೀಘ್ರಂ ಕೃತ್ವಾ ಚೈವ ಪ್ರದಕ್ಷಿಣಾಂ ।
ಜ್ವಲಮಾನಂ ತದಾ ವಹ್ನಿಂ ಶಿರಃಸ್ಥಾನೇ ಪ್ರದಾಪಯೇತ್ ॥ ೧೨೨ ॥

ಚಾತುರ್ವರ್ಣೇಷು ಸಂಸ್ಕಾರಮೇವಂ ಭವತಿ ಪುತ್ರಕ ।
ಗಾತ್ರಾಣಿ ವಾಸಸೀ ಚೈವ ಪ್ರಕ್ಷಾಲ್ಯ ವಿನಿವರ್ತಯೇತ್ ॥ ೧೨೩ ॥

" ಧರ್ಮಾಧರ್ಮ ಸಮಾಯುಕ್ತನೂ ಲೋಭಮೋಹಾವೃತನೂ ಆದ ಈ ಮನುಷ್ಯನು ತಿಳಿದೊ ತಿಳಿಯದೆಯೊ ಸುದುಷ್ಕರ ಕರ್ಮವನ್ನಾಚರಿಸಿ, ಕಾಲವಶನಾಗಿ ಈಗ ಮರಣವನ್ನು ಹೊಂದಿರುತ್ತಾನೆ. ಈತನ ದೇಹವನ್ನು ದಹಿಸು, ಈತನು ದೇವಲೋಕವನ್ನು ಸೇರಲಿ " ಎಂಬ ಅರ್ಥವುಳ್ಳ "ಕೃತ್ವಾ ಸುದುಷ್ಕರಂ ಕರ್ಮ............ ....ಸ ಗಚ್ಛತು " ಎಂಬ ಮೇಲಿನ (೧೨೦–೧೨೧ ನೆಯ) ಮಂತ್ರವನ್ನು ಹೇಳಬೇಕು.

೧೨೨. ಮೇಲಿನ ಮಂತ್ರನ್ನು ಹೇಳಿ, ಬೇಗನೆ ಚಿತೆಯನ್ನು ಕರ್ಮಕರ್ತೃವು ಪ್ರದಕ್ಷಿಣೆಮಾಡಿ, ಉರಿಯುತ್ತಿರುವ ಬೆಂಕಿಯನ್ನು ಶವದ ತಲೆಯೆಡೆಗೆ ಇಡಬೇಕು.

೧೨೩. ಬ್ರಾಹ್ಮಣಾದಿ ನಾಲ್ಕು ವರ್ಣದವರಿಗೂ ಹೀಗೆ ಶವಸಂಸ್ಕಾರವು ಆಗಬೇಕು. ಸಂಸ್ಕಾರವಾದ ಬಳಿಕ ಸ್ನಾನಮಾಡಿ, ಬಟ್ಟೆಗಳನ್ನು ಒಗೆದು ಶುದ್ಧಿಮಾಡಿಕೊಂಡು ಮನೆಗೆ ಹಿಂದಿರುಗಬೇಕು.

ಮೃತಂ ನಾಮ ತಥೋದ್ದಿಶ್ಯ ದದ್ಯಾತ್ಪಿಂಡಂ ಮಹೀತಲೇ ।
ತದಾಪ್ರಭೃತಿ ಚಾಶೌಚಂ ದೇವಕರ್ಮ ನ ಕಾರಯೇತ್ ॥ ೧೨೪ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಶ್ರಾದ್ಧೋತ್ಪತ್ತಿನಿರೂಪಣಂ ನಾಮ ಸಪ್ತಾಶೀತ್ಯಧಿಕಶತತಮೋಽಧ್ಯಾಯಃ

---

೧೨೪. ಅಲ್ಲದೆ ಮೃತನ ಹೆಸರನ್ನು ಹೇಳಿ, ಅವನಿಗಾಗಿ ನೆಲದಮೇಲೆ ಪಿಂಡವನ್ನು ಹಾಕಬೇಕು. ಮೃತನಾದ ದಿನದಿಂದ ಹತ್ತು ದಿನ ಮೃತನ ಏಳು ತಲೆಯುವರೆಗಿನ ಜ್ಞಾತಿಗಳಿಗೂ ಆಶೌಚವಿರುವುದು. ಆಗ ದೇವಪೂಜಾಕರ್ಮವನ್ನು ಮಾಡಕೂಡದು. ಮಾಡಿಸಲೂ ಕೂಡದು.

ಅಧ್ಯಾಯದ ಸಾರಾಂಶ—

ಶ್ರೀವರಾಹದೇವನು ಭೂದೇವಿಗೆ ಸ್ವರ್ಗಾದಿಲೋಕಗಳ ಮತ್ತು ದೇವ ದಾನವ ಮನುಷ್ಯಾದಿಗಳ ಸೃಷ್ಟಿಯ ಕ್ರಮವನ್ನೂ, ಪುತ್ರಶೋಕದಿಂದ ಸಂತಾಪ ಗೊಂಡಿದ್ದ ನಿಮಿಯೆಂಬ ಋಷಿಯನ್ನು ನಾರದ ಮುನಿಯು ಜ್ಞಾನೋಪದೇಶ ದಿಂದ ಸಮಾಧಾನಪಡಿಸಿದುದನ್ನೂ, ನಿಮಿಯು ಧ್ಯಾನದಿಂದ ಪ್ರತ್ಯಕ್ಷನಾದ ತಂದೆ ದತ್ತಾತ್ರೇಯನು ಹೇಳಿದ ಶ್ರಾದ್ಧಾದಿ ಪಿತೃಯಜ್ಞ ವಿಚಾರವನ್ನೂ, ಮೃತ ನಿಗೆ ಬ್ರಾಹ್ಮಣಾದಿ ಚತುರ್ವರ್ಣದವರು ಮಾಡಬೇಕಾದ ಸಂಸ್ಕಾರವಿಚಾರ ವನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೆಂಬತ್ತೇಳನೆಯ ಅಧ್ಯಾಯ.

॥ ಶ್ರೀಃ ॥

ಅಷ್ಟಾಶೀತ್ಯಧಿಕಶತತಮೋಽಧ್ಯಾಯಃ
ಅಥ ಪಿಂಡಕಲ್ಪಶ್ರಾದ್ಧೋತ್ಪತ್ತಿಪ್ರಕರಣಂ

॥ ಧರಣ್ಯುವಾಚ ॥

ದೇವದೇವೋಽಸಿ ದೇವಾನಾಂ ಲೋಕನಾಥೋಽಪರಿಗ್ರಹಃ ।
ಆಶೌಚಕರ್ಮ ವಿಧಿವಚ್ಛ್ರೋತುಮಿಚ್ಛಾಮಿ ಮಾಧವ ॥ ೧ ॥

॥ ಶ್ರೀವರಾಹ ಉವಾಚ ॥

ಆಶೌಚಂ ಶೃಣು ಕಲ್ಯಾಣಿ ಯಥಾ ಶುದ್ಧ್ಯಂತಿ ಮಾನವಾಃ ।
ಗತಾಯುಷಸ್ತೃತೀಯೇನ ಸ್ನಾನಂ ಕುರ್ಯಾನ್ನದೀಜಲೇ ॥ ೨ ॥

ನೂರೆಂಬತ್ತೆಂಟನೆಯ ಅಧ್ಯಾಯ
ಪಿಂಡಕಲ್ಪಶ್ರಾದ್ಧೋತ್ಪತ್ತಿಪ್ರಕರಣ.

೧. ಭೂದೇವಿ—ದೇವಾ, ನೀನು ದೇವತೆಗಳಿಗೂ ದೇವನೂ, ಲೋಕನಾಥನೂ, ಅನಾದಿಯೂ ಆಗಿದ್ದೀಯೇ. ಮಾಧವಾ, ಆಶೌಚಕರ್ಮವನ್ನು ವಿಧ್ಯುಕ್ತವಾಗಿ ಕೇಳಲಿಚ್ಛಿಸುತ್ತೇನೆ.

೨. ಶ್ರೀವರಾಹ—ಕಲ್ಯಾಣೀ, ಆಶೌಚವನ್ನೂ, ಮನುಷ್ಯರು ಅದರಿಂದ ಹೇಗೆ ಶುದ್ಧರಾಗುವರೆಂಬುದನ್ನೂ ಕೇಳು. ಸತ್ತವನ ಕಡೆಯುವರು ನದಿಯ ನೀರಿನಲ್ಲಿ ಮೂರನೆಯ ದಿನದಿಂದ ಸ್ನಾನಮಾಡಬೇಕು.

ಪಿಂಡಂ ಸಂಚೂರಣಂ ದದ್ಯಾತ್ತ್ರೀಂಶ್ಚ ದದ್ಯಾಜ್ಜಲಾಂಜಲೀನ್ ।
ಚತುರ್ಥೇ ಪಂಚಮೇ ಷಷ್ಠೇ ಪಿಂಡಮೇಕಂ ಜಲಾಂಜಲಿಂ ॥ ೩ ॥

ಅನ್ಯಸ್ಥಾನೇಷು ದಾತವ್ಯಂ ಸ್ನಾನಾತ್ತ್ವಹನಿ ಸಪ್ತಮೇ ।
ಏವಂ ಪ್ರತಿದಿನಂ ಕಾರ್ಯಂ ಯಾವಚ್ಚ ದಶಮಂ ದಿನಂ ॥ ೪ ॥

ಕ್ಷೌರಾದಿನಾ ವಸ್ತ್ರಶೌಚಂ ದಿನೇ ಚ ದಶಮೇ ತಥಾ ।
×ತಿಲಾಂಜಲಿಪ್ರದಾನೇನ ಗೋತ್ರಜಸ್ಸ್ನಾನಮಾಚರೇತ್ ॥ ೫ ॥

ಪಿಂಡದಾನಂ ವಿವರ್ತ್ಯಾಥ ಕ್ಷೌರಕರ್ಮ ತು ಕಾರಯೇತ್ ।
ಸ್ನಾನಂ ಕೃತ್ವಾ ವಿಧಾನೇನ ಜ್ಞಾತಿಭಿಸ್ಸ್ವಗೃಹಂ ವ್ರಜೇತ್ ॥ ೬ ॥

---

೩. ಮೃತನಿಗೆ ಪಿಂಡವನ್ನೂ, ಮೂರು ಜಲಾಂಜಲಿಗಳನ್ನೂ ಕೊಡಬೇಕು. ನಾಲ್ಕನೆಯ ಐದನೆಯ ಮತ್ತು ಆರನೆಯ ದಿನಗಳಲ್ಲೂ ಒಂದು ಪಿಂಡವನ್ನೂ ಜಲಾಂಜಲಿಯನ್ನು ಕೊಡಬೇಕು.

೪. ಏಳನೆಯ ದಿನ ಸ್ನಾನಮಾಡಿ, ಬೇರೆಯ ಸ್ಥಳದಲ್ಲಿ ಪಿಂಡವನ್ನು ಹಾಕಬೇಕು. ಹೀಗೆ ಹತ್ತನೆಯ ದಿನದವರೆಗೂ ಪ್ರತಿದಿನವೂ ಮಾಡಬೇಕು.

೫. ಹತ್ತನೆಯದಿನ ಮೃತನ ದಶರಾತ್ರಜ್ಞಾತಿಪುರುಷರು ಕ್ಷೌರಮಾಡಿಸಿಕೊಂಡು ಸಚೇಲರಾಗಿ ಸ್ನಾನಮಾಡಿ ತಿಲಾಂಜಲಿಯನ್ನು ಕೊಟ್ಟು ಮತ್ತೆ ಸ್ನಾನಮಾಡಬೇಕು.

೬. ಉತ್ತರಕ್ರಿಯೆಮಾಡುವವನು ಪಿಂಡದಾನವನ್ನು ಮಾಡಿ ಬಳಿಕ ಕ್ಷೌರವನ್ನು ಮಾಡಿಸಿಕೊಳ್ಳಬೇಕು. ಆಮೇಲೆ ವಿಧಿಯಂತೆ ಸ್ನಾನಮಾಡಿ, ಜ್ಞಾತಿಗಳೊಡನೆ ತನ್ನ ಮನೆಗೆ ಹೋಗಬೇಕು.

× ತಿಲಾಮಲಕಸ್ನೇಹೇನ

ಏಕಾದಶೇ ಚ ದಿವಸೇ ಏಕೋದ್ದಿಷ್ಟಂ ಯಥಾವಿಧಿ ।
ಸ್ನಾತ್ವಾ ಚೈವ ಶುಚಿರ್ಭೂತ್ವಾ ಪ್ರೇತಂ ವಿಪ್ರೇಷು ಯೋಜಯೇತ್ ॥ ೭ ॥

ಏಕೋದ್ದಿಷ್ಟಂ ಮನುಷ್ಯಾಣಾಂ ಚಾತುರ್ವರ್ಣ್ಯಸ್ಯ ಮಾಧವಿ ।
ಯಥೋಕ್ತಂ ದ್ರವ್ಯಸಂಯುಕ್ತಂ ಸ್ವಂ ವಿಪ್ರಂ ಭೋಜಯೇತ್ತದಾ ॥ ೮ ॥

ಸ್ನಾತ್ವಾ ಚೈವಂ ಶುಚಿರ್ಭೂತ್ವಾ ಪ್ರೇತಂ ವಿಪ್ರೇಷು ಯೋಜಯೇತ್ ।
ಏಕೋದ್ದಿಷ್ಟಂ ತು ದ್ರವ್ಯಾಣಾಂ ಚಾತುರ್ವರ್ಣ್ಯಸ್ಯ ಮಾಧವಿ ॥ ೯ ॥

ಅಪಾಕದ್ರವ್ಯಂ ಸಂಗೃಹ್ಯ ಬ್ರಹ್ಮಣೋ ವಚನಂ ಯಥಾ ।
ತ್ರಿಷು ವರ್ಣೇಷು ಕರ್ತವ್ಯಂ ಪಾಕಭೋಜನಮಿತ್ಯಂತ ॥ ೧೦ ॥

ಶುಶ್ರೂಷಯಾ ವಿಪನ್ನಾನಾಂ ಶೂದ್ರಾಣಾಂ ಚ ವರಾನನೇ ।
ತ್ರಯೋದಶೇ ದಿನೇ ಪ್ರಾಪ್ತೇ ಸುಪಕ್ವೈರ್ಭೋಜಯೇದ್ದ್ವಿಜಾನ್ ॥ ೧೧ ॥

---

೭. ಹನ್ನೊಂದನೆಯ ದಿನ ಸ್ನಾನಮಾಡಿ ಶುದ್ಧನಾಗಿ ವಿಧಿಯಂತೆ ಪ್ರೇತನನ್ನು ಏಕೋದ್ದಿಷ್ಟಶ್ರಾದ್ಧಕ್ಕಾಗಿ ಬ್ರಾಹ್ಮಣನಲ್ಲಿ ಆವಾಹಿಸಬೇಕು.

೮-೧೦. ಮಾಧವೀ, ಚತುರ್ವರ್ಣದವರಿಗೂ ಏಕೋದ್ದಿಷ್ಟಶ್ರಾದ್ಧವು ಅವಶ್ಯವಾದುದು. ಅದರಲ್ಲಿ ತಮ್ಮ ಬ್ರಾಹ್ಮಣನಿಗೆ ಶಾಸ್ತ್ರದಲ್ಲಿ ಹೇಳಿರುವಷ್ಟು ದಕ್ಷಿಣೆಯನ್ನು ಕೊಟ್ಟು ಭೋಜನಮಾಡಿಸಬೇಕು. ಶೂದ್ರರ ಶ್ರಾದ್ಧದಲ್ಲಿ ಅಪಕ್ವ (ಆಮ) ಪದಾರ್ಥಗಳನ್ನು ಬ್ರಾಹ್ಮಣರು ತೆಗೆದುಕೊಳ್ಳಬೇಕು. ಬ್ರಾಹ್ಮಣಾದಿ ಮೂರುವರ್ಣಗಳಲ್ಲಿ ಪಕ್ವಪದಾರ್ಥಗಳ ಭೋಜನದಿಂದಲೇ ಶ್ರಾದ್ಧವನ್ನು ಮಾಡಬೇಕು.

೧೧. ಸುಂದರಮುಖೀ, ಬ್ರಾಹ್ಮಣಾದಿಗಳ ಶುಶ್ರೂಷೆಮಾಡುತ್ತಿದ್ದ ಶೂದ್ರರು ಮೃತರಾದರೂ ಹದಿಮೂರನೆಯ ದಿನದಲ್ಲಿ ಚೆನ್ನಾಗಿ ಅಡಿಗೆಮಾಡಿದ ಪದಾರ್ಥಗಳಿಂದಲೇ ದ್ವಿಜರಿಗೆ ಭೋಜನಮಾಡಿಸಬೇಕು.

ಮೃತಸ್ಯ ನಾಮ ಚೋದ್ದಿಶ್ಯ ಯಸ್ಯಾರ್ಥೇ ಚ ಪ್ರಯೋಜಿತಃ ।
ಸ್ವರ್ಗತಸ್ಯೇತಿ ಸಂಕಲ್ಪಂ ಕೃತ್ವಾ ಬ್ರಾಹ್ಮಣಮಂದಿರಂ ॥ ೧೨ ॥

ಗತ್ವಾ ನಿಮಂತ್ರಿತಂ ವಿಪ್ರಂ ನಮ್ರೋ ಭೂತ್ವಾ ಸಮಾಹಿತಃ ।
ಮಂತ್ರೇಣಾನೇನ ಭೂದೇವಿ ಮನಸ್ಯೇವ ಪಠಂತಿ ತಂ ॥ ೧೩ ॥

ಗತೋಽಸಿ ದಿವ್ಯಲೋಕೇ ತ್ವಂ ಕೃತಾಂತ ವಿಹಿತೇನ ಚ ।
ಮನಸಾ ವಾಯುಭೂತಸ್ತ್ವಂ ವಿಪ್ರಮೇನಂ ಸಮಾಶ್ರಯ ॥ ೧೪ ॥

ಅಸ್ತಂಗತೇ ತಥಾದಿತ್ಯೇ ಗತ್ವಾ ಬ್ರಾಹ್ಮಣಮಂದಿರಂ ।
ದತ್ವಾ ತು ಪಾದ್ಯಂ ವಿಧಿವನ್ನಮಸ್ಕೃತ್ಯ ದ್ವಿಜೋತ್ತಮಂ ॥ ೧೫ ॥

ಪಾದಸಂವಾಹನಂ ಕಾರ್ಯಂ ಪ್ರೇತಸ್ಯ ಹಿತಕಾಮ್ಯಯಾ ।
ಪ್ರೇತಭೋಗಶರೀರೇ ತು ಬ್ರಾಹ್ಮಣಸ್ಯ ಚ ಸುಂದರಿ ॥ ೧೬ ॥

೧೨-೧೪. ದೇವೀ, ಹಾಗೆ ಮಾಡುವಾಗ ಬ್ರಾಹ್ಮಣರ ಮನೆಯಲ್ಲಿಯೇ ಅಡಿಗೆಯನ್ನು ಮಾಡಿಸಿ, ಅಲ್ಲಿಗೆ ಹೋಗಿ, ಸ್ವರ್ಗಸ್ಥನಾದ ಇಂತಹವನಿಗೆ ಎಂದು ಮೃತನ ಹೆಸರನ್ನು ಹೇಳಿ, ಸಂಕಲ್ಪಮಾಡಿ, ಶಾಂತತೆಯಿಂದ ನಮ್ರನಾಗಿ ನಿಮಂತ್ರಣಕ್ಕೆ ಹೇಳಿರುವ ಬ್ರಾಹ್ಮಣನನ್ನು ವಂದಿಸಿ, 'ನೀನು ವಿಧಿವಶನಾಗಿ ದಿವ್ಯಲೋಕವನ್ನು ಸೇರಿದ್ದೀಯೆ. ನೀನು ಮನಸ್ಸಿಟ್ಟು ವಾಯುರೂಪನಾಗಿ ಈ ಬ್ರಾಹ್ಮಣನಲ್ಲಿ ಬಂದು ಸೇರು' ಎಂಬ ಅರ್ಥದ 'ಗತೋಸಿ ದಿವ್ಯಲೋಕೇತ್ವಂ........ ಸಮಾಶ್ರಯ' ಎಂಬ ಮೇಲಿನ (೧೪ ನೆಯ) ಮಂತ್ರವನ್ನು ಹೇಳಬೇಕು.

೧೫-೧೬. ಸುಂದರಿ, ಆದಿನ ಸೂರ್ಯನು ಅಸ್ತನಾಗುತ್ತಲೂ ಮತ್ತೆ ಬ್ರಾಹ್ಮಣರ ಮನೆಗೆ ಹೋಗಿ ಪ್ರೇತಹಿತಾರ್ಥವಾಗಿ ಪ್ರೇತಭೋಗ ಶರೀರನಾಗಿರುವ ದ್ವಿಜೋತ್ತಮನಿಗೆ ಪಾದ್ಯವನ್ನು ವಿಧಿಪೂರ್ವಕವಾಗಿ ಅರ್ಪಿಸಿ, ನಮಸ್ಕರಿಸಿ ಕಾಲುಗಳನ್ನೊತ್ತಬೇಕು.

ಯಾವತ್ತು ತಿಷ್ಠತೇ ತತ್ರ ಪ್ರೇತಭೋಗಮುದೀಕ್ಷತೇ ।
ತಾವನ್ನ ಸಂಸ್ಪೃಶೇದ್ಭೂಮೇ ಮಮಗಾತ್ರಂ ಪ್ರತಿಷ್ಠಿತಂ ॥ ೧೭ ॥

ಪ್ರಭಾತಾಯಾಂ ತು ಶರ್ವರ್ಯಾಮುದಿತೇ ಚ ದಿವಾಕರೇ ।
ಶ್ಮಶ್ರುಕರ್ಮ ಪ್ರಕರ್ತವ್ಯಂ ವಿಪ್ರಸ್ಯ ತು ಯಥಾವಿಧಿ ॥ ೧೮ ॥
ಸ್ನಾಪನಾಭ್ಯಂಜನಂ ಕಾರ್ಯಂ ಪ್ರೇತಸಂತೋಷದಾಯಕಂ ॥ ೧೯ ॥

ಗೃಹೀತ್ವಾ ಭೂಮಿಭಾಗಂ ಚ ಸ್ಥಂಡಿಲಂ ತತ್ರ ಕಾರಯೇತ್ ।
ನಿಪಾತದೇಶಂ ಸಂಗೃಹ್ಯ ಸುಚಿದೇಶೇ ಸಮಾಹಿತಃ ।
ನದೀಕೂಲೇ ನಿಖಾತೇ ವಾ ಪ್ರೇತಭೂಮಿಂ ವಿನಿರ್ದಿಶೇತ್ ॥ ೨೦ ॥

ಚತುಷ್ಷಷ್ಠಿಕೃತಂ ಭಾಗಂ ಯಥಾವತ್ಸುಕೃತಂ ಭವೇತ್ ।
ತತೋ ದಕ್ಷಿಣಪೂರ್ವೇಷು ದಿಗ್ವಿಭಾಗೇಷು ಸುಂದರಿ ॥ ೨೧ ॥

---

೧೭. ಭೂಮೀ, ಪ್ರೇತತೃಪ್ತಿಗಾಗಿ ಭೋಜನಮಾಡಿದವನು ಆ ಆಹಾರವು ತನ್ನ ದೇಹದಲ್ಲಿರುವವರೆಗೂ, ಪ್ರತಿಷ್ಠಿತವಾದ ನನ್ನ ವಿಗ್ರಹವನ್ನು ಮುಟ್ಟಕೂಡದು.

೧೮–೧೯. ರಾತ್ರಿಯು ಕಳೆದು ಸೂರ್ಯೋದಯವಾಗುತ್ತಲೂ ಬ್ರಾಹ್ಮಣನಿಗೆ ಯಥಾವಿಧಿಯಾಗಿ ಪ್ರೇತಕ್ಕೆ ಸಂತೋಷಜನಕವಾದ ಆಯುಷ್ಕರ್ಮವನ್ನೂ ಅಭ್ಯಂಜನಸ್ನಾನವನ್ನೂ ಮಾಡಿಸಬೇಕು.

೨೦. ನದಿಯ ಅಥವಾ ಹಳ್ಳದ ದಡದಲ್ಲಿ ತಗ್ಗಾದ ಶುಚಿಯಾದ ಭೂಪ್ರದೇಶವನ್ನು ನೋಡಿ, ಪ್ರೇತಭೂಮಿಯನ್ನು ನಿಷ್ಕರ್ಷಿಸಿ ಅಲ್ಲಿ ಸ್ಥಂಡಿಲವನ್ನು ಕಲ್ಪಿಸಬೇಕು.

೨೧--೨೨. ಅದರಲ್ಲಿ ಅರವತ್ತನಾಲ್ಕು ಭಾಗವನ್ನು ಅನುಕೂಲವಾಗಿ ಮಾಡಿಕೊಳ್ಳಬೇಕು. ಸುಂದರಿ, ಬಳಿಕ ಅಲ್ಲಿ ಆಗ್ನೇಯ ಭಾಗದಲ್ಲಿ ನದಿಯ

ಛಾಯಾಯಾಂ ಕುಂಜರಸ್ಯಾಪಿ ನದೀಕುಲದ್ರುಮೇ ತಥಾ ।
ಚಾಂಡಾಲಾದಿಪ್ರಹೀನೇ ತು ಪ್ರೇತಕಾರ್ಯಂ ಸಮಾಚರೇತ್ ॥ ೨೨ ॥

ಯಂ ದೇಶಂತು ನ ಪಶ್ಯಂತಿ ಕುಕ್ಕುಟಶ್ವಾನಸೂಕರಾಃ ।
ಶ್ವಾ ಚಾಪ್ಯೋಹತಿ ರಾವೇಣ ಗರ್ಜಿತೇನ ಚ ಸೂಕರಃ ॥ ೨೩ ॥

ಕುಕ್ಕುಟಃ ಪಕ್ಷವಾತೇನ ಚಾಂಡಾಲಶ್ಚ ಯಥಾ ಧರೇ ।
ತತ್ರ ಕುರ್ವಂತಿ ಯೇ ಶ್ರಾದ್ಧಂ ಪಿತೄಣಾಂ ಬಂಧನಪ್ರದಂ ।
ವರ್ಜನೀಯಾ ಬುಧೈರೇತೇ ಪ್ರೇತಕಾರ್ಯೇಷು ಸುಂದರಿ ॥ ೨೪ ॥

ದೇವತಾಸುರಗಂಧರ್ವಾಃ ಪಿಶಾಚೋರಗರಾಕ್ಷಸಾಃ ।
ನಾಗಾ ಭೂತಾನಿ ಯಜ್ಞಾಶ್ಚ ಯೇ ಚ ಸ್ಥಾವರಜಂಗಮಾಃ ॥ ೨೫ ॥

×ಸ್ಥಾನಂ ಕೃತ್ವಾ ಯಥಾ ದೇವಿ ತವ ಪೃಷ್ಠೇ ಪ್ರತಿಷ್ಠಿತಾ ॥೨೬ ॥

ದಡದಲ್ಲಿರುವ ದೇವಯೋಗ್ಯವಾದ ಮರದ ನೆರಳಿನಲ್ಲಿ ಚಾಂಡಾಲಾದಿಗಳಿಲ್ಲದ ಸ್ಥಳದಲ್ಲಿ ಪ್ರೇತಕಾರ್ಯವನ್ನು ಮಾಡಬೇಕು.

೨೩-೨೪. ಕೋಳಿ, ನಾಯಿ, ಹಂದಿಗಳೂ, ಚಾಂಡಾಲರೂ ನೋಡುವ ಅಥವಾ ಅವರ ಧ್ವನಿಯು ಕೇಳಿಸುವ ಸ್ಥಳದಲ್ಲಿಯೂ, ಕೋಳಿಯ ರಕ್ಕೆಯ ಗಾಳಿಯಿಂದ ಅಪವಿತ್ರವಾದ ಸ್ಥಳದಲ್ಲೂ ಪಿತೃಗಳಿಗೆ ಶ್ರಾದ್ಧವನ್ನು ಮಾಡುವುದರಿಂದ ಆ ಪಿತೃಗಳಿಗೆ ಬಂಧನವುಂಟಾಗುವುದು. ಸುಂದರೀ, ವಿದ್ವಾಂಸರು ಪ್ರೇತಕಾರ್ಯಗಳಲ್ಲಿ ಅಂತಹ ಸ್ಥಳಗಳನ್ನು ಬಿಟ್ಟು ಬಿಡಬೇಕು.

೨೫-೨೬. ದೇವೀ, ದೇವತೆಗಳೂ, ಅಸುರರೂ, ಗಂಧರ್ವರೂ, ಪಿಶಾಚೋರಗರಾಕ್ಷಸರೂ, ನಾಗರೂ, ಭೂತಗಳೂ, ಇತರ ಚರಾಚರಗಳೂ ನಿನ್ನಮೇಲೆ ಮನೆಮಾಡಿಕೊಂಡು ನೆಲಸಿವೆ. ಯಜ್ಞಗಳು ನಿನ್ನ ಮೇಲೆಯೇ ನಡೆಯುತ್ತವೆ.

× ಸ್ನಾನಂ ಕೃತ್ವಾ.

ಧಾರಯಿಷ್ಯಾಮಿ ಸುಶ್ರೋಣಿ ವಿಷ್ಣುಮಾಯಾತತಂ ಜಗತ್ |
ಚಂಡಾಲಮಾದಿತಃ ಕೃತ್ವಾ ನರಾಣಾಂ ತು ಶುಭಾಶುಭಂ || ೨೭ ||

ಸ್ನಾನಂ ಕುರ್ವಂತು ತೇ ಭೂಮೌ ಸ್ಥಂಡಿಲೇ ತದನಂತರೇ |
ಅಕೃತ್ವಾ ಪೃಥಿವೀಭಾಗಂ ನಿವಾಪಂ ಯೇ ತು ಕುರ್ವತೇ || ೨೮ ||

ತ್ವದಧೀನಂ ಜಗದ್ಭದ್ರೇ ತವೋಚ್ಛಿಷ್ಟಂ ಹತಂ ಭವೇತ್ |
ನ ದೇವಾಃ ಪಿತರಸ್ತಸ್ಯ ಗೃಹ್ಣಂತೀಹ ಕದಾಚನ || ೨೯ ||

ಪತಂತಿ ನರಕೇ ಘೋರೇ ತೇನೋಚ್ಛಿಷ್ಟೇನ ಸುಂದರಿ |
ಸ್ಥಡಿಂಲೇ ಪ್ರೇತಭಾಗಂ ತು ದದ್ಯಾತ್ಪೂರ್ವಾಹ್ಣಿಕಂ ಶು ತಂ || ೩೦ ||

ಕೃತ್ವಾ ತು ಪಿಂಡಸಂಕಲ್ಪಂ ನಾಮಗೋತ್ರೇಣ ಮಾಧವಿ |
ಪಶ್ಚಾದಶ್ನಂತಿ ಗೋತ್ರಾಣಿ ಕುಲಜಾಶ್ಚೈಕಭೋಜನಾಃ || ೩೧ ||

---

೨೭. ಸುಶ್ರೋಣೀ, ಚಾಂಡಾಲಾದಿಯಾದ ಮನುಷ್ಯರಿಗೆ ಶುಭಾಶುಭವನ್ನುಂಟುಮಾಡುವ ವಿಷ್ಣುಮಾಯಾವೃತವಾದ ಜಗತ್ತ (ನಿನ್ನ)ನ್ನು ನಾನು ಧರಿಸಿರುವೆನು.

೨೮-೨೯. ಭದ್ರೇ, ಭೂಮಿ, ಮೇಲೆಹೇಳಿರುವ ಆರಿಸಿ ಶುದ್ಧಮಾಡಿ ಸಿದ್ಧಪಡಿಸಿರುವೆಡೆಯಲ್ಲಲ್ಲದೆ ಬೇರೆ ಕಡೆಯಲ್ಲಿ ಪಿತೃತರ್ಪಣಮಾಡಿದರೆ ಜಗತು ನಿನ್ನ ಅಧೀನವಾಗಿದೆಯಾದುದರಿಂದ ಆ ತರ್ಪಣವು ನಿನ್ನ ಎಂಜಲಾಗಿ ಹಾಳಾಗುವುದು. ಅಂತಹುದನ್ನು ದೇವತೆಗಳಾಗಲಿ, ಪಿತೃಗಳಾಗಲಿ ಎಂದಿಗೂ ಪರಿಗ್ರಹಿಸುವುದಿಲ್ಲ.

೩೦-೩೧. ಸುಂದರೀ, ಮಾಧವೀ, ಆ ಉಚ್ಛಿಷ್ಟವನ್ನು ಪರಿಗ್ರಹಿಸಿದರೆ ಪಿತೃಗಳು ಘೋರವಾದ ನರಕದಲ್ಲಿ ಬೀಳುವರು. ಪ್ರೇತಭಾಗವನ್ನು ಶುದ್ಧಿಯಾದ ನೆಲದಮೇಲೆ ಪೂರ್ವಾಹ್ಣದಲ್ಲಿ ಮೃತನ ನಾಮಗೋತ್ರಗಳನ್ನು ಹೇಳಿ ಪಿಂಡಸಂಕಲ್ಪವನ್ನು ಮಾಡಿ ಹಾಕಬೇಕು. ಬಳಿಕ ಜ್ಞಾತಿಗಳೊಡನೆ ಊಟ ಮಾಡಬೇಕು.

ನ ದದ್ಯಾದನ್ಯಗೋತ್ರೇಭ್ಯೋ ಯೇ ನ ಭುಂಜಂತಿ ತತ್ರ ವೈ ।
ಚತುರ್ಣಾಮಪಿ ವರ್ಣಾನಾಂ ಪ್ರೇತಕಾರ್ಯೇಷು ಸುಂದರಿ ।
ಏವಂ ದತ್ತೇನ ಪ್ರೀಯಂತೇ ಪ್ರೇತಲೋಕಗತಾ ನರಾಃ ॥ ೩೨ ॥

ಅದತ್ವಾ ಪ್ರೇತಭಾಗಂ ತು ಭುಂಕ್ತೇ ಯಸ್ತತ್ರ ಮಾನವಃ ।
ಗತ್ವಾ ಮಹಾನದೀಂ ಸೋಽಪಿ ಸಚೇಲಂ ಸ್ನಾನಮಾಚರೇತ್ ॥ ೩೩ ॥

ತೀರ್ಥಾನಿ ಮನಸಾ ಗತ್ವಾ ತ್ರಿಭಿರಭ್ಯುಕ್ಷಯೇದ್ಭುವಂ ।
ಏವಂ ಶುದ್ಧಿಂ ತತಃ ಕೃತ್ವಾ ಬ್ರಾಹ್ಮಣಾನ್ ಶೀಘ್ರಮಾನಯೇತ್ ॥ ೩೪ ॥

ಆಗತಾಂಶ್ಚ ದ್ವಿಜಾನ್ದೃಷ್ಟ್ವಾ ಕರ್ತವ್ಯಾ ಸ್ವಾಗತಕ್ರಿಯಾ ॥ ೩೫ ||

ಅರ್ಘ್ಯಂ ಪಾದ್ಯಂ ತತೋ ದದ್ಯಾದ್ಧೃಷ್ಟಪುಷ್ಟೇನ ಮಾಧವಿ ।
ಆಸನಂ ಚೋಪಕಲ್ಪೇತ ಮಂತ್ರೇಣ ವಿಧಿಪೂರ್ವಕಂ ॥ ೩೬ ॥

---

೩೨. ಅನ್ಯಗೋತ್ರದವರಿಗೆ ಆಶೌಚವಿರುವ ಗೃಹದಲ್ಲಿ ಊಟಮಾಡಿಸ ಬಾರದು. ಸುಂದರಿ, ನಾಲ್ಕು ವರ್ಣದವರಲ್ಲಿಯೂ ಹೀಗೆ ಪ್ರೇತಕಾರ್ಯ ಮಾಡುವುದರಿಂದ ಪ್ರೇತಲೋಕಕ್ಕೆ ಹೋದವರು ತೃಪ್ತರಾಗುವರು.

೩೩. ಪ್ರೇತಭಾಗವನ್ನು ಕೊಡದೆ ಊಟಮಾಡುವವನು ಮಹಾನದಿಗೆ ಹೋಗಿ, ಧರಿಸಿರುವ ಬಟ್ಟೆಯೊಡನೆ ಸ್ನಾನಮಾಡಬೇಕು.

೩೪. ಶ್ರಾದ್ಧ ಅಥವಾ ಪ್ರೇತಕರ್ಮವನ್ನು ಮಾಡುವ ಸ್ಥಳವನ್ನು ತೀರ್ಥ ಗಳನ್ನು ಮನಸ್ಸಿನಿಂದ ಸ್ಮರಿಸಿ ಮೂರು ಸಾರಿ ಪ್ರೋಕ್ಷಿಸಬೇಕು. ಬಳಿಕ ಬ್ರಾಹ್ಮಣರನ್ನು ಅಲ್ಲಿಗೆ ಬರಮಾಡಬೇಕು.

೩೫–೩೬. ಮಾಧವೀ, ಬಂದ ಬ್ರಾಹ್ಮಣರ ಸುಖಾಗಮನವನ್ನು ಕೇಳಿ, ಬಳಿಕ ಸಂತೋಷದಿಂದ ಅರ್ಘ್ಯಪಾದ್ಯಗಳನ್ನು ಅರ್ಪಿಸಿ, “ದ್ವಿಜೋತ್ತಮನೇ, ಈ ಪೀಠವನ್ನು ನಿನಗೆ ಅರ್ಪಿಸಿದ್ದೇನೆ- ಇದನ್ನಲಂಕರಿಸಿ ವಿಶ್ರಾಂತನಾಗಿ

ಮಂತ್ರಃ—

ಇದಂ ತೇ ಆಸನಂ ದತ್ತಂ ವಿಶ್ರಾಮಂ ಕ್ರಿಯತಾಂ ದ್ವಿಜ ।
ಕುರುಷ್ವ ಮೇ ಪ್ರಸಾದಂ ಚ ಸುಪ್ರಸೀದ ದ್ವಿಜೋತ್ತಮ ॥ ೩೭ ॥

ಉಪವೇಶ್ಯಾಸನೇ ವಿಪ್ರಂ ಛತ್ರಂ ಸಂಕಲ್ಪಯೇತ್ಪುನಃ ।
ನಿವಾರಣಾರ್ಥಮಾಕಾಶೇ ಭೂತಾ ಗಗನಚಾರಿಣಃ ॥ ೩೮ ॥

ದೇವಗಂಧರ್ವಯಕ್ಷಾಶ್ಚ ಸಿದ್ಧಸಂಘಾ ಮಹಾಸುರಾಃ ।
ಧಾರಣಾರ್ಥಂ ತಥಾಕಾಶೇ ಛತ್ರಂ ತೇಜಸ್ವಿನಾಂ ಕೃತಂ ॥ ೩೯ ॥

ಪ್ರೇತಸ್ಯ ಚ ಹಿತಾರ್ಥಾಯ ಧಾರಯೇತ ವಸುಂಧರೇ ।
ಪೂರ್ವಂ ಸಂಹೃಷ್ಟತುಷ್ಟೇನ ಪ್ರೇತಭಾಗಂ ಚ ದಾಪಯೇತ್ ॥ ೪೦ ॥

ಛತ್ರಮಾವರಣಾರ್ಥಂ ತು ದದ್ಯಾಚ್ಚೈವ ದ್ವಿಜಾತಯೇ ॥ ೪೧ ॥

ಪ್ರಸನ್ನನಾಗಿ ನನಗೆ ಅನುಗ್ರಹಿಸು" ಎಂಬ ಅರ್ಥದ "ಇದಂತೇ ಆಸನಂ...........ದ್ವಿಜೋತ್ತಮ" ಎಂಬ ಮೇಲಿನ (೩೭ನೆಯ) ಮಂತ್ರದಿಂದ ವಿಧಿಪೂರ್ವಕವಾಗಿ ಪೀಠವನ್ನು ಅರ್ಪಿಸಬೇಕು.

೩೮–೩೯. ಮೇಲಿನ ಮಂತ್ರದಿಂದ ಬ್ರಾಹ್ಮಣನನ್ನು ಪೀಠದಲ್ಲಿ ಕುಳ್ಳಿರಿಸಿ ಛತ್ರಿಯದಾನಕ್ಕೆ ಸಂಕಲ್ಪವನ್ನು ಮಾಡಬೇಕು. ಆಕಾಶಗಾಮಿಗಳಾದ ದೇವಗಂಧರ್ವಯಕ್ಷರು, ಸಿದ್ಧಸಂಘಗಳು, ಮಹಾಸುರರು ಇವರೇ ಮೊದಲಾದ ತೇಜಸ್ವಿಗಳಿಗೆ ಭೂತನಿವಾರಣೆಗಾಗಿ ಹಿಡಿದುಕೊಳ್ಳಲು ಛತ್ರಿಯು ಕಲ್ಪಿತವಾಗಿದೆ.

೪೦. ವಸುಂಧರೇ, ಅಂತಹ ಕೊಡೆಯನ್ನು ಪ್ರೇತಹಿತಾರ್ಥವಾಗಿಯೂ ಬ್ರಾಹ್ಮಣನು ಧರಿಸಲು ಅತಿಸಂತೋಷದಿಂದ ದಾನಮಾಡಬೇಕು,

೪೧–೪೨. ಕೊಡೆಯನ್ನು ಪ್ರೇತಕ್ಕೆ ಮರೆಮಾಡಲು ಬ್ರಾಹ್ಮಣನಿಗೆ ಕೊಡಬೇಕು. ಸಿದ್ಧರೊಡಗೂಡಿದ ದೇವತೆಗಳೂ, ಗಂಧರ್ವರೂ, ಅಸುರರೂ,

ಆಕಾಶೇ ತತ್ರ ಪಶ್ಯಂತಿ ದೇವಾಸ್ಸಿದ್ಧಪುರೋಗಮಾಃ ।
ಗಂಧರ್ವಾ ಹ್ಯಸುರಾಸ್ಸಿದ್ಧಾ ರಾಕ್ಷಸಾಃ ಪಿಶಿತಾಶಿನಃ ॥ ೪೨ ॥

ದೃಶ್ಯಮಾನೇಷು ಸರ್ವೇಷು ಪ್ರೇತಸ್ಸಂವ್ರೀಡಿತೋ ಭವೇತ್ ।
ವ್ರೀಡಮಾನಂ ತತೋ ದೃಷ್ಟ್ವಾ ಹಸಂತ್ಯಸುರರಾಕ್ಷಸಾಃ ।
ಏವಂ ನಿವಾರಣಂ ಛತ್ರಮಾದಿತ್ಯೇನ ಕೃತಂ ಪುರಾ ॥ ೪೩ ॥

ಪ್ರೇತಲೋಕಗತಾನಾಂ ಚ ಸರ್ವದೇವರ್ಷಿಣಾಂ ಪುರಾ ।
ಅಗ್ನಿವರ್ಷಂ ಶಿಲಾವರ್ಷಂ ತಪ್ತಂ ತತ್ರ ಜಲೋದಕಂ ॥ ೪೪ ॥

ಭಸ್ಮವರ್ಷಂ ತತೋ ಘೋರಮಹೋರಾತ್ರೇಣ ಮಾಧವಿ ।
ಏವಂ ನಿವಾರಣಂ ಛತ್ರಂ ದದ್ಯಾದ್ವಿಪ್ರಾಯ ಮಾಧವಿ ॥ ೪೫ ॥

ಪಶ್ಚಾದುಪಾನಹೌ ದದ್ಯಾತ್ಪಾದಸ್ಪರ್ಶಕರೇ ಶುಭೇ ।
ಉಪಾನಹೋಶ್ಚ ವಕ್ಷ್ಯಾಮಿ ದಾನೇ ಭವತಿ ಯತ್ಫಲಂ ॥ ೪೬ ॥

ಮಾಂಸಾಹಾರಿಗಳಾದ ರಾಕ್ಷಸರೂ ಆಕಾಶದಲ್ಲಿ ಮೇಲೆ ನಿಂತು ಪ್ರೇತನನ್ನು ನೋಡುವರು.

೪೩. ಅವರೆಲ್ಲರೂ ನೋಡುವುದರಿಂದ ಪ್ರೇತನು ಬಲು ನಾಚಿಕೊಳ್ಳುವನು. ಹಾಗೆ ನಾಚಿಕೊಳ್ಳುವ ಪ್ರೇತನನ್ನು ನೋಡಿ, ಆಅಸುರಾದಿಗಳು ನಗುವರು. ಅದನ್ನು ತಪ್ಪಿಸಲು ಪೂರ್ವದಲ್ಲಿ ಸೂರ್ಯನು ಕೊಡೆಯನ್ನು ಏರ್ಪಡಿಸಿದನು.

೪೪–೪೫. ಮಾಧವೀ, ಪೂರ್ವದಲ್ಲಿ ಪ್ರೇತಲೋಕಕ್ಕೆ ಹೋದ ಸರ್ವದೇವರ್ಷಿಗಳಿಗೂ ಅಗ್ನಿವರ್ಷ, ಕಾಯ್ದ ಶಿಲಾವರ್ಷ, ಜಲವರ್ಷ, ಭಸ್ಮವರ್ಷಗಳು ಹಗಲೂ ರಾತ್ರಿಯೂ ಘೋರವಾಗಿದ್ದುವು. ಅವುಗಳನ್ನು ನಿವಾರಿಸುವ ಕೊಡೆಯನ್ನು ಬ್ರಾಹ್ಮಣನಿಗೆ ದಾನಮಾಡಬೇಕು.

೪೬. ಶುಭೇ, ಬಳಿಕ ಕಾಲುಗಳಿಗೆ ಹಿತಕರವಾದ ಪಾದರಕ್ಷೆಗಳನ್ನು ದಾನಮಾಡಬೇಕು. ಪಾದರಕ್ಷೆಗಳ ದಾನದಿಂದಾಗುವ ಫಲವನ್ನು ಹೇಳುತ್ತೇನೆ,

ಪಾದೌ ಚ ತೇ ನ ದಹ್ಯೇತಾಂ ಯಮಸ್ಯ ವಿಷಯಂ ಗತೇ ।
ತಮೋಂಧಕಾರವಿಷಮಂ ದುರ್ಗಮಂ ಘೋರದರ್ಶನಂ ॥ ೪೭ ॥

ಏಕಾಕೀ ದುಸ್ಸಹಂ ಲೋಕೇ ಪಥಾಯೇನ ಸ ಗಚ್ಛತಿ ।
ಕಾಲೋಮೃತ್ಯುಶ್ಚ ದೂತಶ್ಚ ಯಷ್ಟಿಮುದ್ಯಮ್ಯ ಪೃಷ್ಠತಃ ॥ ೪೮ ॥

ಅಹೋರಾತ್ರೇಣ ಘೋರೇಣ ಪ್ರೇತಂ ನಯತಿ ಮಾಧವಿ ।
ದದ್ಯಾತ್ತದರ್ಥಂ ವಿಪ್ರಾಯ ಪದತ್ರೇ ಚ ಸುಖಾವಹೇ ॥ ೪೯ ॥

ತಪ್ತವಾಲುಮಯೀ ಭೂಮಿಃ ಕಂಕಟೈಕ್ಕೈರುಪಸಂಸ್ತೃತಾ ।
ತೇನ ದುರ್ಗಾಣಿ ತರತಿ ದತ್ತಯೋಪಾನಹಾತ್ರ ವೈ ॥ ೫೦ ॥

ಪಶ್ಚಾದ್ಧೂಪಂ ಚ ದೀಪಂ ಚ ದದ್ಯಾದ್ವೈ ಮಂತ್ರಪೂರ್ವಕಂ ।
ಯಾತಿ ಯೇನ ವಿಜಾನೀಯಾತ್ಪೃಥಕ್ಪ್ರೇತೇನ ಯೋಜಯೇತ್ ॥ ೫೧ ॥

---

೪೭. ಕಗ್ಗತ್ತಲೆಯಿಂದ ನೋಡಲು ಭಯಂಕರವಾಗಿಯೂ, ವಿಷಮವೂ, ದುರ್ಗಮವೂ ಆಗಿಯೂ ಇರುವ ಯಮಲೋಕಕ್ಕೆ ಹೋದವನ ಕಾಲುಗಳನ್ನು ಆ ಪಾದರಕ್ಷೆಗಳು ಸುಡದಂತೆ ಮಾಡುವುವು.

೪೮–೪೯. ಮೃತನು ಸಹಿಸಲು ಕಷ್ಟವಾದ ಯಮಲೋಕಮಾರ್ಗದಲ್ಲಿ ಒಂಟಿಗನಾಗಿ ಘೋರವಾದ ಹಗಲೂ, ರಾತ್ರಿಯೂ ಹೋಗುವನು. ಕಾಲನಾದ ಯಮನೂ, ಯಮದೂತನೂ ದೊಣ್ಣೆಗಳನ್ನು ಎತ್ತಿಹಿಡಿದುಕೊಂಡು, ಮೃತನ ಹಿಂದೆ ನಡೆಯುತ್ತ ಕರೆದುಕೊಂಡು ಹೋಗುವರು. ಆದುದರಿಂದ ಗಮನದಲ್ಲಿ ಸುಖವನ್ನುಂಟುಮಾಡುವ ಪಾದರಕ್ಷೆಗಳನ್ನು ಬ್ರಾಹ್ಮಣನಿಗೆ ಕೊಡಬೇಕು.

೫೦. ಪಾದರಕ್ಷೆಗಳನ್ನು ದಾನಮಾಡುವುದರಿಂದ ಕಾದಮರಳು ಮುಳ್ಳುಗಳು ಹರಡಿರುವ ನೆಲವುಳ್ಳ ಆ ಪ್ರದೇಶದ ಕಷ್ಟಗಳು ಮೃತನಿಗೆ ತಪ್ಪುವುವು.

೫೧. ಪಾದರಕ್ಷೆಯ ದಾನವಾದ ಬಳಿಕ ಮಂತ್ರಪೂರ್ವಕವಾಗಿ ಧೂಪ ದೀಪಗಳನ್ನೂ ಕೊಡಬೇಕು. ಆದರಿಂದ ಪ್ರೇತನು ಯಮಲೋಕದಲ್ಲಿ ದಾರಿಯನ್ನು ತಿಳಿದು ನಡೆಯುವಂತಾಗುವುದು.

ನಾಮಗೋತ್ರಮುದಾಹೃತ್ಯ ಪ್ರೇತಾಯ ತದನಂತರಂ ।
ಶೀಘ್ರಮಾವಾಹಯೇದ್ಭೂಮೇ ದರ್ಭಪಾತ್ರೇ ಚ ಭೂತಲೇ ॥ ೫೨ ॥

ಮಂತ್ರಃ—

ಇಹಲೋಕಂ ಪರಿತ್ಯಜ್ಯ ಗತೋಽಸಿ ಪರಮಾಂ ಗತಿಂ ।
ಗೃಹ್ಣ ಗಂಧಂ ಮುದಾ ಯುಕ್ತೋ ಭಕ್ತ್ಯಾ ಪ್ರೇತೋಪಪಾದಿತಂ ॥ ೫೩ ॥

ಗಂಧಮಂತ್ರಃ—

ಸರ್ವಗಂಧಂ ಸರ್ವಪುಷ್ಪಂ ಧೂಪಂ ದೀಪಂ ತಥೈವ ಚ ।
ಪ್ರತಿಗೃಹ್ಣೀಷ್ವ ವಿಪ್ರೇಂದ್ರ ಪ್ರೇತಮೋಕ್ಷಪ್ರದೋ ಭವ ॥ ೫೪ ॥

ಏವಂ ವಸ್ತ್ರಾಣಿ ವಿಪ್ರಾಯ ಸರ್ವಾಣ್ಯಾಭರಣಾನಿ ಚ ।
ಪುನಃಪುನಶ್ಚ ಪಕ್ವಾನ್ನಂ ಪ್ರಯಚ್ಛೇತ್ತು ವಸುಂಧರೇ ॥ ೫೫ ॥

---

೫೨. ಭೂಮೀ, ಬಳಿಕ ಗೋತ್ರವನ್ನೂ, ಹೆಸರನ್ನೂ ಹೇಳಿ, ನೆಲದ ಮೇಲಿರಿಸಿದ ದರ್ಭಸಹಿತವಾದ ಪಾತ್ರೆಯಲ್ಲಿ ಪ್ರೇತನನ್ನು ಆವಾಹನೆಮಾಡಬೇಕು.

೫೩-೫೬. ವಸುಂಧರೇ, ಆವಾಹನೆಮಾಡಿದ ಬಳಿಕ "ಪ್ರೇತಾ, ನೀನು ಈ ಲೋಕವನ್ನು ಬಿಟ್ಟು ಪರಮಗತಿಯನ್ನು ಪಡೆದಿದ್ದೀಯೆ. ನಾನು ಭಕ್ತಿಯಿಂದ ಅರ್ಪಿಸುವ ಈ ಗಂಧವನ್ನು ಸಂತೋಷದಿಂದ ಪರಿಗ್ರಹಿಸು. ಬ್ರಾಹ್ಮಣೋತ್ತಮನೇ, ನಾನು ಸಂಪಾದಿಸಿರುವ ಎಲ್ಲಾ ಗಂಧವನ್ನೂ ಎಲ್ಲಾ ಹೂಗಳನ್ನೂ ಧೂಪದೀಪಗಳನ್ನೂ ಸ್ವೀಕರಿಸಿ ಈ ಪ್ರೇತನಿಗೆ ಮೋಕ್ಷವನ್ನು ಕೊಡು." ಎಂಬ ಅರ್ಥದ ಮೇಲಿನ (೫೩-೫೪ ನೆಯ) ಮಂತ್ರದಿಂದ ಗಂಧಪುಷ್ಪ ಧೂಪ ದೀಪಗಳನ್ನು ಅರ್ಪಿಸಿ ಬಳಿಕ ವಸ್ತ್ರಗಳನ್ನೂ, ಸರ್ವಾಭರಣಗಳನ್ನೂ ಆ ಬ್ರಾಹ್ಮಣನಿಗೆ ದಾನಮಾಡಬೇಕು. ಬಳಿಕ ಅಡಿಗೆಯಾದ ಅನ್ನವೇ ಮೊದಲಾದ ಪ್ರೇತನಿಗೆ ಇಷ್ಟವಾದ ಪದಾರ್ಥಗಳೆಲ್ಲವನ್ನೂ ಮತ್ತೆಮತ್ತೆ ಬಡಿಸಿ, ಬ್ರಾಹ್ಮಣನಿಗೆ ಊಟಮಾಡಿಸಬೇಕು.

ಏನಮಾದೀನಿ ದ್ರವ್ಯಾಣಿ ಪ್ರೇತಭೋಗ್ಯಾನಿ ಸರ್ವಶಃ |
ಪಾದಶೌಚಾದಿ ತ್ರಿಃ ಕೃತ್ವಾ ಚಾತುರ್ವರ್ಣ್ಯಸ್ಯ ಮಾಧವಿ || ೫೬ ||

ಏವಂ ವಿಧಿಃ ಪ್ರಯೋಕ್ತವ್ಯಃ ಶೂದ್ರಾಣಾಂ ಮಂತ್ರವರ್ಜಿತಂ |
ಅಮಂತ್ರಸ್ಯ ಚ ಶೂದ್ರಸ್ಯ ವಿಪ್ರೋ ಗೃಹ್ಣಾತಿ ಮಂತ್ರತಃ || ೫೭ ||

ಏತತ್ಸರ್ವಂ ವಿನಿರ್ವರ್ತ್ಯ ಪಕ್ವಾನ್ನಂ ಭೋಜಯೇದ್ದ್ವಿಜಂ |
ಭೋಕ್ಷ್ಯಮಾಣೇನ ವಿಪ್ರೇಣ ಜ್ಞಾನಶುದ್ಧೇನ ಸುಂದರಿ || ೫೮ ||

ಪ್ರೇತಾಯ ಪ್ರಥಮಂ ದದ್ಯಾನ್ನ ಸ್ಪೃಶೇತ ಪರಾತ್ಪರಂ ।
ಸರ್ವಂ ವ್ಯಂಜನಸಂಯುಕ್ತಂ ಪ್ರೇತಭಾಗಂ ಪ್ರಕಲ್ಪಯೇತ್ || ೫೯ ||

ಮಾಧವೀ, ಗಂಧಪುಷ್ಪಾದಿಗಳನ್ನು ಅರ್ಪಿಸುವುದಕ್ಕೆ ಮೊದಲು ನಾಲ್ಕುವರ್ಣದವರೂ ಮೂರುಸಾರಿ ಕಾಲುತೊಳೆಯಬೇಕು.

೫೭. ಶೂದ್ರರು ಮೇಲೆಹೇಳಿದ ವಿಧಿಯನ್ನು ಅಮಂತ್ರಕವಾಗಿ ಮಾಡಬೇಕು. ಮಂತ್ರವಿಲ್ಲದೆ ಶೂದ್ರನು ಕೊಡುವುದನ್ನೂ ಬ್ರಾಹ್ಮಣನು ಸಮಂತ್ರಕವಾಗಿ ಪರಿಗ್ರಹಿಸಬೇಕು.

೫೮. ಸುಂದರೀ, ಮೇಲೆಹೇಳಿರುವಂತೆ ಗಂಧಪುಷ್ಪಾದಿಗಳೆಲ್ಲವನ್ನೂ ಅರ್ಪಿಸಿ, ಬಳಿಕ ನಿಮಂತ್ರಣಾರ್ಹನಾದ ಜ್ಞಾನಶುದ್ಧನಾದ ಬ್ರಾಹ್ಮಣನಿಗೆ ಪ್ರೇತನಿಗೋಸ್ಕರ ಪಕ್ವಪದಾರ್ಥಗಳಿಂದ ಭೋಜನವನ್ನು ಮಾಡಿಸಬೇಕು.

೫೯. ಪ್ರೇತನಿಗೆ ಮೊದಲು ಎಲ್ಲವನ್ನೂ ವ್ಯಂಜನದೊಡನೆ ಬಡಿಸಬೇಕು. ಪ್ರೇತಭೋಜನಾದಿಗಳನ್ನು ಮಾಡಿಸುವಾಗ ಪರಾತ್ಪರನ ವಿಗ್ರಹವನ್ನು ಮುಟ್ಟಬಾರದು.

+ದೇವತ್ವಂ ಬ್ರಾಹ್ಮಣತ್ವಂ ಚ ಪ್ರೇತಪಿಂಡೇ ಪ್ರದೀಯತೇ ।
ಮಾನುಷತ್ವಂ ನಿವಾಸೇಷು ಜ್ಞಾತವ್ಯಂ ಸತತಂ ಬುಧೈಃ ॥ ೬೦ ॥ (?)

ಪಿತೃಸ್ಥಾನೇ ಪ್ರದಾತವ್ಯಂ ವಿಧಾನಾನ್ಮಂತ್ರಸಂಯುತಂ ।
ಏವಂ ಪ್ರೇತೇಷು ವಿಪ್ರೇಷು ಏಕಕಾಲೋ ನ ವಿದ್ಯತೇ ॥ ೬೧ ॥ (?)

ಹಸ್ತಶೌಚಂ ಪುನಃ ಕೃತ್ವಾ ಹ್ಯುಪಸ್ಪೃಶ್ಯ ಯಥಾವಿಧಿ ।
ಸಮಂತ್ರಂ ಪ್ರತಿಗೃಹ್ಣಾತಿ ಪಕ್ವಾನ್ನಂ ಭಕ್ಷ್ಯಭೋಜನಂ ॥ ೬೨ ॥

ಭುಜ್ಯಮಾನಸ್ಯ ವಿಪ್ರಸ್ಯ ಪ್ರೇತಭಾಗಂ ಚ ನಿತ್ಯಶಃ ।
ಜ್ಞಾತಿವರ್ಗೇಷು ಗೋತ್ರೇಷು ಸಂಬಂಧಿಸ್ವಜನೇಷು ಚ ।
ಭಾಗಸ್ತತ್ರ ಪ್ರದಾತವ್ಯಸ್ತಸ್ಯಾರ್ಥೇ ಯಸ್ಯ ವಿದ್ಯತೇ ॥ ೬೩ ॥

ವಿಪ್ರಾಯ ದೀಯಮಾನೇ ತು ವಾರಣೇಯಂ ನಕೇನಚಿತ್ ॥ ೬೪ ॥

ನಿವಾರಯತಿ ಯೋ ದತ್ತಂ ಗುರುಹತ್ಯಾಫಲಂ ಲಭೇತ್ ।
ನ ದೇವಾಃ ಪ್ರತಿಗೃಹ್ಣಂತಿ ನಾಗ್ನಯಃ ಪಿತರಸ್ತಥಾ ॥ ೬೫ ॥

೬೦-೬೧.

೬೨-೬೩. ಮತ್ತೆ ಕೈತೊಳೆದುಕೊಂಡು ವಿಧಿಯಂತೆ ಆಚಮನವನ್ನು ಮಾಡಿ ಸಮಂತ್ರಕವಾಗಿ ಪಕ್ವಾನ್ನಭಕ್ಷ್ಯಭೋಜ್ಯಾದಿಶೇಷವನ್ನು ಜ್ಞಾತಿವರ್ಗದವರೊಡನೆಯೂ ಸಂಬಂಧಿಗಳೊಡನೆಯೂ ಭುಜಿಸಬೇಕು.

೬೪-೬೫. ಬ್ರಾಹ್ಮಣನಿಗೆ ಕೊಡುವುದನ್ನೂ, ಊಟಕ್ಕೆ ಬಡಿಸುವುದನ್ನೂ ಯಾರೂ ತಡೆಯಬಾರದು. ಹಾಗೆ ತಡೆದವನಿಗೆ ಗುರುಹತ್ಯೆಯ ಪಾಪವು ಬರುವುದು. ಅಲ್ಲದೆ ಹಾಗೆ ತಡೆಮಾಡಿ ಕೊಡುವುದನ್ನು ದೇವತೆಗಳಾಗಲಿ, ಅಗ್ನಿಗಳಾಗಲಿ, ಪಿತೃಗಳಾಗಲಿ, ಪರಿಗ್ರಹಿಸುವುದಿಲ್ಲ.

+ ೬೦-೬೧ ನೆಯ ಶ್ಲೋಕಗಳ ಪದಗಳಿಗೆ ಅರ್ಥವಾಗುವಂತಿದ್ದರೂ ಈ ಪ್ರಕರಣಕ್ಕೆ ಸರಿಯಾದ ವಾಕ್ಯಾರ್ಥವು ಆಗುವುದಿಲ್ಲ.

ಏವಂ ವಿಲುಪ್ಯತೇ ಧರ್ಮಃ ಪ್ರೇತಸ್ತಸ್ಯ ನ ತುಷ್ಯತಿ ।
ಏವಂ ವಿಚಿಂತ್ಯಮಾನಸ್ಯ ಯಥಾ ಧರ್ಮೋ ನ ಲುಪ್ಯತೇ ॥ ೬೬ ॥

ಜ್ಞಾತಿಸಂಬಂಧಿಮಧ್ಯೇ ತು ಯೋ ದದ್ಯಾತ್ಪ್ರೇತಭೋಜನಂ ।
ಹೃಷ್ಟೇನ ಮನಸಾ ವಿಪ್ರೇ ಪ್ರೇತಭಾಗಂ ವಿಶೇಷತಃ ॥ ೬೭ ॥

ಕೂಟವತ್ಪ್ರತಿತಿಷ್ಠೇತ ದೃಷ್ಟ್ವಾ ತೃಪ್ತಿಂ ನ ಗಚ್ಛತಿ ।
ಏವಂ ತು ಪ್ರೇತಭಾವೇನ ಶೀಘ್ರಂ ಮುಂಚತಿ ಕಿಲ್ಬಿಷಾತ್ ॥ ೬೮ ॥

ತೃಪ್ತಿಂ ಜ್ಞಾತ್ವಾ ತು ವಿಪ್ರಸ್ಯ ಪಕ್ವಾನ್ನೇನ ತು ಮಾಧವಿ ।
ದಾತವ್ಯಮುದಕಂ ತಸ್ಯ ಪಾಣಾವಭ್ಯುಕ್ಷಣಂ ತತಃ ॥ ೬೯ ॥

ದೃಷ್ಟ್ವಾ ತು ಪ್ರೋಕ್ಷಿತಂ ತೇನ ಉಚ್ಛಿಷ್ಟಂ ನ ವಿಸರ್ಜಯೇತ್ ।
ಬ್ರಾಹ್ಮಣೇನಾಪ್ಯನುಜ್ಞಾತಃ ಶೀಘ್ರಂ ಸರಂಭಯೇತ್ತತಃ ।
ದಾತವ್ಯಂ ತತ್ರ ಚೋಚ್ಛಿಷ್ಟಂ ಯೇನ ಹೇತುಮಗರ್ಹಿತಂ ॥ ೭೦ ॥

೬೬-೬೮. ಆದರಿಂದ ಧರ್ಮಲೋಪವಾಗುವುದಲ್ಲದೆ ಪ್ರೇತಕ್ಕೆ ತೃಪ್ತಿಯೂ ಆಗದೆ ಹೋಗುವುದು. ಎಂಬುದನ್ನು ಯೋಚಿಸಿ ಜ್ಞಾತಿಗಳ ಮಧ್ಯದಲ್ಲಿ ಸಂತೋಷಮನಸ್ಸಿನಿಂದ ಬ್ರಾಹ್ಮಣನಿಗೆ ಪ್ರೇತನಿಗಾಗಿ ವಿಶೇಷವಾಗಿ ಊಟಮಾಡಿಸುವವನ ಧರ್ಮವು ಲೋಪವಾಗದಂತೆ ಮಾಡುವುದಕ್ಕಾಗಿ ಇತರರಾರೂ ಏನೂ ಹೇಳದೆ ಮೌನದಿಂದಿರಬೇಕು. ಹಾಗೆ ಮಾಡುವುದರಿಂದ ಮೃತನು ಪ್ರೇತರೂಪದಿಂದಲೂ ಪಾಪದಿಂದಲೂ ಬೇಗನೆ ಮುಕ್ತನಾಗುವನು.

೬೯. ಮಾಧವೀ, ಬ್ರಾಹ್ಮಣನಿಗೆ ಅಡಿಗೆಯ ಪದಾರ್ಥದಿಂದ ತೃಪ್ತಿಯಾದುದನ್ನರಿತು, ಬಳಿಕ ಉತ್ತರಾಪೋಶನವನ್ನೂ, ಆಮೇಲೆ ಕೈತೊಳೆಯಲು ನೀರನ್ನೂ ಕೊಡಬೇಕು.

೭೦. ಆ ಬ್ರಾಹ್ಮಣನು ಬಿಟ್ಟ ಉಚ್ಛಿಷ್ಟವನ್ನು ಎತ್ತಿ ಹೊರಗೆ ಬಿಸುಡಬಾರದು. ಬ್ರಾಹ್ಮಣನ ಅನುಜ್ಞೆಯನ್ನು ಪಡೆದು, ಬಳಿಕ ಅದನ್ನು ಶುದ್ಧವೂ, ದೋಷರಹಿತವೂ ಆದೆಡೆಯಲ್ಲಿ (ನಾಯಿ ಮೊದಲಾದುವು ತಿನ್ನದಂತೆ) ಹಾಕಬೇಕು.

ಉಪಸ್ಪೃಶ್ಯ ವಿಧಾನೇನ ಮಮ ತೀರ್ಥಗತೇನ ಚ ।
ಶುಚಿರ್ಭೂತ್ವಾ ತು ವಿಧಿವತ್ಕೃತ್ವಾ ಶಾಂತ್ಯುದಕಾನಿ ತು ॥ ೭೧ ॥

ಪ್ರಣಮ್ಯ ಶಿರಸಾ ದೇವಿ ನಿವಾಪಸ್ಥಾನಮಾಗತಃ ।
ಮಂತ್ರೈಃ ಸ್ತುತಿಸ್ತು ಕರ್ತವ್ಯಾ ತವ ಭಕ್ತ್ಯಾವತಿಷ್ಠತಾ ॥ ೭೨ ॥

ನಮೋ ನಮೋ ಮೇದಿನಿ ಲೋಕಮಾತಃ
ಉರ್ವ್ಯೈ ಮಹಾಶೈಲಶಿಲಾಧರಾಯೈ ।
ನಮೋ ನಮೋ ಧಾರಿಣಿ ಲೋಕಧಾತ್ರಿ
ಜಗತ್ಪ್ರತಿಷ್ಠೇ ವಸುಧೇ ನಮೋಽಸ್ತು ತೇ ॥ ೭೩ ॥

ಏವಂ ನಿವಾಪದಾನೇನ ತವ ಭಕ್ತೇನ ಸುಂದರಿ ।
ದದ್ಯಾತ್ತಿಲೋದಕಂ ತತ್ರ ನಾಮಗೋತ್ರಮುದಾಹರೇತ್ ॥ ೭೪ ॥

೭೧–೭೨. ದೇವೀ, ಬಳಿಕ ನನ್ನ ತೀರ್ಥಕ್ಕೆ ಹೋಗಿ ಯಥಾವಿಧಿಯಾಗಿ ಶುದ್ಧನಾಗಿ ಆಚಮನಮಾಡಿ, ತರ್ಪಣಮಾಡುವ ಸ್ಥಳಕ್ಕೆ ಹೋಗಿ ಶಾಂತ್ಯುದಕವನ್ನು ಪ್ರೋಕ್ಷಿಸಿ ಭೂಮಿಯಾದ ನಿನ್ನಲ್ಲಿ ಭಕ್ತಿಯುಳ್ಳವನಾಗಿ ತಲೆಬಾಗಿ ವಂದಿಸಿ, ಸ್ತುತಿಸಬೇಕು.

೭೩. 'ಮಹಾಶೈಲಗಳನ್ನೂ, ಶಿಲೆಗಳನ್ನೂ ಧರಿಸಿರುವ ಲೋಕಮಾತೆಯೇ, ಭೂಮೀ, ನಿನಗೆ ನಮಸ್ಕಾರ. ನಮಸ್ಕಾರ. ಜಗದಾಧಾರೇ, ನಿನಗೆ ನಮಸ್ಕಾರ. ಲೋಕಧಾತ್ರೀ, ನಿನಗೆ ನಮಸ್ಕಾರ. ಧಾರಿಣಿ, ವಸುಂಧರೇ, ನಿನಗೆ ನಮಸ್ಕಾರ.'

೭೪. ಸುಂದರೀ, ನಿನ್ನ ಭಕ್ತನಾದವನು ಹೀಗೆ ನಿನ್ನನ್ನು ಪ್ರಾರ್ಥಿಸಿ, ಮೃತನ ಗೋತ್ರವನ್ನೂ ಹೆಸರನ್ನೂ, ಕೇಳಿ, ತಿಲೋದಕದಿಂದ ತರ್ಪಣವನ್ನು ಕೊಡಬೇಕು.

ಜಾನುಭ್ಯಾಮುವನಿಂ ಗತ್ವಾ ನಮಸ್ಕೃತ್ಯ ದ್ವಿಜೋತ್ತಮಾನ್ ।
ಪಾಣಿಂ ಸಂಗೃಹ್ಯ ಹಸ್ತೇನ ಮಂತ್ರೇಣೋತ್ಥಾಪಯೇದ್ದ್ವಿಜಾನ್ ॥ ೭೫ ॥

ದದ್ಯಾಚ್ಚಯ್ಯಾಸನಂ ದೇವಿ ತಥೈವಾಂಜನಕಂಕಣಂ ।
ಅಂಜನಂ ಕಂಕಣಂ ಗೃಹ್ಯ ಶಯ್ಯಾಮಾಕ್ರಮ್ಯ ಸ ದ್ವಿಜಃ ॥ ೭೬ ॥

ಮುಹೂರ್ತಂ ತತ್ರ ವಿಶ್ರಮ್ಯ ನಿವಾಪಸ್ಥಾನಮಾಗತಃ ।
ಗವಾಂ ಲಾಂಗೂಲಮುದ್ಧೃತ್ಯ ದದ್ಯಾದ್ಬ್ರಾಹ್ಮಣಹಸ್ತಕೇ ॥ ೭೭ ॥

ಪಾತ್ರೇಣೋದುಂಬರಸ್ಥೇನ ಕೃತ್ವಾ ಕೃಷ್ಣತಿಲೋದಕಂ ।
ಉದಾಹರೇತ್ತು ಮಂತ್ರಾನ್ವೈ ಸೌರಭೇಯಾನ್ದ್ವಿಜಾತಯಃ ॥ ೭೮ ॥

---

೭೫. ಬಳಿಕ ದ್ವಿಜೋತ್ತಮರಿಗೆ ನೆಲದಮೇಲೆ ಮೊಳಕಾಲೂರಿ ಬಾಗಿ ವಂದಿಸಿ, ತನ್ನ ಕಯ್ಯಿಂದ ಅವರ ಕಯ್ಯನ್ನು ಹಿಡಿದುಕೊಂಡು ಮಂತ್ರವನ್ನು ಹೇಳಿ ಏಳಿಸಬೇಕು.

೭೬–೭೭. ಬಳಿಕ ಅವರಿಗೆ ಶಯ್ಯಾಸನವನ್ನೂ, *ಅಂಜನ †ಕಂಕಣಗಳನ್ನೂ ಕೊಡಬೇಕು. ಬ್ರಾಹ್ಮಣರು ಅವನ್ನು ಸ್ವೀಕರಿಸಿ ಹಾಸಿಗೆ (ಶಯ್ಯೆ)ಯಲ್ಲಿ ಮುಹೂರ್ತಕಾಲ ವಿಶ್ರಮಿಸಿಕೊಂಡು, ಬಳಿಕ ಹೊರಟು ಹೋಗಬೇಕು. ಶ್ರಾದ್ಧಕರ್ತೃವು ತರ್ಪಣಸ್ಥಾನಕ್ಕೆ ಬಂದು, ದಾನಕ್ಕಾಗಿ ನಿಷ್ಕರ್ಷಿಸಿರುವ ಹಸುಗಳ ಬಾಲವನ್ನು ಕೈಯ್ಯಲ್ಲಿ ಹಿಡಿದುಕೊಂಡು, ಮೇಲೆತ್ತಿ ಬ್ರಾಹ್ಮಣನ ಕೈಗೆ ಕೊಡಬೇಕು

೭೮–೮೦. ಅತ್ತಿಯ ಮರದಿಂದ ಮಾಡಿದ ಪಾತ್ರೆಯಲ್ಲಿರುವ ಮಂತ್ರ ಪವಿತ್ರವಾದ ಕರಿಯ ಎಳ್ಳುನೀರನ್ನು ತೆಗೆದುಕೊಂಡು, ಸರ್ವಪಾಪಗಳನ್ನೂ

---

* ಅಂಜನ = ಕಣ್ಣುಕಪ್ಪು.

† ಕಂಕಣ = ಕೈಬಳೆ; ಕೈಗೆ ಕಟ್ಟುವ ಮಂತ್ರೋಕ್ತವಾದ ನೂಲು; ಜಲಬಿಂದು.

ಮಂತ್ರಪೂತಂ ತದಾ ತೋಯಂ ಸರ್ವಪಾಪಪ್ರಣಾಶನಂ ।
ಉದ್ಧೃತ್ಯ ತಚ್ಚ ಲಾಂಗೂಲಂ ತೋಯೇನಾಭ್ಯುಕ್ಷ್ಯ ವೈ ತತಃ ॥ ೭೯ ॥

ಪಶ್ಚಾತ್ಪ್ರೇತಂ ವಿಸರ್ಜ್ಯೈವಂ ದದ್ಯಾದ್ಗಾನಂ ದ್ವಿಜಾತಯೇ ।
ನಿವಾಪಮನ್ನಮಶುಚಿಂ ದದ್ಯಾದ್ವಾಯಸತರ್ಪಣಂ ॥ ೮೦ ॥

ಗತ್ವಾ ತು ಬ್ರಾಹ್ಮಣೇಭ್ಯೋಽಪಿ ಸ್ವಗೃಹಂ ಯತ್ರ ತಿಷ್ಠತಿ ।
ಪಕ್ವಾನ್ನಂ ಭೋಜಯೇತ್ಸರ್ವಂ ನ ತಿಷ್ಠೇತ್ಪ್ರತಿವಾಸಿಕಂ ॥ ೮೧ ॥

ಪಿಪೀಲಿಕಾದಿಭೂತಾನಿ ಪ್ರೇತಭಾಗಂ ಚ ಸರ್ವಶಃ ।
ಕೃತ್ವಾ ತು ತರ್ಪಣಂ ದೇವಿ ಯಸ್ಯಾರ್ಥೇ ತಸ್ಯ ಕಲ್ಪಯೇತ್ ॥ ೮೨ ॥

ಭುಕ್ತೇಷು ತೇಷು ಸರ್ವೇಷು ದೀನಾನಾಥಾನ್ಪ್ರತರ್ಪ್ಯ ಚ ।
ಪ್ರೇತರಾಜಪುರಂ ಗತ್ವಾ ಪ್ರಯಚ್ಛತಿ ಸ ಮಾಧವಿ ॥ ೮೩ ॥

ಸರ್ವಾನ್ನಮಕ್ಷಯಂ ತಸ್ಯ ದತ್ತಂ ಭವತಿ ಸುಂದರಿ ।
ಕರ್ತವ್ಯ ಏವಂ ಸಂಸ್ಕಾರಃ ಪ್ರೇತಭಾವವಿಶೋಧನಃ ॥ ೮೪ ॥

ಹೋಗಲಾಡಿಸುವ ಹಸುವಿನ ಬಾಲಕ್ಕೆ ಪ್ರೋಕ್ಷಿಸಿ, ಬಳಿಕ ಪ್ರೇತವನ್ನು ವಿಸರ್ಜಿಸಿ, ಗೋವನ್ನು ಬ್ರಾಹ್ಮಣನಿಗೆ ಅರ್ಪಿಸಬೇಕು. ಅಶುದ್ಧವಾದ ನಿವಾಪಾನ್ನವನ್ನು ಕಾಗೆಗಳಿಗೆ ಹಾಕಬೇಕು.

೮೧–೮೨. ಬಳಿಕ ಮನೆಗೆ ಬ್ರಾಹ್ಮಣರೊಡನೆ ಹೋಗಿ, ಎಲ್ಲರಿಗೂ ಭೋಜನವನ್ನು ಮಾಡಿಸಬೇಕು. ಇರುವೆಗಳೇ ಮೊದಲಾದ ಸರ್ವಪ್ರಾಣಿಗಳನ್ನೂ ಪ್ರೇತತೃಪ್ತಿಗಾಗಿ ಸಂತೋಷಪಡಿಸಬಹುದು.

೮೩-೮೪. ಮಾಧವೀ, ಅವುಗಳನ್ನೂ, ದೀನಾನಾಥರನ್ನೂ ತೃಪ್ತಿಪಡಿಸಿದರೆ ಯಮಲೋಕಕ್ಕೆ ಹೋಗಿ ಮೃತನಿಗೆ ಸರ್ವಾನ್ನವನ್ನೂ, ಅಕ್ಷಯವಾಗಿರುವಂತೆ ಕೊಟ್ಟಂತಾಗುವುದು. ಮೃತನಿಗೆ ಪ್ರೇತಭಾವವನ್ನು ಹೋಗಲಾಡಿಸುವ ಸಂಸ್ಕಾರವನ್ನು ಹೀಗೆ ಮಾಡಬೇಕು.

ನೇಮಿಪ್ರಭೃತಿಭಿಶ್ಶೌಚಂ ಚಾತುರ್ವರ್ಣ್ಯಸ್ಯ ಸರ್ವತಃ ॥ ೮೫ ॥

ಭವಿಷ್ಯತಿ ನ ಸಂದೇಹೋ ದೃಷ್ಟಪೂರ್ವಂ ಸ್ವಯಂಭುವಾ ।
ಕೃತ್ವಾ ತು ಧರ್ಮಸಂಕಲ್ಪಂ ಪ್ರೇತಕಾರ್ಯಂ ವಿಶೇಷತಃ ॥ ೮೬ ॥

ನ ಭೇತವ್ಯಂ ತ್ವಯಾ ಪುತ್ರ ಪ್ರೇತಕಾರ್ಯೇ ಕೃತೇ ಸತಿ ।
ವಿಸ್ತರೇಣ ಮಯಾ ಪ್ರೋಕ್ತಂ ಪ್ರತ್ಯಕ್ಷಂ ನಾರದಸ್ಯ ಚ ॥ ೮೭ ॥

ತ್ವಯಾ ವತ್ಸ ಸುತಸ್ಯಾರ್ಥೇ ಕ್ರತುರೇಕಃ ಪ್ರತಿಷ್ಠಿತಃ ।
ತಸ್ಮಾತ್ಪ್ರಭೃತಿ ಲೋಕೇಷು ಪಿತೃಯಜ್ಞೋ ಭವಿಷ್ಯತಿ ॥ ೮೮ ॥

ಏವಂ ಯಾಸ್ಯಸಿ ವತ್ಸ ತ್ವಂ ನ ಶೋಕಂ ಕರ್ತುಮರ್ಹಸಿ ।
ಶಿವಲೋಕಂ ಬ್ರಹ್ಮಲೋಕಂ ವಿಷ್ಣುಲೋಕಂ ನ ಸಂಶಯಃ ॥ ೮೯ ॥

೮೫–೮೬. ನಿಮಿಯಿಂದ ಮೊದಲುಗೊಂಡು ನಾಲ್ಕುವರ್ಣದವರಿಗೆಲ್ಲರಿಗೂ ಈವಿಧವಾದ ಸಂಸ್ಕಾರಮಾಡುವುದರಿಂದ ಶುದ್ಧಿಯುಂಟಾಗುವುದರಲ್ಲಿ ಸಂಶಯವಿಲ್ಲ. ಧರ್ಮವು ಆದರಲ್ಲಿಯೂ ಮುಖ್ಯವಾಗಿ ಪ್ರೇತಕರ್ಮವು ಬ್ರಹ್ಮನು ಉದ್ದೇಶಮಾಡಿ, ಪೂರ್ವದಲ್ಲಿಯೇ ನೋಡಿರುವುದಾಗಿದೆ.

೮೭. "ಪುತ್ರನೇ, ಪ್ರೇತಕಾರ್ಯವನ್ನು ನಿನ್ನ ಮಗನಿಗೆ ಮಾಡಿದುದಕ್ಕಾಗಿ ನೀನು ಹೆದರಬೇಕಾದುದಿಲ್ಲ. ನಾರದನೆದುರಿಗೆ ನಾನು ವಿವರವಾಗಿ ಈ ವಿಚಾರವನ್ನು ಹೇಳಿದ್ದೇನೆ.

೮೮-೮೯. ಮಗುವೇ, ನೀನು ಮಗನಿಗಾಗಿ ಒಂದು ಯಜ್ಞವನ್ನು ಮಾಡಿದಂತಾಯಿತು. ಅದು ಮೊದಲುಗೊಂಡು ಮುಂದೆ ಪಿತೃಕರ್ಮವು ಪಿತೃಯಜ್ಞವೆನಿಸುವುದು. ವತ್ಸನೇ, ಇದರಿಂದ ನೀನು ಸಂದೇಹವಿಲ್ಲದೆ ಶಿವಲೋಕಕ್ಕೂ, ಬ್ರಹ್ಮಲೋಕಕ್ಕೂ ವಿಷ್ಣುಲೋಕಕ್ಕೂ ಹೋಗುವೆ. ದುಃಖಿಸ ಬೇಡ."

ಏವಮುಕ್ತ್ವಾ ತದಾತ್ರೇಯಃ ಪಿತೃಕರ್ಮ ಯಥಾವಿಧಿ ।
ದಾತವ್ಯಂ ತು ತೃತೀಯೇ ಚ ಮಾಸೇ ಸಪ್ತನವೇಷು ಚ ।
ಏಕಾದಶೇ ತಥಾ ಮಾಸೇ ದದ್ಯಾತ್ಸಾಂವತ್ಸರೀಂ ಕ್ರಿಯಾಂ ॥ ೯೦ ॥

ಪ್ರೇತಸ್ಯಾವಾಹನಂ ಕೃತ್ವಾ ಶುಚಿರ್ಭೂತ್ವಾ ಸಮಾಹಿತಃ ।
ಪಕ್ವಾನ್ನಂ ಭೋಜಯೇತ್ತತ್ರ ಪ್ರೇತಭಾಗಂ ಯಥಾವಿಧಿ ॥ ೯೧ ॥

ಮಂತ್ರಯುಕ್ತೋಪಚಾರೇಣ ಚಾತುರ್ವರ್ಣ್ಯಸ್ಯ ಸರ್ವತಃ ।
ವೃಷಲಾನಾಮಮಂತ್ರಾಣಾಂ ಪ್ರಯೋಕ್ತವ್ಯಂ ಯಥಾವಿಧಿ ॥ ೯೨ ॥

ಪ್ರೇತಕಾರ್ಯೇ ನಿವೃತ್ತೇ ತು ಪೂರ್ಣೇ ಸಂವತ್ಸರೇ ತಥಾ ।
ಪ್ರಯಾಂತಿ ಜಂತವಃಕೇಚಿದ್ಗತ್ವಾ ಗಚ್ಛಂತಿ ಚಾಪರೇ ॥ ೯೩ ॥

---

೯೦. ದತ್ತಾತ್ರೇಯನು ಹಾಗೆ ಯಥಾವಿಧಿಯಾಗಿ ಪಿತೃಕರ್ಮವನ್ನು ಹೇಳಿ, " ಮೃತನಿಗೆ ಮೂರನೆಯ ತಿಂಗಳಲ್ಲಿಯೂ ಏಳನೆಯ ತಿಂಗಳಲ್ಲಿಯೂ, ಒಂಬತ್ತನೆಯ ತಿಂಗಳಲ್ಲಿಯೂ, ಹನ್ನೊಂದನೆಯ ತಿಂಗಳಲ್ಲಿಯೂ ವರ್ಷದ ಕಡೆಯಲ್ಲಿಯೂ ಒಂದು ವರ್ಷದವರೆಗೆ ಶ್ರಾದ್ಧವನ್ನು ಮಾಡಬೇಕು.

೯೧. ಶ್ರಾದ್ಧಗಳಲ್ಲಿ ಶಾಂತನೂ, ಶುದ್ಧನೂ ಆಗಿ ಪ್ರೇತವನ್ನು ಆವಾಹನೆ ಮಾಡಿ. ಯಥಾವಿಧಿಯಾಗಿ ಬ್ರಾಹ್ಮಣನಿಗೆ (ಪ್ರೇತಭಾಗವನ್ನು) ಭೋಜನ ಮಾಡಿಸಬೇಕು.

೯೨. ನಾಲ್ಕುವರ್ಣದವರೂ ಮಂತ್ರಯುಕ್ತವಾದ ಉಪಚಾರಗಳನ್ನು ಮಾಡಬೇಕು. ಅಮಂತ್ರರಾದ ಶೂದ್ರರಿಗೆ ಬ್ರಾಹ್ಮಣರು ವಿಧಿಗನುಸಾರವಾಗಿ ಕರ್ಮವನ್ನು ಮಾಡಿಸಬೇಕು.

೯೩. ಪ್ರೇತಕಾರ್ಯವು ನಡೆದು ವರ್ಷವು ಪೂರ್ಣವಾಗಲು ಕೆಲವು ಜೀವರು ಮುಕ್ತರಾಗುವರು ಕೆಲವರು ಬೇರೆ ಲೋಕಗಳಿಗೆ ಹೋಗಿಯೋ ಹೋಗದೆಯೋ ಮತ್ತೆ ಭೂಮಿಗೆ ಬರುವರು.

ಪಿತಾಮಹಃ ಸ್ನುಷಾ ಭಾರ್ಯಾ ಜ್ಞಾತಿಸಂಬಂಧಿಬಾಂಧವಾಃ ।
ಯದ್ಯೇತೇ ಬಹವಸ್ಸಂತಿ ಸ್ವಪ್ನೋಪಮಮಿದಂ ಜಗತ್ ॥ ೯೪ ॥

ಸ್ವಯಂ ಮುಹೂರ್ತಂ ರೋದಿತ್ವಾ ತತೋ ಯಾತಿ ಪರಾಙ್ಮುಖಃ ।
ಸ್ನೇಹಪಾಶೇನ ಬದ್ಧೋ ವೈ ಕ್ಷಣಾರ್ಧಾನ್ಮುಚ್ಯತೇ ತತಃ ॥ ೯೫ ॥

ಕಸ್ಯ ಮಾತಾ ಪಿತಾ ಕಸ್ಯ ಕಸ್ಯ ಭಾರ್ಯಾ ಸುತಾಸ್ತಥಾ ।
ಯುಗೇ ಯುಗೇ ತು ವರ್ತಂತೇ ಮೋಹಪಾಶೇನ ಬಧ್ಯತೇ ॥ ೯೬ ॥

ಸ್ನೇಹಭಾವೇನ ಕರ್ತವ್ಯಃ ಸಂಸ್ಕಾರೋ ಹಿ ಮೃತಸ್ಯ ಚ ॥ ೯೭ ॥

ಮಾತಾಪಿತೃಸಹಸ್ರಾಣಿ ಪುತ್ರದಾರಶತಾನಿ ಚ ।
ಸಂಸಾರೇಷ್ವನುಭೂತಾನಿ ಕಸ್ಯ ತೇ ಕಸ್ಯ ವಾ ವಯಂ ॥ ೯೮ ॥

೯೪–೯೫. ಅಜ್ಜ (ಪಿತಾಮಹ), ಸೊಸೆ, ಹೆಂಡತಿ, ಜ್ಞಾತಿ, ಸಂಬಂಧಿ, ಬಂಧುಗಳು ಎಂಬ ಹಲವರು, ಇದ್ದರೂ ಲೋಕವು ಕನಸ್ಸಿನಂತಿರುವುದು. ಯಾರೇ ಆದರೂ ಮೃತರಿಗಾಗಿ ಸ್ವಲ್ಪಹೊತ್ತು ಅತ್ತು ಆಮೇಲೆ ಹಿಂದಿರುಗುವರು. ಸ್ನೇಹಪಾಶದ ಕಟ್ಟಿಗೊಳಗಾಗಿದ್ದರೂ ಅರ್ಧಕ್ಷಣದಲ್ಲಿ ಅವರಿಂದ ಮುಕ್ತನಾಗುವನು.

೯೬. ಯಾರು ಯಾರಿಗೆ ತಾಯೋ! ಯಾರು ಯಾರಿಗೆ ತಂದೆಯೋ! ಯಾರು ಯಾರಿಗೆ ಹೆಂಡತಿಯೋ! ಯಾರು ಯಾರಿಗೆ ಮಕ್ಕಳೋ! ಯುಗ ಯುಗದಲ್ಲೂ ಯಾವುದೋ ಸಂಬಂಧದಿಂದ ಮೋಹಪಾಶದಿಂದ ಕಟ್ಟುಬೀಳುವರು.

೯೭–೯೮. ಮೃತನಿಗೆ ಪ್ರೀತಿಯಿಂದ ಸಂಸ್ಕಾರವನ್ನೇನೋ ಮಾಡಬೇಕು. ಸಂಸಾರಪ್ರಪಂಚದಲ್ಲಿ ಸಾವಿರಾರುಜನ ತಾಯಿತಂದೆಗಳನ್ನೂ, ನೂರಾರುಜನ ಹೆಂಡತಿಮಕ್ಕಳನ್ನೂ ಅನುಭವಿಸಿದ್ದೇವೆ. ಅವರು ಯಾರಿಗೆ ಸೇರಿದವರು! ನಾವು ಯಾರಿಗೆ ಸೇರಿದವರು!

ಸ್ವಯಂಭುವಾ ವಿಧಿಃ ಪ್ರೋಕ್ತಃ ಪ್ರೇತಸಂಸ್ಕಾರಲಕ್ಷಣಃ ।
ಪ್ರೇತಕಾರ್ಯೇ ನಿವೃತ್ತೇ ತು ಪಿತೃತ್ವಮುಪಜಾಯತೇ ।
ಮಾಸಿ ಮಾಸಿ ಹ್ಯಮಾಯಾಂ ವೈ ಕರ್ತವ್ಯಂ ಪಿತೃತರ್ಪಣಂ ॥ ೯೯ ॥

ಪಿತಾ ಪಿತಾಮಹಶ್ಚೈವ ತಥೈವ ಪ್ರಪಿತಾಮಹಾಃ ।
ಜುಹುಯಾದ್ಬ್ರಾಹ್ಮಣಮುಖೇ ತೃಪ್ತಿರ್ಭವತಿ ಶಾಶ್ವತೀ ॥ ೧೦೦ ॥

ಏವಮುಕ್ತ್ವಾ ಸ ಆತ್ರೇಯಃ ಪಿತೃಯಜ್ಞವಿನಿಶ್ಚಯಂ ।
ಮುಹೂರ್ತಂ ಧ್ಯಾನಮಾಸ್ಥಾಯ ತತ್ರೈವಾಂತರಧೀಯತ ॥ ೧೦೧ ॥

॥ ನಾರದ ಉವಾಚ ॥

ಶ್ರುತ್ವಾ ತು ಮೃತಸಂಸ್ಕಾರಮಾತ್ರೇಯೋಕ್ತಂ ಯಥಾವಿಧಿ ।
ಚಾತುರ್ವರ್ಣ್ಯಸ್ಯ ಸರ್ವಸ್ಯ ತ್ವಯಾ ಧರ್ಮಃ ಪ್ರತಿಷ್ಠಿತಃ ॥ ೧೦೨ ॥

---

೯೯. ಬ್ರಹ್ಮನು, ಪ್ರೇತಸಂಸ್ಕಾರಕ್ಕೆ ಬೇಕಾದ ವಿಧಿಯನ್ನು ಹೇಳಿರುವನು. ಪ್ರೇತಕಾರ್ಯವು ನಡೆದ ಬಳಿಕ ಮೃತರಿಗೆ ಪಿತೃತ್ವವುಂಟಾಗುವುದು. ಪ್ರತಿತಿಂಗಳ ಅಮಾವಾಸ್ಯೆಯಲ್ಲಿಯೂ ಪಿತೃತರ್ಪಣವನ್ನು ಮಾಡಬೇಕು.

೧೦೦–೧೦೧. ತಂದೆ ಅಜ್ಜ ಮುತ್ತಜ್ಜಂದಿ (ಪಿತೃಪಿತಾಮಹಪ್ರಪಿತಾಮಹ) ರಿಗೆ ಶ್ರಾದ್ಧದಲ್ಲಿ ಬ್ರಾಹ್ಮಣಮುಖದಲ್ಲಿ ಅರ್ಪಿಸುವುದರಿಂದ ಶಾಶ್ವತವಾದ ತೃಪ್ತಿಯುಂಟಾಗುವುದು" ಎಂದು ಹೀಗೆ ಆ ಆತ್ರೇಯನು ಪಿತೃಯಜ್ಞನಿರ್ಣಯವನ್ನು ಹೇಳಿ, ಸ್ವಲ್ಪಹೊತ್ತು ಧ್ಯಾನಾಸಕ್ತನಾಗಿದ್ದು ಅಲ್ಲಿಯೇ ಕಣ್ಮರೆಯಾದನು.

೧೦೨. ನಾರದ—ಆತ್ರೇಯನು ಹೇಳಿದ ಮೃತಸಂಸ್ಕಾರವನ್ನು ವಿಧ್ಯುಕ್ತವಾಗಿ ಕೇಳಿ ನಾಲ್ಕುವರ್ಣದವರಿಗೂ ನೀನು ಧರ್ಮವನ್ನು ನೆಲೆಗೊಳಿಸಿದಂತಾಯಿತು.

ಪಿತೃಯಜ್ಞಮುಪಶ್ರಾದ್ಧೇ ಮಾಸಿ ಮಾಸಿ ದಿನೇ ತಥಾ ।
ವರ್ತಯಂತಿ ಯಥಾನ್ಯಾಯಮೃಷಯಶ್ಚ ತಪೋಧನಾಃ ॥ ೧೦೩ ॥

ನಿರ್ದಿಷ್ಟಂ ಬ್ರಾಹ್ಮಣಾನಾಂ ವೈ ಶೂದ್ರಾಣಾಂ ಮಂತ್ರವರ್ಜಿತಂ ।
ನೇಮಿನಾ ಚ ಕೃತಂ ಶ್ರಾದ್ಧಂ ತತಃಪ್ರಭೃತಿ ವೈ ದ್ವಿಜಾಃ ॥ ೧೦೪ ॥

ಕುರ್ವಂತಿ ಸತತಂ ಶ್ರಾದ್ಧಂ ನೇಮಿಶ್ರಾದ್ಧಂ ತದುಚ್ಯತೇ ।
ಸ್ವಸ್ತ್ಯಸ್ತು ತೇ ಮಹಾಭಾಗ ಯಾಸ್ಯಾಮಿ ಮುನಿಸತ್ತಮ ॥ ೧೦೫ ॥

ಏವಮುಕ್ತ್ವಾ ಮುನಿಶ್ರೇಷ್ಠೋ ನಾರದೋ ದ್ವಿಜಸತ್ತಮಃ ।
ತೇಜಸಾ ದ್ಯೋತಯನ್ಸರ್ವಂ ಗತಶ್ಶಕ್ರಪುರಂ ಪ್ರತಿ ॥ ೧೦೬ ॥

---

೧೦೩. ತಪೋಧನರಾದ ಋಷಿಗಳೂ ಪಿತೃಯಜ್ಞವನ್ನು ಪ್ರತಿತಿಂಗಳ ಅಮಾವಾಸ್ಯೆಯಲ್ಲಿಯೂ, ಉಪಶ್ರಾದ್ಧಗಳನ್ನು ದಿನದಿನವೂ ಮಾಡುವರು

೧೦೪-೧೦೫. ನೇಮಿಯಿಂದಾರಂಭವಾದ ಶ್ರಾದ್ಧವು ಶೂದ್ರರಿಗೆ ಮಂತ್ರ ವರ್ಜಿತವಾಗಿಯೂ, ಬ್ರಹ್ಮಕ್ಷತ್ರಿಯವೈಶ್ಯರಿಗೆ ಸಮಂತ್ರಕವಾಗಿಯೂ ವಿಹಿತ ವಾಗಿದೆ. ನೇಮಿಯು ಮಾಡಿದಾಗಿನಿಂದಲೂ ದ್ವಿಜರು ಶ್ರಾದ್ಧವನ್ನು ಮಾಡುವರು ಆದಕ್ಕೆ ನೇಮಿಶ್ರಾದ್ಧವೆಂದು ಹೆಸರಾಗಿದೆ. ಪೂಜ್ಯನಾದ ಮುನಿವರ್ಯನೇ, ನಿನಗೆ ಮಂಗಳವಾಗಲಿ. ನಾನು ಹೊರಡುತ್ತೇನೆ.

೧೦೬. ಬ್ರಾಹ್ಮಣೋತ್ತಮನೂ, ಮುನಿಶ್ರೇಷ್ಠನೂ ಆದ ನಾರದನು ಹೀಗೆ ಹೇಳಿ, ತನ್ನ ಕಾಂತಿಯಿಂದ ಎಲ್ಲವನ್ನೂ ಹೊಳೆಯಿಸುತ್ತ, ಇಂದ್ರನ ರಾಜಧಾನಿ ಯಾದ ಅಮರಾವತಿಗೆ ಹೊರಟು ಹೋದನು.

ಏವಂ ಚ ಪಿಂಡಸಂಕಲ್ಪಂ ಶ್ರಾದ್ಧೋತ್ಪತ್ತಿಂಚ ಮಾಧವಿ ।
ಆತ್ರೇಯೇಣೈವ ಮುನಿನಾ ಸ್ಥಾಪಿತಂ ಬ್ರಾಹ್ಮಣೇಷು ಚ ॥ ೧೦೭ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಪಿಂಡಕಲ್ಪಶ್ರಾದ್ಧೋತ್ಪತ್ತಿರ್ನಾಮ ಅಷ್ಟಾಶೀತ್ಯಧಿಕ ಶತತಮೋಽಧ್ಯಾಯಃ

---

೧೦೭. ಮಾಧವೀ, ಹೀಗೆ ಪಿಂಡಸಂಕಲ್ಪವೂ, ಶ್ರಾದ್ಧೋತ್ಪತ್ತಿಯೂ ಬ್ರಾಹ್ಮಣರಲ್ಲಿ ಆತ್ರೇಯಮುನಿಯಿಂದಲೇ ಸ್ಥಾಪಿತವಾಯಿತು.

ಅಧ್ಯಾಯದ ಸಾರಾಂಶ—

ಶ್ರೀವರಾಹನು ಭೂದೇವಿಗೆ - ಉತ್ತರಕ್ರಿಯಾಧಿಕಾರಿಗಳು ಮೃತನಿಗೆ ಹದಿಮೂರು ದಿನಗಳವರೆಗೆ ಮಾಡಬೇಕಾದ ಕರ್ಮವನ್ನೂ, ಪ್ರೇತಶ್ರಾದ್ಧದಲ್ಲಿ ವರ್ಜ್ಯವಾದುವುಗಳನ್ನೂ, ಶ್ರಾದ್ಧದಲ್ಲಿ ಬಂದ ಬ್ರಾಹ್ಮಣರ ಪೂಜಾದಿಕ್ರಮ, ಛತ್ರಿಪಾದುಕಾದಿಗಳ ದಾನ, ಭಕ್ಷ್ಯಭೋಜ್ಯಾದಿಗಳ ದಾನ, ಇವುಗಳ ವಿಚಾರವನ್ನೂ ದತ್ತಾತ್ರೇಯನು ನಿಮಿಗೆ ಹೇಳಿದ ಪಿತೃಯಜ್ಞವಿಚಾರವನ್ನೂ ತಿಳಿಸುವನು.

ಇಲ್ಲಿಗೆ ಶ್ರೀ ವರಾಹಪುರಾಣಹಲ್ಲಿ ನೂರೆಂಬತ್ತೆಂಟನೆಯ ಅಧ್ಯಾಯ.

॥ ಶ್ರೀಃ ॥

ಏಕೋನನವತ್ಯಧಿಕಶತತಮೋಽಧ್ಯಾಯಃ

ಅಥ ಪಿಂಡಕಲ್ಪೋತ್ಪತ್ತಿಪ್ರಕರಣಂ

॥ ಧರಣ್ಯುವಾಚ ॥

ಶ್ರುತಂ ಶ್ರಾದ್ಧಂ ಯಥಾವೃತ್ತಂ ಶೌಚಾಶೌಚಾಂಶ್ಚ ಸರ್ವಶಃ ।
ಚತುರ್ಣಾಮಪಿ ವರ್ಣಾನಾಂ ಪ್ರೇತಭೋಜ್ಯಂ ಯಥಾವಿಧಿ ॥ ೧ ॥

ಉತ್ಪನ್ನಂ ಸಂಶಯಂ ಮೇಽದ್ಯ ಭಗವನ್ವಕ್ತುಮರ್ಹಸಿ ॥ ೨ ॥

ಚಾತುರ್ವರ್ಣ್ಯೇಷು ಸರ್ವೇಷು ದದ್ಯಾದ್ದಾನಂ ದ್ವಿಜೋತ್ತಮೇ ।
ಪ್ರತಿಗೃಹ್ಣಂತಿ ಯೇ ತತ್ರ ಪ್ರೇತಭಾಗಂ ವಿಶೇಷತಃ ।
ಅನಿಷ್ಟಂ ಗರ್ಹಿತಂ ತತ್ರ ಪ್ರೇತೇನ ಸಹ ಭೋಜನಂ ॥ ೩ ॥

ನೂರೆಂಬತ್ತೊಂಬತ್ತನೆಯ ಅಧ್ಯಾಯ

ಪಿಂಡಕಲ್ಪೋತ್ಪತ್ತಿಪ್ರಕರಣ.

೧. ಭೂದೇವಿ—ದೇವ, ಚತುರ್ವರ್ಣದವರ ಶೌಚಾಶೌಚವನ್ನೂ, ಶ್ರಾದ್ಧ ವಿಚಾರವನ್ನೂ, ಪ್ರೇತಭೋಜ್ಯವನ್ನೂ ಹಿಂದೆ ನಡೆದ ವಿಚಾರದೊಡನೆ ಕೇಳಿದೆನು.

೨-೪. ಭಗವಂತನೇ, ಪುರುಷೋತ್ತಮಾ, ನನಗೆ ಈಗ ಸ್ವಲ್ಪ ಸಂದೇಹ ವುಂಟಾಗಿದೆ. ಅದಕ್ಕೆ ನೀನು ಪರಿಹಾರವನ್ನು ಹೇಳಬೇಕಾಗಿದೆ ಬ್ರಾಹ್ಮಣಾದಿ ಚತುರ್ವರ್ಣದವರೂ ಬ್ರಾಹ್ಮಣೋತ್ತಮರಿಗೆ ದಾನವನ್ನು ಕೊಡಬೇಕು. ಯಾರು ಅನಿಷ್ಟವೂ, ನಿಂದ್ಯವೂ ಆದ ಪ್ರೇತಭಾಗವನ್ನು ಪರಿಗ್ರಹಿಸುವರೋ, (ಆವಾಹಿತನಾದ) ಪ್ರೇತನೊಡನೆ ಊಟಮಾಡುವರೋ ಅವರು ಯಾವ

ಭುಕ್ತ್ವಾ ತೇಷಾಂ ದ್ವಿಜೋ ದೇವ ಮುಚ್ಯತೇ ಕೇನ ಕರ್ಮಣಾ ।
ಕಥಂ ತೇ ತಾರಯಿಷ್ಯಂತಿ ದಾತಾರಂ ಪುರುಷೋತ್ತಮ ।
ಪ್ರಣಯಾತ್ ಸ್ತ್ರೀಸ್ವಭಾವೇನ ಪೃಚ್ಛಾಮಿ ತ್ವಾಂ ಜನಾರ್ದನ ॥ ೪ ॥

ಏವಮುಕ್ತೋಽಪಿ ಭೂಮ್ಯಾಽಸೌ ಶಂಖದುಂದುಭಿನಿಸ್ವನಃ ।
ವರಾಹರೂಪೀ ಭಗವಾನ್ಪ್ರತ್ಯುವಾಚ ವಸುಂಧರಾಂ ॥ ೫ ॥

॥ ಶ್ರೀವರಾಹ ಉವಾಚ ॥

ಸಾಧು ಭೂಮೇ ವರಾರೋಹೇ ಯನ್ಮಾಂ ತ್ವಂ ಪರಿಪೃಚ್ಛಸಿ ।
ಕಥಯಿಷ್ಯಾಮಿ ತೇ ದೇವಿ ತಾರಯಂತಿ ಯಥಾ ದ್ವಿಜಾಃ ॥ ೬ ॥

ಭುಕ್ತ್ವಾ ತು ಪ್ರೇತಭೋಜ್ಯಾನಿ ಬ್ರಾಹ್ಮಣೋ ಜ್ಞಾನದುರ್ಬಲಃ ॥ ೭ ॥

ಕರ್ಮದಿಂದ ಆ ಪಾಪವನ್ನು ಕಳೆದುಕೊಳ್ಳುವರು ? ಅವರು ದಾತೃ (ಪ್ರೇತಶ್ರಾದ್ಧ ಕರ್ತೃ)ವನ್ನು ಹೇಗೆ ಪಾರಗಾಣಿಸುವರು ? ಜನಾರ್ದನಾ, ಪ್ರೀತಿಯಿಂದಲೂ, ಸ್ತ್ರೀಸ್ವಭಾವದಿಂದಲೂ ನಿನ್ನನ್ನು ಕೇಳುತ್ತಿದ್ದೇನೆ. ಹೇಳು.

೫. ಭೂದೇವಿಯು ಹೀಗೆ ಕೇಳಲಾಗಿ ವರಾಹರೂಪನೂ, ಶಂಖ ದುಂದುಭಿಗಳಂತೆ ಗಂಭೀರವಾದ ಧ್ವನಿಯುಳ್ಳವನೂ ಆದ ಆ ಭಗವಂತನು ಆಕೆಗೆ ಮುಂದಿನಂತೆ ಹೇಳಿದನು.

೬. ಶ್ರೀವರಾಹ—ಭೂದೇವೀ, ವರಾರೋಹೇ, ಒಳ್ಳೆಯದು ! ಆ ಬ್ರಾಹ್ಮಣರು ಹೇಗೆ ಪಾರಗಾಣಿಸುವರೆಂಬುದನ್ನು ನಿನಗೆ ಹೇಳುತ್ತೇನೆ.

೭–೯. ಜ್ಞಾನದುರ್ಬಲನಾದ ಬ್ರಾಹ್ಮಣನು ಪ್ರೇತಾರ್ಥವಾಗಿ ಭೋಜನ ಮಾಡಿದರೆ ತನ್ನ ದೇಹಶುದ್ಧಿಗಾಗಿ ಒಂದು ಹಗಲೂ, ರಾತ್ರಿಯೂ ಉಪವಾಸವಿದ್ದು

ವಿಶೋಧನಾರ್ಥಂ ದೇಹಸ್ಯ ಉಪವಾಸಂ ತು ಕಾರಯೇತ್ ।
ಅಹೋರಾತ್ರೋಷಿತೋ ಭೂತ್ವಾ ವಿಪ್ರೋ ಜ್ಞಾನೇನ ಸಂಯುತಃ ॥ ೮ ॥

ಪೂರ್ವಸಂಧ್ಯಾಂ ವಿನಿರ್ವರ್ತ್ಯ ಕೃತ್ವಾ ಚೈವಾಗ್ನಿತರ್ಪಣಂ ।
ತಿಲಹೋಮಂ ಪ್ರಕುರ್ವೀತ ಶಾಂತಮಂಗಲಪಾಠಕಃ ॥ ೯ ॥

ಪ್ರಾಕ್ಸ್ರೋತಸಂ ನದೀಂ ಗತ್ವಾ ಸ್ನಾನಂ ಕೃತ್ವಾ ವಿಧಾನತಃ ।
ಪಂಚಗವ್ಯಂ ತತಃ ಪೀತ್ವಾ ಮಧುಪರ್ಕೇಣ ಸಂಯುತಂ ॥ ೧೦ ॥

ಔದುಂಬರೇ ಚ ಪಾತ್ರೇ ಚ ಕೃತ್ವಾ ಶಾಂತ್ಯುದಕಾನಿ ಚ ।
ಪ್ರೋಕ್ಷಯೇಚ್ಚ ಗೃಹಂ ಸರ್ವಂ ಯತ್ರಾತಿಷ್ಠತ್ಸ್ವಯಂ ದ್ವಿಜಃ ॥ ೧೧ ॥

ದೇವಾಂಶ್ಚಾಗ್ನಿಮುಖಾನ್ಸರ್ವಾನ್ ತರ್ಪಯಿತ್ವಾ ವಿಭಾಗಶಃ ।
ಭೂತಾನಾಂ ಚ ಬಲಿಂ ದದ್ಯಾದ್ಬ್ರಾಹ್ಮಣೇಭ್ಯಶ್ಚ ಭೋಜನಂ ॥ ೧೨ ॥

ಮೂರನೆಯ ದಿನ ಬೆಳಗ್ಗೆ ಸರಿಯಾದ ಜ್ಞಾನದಿಂದ ಸಂಧ್ಯಾವಂದನೆಯನ್ನೂ ಅಗ್ನಿಕಾರ್ಯವನ್ನೂ ಮಾಡಿ, ಶಾಂತಿಮಂಗಳವನ್ನು ಹೇಳುತ್ತ ತಿಲಹೋಮವನ್ನು ಮಾಡಬೇಕು.

೧೦–೧೧. ಪೂರ್ವದಿಕ್ಕಿಗೆ ಹರಿಯುವ ನದಿಗೆ ಹೋಗಿ, ವಿಧ್ಯುಕ್ತವಾಗಿ ಸ್ನಾನಮಾಡಿ, ಆಮೇಲೆ ಮಧುಪರ್ಕಸಹಿತವಾಗಿ ಪಂಚಗವ್ಯವನ್ನು ಸೇವಿಸಿ, ಅತ್ತಿಯ ಮರದಿಂದ ಮಾಡಿದ ಪಾತ್ರೆಯಲ್ಲಿ ಶಾಂತ್ಯುದಕವನ್ನು ಸಿದ್ಧಪಡಿಸಿ, (ಬ್ರಾಹ್ಮಣನು) ತಾನಿದ್ದ ಮನೆಗೆಲ್ಲಾ ಪ್ರೋಕ್ಷಿಸಬೇಕು.

೧೨. ಅಗ್ನಿಮುಖರಾದ ದೇವತೆಗಳೆಲ್ಲರನ್ನೂ ಕ್ರಮವಾಗಿ ತೃಪ್ತಿಪಡಿಸಿ, ಭೂತಗಳಿಗೂ ಬಲಿಯನ್ನಿತ್ತು, ಬ್ರಾಹ್ಮಣರಿಗೂ ಭೋಜನವನ್ನು ಮಾಡಿಸಬೇಕು.

ಏಕಾ ಗೌಸ್ತು ಪ್ರದಾತವ್ಯಾ ಪಾಪಕ್ಷಯಕರೀ ತದಾ ।
ಏವಂ ತು ಕುರುತೇ ಯಶ್ಚ ಸ ಯಾತಿ ಪರಮಾಂ ಗತಿಂ ॥ ೧೩ ॥

ಪ್ರೇತಾನ್ನೇ ಚೋದರಸ್ಥೇ ತು ಕಾಲಧರ್ಮಮುಪಾಗತಃ ।
ಆಕಲ್ಪಂ ನರಕೇ ಘೋರೇ ವಸಮಾನಸ್ಸುದುಃಖಿತಃ ॥ ೧೪ ॥

ಪ್ರಾಪ್ನೋತಿ ರಾಕ್ಷಸತ್ವಂ ವೈ ತತೋ ಮುಚ್ಯೇತ ಕಿಲ್ಬಿಷಾತ್ ।
ಪ್ರಾಯಶ್ಚಿತ್ತಂ ತು ಕರ್ತವ್ಯಂ ದಾತೃಭೋಕ್ತೃಸುಖಾವಹಂ ॥ ೧೫ ॥

ಗೋಹಸ್ತ್ಯಶ್ವಧನಾದೀನಿ ಸಾಗರಾಂತಾನಿ ಮಾಧವಿ ।
ಪ್ರತಿಗೃಹ್ಣಂತಿ ಯೇ ವಿಪ್ರಾ ಮಂತ್ರೇಣ ವಿಧಿಪೂರ್ವಕಂ ।
ಪ್ರಾಯಶ್ಚಿತ್ತಂ ಚರೇದ್ಯಸ್ತು ಸ ತಾರಯತಿ ನಿಶ್ಚಿತಂ ॥ ೧೬ ॥

---

೧೩. ಆಗ ಪಾಪನಾಶಕವಾದ ಒಂದು ಗೋವನ್ನು ದಾನಮಾಡಬೇಕು. ಹೀಗೆ ಮಾಡುವವನು ಪರಮಗತಿಯನ್ನು ಪಡೆಯುವನು.

೧೪–೧೫. ಪ್ರೇತಾರ್ಥವಾಗಿ ಊಟಮಾಡಿದ ಅನ್ನವು ಜಠರದಲ್ಲಿರುವಾಗ ಮೃತನಾಗುವನು ಕಲ್ಪಾಂತದವರೆಗೂ ಘೋರನರಕದಲ್ಲಿ ವಾಸಮಾಡುತ್ತ ಅತಿದುಃಖವನ್ನನುಭವಿಸಿ, ಬಳಿಕ ರಾಕ್ಷಸಜನ್ಮವನ್ನು ಪಡೆದು ಆಮೇಲೆ ಪಾಪದಿಂದ ಮುಕ್ತನಾಗುವನು. ಆದುದರಿಂದ ದಾತೃವಿಗೂ, ಭೋಕ್ತೃವಿಗೂ ಸುಖವನ್ನುಂಟುಮಾಡುವ ಪ್ರಾಯಶ್ಚಿತ್ತವನ್ನು ಮಾಡುವುದು ಅವಶ್ಯಕ.

೧೬. ಮಾಧವೀ, ಗೋವು, ಆನೆ, ಕುದುರೆ, ಹಣ, ಮೊದಲಾಗಿ ಸಾಗರದವರೆಗೂ ದಾನತೆಗೆದುಕೊಳ್ಳುವ ಬ್ರಾಹ್ಮಣರಲ್ಲಿ ಯಾರು ಮಂತ್ರದಿಂದ ವಿಧಿಪೂರ್ವಕವಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವನೋ ಅವನೇ ನಿಜವಾಗಿ ಪಾರಗಾಣಿಸುವನು.

ದ್ವಿಜೋ ಜ್ಞಾನೇನ ಸಂಪನ್ನೋ ವೇದಾಭ್ಯಾಸರತಸ್ಸದಾ ।
ಸ ತಾರಯತಿ ಚಾತ್ಮಾನಂ ದಾತಾರಂ ನೈವ ಸಂಶಯಃ ॥ ೧೭ ॥

ಬ್ರಾಹ್ಮಣೋ ನಾವಮಂತವ್ಯಸ್ತ್ರಿಭಿರ್ವರ್ಣೈರ್ಧರಾಧರೇ ॥ ೧೮ ॥

ದೈವೇ ಚ ಜನ್ಮನಕ್ಷತ್ರೇ ಶ್ರಾದ್ಧಕಾಲೇ ಚ ಪರ್ವಸು ।
ಪ್ರೇತಕಾರ್ಯೇಷು ಸರ್ವೇಷು ಪರೀಕ್ಷ್ಯ ನಿಪುಣಂ ದ್ವಿಜಂ ॥ ೧೯ ॥

ವೇದವಿದ್ಯಾವ್ರತಸ್ನಾತಂ ಬಹುಧರ್ಮನಿರಂತರಂ ।
ಶೀಲಯುಕ್ತಂ ಸುಸಂತುಷ್ಟಂ ಧರ್ಮಜ್ಞಂ ಸತ್ಯವಾದಿನಂ ॥ ೨೦ ॥

ಕ್ಷಮಾಯುಕ್ತಂ ಚ ಶಾಸ್ತ್ರಜ್ಞಮಹಿಂಸಾಯಾಂ ರತಂ ತಥಾ ॥ ೨೧ ॥

ಏಭಿರ್ಗುಣೈಸ್ತು ಸಂಯುಕ್ತಂ ಬ್ರಾಹ್ಮಣಂ ಪ್ರಾಪ್ಯ ಸತ್ವರಃ ।
ದದ್ಯಾದ್ದಾನಾನಿ ವಿಪ್ರಾಯ ಸ ವೈ ತಾರಯಿತುಂ ಕ್ಷಮಃ ॥ ೨೨ ॥

೧೭-೧೮. ಜ್ಞಾನಸಂಪನ್ನನಾಗಿ, ಯಾವಾಗಲೂ ವೇದಾಭ್ಯಾಸನಿರತನಾಗಿರುವ ದ್ವಿಜನು ತನ್ನನ್ನೂ, ದಾತೃವನ್ನೂ ಉತ್ತಾರಣಮಾಡುವುದರಲ್ಲಿ ಸಂದೇಹವೇಇಲ್ಲ. ಭೂದೇವಿ, ವರ್ಣತ್ರಯದವರೂ ಬ್ರಾಹ್ಮಣನನ್ನು ಅಲಕ್ಷ್ಯ (ಅವಮಾನ) ಮಾಡಬಾರದು.

೧೯-೨೨. ದೇವಕಾರ್ಯ, ಜನ್ಮನಕ್ಷತ್ರ, ಶ್ರಾದ್ಧ, ಪರ್ವಕಾಲ, ಪ್ರೇತಕಾರ್ಯ, ಇವುಗಳಲ್ಲೆಲ್ಲಾ ಬ್ರಾಹ್ಮಣನನ್ನು ಚೆನ್ನಾಗಿ ಪರೀಕ್ಷಿಸಿ, ವೇದ ವಿದ್ಯಾನಿರತನೂ, ವ್ರತಸ್ನಾನಪರನೂ, ಯಾವಾಗಲೂ ಬಹು ಧರ್ಮಾಸಕ್ತನೂ, ಶೀಲವಂತನೂ, ಬಹುಸಂತುಷ್ಟನೂ, ಧರ್ಮಜ್ಞನೂ, ಸತ್ಯವಾದಿಯೂ, ಕ್ಷಮೆಯುಳ್ಳವನೂ, ಶಾಸ್ತ್ರಜ್ಞನೂ, ಅಹಿಂಸಾಪರನೂ ಆದ ಬ್ರಾಹ್ಮಣನನ್ನೇ ಹುಡುಕಿ ಪಡೆದು ಅವನಿಗೆ ಬೇಗನೆ ದಾನಮಾಡಬೇಕು. ಅಂತಹ ಬ್ರಾಹ್ಮಣನೇ ಪಾಪಸಾಗರ ಅಥವಾ ಸಂಸಾರಸಾಗರದಿಂದ ದಾಟಿಸಲು ಶಕ್ತನು.

ಕುಂಡಗೋಲೇಷು ಯದ್ದತ್ತಂ ನಿಷ್ಫಲಂ ತತ್ತು ಜಾಯತೇ ।
ಕುಂಡಗೋಲಃ ಪ್ರತಿಗ್ರಾಹೀ ದಾತಾರಂ ಚಾಪ್ಯಧೋ ನಯೇತ್ ॥ ೨೩ ॥

ಪಿತ್ರ್ಯೇ ಕರ್ಮಣಿ ಚೈಕಂ ತು ಕುಂಡಂ ವಾ ಗೋಲಕಂ ತಥಾ ।
ದೃಷ್ಟ್ವಾ ತಂ ಪಿತರೋ ಯಾಂತಿ ನಿರಾಶಾ ನಿರಯಂ ದ್ರುತಂ ।
ದೈವೇ ಕರ್ಮಣಿ ಚೈವಾತು ತೇಷಾಂ ದತ್ತಂ ಸುನಿಷ್ಫಲಂ ॥ ೨೪ ॥

ತಸ್ಮಾದ್ದಾನಂ ನ ದಾತವ್ಯಮಪಾತ್ರಾಯ ಯಶಸ್ವಿನಿ ।
ಅತ್ರಾರ್ಥೇ ಯತ್ಪುರಾ ವೃತ್ತಂ ತಚ್ಛೃಣುಷ್ವ ವಸುಂಧರೇ ॥ ೨೫ ॥

ಅವಂತೀವಿಷಯೇ ಕಶ್ಚಿದ್ರಾಜಾ ಹ್ಯತ್ಯಂತಧಾರ್ಮಿಕಃ ।
ನಾಮ್ನಾ ಮೇಧಾತಿಥಿಶ್ಚೈವ ಮನುವಂಶವಿವರ್ಧನಃ ॥ ೨೬ ॥

---

೨೩. ಸುಮಂಗಲಿಯಲ್ಲಿಯೇ ಜಾರನಿಂದುದಿಸಿದವನು ಕುಂಡನೆಂದೂ, ವಿಧವೆಯಲ್ಲಿ ಜಾರನಿಂದುದಿಸಿದವನು ಗೋಳಕನೆಂದೂ ಎನಿಸಿಕೊಳ್ಳುವನು. ಕುಂಡರು ಅಥವಾ ಗೋಳಕರಾದ ಬ್ರಾಹ್ಮಣರಿಗೆ ಕೊಡುವ ದಾನವು ನಿಷ್ಫಲ ವಾಗುವುದು. ಅಲ್ಲದೆ ಅವರು ದಾನಮಾಡಿದವನನ್ನೂ ಅಧೋಗತಿಗೊಯ್ಯುವರು

೨೪. ಪಿತೃಕರ್ಮದಲ್ಲಿ ಒಬ್ಬ ಕುಂಡನನ್ನಾಗಲಿ, ಗೋಲಕನನ್ನಾಗಲಿ ನೋಡಿದಲ್ಲಿ ಪಿತೃಗಳು ನಿರಾಶರಾಗಿ ಬೇಗನೆ ನರಕಕ್ಕೆ ಹೋಗುವರು. ದೇವ ಕರ್ಮದಲ್ಲಿಯೂ ಹೀಗೆಯೇ ಕುಂಡಗೋಲಕರಿಗೆ ಕೊಡುವ ದಾನವು ನಿಷ್ಫಲವಾಗುವುದು.

೨೫. ಕೀರ್ತಿವಂತೇ, ಆದುದರಿಂದ ಅಪಾತ್ರ (ಅನರ್ಹ)ನಿಗೆ ದಾನಮಾಡ ಬಾರದು. ವಸುಂಧರೇ, ಈ ವಿಚಾರದಲ್ಲಿ ಪೂರ್ವದಲ್ಲಿ ನಡೆದುದನ್ನು ಕೇಳು.

೨೬. ಅವಂತೀದೇಶದಲ್ಲಿ ಮನುವಂಶವರ್ಧನನೂ, ಅತಿಧಾರ್ಮಿಕನೂ ಆದ ಮೇಧಾತಿಥಿಯೆಂಬ ದೊರೆಯಿದ್ದನು.

ರಾಜ್ಞಃ ಪುರೋಹಿತಶ್ಚಾಸೀಚ್ಚಂದ್ರಶರ್ಮಾ ದ್ವಿಜೋತ್ತಮಃ ।
ಆತ್ರೇಯಗೋತ್ರೇ ಚೋತ್ಪನ್ನೋ ವೇದವಾದರತಸ್ಸದಾ ॥ ೨೭ ॥

ಸ ರಾಜಾ ಬ್ರಾಹ್ಮಣೇಭ್ಯಶ್ಚ ಗಾ ದದಾತಿ ದಿನೇ ದಿನೇ ।
ಶತಂ ದತ್ವಾ ವಿಧಾನೇನ ಪಶ್ಚಾದ್ಭುಂಕ್ತೇ ನರಾಧಿಪಃ ॥ ೨೮ ॥

ಗತೇ ಬಹುತಿಥೇ ಕಾಲೇ ರಾಜ್ಞೋ ಮೇಧಾತಿಥೇಃ ಪಿತುಃ ।
ಶ್ರಾದ್ಧಸ್ಯ ದಿವಸಃ ಪ್ರಾಪ್ತೋ ವೈಶಾಖೇ ವರವರ್ಣಿನಿ ।
ವಿಪ್ರಾನಾಹ್ವಾಪಯಾಮಾಸ ಪಿತುರ್ವೈ ಶ್ರಾದ್ಧಕಾರಣಾತ್ ॥ ೨೯ ॥

ಆಗತಾನ್ಬ್ರಾಹ್ಮಣಾದ್ದೃಷ್ಟ್ವಾ ಮೇಧಾತಿಥಿರಕಲ್ಮಷಃ ।
ವಿಪ್ರಾನ್ನತ್ವಾ ಗುರುಂ ಚೈವ ಶ್ರಾದ್ಧಾರಂಭಮಥಾಕರೋತ್ ॥ ೩೦ ॥

---

೨೭. ಆತನಿಗೆ ಆತ್ರೇಯಗೋತ್ರೋತ್ಪನ್ನನೂ ಯಾವಾಗಲೂ ವೇದವಾದಾಸಕ್ತನೂ ಆದ ಚಂದ್ರಶರ್ಮನೆಂಬ ಬ್ರಾಹ್ಮಣೋತ್ತಮನು ಪುರೋಹಿತನಾಗಿದ್ದನು.

೨೮. ದೊರೆಯು ಪ್ರತಿದಿನವೂ ಬ್ರಾಹ್ಮಣರಿಗೆ ವಿಧಿಪೂರ್ವಕವಾಗಿ ನೂರುಹಸುಗಳನ್ನು ದಾನಮಾಡಿ, ಬಳಿಕ ಭೋಜನಮಾಡುತ್ತಿದ್ದನು.

೨೯. ಉತ್ತಮೇ, ಹಾಗೆ ಬಹುಕಾಲ ಕಳೆಯಲು ವೈಶಾಖಮಾಸದಲ್ಲಿ ಆಮೇಧಾತಿಥಿಯ ತಂದೆಯ ಶ್ರಾದ್ಧದಿನವೊದಗಿತು. ಆತನು ಶ್ರಾದ್ಧಕ್ಕಾಗಿ ಬ್ರಾಹ್ಮಣರನ್ನು ಕರೆಸಿದನು.

೩೦. ನಿರ್ಮಲಮನಸ್ಕನಾದ ಆ ಮೇಧಾತಿಥಿಯು ಬಂದ ಬ್ರಾಹ್ಮಣರನ್ನೂ ಗುರುವನ್ನೂ ನೋಡಿ ನಮಸ್ಕರಿಸಿ, ಬಳಿಕ ಶ್ರಾದ್ಧವನ್ನು ಆರಂಭಿಸಿದನು.

ಶ್ರಾದ್ಧಂ ಕೃತ್ವಾ ತು ವಿಧಿವತ್ಪಿಂಡಂ ನಿರ್ವಾಪ್ಯ ಯತ್ನತಃ ।
ಶ್ರಾದ್ಧಸಂಕಲ್ಪಿತಂ ಚಾನ್ನಂ ವಿಪ್ರೇಭ್ಯಃ ಪ್ರದದೌ ಬಹು ॥ ೩೧ ॥

ತನ್ಮಧ್ಯೇ ಬ್ರಾಹ್ಮಣಃ ಕಶ್ಚಿದ್ಗೋಲಕೋಽವಸ್ಥಿತಸ್ತದಾ ।
ಶಾದ್ಧೇ ಸಂಕಲ್ಪಿತಂ ಚಾನ್ನಂ ತಸ್ಮೈ ದತ್ತಂ ವಿಧಾನತಃ ॥ ೩೨ ॥

ತೇನೈವ ಶ್ರಾದ್ಧದೋಷೇಣ ರಾಜ್ಞಸ್ತು ಪಿತರಸ್ತದಾ ।
ಸ್ವರ್ಗಾದ್ಭ್ರಷ್ಟಾ ಸ್ಖಲಂಬಂತೇ ವನೇ ಕಂಟಕ ಸಂಯುತೇ ॥ ೩೩ ॥

ಕ್ಷುತ್ಪಿಪಾಸಾರ್ದಿತಾ ನಿತ್ಯಂ ಕ್ರಂದಂತೇ ಚ ಪುನಃ ಪುನಃ ॥ ೩೪ ॥

ಕದಾಚಿದ್ದೈವಯೋಗೇನ ರಾಜಾ ಮೇಧಾತಿಥಿಸ್ಸ್ವಯಂ ।
ಮೃಗಯಾರ್ಥಂ ಗತಸ್ತತ್ರ ದ್ವಿತ್ರೈಃ ಪರಿಜನೈರ್ಯುತಃ ॥ ೩೫ ॥

---

೩೧. ಶ್ರಾದ್ಧವನ್ನು ವಿಧಿಯಂತೆ ಪ್ರಯತ್ನಪೂರ್ವಕವಾಗಿ ಮಾಡಿ, ಶ್ರಾದ್ಧೋದ್ದಿಷ್ಟವಾದ ಅನ್ನವನ್ನು ಬೇಕಾದಹಾಗೆ ಬ್ರಾಹ್ಮಣರಿಗೆ ದಾನ ಮಾಡಿದನು.

೩೨. ಆಗ ಆ ಬ್ರಾಹ್ಮಣರ ನಡುವೆ ಒಬ್ಬ ಗೋಳಕನೂ ಸೇರಿದ್ದನು. ಶ್ರಾದ್ಧೋದ್ದಿಷ್ಟವಾದ ಅನ್ನವು ವಿಧಿಪೂರ್ವಕವಾಗಿ ಅವನಿಗೂ ದೊರೆಯಿತು.

೩೩. ಹಾಗೆ ಗೋಳಕನನ್ನಿಟ್ಟುಕೊಂಡು ಶ್ರಾದ್ಧಮಾಡಿದದೋಷದಿಂದ ಆ ದೊರೆಯ ಪಿತೃಗಳು ಆಗ ಸ್ವರ್ಗದಿಂದ ಭ್ರಷ್ಟರಾಗಿ ಮುಳ್ಳಿನಿಂದಿಡಿದ ಕಾಡಿನಲ್ಲಿ ಜೋಲಾಡುವರಾದರು.

೩೪. ಅವರು ಪ್ರತಿದಿನವೂ ಹಸಿವುಬಾಯಾರಿಕೆಗಳಿಂದ ಪೀಡಿತರಾಗಿ ಅಡಿಗಡಿಗೆ ದುಃಖಿಸುತ್ತಿದ್ದರು.

೩೫. ಒಂದಾನೊಂದು ವೇಳೆ ಆ ಮೇಧಾತಿಥಿಯು ದೈವಯೋಗದಿಂದ ಇಬ್ಬರುಮೂವರುಪರಿಜನರಿಂದ ಕೂಡಿ ಬೇಟೆಗೆಂದು ವನಕ್ಕೆ ಹೋದನು.

ತತ್ರಾವಲಂಬತೋ ದೃಷ್ಟ್ವಾ ತಾನಪೃಚ್ಛದ್ದ್ವಿಜಪ್ರಿಯಃ ।
ಕೇ ಭವಂತೋಽತ್ರ ಸಂಪ್ರಾಪ್ತಾ ದಶಾಮೇತಾಂ ಸುದುಃಖಿತಾಃ ।
ಕೇನ ಕರ್ಮವಿಪಾಕೇನ ಭವಂತಃ ಕಥಯಂತು ಮೇ ॥ ೩೬ ॥

॥ ಪಿತರ ಊಚುಃ ॥

ಅಸ್ಮದ್ವಂಶಕರೋ ನಿತ್ಯಂ ನಾಮ್ನಾ ಮೇಧಾತಿಥಿಃ ಪ್ರಭುಃ ।
ವಯಂ ತಸ್ಯೈವ ಪಿತರೋ ನರಕಂ ಗಂತುಮುದ್ಯತಾಃ ॥ ೩೭ ॥

ತೇಷಾಂ ತು ವಚನಂ ಶ್ರುತ್ವಾ ರಾಜಾ ದುಃಖಸಮನ್ವಿತಃ ।
ಉವಾಚ ತಾನ್ಪಿತೄನ್ಸರ್ವಾನ್ಸಾಂತ್ವಪೂರ್ವಮಿದಂ ವಚಃ ॥ ೩೮ ॥

॥ ಮೇಧಾತಿಥಿರುವಾಚ ॥

ಮೇಧಾತಿಥಿರಹಂ ನಾಮ್ನಾ ಭವಂತಃ ಪಿತರೋ ಮಮ ।
ಕೇನ ವೈ ಕರ್ಮದೋಷೇಣ ನಿರಯಂ ಗಂತುಮುದ್ಯತಾಃ ॥ ೩೯ ॥

---

೩೬. ಅಲ್ಲಿ ಜೋಲಾಡುತ್ತಿರುವ ಅವರನ್ನು ನೋಡಿ ಬ್ರಾಹ್ಮಣಪ್ರಿಯನಾದ ಆತನು, "ಈ ದುರ್ದೆಸೆಯನ್ನು ಪಡೆದಿರುವ ನೀವಾರು ? ಯಾವ ಕರ್ಮದುರ್ವಿಪಾಕದಿಂದ ನೀವು ಹೀಗೆ ಬಹು ದುಃಖಿಗಳಾಗಿರುವಿರಿ ? ನನಗೆ ಹೇಳಿ" ಎಂದು ಕೇಳಿದನು.

೩೭. ಪಿತೃಗಳು—ನಮ್ಮ ವಂಶವರ್ಧಕನಾದ ಮೇಧಾತಿಥಿಯೆಂಬ ಪ್ರಭುವಿರುವನು, ನರಕಕ್ಕೆ ಹೋಗಲು ಸಿದ್ಧರಾಗಿರುವ ನಾವು ಅವನ ಪಿತೃಗಳು

೩೮. ಅವರ ಮಾತನ್ನು ಕೇಳಿ ದುಃಖವುಳ್ಳವನಾದ ದೊರೆಯು ಆ ಪಿತೃಗಳೆಲ್ಲರನ್ನೂ ಕುರಿತು ಸಮಾಧಾನಪೂರ್ವಕವಾಗಿ ಮುಂದಿನ ಮಾತನ್ನು ಹೇಳಿದನು.

೩೯. ಮೇಧಾತಿಥಿ—"ನಾನೇ ಮೇಧಾತಿಥಿಯೆಂಬುವನು. ನನ್ನ ಪಿತೃಗಳಾದ ನೀವು ಯಾವ ಕರ್ಮದೋಷದಿಂದ ನರಕಕ್ಕೆ ಹೋಗುವವರಾಗಿರುವಿರಿ ?"

॥ ಪಿತರ ಊಚುಃ ॥

ಶ್ರಾದ್ಧಸಂಕಲ್ಪಿತಂ ಚಾನ್ನಂ ದತ್ತಂ ತದ್ಗೋಲಕಾಯ ವೈ ।
ತೇನೈವ ಕರ್ಮದೋಷೇಣ ನರಕಂ ಗಂತುಮುದ್ಯತಾಃ ।
ತತ್ರ ದುಃಖಂ ಮಹದ್ಭುಕ್ತ್ವಾ ಪುನರ್ಗಚ್ಛಾಮಹೇ ದಿವಂ ॥ ೪೦ ॥

ಪುತ್ರ ತ್ವಂ ಚೈವ ದಾತಾ ಚ ಸರ್ವಲೋಕಹಿತೇ ರತಃ ।
ಅಸಂಖ್ಯಾತಾಸ್ತ್ವಯಾ ದತ್ತಾ ಗಾವಸ್ಸುಬಹುದಕ್ಷಿಣಾಃ ॥ ೪೧ ॥

ತೇನ ಪುಣ್ಯೇನ ಗಚ್ಛಾಮಸ್ಸ್ವರ್ಗಂ ಹ್ಯತಿಸುಖಪ್ರದಂ ॥ ೪೨ ॥

ತತ್ರ ಚಾನ್ನಂ ನ ವಿದ್ಯೇತ ಯೇನ ತೃಪ್ತಿರ್ಭವಿಷ್ಯತಿ ।
ಪುನಶ್ಶ್ರಾದ್ಧಂ ತ್ವಯಾಕಾರ್ಯಂ ಪಿತೄಣಾಂ ತೃಪ್ತಿದಾಯಕಂ ॥ ೪೩ ॥

ತೇಷಾಂ ತು ವಚನಂ ಶ್ರುತ್ವಾ ಮೇಧಾತಿಥಿರಗಾದ್ಗೃಹಂ ।
ಆಹೂಯ ಚಂದ್ರಶರ್ಮಾಣಂ ಗುರುಂ ವಚನಮಬ್ರವೀತ್ ॥ ೪೪ ॥

---

೪೦. ಪಿತೃಗಳು–“ ಶ್ರಾದ್ಧೋದ್ದಿಷ್ಟವಾದ ಅನ್ನವು ಗೋಳಕನಿಗೆ ಸೇರಿತು. ಆ ಕರ್ಮದೋಷದಿಂದಲೇ ನಾವು ನರಕಕ್ಕೆ ಹೋಗುವಂತಾಗಿರುವುದು. ಅಲ್ಲಿ ಮಹಾದುಃಖವನ್ನನುಭವಿಸಿ ಮತ್ತೆ ಸ್ವರ್ಗಕ್ಕೆ ಹೋಗುವೆವು.

೪೧–೪೨. ಮಗನೇ, ಸರ್ವಲೋಕ ಹಿತಾಸಕ್ತನಾದ ನೀನೇ ದಾತೃವಾಗಿದ್ದೀಯೆ. ಬಹು ದಕ್ಷಿಣೆಯೊಡನೆ ಲೆಕ್ಕವಿಲ್ಲದಷ್ಟು ಗೋವುಗಳನ್ನು ದಾನಮಾಡಿದ್ದೀಯೆ. ಆ ಪುಣ್ಯದಿಂದ ಅತಿಸುಖಕರವಾದ ಸ್ವರ್ಗಕ್ಕೆ ಹೋಗುವೆವು.

೪೩. ಆದರೆ ಸ್ವರ್ಗದಲ್ಲಿಯೂ ನಮಗೆ ತೃಪ್ತಿಯಾಗುವ ಅನ್ನವು ಇಲ್ಲದಂತಾಗಬಹುದು. ಆದುದರಿಂದ ನಮಗೆ ತೃಪ್ತಿಯನ್ನುಂಟುಮಾಡುವ ಶ್ರಾದ್ಧವನ್ನು ನೀನು ಮತ್ತೆ ಮಾಡಬೇಕಾಗಿದೆ. ”

೪೪. ಅವರ ಮಾತನ್ನು ಕೇಳಿ, ಮೇಧಾತಿಥಿಯು ಮನೆಗೆ ಹೋಗಿ, ಗುರುವಾದ ಚಂದ್ರಶರ್ಮನನ್ನು ಕರೆಸಿ, ಆತನಿಗೆ ಮುಂದಿನ ಮಾತನ್ನು ಹೇಳಿದನು.

॥ ಮೇಧಾತಿಥಿರುವಾಚ ॥

ಚಂದ್ರಶರ್ಮನ್ಪುನಶ್ರಾದ್ಧಂ ಕರಿಷ್ಯೇ ಪಿತುರದ್ಯ ವೈ ।
ಆಹೂಯಂತಾಂ ದ್ವಿಜಾಸ್ಸರ್ವೇ ಕುಂಡಗೋಲಕವರ್ಜಿತಾಃ ॥ ೪೫ ॥

ಇತ್ಯುಕ್ತಮಾತ್ರೇ ವಚನೇ ಚಂದ್ರಶರ್ಮಾ ಪುರೋಹಿತಃ ।
ಆಹೂತವಾನ್ದ್ವಿಜಾನ್ಸರ್ವಾನ್ವೇದಪಾರಕೃತಶ್ರಮಾನ್ ।
ಸಾಧೂನ್ಶಾಂತಾನ್ಕುಲೀನಾಂಶ್ಚ ಸುಶೀಲಾನ್ಮಾನವರ್ಜಿತಾನ್ ॥ ೪೬ ॥

ರಾಜ್ಞಾ ತು ಕಾರಯಾಮಾಸ ಶ್ರಾದ್ಧಂ ವಿಧಿವಿದಾಂ ವರಃ ॥ ೪೭ ॥

ಕೃತೇ ಶ್ರಾದ್ಧೇ ತತಃ ಪಶ್ಚಾತ್ಪಿಂಡಾನ್ನಿರ್ವಾಪ್ಯ ಯತ್ನತಃ ।
ಬ್ರಾಹ್ಮಣಾನ್ಭೋಜಯಾಮಾಸ ದಕ್ಷಿಣಾಭಿಃ ಪ್ರಪೂಜ್ಯ ಚ ॥ ೪೮ ॥

ಪಶ್ಚಾದ್ವಿಸರ್ಜಯಾಮಾಸ ಸ್ವಯಂ ತು ಬುಭುಜೇ ನೃಪಃ ॥ ೪೯ ॥

---

೪೫. ಮೇಧಾತಿಥಿ—ಚಂದ್ರಶರ್ಮನೇ, ನಾನು ಈದಿನ ಪಿತೃಗಳಿಗೆ ಪುನಶ್ಶ್ರಾದ್ಧವನ್ನು ಮಾಡುತ್ತೇನೆ. ಕುಂಡಗೋಲಕರನ್ನು ಬಿಟ್ಟು ಬೇರೆಯ ಬ್ರಾಹ್ಮಣರೆಲ್ಲರನ್ನೂ ಕರೆಸು."

೪೬–೪೭. ದೊರೆಯು ಆ ಮಾತನ್ನು ಹೇಳಿದೊಡನೆಯೇ ವಿಧಿಗಳನ್ನರಿತವರಲ್ಲಿ ಉತ್ತಮನೂ, ಪುರೋಹಿತನೂ ಆದ ಚಂದ್ರಶರ್ಮನು ವೇದಾಭ್ಯಾಸದಲ್ಲಿ ಶ್ರಮಪಟ್ಟಿರುವ ಸಾಧುಗಳೂ, ಶಾಂತರೂ, ಕುಲೀನರೂ ಆದ ಬ್ರಾಹ್ಮಣರನ್ನೆಲ್ಲಾ ಕರೆಸಿ ದೊರೆಯಿಂದ ಪುನಶ್ರಾದ್ಧವನ್ನು ಮಾಡಿಸಿದನು.

೪೮–೪೯. ದೊರೆಯು ಶ್ರಾದ್ಧವನ್ನು ಮಾಡಿ, ಪಿಂಡಪ್ರದಾನವನ್ನೂ ಮಾಡಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ ದಕ್ಷಿಣೆಯೇ ಮೊದಲಾದುವುಗಳಿಂದ ಅವರನ್ನು ಪೂಜಿಸಿ, ಕಳುಹಿಸಿ, ಬಳಿಕ ತಾನೂ ಊಟಮಾಡಿದನು.

ಭುಕ್ತ್ವಾ ಪುನರ್ವನಂ ಗತ್ವಾ ದೃಷ್ಟವಾಂಶ್ಚ ಸ್ವಕಾನ್ ಪಿತೄನ್ ।
ಹೃಷ್ಟಾನ್ಪುಷ್ಟಾನ್ಬಲೈರ್ಯುಕ್ತಾನ್ರಾಜಾ ತು ಮುಮುದೇ ಭೃಶಂ ॥ ೫೦ ॥

ದೃಷ್ಟ್ವಾ ತು ಪಿತರಶ್ಚೈವಂ ರಾಜಾನಂ ಪಿತೃವತ್ಸಲಂ ।
ಊಚುರ್ವಿನಯಸಂಪನ್ನಾಃ ಪ್ರೀತಿಪೂರ್ವಮಿದಂ ವಚಃ ॥ ೫೧ ॥

ಸ್ವಸ್ತಿ ತೇಽಸ್ತು ಗಮಿಷ್ಯಾಮಃ ಸ್ವರ್ಗಲೋಕಂ ಪ್ರತಿ ಪ್ರಭೋ ।
ಇದಾನೀಂ ಚ ತ್ವಯಾ ಕಾರ್ಯಮಸ್ಮದ್ಧಿತಮನುತ್ತಮಂ ॥ ೫೨ ॥

ಗೋಲಕಾಯ ನ ದಾತವ್ಯಂ ದೈವಂ ಪಿತ್ರ್ಯಮಥಾಪಿ ವಾ ।
ತಯೋರ್ದತ್ತಂ ತು ಯಚ್ಛ್ರಾದ್ಧಂ ನಿಷ್ಫಲಂ ತತ್ಸ್ಮೃತಂ ಬುಧೈಃ ॥ ೫೩ ॥

---

೫೦. ತಾನೂ ಊಟಮಾಡಿ ದೊರೆಯು ಮತ್ತೆ ವನಕ್ಕೆ ಹೋಗಿ ಸಂತುಷ್ಟರೂ, ಪುಷ್ಟರೂ, ಬಲಶಾಲಿಗಳೂ, ಆಗಿರುವ ತನ್ನ ಪಿತೃಗಳನ್ನು ನೋಡಿ ಬಹಳವಾಗಿ ಸಂತೋಷಪಟ್ಟನು.

೫೧. ಪಿತೃಭಕ್ತನಾದ ಆ ದೊರೆಯನ್ನು ನೋಡಿ, ವಿನಯಸಂಪನ್ನರಾದ ಅವರು ಪ್ರೀತಿಪೂರ್ವಕವಾಗಿ ಈ ಮುಂದಿನ ಮಾತನ್ನಾಡಿದರು.

೫೨. " ಪ್ರಭುವೇ, ನಿನಗೆ ಮಂಗಳವಾಗಲಿ. ನಾವು ಸ್ವರ್ಗಲೋಕಕ್ಕೆ ಹೊರಡುತ್ತೇವೆ. ಈಗಲೂ ನೀನು, ನಮಗೆ ಹಿತವಾದ ಉತ್ತಮಕಾರ್ಯವನ್ನು ಮಾಡಬೇಕು.

೫೩. ದೈವಿಕ ಅಥವಾ ಪೈತೃಕವಾದುದಾವುದನ್ನೂ ಕುಂಡನಿಗೂ, ಗೋಳಕನಿಗೂ ಕೊಡಬಾರದು. ಅವರಿಗೆ ಕೊಟ್ಟು ಮಾಡುವ ಶ್ರಾದ್ಧವು ನಿಷ್ಫಲವಾದುದೆಂದು ಪಂಡಿತರು ಹೇಳುವರು.

ದೈವೇ ಕರ್ಮಣಿ ಪಿತ್ರ್ಯೇ ಚ ಬ್ರಾಹ್ಮಣೋನ್ನೈವ ಲಭ್ಯತೇ |
ಸಂಕಲ್ಪಯಿತ್ವಾ ಚಾನ್ನಂ ತು ಗೋಭ್ಯೋ ದೇಯಂ ಯಥಾವಿಧಿ || ೫೪ ||

ಗವಾಮಭಾವೇ ನದ್ಯಾಂ ವಾ ಕ್ಷಿಪೇದನ್ನಂ ಪ್ರಯತ್ನತಃ || ೫೫ ||

ಅಪಾತ್ರಾಯ ನ ದಾತವ್ಯಂ ನಾಸ್ತಿಕಾಯ ಗುರುದ್ರುಹೇ |
ಗೋಲಕಾಯ ನ ದಾತವ್ಯಂ ಕುಂಡಾಯ ಚ ವಿಶೇಷತಃ |
ಇತ್ಯುಕ್ತ್ವಾ ಪಿತರಸ್ಸರ್ವೇ ಗತಾಸ್ಸ್ವರ್ಗಾಯ ಭಾಮಿನಿ || ೫೬ ||

ಮೇಧಾತಿಥಿರಪಿ ಪ್ರಾಯಾತ್ಸ್ವಪುರಂ ಬ್ರಾಹ್ಮಣೈರ್ವೃತಃ |
ಯದುಕ್ತಂ ಪಿತೃಭಿಸ್ಸರ್ವಂ ತಚ್ಚಕಾರ ಮುದಾ ಯುತಃ || ೫೭ ||

ತಸ್ಮಾತ್ತೇ ಕಥಿತಂ ದೇವಿ ಏಕೋಽಪಿ ಬ್ರಾಹ್ಮಣೋತ್ತಮಃ |
ಸಂತಾರಯತಿ ದುರ್ಗೇಭ್ಯೋ ವಿಷಮೇಭ್ಯೋ ನ ಸಂಶಯಃ || ೫೮ ||

---

೫೪. ದೇವಕರ್ಮದಲ್ಲಿಯೂ ಪಿತೃಕರ್ಮದಲ್ಲಿಯೂ ಯೋಗ್ಯರಾದ ಬ್ರಾಹ್ಮಣರು ದೊರೆಯದೆಯೇ ಇದ್ದರೆ ಸಂಕಲ್ಪಮಾಡಿ ವಿಧಿಯಂತೆ ಶ್ರಾದ್ಧಮಾಡಿ, ಅನ್ನವನ್ನು ಗೋವುಗಳಿಗೆ ಕೊಡಬೇಕು.

೫೫–೫೬. ಗೋವುಗಳೂ ದೊರೆಯದಿದ್ದರೆ ಅನ್ನವನ್ನು ಪ್ರಯತ್ನಪೂರ್ವಕವಾಗಿ ನದಿಗಾದರೂ ಹಾಕಬೇಕು. ಅಪಾತ್ರರಾದ ನಾಸ್ತಿಕರಿಗೂ, ಗುರುದ್ರೋಹಿಗೂ, ಮುಖ್ಯವಾಗಿ ಕುಂಡಗೋಲಕರಿಗೂ ಕೊಡಲೇಬಾರದು" ಎಂದು ಹೇಳಿ ಆ ಪಿತೃಗಳೆಲ್ಲರೂ ಸ್ವರ್ಗಕ್ಕೆ ಹೊರಟುಹೋದರು.

೫೭. ಭಾಮಿನೀ, ಬಳಿಕ ಮೇಧಾತಿಥಿಯೂ ತನ್ನ ಪಟ್ಟಣಕ್ಕೆ ಹೊರಟು ಹೋಗಿ ಬ್ರಾಹ್ಮಣರಿಂದ ಪರಿವೃತನಾಗಿ, ಪಿತೃಗಳು ಹೇಳಿದುದೆಲ್ಲವನ್ನೂ ಸಂತೋಷದಿಂದ ಮಾಡಿದನು.

೫೮ ದೇವೀ, ಆದುದರಿಂದ ಈ ಕಥೆಯನ್ನು ನಿನಗೆ ಹೇಳಿದೆನು. ಬ್ರಾಹ್ಮಣೋತ್ತಮನೊಬ್ಬನಾದರೂ ಕಠಿನವಾದ ಕಷ್ಟಗಳಿಂದ ಸಂತಾರಣ ಮಾಡಿಸುವುದರಲ್ಲಿ ಸಂಶಯವಿಲ್ಲ.

ಏಕೋಽಪಿ ತಾರಿತುಂ ಶಕ್ತೋ ಯಥಾ ನಾವಾ ಮಹಜ್ಜಲಂ ।
ತಸ್ಮಾದ್ದಾನಂ ಪ್ರದಾತವ್ಯಂ ಬ್ರಾಹ್ಮಣಾಯ ವಸುಂಧರೇ ॥ ೫೯ ॥

ದೇವಾಸುರಮನುಷ್ಯಾಣಾಂ ಗಂಧರ್ವೋರಗರಕ್ಷಸಾಂ ।
ಸರ್ವೇ ಶ್ರಾದ್ಧಂ ಕರಿಷ್ಯಂತಿ ನೇಮಿಪ್ರಭೃತಯೋ ಧರೇ ।
ಮಾಸೇ ಮಾಸೇ ಚ ವೈ ಪಶ್ಚಾತ್ಪಿತೃಪಕ್ಷೇ ತಪೋಧನಾಃ ॥ ೬೦ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಪಿಂಡಕಲ್ಪೋತ್ಪತ್ತಿರ್ನಾಮ
ಏಕೋನ ನವತ್ಯಧಿಕಶತತಮೋಧ್ಯಾಯಃ

---

೫೯. ವಸುಂಧರೇ, ಒಬ್ಬ ಬ್ರಾಹ್ಮಣೋತ್ತಮನೇ ನಾವೆಯು ಮಹಾ ಸಾಗರವನ್ನು ದಾಟಿಸುವಂತೆ, ಕಷ್ಟ ಅಥವಾ ದುಃಖಸಾಗರವನ್ನು ದಾಟಿಸುವನು. ಆದುದರಿಂದ ಅರ್ಹನಾದ ಬ್ರಾಹ್ಮಣನಿಗೆ ದಾನಮಾಡಬೇಕು.

೬೦. ಧರೇ, ನೇಮಿಯಿಂದ ಮೊದಲುಗೊಂಡು ದೇವಾಸುರಮನುಷ್ಯ ಗಂಧರ್ವೋರಗಾದಿಗಳಲ್ಲಿ ತಪೋಧನರಾದವರೆಲ್ಲರೂ ಪ್ರತಿತಿಂಗಳಲ್ಲಿಯೂ ಅಲ್ಲದೆ ಪಿತೃಪಕ್ಷದಲ್ಲಿಯೂ ಶ್ರಾದ್ಧವನ್ನು ಮಾಡುವರು.

ಅಧ್ಯಾಯದ ಸಾರಾಂಶ—

ಪ್ರೇತಶ್ರಾದ್ಧದಲ್ಲಿ ಭೋಜನಮಾಡುವುದರಿಂದುಂಟಾಗುವ ಪಾಪವನ್ನು ಬ್ರಾಹ್ಮಣರು ಹೇಗೆ ಕಳೆದುಕೊಳ್ಳುವರೆಂದು ಪ್ರಶ್ನಿಸಿದ ಭೂದೇವಿಗೆ ಶ್ರೀವರಾಹನು ಅದಕ್ಕೆ ಬೇಕಾದ ಉಪವಾಸಾದಿಪ್ರಾಯಶ್ಚಿತ್ತವನ್ನೂ, ಪಿತೃಕರ್ಮದಲ್ಲಿ ಅಯೋಗ್ಯರನ್ನು ನಿಮಂತ್ರಿಸುವುದರಿಂದಾಗುವ ಅನರ್ಥವನ್ನೂ, ಸತ್ಪಾತ್ರ ದಾನಾದಿಗಳ ಫಲವನ್ನೂ, ಅಪಾತ್ರನಾದ ಗೋಳಕನಿಗೆ ದಾನಮಾಡಿದ ಮೇಧಾತಿಥಿಯೆಂಬ ರಾಜನ ಮತ್ತು ಅವನ ಪಿತೃಗಳ ಕಥೆಯನ್ನೂ ಸದ್ಬ್ರಾಹ್ಮಣ ಮಹಿಮೆಯನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರೆಂಬತ್ತೊಂಬತ್ತನೆಯ ಅಧ್ಯಾಯ.

॥ ಶ್ರೀಃ ॥

ನವತ್ಯಧಿಕಶತತಮೋಽಧ್ಯಾಯಃ

ಅಥ ಶ್ರಾದ್ಧಪಿತೃಯಜ್ಞನಿಶ್ಚಯ ಪ್ರಕರಣಂ

॥ ಧರಣ್ಯುವಾಚ ॥

ದೇವಮಾನುಷತಿರ್ಯಕ್ಷು ಪ್ರೇತೇಷು ನರಕೇಷು ಚ ।
ಆಯಾಂತಿ ಜಂತವಃ ಕೇಚಿದ್ಭೂತ್ವಾ ಗಚ್ಛಂತಿ ಚಾಪರೇ ॥ ೧ ॥

ಸ್ವಪ್ನೋಪಮಮಿಮಂ ಲೋಕಂ ಹ್ಯಾತ್ಮಕರ್ಮ ಶುಭಾಶುಭಂ ।
ವರ್ತತೇ ತಿಷ್ಠತೇ ದೇವ ತವ ಮಾಯಾಬಲೈರ್ಜಗತ್ ॥ ೨ ॥

ನೂರ ತೊಂಭತ್ತನೆಯ ಅಧ್ಯಾಯ

ಶ್ರಾದ್ಧಪಿತೃಯಜ್ಞನಿಶ್ಚಯ ಪ್ರಕರಣ

೧-೨. ದೇವ, ಪ್ರಾಣಿಗಳಲ್ಲಿ ಕೆಲವು ದೇವಮನುಷ್ಯತಿರ್ಯಕ್ ಪ್ರೇತನರಕ ಜನ್ಮಗಳಲ್ಲಿ ಯಾವುದಾದರೊಂದರಲ್ಲಿ ಜನಿಸುತ್ತವೆ. ಉಳಿದುವು ಜನಿಸಿದ್ದು ಮುಕ್ತಿಗೆ ಹೋಗುತ್ತವೆ. ಆತ್ಮಕರ್ಮಾನುಸಾರವಾಗಿ ಶುಭಾಶುಭಗಳನ್ನು ಅನುಭವಿಸಬಹುದಾದ ಈ ಲೋಕವು ಕನಸಿನಂತಿದೆ. ಇದು ನಿನ್ನ ಮಾಯಾ ಬಲದಿಂದ ವರ್ತಿಸುತ್ತಾ ಇದೆ.

ಕ ಏತೇ ಪಿತರೋ ದೇವ ಶ್ರಾದ್ಧಂ ಭೋಕ್ಷ್ಯಂತಿ ಯೋಗಿನಃ ।
ಆತ್ಮಕರ್ಮವಶಾಲ್ಲೋಕೇ ಗತಿಃ ಪಂಚಸು ವರ್ತತೇ ॥ ೩ ॥

ಕಥಂ ತಂ ಪಿಂಡಸಂಕಲ್ಪಂ ಮಾಸೇ ಮಾಸೇ ನಿಯೋಜಯೇತ್ ।
ಕೇ ಭವಂತಿ ಚ ಭೋಕ್ತಾರಃ ಶ್ರಾದ್ಧೇ ಪಿಂಡಾನ್ಪಿತೃಕ್ರಿಯಾಃ ॥ ೪ ॥

ನಿಶ್ಚಯಂ ಶ್ರೋತುಮಿಚ್ಛಾಮಿ ಪರಂ ಕೌತೂಹಲಂ ಹಿ ಮೇ ॥ ೫ ॥

ಪೃಥಿವ್ಯಾ ಏವಮುಕ್ತಸ್ತು ದೇವೋ ನಾರಾಯಣೋ ಹರಿಃ ।
ವರಾಹರೂಪೀ ಭಗವಾನ್ಪ್ರತ್ಯುವಾಚ ವಸುಂಧರಾಂ ॥ ೬ ॥

॥ ಶ್ರೀವರಾಹ ಉವಾಚ ॥

ಸಾಧು ಭೂಮೇ ವರಾರೋಹೇ ಸರ್ವಧರ್ಮವ್ಯವಸ್ಥಿತೇ ।
ಕಥಯಿಷ್ಯಾಮಿ ತೇ ದೇವಿ ಯನ್ಮಾಂ ತ್ವಂ ಪರಿಪೃಚ್ಛಸಿ ॥ ೭ ॥

---

೩. ದೇವ, ಆತ್ಮಕರ್ಮಾನುಸಾರವಾಗಿ ಪ್ರಾಣಿಗೆ ಮೇಲೆಹೇಳಿದ ದೇವಮನುಷ್ಯಾದಿಯಾದ ಐದು ಜನ್ಮ ಅಥವಾ ಗತಿಯಿರುವಾಗ ಶ್ರಾದ್ಧದಲ್ಲಿ ಯೋಗದಿಂದ ಭೋಗಿಸುವ ಅಥವಾ ಭೋಜನಮಾಡುವ ಪಿತೃಗಳೆಂಬುವರು ಯಾರು ?

೪–೫. ಪ್ರತಿತಿಂಗಳಲ್ಲಿಯೂ ಆಪಿಂಡಸಂಕಲ್ಪವನ್ನು ಹೇಗೆ ಮಾಡಬೇಕು ? ಶ್ರಾದ್ಧದಲ್ಲಿ ಪಿಂಡಪಿತೃಕ್ರಿಯೆಗಳನ್ನು ಪಡೆದು ಅನುಭವಿಸುವವರಾರು ? ಈ ವಿಚಾರದಲ್ಲಿ ನಿಜವನ್ನು ಕೇಳಲು ಬಯಸುತ್ತೇನೆ. ನನಗೆ ಬಹು ಕುತೂಹಲವಾಗಿದೆ.

೬. ಭೂದೇವಿಯು ಹೀಗೆ ಹೇಳಲು ವರಾಹರೂಪಿಯೂ, ಭಗವಂತನೂ, ದೇವನೂ ಆದ ಹರಿನಾರಾಯಣನು ಆಕೆಗೆ ಉತ್ತರವನ್ನು ಹೇಳಿದನು.

೭. ಶ್ರೀವರಾಹ—ಒಳ್ಳೆಯದು. ಭೂಮೀ, ವರಾರೋಹೇ ಸರ್ವಧರ್ಮನಿಷ್ಠೇ, ದೇವೀ, ನನ್ನಲ್ಲಿ ನೀನು ಕೇಳಿದುದನ್ನು ಹೇಳುತ್ತೇನೆ.

ಯೇ ತೇ ಭವಂತಿ ಭೋಕ್ತಾರಃ ಪಿತೃಯಜ್ಞೇಷು ಮಾಧವಿ ।
ಪಿತಾ ಪಿತಾಮಹಶ್ಚೈವ ತಥೈವ ಪ್ರಪಿತಾಮಹಃ ॥ ೮ ॥

ಕ್ರಿಯಂತೇ ಪಿಂಡಸಂಕಲ್ಪೋ ಮಾಸೇ ಹ್ಯೇಕದಿನೇ ತಥಾ ।
ಜ್ಞಾತ್ವಾ ನಕ್ಷತ್ರಸಂಯೋಗಂ ಪಿತೃಪಕ್ಷೇ ಹ್ಯುಪಾಗತೇ ।
ತಿಥಿಂ ಪರ್ವ ವಿಜಾನೀಯಾದ್ಯೇಷು ದತ್ತಂ ಮಹತ್ಫಲಂ ॥ ೯ ॥

ಕರಿಷ್ಯಂತಿ ಚ ಯೇ ಶ್ರಾದ್ಧಂ ಶ್ರದ್ಧಯಾ ಜ್ಞಾನಿನೋ ಜನಾಃ ।
ತತ್ಸರ್ವಂ ಕಥಯಿಷ್ಯಾಮಿ ಶ್ರೂಯತಾಂ ಶುಭಲೋಚನೇ ॥ ೧೦ ॥

ಕೇಚಿದ್ಯಜಂತಿ ಯಜ್ಞಂ ವೈ ಬ್ರಹ್ಮಯಜ್ಞಂ ದ್ವಿಜಾತಯಃ ।
ಕೇಚಿದ್ಯಜಂತಿ ಸುಭಗೇ ದೇವಯಜ್ಞಂ ಹುತಾಶನೇ ॥ ೧೧ ॥

ಕೇಚಿಚ್ಚ ಭೂತಯಜ್ಞೇನ ವರ್ತಯಂತಿ ಸುಮಧ್ಯಮೇ ।
ಕೇಚಿನ್ಮನುಷ್ಯಯಜ್ಞೇನ ಪೂಜಯಂತಿ ಗೃಹಾಶ್ರಮೇ ॥ ೧೨ ॥

೮–೯. ಮಾಧವೀ, ಪಿತೃಯಜ್ಞದಲ್ಲಿ ಭೋಕ್ತೃಗಳು ಪಿತೃಪಿತಾಮಹ ಪ್ರಪಿತಾಮಹರು (ತಂದೆಅಜ್ಜಮುತ್ತಜ್ಜಂದಿರು). ಪ್ರತಿ ತಿಂಗಳಲ್ಲಿಯೂ, ಅಮಾವಾಸ್ಯಾ ತಿಥಿಯೊಂದರಲ್ಲಿಯೂ, ಪಿತೃಪಕ್ಷವು ಬಂದಾಗ ನಕ್ಷತ್ರಸಂಯೋಗ ವನ್ನರಿತು ಯಾವ ದಿನ ಮಹಾಫಲವೆಂಬುದನ್ನು ತಿಳಿದು ಆ ದಿನವೂ ಶ್ರಾದ್ಧಸಂಕಲ್ಪವನ್ನು ಮಾಡಬೇಕು.

೧೦. ಶುಭಲೋಚನೇ, ಜ್ಞಾನಿಗಳಾದ ಯಾರು ಆಸಕ್ತಿಯಿಂದ ಶ್ರಾದ್ಧವನ್ನು ಮಾಡುವರೆಂಬುದನ್ನೆಲ್ಲಾ ನಿನಗೆ ಹೇಳುತ್ತೇನೆ. ಕೇಳು.

೧೧–೧೨. ಸುಂದರೀ, ದ್ವಿಜರಲ್ಲಿ ಕೆಲವರು ಬ್ರಹ್ಮಯಜ್ಞವನ್ನು ಮಾಡುವರು. ಇನ್ನೂ ಕೆಲವರು ಭೂತಯಜ್ಞವನ್ನು ಆಚರಿಸುವರು. ಮತ್ತೆ ಕೆಲವರು ಗೃಹಸ್ಥಾಶ್ರಮದಲ್ಲಿ ಮನುಷ್ಯಯಜ್ಞ (ಅತಿಥಿಸತ್ಕಾರ)ದಿಂದ ಪೂಜಿಸುವರು.

ಪಿತೃಯಜ್ಞಂ ಚ ಭೋ ದೇವಿ ಶೃಣು ವಕ್ಷ್ಯಾಮಿ ನಿಶ್ಚಯಂ ।
ಯೇ ಯಜಂತಿ ವರಾರೋಹೇ ಕ್ರತೂನೇಕಶತೈರಪಿ ।
ಸರ್ವೇ ತೇ ಮಯಿ ವರ್ತಂತೇ ಸತ್ಯಮೇತದ್ಬ್ರವೀಮಿ ತೇ ॥ ೧೩ ॥

ಅಗ್ನಿರ್ಮುಖಂ ಚ ದೇವಾನಾಂ ಹವ್ಯಕವ್ಯೇಷು ಮಾಧವಿ ।
ಉತ್ತರೋಗ್ನಿರಹಂ ಚೈವ ದಕ್ಷಿಣಾಗ್ನಿರಹಂ ತಥಾ ॥ ೧೪ ॥

ಆಹವಮಾಹವನೀಯೋಗ್ನಿಸ್ಸರ್ವಯಜ್ಞೇಷು ಸುಂದರಿ ॥ ೧೫ ॥

ಪಾವನಃ ಪಾವಕಶ್ಚೈವ ಅಹಮೇವ ವ್ಯವಸ್ಥಿತಃ ।
ಸರ್ವೇಷ್ವೇವ ತು ಕಾರ್ಯೇಷು ದೇವಸತ್ರೇಷು ಮಾಧವಿ ॥ ೧೬ ॥

---

೧೩. ದೇವಿ, ಪಿತೃಯಜ್ಞ ವಿಚಾರವನ್ನು ನಿಜವಾಗಿ ಹೇಳುತ್ತೇನೆ. ಕೇಳು. ವರಾರೋಹೇ, ಯಾರಾದರೂ ನೂರುಯಜ್ಞಗಳನ್ನು ಮಾಡಿದರೂ ಆ ಯಜ್ಞಗಳೆಲ್ಲವೂ ನನಗೇ ಸೇರುವುವು. ಅಥವಾ ಅವರು ನನ್ನಲ್ಲಿರುವರು. ಇದನ್ನು ಸತ್ಯವಾಗಿ ಹೇಳುತ್ತೇನೆ.

೧೪–೧೫. ಮಾಧವೀ, ಸುಂದರೀ, ದೇವಕರ್ಮಗಳಲ್ಲಿಯೂ, ಪಿತೃಕರ್ಮಗಳಲ್ಲಿಯೂ, ದೇವತೆಗಳಿಗೆ ಅಗ್ನಿಯೇ ಮುಖವಾಗಿರುವನು. ಸರ್ವಯಜ್ಞಗಳಲ್ಲಿಯೂ, ದಕ್ಷಿಣಾಗ್ನಿಯೂ ನಾನೇ, ಗಾರ್ಹಪತ್ಯಾಗ್ನಿಯೂ ನಾನೇ, ಆಹವನೀಯಾಗ್ನಿಯೂ ನಾನೇ ಆಗಿರುವೆನು.

೧೬. ಮಾಧವೀ, ದೇವಯಜ್ಞಗಳಲ್ಲಿಯೂ, ಸರ್ವಕಾರ್ಯಗಳಲ್ಲಿಯೂ ಪರಿಶುದ್ಧನಾದ ಅಗ್ನಿಯು ನಾನೇ ಆಗಿರುತ್ತೇನೆ.

ವೈಶ್ವದೇವೇ ನಿಯುಂಜೀತ ಬ್ರಹ್ಮಚಾರೀ ಶುಚಿಸ್ಸದಾ ।
ಭಿಕ್ಷುಕೋ ದೇವತೀರ್ಥೇಷು ವಾನಪ್ರಸ್ಥೋ ಯತಿಸ್ತಥಾ ।
ಏತಾನ್ನಭೋಜಯೇಚ್ಛ್ರಾದ್ಧೇ ದೇವತಾರ್ಥೇಷು ಪೂಜಯೇತ್ ॥೧೭॥

ವ್ರತಸ್ಥಾನ್ಸಂಪ್ರವಕ್ಷ್ಯಾಮಿ ಶ್ರಾದ್ಧಮರ್ಹಂತಿ ಯೇ ದ್ವಿಜಾಃ ।
ಉತ್ತಮೋ ಗೃಹಸಂತುಷ್ಟಃ ಕ್ಷಾಂತೋ ದಾಂತೋ ಜಿತೇಂದ್ರಿಯಃ ॥೧೮॥

ಉದಾಸೀನಸ್ಸತ್ಯಸಂಧಃ ಶ್ರೋತ್ರಿಯೋ ಧರ್ಮಪಾಠಕಃ ।
ವೇದವಿದ್ಯಾವ್ರತಸ್ನಾತೋ ಸುವಿಮೃಷ್ಟಾನ್ನಭೋಜಕಃ ॥ ೧೯ ॥

ಈದೃಶಾನ್ಭೋಜಯೇಚ್ಛ್ರಾದ್ಧೇ ಪಿತೃಯಜ್ಞೇಷು ಮಾಧವಿ ॥ ೨೦ ॥

---

೧೭. ಸದಾ ಶುಚಿಯಾದ ಬ್ರಹ್ಮಚಾರಿಯನ್ನು ಶ್ರಾದ್ಧದಲ್ಲಿ ವಿಶ್ವೇದೇವತೆಗಳ ಸ್ಥಾನಕ್ಕೆ ಇಟ್ಟುಕೊಳ್ಳಬಹುದು. ಭಿಕ್ಷುಗಳಾದ ವಾನಪ್ರಸ್ಥನನ್ನೂ ಯತಿಯನ್ನೂ ವಿಷ್ಣುಸ್ಥಾನಕ್ಕೆ ಇಟ್ಟುಕೊಳ್ಳಬಹುದು. ಅವರನ್ನು ಪಿತೃಸ್ಥಾನದಲ್ಲಿ ಭೋಜನ ಮಾಡಿಸಬಾರದು. ವಿಶ್ವೇದೇವವಿಷ್ಣುಗಳಿಗಾಗಿ ಪೂಜಿಸಬಹುದು.

೧೮-೨೦. ಮಾಧವೀ, ಶ್ರಾದ್ಧಕ್ಕೆ ಅರ್ಹರಾದ ವ್ರತಸ್ಥರಾದ ಬ್ರಾಹ್ಮಣರನ್ನು ಸರಿಯಾಗಿ ಹೇಳುತ್ತೇನೆ. ಗೃಹಸ್ಥರಾಗಿ ಸಂತುಷ್ಟರೂ, ಕ್ಷಮಾಶೀಲರೂ, ಜಿತೇಂದ್ರಿಯರೂ, ಲಾಭಾಲಾಭಾದಿಗಳಲ್ಲಿ ಉದಾಸೀನರೂ, ಸತ್ಯಸಂಧರೂ, ಶ್ರೋತ್ರಿಯರೂ, ಧರ್ಮವನ್ನರಿತವರೂ, ವೇದವಿದ್ಯೆಯನ್ನು ಅಭ್ಯಾಸಮಾಡಿ ವ್ರತಸ್ನಾನಮಾಡಿದವರೂ, ಚೆನ್ನಾಗಿ ವಿಮರ್ಶಿಸಿ ಶುದ್ಧವಾದ ಅನ್ನವನ್ನೇ ಊಟ ಮಾಡುವವರೂ ಅಥವಾ ಮೃಷ್ಟಾನ್ನಭೋಜನಮಾಡುವವರೂ ಆದ ಗೃಹಸ್ಥರು ಉತ್ತಮರು. ಇವರನ್ನೇ ಶ್ರಾದ್ಧದಲ್ಲಿಯೂ, ಬೇರೆಯ ಪಿತೃಯಜ್ಞಗಳಲ್ಲಿಯೂ ಭೋಜನಕ್ಕೆ ಹೇಳಬೇಕು.

ದತ್ವಾ ಹುತಾಶನಾಯಾದೌ ದೇವತೀರ್ಥೇಷು ಸುಂದರಿ ।
ಮುಖೇ ಪಶ್ಚಾದ್ಬ್ರಾಹ್ಮಣಸ್ಯ ಪಿತ್ರ್ಯೇ ದದ್ಯಾತ್ಯಥಾವಿಧಿ ॥ ೨೧ ॥

ಚತುರ್ಣಾಮೇವ ವರ್ಣಾನಾಂ ಯದ್ಯಥಾ ಶ್ರಾದ್ಧಮರ್ಹತಿ ।
ತಥಾ ವಿಧಿಃ ಪ್ರಯೋಕ್ತವ್ಯಃ ಪಿತೃಯಜ್ಞೇಷು ಸುಂದರಿ ॥ ೨೨ ॥

ಯನ್ನ ಪಶ್ಯಂತಿ ತೇ ಭೋಜ್ಯಂ ಶ್ವಾನ ಕುಕ್ಕುಟಸೂಕರಾಃ ।
ಬ್ರಾಹ್ಮಣಾಶ್ಚಾಪ್ಯಪಾಂಕ್ತೇಯಾ ನರಾಸ್ಸಂಸ್ಕಾರವರ್ಜಿತಾಃ ॥ ೨೩ ॥

ಸರ್ವಕರ್ಮಕರಾ ಯೇ ಚ ಸರ್ವಭಕ್ಷಾಶ್ಚ ಯೇ ನರಾಃ ।
ಏತಾನ್ ಶ್ರಾದ್ಧೇ ನ ಪಶ್ಯೇತ್ತು ಪಿತೃಯಜ್ಞೇಷು ಸುಂದರಿ ॥ ೨೪ ॥

ಏತೇ ಪಶ್ಯಂತಿ ಯಚ್ಛ್ರಾದ್ಧಂ ತಚ್ಛ್ರಾದ್ಧಂ ರಾಕ್ಷಸಂ ವಿದುಃ ।
ಮಯಾ ಪ್ರಕಲ್ಪಿತೋ ಭಾಗೋ ಬಲಯೇ ಪೂರ್ವಮೇವ ತು ॥ ೨೫ ॥

---

೨೧. ಸುಂದರೀ, ಶ್ರಾದ್ಧದಲ್ಲಿ ಮೊದಲು ಅಗ್ನಿಯಲ್ಲಿ ದೇವತೀರ್ಥದಿಂದ ಹೋಮಮಾಡಿ ಬಳಿಕ ಬ್ರಾಹ್ಮಣಮುಖದಲ್ಲಿ ಯಥಾವಿಧಿಯಾಗಿ ಪಿತೃತೀರ್ಥದಿಂದ ಪಿತೃಗಳಿಗೆ ಭೋಜನಮಾಡಿಸಬೇಕು.

೨೨. ಸುಂದರೀ ಚತುರ್ವರ್ಣದವರಿಗೂ ಶ್ರಾದ್ಧಕ್ಕೆ ಯಾವುದು ಅರ್ಹವಾದುದೋ ಅದನ್ನೂ, ಆಯಾ ವಿಧಿಯನ್ನೂ ಉಪಯೋಗಿಸಬೇಕು.

೨೩. ಪಿತೃಯಜ್ಞಗಳಲ್ಲಿ ನಾಯಿ ಕೋಳಿ ಹಂದಿಗಳೂ, ಸಂಸ್ಕಾರವರ್ಜಿತರಾಗಿ ಅಪಾಂಕ್ತೇಯರಾದ ಬ್ರಾಹ್ಮಣರೂ ನೋಡದಿರುವ ಪದಾರ್ಥವನ್ನೇ ಅವರು ನೋಡದಂತೆ ಊಟಮಾಡಬೇಕು.

೨೪. ಎಲ್ಲಾ ಕೆಲಸಗಳನ್ನೂ ಮಾಡುವವರನ್ನೂ, ಎಲ್ಲವನ್ನೂ ತಿನ್ನುವವರನ್ನೂ ಶ್ರಾದ್ಧದಲ್ಲಿಯೂ ಇತರ ಪಿತೃಯಜ್ಞಗಳಲ್ಲಿಯೂ ನೋಡಬಾರದು.

೨೫–೨೬. ಅವರು ನೋಡುವ ಶ್ರಾದ್ಧವು ರಾಕ್ಷಸಶ್ರಾದ್ಧವೆನಿಸುವುದು. ಅದು ನಾನು ಪೂರ್ವದಲ್ಲಿ ಇಂದ್ರನಿಗಾಗಿ ತ್ರಿವಿಕ್ರಮನಾಗಿ ಮೂರು ಲೋಕಗಳನ್ನೂ

ಹೃತಂ ಯದಾ ತು ತ್ರೈಲೋಕ್ಯಂ ಶಕ್ರಸ್ಯಾರ್ಥೇ ತ್ರಿವಿಕ್ರಮೇ ।
ಏವಂ ಶ್ರಾದ್ಧಂ ಪ್ರತೀಕ್ಷಂತಿ ಮಂತ್ರಹೀನಮವಿಕ್ರಿಯಂ ॥ ೨೬ ॥

ವರ್ಜನೀಯಾ ಬುಧೈರೇತೇ ಪಿತೃಯಜ್ಞೇಷು ಸುಂದರಿ ।
ಪ್ರಚ್ಛನ್ನಂ ಭೋಜಯೇಚ್ಛ್ರಾದ್ಧೇ ತರ್ಪಯಿತ್ವಾ ದ್ವಿಜಾನ್ ಶುಚಿಃ ॥೨೭॥

ಪಿತೄಂಸ್ತತ್ರಾಹ್ವಯೇದ್ಭೂಮೇ ಮಂತ್ರೇಣ ವಿಧಿಪೂರ್ವಕಂ ।
ಪಿಂಡಾಸ್ತ್ರಯಃ ಪ್ರದಾತವ್ಯಾಃ ಸಹ ವ್ಯಂಜನಸಂಯುತಾಃ ॥ ೨೮ ॥

ಪಿತಾ ಪಿತಾಮಹಶ್ಚೈವ ತಥೈವ ಪ್ರಪಿತಾಮಹಃ ।
ಅಪಸವ್ಯೇನ ದಾತವ್ಯಂ ಮಾಸಿ ಮಾಸಿ ತಿಲೋದಕಂ ॥ ೨೯ ॥

ಪ್ರಣಮ್ಯ ಶಿರಸಾ ದೇವೀರ್ನಿವಾಪಸ್ಯ ಚ ಧಾರಿಣೀಃ ।
ವೈಷ್ಣವೀ ಕಾಶ್ಯಪೀ ಚೇತಿ ಅಜಯಾ ಚೇತಿ ನಾಮತಃ ॥ ೩೦ ॥

ಆಕ್ರಮಿಸಿದಾಗ ಬಲಿಚಕ್ರವರ್ತಿಗೆ ಕಲ್ಪಿಸಿದ ಭಾಗವಾಗುವುದು. ಆದುದರಿಂದ ರಾಕ್ಷಸರು ಮಂತ್ರಹೀನವೂ, ಅಕ್ರಮವೂ ಆದ ಶ್ರಾದ್ಧವನ್ನೇ ನಿರೀಕ್ಷಿಸುತ್ತಿರುವರು.

೨೭. ಸುಂದರೀ, ಆದುದರಿಂದ ಶ್ರಾದ್ಧಕಾಲದಲ್ಲಿ ಆದರ್ಶನೀಯರಾದ ಮೇಲೆಹೇಳಿದವರನ್ನು ತಿಳಿದವರು ಪರಿತ್ಯಜಿಸಬೇಕು. ತಾವೂ ಪರಿಶುದ್ಧರಾಗಿ ಶುದ್ಧರಾದ ಬ್ರಾಹ್ಮಣರನ್ನು ತೃಪ್ತಿಪಡಿಸಿ ರಹಸ್ಯವಾಗಿ ಊಟಮಾಡಿಸಬೇಕು.

೨೮. ಭೂಮೀ, ಶ್ರಾದ್ಧದಲ್ಲಿ ಪಿತೃಗಳನ್ನು ಮಂತ್ರದಿಂದ ವಿಧಿಪೂರ್ವಕವಾಗಿ ಆಹ್ವಾನಿಸಬೇಕು. ವ್ಯಂಜನದೊಡಗೂಡಿದ, ಮೂರುಪಿಂಡಗಳನ್ನು ಪಿತೃಪಿತಾಮಹಪ್ರಪಿತಾಮಹರಿಗೆ ಅರ್ಪಿಸಬೇಕು.

೨೯–೩೧. ಪ್ರತಿತಿಂಗಳಲ್ಲಿಯೂ ಅಮಾವಾಸ್ಯೆಯಲ್ಲಿ ಪಿತೃಪಿತಾಮಹ ಪ್ರಪಿತಾಮಹರಿಗೆ ಅಪಸವ್ಯದಿಂದ ತಿಲೋದಕವನ್ನರ್ಪಿಸಬೇಕು. ಪಿತೃತರ್ಪಣ ಧಾರಿಣಿಯರಾದ ವೈಷ್ಣವೀ, ಕಾಶ್ಯಪೀ, ಅಜಯಾ ಎಂಬ ಹೆಸರುಗಳ

ಏವಂ ದತ್ತೇನ ಪ್ರೀಯಂತೇ ಪಿತರಶ್ಚ ನ ಸಂಶಯಃ ॥ ೩೧ ॥

ಪರಮಾತ್ಮಾ ಶರೀರಸ್ಥೋ ದೇವತಾನಾಂ ಮಯಾ ಕೃತಃ ।
ತ್ರಯಸ್ತತ್ರ ವರಾರೋಹೇ ದೇವಗಾತ್ರಾದ್ವಿನಿಸ್ಸೃತಾಃ ।
ಪಿತೃದೇವಾ ಭವಿಷ್ಯಂತಿ ಭೋಕ್ತಾರಃ ಪಿತೃಪಿಂಡಕಾನ್ ॥ ೩೨ ॥

ದೇವತಾಸುರಗಂಧರ್ವಾ ಯಕ್ಷರಾಕ್ಷಸಪನ್ನಗಾಃ ।
ಛಿದ್ರಂ ಶ್ರಾದ್ಧೇಽಸ್ಯ ಪಶ್ಯಂತಿ ವಾಯುಭೂತಾ ನ ಸಂಶಯಃ ॥ ೩೩ ॥

ಪಿತೃಯಜ್ಞಂ ವಿಶಾಲಾಕ್ಷಿ ಯೇ ಕುರ್ವಂತಿ ವಿದೋ ಜನಾಃ ।
ಆಯುಃ ಕೀರ್ತಿಂ ಬಲಂ ತೇಜೋ ಧನಪುತ್ರಪಶುಸ್ತ್ರಿಯಃ ।
ದದಂತೇ ಪಿತರಸ್ತಸ್ಯ ಆರೋಗ್ಯಂ ನಾತ್ರ ಸಂಶಯಃ ॥ ೩೪ ॥

ದೇವಿಯರನ್ನೂ ತಲೆಬಾಗಿ ವಂದಿಸಿ ತರ್ಪಣವನ್ನೂ ಅರ್ಪಿಸುವುದರಿಂದ ಪಿತೃಗಳೂ ಸಂಶಯವಿಲ್ಲದೆ ಪ್ರೀತರಾಗುವರು.

೩೨. ವರಾರೋಹೇ, ದೇವತೆಗಳ ಶರೀರದಲ್ಲಿ ಪರಮಾತ್ಮನಿರುವಂತೆ ನಾನು ಮಾಡಿದೆನು. ದೇವಶರೀರದಿಂದ ಮೂವರು ಹೊರಗೆ ಹೊರಟರು. ಅವರೇ ಪಿತೃಪಿಂಡಗಳನ್ನು ಭುಜಿಸುವ ಪಿತೃದೇವತೆಗಳು.

೩೩. ದೇವಾಸುರಗಂಧರ್ವಯಕ್ಷ ರಾಕ್ಷಸೋರಗರು ವಾಯುರೂಪರಾಗಿ ಈ ಶ್ರಾದ್ಧದಲ್ಲಿ ಛಿದ್ರ (ಲೋಪ)ವನ್ನೇ ನಿರೀಕ್ಷಿಸುತ್ತಿರುವುದರಲ್ಲಿ ಸಂಶಯವಿಲ್ಲ.

೩೪. ವಿಶಾಲಾಕ್ಷಿ, ಪಿತೃಯಜ್ಞವನ್ನು ಮಾಡುವ ಜ್ಞಾನಿಗಳಿಗೆ ಪಿತೃಗಳು ಆಯುಸ್ಸನ್ನೂ, ಕೀರ್ತಿಯನ್ನೂ, ಬಲವನ್ನೂ, ತೇಜಸ್ಸನ್ನೂ, ಧನವನ್ನೂ, ಪುತ್ರರನ್ನೂ, ಪಶುಗಳನ್ನೂ, ಸ್ತ್ರೀಯರನ್ನೂ, ಆರೋಗ್ಯವನ್ನೂ, ಕೊಡುವುದರಲ್ಲಿ ಸಂದೇಹವಿಲ್ಲ.

ಆತ್ಮಕರ್ಮವಶಾಲ್ಲೋಕಾನ್ ಪ್ರಾಪ್ನುವಂತೀಹ ಶೋಭನಾನ್ |
ತಿರ್ಯಗ್ಭ್ಯಶ್ಚ ವಿಮುಚ್ಯಂತೇ ಪ್ರೇತಭಾವೇನ ಮಾನವಾಃ || ೩೫ ||

ನರಕೇ ಪಚ್ಯಮಾನಾನಾಂ ತ್ರಾತಾ ಭವತಿ ಮಾನವಃ || ೩೬ ||

ಪೂಜಕಃ ಪಿತೃದೇವಾನಾಂ ಸರ್ವಕಾಲಂ ಗೃಹಾಶ್ರಮೇ |
ದ್ವಿಜಾತೀಂಸ್ತರ್ಪಯಿತ್ವಾ ತು ಪೂರ್ಣೇನ ವಿಧಿನಾ ನರಃ || ೩೭ ||

ಅಕ್ಷಯ್ಯಂ ತಸ್ಯ ಮನ್ಯಂತೇ ಪಿತರಶ್ಶ್ರಾದ್ಧತರ್ಪಿತಾಃ || ೩೮ ||

ನರಾ ಯೇ ಪಿತೃಭಕ್ತಾಸ್ತೇ ಪ್ರಾಪ್ನುವಂತಿ ಪರಾಂ ಗತಿಂ |
ಸಾತ್ವಿಕಂ ಶುಕ್ಲಸಂಧಾನಮೇತೇ ಯಾಂತಿ ವಿದೋ ಜನಾಃ || ೩೯ ||

---

೩೫. ಮಾನವರು ಪಿತೃಯಜ್ಞದಿಂದ ಪ್ರೇತತ್ವದಿಂದಲೂ, ತಿರ್ಯಗ್ಜನ್ಮದಿಂದಲೂ ವಿಮುಕ್ತರಾಗಿ ಅವರ ಕರ್ಮಾನುಸಾರವಾಗಿ ಶುಭಕರವಾದ ಲೋಕಗಳನ್ನು ಪಡೆಯುವರು.

೩೬–೩೭. ಗೃಹಸ್ಥಾಶ್ರಮದಲ್ಲಿ ಯಾವಾಗಲೂ ಪಿತೃದೇವತೆಗಳನ್ನು ಪೂಜಿಸುವವನು ಪೂರ್ಣವಿಧಿಯಿಂದ ದ್ವಿಜರನ್ನು ತೃಪ್ತಿಪಡಿಸಿ ನರಕದಲ್ಲಿ ಬೇಯುತ್ತಿರುವವರನ್ನು ರಕ್ಷಿಸುವವನಾಗುವನು.

೩೮–೩೯. ಶ್ರಾದ್ಧದಲ್ಲಿ ತೃಪ್ತಿಗೊಳಿಸಲ್ಪಟ್ಟ ಪಿತೃಗಳು ಕರ್ತೃವು ಮಾಡಿದುದನ್ನು ಅಕ್ಷಯವಾದುದೆಂದು ತಿಳಿಯುವರು. ಪಿತೃಭಕ್ತರಾದ ಜ್ಞಾನಿಗಳು ಸಾತ್ವಿಕವಾದ ಶುಕ್ಲಮಾರ್ಗವನ್ನನುಸರಿಸಿ ಪರಮಗತಿಯನ್ನು ಪಡೆಯುವರು.

ಪುನರನ್ಯತ್ಪ್ರವಕ್ಷ್ಯಾಮಿ ಶೃಣು ತತ್ತ್ವೇನ ಸುಂದರಿ ।
ಅಜ್ಞಾನತಮಸಾರೂಢಾ ವಿಕೃತಿಜ್ಞಾಶ್ಚತಾಸ್ತಥಾ ।
ಸ್ನೇಹಪಾಶಶತೇನ್ನೈವ ಪಚ್ಯಂತೇ ನರಕೇ ನರಾಃ || ೪೦ ||

ಕಲ್ಪಾಂತಂ ಪಚ್ಯಮಾನಾಪಿ ತ್ರಾಯಂತೇ ಯೇ ನ ಮಾನವಾಃ ।
ತೇಷಾಂ ಪುತ್ರಾಶ್ಚ ಪೌತ್ರಾಶ್ಚ ಕದಾಚಿದಪಿ ಸುಂದರಿ || ೪೧ ||

ಮುಂಚಂತಿ ಜಲಬಿಂದೂಂಶ್ಚ ಅಮಾಂ ಪ್ರಾಪ್ಯ ಜಲಾಶಯೇ ।
ತೇನ್ನೈವ ಭವಿತಾ ತೃಪ್ತಿಸ್ತೇಷಾಂ ನಿರಯಗಾಮಿನಾಂ || ೪೨ ||

ಯೇ ವೈ ಶ್ರಾದ್ಧಂ ಪ್ರಕುರ್ವಂತಿ ತರ್ಪಯಿತ್ವಾ ದ್ವಿಜಾತಯಃ ।
ದತ್ವಾ ತಿಲೋದಕಂ ಪಿಂಡಾನ್ಪಿತೃಭ್ಯೋ ಭಕ್ತಿಭಾವತಃ ।
ನಿರಯಾತ್ತೇಪಿ ಮುಚ್ಯಂತೇ ತೃಪ್ತಿರ್ಭವತಿ ಚಾಕ್ಷಯಾ || ೪೩ ||

---

೪೦. ಸುಂದರೀ, ಮತ್ತೆ ಬೇರೊಂದುವಿಚಾರವನ್ನು ನಿಜವಾಗಿ ಹೇಳುತ್ತೇನೆ. ಕೇಳು. ಅಜ್ಞಾನವೆಂಬ ಕತ್ತಲೆಯಲ್ಲಿ ಸಿಕ್ಕಿರುವವರೂ ಮೋಸವನ್ನರಿತವರೂ ಆದ ದುಷ್ಟರು ನೂರಾರು ಸ್ನೇಹ (ಪ್ರೀತಿ)ಪಾಶಗಳಿಂದ ಬಂಧಿತರಾಗಿ ನರಕದಲ್ಲಿ ಬೇಯುವರು.

೪೧–೪೨. ಕಲ್ಪಾಂತದವರೆಗೂ ಹಾಗೆ ನರಕದಲ್ಲಿ ಬೇಯುತ್ತಿದ್ದರೂ ರಕ್ಷಣೆಯನ್ನು ಪಡೆಯದ ಅಥವಾ ಕಾಪಾಡುವವರಿಲ್ಲದ ನರಕದ ಮನುಷ್ಯರಿಗೆ ಅವರ ಪುತ್ರರೂ, ಪೌತ್ರರೂ, ಯಾಗಲಾದರೂ ಅಮಾವಾಸ್ಯೆಯ ದಿನ ಜಲಾಶಯಕ್ಕೆ ಹೋಗಿ ಬಿಡುವ ಎಳ್ಳುನೀರಿನಿಂದಲೇ ತೃಪ್ತಿಯಾಗುವುದು.

೪೩. ಯಾರು ಪಿತೃಭಕ್ತಿಭಾವದಿಂದ ತಿಲೋದಕವನ್ನೂ ಪಿಂಡಗಳನ್ನೂ, ಅರ್ಪಿಸಿ ಪಿತೃಗಳಿಗೆ ಶ್ರಾದ್ಧಮಾಡಿ ತೃಪ್ತಿಪಡಿಸುವರೋ ಆ ದ್ವಿಜರೂ ನರಕದಿಂದ ತಪ್ಪಿಸಿಕೊಳ್ಳುವರು. ಪಿತೃಗಳಿಗೂ ಅಕ್ಷಯವಾದ ತೃಪ್ತಿಯಾಗುವುದು.

ಗೃಹ್ಯ ಚೌದುಂಬರಂ ಪಾತ್ರಂ ಕೃತ್ವಾ ತತ್ರ ತಿಲೋದಕಂ ॥ ೪೪ ॥

ವಿಪ್ರಾಣಾಂ ವಚನಂ ಕೃತ್ವಾ ಯಥಾಶಕ್ತ್ಯಾ ಚ ದಕ್ಷಿಣಾ ।
ದೇಯಾ ತೇಷಾಂ ತು ವಿಪ್ರಾಣಾಂ ಪಿತೃಣಾಂ ಮೋಕ್ಷಣಾಯ ಚ ॥೪೫॥

ದೇಯೋ ನೀಲೋ ವೃಷಸ್ತತ್ರ ನರಕಾರ್ತಿವಿನಾಶನಃ ।
ನೀಲಷಂಡಸ್ಯ ಲಾಂಗೂಲೇ ತೋಯಮುತ್ಪ್ಯದ್ಧರೇದ್ಯದಿ ।
ಷಷ್ಟಿವರ್ಷಸಹಸ್ರಾಣಿ ಪಿತರಸ್ತೇನ ತರ್ಪಿತಾಃ ॥ ೪೬ ॥

ಮುಕ್ತಮಾತ್ರೇಣ ಶೃಂಗೇನ ನೀಲಷಂಡೇನ ಸುಂದರಿ ।
ಉದ್ಧೃತೋ ಯದಿ ಸುಶ್ರೋಣಿ ಪಂಕಶ್ಯೃಂಗೇಣ ತೇನ ಚ ॥ ೪೭ ॥

ಬಾಂಧವಾಃ ಪಿತರಸ್ತಸ್ಯ ನಿರಯೇ ಪತಿತಾಸ್ತು ಯೇ ।
ತಾನುದ್ಧೃತ್ಸ ವರಾರೋಹೇ ಸೋಮಲೋಕಂ ಸ ಗಚ್ಛತಿ ॥ ೪೮ ॥

೪೪–೪೫. ಅತ್ತಿಯ ಮರದಿಂದ ಮಾಡಿದ ಪಾತ್ರೆಯನ್ನು ತೆಗೆದುಕೊಂಡು ತಿಲೋದಕವನ್ನು ಮಾಡಿ, ಬ್ರಾಹ್ಮಣರಿಗೆ ಹೇಳಿ, ಪಿತೃಗಳ ಮೋಕ್ಷಕ್ಕಾಗಿ ಅವರಿಗೆ ಯಥಾಶಕ್ತಿಯಾಗಿ ದಕ್ಷಿಣೆಯನ್ನು ಆ ನೀರಿನಿಂದ ಧಾರಾಪೂರ್ವಕವಾಗಿ ಕೊಡಬೇಕು.

೪೬. ಕಪ್ಪಾದ (ವೃಷ) ಹೋರಿಯನ್ನು ನರಕ ದುಃಖವಿನಾಶಕ್ಕಾಗಿ ಬಸವನಾಗಿ ಬಿಡಬೇಕು. ಕಪ್ಪುಹೋರಿಯ ಬಾಲದಲ್ಲಿ ನೀರನ್ನೆತ್ತಿ ಧಾರೆಯಾಗಿ ಬಿಟ್ಟನಾದರೆ ಅದರಿಂದ ಪಿತೃಗಳಿಗೆ ಅರವತ್ತುಸಾವಿರವರ್ಷ ತೃಪ್ತಿಯಾಗುವುದು.

೪೭–೪೮. ಸುಂದರೀ, ವರಾರೋಹೇ, ಬಿಟ್ಟ ಕಪ್ಪುಹೋರಿಯು ಕೆಸರನ್ನು ಅದರ ಕೊಂಬಿನಿಂದ ಎತ್ತಿತಾದರೆ, ಬಿಟ್ಟವನ ಬಂಧುಗಳಾಗಲಿ, ಪಿತೃಗಳಾಗಲಿ ನರಕದಲ್ಲಿ ಬಿದಿದ್ದರೆ ಅವರನ್ನು ಅಲ್ಲಿಂದ ಉದ್ಧರಿಸಿ ಅದೂ ಸೋಮಲೋಕಕ್ಕೆ ಹೋಗುವುದು.

ಮುಕ್ತೇನ ನೀಲಷಂಡೇನ ಯತ್ಪುಣ್ಯಂ ಜಾಯತೇ ಭುವಿ ॥ ೪೯ ॥

ಷಷ್ಟಿವರ್ಷಸಹಸ್ರಾಣಿ ಷಷ್ಟಿವರ್ಷಶತಾನಿ ಚ ।
ಸೋಮಲೋಕೇಷು ಮೋದಂತೇ ಕ್ಷುತ್ತೃಡ್ಭ್ಯಾಂಚ ವಿವರ್ಜಿತಾಃ ॥೫೦॥

ಏಷ ಧರ್ಮೋ ಗೃಹಸ್ಥಾನಾಂ ಪುತ್ರಪೌತ್ರಸಮನ್ವಿತಾಃ ।
ತ್ರಾತಾರಶ್ಚ ಭವಿಷ್ಯಂತಿ ವರ್ತಯಂತೋ ಯಥಾಸುಖಂ ॥ ೫೧ ॥

ಪಿಪೀಲಿಕಾದಿ ಭೂತಾನಿ ಜಂಗಮಾಶ್ಚ ವಿಹಂಗಮಾಃ ।
ಉಪಜೀವಂತಿ ಸುಶ್ರೋಣಿ ಗೃಹಸ್ಥೇಷು ನ ಸಂಶಯಃ ॥ ೫೨ ॥

ಏವಂ ಗೃಹಾಶ್ರಮೋ ಮೂಲಂ ಧರ್ಮಸ್ತತ್ರ ಪ್ರತಿಷ್ಠಿತಃ ॥ ೫೩ ॥

ಮಾಸಿ ಮಾಸಿ ತು ಯೇ ಶ್ರಾದ್ಧಂ ಪ್ರಕುರ್ವಂತಿ ಗೃಹಾಶ್ರಮೇ ।
ತಿಥೌ ಪರ್ವಣಿ ಯೇ ಚೈವ ಸ್ವಪಿತೄಂಸ್ತಾರಯಂತಿ ವೈ ॥ ೫೪ ॥

೪೯-೫೦. ಕಪ್ಪುಹೋರಿಯನ್ನು ಬಸವನಾಗಿ ಬಿಡುವುದರಿಂದ ಲೋಕದಲ್ಲಿ ಯಾವ ಪುಣ್ಯವು ಲಭಿಸುವುದೆಂಬುದನ್ನು ಕೇಳು. ವೃಷೋತ್ಸರ್ಗಮಾಡುವವನ ಪಿತೃಗಳು ಅರವತ್ತಾರುಸಾವಿರ ವರ್ಷಕಾಲ ಹಸಿವುಬಾಯಾರಿಕೆಗಳಿಲ್ಲದವರಾಗಿ ಸೋಮಲೋಕದಲ್ಲಿ ಆನಂದಪಡುವರು.

೫೧. ಗೃಹಸ್ಥರು ಮೇಲೆ ಹೇಳಿದಂತೆ ವೃಷೋತ್ಸರ್ಗಾದಿಗಳನ್ನು ಮಾಡುವುದು ಧರ್ಮವಾಗಿದೆ. ಪುತ್ರಪೌತ್ರರಿಂದೊಡಗೂಡಿದ ಗೃಹಸ್ಥರು ಪಿತೃಗಳೇ ಮೊದಲಾದವರನ್ನು ಸುಖವಾಗಿರುವಂತೆ ರಕ್ಷಿಸುವವರಾಗಿರುವರು.

೫೨. ಸುಂದರೀ, ಸಂಚರಿಸುವ ಇರುವೆಯೇ ಮೊದಲಾದ ಪ್ರಾಣಿಗಳೂ, ಪಕ್ಷಿಗಳೂ ಗೃಹಸ್ಥರ ಆಶ್ರಯದಿಂದ ಜೀವಿಸುತ್ತವೆ. ಸಂಶಯವಿಲ್ಲ.

೫೩-೫೪. ಹೀಗೆ ಗೃಹಸ್ಥಾಶ್ರಮವು ಎಲ್ಲಕ್ಕೂ ಮೂಲವಾಗಿದೆ. ಧರ್ಮವು ಅಲ್ಲಿ ನೆಲೆಸಿರುವುದು. ಪ್ರತಿತಿಂಗಳ ಅಮಾವಾಸ್ಯೆಯಲ್ಲಿಯೂ ಶ್ರಾದ್ಧಮಾಡುವ ಗೃಹಸ್ಥರು ತಮ್ಮ ಪಿತೃಗಳನ್ನು ಪಾರಗಾಣಿಸುವರು.

ನ ಯಜ್ಞದಾನಾಧ್ಯಯನೋಪವಾಸೈ
ಸ್ತೀರ್ಥಾಭಿಷೇಕೈರಪಿ ಚಾಗ್ನಿಹೋತ್ರೈಃ ।
ದಾನೈರನೇಕೈರ್ವಿಧಿಸಂಪ್ರದತ್ತೈ
ರ್ನ ತತ್ಫಲಂ ಶ್ರಾದ್ಧಗೃಹಸ್ಥಧರ್ಮೇ ॥ ೫೫ ॥

ಪಿತರೋ ನಿರ್ಗತಾಸ್ತತ್ರ ಬ್ರಹ್ಮವಿಷ್ಣುಶರೀರಗಾಃ ।
ಪಿತಾ ಪಿತಾಮಹಶ್ಚೈವ ತಥೈವ ಪ್ರಪಿತಾಮಹಃ ॥ ೫೬ ॥

ಏವಂ ಕ್ರಮೇಣ ವೈ ತತ್ರ ಪಿತೃದೇವಾ ವಸುಂಧರೇ ।
ದೇವತಾಃ ಕಾಶ್ಯಪೋತ್ಪನ್ನಾಶ್ಶ್ರಾದ್ಧೇಷು ವಿನಿಯೋಜಿತಾಃ ॥ ೫೭ ॥

ಶತ ಏತೇ ನ ಜಾನಂತಿ ದೇವಾಶ್ಶಕ್ರಪುರೋಗಮಾಃ ।
ಈಶ್ವರಶ್ಚ ನಜಾನಾತಿ ಆತ್ಮದೇಹವಿನಿಸ್ಸೃತಃ ॥ ೫೮ ॥

ನ ಚ ಬ್ರಹ್ಮಾ ವಿಜಾನಾತಿ ನಿಸ್ಸೃತೋ ಮಮ ಮಾಯಯಾ ।
ಏವಂ ಮಾಯಾಮಯೌ ಭೂಮೌ ಬ್ರಹ್ಮರುದ್ರೌ ಬಹಿಷ್ಕೃತೌ ॥ ೫೯ ॥

---

೫೫. ಗೃಹಸ್ಥಧರ್ಮಗಳಲ್ಲಿ ಶ್ರಾದ್ಧದಿಂದಾಗುವ ಫಲವು ಯಜ್ಞದಾನಾಧ್ಯಯನೋಪವಾಸಗಳಿಂದಲೂ, ತೀರ್ಥಸ್ನಾನಗಳಿಂದಲೂ, ಅಗ್ನಿಹೋತ್ರಗಳಿಂದಲೂ, ವಿಧಿಪೂರ್ವಕವಾದ ಅನೇಕ ದಾನಗಳಿಂದಲೂ ಆಗಲಾರದು.

೫೬. ಬ್ರಹ್ಮವಿಷ್ಣು ಶರೀರಗತರಾಗಿದ್ದ ಪಿತೃಪಿತಾಮಹ ಪ್ರಪಿತಾಮಹರೆಂಬ ಪಿತೃಗಳು ಅಲ್ಲಿಂದ ಹೊರಗೆ ಹೊರಟರು.

೫೭. ವಸುಂಧರೇ, ಈ ಕ್ರಮದಿಂದಲೇ ಪಿತೃದೇವತೆಗಳೂ, ಕಶ್ಯಪೋತ್ಪನ್ನರಾದ ದೇವತೆಗಳೂ ಶ್ರಾದ್ಧದಲ್ಲಿ ಪೂಜಿತರಾಗುವರು.

೫೮–೫೯. ಪಿತೃಗಳ ವಿಚಾರವನ್ನು ಸರಿಯಾಗಿ ದೇವತೆಗಳೂ ಅರಿಯರು. ನನ್ನ ಮಾಯೆಯಿಂದ ನನ್ನ ದೇಹದಿಂದಲೇ ಉರಿಸಿದ ಈಶ್ವರನೂ ಅರಿಯನು. ಹೀಗೆ ಬ್ರಹ್ಮರುದ್ರರು ಮಾಯಾಮಯರಾಗಿ ಲೋಕದಲ್ಲಿ ಪ್ರಕಟಿತರಾದರು.

ಪುನಶ್ಚಾನ್ಯತ್ಪ್ರವಕ್ಷ್ಯಾಮಿ ಪಿತೃಯಜ್ಞೇಷು ಸುಂದರಿ ।
ದದ್ಯಾದ್ವೈ ಬ್ರಾಹ್ಮಣಮುಖೇ ನಾಗ್ನೌ ತು ಜುಹುಯಾತ್ಕ್ವಚಿತ್ ॥ ೬೦ ॥

ಕೃತ್ವಾ ವೈ ಪಿಂಡಸಂಕಲ್ಪಂ ದರ್ಭಾನಾಸ್ತೀರ್ಯ ಭೂತಲೇ ॥ ೬೧ ॥

ತೇನ ತೇ ಪಿತೃಪಿಂಡೇನ ಪಿತೃದೇವಾ ವಸುಂಧರೇ ।
ಅಜೀರ್ಣೇನಾಭಿಪೀಡ್ಯಂತೇ ಭುಜ್ಯಂತೇ ನ ಚ ಸುಂದರಿ ॥ ೬೨ ॥

ತತೋ ದುಃಖೇನ ಸಂತಪ್ತಾ ಪದ್ಯಂತೇ ಸೋಮಮೇವ ಚ ।
ದೃಷ್ಟ್ವಾ ಸೋಮೇನ ಸುಶ್ರೋಣಿ ದೇವತಾ ಜೀರ್ಣಪೀಡಿತಾಃ ।
ಸ್ವಾಗತೇನಾಥ ವಾಕ್ಯೇನ ಪೂಜಿತಾಸ್ತದನಂತರಂ ॥ ೬೩ ॥

॥ ಸೋಮ ಉವಾಚ ॥

ದೇವತಾಃ ಕಸ್ಯ ಚೋತ್ಪನ್ನಾ ದುಃಖಿತಾಃ ಕೇನ ಹೇತುನಾ ।
ಏವಂತು ಭಾಷಮಾಣಸ್ಯ ಸೋಮಸ್ಯ ತದನಂತರಂ ॥ ೬೪ ॥

೬೦–೬೨. ಸುಂದರೀ, ಬೇರೊಂದು ವಿಚಾರವನ್ನೂ ಹೇಳುತ್ತೇನೆ. ಪಿತೃಯಜ್ಞಗಳಲ್ಲಿ ಬ್ರಾಹ್ಮಣಮುಖದಿಂದಲೇ ಪಿತೃಗಳಿಗೆ ಭೋಜನಮಾಡಿಸಬೇಕು. ವಸುಂಧರೇ, ಒಂದುವೇಳೆ ಅಗ್ನಿಯಲ್ಲೇ ಎಲ್ಲವನ್ನೂ ಹೋಮಮಾಡಿ, ಬಳಿಕ ಪಿಂಡಸಂಕಲ್ಪವನ್ನು ಮಾಡಿ, ಭೂಮಿಯಮೇಲೆ ದರ್ಭೆಯನ್ನು ಹರಡಿ ಅದರಮೇಲೆ ಇಟ್ಟುಕೊಡುವ ಪಿತೃಪಿಂಡದಿಂದ ಪಿತೃದೇವತೆಗಳು ಅಜೀರ್ಣ ಪೀಡಿತರಾಗುವರು. ಆದುದರಿಂದ ಅವರು ಅದನ್ನು ಭುಜಿಸುವುದೂ ಇಲ್ಲ.

೬೩. ಸುಂದರೀ, ಬ್ರಾಹ್ಮಣಮುಖದಿಂದ ಮಾಡದ ಶ್ರಾದ್ಧದಿಂದ ದುಃಖಸಂತಪ್ತರಾದ ಪಿತೃದೇವತೆಗಳು ಸೋಮ(ಚಂದ್ರ)ನ ಸಮೀಪಕ್ಕೆ ಹೋದರು. ಸೋಮನೂ ಅಜೀರ್ಣಪೀಡಿತರಾದ ಪಿತೃದೇವತೆಗಳನ್ನು ನೋಡಿ, ಸ್ವಾಗತವಾಕ್ಯಗಳಿಂದ ಗೌರವಿಸಿದನು.

೬೪–೬೫. "ದೇವತೆಗಳೇ, ನೀವು ಯಾರ ಪುತ್ರರು ? ಏಕೆ ದುಃಖಿತರಾಗಿರುವಿರಿ ?" ಎಂದು ಕೇಳಿದ ಸೋಮನಿಗೆ ಅವರು ಹೇಳಿದರು. "ನಮ್ಮ

ಊಚುಸ್ತೇ ಸೋಮಮೇವಾಪಿ ವಾಕ್ಯಂ ನಶ್ರೂಯತಾಮಿತಿ ।
ತ್ರಯಸ್ತು ಪಿತರೋ ದೇವಾ ಬ್ರಹ್ಮವಿಷ್ಣುಹರೋದ್ಭವಾಃ ॥ ೬೫ ॥

ಶ್ರಾದ್ಧೇ ನಿಯೋಜಿತಾಸ್ತ್ರೈಸ್ತು ಪಿತೃಪಿಂಡೇನ ತರ್ಪಿತಾಃ ।
ಅಜೀರ್ಣಂ ಜಾಯತೇ ಸೋಮ ತೇನ ವೈ ದುಃಖಿತಾ ವಯಂ ॥ ೬೬ ॥

॥ ಸೋಮ ಉವಾಚ ॥

ಸಖಾ ಚಾಹಂ ಭವಿಷ್ಯಾಮಿ ತ್ರಯಾಣಾಂಚ ಚತುರ್ಥಕಃ ।
ಸಹಿತಾಸ್ತತ್ರ ಗಚ್ಛಾಮೋ ಯತ್ರ ಶ್ರೇಯೋ ಭವಿಷ್ಯತಿ ॥ ೬೭ ॥

ಏವಮುಕ್ತ್ವಾಸ್ತು ಸೋಮೇನ ಪಿತೃದೇವಾಸ್ತದಂತರೇ ।
ಸೋಮಂ ಸೋಮೇನ ಗಚ್ಛಂತಿ ಶ್ರೇಯಸ್ಕಾಮಾ ವಸುಂಧರೇ ॥ ೬೮ ॥

ಮಾತನ್ನು ಕೇಳೋಣವಾಗಲಿ. ನಾವು ಮೂವರೂ ಬ್ರಹ್ಮವಿಷ್ಣುಹರರ ಪುತ್ರರಾದ ಪಿತೃದೇವತೆಗಳು.

೬೬. ಸೋಮನೇ, ನಮ್ಮನ್ನು ಶ್ರಾದ್ಧದಲ್ಲಿ ಕರೆದು, ಪಿತೃಪಿಂಡದಿಂದ ತೃಪ್ತಿಪಡಿಸಿದರು. ಅದರಿಂದ ನಮಗೆ ಅಜೀರ್ಣವಾಗಿದೆ. ಆದುದರಿಂದ ನಾವು ದುಃಖಿತರಾಗಿದ್ದೇವೆ. ”

೬೭. ಸೋಮ—ನಾನು ನಿಮಗೆ ಮೂವರಿಗೂ ಸ್ನೇಹಿತನಾಗಿ ನಾಲ್ಕನೆಯವನಾಗುವೆನು. ಎಲ್ಲಿ ಹೋದರೆ ನಮಗೆ ಶ್ರೇಯಸ್ಸಾಗುವುದೋ ಅಲ್ಲಿಗೆ ಹೋಗೋಣ.

೬೮–೬೯. ವಸುಂಧರೇ, ಸೋಮನು ಹೀಗೆ ಹೇಳಲು, ಶ್ರೇಯಸ್ಸನ್ನು ಬಯಸುವ ಪಿತೃದೇವತೆಗಳು ಬಳಿಕ ಸೋಮನೊಡನೆ ಹೋಗಿ, ಮೇರುಶೃಂಗದಲ್ಲಿ

ಶರಣ್ಯಂ ಶರಣಂ ದೇವಂ ಬ್ರಹ್ಮಾಣಂ ಪದ್ಮಸಂಭವಂ |
ಮೇರುಶೃಂಗೇ ಸುಖಾಸೀನಂ ಬ್ರಹ್ಮರ್ಷಿಗಣಸೇವಿತಂ || ೬೯ ||

ದೃಷ್ಟ್ವಾ ಪಿತಾಮಹಂ ದೇವಂ ಪ್ರಣಮ್ಯ ಸಹಸಾ ಕ್ಷಿತೌ |
ಅತ್ರಿಪುತ್ರೇಣ ಸೋಮೇನ ಭಾಷಿತೋ ವೈ ಪಿತಾಮಹಃ || ೭೦ ||

ಯ ಏತೇ ಪಿತರೋ ದೇವ ದುಃಖಿತಾಜೀರ್ಣಪೀಡಿತಾಃ |
ಆಗತಾಶ್ಶರಣಂ ಚಾತ್ರ ಸೋಮಂ ಸೋಮೇನ ಸತ್ತಮ |
ಯಥಾ ನಶ್ಯಂತ್ಯಜೀರ್ಣಾನಿ ತಥಾ ಕುರು ಪಿತಾಮಹ || ೭೧ ||

ಮುಹೂರ್ತಂ ಧ್ಯಾನಮಾಸ್ಥಾಯ ಈಶ್ವರಂ ಚ ದದರ್ಶ ಹ |
ಉವಾಚ ವಚನಂ ತತ್ರ ಬ್ರಹ್ಮಾ ಯೋಗೀಶ್ವರಂ ಪ್ರತಿ || ೭೨ ||

ಬ್ರಹ್ಮರ್ಷಿಸಮೂಹದಿಂದ ಸೇವಿತನಾಗಿ ಸುಖದಿಂದಿರುವ ರಕ್ಷಕನೂ, ದೇವನೂ ಆದ ಪಾರ್ವತಿಪತಿಯಾದ ಈಶ್ವರನನ್ನೂ, ಬ್ರಹ್ಮನನ್ನೂ ಮರೆಹೊಕ್ಕರು.

೭೦. ಈಶ್ವರನನ್ನೂ. ಬ್ರಹ್ಮನನ್ನೂ ನೋಡಿ, ತಟ್ಟನೆ ಭೂಮಿಯಮೇಲೆ ಪ್ರಣಾಮಮಾಡಿ, ಅತ್ರಿಪುತ್ರನಾದ ಸೋಮನು ಬ್ರಹ್ಮನಿಗೆ ಬಿನ್ನೈಸಿದನು.

೭೧. "ದೇವ, ಸತ್ತಮನೇ, ಈ ಪಿತೃಗಳು ಅಜೀರ್ಣಪೀಡಿತರಾಗಿ ದುಃಖಪಡುತ್ತಿರುವರಾಗಿ ಇಲ್ಲಿ ನನ್ನೊಡನೆ ಬಂದು ಶರಣಾಗತರಾಗಿರುವರು. ಪಿತಾಮಹನೇ, ಇವರ ಅಜೀರ್ಣವು ನಾಶವಾಗುವ ಹಾಗೆ ಮಾಡು."

೭೨. ಬ್ರಹ್ಮನು ಸ್ವಲ್ಪಹೊತ್ತು ಆಲೋಚಿಸಿ, ಈಶ್ವರನನ್ನು ನೋಡಿ, ಯೋಗೀಶ್ವರನಾದ ಅವನಿಗೆ ಹೀಗೆ ಹೇಳಿದನು.

ಏತೇ ತೇ ಪಿತರೋ ದೇವ ದುಃಖಿತಾಜೀರ್ಣ ಪೀಡಿತಾಃ ॥ ೭೩ ॥

ಆಗತಾಶ್ಶರಣಂ ಚಾತ್ರ ಸೋಮೇನ ಸಹಿತಾ ತವ ।
ಆಚಕ್ಷ್ವ ನಿರ್ಮಿತಾ ಯೇನ ಯಥಾ ಶ್ರೇಯೋ ಭವೇತ್ತಥಾ ॥ ೭೪ ॥

ಬ್ರಹ್ಮಣಾ ಚೈವಮುಕ್ತಸ್ತು ಈಶ್ವರಃ ಪರಮೇಶ್ವರಃ ।
ಮುಹೂರ್ತಂ ಧ್ಯಾನಮಾಸ್ಥಾಯ ದಿವ್ಯಂ ಯೋಗಂ ಚ ಮಾಧವಿ ॥ ೭೫ ॥

ಪಶ್ಯತೇ ಈಶ್ವರಂ ತತ್ರ ಯೋಗವೇದಾಂಗ ನಿರ್ಮಿತಂ ।
ವಿಸ್ಮಯಂ ಪರಮಂ ಗತ್ವಾ ಬ್ರಹ್ಮಾಣಂ ವಾಕ್ಯಮಬ್ರವೀತ್ ॥ ೭೬ ॥

ನಿರ್ಮಿತಾ ವಿಷ್ಣುನಾ ಬ್ರಹ್ಮನ್ ವೈಷ್ಣವ್ಯಾ ಮಾಯಯಾ ಚ ತೇ ।
ಪ್ರಥಮಂ ಪಿತರೋ ದೇವಾ ಯೇ ಚ ಶ್ರೇಷ್ಠಾ ಭವಂತಿ ತೇ ॥ ೭೭ ॥

೭೩–೭೪. "ದೇವ, ಈ ಪಿತೃಗಳು ದುಃಖಪೀಡಿತರಾಗಿ ಚಂದ್ರನೊಡನೆ ಇಲ್ಲಿ ಬಂದು, ನಿನ್ನನ್ನು (ನನ್ನನ್ನು) ಮರೆಹೊಕ್ಕಿರುವರು. ಇವರು ಯಾರಿಂದ ನಿರ್ಮಿತರಾದರು? ಇವರಿಗೆ ಹೇಗೆ ಶ್ರೇಯಸ್ಸಾಗುವುದು ಎಂಬುದನ್ನು ನನಗೆ ಹೇಳು."

೭೫. ಮಾಧವೀ, ಬ್ರಹ್ಮನು ಹೀಗೆ ಹೇಳಲು ಪರಮೇಶ್ವರನಾದ ಶಿವನು ಮುಹೂರ್ತಕಾಲ ದಿವ್ಯಯೋಗಾಸಕ್ತನಾಗಿ ಆಲೋಚಿಸಿದನು.

೭೬. ಬಳಿಕ ಈಶ್ವರನು ಯೋಗವೇದಾಂಗನಿರ್ಮಿತವಾದ ಪರಮಾಶ್ಚರ್ಯವನ್ನು ಪಡೆದು, ಬ್ರಹ್ಮನನ್ನು ಕುರಿತು ಹೇಳಿದನು.

೭೭. "ಬ್ರಹ್ಮನೇ, ಯಾರು ಶ್ರೇಷ್ಠರಾಗಿರುವರೋ ಆ ಪಿತೃದೇವತೆಗಳು ಮೊದಲೇ ವಿಷ್ಣುವಿನಿಂದ ವೈಷ್ಣವಮಾಯೆಯಿಂದ ನಿರ್ಮಿತರಾದರು.

ಪಿತಾ ತು ಬ್ರಹ್ಮದೈವತ್ಯಃ ತವ ಗಾತ್ರಾದ್ವಿನಿರ್ಮಿತಃ ।
ಪಿತಾಮಹೋ* ರುದ್ರದೇವ್ಯೋ ಮಮ ಗಾತ್ರಾದ್ವಿನಿರ್ಮಿತಃ* ॥ ೭೮ ॥

ಪ್ರಪಿತಾಮಹೋ* ವಿಷ್ಣುದೇವ್ಯೋ ವಿಷ್ಣುಗಾತ್ರಾದಿನಿರ್ಮಿತಃ ।
ಶ್ರಾದ್ಧೇ ನಿಯೋಜಿತಾಸ್ತೇsತ್ರ ಮರ್ತ್ಯೇಷು ಪಿತೃದೇವತಾಃ ॥ ೭೯ ॥

ಬ್ರಾಹ್ಮಣಾನಾಂ ಹಿತಾರ್ಥಾಯ ನಿರ್ಮಿತಾ ವಿಷ್ಣುಮಾಯಯಾ ।
ತರ್ಪಿತಾಃ ಪಿತೃಯಜ್ಞೇಷು ಪಿತರೋsಜೀರ್ಣಪೀಡಿತಾಃ ।
ಆಗತಾಶ್ಶರಣಂ ಬ್ರಹ್ಮನ್ಸೋಮೇನ ಸಹಿತಾ ಯದಿ ॥ ೮೦ ॥

ಯೇನ ನಶ್ಯತ್ಯಜೀರ್ಣಂ ಚ ಪಿತೄಣಾಂ ಚ ಸುಖಂ ಭವೇತ್ ।
ಶೃಣು ತತ್ತೇ ಪ್ರವಕ್ಷ್ಯಾಮಿ ಬ್ರಹ್ಮನ್ಲೋಕಪಿತಾಮಹ ॥ ೮೧ ॥

ಶಾಂಡಿಲ್ಯಪುತ್ರಸ್ತೇಜಸ್ವೀ ಧೂಮ್ರಕೇತುರ್ವಿಭಾವಸುಃ ।
ಶ್ರಾದ್ಧೇ ತು ಪ್ರಥಮಂ ತಸ್ಯ ದಾತವ್ಯಂ ಮಾನುಷೇಷು ವಾ ॥ ೮೨ ॥

೭೮–೭೯. ಬ್ರಹ್ಮದೇವಾತ್ಮಕನಾದ ಪಿತೃವು ನಿನ್ನ ದೇಹದಿಂದ ನಿರ್ಮಿತನಾದವನು. ರುದ್ರದೇವಾತ್ಮಕನಾದ ಪಿತಾಮಹನು ನನ್ನ ದೇಹದಿಂದ ನಿರ್ಮಿತನಾದವನು. ವಿಷ್ಣುದೇವಾತ್ಮಕನಾದ ಪ್ರಪಿತಾಮಹನು ವಿಷ್ಣುದೇಹದಿಂದ ನಿರ್ಮಿತನಾದವನು. ಆ ಪಿತೃದೇವತೆಗಳು ಶ್ರಾದ್ಧದಲ್ಲಿ ಮನುಷ್ಯರಲ್ಲಿ ಆವಾಹಿಸಲ್ಪಡುವರು.

೮೦–೮೧. ಬ್ರಾಹ್ಮಣರ ಹಿತಾರ್ಥವಾಗಿ ವಿಷ್ಣುಮಾಯೆಯಿಂದ ನಿರ್ಮಿತರಾದ ಇವರು ಪಿತೃಯಜ್ಞಗಳಲ್ಲಿ ತೃಪ್ತಿಪಡಿಸಲ್ಪಟ್ಟವರಾಗಿ ಅಜೀರ್ಣವ್ಯಾಧಿಯಿಂದ ಪೀಡಿತರಾಗಿ ಸೋಮನೊಡನೆ ಬಂದು ನಮಗೆ ಶರಣಾಗತರಾಗಿರುವ ಪಕ್ಷದಲ್ಲಿ ಇವರ ಅಜೀರ್ಣವು ಏತರಿಂದ ಹೋಗಿ ಇವರಿಗೆ ಸುಖವಾಗುವುದೋ ಅದನ್ನು ಹೇಳುತ್ತೇನೆ. ಲೋಕಪಿತಾಮಹನಾದ ಬ್ರಹ್ಮನೇ, ಕೇಳು.

೮೨–೮೩. ಶಾಂಡಿಲ್ಯಪುತ್ರನೂ, ತೇಜಸ್ವಿಯೂ, ಧೂಮಕೇತುವೂ ಆದ ಅಗ್ನಿಗೆ ಶ್ರಾದ್ಧದಲ್ಲಿ ಮೊದಲು ಆಹುತಿಯನ್ನು ಅರ್ಪಿಸಬೇಕು. ಬಳಿಕ ಆ

---

* ೭೮–೭೯ನೆಯ ಶ್ಲೋಕಗಳ ಈ ಭಾಗವನ್ನು ಮುಂದಿನ ೯೧–೯೨ನೆಯ ಶ್ಲೋಕಗಳಿಗನುಸಾರವಾಗಿ ಪಲ್ಲಟಮಾಡಿದೆ.

ಸಹ ತೇನೈವ ಭೋಕ್ತವ್ಯಂ ಪಿತೃಪಿಂಡವಿಸರ್ಜಿತಂ ॥ ೮೩ ॥

ಈಶ್ವರೇಣೈವಮುಕ್ತಸ್ತು ಬ್ರಹ್ಮಾ ಕಮಲಸಂಭವಃ ।
ಆಹೂಯ ಮನಸಾ ಚೈವ ಹ್ಯಾಗತೋ ಹವ್ಯವಾಹನಃ ॥ ೮೪ ॥

ಪ್ರದೀಪ್ತಸ್ತೇಜಸಾ ವಹ್ನಿಸ್ಸರ್ವಭಕ್ಷ್ಯೋ ಹುತಾಶನಃ ।
ಯೋಜಿತಃ ಪಂಚಯಜ್ಞೇಷು ಬ್ರಹ್ಮಣಾ ಮಮ ಮಾಯಯಾ ॥ ೮೫ ॥

ಬ್ರಹ್ಮಾಗ್ನಿಂ ಭಾಷತೇ ತತ್ರ ಶ್ರೃಣುಷ್ವ ಚ ಹುತಾಶನ ।
ಭೋಕ್ತವ್ಯಂ ಪ್ರಥಮಂ ಬ್ರಹ್ಮನ್ಪಿತೃಪಿಂಡವಿಸರ್ಜಿತಂ ॥ ೮೬ ॥

ತ್ವಯಾ ಮುಕ್ತೇತಿಭೋಕ್ಷ್ಯಂತಿ ದೇವತಾಸ್ಸಮರುದ್ಗಣಾಃ ।
ಭೋಕ್ತವ್ಯಂ ಮಧ್ಯಮಂ ಶ್ರಾದ್ಧಂ ಪಥ್ಯಮನ್ನಂ ಚ ವೈ ಸಹ ।
ಪಶ್ಚಾದ್ದತ್ತಂ ತು ತಂ ಪಿಂಡಂ ಸಹ ಸೋಮೇನ ಭುಂಜತೇ ॥ ೮೭ ॥

ಅಗ್ನಿಯೊಡನೆ ಎಂದರೆ ಅಗ್ನಿಸನ್ನಿಧಿಯಲ್ಲಿ ಪಿತೃಪಿಂಡವನ್ನು ಬಿಟ್ಟು ಉಳಿದುದನ್ನು ಬ್ರಾಹ್ಮಣರಲ್ಲಿ ಆವಾಹಿತರಾದ ಪಿತೃಗಳು ಭುಂಜಿಸಬೇಕು.

೮೪–೮೫. ಈಶ್ವರನು ಹೀಗೆ ಹೇಳಲು ಬ್ರಹ್ಮನು ಅಗ್ನಿಯನ್ನು ಮನಸ್ಸಿನಲ್ಲಿಯೇ ಧ್ಯಾನಿಸಿ ಕರೆಯಲಾಗಿ, ತೇಜಸ್ಸಿನಿಂದ ಹೊಳೆಯುವವನೂ, ಸರ್ವಭಕ್ಷಕನೂ, ನನ್ನ ಮಾಯೆಯಿಂದ ಪಂಚಯಜ್ಞಗಳಲ್ಲಿ ನಿಯಮಿತನೂ ಆದ ಆ ಹುತಾಶನನು ಅಲ್ಲಿಗೆ ಬಂದನು.

೮೬–೮೭. ಬ್ರಹ್ಮನು ಆ ಅಗ್ನಿಯನ್ನು ಕುರಿತು, “ ಹೋಮಭಕ್ಷಕನೇ, ಶ್ರಾದ್ಧದಲ್ಲಿ ಪಿತೃಪಿಂಡವನ್ನು ಹೊರತು ಬೇರೆಯದನ್ನು ನೀನು ಮೊದಲು ಭುಜಿಸಬೇಕು. ಬಳಿಕ ನಿನ್ನ ಶೇಷವೆಂದು ಮರುದ್ಗಣಸಹಿರಾದ ದೇವತೆಗಳು ಭುಜಿಸುವರು. ಶ್ರಾದ್ಧದ ಮಧ್ಯದಲ್ಲಿ ಅರ್ಪಿಸುವ ಹಿತವಾದ ಪದಾರ್ಥವನ್ನು ನಿನ್ನೊಡನೆ ಪಿತೃದೇವತೆಗಳು ಭುಜಿಸಬೇಕು. ಕಡೆಯಲ್ಲಿ ಕೊಡುವ ಪಿಂಡವನ್ನು ಚಂದ್ರನೊಡನೆ ಭುಜಿಸುವರು. ” ಎಂದು ಹೇಳಿದನು.

ಬ್ರಹ್ಮಣಾ ಹ್ಯೇವಮುಕ್ತಾಸ್ತು ಪಿತೃದೇವಹುತಾಶನಾಃ ।
ಪ್ರಸ್ಥಿತಾಸ್ಸಹ ಸೋಮೇನ ದೇವತಾಸ್ತಾ ವಸುಂಧರೇ ॥ ೮೮ ॥

ಪಿತೃಯಜ್ಞಂ ವರಾರೋಹೇ ಭೋಕ್ಷ್ಯಂತಿ ಸಹಿತಾಸ್ಸದಾ ।
ಏವಂ ತು ಪ್ರಥಮಂ ಶ್ರಾದ್ಧಂ ದದ್ಯಾದಗ್ನೇರ್ವಸುಂಧರೇ ॥ ೮೯ ॥

ಉದ್ದಿಶ್ಯ ಚ ಪಿತೄನ್ದೇವಿ ತರ್ಪಯಿತ್ವಾ ದ್ವಿಜಾತಯಃ ।
ಪಶ್ಚಾತ್ಪಿಂಡಾನ್ಪ್ರದದ್ಯಾಚ್ಚ ದರ್ಭಾನಾಸ್ತೀರ್ಯ ಭೂತಲೇ ॥ ೯೦ ॥

ಪ್ರಥಮಂ ಬ್ರಹ್ಮಣೋಂಶಾಯ ದದ್ಯಾತ್ಪಿಂಡಂ ವಿಧಾನತಃ ॥ ೯೧ ॥

ಪಿತಾಮಹಾಯ ರುದ್ರಾಂಶಸಂಭೂತಾಯ ತು ಮಧ್ಯಮಂ ।
ಪ್ರಪಿತಾಮಹಾಯ ವಿಷ್ಣೋಸ್ತು ದದ್ಯಾತ್ಪಿಂಡಂ ಮಹೀತಲೇ ॥ ೯೨ ॥

---

೮೮. ವಸುಂಧರೇ, ಬ್ರಹ್ಮನು ಹೀಗೆನಲು ಪಿತೃದೇವತೆಗಳೂ, ಅಗ್ನಿಯೂ ಸೋಮ(ಚಂದ್ರ)ನೊಡನೆ ಹೊರಟುಹೋದರು.

೮೯. ವರಾರೋಹೇ, ಪಿತೃಯಜ್ಞವನ್ನು ಯಾವಾಗಲೂ ಅವರೆಲ್ಲರೂ ಒಂದಿಗೆ ಅನುಭವಿಸುವರು. ವಸುಂಧರೇ, ಹೀಗೆ ಶ್ರಾದ್ಧದಲ್ಲಿ ಅಗ್ನಿಗೆ ಮೊದಲು ಅರ್ಪಿಸಬೇಕಾಗಿದೆ.

೯೦. ಆಮೇಲೆ ಪಿತೃಗಳಿಗಾಗಿ ಬ್ರಾಹ್ಮಣರನ್ನು ತೃಪ್ತಿಪಡಿಸಿ, ಬಳಿಕ ನೆಲದಮೇಲೆ ದರ್ಭೆಯನ್ನು ಹಾಸಿ ಅದರಮೇಲೆ ಪಿಂಡಪ್ರದಾನವನ್ನು ಮಾಡಬೇಕು.

೯೧–೯೨. ವಿಧಿಪೂರ್ವಕವಾಗಿ ಮೊದಲು ಬ್ರಹ್ಮಾಂಶದ ಪಿತೃವಿಗೆ ಪಿಂಡವನ್ನು ಅರ್ಪಿಸಬೇಕು. ಬಳಿಕ ರುದ್ರಾಂಶಸಂಭೂತನಾದ ಪಿತಾಮಹನಿಗೆ ಮಧ್ಯಮಪಿಂಡವನ್ನರ್ಪಿಸಬೇಕು. ಆಮೇಲೆ ವಿಷ್ಣುವಿನ ಅಂಶಭೂತನಾದ ಪ್ರಪಿತಾಮಹನಿಗೆ ಕಡೆಯಲ್ಲಿ ಪಿಂಡವನ್ನರ್ಪಿಸಬೇಕು.

ವಿಧಿನಾಮಂತ್ರಪೂರ್ವೇಣ ಶ್ರಾದ್ಧಂ ಕುರ್ವಂತಿ ಯೇನರಾಃ ।
ತೇಷಾಂ ವರಂ ಪ್ರಯಚ್ಛಂತಿ ಪಿತರಶ್ರಾದ್ಧತರ್ಪಿತಾಃ ॥ ೯೩ ॥

ಮಮ ಮಾಯಾಬಲೇನೈವ ಕೃತಂ ಶ್ರಾದ್ಧಂ ದ್ವಿಜಾತಿಭಿಃ ।
ಅಪಾಙ್ಕ್ತೇಯಾಂಸ್ತಥಾ ವಿಪ್ರಾನ್ಪ್ರವಕ್ಷ್ಯಾಮಿ ವಸುಂಧರೇ ॥ ೯೪ ॥

ನಪುಂಸಕಾಶ್ಚಿತ್ರಕಾರಾ ವಸುಪಾಲವಿನಿಂದಕಾಃ ।
ಕುನಖಾಃ ಶ್ಯಾವದಂತಾಶ್ಚ ಕಾಣಾಶ್ಚ ವಿಕಟೋದರಾಃ ॥ ೯೫ ॥

ನರ್ತಕಾ ಗಾಯನಾಶ್ಚೈವ ತಥಾ ರಂಗೋಪಜೀವಿನಃ ।
ವೇದವಿಕ್ರಯಿಣಶ್ಚೈವ ಸರ್ವಯಾಜನಯಾಜಿಕಾಃ ॥ ೯೬ ॥

ರಾಜೋಪಸೇವಕಾಶ್ಚೈವ ವಾಣಿಜ್ಯಕ್ರಯವಿಕ್ರಯಾಃ ।
ಬ್ರಹ್ಮಯೋನ್ಯಾಂ ಸಮುತ್ಪನ್ನಾಃ ಸಂಕೀರ್ಣಾಃ ಪತಿತಾಶ್ಚ ಯೇ ॥ ೯೭ ॥

---

೯೩. ಮಂತ್ರಪೂರ್ವಕವಾದ ವಿಧಿಯಿಂದ ಶ್ರಾದ್ಧವನ್ನು ಮಾಡುವ ಮನುಷ್ಯರಿಗೆ ಅದರಿಂದ ತೃಪ್ತರಾದ ಪಿತೃಗಳು ವರವನ್ನು ಕೊಡುವರು.

೯೪ ವಸುಂಧರೇ, ದ್ವಿಜರು ನನ್ನ ಮಾಯಾ ಬಲದಿಂದಲೇ ಶ್ರಾದ್ಧವನ್ನು ಮಾಡುವರು. ಇನ್ನು ಶ್ರಾದ್ಧದಲ್ಲಿ ಪಂಕ್ತಿಗನರ್ಹರಾದವರನ್ನು ಹೇಳುತ್ತೇನೆ.

೯೫–೧೦೧. ಮಾಧವೀ ! ವಸುಂಧರೇ ! ನಪುಂಸಕರು, ಚಿತ್ರಕಾರರು, ರಾಜನಿಂದಕರು, ಉಗುರುಕೆಟ್ಟಿರುವವರು, ಧೂಮವರ್ಣದ ಹಲ್ಲಿನವರು ಕುರುಡರು, ವಕ್ರೋದರರು, ನರ್ತಕರು, ಗಾಯಕರು, ರಂಗದಿಂದ ಜೀವಿಸುವವರು. ವೇದವಿಕ್ರಯಿಗಳು, ಸರ್ವಪುರೋಹಿತರು, ರಾಜೋಪಸೇವಕರು, ವಣಿಜರು, ಬ್ರಾಹ್ಮಣರಲ್ಲಿ ಜನಿಸಿದ ಸಂಕೀರ್ಣರು. ಪತಿತರು, ಅಸಂಸ್ಕೃತರಾಗಿ ಶೂದ್ರಕರ್ಮ

ಅಸಂಸ್ಕಾರಪ್ರವೃತ್ತಾಶ್ಚ ಶೂದ್ರಕರ್ಮೋಪಜೀವಿನಃ ।
ಶೂದ್ರಕರ್ಮಕರಾ ಯೇ ಚ ಗಣಕಾ ಗ್ರಾಮಯಾಜಕಾಃ ॥ ೯೮ ॥

ದೀಕ್ಷಿತಃ ಕ್ರೋಡಪೃಷ್ಠಶ್ಚ ಯಶ್ಚ ವಾರ್ಧುಷಿಕೋ ದ್ವಿಜಃ ।
ವಿಕ್ರೇತಾರೋ ರಸನಾಂ ಚ ಯೇ ಚ ವೈಶ್ಯೋಪಜೀವಿನಃ ॥ ೯೯ ॥

ತಸ್ಕರಾ ಲೇಖಕಾರಾಶ್ಚ ಯಾಜಕಾ ರಂಗಕಾರಕಾಃ ।
ಶೌಲಿಕಾ ಗಿರಿಕಾ ಯೇ ಚ ದಾಂಭಿಕಾ ಯೇ ಚ ಮಾಧವಿ ॥ ೧೦೦ ॥

ಸರ್ವಕರ್ಮಕರಾ ಯೇ ಚ ಸರ್ವವಿಕ್ರಯಿಣಸ್ತಥಾ ।
ಏತಾನ್ನ ಭೋಜಯೇಚ್ಛ್ರಾದ್ಧೇ ಪಿತ್ರರ್ಥೇ ಚ ವಸುಂಧರೇ ॥ ೧೦೧ ॥

ದೂರಾಧ್ವಾನಂ ಗತಾ ಯೇ ಚ ತತ್ರ ಕರ್ಮೋಪಜೀವಿನಃ ।
ರಸವಿಕ್ರಯಿಣಶ್ಚೈವ ಶೈಲೂಷಸ್ತಿಲವಿಕ್ರಯೀ ॥ ೧೦೨ ॥

ವನ್ನಾಶ್ರಯಿಸಿ ಜೀವಿಸುವವರು, ಶೂದ್ರರು ಮಾಡುವ ಕಾರ್ಯವನ್ನು ಮಾಡುವವರು, ಗಣಕರು, ಗ್ರಾಮಪುರೋಹಿತರು, ದೀಕ್ಷಿತರು, ಕ್ರೋಡಪೃಷ್ಠರು (ಹಂದಿಯಂತೆ ಪೃಷ್ಠವುಳ್ಳವರು), ಬಡ್ಡಿಯಿಂದ ಜೀವಿಸುವವರು, ರಸವಿಕ್ರಯ ಮಾಡುವವರು, ವೈಶ್ಯರನ್ನು ಆಶ್ರಯಿಸಿ ಜೀವಿಸುವವರು, ಕಳ್ಳರು, ಗುಮಾಸ್ತರು, ಕಪಟಿಗಳು, ವಿವೇಚನೆಯಿಲ್ಲದೆ ಸರ್ವಕಾರ್ಯವನ್ನೂ ಮಾಡುವವರು, ಸರ್ವವನ್ನೂ ವಿಕ್ರಯಿಸುವವರು ಇವರನ್ನು ಶ್ರಾದ್ಧದಲ್ಲಿ ಪಿತೃಗಳಿಗಾಗಿ ನಿಮಂತ್ರಿಸಬಾರದು.

೧೦೨–೧೦೩. ದೇವಿ, ಬಹುದೂರ ಹೋಗಿ, ಅಲ್ಲಿ ಕರ್ಮದಿಂದ ಜೀವಿಸುವವರೂ, ರಸವಿಕ್ರಯಿಗಳೂ, ಎಳ್ಳನ್ನು ಮಾರುವವರೂ, ದೂಷಿತರಾಗಿ

ಶ್ರಾದ್ಧಕಾಲಮನುಪ್ರಾಪ್ತಂ ರಾಜಸಂ ತಂ ವಿದುರ್ಬುಧಾಃ ।
ಅನ್ಯೇ ಯೇ ದೂಷಿತಾ ದೇವಿ ದ್ವಿಜರೂಪೇಣ ರಾಕ್ಷಸಾಃ ॥ ೧೦೩ ॥

ವಿಶಾನ್ನ ಪಶ್ಯೇಚ್ಛ್ರಾದ್ಧೇಷು ಪಿತೃಪಿಂಡೇಷು ಮಾಧವಿ ॥ ೧೦೪ ॥

ಅಪಾಂಕ್ತೇಯಾಂಸ್ತಥಾ ವಿಪ್ರಾನ್ಭುಂಜತಃ ಪಶ್ಯತೋ ದ್ವಿಜಾನ್ ।
ಪಿತರಸ್ತಸ್ಯ ಷಣ್ಮಾಸಂ ದುಃಖಮೃಚ್ಛಂತಿ ದಾರುಣಂ ॥ ೧೦೫ ॥

ನ್ಯಸ್ತಪಾತ್ರಂ ದ್ರುತಂ ಕುರ್ಯಾತ್ಪ್ರಾಯಶ್ಚಿತ್ತಮುಭೌ ಧರೇ ॥ ೧೦೬ ॥

ಘೃತಂ ತು ಜುಹುಯಾದಗ್ನಾವಾದಿತ್ಯಂ ಚಾವಲೋಕಯೇತ್ ।
ಪುನರಾವಪನಂ ಕೃತ್ವಾ ಪಿತರಂ ಚ ಪಿತಾಮಹಾನ್ ॥ ೧೦೭ ॥

ಗಂಧಪುಷ್ಪಂ ಚ ಧೂಪಂ ಚ ದದ್ಯಾದರ್ಘ್ಯಂ ತಿಲೋದಕಂ ।
ಯಥಾವಿಧಿ ಚ ವಿಪ್ರಾಯ ಭೋಜಯೇಚ್ಚ ಪುನಶ್ಶುಚಿಃ ॥ ೧೦೮ ॥

ಬ್ರಾಹ್ಮಣರೂಪದಿಂದಿರುವ ಇತರ ರಾಕ್ಷಸರೂ ಶ್ರಾದ್ಧಕಾಲದಲ್ಲಿ ಅಲ್ಲಿಗೆ ಬಂದರೆ, ಆ ಶ್ರಾದ್ಧವು ರಾಜಸಶ್ರಾದ್ಧವೆನಿಸುವುದೆಂದು ಪಂಡಿತರು ಹೇಳುವರು.

೧೦೪. ಮಾಧವೀ, ಮೇಲೆ ಹೇಳಿರುವ ದ್ವಿಜರೂಪದ ರಾಕ್ಷಸರನ್ನು ಶ್ರಾದ್ಧದಲ್ಲಿಯೂ, ಪಿತೃಪಿಂಡ ಪ್ರದಾನಕಾಲಗಳಲ್ಲೂ ನೋಡಬಾರದು.

೧೦೫–೧೦೬. ಅಪಾಂಕ್ತೇಯರಾದ ಬ್ರಾಹ್ಮಣರನ್ನು ಶ್ರಾದ್ಧಭೋಜನ ಕಾಲದಲ್ಲಿ ನೋಡಿದಲ್ಲಿ ಪಿತೃಗಳು ಆರುತಿಂಗಳಕಾಲ ಬಹು ದುಃಖವನ್ನು ಪಡೆಯುವರು, ಧರೇ, ಹಾಗೆ ಅಪಾಂಕ್ತೇಯರನ್ನು ನೋಡಿದಲ್ಲಿ ಒಡನೆಯೇ ಭೋಜನ ಮಾಡುವುದನ್ನು ಬಿಟ್ಟು, ಆ ಎಲೆಗಳನ್ನು ಪರಿತ್ಯಜಿಸಿ ಕರ್ತೃಭೋಕ್ತೃಗಳಿಬ್ಬರೂ ಪ್ರಾಯಶ್ಚಿತ್ತವನ್ನು ಆಚರಿಸಬೇಕು.

೧೦೭–೧೦೯. ಸುಂದರೀ, ಜ್ಞಾನಶುದ್ಧನಾದ ಬ್ರಾಹ್ಮಣನಿಂದ ಮಂತ್ರಶುದ್ಧನಾಗಿ ಕರ್ತೃವು ಅಗ್ನಿಯಲ್ಲಿ ತುಪ್ಪದಿಂದ ಹೋಮಮಾಡಿ, ಸೂರ್ಯಾವಲೋಕನಮಾಡಬೇಕು. ಪಿತೃಪಿತಾಮಹರನ್ನು ಮತ್ತೆ ಕರೆದು ಗಂಧಪುಷ್ಪಧೂಪ

ಪುನಶ್ಚಾನ್ಯತ್ಪ್ರವಕ್ಷ್ಯಾಮಿ ಶೃಣು ತತ್ತ್ವೇನ ಸುಂದರಿ ।
ಜ್ಞಾನಶುದ್ಧೇನ ವಿಪ್ರೇಣ ಮಂತ್ರಶುದ್ಧಿಂ ಯಥಾವಿಧಿ ॥ ೧೦೯ ॥

ಮೃತಾನ್ನಂ ಯೇ ನ ಭುಂಜಂತಿ ಕದಾಚಿದಪಿ ಮಾಧವಿ ।
ವೈಶ್ವದೇವೇಷು ದಾತವ್ಯಂ ಶ್ರಾದ್ಧೇಷು ಚ ನ ಯೋಜಯೇತ್ ॥ ೧೧೦ ॥

ಪ್ರೇತಾನ್ನಂ ಭುಂಜಮಾನಾಸ್ತು ಶಾದ್ಧಮರ್ಹಂತಿ ಯೇ ದ್ವಿಜಾಃ ।
ತೇಷಾಂ ದೋಷಂ ಪ್ರವಕ್ಷ್ಯಾಮಿ ಭುಕ್ತಂ ಭೋಜಯತೇ ತು ಸಃ ।
ದಂಭಕಾರಕೃತೋಚ್ಛಿಷ್ಟಂ ಕೃತ್ವಾ ತು ನರಕಂ ವ್ರಜೇತ್ ॥ ೧೧೧ ॥

ಪ್ರಾಯಶ್ಚಿತ್ತಂ ಪ್ರವಕ್ಷ್ಯಾಮಿ ಯಥಾ ಶುದ್ಧ್ಯಂತಿ ತೇ ನರಾ ।
ಮಾಘಮಾಸೇ ತು ದ್ವಾದಶ್ಯಾಂ ಸರ್ಪಿರ್ಯುಕ್ತಂ ತು ಪಾಯಸಂ ।
ಸ ಲಿಹೇನ್ಮಧುಮಾಂಸೇನ ತರ್ಪಯಿತ್ವಾ ದ್ವಿಜಾತಯಃ ॥ ೧೧೨ ॥

ಗಳನ್ನೂ, ತಿಲೋದಕಾರ್ಘ್ಯವನ್ನೂ ಯಥಾವಿಧಿಯಾಗಿ ಅರ್ಪಿಸಿ, ಭೋಜನ ಮಾಡಿಸಬೇಕು.

೧೧೦. ಮಾಧವೀ, ಮೃತಾನ್ನಭೋಜನಮಾಡಿದವನನ್ನು ಶ್ರಾದ್ಧದಲ್ಲಿ ಎಂದಿಗೂ ಪಿತೃಸ್ಥಾನಕ್ಕಾಗಲಿ, ವಿಶ್ವೇದೇವತೆಗಳ ಸ್ಥಾನಕ್ಕಾಗಲಿ ಇಟ್ಟುಕೊಳ್ಳಬಾರದು.

೧೧೧. ಪ್ರೇತಾನ್ನವನ್ನು ಭೋಜನಮಾಡಿ, ಶ್ರಾದ್ಧನಿಮಂತ್ರಣಕ್ಕೆ ನಿಲ್ಲುವ ಬ್ರಾಹ್ಮಣರು ಎಂಜಲನ್ನು ತಿಂದವರಾಗುವರು ಕಪಟಿಗಳು ಮಾಡುವಂತೆ ಶ್ರಾದ್ಧವನ್ನು ಎಂಜಲುಮಾಡಿ, ಕರ್ತೃವಿನೊಡನೆ ತಾವೂ ನರಕಕ್ಕೆ ಹೋಗುವರು.

೧೧೨–೧೧೩. ಅವರು ಹೇಗೆ ಶುದ್ಧರಾಗುವರೋ ಆ ಪ್ರಾಯಶ್ಚಿತ್ತವನ್ನು ಹೇಳುತ್ತೇನೆ. ತನಗೆ ಶುಭವನ್ನೂ, ಶುದ್ಧಿಯನ್ನೂ ಬಯಸುವ ಕರ್ತೃವು ಮಾಘಮಾಸದ ದ್ವಾದಶಿಯದಿನ ಬ್ರಾಹ್ಮಣರನ್ನು ಮಧುಮಾಂಸದಿಂದ ತೃಪ್ತಿಪಡಿಸಿ,

ಸವತ್ಸಾಂ ಕಪಿಲಾಂ ದದ್ಯಾದಾತ್ಮನಃ ಶುದ್ಧಿಕಾಮುಕಃ ।
ಪುನಶ್ಶ್ರಾದ್ಧಂ ಪ್ರಕುರ್ವೀತ ಚಾತ್ಮನಶ್ಶುಭಕಾಮುಕಃ ॥ ೧೧೩ ॥

ಸ್ನಾನೋಪಲೇಪನಂ ಭೂಮೇಃ ಕೃತ್ವಾ ವಿಪ್ರಾನ್ಸಮಂತ್ರಯೇತ್ ।
ದಂತಕಾಷ್ಠಂ ವಿಸೃಜ್ಯೈವ ಬ್ರಹ್ಮಚಾರೀ ಶುಚಿರ್ಭವೇತ್ ॥ ೧೧೪ ॥

ಯತ್ನೇನ ಮಿಥುನಂ ಶ್ರಾದ್ಧೇ ಭೋಜಯಿತ್ವಾ ವಿಸರ್ಜಯೇತ್ ।
ಅಮಾಯಾಂ ಚ ವಿಶಾಲಾಕ್ಷಿ ದಂತಕಾಷ್ಠಂ ನ ಖಾದಯೇತ್ ॥ ೧೧೫ ॥

ಅಮಾಯಾಂ ತು ಚ ಯೋ ಮೂರ್ಖೋ ದಂತಕಾಷ್ಠಂ ಹಿ ಖಾದತಿ ।
ಹಿಂಸಿತಶ್ಚ ಭವೇತ್ಸೋಮೋ ದೇವತಾಃ ಪಿತರಸ್ತಥಾ ॥ ೧೧೬ ॥

ಪ್ರಭಾತಾಯಾಂ ತು ಶರ್ವರ್ಯಾಮುದಿತೇ ಚ ದಿವಾಕರೇ ।
ದಿವಾಕೃತ್ಯಂ ತತೋ ಗೃಹ್ಯ ವಿಪ್ರಸ್ಯ ವಿಧಿಪೂರ್ವಕಂ ॥ ೧೧೭ ॥

ತಾನು ತುಪ್ಪದೊಡನೆ ಪಾಯಸವನ್ನು ಕುಡಿಯಬೇಕು ಕರುವಿನಿಂದೊಡಗೂಡಿದ ಹಸುವನ್ನು ದಾನಮಾಡಿ, ಬಳಿಕ ಪುನಃ ಶ್ರಾದ್ಧವನ್ನು ಮಾಡಬೇಕು

೧೧೪. ಭೂಮೀ, ಬ್ರಾಹ್ಮಣರನ್ನು ಸ್ನಾನಾದಿಗಳಿಂದ ಶುದ್ಧರಾದನಂತರವೇ ಶ್ರಾದ್ಧದಲ್ಲಿ ಮಂತ್ರೋಕ್ತವಾಗಿ ಪೂಜಿಸಬೇಕು ಬ್ರಹ್ಮಚಾರಿಯು ಮಾತ್ರ ಹಲ್ಲುಜ್ಜುವುದಕ್ಕೆ ಹೇಳಿರುವ ಕಡ್ಡಿಯನ್ನು ಪಯೋಗಿಸದೆಯೇ ಶುದ್ಧನಾಗುವನು.

೧೧೫. ವಿಶಾಲಾಕ್ಷಿ, ಶ್ರಾದ್ಧದಲ್ಲಿ ಪ್ರಯತ್ನಪೂರ್ವಕವಾಗಿ ಇಬ್ಬರು ಬ್ರಾಹ್ಮಣರನ್ನಾದರೂ ಭೋಜನಮಾಡಿಸಿ ಕಳುಹಿಸಬೇಕು. ಅಮಾವಾಸ್ಯೆಯ ದಿನ ಹಲ್ಲುಜ್ಜುವ ಕಡ್ಡಿಯನ್ನು ಅಗಿಯಬಾರದು.

೧೧೬. ಅಮಾವಾಸ್ಯೆಯ ದಿನ ಹಲ್ಲುಜ್ಜುವ ಕಡ್ಡಿಯನ್ನು ಅಗಿಯುವ ಮೂರ್ಖನು ಚದ್ರನನ್ನೂ ಪಿತೃದೇವತೆಗಳನ್ನೂ ಹಿಂಸಿಸುವನಾಗುವನು.

೧೧೭-೧೧೮. ಸುಂದರೀ, ಪಿತೃಭಕ್ತನಾದವನು ಶ್ರಾದ್ಧದದಿನ ಸೂರ್ಯೋದಯವಾಗಿ ಬೆಳಗಾಗುತ್ತಲೂ ಪ್ರಾತಃ ಕರ್ಮಗಳನ್ನು ಮಾಡಿ, ವಿಧಿಪೂರ್ವಕ

ಶ್ಮಶ್ರುಕರ್ಮ ಚ ಕರ್ತವ್ಯಂ ನಖಾನಾಂ ಛೇದನಾನಿ ಚ ।
ಸ್ನಾಪನಾಭ್ಯಂಜನೇ ದದ್ಯಾತ್ಪಿತೃಭಕ್ತೇನ ಸುಂದರಿ ॥ ೧೧೮ ॥

ಪಕ್ವಾನ್ನಂ ತತ್ರ ವೈ ಕಾರ್ಯಂ ಸುವಿಮೃಷ್ಟಂ ಚ ಶುದ್ಧಿತಃ ।
ವೃತ್ತೇ ತು ತತ್ರ ಮಧ್ಯಾಹ್ನೇ ಶ್ರಾದ್ಧಾರಂಭಂ ತು ಕಾರಯೇತ್ ॥ ೧೧೯ ॥

ಸ್ವಾಗತಂ ಚ ತಥಾ ಕೃತ್ವಾ ಪಾದ್ಯಾರ್ಥಂ ಸಲಿಲಂ ಶುಚಿ ।
ಪಾದ್ಯಂ ದತ್ವಾ ತು ವಿಪ್ರಾಯ ಗೃಹಸ್ಯಾಭ್ಯಂತರಂ ನಯೇತ್ ॥ ೧೨೦ ॥

ಆಸನಂ ಕಲ್ಪಯಿತ್ವಾ ತು ಆವಾಹ್ಯ ತದನಂತರಂ ।
ಅರ್ಘ್ಯಂ ದತ್ವಾ ವಿಧಾನೇನ ಗಂಧಮಾಲ್ಯೈಃ ಪ್ರಪೂಜ್ಯ ಚ ॥ ೧೨೧ ॥

ಧೂಪಂ ದೀಪಂ ತಥಾ ವಸ್ತ್ರಂ ತಿಲೋದಕಮಥಾಪಿ ವಾ ।
ಪಾತ್ರಂ ಚ ಭೋಜನಸ್ಯಾರ್ಥೇ ವಿಪ್ರಾಗ್ರೇ ಧಾರಯೇತ್ತಥಾ ॥ ೧೨೨ ॥

ವಾಗಿ ನಿಮಂತ್ರಿತ ಬ್ರಾಹ್ಮಣರಿಗೆ ನಖಚ್ಛೇದನದೊಡನೆ ಆಯುಷ್ಕರ್ಮವನ್ನು ಮಾಡಿಸಿ, ಸ್ನಾನಾಭ್ಯಂಜನಗಳನ್ನು ಮಾಡಿಸಬೇಕು.

೧೧೯. ಮನೆಯಲ್ಲಿ ಸುಮೃಷ್ಟಾನ್ನವನ್ನು ಅಡಿಗೆ ಮಾಡಿಸಿ, ಮಧ್ಯಾಹ್ನವಾದ ಬಳಿಕ ಶ್ರಾದ್ಧವನ್ನಾರಂಭಿಸಬೇಕು.

೧೨೦. ನಿಮಂತ್ರಿತರಾದ ಬ್ರಾಹ್ಮಣರಿಗೆ ಬಾಗಿಲಲ್ಲಿಯೇ ಸ್ವಾಗತವನ್ನು ಹೇಳಿ, ಕಾಲು ತೊಳೆದುಕೊಳ್ಳಲು ಶುಚಿಯಾದ ನೀರನ್ನು ಕೊಟ್ಟು, ಕಾಲು ತೊಳೆದ ಬಳಿಕ ಮನೆಯೊಳಕ್ಕೆ ಕರೆದುಕೊಂಡು ಹೋಗಬೇಕು.

೧೨೧–೧೨೨. ಪೀಠವನ್ನು ಸಿದ್ಧಪಡಿಸಿ, ಬಳಿಕ ಪಿತ್ರಾದಿಗಳನ್ನು ಆವಾಹನೆ ಮಾಡಿ ವಿಧಿಪೂರ್ವಕವಾಗಿ ಅರ್ಘ್ಯವನ್ನು ಕೊಟ್ಟು, ಗಂಧಮಾಲೆಗಳಿಂದಲೂ, ಧೂಪದೀಪವಸ್ತ್ರಗಳಿಂದಲೂ ಪೂಜಿಸಿ, ತಿಲೋದಕವನ್ನರ್ಪಿಸಿ, ಆ ಬ್ರಾಹ್ಮಣರೆದುರಿಗೆ ಭೋಜನಪಾತ್ರವನ್ನು ಸಿದ್ಧಪಡಿಸಬೇಕು.

ಭಸ್ಮನಾ ಮಂಡಲಂ ಕಾರ್ಯಂ ಪಂಕ್ತಿದೋಷನಿವಾರಕಂ ।
ಅಗ್ನಿಕಾರ್ಯಂ ತತಃ ಕೃತ್ವಾ ಅನ್ನಂ ಚ ಪರಿವೇಷಯೇತ್ ॥ ೧೨೩ ॥

ತತ್ರ ಕಾರ್ಯೋ ನ ಸಂಕಲ್ಪಃ ಪಿತೄನುದ್ದಿಶ್ಯ ಸುಂದರಿ ।
ಯಥಾಸುಖೇನ ಭೋಕ್ತವ್ಯಮಿತಿ ಬ್ರೂಯಾದ್ದ್ವಿಜಂ ಪ್ರತಿ ॥ ೧೨೪ ॥

ರಕ್ಷೋಘ್ನಮಂತ್ರಪಾಠಾಂಶ್ಚ ಶ್ರಾವಯೀತ ವಿಚಕ್ಷಣಃ ।
ತೃಪ್ತಂ ತು ಬ್ರಾಹ್ಮಣಂ ದೃಷ್ಟ್ವಾ* ದದ್ಯಾದ್ವೈ ವಿಕಿರಂ ತತಃ ॥ ೧೨೫ ॥

ಉತ್ತರೀಯಾಸನಂ ದತ್ವಾ ಪಿಂಡಪ್ರಶ್ನಂ ತು ಕಾರಯೇತ್ ।
ದಕ್ಷಿಣಾಭಿಮುಖೋ ಭೂತ್ವಾ ದರ್ಭಾನಾಸ್ತೀರ್ಯ ಭೂತಲೇ ॥ ೧೨೬ ॥

---

೧೨೩. ಪಂಕ್ತಿದೋಷಪರಿಹಾರಕ್ಕಾಗಿ ಬೂದಿಯಿಂದ ಮಂಡಲವನ್ನು ಕಲ್ಪಿಸಬೇಕು. ಅಗ್ನಿಕಾರ್ಯವನ್ನು ಮಾಡಿ, ಬಳಿಕ ಅನ್ನವನ್ನು ಬಡಿಸಬೇಕು.

೧೨೪. ಭೋಜನಕ್ಕೆ ಬಡಿಸುವಾಗ ಸಂಕಲ್ಪವನ್ನು ಮಾಡಬೇಕಾದುದಿಲ್ಲ. ಬ್ರಾಹ್ಮಣರನ್ನು ಕುರಿತು, "ಯಥಾಸುಖೇನ ಭೋಕ್ತವ್ಯಂ (ಸುಖವಾಗುವಂತೆ ಭೋಜನಮಾಡಬೇಕು.)" ಎಂದು ಹೇಳಬೇಕು.

೧೨೫. ವಿದ್ಯಾವಂತನಾದ ಕರ್ತೃವು ರಕ್ಷೋಘ್ನಮಂತ್ರವನ್ನು ಬ್ರಾಹ್ಮಣರಿಗೆ ಕೇಳುವಂತೆ ಹೇಳಬೇಕು. ಬ್ರಾಹ್ಮಣರು ತೃಪ್ತರಾದುದನ್ನು ನೋಡಿ, ಬಳಿಕ ವಿಕಿರವನ್ನು ದಾನಮಾಡಬೇಕು.

೧೨೬-೧೨೭. ತೃಪ್ತಿಯಾದುದನ್ನು ಕೇಳಿ, ಪಿಂಡಪ್ರದಾನಕ್ಕೆ ಅನುಜ್ಞೆಯನ್ನು ಕೇಳಬೇಕು. ಕರ್ತೃವು ದಕ್ಷಿಣಾಭಿಮುಖನಾಗಿ ನೆಲದಮೇಲೆ ದರ್ಭೆಯನ್ನು ಹಾಸಿ, ಪಿತೃಪಿತಾಮಹ ಪ್ರಪಿತಾಮಹರಿಗೆ ಪಿಂಡಪ್ರದಾನವನ್ನು

---

* ದತ್ವಾ

ಪಿಂಡದಾನಂ ಪ್ರಕುರ್ವೀತ ಪಿತ್ರಾದಿತ್ರಿತಯೇ ತಥಾ ।
ಪಿಂಡಾನಾಂ ಪೂಜನಂ ಕಾರ್ಯಂತಂತುವೃದ್ಧ್ಯೈ ಯಥಾವಿಧಿ ॥ ೧೨೭ ॥

ಬ್ರಾಹ್ಮಣಸ್ಯ ಚ ಹಸ್ತೇ ತು ದದ್ಯಾದಕ್ಷಯ್ಯಮಾತ್ಮವಾನ್ ।
ದಕ್ಷಿಣಾಭಿಃ ಪ್ರತೋಷ್ಯಾಪಿ ಸ್ವಸ್ತಿವಾಚ್ಯ ವಿಸರ್ಜಯೇತ್ ॥ ೧೨೮ ॥

ಪಿಂಡಾಸ್ತ್ರಯಸ್ತು ವಸುಧೇ ಯಾವತ್ತಿಷ್ಠಂತಿ ಭೂತಲೇ ।
ಅಪ್ಯಾಯಮಾನಾಃ ಪಿತರಸ್ತಾವತ್ತಿಷ್ಠಂತಿ ವೈ ಗೃಹೇ ॥ ೧೨೯ ॥

ಉಪಸ್ಪೃಶ್ಯ ಶುಚಿರ್ಭೂತ್ವಾ ದದ್ಯಾಚ್ಛಾಂತ್ಯುದಕಾನಿ ಚ ।
ಪ್ರಣಮ್ಯ ಶಿರಸಾ ಭೂಮೌ ನಿವಾಪಸ್ಯ ಚ ಧಾರಿಣೀಃ ।
ವೈಷ್ಣವೀ ಕಾಶ್ಯಪೀ ಚೇತಿ ಅಕ್ಷಯಾ ಚೇತಿ ನಾಮತಃ ॥ ೧೩೦ ॥

ಮಾಡಬೇಕು. ಸಂತಾನಾಭಿವೃದ್ಧಿಗಾಗಿ ವಿಧಿಪೂರ್ವಕವಾಗಿ ಪಿಂಡಗಳ ಪೂಜೆಯನ್ನು ಮಾಡಬೇಕು.

೧೨೮. ಶುದ್ಧಾತ್ಮನಾದ ಕರ್ತೃವು ಬ್ರಾಹ್ಮಣರ ಕೈಗೆ ಅಕ್ಷತೆಯನ್ನು 'ಅಕ್ಷಯ್ಯಂ' ಎಂದು ಕೊಡಬೇಕು. ದಕ್ಷಿಣೆಗಳಿಂದ ಅವರನ್ನು ಸಂತೋಷಪಡಿಸಿ ಸ್ವಸ್ತಿವಾಚನವನ್ನು ಮಾಡಿಸಿ, ಬಳಿಕ ಪಿತೃಗಳನ್ನು ವಿಸರ್ಜಿಸಬೇಕು.

೧೨೯. ಭೂದೇವಿ, ಮೂರುಪಿಂಡಗಳೂ ಭೂಮಿಯಮೇಲಿರುವವರೆಗೂ ಆನಂದವುಳ್ಳವರಾಗಿ ಪಿತೃಗಳು ಆ ಮನೆಯಲ್ಲಿರುವರು.

೧೩೦. ಶ್ರಾದ್ಧವಾದ ಬಳಿಕ ಕರ್ತೃವು ಆಚಮನವನ್ನು ಮಾಡಿ, ಶುಚಿಯಾಗಿ ವೈಷ್ಣವೀ, ಕಾಶ್ಯಪೀ, ಅಕ್ಷಯಾ ಎಂಬ ಹೆಸರುಗಳುಳ್ಳವರಾದ ಪಿತೃತರ್ಪಣಧಾರಿಣಿಯರಿಗೆ ನೆಲದಮೇಲೆ ಪ್ರಣಾಮವನ್ನು ಮಾಡಿ, ಶಾಂತ್ಯುದಕವನ್ನು ಪ್ರೋಕ್ಷಿಸಬೇಕು.

ಭಕ್ಷಯೇತ್ಪ್ರಥಮಂ ಪಿಂಡಂ ಪತ್ನ್ಯೈ ದೇಯಂ ತು ಮಧ್ಯಮಂ ॥ ೧೩೧ ॥

ತೃತೀಯಮುದಕೇ ದದ್ಯಾಚ್ಛ್ರಾದ್ಧೇ ಏವಂ ವಿಧಿಸ್ಸ್ಮೃತಃ ।
ಪಿತೄನ್ದೇವಾಂಶ್ಚ ವಿಸೃಜೇತ್ತತಶ್ಚ ಪ್ರಣಮೇತ್ತು ತಾನ್ ॥ ೧೩೨ ॥

ಏವಂ ದತ್ತೇನ ತುಷ್ಯಂತಿ ಪಿತೃದೇವಾ ನ ಸಂಶಯಃ ।
ದೀರ್ಘಾಯುಷ್ಯಂ ಪ್ರಯಚ್ಛಂತಿ ಪುತ್ರಪೌತ್ರಧನಾನಿ ಚ ॥ ೧೩೩ ॥

ಜ್ಞಾನೋತ್ತಮೇಷು ವಿಪ್ರೇಷು ದದ್ಯಾಚ್ಛ್ರಾದ್ಧಂ ವಿಧಾನತಃ ।
ಅನ್ಯಥಾ ತತ್ತು ವೈ ಶ್ರಾದ್ಧಂ ನಿಷ್ಫಲಂ ನಾಸ್ತಿ ಸಂಶಯಃ ॥ ೧೩೪ ॥

ಮಂತ್ರಹೀನಂ ಕ್ರಿಯಾಹೀನಂ ಯಚ್ಛ್ರಾದ್ಧಂ ಕುರುತೇ ದ್ವಿಜಃ ।
ಮದ್ಭಕ್ತಸ್ಯಾಸುರೇಂದ್ರಸ್ಯ ಫಲಂ ಭವತಿ ಭಾಗತಃ ॥ ೧೩೫ ॥

೧೩೧–೧೩೨. ಮೂರು ಪಿಂಡಗಳಲ್ಲಿ ಮೊದಲನೆಯದನ್ನು ಕರ್ತೃವು ತಾನು ಭುಜಿಸಬೇಕು. ಎರಡನೆಯ ಪಿಂಡವನ್ನು ಪತ್ನಿಗೆ ಕೊಡಬೇಕು. ಮೂರನೆಯ ಪಿಂಡವನ್ನು ನೀರಿನಲ್ಲಿ ಹಾಕಬೇಕು ಹೀಗೆ ಶ್ರಾದ್ಧವಿಧಿಯನ್ನು ಹೇಳಿದೆ. ಪಿತೃದೇವತೆಗಳನ್ನು ವಿಸರ್ಜಿಸಿ, ಅವರಿಗೆ ಪ್ರಣಾಮಮಾಡಬೇಕು.

೧೩೩. ಹೀಗೆ ಶ್ರಾದ್ಧಮಾಡುವುದರಿಂದ ಪಿತೃದೇವತೆಗಳು ಸಂದೇಹವಿಲ್ಲದೆ ತೃಪ್ತರಾಗುವರು. ಕರ್ತೃವಿಗೆ ದೀರ್ಘಾಯುಸ್ಸನ್ನೂ, ಪುತ್ರಪೌತ್ರಧನಗಳನ್ನೂ ಅನುಗ್ರಹಿಸುವರು.

೧೩೪. ಜ್ಞಾನೋತ್ತಮರಾಗಿರುವ ಬ್ರಾಹ್ಮಣರನ್ನು ವರಿಸಿ, ವಿಧಿಯಂತೆ ಶ್ರಾದ್ಧವನ್ನು ಮಾಡಬೇಕು. ಹಾಗಿಲ್ಲವಾದರೆ ಆಶ್ರಾದ್ಧವು ನಿಷ್ಫಲವಾಗುವುದರಲ್ಲಿ ಸಂಶಯವಿಲ್ಲ.

೧೩೫. ಮಂತ್ರಹೀನವಾಗಿಯೂ, ತಂತ್ರಹೀನವಾಗಿಯೂ ದ್ವಿಜರು ಮಾಡುವ ಶ್ರಾದ್ಧವು ನನ್ನ ಭಕ್ತನೂ, ಅಸುರೇಂದ್ರನೂ ಆದ ಬಲಿಗೆ ಸೇರುವ ಭಾಗವಾಗುವುದು.

ಉದ್ಧರೇದ್ಯದಿ ಪಾತ್ರಂ ತು ಬ್ರಾಹ್ಮಣೋ ಜ್ಞಾನವರ್ಜಿತಃ ।
ರಾಕ್ಷಸೈರ್ಹ್ರಿಯತೇ ತಚ್ಚ ಭುಂಜತಸ್ತಸ್ಯ ಸುಂದರಿ ॥ ೧೩೬ ॥

ಏತತ್ತೇ ಕಥಿತಂ ಭದ್ರೇ ಪಿತೃಕಾರ್ಯಮನುತ್ತಮಂ ।
ಉತ್ಪತ್ತಿಶ್ಚೈವ ದಾನಂ ಚ ಯತ್ಪುಣ್ಯಂ ಕಥಿತಂ ತವ ॥ ೧೩೭ ॥

ಅಪರಂ ಚಾಪಿ ವಸುಧೇ ಕಿಮನ್ಯಚ್ಛ್ರೋತುಮಿಚ್ಛಸಿ ॥ ೧೩೮ ॥

ಇತಿ ಶ್ರೀವರಾಹಪುರಾಣೇ ಶ್ರಾದ್ಧಪಿತೃಯಜ್ಞನಿಶ್ಚಯೋ ನಾಮ
ನವತ್ಯಧಿಕಶತತಮೋಽಧ್ಯಾಯಃ

---

೧೩೬. ಸುಂದರಿ, ಜ್ಞಾನವಿಲ್ಲದ ಬ್ರಾಹ್ಮಣನು ಭೋಜನಪಾತ್ರೆಯನ್ನು ನೆಲದಿಂದ ಮೇಲೆತ್ತಿದನಾದರೆ ಅದನ್ನು ರಾಕ್ಷಸರು ಅಪಹರಿಸಿಕೊಂಡು ಹೋಗುವರು.

೧೩೭-೧೩೮. ಭದ್ರೇ, ಭೂಮೀ, ಅತ್ಯುತ್ತಮವಾದ ಈ ಪಿತೃಕರ್ಮವನ್ನು ಅದರ ಉತ್ಪತ್ತಿದಾನಪುಣ್ಯಗಳೊಡನೆ ಹೇಳಿದುದಾಯಿತು. ಇನ್ನೂ ಬೇರಾವುದನ್ನು ಕೇಳಲಿಚ್ಛಿಸುವೆ ?

ಅಧ್ಯಾಯದ ಸಾರಾಂಶ—

ಭೂದೇವಿಯು, ಪಿತೃದೇವತೆಗಳ ಮತ್ತು ಶ್ರಾದ್ಧದ ವಿಚಾರದಲ್ಲಿ ಪ್ರಶ್ನಿಸಲಾಗಿ ಶ್ರೀವರಾಹದೇವನು, ಶ್ರಾದ್ಧದ ನಿಮಂತ್ರಣಕ್ಕೆ ಅರ್ಹಾನರ್ಹರನ್ನೂ, ಶ್ರಾದ್ಧದಲ್ಲಿ ಅದರ್ಶನೀಯರನ್ನೂ ಅವರ ದರ್ಶನದಿಂದ ಶ್ರಾದ್ಧಕ್ಕೆ ರಾಕ್ಷಸತ್ವವುಂಟಾಗುವುದೆಂಬುದನ್ನೂ, ಗೃಹಸ್ಥರು ಶ್ರಾದ್ಧಮಾಡಬೇಕಾದ ಕ್ರಮವನ್ನೂ, ಅದರ ಫಲವನ್ನೂ, ಪಿತೃಗಳ ಶ್ರಾದ್ಧದಲ್ಲಿ ಮೊದಲು ಅಗ್ನಿಗೆ ಹೋಮಮಾಡಬೇಕಾದುದಕ್ಕೆ ಕಾರಣವನ್ನೂ, ಅಪಾಂಕ್ತೇಯರಾದ ಬ್ರಾಹ್ಮಣರನ್ನೂ ಅಪಾಂಕ್ತೇಯರ ಭೋಜನದಿಂದ ಪಿತೃಗಳಿಗುಂಟಾಗುವ ದುಃಖವನ್ನೂ, ಪ್ರೇತಾನ್ನಭೋಜನ ಮಾಡಿದವರು ಶ್ರಾದ್ಧದಲ್ಲಿ ನಿಮಂತ್ರಿತರಾದರೆ ಆಗುವ ದೋಷವನ್ನೂ, ಅದಕ್ಕೆ ಪ್ರಾಯಶ್ಚಿತ್ತಾದಿಗಳನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರತೊಂಬತ್ತನೆಯ ಅಧ್ಯಾಯ.

|| ಶ್ರೀಃ ||

ಏಕನವತ್ಯಧಿಕಶತತಮೋಽಧ್ಯಾಯಃ

ಅಥ ಮಧುಪರ್ಕೋತ್ಪತ್ತಿದಾನಪ್ರಕರಣಂ

|| ಸೂತ ಉವಾಚ ||

ಏವಂ ಶ್ರುತ್ವಾ ಬಹೂನ್ ಧರ್ಮಾನ್ ಧರ್ಮಶಾಸ್ತ್ರವಿನಿಶ್ಚಿಯಾತ್ ।
ವರಾಹರೂಪಿಣಂ ದೇವಂ ಪುನಃ ಪಪ್ರಚ್ಛ ಮೇದಿನೀ || ೧ ||

|| ಧರಣ್ಯುವಾಚ ||

ಏವಂ ಶಾಸ್ತ್ರಂ ಮಯಾ ದೇವ ತವ ವಕ್ತ್ರಾದ್ವಿನಿಸ್ಸೃತಂ ।
ಶ್ರುತಂ ಸುಬಹುಶಶ್ಚೈವ ತೃಪ್ತಿರ್ಮಮ ನವಿದ್ಯತೇ || ೨ ||

ನೂರತೊಂಬತ್ತೊಂದನೆಯ ಅಧ್ಯಾಯ

ಮಧುಪರ್ಕೋತ್ಪತ್ತಿದಾನಪ್ರಕರಣ

೧. ಸೂತಮುನಿ—ಭೂದೇವಿಯು, ಶ್ರೀ ವರಾಹದೇವನಿಂದ ಧರ್ಮಶಾಸ್ತ್ರ ಸಿದ್ಧವಾದ ಅನೇಕ ಧರ್ಮಗಳನ್ನು ಕೇಳಿ, ಮತ್ತೆ ಆ ಸ್ವಾಮಿಯನ್ನು ಪ್ರಶ್ನಿಸಿದಳು.

೨. ಭೂದೇವಿ—ದೇವ, ನೀನು ಹೇಳಿದ ಶಾಸ್ತ್ರವನ್ನು ಬಹಳ ಹೆಚ್ಚಾಗಿ ಕೇಳಿದೆನು. ಆದರೂ ನನಗೆ ತೃಪ್ತಿಯಾಗಿಲ್ಲ.

ಮಮೈವಾನುಗ್ರಹಾರ್ಥಾಯ ರಹಸ್ಯಂ ವಕ್ತುಮರ್ಹಸಿ ।
ಕೀದೃಶೋ ಮಧುಪರ್ಕಶ್ಚ ಕಿಂಪುಣ್ಯಂ ಕಾಚದೇವತಾ
ಕಾನಿದ್ರವ್ಯಾಣಿ ಕಸ್ಮೈಶ್ಚ ದೇಯಾನೀತಿವದಸ್ವಮೇ ॥ ३ ॥

ಇತಿ ಭೂಮ್ಯಾ ವಚಃ ಶ್ರುತ್ವಾ ದೇವದೇವೋ ಜನಾರ್ದನಃ ॥ ४ ॥

ವರಾಹರೂಪೀ ಭಗವಾನ್ ಪ್ರತ್ಯುವಾಚ ವಸುಂಧರಾಂ ॥ ५ ॥

॥ ಶ್ರೀವರಾಹ ಉವಾಚ ॥

ಶೃಣು ಭೂಮೇ ಪ್ರಯತ್ನೇನ ಮಧುಪರ್ಕೋ ಯಥಾಕೃತಃ ।
ಉತ್ಪತ್ತಿಶ್ಚೈವ ದಾನಂ ಚ ಸರ್ವೋ ಯಸ್ಯ ನ ಹೀಯತೇ ॥ ६ ॥

ಅಹಂ ಬ್ರಹ್ಮಾ ಚ ರುದ್ರಶ್ಚ ಕೃತ್ವಾ ಲೋಕಸ್ಯ ಸಂಕ್ಷಯಂ ।
ಅವ್ಯಕ್ತಾನಿ ಚ ಭೂತಾನಿ ಯಾನಿ ಕಾನಿ ಚ ಸರ್ವಥಾ ॥ ७ ॥

---

३. ನನ್ನ ಅನುಗ್ರಹಕ್ಕಾಗಿಯೇ ನಾನು ಕೇಳುವ ರಹಸ್ಯವನ್ನು ಹೇಳಬೇಕು. ಮಧುಪರ್ಕವೆಂಬುದೇನು ? ಅದರ ದೇವತೆಯಾರು ? ಪುಣ್ಯವೇನು ? ಅದರ ದ್ರವ್ಯಗಳಾವುವು ? ಯಾರಿಗೆ ಅದನ್ನು ಕೊಡಬೇಕು ? ಎಲ್ಲವನ್ನೂ ನನಗೆ ಹೇಳು.

४-५. ಭೂದೇವಿಯು ಈ ಮಾತನ್ನು ಕೇಳಿ, ದೇವದೇವನೂ ವರಾಹ ರೂಪಿಯೂ ಆದ ಜನಾರ್ದನನು, ಆಕೆಗೆ ಹೀಗೆ ಹೇಳಿದನು.

६. ಶ್ರೀವರಾಹ—ಭೂದೇವಿ, ಯಾವುದರ ಉತ್ಪತ್ತಿಯೂ ದಾನವೂ ಕಡಿಮೆಯಾದುದಲ್ಲವೋ ಆ ಮಧುಪರ್ಕವು ಹೇಗಾಯಿತೆಂಬುದನ್ನು ಪ್ರಯತ್ನ ಪೂರ್ವಕವಾಗಿ ಕೇಳು.

७-८. ಭೂಮಿ, ನಾನೂ ಬ್ರಹ್ಮನೂ ರುದ್ರನೂ ಲೋಕಸಂಕ್ಷಯವನ್ನು ಮಾಡಲಾಗಿ ಎಲ್ಲಾ ಪ್ರಾಣಿಗಳೂ (ಭೂತಗಳೂ) ಅವ್ಯಕ್ತವಾಗಿರುವಾಗ ನನ್ನ

ತತೋ ಭೂಮೋ ದಕ್ಷಿಣಾಂಗಾತ್ಪುರುಷೋ ಮೇ ವಿನಿಸ್ಸೃತಃ ।
ರೂಪವಾನ್ ದ್ಯುತಿಮಾಂಶ್ಚೈವ ಶ್ರೀಮಾನ್ ಹ್ರೀಕೀರ್ತಿಮಾನ್ನರಃ ॥ ೮ ॥

ತತ್ರ ಪಪ್ರಚ್ಛ ಮಾಂ ಬ್ರಹ್ಮಾ ಮಮ ಗಾತ್ರಾದ್ವಿನಿಸ್ಸೃತಃ ।
ಯ ಏವತಿಷ್ಠತೇ ವಿಷ್ಣೋ ತ್ರಯಾಣಾಂ ಚ ಚತುರ್ಥಕಃ ॥ ೯ ॥

ಸರಹಶ್ಚ ಲಘುರ್ದೇವ ಏತತ್ತ್ವ ನಯುಜ್ಯತೇ ॥ ೧೦ ॥

ಬ್ರಹ್ಮಣೋ ವಚನಂ ಶ್ರುತ್ವಾ ಮಯಾಪ್ಯೇವಂ ಪ್ರಭಾಷಿತಂ ।
ಏವಂ ಚ ಮೇ ಸಮುತ್ಪನ್ನಃ ಸರ್ವಕರ್ಮಸುನಿಶ್ಚಿತಃ ॥ ೧೧ ॥

ಮಧುಪರ್ಕೇತಿ ವಿಖ್ಯಾತೋ ಭಕ್ತಾನಾಂ ಭವಮೋಕ್ಷಣಃ ।
ಮಯಾತ್ರ ಶಂಸಿತಂ ಬ್ರಹ್ಮನ್ ರುದ್ರೇ ಚಾಪಿ ಸಮಾಸತಃ ॥ ೧೨ ॥

ಬಲಭಾಗದ ದೇಹದಿಂದ ಸುಂದರನೂ ಕಾಂತಿವಂತನೂ ಶ್ರೀಮಂತನೂ ಲಜ್ಜಾಶೀಲನೂ ಕೀರ್ತಿವಂತನೂ ಆದ ಪುರುಷನೊಬ್ಬನುದಿಸಿದನು.

೯. ಆಗ ನನ್ನ ದೇಹದಿಂದಲೇ ಉದಿಸಿದ ಬ್ರಹ್ಮನು ನನ್ನನ್ನು ಕುರಿತು “ವಿಷ್ಣುವೇ, ನಾವು ಮೂವರಾದಮೇಲೆ ನಾಲ್ಕನೆಯವನಾಗಿರುವ ಈತನು ಏಕಾಂತನೂ ಲಘುವೂ ಆಗಿದ್ದಾನೆ. ಇದು ನಿನಗೆ ಯುಕ್ತವಾಗಿಲ್ಲ.” ಎಂದನು.

೧೦–೧೨. ಬ್ರಹ್ಮನ ಮಾತನ್ನು ಕೇಳಿ, ನಾನು “ನನ್ನಿಂದುದಿಸಿದ ಸರ್ವಕರ್ಮಸುನಿಶ್ಚಿತನಾದ ಮಧುಪರ್ಕವೆಂದು ಪ್ರಸಿದ್ಧನಾದ ಈತನು ಭಕ್ತರ ಸಂಸಾರವಿಮೋಚಕನಾಗಿರುವನು. ಬ್ರಹ್ಮನೇ, ಈ ವಿಚಾರದಲ್ಲಿ ನಾನು ರುದ್ರನಿಗೂ ಸಂಗ್ರಹವಾಗಿ ಹೇಳಿದ್ದೇನೆ.” ಎಂದೆನು.

ಸಾಧು ವಿಷ್ಣೋ ಭಾಗತಸ್ತೇ ಏಷ ಚಾಪಿ ವಿನಿಸ್ಸೃತಃ |
ಉದ್ಭವಂ ಮಧುಪರ್ಕಸ್ಯ ಆತ್ಮಸಂಭವ ನಿಶ್ಚಯಂ || ೧೩ ||

ತತಸ್ತು ಮಾಬ್ರವೀದ್ಬ್ರಹ್ಮಾ ಕಾರಣಂ ಮಧುರಂ ವಚಃ |
ಮಧುಪರ್ಕೇಣ ಕಿಂಕಾರ್ಯಂ ಮೇ ತದಾಚಕ್ಷ್ವ ನಿಷ್ಕಲಂ || ೧೪ ||

ಪಿತಾಮಹವಚಃ ಶ್ರುತ್ವಾ ಮಯಾಸೌ ಪ್ರತಿಭಾಷಿತಃ |
ಕಾರಣಂ ಮಧುಪರ್ಕಸ್ಯ ದಾನಂ ಸಂಕರಣಂ ತಥಾ || ೧೫ ||

ಮಮಾರ್ಚನವಿಧಿಂ ಕೃತ್ವಾ ಮಧುಪರ್ಕಂ ಪ್ರಯಚ್ಛತಿ |
ಬ್ರಹ್ಮನ್ಯಾತ್ಯುತ್ತರಂ ಸ್ಥಾನಂ ಯತ್ರ ಗತ್ವಾ ನ ಶೋಚತಿ || ೧೬ ||

ತಸ್ಯಕ್ರಿಯಾಂ ಪ್ರವಕ್ಷ್ಯಾಮಿ ಮಮ ದಾನಪ್ರತಿಗ್ರಹಾತ್ |
ಯಸ್ಯದಾನವಿಧಿಂ ಪ್ರಾಪ್ಯ ಯಾಂತಿ ದಿವ್ಯಾಂ ಗತಿಂ ಮಮ || ೧೭ ||

೧೩–೧೪. ಬಳಿಕ ಬ್ರಹ್ಮನು ಇಂಪಾದ ನುಡಿಯಿಂದ "ವಿಷ್ಣುವೇ, ಒಳ್ಳೆಯದು. ಈತನೂ ನಿನ್ನ ಅಂಶದಿಂದ ಉದಿಸಿದವನು. ಆದುದರಿಂದ ಮಧುಪರ್ಕವು ನಮ್ಮಿಂದ ಉದಿಸಿದುದೆಂದು ನಿಶ್ಚಯವಾಯಿತು. ಆದರೆ ಈ ಮಧುಪರ್ಕದಿಂದ ಕಾರ್ಯವೇನೆಂಬುದನ್ನು ನನಗೆ ಸ್ಪಷ್ಟವಾಗಿ ಹೇಳು." ಎಂದನು.

೧೫. ಬ್ರಹ್ಮನ ಮಾತನ್ನು ಕೇಳಿ, ನಾನು ಆತನಿಗೆ ಮಧುಪರ್ಕವನ್ನು ಸಿದ್ಧಪಡಿಸುವ ಮತ್ತು ಅದರ ದಾನದ ವಿಚಾರವನ್ನು ಹೇಳಿದೆನು.

೧೬. "ಬ್ರಹ್ಮನೇ, ನನ್ನನ್ನು ಪೂಜಿಸಿ, ಮಧುಪರ್ಕವನ್ನು ದಾನಮಾಡಿದಲ್ಲಿ ಆತನು ಎಲ್ಲಿ ಹೋದರೆ ದುಃಖವಿಲ್ಲವೋ ಆ ಉತ್ತಮಸ್ಥಾನಕ್ಕೆ ಹೋಗುವನು.

೧೭. ದಾನವೂ ಪ್ರತಿಗ್ರಹವೂ ನನ್ನದೇ ಆದುದರಿಂದ ಯಾವ ದಾನ ವಿಧಿಯನ್ನು ಅನುಸರಿಸಿ ನನ್ನ ದಿವ್ಯಗತಿಯನ್ನು ಪಡೆಯುವರೋ ಆ ವಿಧಿಕಾರ್ಯವನ್ನು ಹೇಳುತ್ತೇನೆ.

ವೃತ್ತೇ ಷ್ವೇವೋಪಚಾರೇಷು ಯೇ ಚ ಬ್ರಹ್ಮನ್ಮಮಪ್ರಿಯಾಃ ।
ಸಂಗೃಹ್ಯ ಮಧುಪರ್ಕಂ ವೈ ಇಮಂ ಮಂತ್ರಮುದಾಹರೇತ್ ॥ ೧೮ ॥

ಮಂತ್ರಃ:—ಓಂ ಏಷಹಿದೇವಃ ಭಗವಂಸ್ತವ ಗಾತ್ರ ಸೂತಿಃ ।
ಸಂಸಾರ ಮೋಕ್ಷಣಕರೋ ಮಧುಪರ್ಕನಾಮಾ ।
ಭಕ್ತ್ಯಾಮಯಾಽಯಂ ಪ್ರತಿಪಾದಿತೋಽದ್ಯ ।
ಗೃಹಾಣ ದೇವೇಶ ನಮೋ ನಮಸ್ತೇ ॥ ೧೯ ॥

ಪುನರನ್ಯತ್ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಯಾದೃಶೋ ಮಧುಪರ್ಕೋಽನ್ಯೈ ಯಾಚ ತಸ್ಯ ಮಹಾಕ್ರಿಯಾ ॥ ೨೦ ॥

ಮಧ್ವೇವಂ ದಧಿಸರ್ಪಿಶ್ಚ ಕುರ್ಯಾಚ್ಚೈವ ಸಮಂ ತಥಾ ।
ವಿಧಿನಾಮಂತ್ರಪೂತೇನ ಯದೀಚ್ಛೇತ್ಸಿದ್ಧಿಮುತ್ತಮಾಂ ॥ ೨೧ ॥

೧೮–೧೯. ಬ್ರಹ್ಮನೇ, ನನಗೆ ಪ್ರಿಯರಾದವರು ಮಧುಪರ್ಕವನ್ನು ಸ್ವೀಕರಿಸುವ ನನಗೆ ಉಪಚಾರವು ನಡೆದ ಬಳಿಕ ಮಧುಪರ್ಕವನ್ನು ಕೈಗೆ ತೆಗೆದುಕೊಂಡು, "ದೇವ, ಭಗವಂತಾ, ಇದು ನಿನ್ನ ದೇಹದಿಂದ ಉದಿಸಿದುದೂ ಸಂಸಾರಮೋಕ್ಷಣಕರವೂ ಆದ ಮಧುಪರ್ಕ. ದೇವೇಶ, ಭಕ್ತಿಯಿಂದ ನಾನು ಈಗ ಅರ್ಪಿಸುವ ಇದನ್ನು ಪರಿಗ್ರಹಿಸು. ನಿನಗೆ ಅನೇಕ ವಂದನೆಗಳು." ಎಂಬ ಅರ್ಥವುಳ್ಳ ಮೇಲಿನ, 'ಏಷಹಿದೇವ ಭಗವನ್. ನಮಸ್ತೇ.' ಎಂಬ (೧೯ ನೆಯ ಶ್ಲೋಕ) ಮಂತ್ರವನ್ನು ಹೇಳಬೇಕು.

೨೦. ವಸುಂಧರೇ, ಮಧುಪರ್ಕವು ಎಂತಹುದು ? ಅದರ ಮಹಾಕಾರ್ಯವೇನು ಎಂಬ ವಿಚಾರವನ್ನೂ ಹೇಳುತ್ತೇನೆ. ಕೇಳು.

೨೧–೨೨. ಉಚಿತವಾದ ಉಪಚಾರದಿಂದ ನೀನು ಮಧುಪರ್ಕವೆಂಬುದೇನೆಂದು ಕೇಳಿದೆಯಲ್ಲವೆ? ಉತ್ತಮವಾದ ಸಿದ್ಧಿಯನ್ನು ಬಯಸುವವನು

ಸಮಾಸಾದ್ಯ ತತಃ ಕೃತ್ವಾ ಮಮಕರ್ಮ ಪರಾಯಣಃ ।
ಉಚಿತೇನೋಪಚಾರೇಣ ಯತ್ತ್ವಯಾ ಪರಿಪೃಚ್ಛಿತಂ ॥ ೨೨ ॥

ಇತಿ ಶ್ರೀವರಾಹಪುರಾಣೇ ಮಧುಪರ್ಕೋತ್ಪತ್ತಿದಾನ ಸಂಕರಣಂ
ನಾಮೈಕನವತ್ಯಧಿಕ ಶತತಮೋಧ್ಯಾಯಃ

ಜೇನುತುಪ್ಪ, ಮೊಸರು, ತುಪ್ಪ ಇವುಗಳನ್ನು ಸಿದ್ಧಪಡಿಸಿಕೊಂಡು ಮಂತ್ರ ಪವಿತ್ರವಿಧಿಯಿಂದ ಸಮವಾಗಿ ಮಿಶ್ರಮಾಡಬೇಕು.

ಅಧ್ಯಾಯದ ಸಾರಾಂಶ—

ಭೂದೇವಿಯು ಕೇಳಲಾಗಿ ಶ್ರೀವರಾಹನು ಮಧುಪರ್ಕದ ಉತ್ಪತ್ತಿ ದಾನ ಮಹಿಮೆ ಮೊದಲಾದ ವಿಚಾರಗಳನ್ನು ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರ ತೊಂಬತ್ತೊಂದನೆಯ ಅಧ್ಯಾಯ

|| ಶ್ರೀಃ ||

ದ್ವಿನವತ್ಯಧಿಕಶತತಮೋಽಧ್ಯಾಯಃ

ಅಥ ಸರ್ವಶಾಂತಿ ವರ್ಣನಂ

|| ಸೂತ ಉವಾಚ ||

ಶ್ರುತ್ವಾತು ಮಧುಪರ್ಕಸ್ಯ ಹ್ಯುತ್ಪತ್ತಿಂ ದಾನಮೇವಚ ।
ಪುಣ್ಯಂ ಚೈವ ಫಲಂ ಚೈವ ಕಾರಣಂ ಗ್ರಹಣಂ ತಥಾ || ೧ ||

ವಿಸ್ಮಯಂ ಪರಮಂ ಗತ್ವಾ ಸಾಮಹೀ ಸಂಶಿತವ್ರತಾ ।
ಪಾದೌ ಗೃಹ್ಯ ಯಥಾನ್ಯಾಯಂ ಪ್ರತ್ಯುವಾಚ ಜನಾರ್ದನಂ || ೨ ||

ದೇವ ವೃತ್ತೋಽಪಚಾರೇಣ ತವ ಯನ್ಮನಸಿ ಪ್ರಿಯಂ ।
ಕಿಂಚ * ಯತ್ಕೈವ ದಾತವ್ಯಂ ತವ ಕರ್ಮಪರಾಯಣೈಃ || ೩ ||

ನೂರತೊಂಬತ್ತೆರಡನೆಯ ಅಧ್ಯಾಯ

ಸರ್ವಶಾಂತಿವರ್ಣನೆ.

೧–೨. ಸೂತಮುನಿ– ಮಧುಪರ್ಕದ ಉತ್ಪತ್ತಿಯನ್ನೂ ದಾನವಿಧಿಯನ್ನೂ ಪುಣ್ಯಫಲವನ್ನೂ ಕಾರಣ ಪರಿಗ್ರಹ ವಿಚಾರವನ್ನೂ ಕೇಳಿ ಪರಮಾಶ್ಚರ್ಯಗೊಂಡ ತೀಕ್ಷ್ಣವ್ರತೆಯಾದ ಭೂದೇವಿಯು ಆ ಜನಾರ್ದನನ ಪಾದಗಳನ್ನು ಕ್ರಮವಾಗಿ ಹಿಡಿದುಕೊಂಡು ಹೇಳಿದಳು.

೩–೪. "ದೇವ, ನಿನಗೆ ಮಧುಪರ್ಕೋಪಚಾರಮಾಡಿದವರು ಬಳಿಕ ನಿನ್ನ ಮನಸ್ಸಿಗೆ ಹಿತವಾದ ಯಾವುದನ್ನು ಮಾಡಬೇಕು? ಯಾವುದನ್ನು

---

* ತತ್ಕೈವ

ಏತದಾಚಕ್ಷ್ವ ತತ್ತ್ವೇನ ತತ್ರಯುತ್ಪರಮಂ ಮಹತ್ ॥ ೪ ॥

॥ ಶ್ರೀ ವರಾಹ ಉವಾಚ ॥

ಸಾಧು ಭೂಮೇ ಮಹಾಭಾಗೇ ಯನ್ಮಾಂತ್ವಂ ಪರಿಪೃಚ್ಛಸಿ ।
ಕಥಯಿಷ್ಯಾಮಿ ತತ್ಸರ್ವಂ ದುಃಖಸಂಸಾರಮೋಕ್ಷಣಂ ॥ ೫ ॥

ಕೃತ್ವಾತು ಮಮಕರ್ಮಾಣಿ ಯತ್ತ್ವಯಾ ಪೂರ್ವಭಾಷಿತಂ ।
ಪಶ್ಚಾಚ್ಛಾಂತಿಂಚ ಮೇ ಕುರ್ಯಾತ್ ಭೂಮೇ ರಾಷ್ಟ್ರಸುಖಾವಹಂ ॥ ೬ ॥

ಸರ್ವಕರ್ಮ ತತಃ ಕೃತ್ವಾ ಭೂಮ್ಯಾಂ ಜಾನು ನಿಪಾತ್ಯಚ ।
ನಮೋ ನಾರಾಯಣಾಯೇತಿ ಉಕ್ತ್ವಾ ಮಂತ್ರಮುದಾಹರೇತ್ ॥ ೭ ॥

ಮಂತ್ರಃ--ಓಂ ನಮೋ ನಮೋ ವಾಸುದೇವ ತ್ವಂಗತಿಸ್ತ್ವಂ ಪರಾಯಣಂ ।
ಶರಣಂ ತ್ವಾಂ ಗತೋ ನಾಥ ಸಂಸಾರಾರ್ಣವತಾರಕ ॥ ೮ ॥

ಅರ್ಪಿಸಬೇಕು? ಅದರಲ್ಲಿ ಯಾವುದು ಪರಮೋತ್ತಮವಾದುದು? ಎಂಬುದನ್ನು ನಿಜವಾಗಿ ಹೇಳು."

೫. ಶ್ರೀವರಾಹ— ಮಹಾಭಾಗ್ಯೇ, ಭೂದೇವಿ, ಒಳ್ಳೆಯದಾಯಿತು. ನೀನು ನನ್ನಲ್ಲಿ ಯಾವುದನ್ನು ಕೇಳುವೆಯೋ ದುಃಖಸಂಸಾರ ವಿಮೋಚಕವಾದ ಅದೆಲ್ಲವನ್ನೂ ಹೇಳುವೆನು.

೬. ಭೂಮೀ, ನೀನು ಮೊದಲು ಹೇಳಿದ ನನ್ನ ಕರ್ಮಗಳನ್ನು ಮಾಡಿ, ಬಳಿಕ ರಾಷ್ಟ್ರಕ್ಕೆ ಸುಖವನ್ನುಂಟುಮಾಡುವ ಶಾಂತಿಯನ್ನು ಮಾಡಬೇಕು.

೭. ಕರ್ಮಗಳೆಲ್ಲವನ್ನೂ ಮಾಡಿ, ಬಳಿಕ ನೆಲದಮೇಲೆ ಮೊಳಕಾಲೂರಿ ಬಾಗಿ, 'ನಮೋನಾರಾಯಣಾಯ' ಎಂದು ಮುಂದಿನ ಅರ್ಥದ ಮೇಲಿನ (೮–೧೨ ಶ್ಲೋಕ) ಮಂತ್ರವನ್ನು ಹೇಳಬೇಕು.

೮–೯. "ಓಂ ವಾಸುದೇವನೇ, ನಿನಗೆ ನಮಸ್ಕಾರ. ನೀನೇ ನಮಗೆ ಗತಿಯೂ ಪರಾಯಣವೂ ಆಗಿದ್ದೀಯೆ. ನಾಥ, ಸಂಸಾರ ಸಾಗರತಾರಕ, ನಿನಗೆ ಶರಣಾಗತನಾಗಿದ್ದೇನೆ, ಸುಮುಖನೇ, ನೀನು ಉತ್ತಮವಾದ ರೀತಿಯಲ್ಲಿ ಮತ್ತೆ

ಆಗತಸ್ತ್ವಂಚ ಸುಮುಖ ಪುನಃ ಸಮುಚಿತೇನ ವೈ ।
ದಿಶಃ ಪಶ್ಯ ಅಧಃ ಪಶ್ಯ ವ್ಯಾಧಿಭ್ಯೋ ರಕ್ಷ ನಿತ್ಯಶಃ ॥ ೯ ॥

ಪ್ರಸೀದ ಸ್ವಸ್ಯ ರಾಷ್ಟ್ರಸ್ಯ ರಾಜ್ಞಃ ಸರ್ವ ಬಲಸ್ಯಚ ।
ಗರ್ಭಿಣೀನಾಂ ಚ ವೃದ್ಧಾನಾಂ ವ್ರೀಹೀಣಾಂಚ ಗವಾಂ ತಥಾ ॥
ಬ್ರಾಹ್ಮಣಾನಾಂಚ ಸತತಂ ಶಾಂತಿಂ ಕುರು ಶುಭಂ ಕುರು ॥ ೧೦ ॥

ಅನ್ನಂ ಕುರು ಸುವೃಷ್ಟಿಂಚ ಸುಭಿಕ್ಷ ಮಭಯಂ ತಥಾ ।
ರಾಷ್ಟ್ರಂ ಪ್ರವರ್ಧತು ವಿಭೋ ಶಾಂತಿರ್ಭವತು ನಿತ್ಯಶಃ ॥ ೧೧ ॥

ದೇವಾನಾಂ ಬ್ರಾಹ್ಮಣಾನಾಂಚ ಭಕ್ತಾನಾಂ ಕನ್ಯಕಾಸುಚ ।
ಪಶೂನಾಂ ಸರ್ವಭೂತಾನಾಂ ಶಾಂತಿರ್ಭವತು ನಿತ್ಯಶಃ ॥ ೧೨ ॥

ಏವಂ ಶಾಂತಿಂ ಪಠಿತ್ವಾತು ಮನು ಕರ್ಮಪರಾಯಣಃ ।
ಪುನರ್ಜಲಾಂಜಲಿಂ ದತ್ವಾ ತ್ವಿಮಂ ಮಂತ್ರಮುದಾಹರೇತ್ ॥ ೧೩ ॥

ಇಲ್ಲಿ ಬಂದು ನಮ್ಮ ಸುತ್ತಲೂ (ದಿಕ್ಕುಗಳನ್ನೂ) ಕೆಳಗಡೆಯೂ ನೋಡಿಕೊಳ್ಳುತ್ತ ಯಾವಾಗಲೂ ನಮ್ಮನ್ನು ವ್ಯಾಧಿಗಳಿಂದ ರಕ್ಷಿಸು. ಸರ್ವಬಲಸಹಿತನಾದ ನಮ್ಮ ರಾಷ್ಟ್ರದ ರಾಜನಿಗೆ ಪ್ರಸನ್ನನಾಗು.

೧೦. ಗರ್ಭಿಣಿಯರಿಗೂ ವೃದ್ಧರಿಗೂ ಬತ್ತಕ್ಕೂ ಗೋಬ್ರಾಹ್ಮಣರಿಗೂ ಸಂತತವಾಗಿ ಶಾಂತಿಯನ್ನೂ ಶುಭವನ್ನೂ ಮಾಡು.

೧೧. ವಿಭುವೇ ಸುವೃಷ್ಟಿಯನ್ನೂ ಸುಭಿಕ್ಷವನ್ನೂ, ಅನ್ನವನ್ನೂ ಅಭಯವನ್ನೂ ದಯೆಪಾಲಿಸು ರಾಷ್ಟ್ರವು ಬೆಳೆಯಲಿ. ಯಾವಾಗಲೂ ಶಾಂತಿಯಾಗಲಿ.

೧೨. ದೇವತೆಗಳಿಗೂ ಸರ್ವ ಬ್ರಾಹ್ಮಣರಿಗೂ, ಭಕ್ತರಿಗೂ ಕನ್ನೆಯರಿಗೂ ಪಶುಗಳಿಗೂ ಸರ್ವ ಭೂತಗಳಿಗೂ ಸದಾ ಶಾಂತಿಯಾಗಲಿ.''

೧೩–೧೪. ನನ್ನ ಕರ್ಮಗಳಲ್ಲಿ ಆಸಕ್ತನಾದವನು ಮೇಲಿನ ಶಾಂತಿಯನ್ನು ಹೇಳಿ, ಮತ್ತೆ ಜಲಾಂಜಲಿಯನ್ನರ್ಪಿಸಿ, "ದೇವ, ವಾಸುದೇವ, ಸರ್ವ ಜಗಜ್ಜನ

ಮಂತ್ರಃ–ಯೋಽಸೌ ಭವಾನ್ ಸರ್ವಜಗತ್ಪ್ರಸೂತಿಃ
ಯಜ್ಞೇಷು ದೇವೇಷು ಚ ಕರ್ಮಸಾಕ್ಷೀ ।
ಶಾಂತಿಂ ಕುರುತ್ವಂ ಮಮ ವಾಸುದೇವ
ಸಂಸಾರಮೋಕ್ಷಂಚ ಕುರುಷ್ವದೇವ ॥ ೧೪ ॥

ಏಷಾ ಸಿದ್ಧಿಶ್ಚ ಕೀರ್ತಿಶ್ಚ ಓಜಸಾಂತು ಮಹೌಜಸಂ ।
ಲಾಭಾನಾಂ ಪರಮೋಲಾಭೋ ಗತೀನಾಂ ಪರಮಾಗತಿಃ ॥ ೧೫ ॥

ಏವಂ ಪಠತಿ ತತ್ವೇನ ಮಮ ಶಾಂತಿಂ ಸುಖಾವಹಾಂ ।
ತೇತು ಮಲ್ಲಯತಾಂ ಯಾಂತಿ ಪುನರಾವೃತ್ತಿವರ್ಜಿತಾಃ ॥ ೧೬ ॥

ಏವಂ ಶಾಂತಿಂ ಪಠಿತ್ವಾತು ಮಧುಪರ್ಕಂ ಪ್ರಯೋಜಯೇತ್ ।
ನಮೋ ನಾರಾಯಣಾ ಯೇತಿ ಚೋಕ್ತ್ವಾ ಮಂತ್ರ ಮುದಾಹರೇತ್॥ ೧೭ ॥

ಕನೂ ದೇವತೆಗಳ ಮತ್ತು ಯಜ್ಞಾದಿಕರ್ಮಗಳ ಸಾಕ್ಷಿಯೂ ಆದ ನೀನು ನನಗೆ ಶಾಂತಿಯನ್ನೂ ಸಂಸಾರವಿಮೋಚನೆಯನ್ನೂ ದಯಪಾಲಿಸು." ಇದೇ ಸಿದ್ಧಿಯೂ ಕೀರ್ತಿಯೂ ಓಜಸ್ಸುಗಳಲ್ಲಿ ಮಹಾಓಜಸ್ಸೂ ಲಾಭಗಳಲ್ಲಿ ಪರಮಲಾಭವೂ ಗತಿಗಳಲ್ಲಿ ಪರಮಗತಿಯೂ ಆಗಿದೆ." ಎಂಬ ಅರ್ಥದ ಮೇಲಿನ ೧೪–೧೫ನೇ ಶ್ಲೋಕ ಮಂತ್ರವನ್ನು ಹೇಳಬೇಕು.

೧೬. ಹೀಗೆ ಸುಖಕರವಾದ ನನ್ನಶಾಂತಿಯನ್ನು ನಿಜವಾಗಿ ಹೇಳುವವರು ಪುನರಾವೃತ್ತಿಯಿಲ್ಲದವರಾಗಿ ನನ್ನಲ್ಲಿ ಐಕ್ಯರಾಗುವರು.

೧೭–೧೯. ಮೇಲಿನ ಶಾಂತಿಯನ್ನು ಹೇಳಿ, ಮಧುಪರ್ಕವನ್ನರ್ಪಿಸಬೇಕು 'ನಮೋನಾರಾಯಣಾಯ' ಎಂದು "ದೇವೋತ್ತಮನಿಂದುದಿಸಿದ ಮಧುಪರ್ಕವೆಂಬ ಹೆಸರಿನ ಪೂಜ್ಯನಾದ ನೀನು ನನ್ನ ಸಂಸಾರವಿಮೋಚನೆಗಾಗಿ ಈ ಪಾತ್ರೆಯಲ್ಲಿ ಬಂದು ನಿಲ್ಲು" ಎಂಬ ಅರ್ಥದ ಯೋಽಸೌಭವಾನ್....…........

ಮಂತ್ರಃ—ಯೋಽಸೌ ಭವಾನ್ ದೇವವರಪ್ರಸೂತೋ ।
ಯೋಽವ್ಯೈಸಮುಚ್ಯೋರ್ಚ್ಯೇ ಮಧುಪರ್ಕನಾಮಾ ॥
ಆಗಚ್ಛ ಸಂತಿಷ್ಠ ಇಮೇಽಚ ಪಾತ್ರೇ
ಮಮಾಪಿ ಸಂಸಾರವಿಮೋಕ್ಷಣಾಯ ॥ ೧೮ ॥

ಸರ್ಪಿರ್ದಧಿಮಧೂನ್ಯೇವ ಸಮಂ ಪಾತ್ರೇಹ್ಯುದುಂಬರೇ ।
ಅಲಾಭೇ ಮಧುನಶ್ಚಾಪಿ ಗುಡೇನ ಸಹ ಮಿಶ್ರಯೇತ್ ॥ ೧೯ ॥

ಘೃತಾಲಾಭೇತು ಸುಶ್ರೋಣಿ ಲಾಜೈಃ ಸಹ ವಿಮಿಶ್ರಯೇತ್ ।
ಅಲಾಭೇ ವಾಪಿದಧ್ನಶ್ಚ ಕ್ಷೀರೇಣ ಸಹ ಮಿಶ್ರಯೇತ್ ॥ ೨೦ ॥

ದಧಿಕ್ಷೌದ್ರಂ ಘೃತಂಚೈವ ಕಾರಯೇತ್ ಸಮಂ ತಥಾ ।
* ಅಹಂ ದಧಿ ಮಧು ರುದ್ರಃ ಸರ್ಪಿಶ್ಚಾಪಿ ಪಿತಾಮಹಃ ॥ ೨೧ ॥

ವಿಮೋಕ್ಷಣಾಯ" ಮೇಲಿನ (೧೮ನೆಯ ಶ್ಲೋಕ ಮಂತ್ರವನ್ನು ಹೇಳಿ ತುಪ್ಪ ಮೊಸರು ಜೇನುತುಪ್ಪಗಳನ್ನೇ ಸಮವಾಗಿ ಅತ್ತಿಯಮರದಿಂದ ಮಾಡಿದ ಪಾತ್ರೆಯಲ್ಲಿ ಮಿಶ್ರಮಾಡಬೇಕು. ಜೇನುತುಪ್ಪವು ದೊರೆಯದಿದ್ದರೆ ಬೆಲ್ಲವನ್ನೇ ಸೇರಿಸಬಹುದು.

೨೦. ಸುಂದರೀ, ಮಧುಪರ್ಕಕ್ಕೆ ತುಪ್ಪವು ಇಲ್ಲವಾದರೆ ಅದಕ್ಕೆ ಬದಲಾಗಿ ಅರಳನ್ನು ಸೇರಿಸಬಹುದು. ಮೊಸರು ದೊರೆಯದಿದ್ದರೆ ಹಾಲನ್ನು ಸೇರಿಸಬಹುದು.

೨೧. ಮೊಸರು, ಜೇನುತುಪ್ಪ, ತುಪ್ಪ ಇವನ್ನು ಮಧುಪರ್ಕದಲ್ಲಿ ಸಮವಾಗಿ ಸೇರಿಸಬೇಕು. ನಾನೇ ಮೊಸರು, ರುದ್ರನೇ ಜೇನುತುಪ್ಪ, ಬ್ರಹ್ಮನೇ ತುಪ್ಪ.

---

* ೨೧. ಸಮರ್ಪಯಾಮಿ ದೇವೇಶ ರುದ್ರಸರ್ಪಿರ್ಘೃತಂ ಮಧು (ಬೊಂ)

* ಸರ್ವೇಷಾಮಸ್ಯಲಾಭೇತು ಮಮ ಕರ್ಮಪರಾಯಣಃ ।
ಅಪಏವ ತತೋಗೃಹ್ಯ ಇಮಂ ಮಂತ್ರಮುದಾಹರೇತ್ ॥ ೨೨ ॥

ಮಂತ್ರಃ—ಓಂ ಯೋಽಸೌ ಭವಾನ್ನಾಭಿಮಾತ್ರಪ್ರಸೂತೋ।
ಯಜ್ಞೈಶ್ಚ ಮಂತ್ರೈಃ ರಹಸ್ಯ ಜಪ್ಯೈಃ ॥
ಸೋಽಯಂ ಮಯಾತೇ ಪರಿಕಲ್ಪಿತಶ್ಚ
ಗೃಹಾಣ ದಿವ್ಯೋ ಮಧುಪರ್ಕನಾಮಾ ॥ ೨೩ ॥

ಯೋ ದದಾತಿ ಮಹಾಭಾಗೇ ಮಯೋಕ್ತಂ ವಿಧಿಪೂರ್ವಕಂ ।
ಸರ್ವಯಜ್ಞಫಲಂ ಪ್ರಾಪ್ಯ ಮಮ ಲೋಕಂ ಪ್ರಪದ್ಯತೇ ॥ ೨೪ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ತಚ್ಛೃಣುಷ್ವ ವಸುಂಧರೇ ।
ಯೋಽನ್ಯೈ ಪ್ರಾಣಾನ್ಪ್ರಮುಂಚೇತ ಮಮಕರ್ಮಪರಾಯಣಃ ॥ ೨೫ ॥

---

೨೨. ಮಧುಪರ್ಕಕ್ಕೆ ಬೇಕಾದ ಮೂರು ಪದಾರ್ಥವೂ ದೊರೆಯದಿದ್ದರೆ ನನ್ನ ಕರ್ಮಾಸಕ್ತನಾದವನು ನೀರನ್ನೇತೆಗೆದುಕೊಂಡು ಮುಂದಿನ ಮಂತ್ರವನ್ನು ಹೇಳಬೇಕು.

೨೩. ಮಂತ್ರ "ಓಂ ಯೋಽಸೌಭವಾನ್ನಾಭಿಮಾತ್ರಪ್ರಸೂತೋ ।
ಯಜ್ಞೈಶ್ಚಮಂತ್ರೈಃ ಸರಹಸ್ಯಜಪ್ಯೈಃ ।
ಸೋಽಯಂಮಯಾತೇ ಪರಿಕಲ್ಪಿತಶ್ಚ ।
ಗೃಹಾಣದಿವ್ಯೋ ಮಧುಪರ್ಕನಾಮಾ ॥"

೨೪. ಮಹಾಭಾಗ್ಯೇ ನಾನು ಹೇಳಿದ ಮಧುಪರ್ಕವನ್ನು ವಿಧಿಪೂರ್ವಕವಾಗಿ ಅರ್ಪಿಸುವವನು ಸರ್ವಯಜ್ಞಫಲವನ್ನೂ ಪಡೆದು ನನ್ನ ಲೋಕವನ್ನು ಸೇರುವನು.

೨೫–೨೯. ವಸುಂಧರೇ, ಬೇರೊಂದು ವಿಚಾರವನ್ನು ಹೇಳುತ್ತೇನೆ ಅದನ್ನು ಕೇಳು. ನನ್ನ ಕರ್ಮಗಳಲ್ಲಿ ನಿರತನಾದ ಯಾವನಾದರೂ ಮರಣೋನ್ಮುಖನಾಗಿದ್ದರೆ

---

* ಸರ್ವೇಷಾಮರ್ಥಲಾಭೇತು ಮಮಕರ್ಮಪರಾಯಣಃ.

ತಸ್ಯ ಚೈವೇಹ ದಾತವ್ಯಂ ಮಂತ್ರೇಣ ವಿಧಿಪೂರ್ವಕಂ ।
ಯಾವತ್ಪ್ರಾಣಾನ್ ಪ್ರಮುಂಚೇತ ಕೃತ್ವಾ ಕರ್ಮಸುಪುಷ್ಕಲಂ ॥ ೨೬ ॥

ಮದ್ಭಕ್ತೇನತು ದಾತವ್ಯಂ ಸರ್ವಸಂಸಾರಮೋಕ್ಷಣಂ ।
ದೃಷ್ಟ್ವಾತು ವಿಹ್ವಲಂ ಹ್ಯೇನಂ ಮಮ ಕರ್ಮಪರಾಯಣಃ ॥ ೨೭ ॥

ಮಧುಪರ್ಕಂ ಪರುಂಗೃಹ್ಯ ಚೇಮಂ ಮಂತ್ರಮುದಾಹರೇತ್ ॥ ೨೮ ॥

ಮಂತ್ರಃ—ಯೋಸೌ ಭವಾನ್ ತಿಷ್ಠತಿ ಸರ್ವದೇಹೇ ।
ನಾರಾಯಣಃ ಸರ್ವಜಗತ್ಪ್ರಧಾನಃ ॥
ಗೃಹಾಣಚೈವಂ ಸುರಲೋಕನಾಥ
ಭಕ್ತ್ಯೋಪನೀತಂ ಮಧುಪರ್ಕಸಂಜ್ಞಂ ॥ ೨೯ ॥

ಅನೇನೈವ ತು ಮಂತ್ರೇಣ ದದ್ಯಾಚ್ಚ ಮಧುಪರ್ಕಕಂ ।
ನರಸ್ಯಮೃತಕಾಲೇತು ದದ್ಯಾತ್ಸಂಸಾರಮೋಕ್ಷಣಂ ॥ ೩೦ ॥

ಏಷಾಯತಿರ್ಮಹಾಭಾಗೇ ಮಧುಪರ್ಕಸ್ಯ ಕೀರ್ತಿತಾ ।
ಏವಂ ಕಶ್ಚಿನ್ನಜಾನಾತಿ ಮಧುಪರ್ಕಂ ವಸುಂಧರೇ ॥ ೩೧ ॥

ದುಃಖಿಯಾದ ಅವನಿಗೆ ಪ್ರಾಣಬಿಡುವುದರೊಳಗೆ ನನ್ನ ಭಕ್ತನಾದವನು ಮಂತ್ರದಿಂದ ವಿಧಿಪೂರ್ವಕವಾಗಿ ಕರ್ಮವನ್ನು ಸರಿಯಾಗಿಮಾಡಿ ಮಧುಪರ್ಕವನ್ನು ಕೊಡಬೇಕು. ಕೊಡುವ ಮೊದಲು ಕೈಗೆ ತೆಗೆದುಕೊಂಡು “ ಸರ್ವದೇಹಾಂತರ್ಯಾಮಿಯಾಗಿ ಸರ್ವಲೋಕಪ್ರಧಾನನೂ ಆದ ನಾರಾಯಣಾ, ಲೋಕನಾಥ, ಭಕ್ತನು ಅರ್ಪಿಸುವ ಈಮಧುಪರ್ಕವನ್ನು ಸ್ವೀಕರಿಸು.” ಎಂಬ ಅರ್ಥವುಳ್ಳ “ ಯೋಸೌಭವಾನ್ ......ಮಧುಪರ್ಕಸಂಜ್ಞಂ ” ಎಂಬ ಮೇಲಿನ (೨೯ ನೆಯ ಶ್ಲೋಕ) ಮಂತ್ರವನ್ನು ಹೇಳಬೇಕು.

೩೦. ಈ ಮೇಲಿನ ಮಂತ್ರದಿಂದಲೇ ಮನುಷ್ಯನಿಗೆ ಮರಣಕಾಲದಲ್ಲಿ ಸಂಸಾರವಿಮೋಚಕವಾದ ಮಧುಪರ್ಕವನ್ನು ಕೊಡಬೇಕು.

೩೧. ಪೂಜ್ಯೇ ವಸುಂಧರೇ, ಮಧುಪರ್ಕದ ನಿಯಮವನ್ನು ಹೀಗೆ ಹೇಳಿದೆ. ಆದರೆ ಇದನ್ನು ಯಾರೂ ಅರಿಯರು.

ಏವಂ ಹಿ ಮಧುಪರ್ಕಶ್ಚ ದೇಯಃ ಸಿದ್ಧಿಮಭೀಪ್ಸುಭಿಃ ।
ಅರ್ಚಿತ್ವಾ ದೇವದೇವೇಶಂ ಸರ್ವಸಂಸಾರನಾಶನಂ ॥ ೩೨ ॥

ದದಾತಿ ಮಧುಪರ್ಕಂ ಯಃ ಸಯಾತಿ ಪರಮಾಂ ಗತಿಂ ।
ಅಯಂ ಪವಿತ್ರೋ೭ವಿಮಲಃ ಸರ್ವಕಾಮವಿಶೋಧನಃ ॥ ೩೩ ॥

ದೀಕ್ಷಿತಾಯಚ ದಾತವ್ಯೋ ಯಶ್ಚ ಶಿಷ್ಯೋ೭ಗುರುಪ್ರಿಯಃ ।
ನಮೂರ್ಖಾಯ ಪ್ರದಾತವ್ಯಮವಿನೀತಾಯ ಕರ್ಹಿಚಿತ್ ॥ ೩೪ ॥

ಶೃಣೋತಿ ಮಧುಪರ್ಕಸ್ಯಚಾಖ್ಯಾನಂ ಪಾಪನಾಶನಂ ।
ಯಾತಿ ದಿವ್ಯಾಂ ಪರಾಂ ಸಿದ್ಧಿಂ ಮಧುಪರ್ಕಸ್ಯ ಕಾರಣಾತ್ ॥ ೩೫ ॥

೩೨-೩೩. ಸಿದ್ಧಿಯನ್ನು ಪಡೆಯಲಿಚ್ಛಿಸುವವರು ಹೀಗೆ ಮಧುಪರ್ಕವನ್ನು ಅರ್ಪಿಸಬೇಕು. ದೇವದೇವೇಶನನ್ನು ಪೂಜಿಸಿ, ಸರ್ವ ಸಂಸಾರನಾಶಕವಾದ ಮಧುಪರ್ಕವನ್ನು ಅರ್ಪಿಸುವವನು ಪರಮಗತಿಯನ್ನು ಪಡೆಯುವನು. ಈ ಮಧುಪರ್ಕವು ಪವಿತ್ರವೂ ನಿರ್ಮಲವೂ ಸರ್ವಕಾಮ ವಿಶೋಧಕವೂ ಆದುದು.

೩೪. ಈ ವಿಚಾರವನ್ನು ದೀಕ್ಷಿತನಿಗೂ, ಗುರುಪ್ರಿಯನಾದ ಶಿಷ್ಯನಿಗೂ ಹೇಳಬೇಕು. ವಿನಯವಿಲ್ಲದ ಮೂರ್ಖನಿಗೆ ಎಂದಿಗೂ ಹೇಳಬಾರದು.

೩೫. ಪಾಪನಾಶಕವಾದ ಮಧುಪರ್ಕದ ಕಥೆಯನ್ನು ಕೇಳುವವರು ಅದರ ಮಹಿಮೆಯಿಂದ ದಿವ್ಯವಾದ ಪರಸಿದ್ಧಿಯನ್ನು ಪಡೆಯುವರು.

ಏತತ್ತೇ ಕಥಿತಂ ಭದ್ರೇ ಮಧುಪರ್ಕವಿಭಾವನಂ ।
ಸರ್ವಸಂಸಾರಮೋಕ್ಷಾರ್ಥಂ ಯದೀಚ್ಛೇತ್ಸಿದ್ಧಿಮುತ್ತಮಾಂ ॥ ೩೬ ॥

ರಾಜದ್ವಾರೇಶ್ಮಶಾನೇವಾ ಭಯೇಚ ವ್ಯಸನೇ ತಥಾ ।
ಯೋ ಪಠಂತಿ ತ್ವಿಮಾಂ ಶಾಂತಿಂ ಶೀಘ್ರಂ ಕಾರ್ಯಂ ಭವಿಷ್ಯತಿ ॥ ೩೭ ॥

ಅಪುತ್ರೋ ಲಭತೇ ಪುತ್ರಮಭಾರ್ಯಶ್ಚ ಪ್ರಿಯಾಂ ಲಭೇತ್ ।
ಅಪತಿರ್ಲಭತೇ ಕಾಂತಂ ಬದ್ಧೋ ಮುಚ್ಯೇತ ಬಂಧನಾತ್ ॥ ೩೮ ॥

ಏತತ್ತೇ ಕಥಿತಂ ಭೂಮೇ ಮಹಾಶಾಂತಿಃ ಸುಖಾವಹಾ ।
ಸರ್ವಸಂಸಾರಮೋಕ್ಷಾರ್ಥಂ ರಹಸ್ಯಂ ಪರಮಂ ಮಹತ್ ॥ ೩೯ ॥

೩೬–೩೭. ಭದ್ರೇ, ಸರ್ವ ಸಂಸಾರಮೋಕ್ಷಾರ್ಥವಾಗಿ ಈಮಧುಪರ್ಕದ ವಿಚಾರವನ್ನು ನಿನಗೆ ಹೇಳಿದೆನು. ಉತ್ತಮವಾದ ಸಿದ್ಧಿಯನ್ನು ಬಯಸುವವರು ಅರಮನೆಯ ಬಾಗಿಲಲ್ಲಾಗಲಿ, ಶ್ಮಶಾನದಲ್ಲಾಗಲಿ, ಭಯದಲ್ಲಾಗಲಿ ವ್ಯಸನದಲ್ಲಾಗಲಿ ಈ ಶಾಂತಿಯನ್ನು ಹೇಳಿದರೆ ಅವರಕಾರ್ಯವು ಬೇಗನೆ ನೆರವೇರುವುದು.

೩೮. ಪುತ್ರರಿಲ್ಲದವರು ಪುತ್ರನನ್ನೂ, ಪತ್ನಿಯಿಲ್ಲದವರು ಪತ್ನಿಯನ್ನೂ ಅವಿವಾಹಿತೆಯರು ಪತಿಯನ್ನೂ ಪಡೆಯುವರು. ಬಂಧಿತನಾದವನು ಬಂಧನದಿಂದ ಬಿಡುಗಡೆಯನ್ನು ಪಡೆಯುವನು.

೩೯. ಭೂದೇವೀ, ಮಹಾಶಾಂತಿಸುಖವನ್ನುಂಟುಮಾಡುವುದೂ ಪರಮ ರಹಸ್ಯವೂ ಉತ್ತಮವೂ ಆದ ಈ ವಿಚಾರವನ್ನು ನಿನಗೆ ಸರ್ವಸಂಸಾರವಿಮೋಚನಾರ್ಥವಾಗಿ ಹೇಳಿದುದಾಯಿತು.

ಯಸ್ತ್ವನೇನ ವಿಧಾನೇನ ಕುರ್ಯಾಚ್ಛಾಂತಿಮನುತ್ತಮಾಂ |
ರ್ವಸಂಗಾನ್ಪರಿತ್ಯಜ್ಯ ಮಮ ಲೋಕಂ ಚ ಗಚ್ಛತಿ || ೪೦ ||

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಸರ್ವಶಾಂತಿಕರಣಂ ನಾಮ ದ್ವಿನವತ್ಯಧಿಕಶತತಮೋಧ್ಯಾಯಃ

---

೪೦. ಈವಿಧಿಯಿಂದ ಅತ್ಯುಮವಾದ ಶಾಂತಿಯನ್ನು ಮಾಡುವವನು ಸರ್ವಸಂಗವನ್ನೂ ಪರಿತ್ಯಜಿಸಿ ನನ್ನ ಲೋಕವನ್ನು ಸೇರುವನು.

ಅಧ್ಯಾಯದ ಸಾರಾಂಶ:—

ಶ್ರೀವರಾಹದೇವನು ಭೂದೇವಿಗೆ ಸರ್ವಶಾಂತಿಕರಣವಿಧಾನವನ್ನೂ, ಮಧುಪರ್ಕವನ್ನು ದೇವರಿಗೆ ಮಾತ್ರವಲ್ಲದೆ ಮರಣೋನ್ಮುಖನಾದವನಿಗೆ ಕೊಡುವುದರಿಂದಾಗುವ ಫಲವನ್ನೂ ಮಧುಪರ್ಕದ ಮತ್ತು ಸರ್ವಶಾಂತಿಯ ವಿಚಾರ ಶ್ರವಣಾದಿಫಲವನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹ ಪುರಾಣದಲ್ಲಿ ನೂರತೊಂಬತ್ತೆರಡನೆಯ ಅಧ್ಯಾಯ.

ತ್ರಿನವತ್ಯಧಿಕಶತತಮೋಽಧ್ಯಾಯಃ

ಅಥ ನಚಿಕೇತಪ್ರಯಾಣವರ್ಣನಂ

॥ ಲೋಮಹರ್ಷಣ ಉವಾಚ ॥

ವ್ಯಾಸಶಿಷ್ಯಂ ಮಹಾಪ್ರಾಜ್ಞಂ ವೇದವೇದಾಂಗ ಪಾರಗಂ ।
ದ್ವಾರದೇಶೇ ಸಮಾಸೀನಂ ಕೃತಪೂರ್ವಾಹ್ಣಿಕಕ್ರಿಯಂ ॥ ೧ ॥

ಅಶ್ವಮೇಧೇ ತಥಾವೃತ್ತೇ ರಾಜಾನ್ವೈ ಜನಮೇಜಯಃ ।
ಬ್ರಹ್ಮವಧ್ಯಾಭಿಭೂತಸ್ಯ ದೀಕ್ಷಾಂ ದ್ವಾದಶವಾರ್ಷಿಕೀಂ ॥ ೨ ॥

ಪ್ರಾಯಶ್ಚಿತ್ತಂ ಚರಿತ್ವೈವಂ ಆಗತೋ ಗಜಸಾಹ್ವಯಂ ।
ಉಪಗಮ್ಯ ಮಹಾತ್ಮಾನಂ ಜಾಹ್ನವೀತೀರಸಂಶ್ರಯಂ ॥ ೩ ॥

ನೂರ ತೊಂಬತ್ತಮೂರನೆಯ ಅಧ್ಯಾಯ

ನಚಿಕೇತಪ್ರಯಾಣವರ್ಣನೆ.

೧-೩. ಜನಮೇಜಯರಾಜನು ಅಶ್ವಮೇಧಯಜ್ಞವನ್ನು ಮಾಡಿ. ಹಸ್ತಿನಾವತಿಯಲ್ಲಿ ಗಂಗಾತೀರದಲ್ಲಿರುವಾಗ ಅತನೆಡೆಗೆ ವ್ಯಾಸಮುನಿಯ ಶಿಷ್ಯನೂ, ಮಹಾಪ್ರಾಜ್ಞನೂ, ವೇದವೇದಾಂಗ ಪಾರಂಗತನೂ ಬ್ರಹ್ಮಹತ್ಯೆಯ ಪಾಪಪರಿಹಾರಕ್ಕಾಗಿ ಹನ್ನೆರಡುವರ್ಷಕಾಲದ ದೀಕ್ಷೆಯ ಪ್ರಾಯಶ್ಚಿತ್ತವನ್ನು ಆಚರಿಸಿದವನೂ ಆದ ವೈಶಂಪಾಯನಮುನಿ ಬಂದನು. ಪೂರ್ವಾಹ್ಣಕರ್ಮಗಳನ್ನು ಮಾಡಿ ಬಂದು ಬಾಗಿಲಲ್ಲಿ ನಿಂತಿರುವ ಮಹಾತ್ಮನಾದ ಅತನನ್ನು ದೊರೆ ಎದಿರುಗೊಂಡು ಆದರಿಸಿದನು.

ಋಷಿಂ ಪರಮಸಂಪನ್ನಂ ವೈಶಂಪಾಯನಮಂಜಸಾ ।
ಕರ್ಮಣಾ ಪ್ರೇರಿತಸ್ತೇನ ಚಿಂತಾವ್ಯಾಕುಲಲೋಚನಃ ॥ ೪ ॥

ಕುರೂಣಾಂ ಪಶ್ಚಿಮೋ ರಾಜಾ ಪಶ್ಚಾತ್ತಾಪೇನ ಪೀಡಿತಃ ।
ವ್ಯಾಸಶಿಷ್ಯಮುಪಾಗಮ್ಯ ಪ್ರಶ್ನಮೇನಮಪೃಚ್ಛತ ॥ ೫ ॥

॥ ಜನಮೇಜಯ ಉವಾಚ ॥

ಭಗವನ್ ಜಾಯತೇ ತೀವ್ರಂ ಚಿಂತಯಾನಸ್ಯ ಸುವ್ರತ ।
ಕರ್ಮಪಾಕಫಲಂ ಯಸ್ಮಿನ್ಮಾನುಷ್ಯೈರುಪಭುಜ್ಯತೇ ॥ ೬ ॥

ಏತದಿಚ್ಛಾಮ್ಯಹಂ ಶ್ರೋತುಂ ಕೀದೃಶಂತು ಯಮಾಲಯಂ ।
ಕಿಂ ಪ್ರಮಾಣಂಚ ಕಿಂರೂಪಂ ಕಥಂ ಗತ್ವಾ ಸ ಪಶ್ಯತಿ ॥ ೭ ॥

ನಗಚ್ಛೇಯಂ ಕಥಂ ವಿಪ್ರ ಪ್ರೇತರಾಜ್ಞೋನಿವೇಶನಂ ।
ಧರ್ಮರಾಜಸ್ಯ ಧೀರಸ್ಯ ಸರ್ವಲೋಕಾನುಶಾಸಿನಃ ॥ ೮ ॥

೪-೫. ಕುರುವಂಶದ ಕಡೆಯರಾಜನಾದ ಆಜನಮೇಜಯನು ಪಶ್ಚಾತ್ತಾಪ ಪೀಡಿತನೂ ಚಿಂತೆಯಿಂದ ವ್ಯಾಕುಲನೇತ್ರನೂ, ತನ್ನ ಕರ್ಮದಿಂದ ಪ್ರೇರಿತನೂ ಆಗಿ, ವ್ಯಾಸಶಿಷ್ಯನೂ ಪರಮಸಂಪನ್ನನೂ ಆದ ಆ ವೈಶಂಪಾಯನನನ್ನು ಬೇಗನೆ ಮುಂದಿನ ಪ್ರಶ್ನೆಯನ್ನು ಕೇಳಿದನು.

೬-೮. ಜನಮೇಜಯ— ಭಗವಂತನೇ, ಸುವ್ರತಾ ತೀವ್ರವಾಗಿ ಚಿಂತಿಸುವ ನನಗೆ ನಿಮ್ಮನ್ನು ಕೇಳಬೇಕೆಂದೆನಿಸುತ್ತದೆ. ಕರ್ಮಪಾಕಫಲವನ್ನು ಮನುಷ್ಯರು ಎಲ್ಲಿ ಅನುಭವಿಸುವರು ? ಯಮಾಲಯವು ಎಂತಹುದು ? ಅದರ ಪ್ರಮಾಣವೇನು ? ಅದರ ರೂಪವು ಹೇಗಿದೆ ? ಮನುಷ್ಯನು ಹೋಗಿ ಅದನ್ನು ಹೇಗೆ ನೋಡುವನು ? ಬ್ರಾಹ್ಮಣನೇ, ಧೀರನೂ ಸರ್ವಲೋಕಕ್ಕೂ ಆಜ್ಞೆಮಾಡುವನೂ ಧರ್ಮರಾಜನೂ, ಆದ ಆ ಪ್ರೇತರಾಜನ ಮನೆಗೆ ನಾನು ಹೋಗದಿರುವುದಕ್ಕೆ ಉಪಾಯವಾವುದು ? ಇದೆಲ್ಲವನ್ನೂ ನಾನೂ ಕೇಳಲಿಚ್ಛಿಸುತ್ತೇನೆ.

ನೂರ ತ್ತೊಂಬತ್ತಮೂರನೆಯ ಅಧ್ಯಾಯ

॥ ಸೂತ ಉವಾಚ ॥

ಏವಂ ಪೃಷ್ಟೋಮಹಾತೇಜಾಃ ತೇನರಾಜ್ಞಾ ದ್ವಿಜೋತ್ತಮಃ ।
ಉವಾಚ ಮಧುರಂ ವಾಕ್ಯಂ ರಾಜಾನಂ ಜನಮೇಜಯಂ ॥ ೯ ॥

॥ ವೈಶಂಪಾಯನ ಉವಾಚ ॥

ಶೃಣು ರಾಜನ್ ಪುರಾವೃತ್ತಾಂ ಕಥಾಂ ಪರಮಶೋಭನಾಂ ।
ಧರ್ಮವೃದ್ಧಿಕರೀಂ ನಿತ್ಯಾಂ ಯಶಸ್ಯಾಂ ಕೀರ್ತಿವರ್ಧಿನೀಂ ॥ ೧೦ ॥

ಪಾವನೀಂ ಸರ್ವಪಾಪಾನಾಂ ಪ್ರವೃತ್ತಾಂ ಶುಭಕಾರಿಣೀಂ ।
ಇತಿಹಾಸಪುರಾಣಾನಾಂ ಕಥಾಂ ವೈ ವಿದುಷಾಂ ಪ್ರಿಯಾಂ ॥ ೧೧ ॥

ಕಶ್ಚಿದಾಸೀತ್ಪುರಾ ರಾಜನ್ ಋಷಿಃ ಪರಮಧಾರ್ಮಿಕಃ ।
ಉದ್ದಾಲಕ ಇತಿ ಖ್ಯಾತಃ ಸರ್ವವೇದಾಂಗ ತತ್ವವಿತ್ ॥ ೧೨ ॥

---

೯. ಸೂತಮುನಿ— ಆ ಜನಮೇಜಯರಾಜನು ಹೀಗೆ ಕೇಳಲು ಮಹಾ ತೇಜಸ್ಸೂ ದ್ವಿಜೋತ್ತಮನೂ ಆದ ಆ ವೈಶಂಪಾಯನನು ಇಂಪಾದ ಮಾತಿನಿಂದ ಆತನಿಗೆ ಹೇಳಿದನು.

೧೦–೧೧. ವೈಶಂಪಾಯನಮುನಿ— ದೊರೆಯೇ, ಪೂರ್ವದಲ್ಲಿ ನಡೆದುದೂ ಪರಮ ಮಂಗಳಕರವೂ, ಯಾವಾಗಲೂ ಯಶಸ್ಸನ್ನು ಪಡೆದಿರುವುದೂ, ಕೀರ್ತಿ ವರ್ಧಕವೂ, ಸರ್ವಪಾಪಗಳನ್ನೂ ಹೋಗಲಾಡಿಸುವುದೂ, ಇಹದಲ್ಲಿ ಶುಭಕರವೂ ವಿದ್ವಾಂಸರಿಗೆ ಪ್ರಿಯವೂ ಆದ ಇತಿಹಾಸಪುರಾಣಗಳಲ್ಲಿ ಹೇಳಿರುವ ಕಥೆಯೊಂ ದನ್ನು ಕೇಳು.

೧೨. ದೊರೆಯೇ, ಪೂರ್ವದಲ್ಲಿ ಪರಮಧಾರ್ಮಿಕನೂ, ಸರ್ವವೇದಾಂಗ ತತ್ವಜ್ಞನೂ ಉದ್ದಾಲಕನೆಂದು ಪ್ರಸಿದ್ಧನೂ ಆದ ಋಷಿಯೊಬ್ಬನಿದ್ದನು.

ತಸ್ಯ ಪುತ್ರೋ ಮಹಾತೇಜಾಃ ಯೋಗಮಾಸ್ಥಾಯ ಬುದ್ಧಿಮಾನ್ ।
ನಚಿಕೇತ ಇತಿಖ್ಯಾತಃ ಸರ್ವವೇದಾಂಗತತ್ವವಿತ್ ॥ ೧೩ ॥

ತೇನ ರುಷ್ಟೇನ ಶಪ್ತೋಽಭೂತ್ ಪುತ್ರಃ ಪರಮಧಾರ್ಮಿಕಃ ।
ಗಚ್ಛ ಶೀಘ್ರಂ ಯಮಂ ಪಶ್ಯ ಮಮಕ್ರೋಧೇನ ದುರ್ಮತೇ ॥ ೧೪ ॥

ತಥೇತ್ಯುಕ್ತ್ವಾ ಮಹಾತೇಜಾಃ ಪುತ್ರಃ ಪರಮಧಾರ್ಮಿಕಃ ।
ಚಿಂತಯಿತ್ವಾ ಮುಹೂರ್ತಂ ತು ಯೋಗಮಾಸ್ಥಾಯ ಬುದ್ಧಿಮಾನ್ ॥೧೫॥

ಕ್ಷಣೇನಾಂತರ್ಹಿತೋ ಜಾತಃ ಪಿತರಂ ಪ್ರತ್ಯುವಾಚ ಹ ।
ವಿನಯಾತ್ಪ್ರಸ್ಥಿತೋ ವಾಕ್ಯಂ ಭಾವೇನಚ ಸಮನ್ವಿತಂ ॥ ೧೬ ॥

ಮಾಭೂದ್ವಾಕ್ಯಂಚ ತೇ ಮಿಥ್ಯಾ ಧಾರ್ಮಿಕಸ್ಯ ಕದಾಚನ ।
ಗಮಿಷ್ಯಾಮಿ ಪುರಂ ರಮ್ಯಂ ಧರ್ಮರಾಜಸ್ಯ ಧೀಮತಃ ॥ ೧೭ ॥

ಇಹಚೈವ ಪುನಸ್ತಾವದಾಗಮಿಷ್ಯೇ ನ ಸಂಶಯಃ ॥ ೧೮ ॥

---

೧೩. ಆತನಿಗೆ ಮಹಾತೇಜಸ್ವಿಯೂ ಯೋಗಾಭ್ಯಾಸದಿಂದ ಬುದ್ಧಿವಂತನೂ ಸರ್ವವೇದಾಂಗತತ್ವವನ್ನರಿತವನೂ ನಚಿಕೇತನೆಂದು ಪ್ರಸಿದ್ಧನೂ ಆದ ಪುತ್ರನಿದ್ದನು.

೧೪. ಕೋಪಗೊಂಡ ಉದ್ದಾಲಕನು ಪರಮಧರ್ಮಿಷ್ಠನಾದ ಆಮಗನನ್ನು "ದುರ್ಮತಿಯೇ, ನನ್ನ ಕೋಪಕ್ಕೆ ಗುರಿಯಾದ ನೀನು ಬೇಗನೆ ಯಮನನ್ನು ನೋಡುಹೋಗು." ಎಂದು ಶಪಿಸಿದನು.

೧೫-೧೬. "ಹಾಗೆಯೇ ಆಗಲಿ" ಎಂದು ಹೇಳಿ ಮಹಾತೇಜನೂ ಪರಮಧಾರ್ಮಿಕನೂ ಬುದ್ಧಿವಂತನೂ ಆದ ಆಪುತ್ರನು ಹೋಚಿಸಿ, ಮುಹೂರ್ತಕಾಲ ಯೋಗಾಸಕ್ತನಾಗಿ ಅತರ್ಮುಖನಾಗಿದ್ದು, ಬಳಿಕ ವಿನಯಪೂರ್ವಕವಾಗಿ ತಂದೆಗೆ ಅಭಿಪ್ರಾಯ ಪೂರಿತವಾದ ಮಾತನ್ನು ಹೇಳಿದನು.

೧೭-೧೮ "ಅಪ್ಪಾ, ಧರ್ಮಾತ್ಮನಾದ ನಿನ್ನಮಾತು ಎಂದೂ ಸುಳ್ಳಾಗದಿರಲಿ. ನಾನು ಧೀಮಂತನಾದ ಯಮಧರ್ಮರಾಜನ ಮನೋಹರವಾದ ಪುರಕ್ಕೆ ಹೋಗುತ್ತೇನೆ. ಮತ್ತೆ ಸಂಶಯವಿಲ್ಲದೇ ಇಲ್ಲಿ ಬರುತ್ತೇನೆ."

॥ ಪಿತೋವಾಚ ॥

ಏಕಸ್ತ್ವಮಸಿ ವತ್ಸಶ್ಚ ನಾನ್ಯೋ ಬಂಧುರ್ವಿಧೀಯತೇ ।
ಅಧರ್ಮಂ ಚಾನೃತಂ ಚಾಸ್ತು ತ್ವಕೀರ್ತಿರ್ವಾಪಿ ಪುತ್ರಕ ॥ ೧೯ ॥

ಮಿಥ್ಯಾಭಿಶಂಸಿನಂ ತಾತ ಯಥೇಷ್ಟಂ ತಾರಯಿಷ್ಯಸಿ ।
ರೋಷೇಣಹಿ ಮೃಷಾವಾದೀ ನಿರ್ದಯಃ ಕುಲಪಾಂಸನಃ ॥ ೨೦ ॥

ಅಪ್ರವೃತ್ತಸ್ತ್ವಸಂಭಾಷ್ಯೋ ಯೋಽಹಂ ಮಿಥ್ಯಾಪ್ರಯುಕ್ತವಾನ್ ।
ತ್ವಾಂ ವೈ ಧರ್ಮಸಮಾಚಾರಮಭಿಧಾನೇನ ಶಪ್ತವಾನ್ ॥ ೨೧ ॥

ಅಹಂ ಪುತ್ರ ನಸದ್ವಾದೀ ನಕ್ಷಮೋ ಧರ್ಮದೂಷಿತಂ ।
ಮಮ ತ್ವಂ ಹಿ ಮಹಾಭಾಗ ನಿತ್ಯಂ ಚಿತ್ತಾನುಪಾಲಕಃ ॥ ೨೨ ॥

---

೧೯. ತಂದೆ— ಮಗುವೇ, ನನಗ ನೀನೊಬ್ಬನೇ ಮಗನಾಗಿದ್ದೀಯೆ. ಬೇರಾವನೂ ನನಗೆ ಬಂಧುವಾಗುವುದಿಲ್ಲ. ಅಧರ್ಮವೋ ಸುಳ್ಳೋ ಆಗಲಿ ಅಪಕೀರ್ತಿಯಾದರೂ ಬರಲಿ.

೨೦–೨೧. ಅಪ್ಪಾ, ಸುಳ್ಳುಹೇಳುವ ನನ್ನನ್ನು ನೀನು ಬೇಕಾದಹಾಗೆ ಉತ್ತಾರಣಗೊಳಿಸುವೆ. ರೋಷದಿಂದ ಸುಳ್ಳುಗಾರನೂ ದಯೆಯಿಲ್ಲದವನೂ ಕುಲದೂಷಕನೂ ಧರ್ಮದಲ್ಲಿ ಅಪ್ರವೃತ್ತನೂ ಅಸಂಭಾಷ್ಯನೂ ಕಪಟವನ್ನಾಚರಿಸುವವನೂ ಆದ ನಾನು ನಿನ್ನನ್ನು ಸುಮ್ಮನೇ ಅರ್ಥವಿಲ್ಲದ ಮಾತಿನಿಂದ ಬೈದಿದ್ದೇನೆ.

೨೨. ಮಗನೇ, ನಾನು ಒಳ್ಳೆಯದನ್ನು ಹೇಳುವನಲ್ಲ. ನನ್ನ ಧರ್ಮದಲ್ಲಿ ದೂಷಣೆಯನ್ನು ಸಹಿಸುವುದಿಲ್ಲ. ಮಹಾಭಾಗ್ಯನೇ, ನೀನು ಯಾವಾಗಲೂ ನನ್ನ ಚಿತ್ತವನ್ನು ಪರಿಪಾಲಿಸುವವನು.

ಧರ್ಮಜ್ಞಾಶ್ಚ ಯಶಸ್ವೀ ಚ ನಿತ್ಯಂ ಕ್ಷಾಂತೋ ಜಿತೇಂದ್ರಿಯಃ ।
ಶುಶ್ರೂಷುರನಹಂವಾದೀ ಶಕ್ತಸ್ತಾರಯಿತುಂ ಮಮ ॥ ೨೩ ॥

ಯಾಚಿತಸ್ತ್ವಂ ಮಯಾ ಪುತ್ರ ಗಂತುಂ ನೈ ತತ್ರ ನಾರ್ಹಸಿ ॥ ೨೪ ॥

ಯದಿ ವೈವಸ್ವತೋ ರಾಜಾ ತತ್ರ ಪ್ರಾಪ್ತಂ ಯದೃಚ್ಛಯಾ ।
ರೋಷೇಣ ತ್ವಾಂ ಮಹಾತೇಜಾಃ ವಿಸೃಜೇನ್ನ ಕದಾಚನ ॥ ೨೫ ॥

ವಿನಶ್ಯೇಯ ಮಹಂ ಪಶ್ಯ ಕುಲಸೇತುವಿನಾಶನಃ ।
ಧಿಕ್ಕೃತಃ ಸರ್ವಲೋಕೇನ ಪಾಪಕರ್ತಾ ನರಾಧಮಃ ॥ ೨೬ ॥

ನರಕಸ್ಯ ಪುದಿತ್ಯಾಖ್ಯಾ ದುಃಖಂತು ನರಕಂ ವಿದುಃ ।
ಪುತಃ ತ್ರಾಣಂ ಭವೇತ್ಪುತ್ರಾತ್ ಇಹತ್ರಚ ಪರತ್ರಚ ॥ ೨೭ ॥

---

೨೩. ಧರ್ಮವನ್ನರಿತವನೂ ಕೀರ್ತಿವಂತನೂ ಸದಾ ಕ್ಷಮಾಶೀಲನೂ ಜಿತೇಂದ್ರಿಯನೂ ಶುಶ್ರೂಷಾಪರನೂ ಅಹಂಕಾರರಹಿತನೂ ಆದ ನೀನು ನನ್ನನು ಉತ್ತಾರಣಮಾಡಲು ಶಕ್ತನಾಗಿದ್ದೀಯೆ.

೨೪. ಪುತ್ರನೇ, ನನ್ನಿಂದ ಯಾಚಿತನಾದ ನೀನು ಅಲ್ಲಿಗೆ ಹೋಗುವುದು ಉಚಿತವಲ್ಲ.

೨೫. ಮಹಾತೇಜನಾದ ಯಮರಾಜನು ಆಕಸ್ಮಾತ್ತಾಗಿ ಅಲ್ಲಿಗೆ ಹೋದ ನಿನ್ನನ್ನು ನೋಡಿದರೆ, ರೋಷವುಳ್ಳವನಾಗುವನು. ಎಂದಿಗೂ ನಿನ್ನನ್ನು ಹಿಂದಕ್ಕೆ ಕಳುಹಿಸಲಾರನು.

೨೬. ಕುಲಸೇತುನಾಶಕನೂ ನರಾಧಮನೂ, ಪಾಪಕರ್ತೃವೂ ಆದ ನಾನು ಸರ್ವಲೋಕದಿಂದಲೂ ಧಿಕ್ಕೃತನಾಗಿ ಹಾಳಾಗುತ್ತೇನೆ ನೋಡು.

೨೭. ನರಕಕ್ಕೆ ಪುತ್ ಎಂದು ಹೆಸರು ದುಃಖವನ್ನೇ ನರಕವೆನ್ನುವರು. ಮಗನು ತಂದೆಯನ್ನು ಆಪುನ್ನಾಮನರಕದಿಂದ ತಪ್ಪಿಸಿ ಇಹಪರಗಳಲ್ಲೂ ರಕ್ಷಿಸುವನು.

ಹುತಂ ದತ್ತಂ ತಪಸ್ತಪ್ತಂ ಪಿತರಶ್ಚಾಪಿ ಪೋಷಿತಾಃ ।
ಅಪುತ್ರಸ್ಯಹಿ ತತ್ಸರ್ವಂ ಮೋಘಂ ಭವತಿ ನಿಶ್ಚಯಃ ॥ ೨೮ ॥

ಶುಶ್ರೂಷಾವಾನ್ ಭವೇಚ್ಛೂದ್ರೋ ವೈಶ್ಯೋವಾ ಕೃಷಿ ಜೀವನಃ ।
ಸರ್ವ ಗೋಪ್ತಾತು ರಾಜನ್ಯೋ ಬ್ರಾಹ್ಮಣೋವಾ ಸ್ವಕರ್ಮಕೃತ್ ॥ ೨೯ ॥

ತಪ್ತೋವಾ ವಿಪುಲಂ ತಪ್ತ್ವಾ ದತ್ವಾ ದಾನಮನುತ್ತಮಂ ।
ಅಪುತ್ರೋ ನಾಪ್ನುಯಾತ್ಸ್ವರ್ಗಂ ಯಥಾ ತಾತ ಮಯಾಶ್ರುತಂ ॥ ೩೦ ॥

ಪುತ್ರೇಣ ಲಭತೇ ಜನ್ಮ ಪೌತ್ರೇಣತು ಪಿತಾಮಹಃ ।
ಪುತ್ರಸ್ಯ ಚ ಹಿ ಪೌತ್ರೇಣ ಮೋದತೇ ಪ್ರಪಿತಾಮಹಃ ॥ ೩೧ ॥

ನಹಾಸ್ಯಾಮೀತಿ ವತ್ಸತ್ವಾಂ ಮಮವಂಶವಿವರ್ಧನಂ ।
ಯಾಚ್ಯಮಾನಃ ಪ್ರಯತ್ನೇನ ತತ್ರಗಂತುಂ ನಚಾರ್ಹಸಿ ॥ ೩೨ ॥

---

೨೮. ಅಪುತ್ರನಾದವನು ಹೋಮಮಾಡಿದುದೂ, ದಾನವೂ, ಪಿತೃಗಳನ್ನು ತೃಪ್ತಿಪಡಿಸಿದುದೂ ಎಲ್ಲವೂ ನಿರರ್ಥಕವಾಗುವುದು. ಸಂಶಯವಿಲ್ಲ.

೨೯-೩೦. ಮಗುವೇ, ಶೂದ್ರನು ಶುಶ್ರೂಷೆಮಾಡುವನೂ, ವೈಶ್ಯನು ಕೃಷಿ ಜೀವಿಯೂ, ಕ್ಷತ್ರಿಯನೂ ಸರ್ವರಕ್ಷಕನೂ ಬ್ರಾಹ್ಮಣನು ಸತ್ಕರ್ಮಮಾಡುವವನೂ ಆಗಿರಬೇಕು. ಹೀಗಿದ್ದೂ ಬೇಕಾದಷ್ಟು ತಪಸ್ಸನ್ನುಮಾಡಿದರೂ ಅತ್ಯುತ್ತಮವಾದ ದಾನವನ್ನುಮಾಡಿದರೂ ಪುತ್ರಹೀನನಾಗಿದ್ದರೆ ಸ್ವರ್ಗವನ್ನು ಪಡೆಯಲಾರನೆಂದು ನಾನು ಕೇಳಿದ್ದೇನೆ.

೩೧. ತಂದೆಯು ಮಗನಿಂದಲೂ, ಅಜ್ಜನು ಮೊಮ್ಮಗನಿಂದಲೂ, ಮುತ್ತಜ್ಜನು ಮರಿಮಗನಿಂದಲೂ ಜನ್ಮವನ್ನು ಪಡೆದು ಸಂತೋಷಪಡುವನು

೩೨. ಮಗುವೇ, ಹೀಗೆ ನನ್ನ ವಂಶವರ್ಧನನಾದ ನಿನ್ನನ್ನು ನಾನು ಹಾಸ್ಯಮಾಡುತ್ತಿಲ್ಲ. ಪ್ರಯತ್ನಪೂರ್ವಕವಾಗಿ ಬೇಡಿಸಿಕೊಳ್ಳುತ್ತಿರುವ ನೀನು ಯಮಲೋಕಕ್ಕೆ ಹೋಗುವುದು ಉಚಿತವಲ್ಲ.

॥ ವೈಶಂಪಾಯನ ಉವಾಚ ॥

ಏವಂ ವಿಲಪಮಾನಂತಂ ಪಿತರಂ ಪ್ರತ್ಯುವಾಚಹ ।
ಹೃಷ್ಟಪುಷ್ಟವಪುರ್ಭೂತ್ವಾ ಪುತ್ರಃ ಪರಮಧಾರ್ಮಿಕಃ ॥ ೩೩ ॥

॥ ಪುತ್ರ ಉವಾಚ ॥

ನವಿಷಾದಸ್ತ್ವಯಾ ಕಾರ್ಯೋ ದ್ರಕ್ಷ್ಯಸೇ ಮಾಮಿಹಾಗತಂ ।
ದೃಷ್ಟ್ವಾಚ ತಮಹಂ ದೇವಂ ಸರ್ವಲೋಕನಮಸ್ಕೃತಂ ॥ ೩೪ ॥

ಆಗಚ್ಛಾಮಿ ಪುನಶ್ಚಾತ್ರ ನಭಯಂ ಮೇಽಸ್ತಿ ಮೃತ್ಯುತಃ ।
ಪೂಜಯಿಷ್ಯತಿ ಮಾಂ ತಾತ ರಾಜಾ ತ್ವದನುಕಂಪಯಾ ॥ ೩೫ ॥

ಸತ್ಯೇ ತಿಷ್ಠ ಮಹಾಭಾಗ ಸತ್ಯಂ ಚ ಪರಿಪಾಲಯ ।
ಸತ್ಯಂ ಸ್ವರ್ಗಸ್ಯ ಸೋಪಾನಂ ಪಾರವಾರಸ್ಯ ನೌರಿವ ॥ ೩೬ ॥

---

೩೩. ವೈಶಂಪಾಯನ — ಹೀಗೆ ಅಳುತ್ತಿರುವ ತಂದೆಗೆ ಪರಮಧಾರ್ಮಿಕನಾದ ಆ ನಚಿಕೇತನು ಹರ್ಷದಿಂದ ಉಬ್ಬಿದ ಮೈಯುಳ್ಳವನಾಗಿ ಹೀಗೆ ಹೇಳಿದನು.

೩೪–೩೫. ನಚಿಕೇತ — ಅಪ್ಪಾ, ನೀನು ದುಃಖಿಸಬೇಕಾದುದಿಲ್ಲ. ಹಿಂದಿರುಗಿ ಬರುವ ನನ್ನನ್ನು ನೀನು ಮತ್ತೆ ನೋಡುವೆ. ಸರ್ವಲೋಕನಮಸ್ಕೃತನಾದ ಆ ಧರ್ಮದೇವನನ್ನು ನೋಡಿ, ಮತ್ತೆ ನಾನು ಇಲ್ಲಿಗೆ ಬರುವೆನು. ನನಗೆ ಮೃತ್ಯುವಿನಿಂದ ಭಯವಿಲ್ಲ. ನಿನ್ನ ಕೃಪೆಯಿಂದ ಯಮರಾಜನು ನನ್ನನ್ನು ಪೂಜಿಸುವನು.

೩೬. ಪೂಜ್ಯನೇ, ಸತ್ಯದಲ್ಲಿರು. ಸತ್ಯವನ್ನು ಪರಿಪಾಲಿಸು. ಸಾಗರಕ್ಕೆ ಹಡಗಿನಂತೆ ಸ್ವರ್ಗಕ್ಕೆ ಸತ್ಯವೇ ಸೋಪಾನ (ಮೆಟ್ಟಲು).

ಸೂರ್ಯಸ್ತಪತಿ ಸತ್ಯೇನ ವಾತಃ ಸತ್ಯೇನ ವಾತಿ ಚ |
ಅಗ್ನಿರ್ದಹತಿ ಸತ್ಯೇನ ಸತ್ಯೇನ ಪೃಥಿವೀ ಸ್ಥಿತಾ || ೩೭ ||

ಉದಧಿರ್ಲಂಘಯೇನ್ನೈವ ಮರ್ಯಾದಾಂ ಸತ್ಯಪಾಲಿತಃ |
ಮಂತ್ರಾಃ ಪ್ರಯುಕ್ತಾಃ ಸತ್ಯೇನ ಸರ್ವಲೋಕಹಿತಾಯತೇ || ೩೮ ||

ಸತ್ಯೇನ ಯಜ್ಞಾ ವರ್ತಂತೇ ಮಂತ್ರಪೂತಾಃ ಸುಪೂಜಿತಾಃ |
ಸತ್ಯೇನವೇದಾ ಗಾಯಂತಿ ಸತ್ಯೇ ಲೋಕಾಃ ಪ್ರತಿಷ್ಠಿತಾಃ || ೩೯ ||

ಸತ್ಯಂ ಗಾತಿ ತಥಾ ಸಾಮ ಸರ್ವಂ ಸತ್ಯೇ ಪ್ರತಿಷ್ಠಿತಂ |
ಸತ್ಯಂ ಸ್ವರ್ಗಶ್ಚ ಧರ್ಮಶ್ಚ ಸತ್ಯಾದನ್ಯಂ ನವಿದ್ಯತೇ || ೪೦ ||

ಸತ್ಯೇನ ಸರ್ವಂ ಲಭತೇ ಯಥಾ ತಾತ ಮಯಾ ಶ್ರುತಂ |
ನ ಹಿ ಸತ್ಯಮತಿಕ್ರಮ್ಯ ವಿದ್ಯತೇ ಕಿಂಚಿದುತ್ತಮಂ || ೪೧ ||

---

೩೭. ಸೂರ್ಯನು ಸತ್ಯದಿಂದಲೇ ತಾಪವುಳ್ಳವನಾಗಿರುವನು. ವಾಯುವು ಸತ್ಯದಿಂದಲೇ ಚಲಿಸುತ್ತದೆ. ಅಗ್ನಿಯು ಸತ್ಯದಿಂದಲೇ ಸುಡುತ್ತದೆ. ಸತ್ಯದಿಂದಲೇ ಭೂಮಿಯು ನಿಂತಿದೆ.

೩೮. ಸಮುದ್ರವು ಸತ್ಯದಿಂದ ಪಾಲಿತವಾಗಿಯೇ ಎಲ್ಲೆಯನ್ನು ಮೀರದೇ ಇದೆ. ಸತ್ಯದಿಂದ ಪ್ರಯೋಗಿಸುವ ಮಂತ್ರವು ಸರ್ವಲೋಕಕ್ಕೂ ಹಿತ (ಕರ) ವಾಗುತ್ತದೆ.

೩೯. ಮಂತ್ರಪವಿತ್ರಗಳಾದ ಯಜ್ಞಗಳು ಸತ್ಯದಿಂದಲೇ ನಡೆಯುತ್ತವೆ. ಸತ್ಯದಿಂದಲೇ ಸಂಪೂಜಿತವಾದ ವೇದಗಳು ಹಾಡುವವು. ಸತ್ಯದಲ್ಲೇ ಲೋಕಗಳು ಸ್ಥಿರವಾಗಿವೆ.

೪೦. ಸಾಮವೇದವು, ಸತ್ಯವನ್ನೇ ಹಾಡುತ್ತದೆ. ಸರ್ವವೂ ಸತ್ಯದಲ್ಲಿ ನಿಂತಿದೆ. ಸತ್ಯವೇ ಸ್ವರ್ಗ, ಸತ್ಯವೇ ಧರ್ಮ. ಸತ್ಯಕ್ಕಿಂತ ಬೇರೆ ಯಾವುದೂ ಇಲ್ಲ.

೪೧. ಅಪ್ಪಾ ನಾನು ಕೇಳಿರುವುದನ್ನು ಹೇಳುತ್ತೇನೆ. ಮನುಷ್ಯನು ಸತ್ಯದಿಂದಲೇ ಎಲ್ಲವನ್ನೂ ಪಡೆಯುವನು. ಸತ್ಯಕ್ಕಿಂತಲೂ ಉತ್ತಮವಾದುದು ಯಾವುದೂ ಇಲ್ಲ.

ದೇವದೇವೇನ ರುದ್ರೇಣ ವೇದಗರ್ಭಃ ಪುರಾಕಿಲ ।
ಸತ್ಯಸ್ಥಿತೇನ ದೇವಾನಾಂ ಪರಿತ್ಯಕ್ತೋ ಮಹಾತ್ಮನಾ ॥ ೪೨ ॥

ದೀಕ್ಷಾಂ ಧಾರಯತೇ ಬ್ರಹ್ಮಾ ಸತ್ಯೇನೈವ ಸುಯಂತ್ರಿತಃ ।
ಔರ್ವೇಣಾಗ್ನಿಸ್ತಥಾಕ್ಷಿಪ್ತಃ ಸತ್ಯೇನ ಬಡಬಾಮುಖೇ ॥ ೪೩ ॥

ಸಂವರ್ತೇನ ಪುರಾ ತಾತ ಸರ್ವೇ ಲೋಕಾಃ ಸದೈವತಾಃ ।
ದೇವಾನಾಮನುಕಂಪಾರ್ಥಂ ಧೃತಾ ವೀರ್ಯವತಾ ತದಾ ॥ ೪೪ ॥

ಪಾತಾಲೇ ಪಾಲಯನ್ ಸತ್ಯಂ ಬದ್ಧೋ ವೈರೋಚನೋ ವಸನ್ ।
ವರ್ಧಮಾನೋ ಮಹಾಶೃಂಗೈಃ ಶತಶೃಂಗೋ ಮಹಾಗಿರಿಃ ॥ ೪೫ ॥

ಸ್ಥಿತಃ ಸತ್ಯೇ ಮಹಾವಿಂಧ್ಯೋ ವರ್ಧಮಾನೋ ನವರ್ಧತೇ ।
ಸರ್ವಂ ಚರಾಚರಮಿದಂ ಸತ್ಯೇನ ಶ್ರೀಯತೇ ಜಗತ್ ॥ ೪೬ ॥

---

೪೨. ಸತ್ಯದಲ್ಲೇ ಇರುವ ದೇವದೇವನೂ ಮಹಾತ್ಮನೂ ಆದ ರುದ್ರನಿಂದ ಪೂರ್ವದಲ್ಲಿ ದೇವತೆಗಳಿಗಾಗಿ ವೇದಗರ್ಭನು (ಷಣ್ಮುಖ?) ಪರಿತ್ಯಕ್ತನಾದನು.

೪೩. ಸತ್ಯದಿಂದಲೇ ಪೂರ್ಣಬದ್ಧನಾದ ಬ್ರಹ್ಮನು ದೀಕ್ಷೆಯನ್ನು ವಹಿಸಿದ್ದಾನೆ. ಸತ್ಯದಿಂದಲೇ ಔರ್ವನು ಬಡಬಾಮುಖದಲ್ಲಿ ಅಗ್ನಿಯನ್ನು ಇಟ್ಟನು.

೪೪. ತಂದೆಯೇ, ಪೂರ್ವದಲ್ಲಿ ವೀರ್ಯವಂತನಾದ ಸಂವರ್ತನು ಸತ್ಯದಿಂದಲೇ ದೇವತೆಗಳ ಕೃಪೆಗಾಗಿ ದೇವಸಹಿತವಾದ ಸರ್ವಲೋಕಗಳನ್ನೂ ಧರಿಸಿದನು.

೪೫–೪೬. ಪಾತಾಳದಲ್ಲಿ ವಾಸಿಸುತ್ತಿದ್ದ ಬಲಿಯು ಸತ್ಯವನ್ನು ಪಾಲಿಸುತ್ತ ಬದ್ಧನಾದನು. ಶತಶೃಂಗ ಮಹಾಗಿರಿಯು ಮಹಾಶಿಖರಗಳಿಂದ ಬೆಳೆಯುತ್ತ ಸತ್ಯದಿಂದಿರುವನು. ಬೆಳೆಯುತ್ತಿದ್ದ ಮಹಾವಿಂಧ್ಯವು ಸತ್ಯಕ್ಕೆ ಕಟ್ಟುಬಿದ್ದು ಬೆಳೆಯದೆ ಮಲಗಿದೆ. ಚರಾಚರಾತ್ಮಕವಾದ ಈ ಸರ್ವಜಗತ್ತೂ ಸತ್ಯದಿಂದ ಐಶ್ವರ್ಯವುಳ್ಳದ್ದಾಗಿ ಬೆಳೆಯುತ್ತಿದೆ.

ಗೃಹಧರ್ಮಾಶ್ಚ ಯೇ ದೃಷ್ಟಾ ವಾನಪ್ರಸ್ಥಾಶ್ಚ ಶೋಭಿತಾಃ ।
ಪತೀನಾಂಚ ಗತಿಃ ಶುದ್ಧಾ ಯೇ ಚಾನ್ಯೇ ವ್ರತಸಂಸ್ಥಿತಾಃ ॥ ೪೭ ॥

ಅಶ್ವಮೇಧಸಹಸ್ರಂಚ ಸತ್ಯಂಚ ತುಲಯಾ ಧೃತಂ ।
ಅಶ್ವಮೇಧಸಹಸ್ರಾದ್ಧಿ ಸತ್ಯಮೇವ ವಿಶಿಷ್ಯತೇ ॥ ೪೮ ॥

ಸತ್ಯೇನ ಪಾಲ್ಯತೇ ಧರ್ಮೋ ಧರ್ಮೋರಕ್ಷತಿ ರಕ್ಷಿತಃ ।
ತಸ್ಮಾತ್ಸತ್ಯಂ ಕುರುಷ್ವಾದ್ಯ ರಕ್ಷ ಆತ್ಮಾನಮಾತ್ಮನಾ ॥ ೪೯ ॥

ಏವಮುಕ್ತ್ವಾ ಹೃಷ್ಟಪುಷ್ಟಃ ಸ್ವೇನ ದೇಹೇನ ಸುವ್ರತ ।
ತಪಸಾ ಪ್ರಾಪ್ತಯೋಗಸ್ತು ಜಿತಾತ್ಮಾ ಕೃತಸಂಯಮಃ ॥ ೫೦ ॥

೪೭–೪೮. ನಾವು ನೋಡಿರುವ ಗೃಹಸ್ಥಧರ್ಮಗಳು ವಾನಪ್ರಸ್ಥಧರ್ಮಗಳು ಶುದ್ಧವಾದ ರಾಜಧರ್ಮಗಳು ಇತರ ಎಲ್ಲಾ ವ್ರತಧರ್ಮಗಳು ಸಾವಿರಾರು ಅಶ್ವಮೇಧ ಯಜ್ಞಗಳು ಇವುಗಳನ್ನು ಸತ್ಯದೊಡನೆ ತೂಗಿದರೆ ಸಾವಿರಾರು ಅಶ್ವಮೇಧಾದಿಗಳಿಗಿಂತಲೂ ಸತ್ಯವೇ ಹೆಚ್ಚು ತೂಕವಾಗಿರುತ್ತದೆ.

೪೯. ಸತ್ಯದಿಂದ ಧರ್ಮರಕ್ಷಣೆಯಾಗುತ್ತದೆ. ಹೀಗೆ ರಕ್ಷಿತವಾದ ಧರ್ಮವು ನಮ್ಮನ್ನು ರಕ್ಷಿಸುವುದು. ಆದುದರಿಂದ ನೀನು ಈಗ ಸತ್ಯವನ್ನನುಸರಿಸು. ನಿನ್ನನ್ನು ನೀನು ರಕ್ಷಿಸಿಕೊ.

೫೦–೫೧. ಸುವ್ರತ (ಜನಮೇಜಯ)ನೇ, ಜಿತಾತ್ಮನೂ, ಜಿತೇಂದ್ರಿಯನೂ ಆದ ಋಷಿಕುಮಾರ ನಚಿಕೇತನು ತಂದೆಗೆ ಹೀಗೆ ಮೇಲಿನ ಮಾತನ್ನು

ಋಷಿಪುತ್ರೋ ಮಹಾತೇಜಾಃ ಸತ್ಯವಾಗನಸೂಯಕಃ ।
ಪ್ರಾಪ್ತಶ್ಚ ಪರಮಂ ಸ್ಥಾನಂ ಯತ್ರ ರಾಜ್ಞೋ ಯಮಸ್ಯತು ॥ ೫೧ ॥

ಇತಿ ಶ್ರೀವರಾಹಪುರಾಣೇ ಪ್ರಾಗಿತಿಹಾಸೇ ಸಂಸಾರಚಕ್ರೇ ನಚಿಕೇತ
ಪ್ರಯಾಣಂ ನಾಮ ತ್ರಿನವತ್ಯಧಿಕಶತತಮೋಽಧ್ಯಾಯಃ

ಹೇಳಿ, ಸಂತೋಷದಿಂದ ಉಬ್ಬಿದವನಾಗಿ ತಪಸ್ಸಿನಿಂದ ಯೋಗವನ್ನು ಪಡೆದು, ಸಶರೀರನಾಗಿಯೇ ಯಮರಾಜನಗರವನ್ನು ಸೇರಿದನು.

ಅಧ್ಯಾಯದ ಸಾರಾಂಶ— ಹಸ್ತಿನಾವತಿಯಲ್ಲಿದ್ದ ಜನಮೇಜಯರಾಜನು ತನ್ನಬಳಿಗೆ ಬಂದ ವೈಶಂಪಾಯನ ಮುನಿಯನ್ನು ಯಮಲೋಕದ ವಿಚಾರವನ್ನು ತಿಳಿಸಬೇಕೆಂದು ಪ್ರಾರ್ಥಿಸಲು ಮುನಿಯು ನಚಿಕೇತನು, ತನ್ನ ತಂದೆಯ ಸತ್ಯರಕ್ಷಣೆಗಾಗಿ ಯಮಲೋಕಕ್ಕೆ ಹೊರಟುಹೋದ ವಿಚಾರವನ್ನು ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರತೊಂಬತ್ತಮೂರನೆಯ ಅಧ್ಯಾಯ.

॥ ಶ್ರೀಃ ॥

ಚತುರ್ನವತ್ಯಧಿಕಶತತಮೋಽಧ್ಯಾಯಃ

ಅಥ ನಚಿಕೇತಾಗಮನ ವರ್ಣನಂ

॥ ವೈಶಂಪಾಯನ ಉವಾಚ ॥

ಗತಶ್ಚ ಪರಮಂ ಸ್ಥಾನಂ ಯತ್ರ ರಾಜಾ ದುರಾಸದಃ ।
ಅರ್ಚಿತಸ್ತು ಯಥಾನ್ಯಾಯಂ ದೃಷ್ಟ್ವೈವತು ವಿಸರ್ಜಿತಃ ॥ ೧ ॥

ತತೋ ಹೃಷ್ಟಮನಾ ರಾಜನ್ ಪುತ್ರಂ ದೃಷ್ಟ್ವಾ ತಪೋನಿಧಿಃ ।
ಪರಿಷ್ವಜ್ಯಚ ಬಾಹುಭ್ಯಾಂ ಮೂರ್ಧನ್ಯಾಘ್ರಾಯ ಯತ್ನತಃ ॥
ದಿವಂಚ ಪೃಥಿವೀಂ ಚೈವ ನಾದಯಾಮಾಸ ಹೃಷ್ಟವತ್ ॥ ೨ ॥

ಸ ಸಂಹೃಷ್ಟಮನಾಃ ಪ್ರೀತಃ ತಾನುವಾಚ ತಪೋಧನಾನ್ ॥ ೩ ॥

ನೂರತೊಂಬತ್ತನಾಲ್ಕನೆಯ ಅಧ್ಯಾಯ

ನಚಿಕೇತಾಗಮನವರ್ಣನೆ

೧. ವೈಶಂಪಾಯನ—ಜನಮೇಜಯನೇ, ನಚಿಕೇತನು ದುರಾಸದನಾದ ಯಮರಾಜನ ಪರಮನಿಲಯವನ್ನು ಸೇರಿದನು. ಯಮನು ಅವನನ್ನು ನೋಡಿ ಯಥಾವಿಧಿಯಾಗಿ ಪೂಜಿಸಿ, ಹಿಂದಕ್ಕೆ ಕಳುಹಿಸಿಬಿಟ್ಟನು.

೨. ದೊರೆಯೇ, ಮತ್ತೆ ಮಗನನ್ನು ಕಂಡ ಉದ್ದಾಲಕನು ಬಹು ಸಂತೋಷದಿಂದ ಆತನನ್ನು ಅಪ್ಪಿಕೊಂಡು ನೆತ್ತಿಯನ್ನಾಘ್ರಾಣಿಸಿ ತನ್ನ ಹರ್ಷ ಧ್ವನಿಯಿಂದ ಭೂವ್ಯಾಕಾಶಗಳನ್ನೆಲ್ಲಾ ತುಂಬಿಸಿದನು.

೩-೪. ಪ್ರೀತನೂ ಸಂತುಷ್ಟನೂ ಆದ ಆ ಉದ್ದಾಲಕನು ಅಲ್ಲಿರುವ ತಪಸ್ವಿ

ಪಶ್ಯಂತು ಮಮ ಪುತ್ರಸ್ಯ ಪ್ರಭಾವಂ ದಿವ್ಯತೇಜಸಃ ।
ಯಮಸ್ಯ ಭವನಂ ಗತ್ವಾ ಪುನಃ ಶೀಘ್ರಮಿಹಾಗತಃ ॥ ೪ ॥

ಪಿತೃಸ್ನೇಹಾನುಭಾವೇನ ಗುರುಶುಶ್ರೂಷಯಾಪಿಚ ।
ದೇವೇನ ಹೇತುನಾ ಚಾಯಂ ಜೀವನ್ ದೃಷ್ಟೋಮಯಾಸುತಃ ॥ ೫ ॥

ಲೋಕೇ ಮತ್ಸದೃಶೋ ನಾಸ್ತಿ ಪುಮಾನ್ ಭಾಗಸಮನ್ವಿತಃ ।
ಏಷ ಮೃತ್ಯುಮುಖಂ ಗತ್ವಾ ಮಮ ಪುತ್ರ ಇಹಾಗತಃ ॥ ೬ ॥

ಕಚ್ಚಿತ್ತ್ವಂ ನಹತೋ ವತ್ಸ ನೈವ ಬದ್ಧೋ ಯಮಾಲಯೇ ।
ಕಚ್ಚಿತ್ತೇ ಸಶಿವಃ ಪಂಥಾ ಗಚ್ಛತಸ್ತವ ಪುತ್ರಕೆ ॥ ೭ ॥

ಕಚ್ಚಿತ್ತೇ ವ್ಯಾಧಯೋ ಘೋರಾ ನಾನ್ವಗಚ್ಛನ್ಯಮಾಲಯೇ ।
ಕಿಮಪೂರ್ವಂ ತ್ವಯಾದೃಷ್ಟಂ ಕಚ್ಚಿತ್ತುಷ್ಟೋ ಮಹಾತಪಾಃ ।
ಕಚ್ಚಿದ್ರಾಜಾತ್ವಯಾ ದೃಷ್ಟಃ ಪ್ರೇತಾನಾಮಧಿಪೋ ಬಲೀ ॥ ೮ ॥

ಗಳನ್ನು ಕುರಿತು " ದಿವ್ಯತೇಜನಾದ ನನ್ನ ಮಗನ ಮಹಿಮೆಯನ್ನು ನೋಡಿರಿ. ಯಮಗೃಹಕ್ಕೆ ಹೋಗಿ ಮತ್ತೆ ಬೇಗನೆ ಇಲ್ಲಿಗೇ ಬಂದಿದ್ದಾನೆ.

೫. ಇವನ ಪಿತೃಸ್ನೇಹದ ಮತ್ತು ಗುರುಶುಶ್ರೂಷೆಯ ಪ್ರಭಾವದಿಂದಲೂ ದೇವಕೃಪೆಯಿಂದಲೂ ಯಮಲೋಕಕ್ಕೆ ಹೋಗಿಯೂ ಜೀವಿಸುತ್ತಿರುವ ಈ ನನ್ನ ಪುತ್ರನನ್ನು ನೋಡಿದೆನು.

೬. ಲೋಕದಲ್ಲಿ ನನ್ನಂತಹ ಭಾಗ್ಯಶಾಲಿಯಾದ ಮನುಷ್ಯನು ಬೇರಾವನೂ ಇಲ್ಲ. ಈ ನನ್ನ ಮಗನು ಮೃತ್ಯುವಿನ ಬಾಯಿಗೆಹೋಗಿ, ಮತ್ತೆ ಇಲ್ಲಿ ಬಂದಿದ್ದಾನೆ.

೭ ಮಗೂ, ಯಮಾಲಯದಲ್ಲಿ ನಿನ್ನನ್ನು ಹೊಡೆಯಲಿಲ್ಲವೆ! ಬಂಧಿಸಲಿಲ್ಲವೆ! ಮಗನೇ, ಹೋಗುವಾಗ ನಿನಗೆ ದಾರಿಯು ಸುಖಕರವಾಗಿದ್ದಿತೇ!

೮. ಯಮಗೃಹದಲ್ಲಿ ಘೋರವಾದ ವ್ಯಾಧಿಗಳು ನಿನಗಂಟಲಿಲ್ಲವೇ! ಅಲ್ಲಿ ನೀನು ನೋಡಿದ ಅಪೂರ್ವವೇನು? ಪ್ರೇತಾಧಿಪತಿಯೂ ಮಹಾತಪನೂ ಬಲಶಾಲಿಯೂ ಆದ ಯಮರಾಜನನ್ನು ನೋಡಿದೆಯಾ ?ಸಂತೋಷವುಳ್ಳವನಾಗಿದ್ದನೆ ?

ಪರುಷೇಣ ನಕಚ್ಚಿತ್ತ್ವಾಂ ಯಮಃ ಪಶ್ಯತಿ ಚಕ್ಷುಷಾ ॥ ೯ ॥

ಕಚ್ಚಿನ್ನ ಕುಷ್ಟೋ ಭಗವಾನ್ ತ್ವಾಂ ದೃಷ್ಟ್ವಾ ಸ್ವಯಮಾಗತಂ ।
ಕಚ್ಚಿಚ್ಛೀಘ್ರಂ ವಿಸೃಷ್ಟೋಽಸಿ ಧರ್ಮರಾಜೇನ ಪುತ್ರಕ ॥ ೧೦ ॥

ಕಚ್ಚಿದ್ದ್ವಾರಿಕಾಸ್ತತ್ರ ನ ರೌದ್ರಾಸ್ತ್ವಾಂ ಯಮಾಲಯೇ ।
ಕಚ್ಚಿದ್ರಾಜಜ್ಞಾ ವಿಸೃಷ್ಟಂಕು ನಾಬಾಧಂತೇತರೇ ಜನಾಃ ।
ಕಚ್ಚಿತ್ಪಂಥಾ ಸ್ತ್ವಯಾಲಬ್ಧೋ ನಿರ್ಗಮೋವಾ ಯಮಾಲಯೇ ॥ ೧೧ ॥

ಅಯಂ ಮಮ ಸುತಃ ಪ್ರಾಪ್ತಃ ಪ್ರಸನ್ನಾ ಮಮ ದೇವತಾಃ ॥ ೧೨ ॥

ಋಷಯಶ್ಚ ಮಹಾಭಾಗಾ ದ್ವಿಜಾಶ್ಚ ಸುಮಹಾವ್ರತಾಃ ।
ಯನ್ಮೇ ವತ್ಸಃ ಪುನಃ ಪ್ರಾಪ್ತೋ ಯಮಲೋಕಾದ್ದುರಾಸದಾರ್ ॥ ೧೩ ॥

೯–೧೦. ಯಮನು ನಿನ್ನನ್ನು ಕ್ರೂರದೃಷ್ಟಿಯಿಂದ ನೋಡಲಿಲ್ಲವೆ ! ತಾನಾಗಿ ಬಂದಿರುವ ನಿನ್ನನ್ನು ನೋಡಿ ಆ ಪೂಜ್ಯನು ಕೋಪಿಸಿಕೊಳ್ಳಲಿಲ್ಲವೆ ! ಮಗು, ಆ ಧರ್ಮರಾಜನು ನಿನ್ನನ್ನು ಬೇಗನೆ ಹಿಂದಕ್ಕೆ ಕಳುಹಿಸಿಬಿಟ್ಟನಲ್ಲವೆ !

೧೧. ಯಮಾಲಯದ ದ್ವಾರಪಾಲಕರು ಭಯಂಕರರಲ್ಲವೆ ! ಯಮರಾಜನು ಬೀಳ್ಕೊಟ್ಟ ನಿನ್ನನ್ನು ಅಲ್ಲಿ ಇತರರು ಹಿಂಸಿಸಲಿಲ್ಲವೆ ? ಯಮಾಲಯದಿಂದ ಹೊರಟುಬರಲು ದಾರಿಯುಸಿಕ್ಕಿತೆ ?

೧೨–೧೩. ಮಹಾಭಾಗ್ಯರಾದ ಋಷಿಗಳೇ ಉತ್ತಮವ್ರತರಾದ ದ್ವಿಜರೇ, ನನ್ನ ಈ ಮಗುವು ಬಂದನು. ದುರಾಸದವಾದ ಯಮಲೋಕದಿಂದ ನನ್ನ ಮಗುನು ಹಿಂದಿರುಗಿ ಬಂದುದರಿಂದ ನನ್ನ ವಿಷಯದಲ್ಲಿ ದೇವತೆಗಳು ಪ್ರಸನ್ನರಾದರೆಂದು ಭಾವಿಸುತ್ತೇನೆ. ”

ಏವಮಾಭಾಷಮಾಣಂತು ಶ್ರುತ್ವಾ ಸರ್ವೇ ವನೌಕಸಃ ।
ತ್ಯಕ್ತ್ವಾ ವ್ರತಾನಿ ಸರ್ವಾಣಿ ನಿಯಮಾಂಶ್ಚ ತಥೈವಚ ॥ ೧೪ ॥

ಜಪಂತಶ್ಚೈವ ಜಪ್ಯಾನಿ ಪೂಜಯಂತಶ್ಚ ದೇವತಾಃ ।
ಉದೂರ್ಧ್ವಬಾಹವಃ ಕೇಚಿತ್ ತಿಷ್ಠಂತೋನ್ಯೇ ಸುದಾರುಣಂ ॥ ೧೫ ॥

ಏಕಪಾದೇನ ತಿಷ್ಠಂತಃ ಪಶ್ಯಂತೋನ್ಯೇ ದಿವಾಕರಂ ।
ಏವಮೇವ ಪರಿತ್ಯಜ್ಯ ನಿಯಮಾನ್ ಪೂರ್ವಸಂಚಿತಾನ್ ॥ ೧೬ ॥

ವೈಶ್ವಾನರಾ ಮಹಾಭಾಗಾ ತಪಸಾ ಸಂಶಿತವ್ರತಾಃ ।
ಆಗತಾಸ್ತ್ವರಿತಂ ದ್ರಷ್ಟುಂ ನಚಿಕೇತಂ ಸುತಂ ತದಾ ॥ ೧೭ ॥

ದಿಗ್ವಾಸಸಶ್ಚ ಋಷಯಃ ದಂತೋಲೂಖಲಿನಸ್ತಥಾ ।
ಅಶ್ಮಕೊಟಾಶ್ಚ ಮೌನಾಶ್ಚ ಶೀರ್ಣಪರ್ಣಾಂಬುಭೋಜನಾಃ ॥ ೧೮ ॥

ಧೂಮಪಾಶ್ಚ ತಥಾಚಾನ್ಯೇ ತಪ್ಯಮಾನಾಶ್ಚ ಪಾವಕೇ ।
ಪರಿವಾರ್ಯ ತಥಾ ದೃಷ್ಟ್ವಾ ತಸ್ಯಪುತ್ರಂ ತಪೋನಿಧಿಂ ॥ ೧೯ ॥

೧೪–೧೭. ಹೀಗೆ ಕೂಗಿ ಹೇಳುತ್ತಿರುವುದನ್ನು ಆ ವನವಾಸಿಗಳೆಲ್ಲರೂ ಕೇಳಿ, ತಮ್ಮ ಸರ್ವವ್ರತಗಳನ್ನೂ ನಿಯಮಗಳನ್ನೂ ಬಿಟ್ಟು ಎಂದರೆ ಮಂತ್ರಜಪ ಮಾಡುತ್ತಿದ್ದವರೂ, ದೇವತೆಗಳನ್ನು ಪೂಜಿಸುತ್ತಿದ್ದವರೂ, ತೋಳುಗಳನು ಮೇಲೆತ್ತಿ ಅತಿ ಘೋರವಾಗಿ ನಿಂತಿರುವವರೂ, ಸೂರ್ಯನನ್ನುನೋಡುತ್ತ ಒಂದು ಕಾಲಿನಿಂದನಿಂತಿರುವವರೂ ಆದ ಮಹಾತಪಸ್ವಿಗಳೂ ವೈಶ್ವಾನರರೂ ವ್ರತಿಗಳೂ ಹಿಂದಿನಿಂದ ತಾವು ಮಾಡುತ್ತಿದ್ದುದನ್ನು ಹಾಗೆಯೇ ನಿಲ್ಲಿಸಿಬಿಟ್ಟು ನಚಿಕೇತಕುಮಾರನನ್ನು ನೋಡುವುದಕ್ಕಾಗಿ ಬೇಗನೆ ಬಂದರು.

೧೮–೧೯. ದಿಗಂಬರರೂ, ದಂತೋಲೂಖಲಿಗಳೂ(?) ಕಲ್ಲಿನಂತೆ ಮೌನದಿಂದ ನಿಂತಿರುವವರೂ, ಸಣ್ಣ ಸಣ್ಣೆಲೆಗಳನ್ನು ತಿಂದು ಜೀವಿಸುವವರೂ ಅಗ್ನಿಯ ನಡುವೆ ತಪಸ್ಸನ್ನು ಮಾಡುತ್ತಿರುವವರೂ, ಇತರರೂ ಬಂದು ತಪೋನಿಧಿಯಾದ ಆ ಉದ್ದಾಲಕಪುತ್ರನನ್ನು ಸುತ್ತುಗಟ್ಟಿದರು.

ಉಪವಿಷ್ಟಾಸ್ತಥಾಚಾನ್ಯೇ ಸ್ಥಿತಾಚಾನ್ಯೇ ಸುಯಂತ್ರಿತಾಃ |
ತೇ ಸರ್ವೇ ತಂತು ಪೃಚ್ಛಂತಿ ಋಷಯೋ ವೇದಪಾರಗಾಃ || ೨೦ ||

ತಂ ನಾಚಿಕೇತಕಂ ದೃಷ್ಟ್ವಾ ಯಮಲೋಕಾದಿಹಾಗತಂ |
ಭೀತಾಸ್ತತ್ರ ಸ್ಥಿತಾ ಹೃಷ್ಟಾ ಕೇಚಿತ್ಕೌತೂಹಲಾನ್ವಿತಾಃ || ೨೧ ||

ಕೇಚಿದ್ವಿಮನಸಶ್ಚೈವ ಕೇಚಿತ್ಸಂಶಯವಾದಿನಃ |
ತಮೂಚುಃ ಸಹಿತಾಸ್ಸರ್ವೇ ಋಷಿಪುತ್ರಂ ತಪೋಧನಂ || ೨೨ ||

|| ಋಷಯ ಊಚುಃ ||

ಭೋ ಭೋ ಸತ್ಯವ್ರತಾಚಾರ ಗುರುಶುಶ್ರೂಷಣೇ ರತ |
ನಚಿಕೇತಸುತ ಪ್ರಾಜ್ಞ ಸ್ವಧರ್ಮಪರಿಪಾಲಕ || ೨೩ ||

ಬ್ರೂಹಿ ಸತ್ಯಂ ತ್ವಯಾ ದೃಷ್ಟಂ ಶ್ರುತಂ ಚ ಸವಿಶೇಷಕಂ |
ಋಷೀಣಾಂ ಶ್ರೋತುಕಾಮಾನಾಂ ಪಿತುಶ್ಚೈವ ವಿಶೇಷತಃ || ೨೪ ||

---

೨೦. ವೇದಪಾರಂಗತರಾದ ಆ ಋಷಿಗಳಲ್ಲಿ ಕೆಲವರು ಅಲ್ಲಿ ಕುಳಿತು ಕೊಂಡೂ ಕೆಲವರು ನಿಂತುಕೊಂಡೂ ಶಾಂತರಾಗಿ ಆ ನಚಿಕೇತನನ್ನು ಕೇಳಲಾ ರಂಭಿಸಿದರು.

೨೧–೨೨. ಯಮಲೋಕದಿಂದ ಅಲ್ಲಿಗೆ ಮತ್ತೆ ಬಂದಿರುವ ಆ ನಚಿಕೇತ ನನ್ನು ನೋಡಿ, ಕೆಲವರು ಭೀತರಾಗಿಯೂ ಕೆಲವರರು ಸಂತೋಷಕುತೂಹಲ ಗಳುಳ್ಳವರಾಗಿಯೂ ಕೆಲವರು ಅಸಮಾಧಾನವುಳ್ಳವರಾಗಿಯೂ, ಕೆಲವರು ಯಮಲೋಕಕ್ಕೆ ಹೋಗಿ ಬಂದಿರುವುದು ಸಂಶಯವೆಂದು ಹೇಳುವವರಾಗಿಯೂ ಇದ್ದು ಎಲ್ಲರೂ ಒಟ್ಟಾಗಿ ಆ ನಚಿಕೇತನನ್ನು ಪ್ರಶ್ನಿಸಿದರು.

೨೩–೨೪. ಋಷಿಗಳು—ಎಲೈ ಸತ್ಯವ್ರತಾಚಾರ, ಗುರುಸೇವಾನಿರತ, ಸ್ವಧರ್ಮಪರಿಪಾಲಕ, ಮಗೂ ನಚಿಕೇತಾ, ನೀನು ಯಮಲೋಕದಲ್ಲಿ ನೋಡಿದು ದನ್ನೂ ಕೇಳಿದುದನ್ನೂ ನಿನ್ನಿಂದ ಕೇಳಬೇಕೆಂದಿರುವ ಈ ಋಷಿಗಳಿಗೂ ಮುಖ್ಯ ವಾಗಿ ನಿಮ್ಮ ತಂದೆಗೂ ನಿಜವಾಗಿ ಹೇಳು.

ಅಪಿಗುಹ್ಯಂ ಚ ವಕ್ತವ್ಯಂ ಪೃಷ್ಟೇಽಸತಿ ವಿಶೇಷತಃ ।
ಸರ್ವಸ್ಯಾಪಿ ಭಯಂ ತೀವ್ರಂ ಯದ್ದ್ವಾರಾ ಪ್ರತಿದೃಶ್ಯತೇ ॥ ೨೫ ॥

***ಮೃತೋಽನ್ಯೈವ ಪರಸ್ತಾತ್ರ ದೃಶ್ಯತೇ ಕಾಲಮಾಯಯಾ ।**
ಸ್ವಕರ್ಮ ಭುಜ್ಯತೇ ತಾತ ಪ್ರಯತ್ನೇನ ಚ ಮಾನವೈಃ ॥ ೨೬ ॥

ಇಹಚ್ಚೈವ ಕೃತಂ ಯತ್ತು ತತ್ಪರತ್ರೋಽಪಭುಜ್ಯತೇ ।
ಕರೋತಿ ಯದಿ ತತ್ಕರ್ಮ ಶುಭಂ ವಾ ಯದಿವಾಽಶುಭಂ । ॥ ೨೭ ॥

ತಥಾತ್ರ ದೃಶ್ಯತೇ ಕಾಲೇ ಕಾಲಸ್ಯೈವತು ಮಾಯಯಾ ।
ಮ್ರಿಯತೇಽಚ ಯಥಾ ಜಂತುಃ ಯಥಾ ಗರ್ಭೇಽಚ ತಿಷ್ಠತಿ ।
ತಸ್ಯಪಾರಂ ನಗಚ್ಛಂತಿ ಬಹವಃ ಪಾರಚಿಂತಕಾಃ ॥ ೩೮ ॥

---

೨೫. ಯಾವ ಯಾಮ ಅಥವಾ ಯಮಲೋಕದಿಂದ ಎಲ್ಲರಿಗೂ ಅತಿ ಭೀತಿಯಾಗುವುದೊ ಆತನ ಮತ್ತು ಆ ಲೋಕದ ವಿಚಾರವು ರಹಸ್ಯವಾದುದಾಗಿದ್ದರೂ ನಾವು ವಿಶೇಷವಾಗಿ ಕೇಳುತ್ತಿರುವುದರಿಂದ ನೀನು ಹೇಳಲೇ ಬೇಕು.

೨೬. ಅಪ್ಪಾ, ಮನುಷ್ಯರು ತಮ್ಮ ತಮ್ಮ ಕರ್ಮವನ್ನು ಪ್ರಯತ್ನಪೂರ್ವಕವಾಗಿ ಅನುಭವಿಸಲೇ ಬೇಕು. ಆದರೆ ಕಾಲಮಾಯೆಯಿಂದ ನಿನ್ನಂತೆ ಸತ್ತು ಮತ್ತೆ ಬಂದವರು ಲೋಕದಲ್ಲಿ ಮತ್ತಾರೂ ಕಾಣಿಸುವುದಿಲ್ಲ.

೨೭. ಈ ಲೋಕದಲ್ಲಿ ಮನುಷ್ಯರು ಶುಭವಾದ ಅಥವಾ ಅಶುಭವಾದ ಕರ್ಮಗಳನ್ನು ಮಾಡಿದರೆ ಅದಕ್ಕನುಸಾರವಾದ ಶುಭಾಶುಭ ಫಲಗಳನ್ನು ಪರಲೋಕದಲ್ಲಿ ಅನುಭವಿಸುವರು.

೨೮-೨೯. ಈಗ ನೋಡಿದರೆ ಎಲ್ಲವೂ ಕಾಲಮಾಯೆಂದೇ ಕಾಣುತ್ತದೆ. ಪ್ರಾಣಿಯು ಹೇಗೆ ಸಾಯುವುದೋ ಹೇಗೆ ಗರ್ಭದಲ್ಲಿ ನಿಲ್ಲುವುದೋ ಏಕೆ ಈ ಹುಟ್ಟುಸಾವುಗಳ ಕೊನೆಗಾಣುವುದಿಲ್ಲವೋ ? ಪರಲೋಕಚಿಂತಕರು ಹಲವ

---

* ಮೃತಂ ನ್ಯೈವಪರಂ

ತತ್ರ ಸ್ಥಿತೇಗತ್ಸರ್ವಜಂ ಲೋಭಮೋಹತಮೋವೃತಂ ।
ಚಿಂತಯೇತ ನಚಿಂತಾತ್ರ ಮೃಗಯಂತಿ ಚ ಯದ್ಧಿತಂ ॥ ೨೯ ॥

ಕರೋತಿ ಚಿತ್ರಗುಪ್ತಃ ಕಿಂ ಕಿಂಚ ಜಲ್ಪತ್ಯಸೌ ಪುನಃ ।
ಧರ್ಮರಾಜಸ್ಯ ಕಿಂರೂಪಂ ಕಾಲೋವಾ ಕಿದೃಶೋ ಮುನೇ ॥ ೩೦ ॥

ಕಿಂರೂಪಾ ವ್ಯಾಧಯಶ್ಚೈವ ವಿಪಾಕೋ ವಾಪಿ ಕಿದೃಶಃ ।
ಕಿಂಚ ಕುರ್ವನ್ ಪ್ರಮುಚ್ಯೇತ ಕಿಂವಾಕರ್ಮ ಸಮಾಚರೇತ್ ॥
ಆಸ್ಪದಂ ಸರ್ವಲೋಕಸ್ಯ ತತ್ಕರ್ಮ ದುರತಿಕ್ರಮಂ ॥ ೩೧ ॥

ಕ್ರೋಧಬಂಧನಜಂ ಕ್ಲೇಶಂ ಕರ್ಷಣಂ ಛೇದನಂ ತಥಾ ॥ ೩೨ ॥

ಯೇನ ಗಚ್ಛಂತಿ ವಿಪ್ರೇಂದ್ರ ಲೋಕೇ ಕರ್ಮ ವಿದೋ ಜನಾಃ ॥ ೩೩ ॥

ಸಿತಾತ್ಮಾನಃ ಕಥಂ ಯಾಂತಿ ಕಥಂ ಗಚ್ಛತಿ ಪಾಪಕೃತ್ ।
ಯಥಾ ಶ್ರುತಂ ಯಥಾ ದೃಷ್ಟಂ ಯಥಾ ಚೈವಾವಧಾರಿತಂ ॥ ೩೪ ॥

ರಿದ್ದರೂ ಲೋಭ ಮೋಹ ತಮೋವೃತವಾದ ಜಗತ್ತೆಲ್ಲವೂ ಮುಂದೆ ಹಿತವಾದು ದನ್ನು ಏಕೆ ಹುಡುಕುವುದಿಲ್ಲವೊ ! ಏಕೆ ಚಿಂತಿಸುವುದಿಲ್ಲವೊ !

೩೦. ಯಮಲೋಕದಲ್ಲಿ ಚಿತ್ರಗುಪ್ತನು ಮಾಡುವುದೇನು ? ಹೇಳುವುದೇನು ? ಯಮಧರ್ಮರಾಜನ ರೂಪವೆಂತಹುದು ? ಅಥವಾ ಕಾಲನೆಂಬುವನು ಎಂತಹನು ? ಮುನೀ.

೩೧. ಅಲ್ಲಿನ ವ್ಯಾಧಿಗಳು ಎಂತಹವು ? ಅವುಗಳ ದುಷ್ಪರಿಣಾಮವು ಎಂತಹುದು ? ಏನುಮಾಡಿ ಅದರಿಂದ ತಪ್ಪಿಸಿಕೊಳ್ಳಬಹುದು ? ಯಾವ ಕರ್ಮವನ್ನು ಮಾಡಲೇಬೇಕು ? ಯಾವ ಕರ್ಮವು ಐಚ್ಛಿಕವಾದುದು ?

೩೨-೩೪. ಬ್ರಾಹ್ಮಣೋತ್ತಮನೇ ಲೋಕದಲ್ಲಿ ಪಾಪಿಗಳು ಯಾವ ಕರ್ಮದಿಂದ ಕೋಪಬಂಧನದ ಕ್ಲೇಶವನ್ನೂ, ಸೆಳೆತವನ್ನೂ, ಛೇದನವನ್ನೂ ಪಡೆಯುವರು? ಮಹಾಭಾಗ್ಯನೇ, ಕರ್ಮಜ್ಞರಾದ ಪರಿಶುದ್ಧಾತ್ಮರು ಅಲ್ಲಿಗೆ ಹೇಗೆ ಹೋಗುವರು ? ಪಾಪಕಾರಿಯು ಹೇಗೆ ಹೋಗುವನು ? ನೀನು ಕೇಳಿದ ನೋಡಿದ ಮತ್ತು ವಿಮ

ಪ್ರಣಯಾತ್ಸೌಹೃದಾತ್ ಸ್ನೇಹಾತ್ ಅಸ್ಮಾಭಿರಭಿಪೃಚ್ಛಿತಂ ।
ವದಸರ್ವಂ ಮಹಾಭಾಗ ಯಾಥಾತಥ್ಯೇನ ವಿಸ್ತರಂ ॥೩೫ ॥

॥ ವೈಶಂಪಾಯನ ಉವಾಚ ॥

ಋಷಿಭಿಸ್ತ್ವೇವಮುಕ್ತಸ್ತು ನಚಿಕೇತೋ ಮಹಾಮುನಾಃ ।
ಯದುವಾಚ ಮಹಾರಾಜ ಶೃಣುತಜ್ಜನಮೇಜಯ ॥ ೩೬ ॥

ಇತಿ ಶ್ರೀ ವರಾಹಪುರಾಣೇ ಸಂಸಾರಚಕ್ರೇ ನಚಿಕೇತೋಪಾಖ್ಯಾನಂ
ನಾಮ ಚತುರ್ನವತ್ಯಧಿಕ ಶತತಮೋಧ್ಯಾಯಃ

ಕೇಸಿ ಅರಿತ ಎಲ್ಲವನ್ನೂ ಇದ್ದಂತೆ ನಿಜವಾಗಿಯೂ ವಿವರವಾಗಿಯೂ ಪ್ರೀತಿಯಿಂದಲೂ ಸೌಹಾರ್ದದಿಂದಲೂ ಸ್ನೇಹದಿಂದಲೂ ಕೇಳುತ್ತಿರುವ ನಮಗೆ ಹೇಳು.

೩೬. ವೈಶಂಪಾಯನಮುನಿ–ಜನಮೇಜಯಮಹಾರಾಜನೇ, ಋಷಿಗಳಿಂದ ಹೀಗೆ ಹೇಳಿಸಿಕೊಂಡ ಮಹಾಮುನನಾದ ನಚಿಕೇತನು ಅವರಿಗೆ ಏನ್ನು ಹೇಳಿದನೋ ಅದನ್ನು ಕೇಳು.

ಅ. ಸಾ.–ನಚಿಕೇತನು ಯಮಲೋಕಕ್ಕೆ ಹೋಗಿ ತಂದೆಯಬಳಿಗೆ ಮತ್ತೆ ಬಂದುದನ್ನೂ ಅದರಿಂದ ಆತನ ತಂದೆಗೂ ಆ ವನದ ಋಷಿಗೂ,ಆದ ಸಂತೋಷಾಶ್ಚರ್ಯಗಳನ್ನೂ ಅವರೆಲ್ಲರೂ ತಮ್ಮ ನಿಯಮಗಳನ್ನೆಲ್ಲಾ ಬಿಟ್ಟು, ನಚಿಕೇತನ ಹತ್ತಿರಬಂದು, ಅವನನ್ನು ಪ್ರಶ್ನಿಸಿದುದನ್ನೂ ವೈಶಂಪಾಯನ ಮುನಿಯು ಜನಮೇಜಯರಾಜನಿಗೆ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರತೊಂಬತ್ತನಾಲ್ಕನೆಯ ಅಧ್ಯಾಯ.

|| ಶ್ರೀಃ ||

ಪಂಚನವತ್ಯಧಿಕಶತತಮೋಽಧ್ಯಾಯಃ
ಅಥ ಯಮಲೋಕಸ್ಥಪಾಪಿವರ್ಣನಂ

|| ನಚಿಕೇತ ಉವಾಚ ||

ಕಥ್ಯಮಾನಂ ಮಯಾವಿಪ್ರಾಃ ಶೃಣ್ವಂತು ತಪಸಿ ಸ್ಥಿತಾಃ ।
ಪ್ರಣಮ್ಯ ತಸ್ಮೈ ದೇವಾಯ ಧರ್ಮರಾಜಾಯ ಧೀಮತೇ ॥
×ಸಂಸಾರಂತು ಯಥಾಶಕ್ತಿ ಕಥ್ಯಮಾನಂ ನಿಬೋಧತ || ೧ ||

ಅಸತ್ಯವಾದಿನೋ ಯೇಚ ಜಂತು ಸ್ತ್ರೀಬಾಲ ಘಾತುಕಾಃ ।
ತಥಾ ಬ್ರಹ್ಮಘ್ನಾಃ ಪಾಪಾ ಯೇಚ ವಿಶ್ವಾಸಘಾತುಕಾಃ || ೨ ||

ಯೇ ಯೇ ಶಠಾಃ ಕೃತಘ್ನಾಶ್ಚ ಲೋಲುಪಾಃ ಪಾರದಾರಿಕಾಃ || ೩ ||

ನೂರತೊಂಬತ್ತೈದನೆಯ ಅಧ್ಯಾಯ
ಯಮಲೋಕದ ಪಾಪಿಗಳ ವರ್ಣನೆ

೧. ನಚಿಕೇತ-ತಪೋನಿರತರಾದ ಬ್ರಾಹ್ಮಣರೇ, ಧೀಮಂತನೂ ದೇವನೂ ಆದ ಆ ಧರ್ಮರಾಜನಿಗೆ ವಂದಿಸಿ, ನಾನು ಹೇಳುವುದನ್ನು ಕೇಳಿ. ಯಥಾಶಕ್ತಿಯಾಗಿ ಸಂಸಾರ ವಿಚಾರವನ್ನು (ಸಾರವಾಗಿ) ಹೇಳುತ್ತೇನೆ ತಿಳಿಯಿರಿ.

೨-೧೮. ನಿರ್ಮಲರೇ! ಅಸತ್ಯವಾದಿಗಳೂ, ಜಂತುಗಳನ್ನೂ ಸ್ತ್ರೀಯರನ್ನೂ ಬಾಲಕರನ್ನೂ ಬ್ರಾಹ್ಮಣರನ್ನೂ ಕೊಲ್ಲುವ ಪಾಪಿಗಳೂ, ನಂಬಿಕೆಗೆ ದ್ರೋಹಮಾಡುವವರೂ, ಶಠರೂ, ಕೃತಘ್ನರೂ, ಪರಸ್ತ್ರೀಗಾಮಿಗಳೂ, ಕನ್ಯಾದೂಷಕರೂ, ಪಾಪಾಸ

× ಸಸಾರಂ (ಬೊಂ)

ಕನ್ಯಾನಾಂ ದೂಷಕಾ ಯೇಽಚ ಯೇ ಚ ಪಾಪರತಾ ನರಾಃ ।
ವೇದಾನಾಂ ದೂಷಕಾಶ್ಚೈವ ವೇದಮಾರ್ಗ ವಿಹಿಂಸಕಾಃ ॥ ೪ ॥

ಶೂದ್ರಾಣಾಂ ಯಾಜಕಾಶ್ಚೈವ ಹಾಹಾಭೂತಾ ದ್ವಿಜಾತಯಃ ।
ಅಯಾಜ್ಯ ಯಾಜಕಾಶ್ಚೈವ ಯೇಯೇ ಕುಷ್ಠಯುತಾ ನರಾಃ ॥ ೫ ॥

ಸುರಾಪೋಬ್ರಹ್ಮಹಾಚೈವ ಯೋದ್ವಿಜೋ ವೀರಘಾತುಕಃ ।
ತಥಾ ವಾರ್ಧುಷಿಕಾ ಯೇಚ ಜಿಹ್ಮಪ್ರೇಕ್ಷಾಶ್ಚ ಯೇ ನರಾಃ ॥
ಮಾತೃತ್ಯಾಗೀ ಪಿತೃತ್ಯಾಗೀ ಯಃ ಸ್ವಸಾಧ್ವೀಂ ಪರಿತ್ಯಜೇತ್ ॥ ೬ ॥
ಗುರುದ್ವೇಷೀದುರಾಚಾರೋ ದೂತಾಶ್ಚಾವ್ಯಕ್ತಭಾಷಿಣಃ ॥ ೭ ॥

ಗೃಹಕ್ಷೇತ್ರ ಹರಾಯೇಚ ಸೇತುಬಂಧವಿನಾಶಕಾಃ ।
ಅಪುತ್ರಾಶ್ಚಾಪ್ಯದಾರಾಶ್ಚ ಶ್ರದ್ಧಯಾಚ ವಿವರ್ಜಿತಾಃ ॥ ೮ ॥
ಅಶೌಚಾ ನಿರ್ದಯಾಃ ಪಾಪಾ ಹಿಂಸಕಾ ವ್ರತಭಂಜಕಾಃ ।
ಸೋಮವಿಕ್ರಯಿಣಶ್ಚೈವ ಸ್ತ್ರೀಜಿತಃ ಸರ್ವವಿಕ್ರಯೀ ॥ ೯ ॥

ಕ್ತರೂ ವೇದಮಾರ್ಗಹಿಂಸಕರೂ, ಶೂದ್ರರಿಂದ ಯಜ್ಞಮಾಡಿಸುವವರೂ, ಯಜ್ಞಾನಧಿಕಾರಿಗಳಿಂದ ಯಜ್ಞಮಾಡಿಸುವವರೂ, ಅತ್ಯಾಸೆಯಿಂದ ಹಾಹಾಕಾರಮಾಡುವ ದ್ವಿಜರೂ, ಕುಷ್ಠರೋಗಿಗಳೂ, ಮದ್ಯಪಾಯಿಗಳೂ, ವೀರಘಾತುಕರಾದ ದ್ವಿಜರೂ, ಬಡ್ಡಿಯಿಂದಲೇ ಜೀವಿಸುವವರೂ, ವಕ್ರದೃಷ್ಟಿಯುಳ್ಳವರೂ, ತಾಯಿಯನ್ನೋ ತಂದೆಯನ್ನೋ ಪತಿವ್ರತೆಯಾದ ಹೆಂಡತಿಯನ್ನೋ ಪರಿತ್ಯಜಿಸುವವನೂ, ಗುರುದ್ವೇಷಿಯೂ, ದುರಾಚಾರನೂ, ಸಂದೇಹವಾಗುವಂತೆ ಅಸ್ಪಷ್ಟವಾಗಿ ಮಾತನಾಡುವ ದೂತರೂ, ಮನೆಗಳನ್ನೂ ಹೊಲ ಗದ್ದೆ ತೋಟಗಳನ್ನೂ ಅಪಹರಿಸುವವರೂ, ಸೇತುವೆಗಳನ್ನೂ, ಅಣೆಕಟ್ಟುಗಳನ್ನೂ ಹಾಳುಮಾಡುವವರೂ, ಮಕ್ಕಳಿಲ್ಲದವರೂ, ಹೆಂಡತಿಯಿಲ್ಲದವರೂ, ಶ್ರದ್ಧೆಯಿಲ್ಲದವರೂ, ಶುಚಿತ್ವವಿಲ್ಲದವರೂ, ನಿರ್ದಯರಾದ ಪಾಪಿಗಳೂ, ಹಿಂಸಕರೂ, ವ್ರತಭಂಗಮಾಡುವವರೂ, ಸೋಮವಿಕ್ರಯಮಾಡುವವರೂ, ಸರ್ವವನ್ನೂ ವಿಕ್ರಯಿಸುವರೂ, ಸ್ತ್ರೀಜಿತರೂ,

ಭೂಮ್ಯಾಮನೃತವಾದೀಚ ವೇದಜೀವೀಚ ಯೋ ದ್ವಿಜಃ ।
ನಕ್ಷತ್ರೀಚ ನಿಮಿತ್ತೀಚ ಚಾಂಡಾಲಾಧ್ಯಾಪಕಸ್ತಥಾ ॥ ೧೦ ॥

ಸರ್ವಮೈಥುನ ಕರ್ತಾಚ ಅಗಮ್ಯಾಗಮನೇ ರತಃ ।
ಮಾಯಿಕಾ ರತಿಕಾಶ್ಚೈವ ತುಲಾಧಾರಾಶ್ಚಯೇ ನರಾಃ ॥ ೧೧ ॥

ಸರ್ವಪಾಪಸುಸಂಗಶ್ಚ ಚಿಂತಕಾ ಯೇಽತಿವೈರಿಣಃ ।
ಸ್ವಾಮ್ಯರ್ಥೇ ನಹತಾ ಯೇಚ ಯೇಚ ಯುದ್ಧಪರಾಙ್ಮುಖಾಃ ॥ ೧೨ ॥

ಪರವಿತ್ತಾಪಹಾರೀಚ ರಾಜಘಾತೀಚ ಯೋನರಃ ।
ಅಶಕ್ತಃ ಪಾಪಘೋಷಶ್ಚ ತಥಾ ಯೋ ಹ್ಯಗ್ನಿಜೀವಿನಃ ॥ ೧೩ ॥

ಶುಶ್ರೂಷಯಾಚ ಮುಕ್ತಾಯೇ ಲಿಂಗಿನಃ ಪಾಪಕರ್ಮಿಣಃ ।
ಪಾನಾಗಾರೀ ಚಕ್ರಿಣಶ್ಚ ನರಾಯೇಚಾಪ್ಯಧಾರ್ಮಿಕಾಃ ॥ ೧೪ ॥

ಸುಳ್ಳುಗಾರನೂ, ವೇದವಿಕ್ರಯಮಾಡುವ ಬ್ರಾಹ್ಮಣನೂ, ಜ್ಯೋತಿಷವನ್ನೂ ಶಕುನವನ್ನೂ ಹೇಳುವುದರಿಂದ ಜೀವಿಸುವವರೂ, ಚಾಂಡಾಲಾಧ್ಯಾಪಕನೂ, ವ್ಯಭಿಚಾರಿಯೂ, ಅಗಮ್ಯಾಗಮನಾಸಕ್ತನೂ, ಕಪಟಿಯೂ, ರತಿಲೋಲನೂ, ತಕ್ಕಡಿಯ ಆಧಾರದಿಂದಲೇ ಜೀವಿಸುವವರೂ, ಪಾಪಿಗಳ ಸಹವಾಸಮಾಡುವವರೂ, ಇತರರಿಗೆ ಕೇಡನ್ನೇ ಚಿಂತಿಸುವವರೂ, ಅತಿ ದ್ವೇಷಿಗಳೂ, ಯುದ್ಧದಲ್ಲಿ ತನ್ನ ಸ್ವಾಮಿಗಾಗಿ ಹತನಾದರೂಆಗದೆ ಹಿಮ್ಮೆಟ್ಟುವವರೂ, ಪರದ್ರವ್ಯಾಪಹರಣ ಮಾಡುವವರೂ, ರಾಜನನ್ನುಕೊಲ್ಲುವ ಪ್ರಜೆಯೂ, ತಾನು ಸತ್ಕರ್ಮಗಳಲ್ಲಿ ಅಶಕ್ತನಾಗಿ ಇತರರಿಗೂ ಪಾಪಕಾರ್ಯವನ್ನೇ ಬೋಧಿಸುವವನೂ, ಅಗ್ನಿಜೀವಿಗಳೂ ಮಾತಾಪಿತೃ ಗುರು ಶುಶ್ರೂಷೆಮಾಡದವರೂ, ಜೀವಿಕೆಗಾಗಿ ವೇಷವನ್ನು ಧರಿಸುವವರೂ, ಪಾಪಕರ್ಮಿಗಳೂ, ತಿಲಯಂತ್ರದಿಂದಲೇ ಜೀವಿಸುವವನೂ, ಮದ್ಯವಿಕ್ರಯಿಯೂ, ಅಧಾರ್ಮಿಕರೂ ದೇವಾಲಯಗಳನ್ನೂ, ಸತ್ರಗಳನ್ನೂ, ತೀರ್ಥಗಳನ್ನೂ

ದೇವಾಗಾರಾಂಶ್ಚ ಸತ್ರಾಣಿ ತೀರ್ಥವಿಕ್ರಯಿಣಸ್ತಥಾ ।
ವ್ರತವಿದ್ವೇಷಿಣೋ ಯೇಚ ತಥಾಽಸದ್ವಾದಿನೋನರಾಃ ॥ ೧೫ ॥

ಮಿಥ್ಯಾಚ ನಖರೋಮಾಣಿ ಧಾರಯಂತಿಚ ಯೇನರಾಃ ।
ಕೂಟಾ ವಕ್ರಸ್ವಭಾವಾಶ್ಚ ಕೂಟಶಾಸನಕಾರಿಣಃ ॥ ೧೬ ॥

ಅಜ್ಞಾನಾದವ್ರತೀಯಶ್ಚ ಯಶ್ಚಾಶ್ರಮಬಹಿಷ್ಕೃತಃ ।
ವಿಪ್ರಕೀರ್ಣಃ ಪ್ರತಿಗ್ರಾಹೀ ಸೂಚಕಸ್ತೀರ್ಥನಾಶಕಃ ॥ ೧೭ ॥

ಕಲಹೀಚ ಪ್ರತರ್ಕ್ಯಶ್ಚ ನಿಷ್ಠುರಶ್ಚ ನರಾಧಮಃ ।
ಏತೇ ಚಾನ್ಯೇಚ ಬಹವೋಹ್ಯನಿರ್ದಿಷ್ಟಾಃ ಸಹಸ್ರಶಃ
ಸ್ತ್ರಿಯೋನರಾಶ್ಚ ಗಚ್ಛಂತಿ ಯತ್ರತಚ್ಛೃಣುತಾಮಲಾಃ । ॥ ೧೮ ॥

ಕುರ್ವಂತೀಹ ಯಥಾ ಸರ್ವೇ ತತ್ರಗತ್ವಾಯಮಾಲಯೇ ।
ತಾನಿವೈ ಕಥಯಿಷ್ಯಾಮಿ ಶ್ರೂಯತಾಂ ದ್ವಿಜಸತ್ತಮಾಃ ॥ ೧೯ ॥

ವಿಕ್ರಯಿಸುವವರೂ, ವ್ರತದ್ವೇಷಿಗಳೂ, ಅಸದ್ವಾದಿಗಳೂ, ಕೃತಕವಾದ ಉಗುರು ಕೂದಲುಗಳನ್ನು ಧರಿಸುವವರೂ, ಮೋಸಗಾರರೂ, ವಕ್ರಸ್ವಭಾವವುಳ್ಳವರೂ, ಮೋಸದ ಶಾಸನ (ನಿಯಮ) ಗಳನ್ನು ಮಾಡುವ ಅಧಿಕಾರಿಗಳೂ, ಅಜ್ಞಾನವುಳ್ಳವನಾಗಿ ವ್ರತವನ್ನಾಚರಿಸದವನೂ, ಬ್ರಹ್ಮಚರ್ಯಾದ್ಯಾಶ್ರಮಬಹಿಷ್ಕೃತನೂ, ಉಂಛವೃತ್ತಿಯವನೂ, ಖಲನೂ, ತೀರ್ಥನಾಶಕನೂ, ಜಗಳಗಂಟಿಗನೂ, ನಾಸ್ತಿಕವಾದಿಯೂ, ಕಠೋರನಾದ ನರಾಧಮನೂ, ಇವರಲ್ಲದೆ ಅನಿರ್ದಿಷ್ಟರಾದ ಹಲವರು ಸ್ತ್ರೀಪುರುಷರೂ, ಸಾವಿರಗಟ್ಟಲೆಯಾಗಿ ಎಲ್ಲಿಗೆ ಹೋಗುವರೋ ಆ ಯಮಲೋಕದ ವಿಚಾರವನ್ನು ಕೇಳಿ.

೧೯. ದ್ವಿಜೋತ್ತಮರೇ, ಆಯಮಲೋಕಕ್ಕೆ ಹೋದವರೆಲ್ಲರೂ ಏನು ಮಾಡುವರೊ ಅದನ್ನು ಇಲ್ಲಿ ಹೇಳುತ್ತೇನೆ ಕೇಳಿ.

॥ ವೈಶಂಪಾಯನ ಉವಾಚ ॥

ಏವಂ ತಸ್ಯವಚಃ ಶ್ರುತ್ವಾ ಸರ್ವಏವ ತಪೋಧನಾಃ ।
ಪಪ್ರಚ್ಛುರ್ವಿಸ್ಮಯಾವಿಷ್ಟಾ ನಚಿಕೇತಮೃಷಿಂ ತದಾ ॥ ೨೦ ॥

॥ ಋಷಯ ಊಚುಃ ॥

ತ್ವಯಾಸರ್ವಂ ಯಥಾದೃಷ್ಟಂ ಬ್ರೂಹಿ ತತ್ತ್ವವಿದಾಂವರ ।
ಯಥಾ ಸ್ವರೂಪಃ ಕಾಲೋಽಸೌ ಯೇನಸರ್ವಂ ಪ್ರವರ್ತತೇ ॥ ೨೧ ॥

ಇಹ ಕರ್ಮಾಣಿ ಯಃ ಕೃತ್ವಾ ಪುರುಷೋಽಹ್ಯಲ್ಪಚೇತನಃ ।
ವಾರಯೇತ್ತಂತದಾ ತಂತು ಬ್ರಹ್ಮಲೋಕೇಽಪ ಸಪ್ರಭುಃ ॥ ೨೨ ॥

ಕಲ್ಪಾಂತಂ ಪಚ್ಯಮಾ ನೋಽಪಿ ದಹ್ಯಮಾನೋಽಪಿ ವಾ ಪುನಃ ।
ನನಾಶೋಽಹಿ ಶರೀರಸ್ಯ ತಸ್ಮಿನ್‌ದೇಶೇ ತಪೋಧನ ॥ ೨೩ ॥

---

೨೦. ವೈಶಂಪಾಯನಮುನಿ—ನಚಿಕೇತಮುನಿಯ ಈ ಮಾತನ್ನು ಕೇಳಿ ಆಶ್ಚರ್ಯಗೊಂಡ ಋಷಿಗಳು ಆತನನ್ನು ಮುಂದಿನಂತೆ ಪ್ರಶ್ನಿಸಿದರು.

೨೧. ಋಷಿಗಳು—ತತ್ವಜ್ಞೋತ್ತಮನೇ, ನೀನು ನೋಡಿದುದನ್ನೆಲ್ಲವನ್ನೂ ಇದ್ದಂತೆ ಹೇಳು. ಅಲ್ಲಿ ಯಾರಿಂದ ಎಲ್ಲವೂ ನಡೆಯುವುದೊ ಆ ಯಮನ ಸ್ವರೂಪವೆಂತಹುದು ?

೨೨. ಅಲ್ಪಚೇತನನಾದರೂ ಇಲ್ಲಿ ಯಾರು ಕರ್ಮಗಳನ್ನು ಸರಿಯಾಗಿ ಮಾಡಿ, ಆಯಮನಿಂದ ತಪ್ಪಿಸಿಕೊಳ್ಳುವನೋ ಆತನೇ ಬ್ರಹ್ಮಲೋಕವನ್ನೂ ಪಡೆಯಲು ಶಕ್ತನು.

೨೩. ತಪೋಧನನೇ, ಆ ಯಮಲೋಕದಲ್ಲಿ ಕಲ್ಪಾಂತದವರೆಗೂ ಬೇಯಿಸಿದರೂ ಸುಟ್ಟರೂ ಆದುಃಖವನ್ನನುಭವಿಸುವ ನಾರಕಿಯ ಶರೀರಕ್ಕೆ ನಾಶವೇ ಇಲ್ಲವೆ !

ಯಸ್ಯ ಯಸ್ಯಹಿ ಯತ್ಕರ್ಮ ಪಚ್ಯಮಾನಃ ಪುನಃ ಪುನಃ ।
ಅವಶ್ಯಂಚೈವ ಗಂತವ್ಯಂ ತಸ್ಯ ಪಾರ್ಶ್ವಂ ಪುನಃ ಪುನಃ || ೨೪ ||

ನತುತ್ರಾಸಾದ್ದ್ವಿಜಶ್ಶಕ್ತಃ ತತ್ರಗಂತುಂ ಹಿ ಕಶ್ಚನ ।
ನಗಚ್ಛಂತಿ ಚಯೇ ತತ್ರ ದಾನೇನ ನಿಯಮೇನಚ || ೨೫ ||

ವೈತರಣ್ಯಾಶ್ಚ ಯದ್ರೂಪಂ ಕಿಂತೋಯಂ ಚ ವಹತ್ಯಸೌ ।
ರೌರವೋ ವಾ ಕಥಂ ವಿಪ್ರ ಕಿಂ ರೂಪಂ ಕೂಟಶಾಲ್ಮಲೇಃ || ೨೬ ||

ಕೀದೃಶಾ ವಾ ಹಿ ತೇ ದೂತಾಃ ಕಿಂಕಾರ್ಯಾಃ ಕಿಂ ಪರಾಕ್ರಮಾಃ || ೨೭ ||

ಕಿಂಚ ಕಿಂಚತು ಕುರ್ವಾಣಃ ಕಿಂಚ ಕಿಂಚ ಸಮಾಚರನ್।
ನ ಚೇತೋ ಲಭತೇ ಜಂತುಃ ಛಾದಿತಂ ಪೂರ್ವತೇಜಸಾ || ೨೮ ||

---

೨೪. ಮತ್ತೆಮತ್ತೆ ಬೇಯಿಸಲ್ಪಡುತ್ತಿದ್ದರೂ ಯಾರು ಯಾರು ಯಾವ ಯಾವ ಹಿಂಸೆಯನ್ನು ಅನುಭವಿಸಬೇಕೋ ಅವರವರು ಆ ಹಿಂಸೆಯನ್ನು ಮಾಡುವವನ ಹತ್ತಿರಕ್ಕೆ ಮತ್ತೆ ಮತ್ತೆ ಅವಶ್ಯವಾಗಿ ಹೋಗಲೇ ಬೇಕಲ್ಲವೆ!

೨೫. ಭೀತಿಯಿರುವುದರಿಂದ ನೀನು ಹೊರತು ಬೇರೆ ಯಾವ ದ್ವಿಜನೂ ಆ ಯಮಲೋಕಕ್ಕೆ ತಾನಾಗಿ ಹೋಗಲಾರನು. ದಾನದಿಂದಾಗಲಿ ವ್ರತದಿಂದಾಗಲಿ ಅಲ್ಲಿಗೆ ಹೋಗದೇ ತಪ್ಪಿಸಿಕೊಳ್ಳುವರು ಯಾರು?

೨೬. ವೈತರಣೀನದಿಯ ಸ್ವರೂಪವೇನು? ಅದರಲ್ಲಿಯೂ ನೀರು ಹರಿಯುತ್ತದೆಯೆ? ಅಥವಾ ಅದರಲ್ಲಿ ಎಂತಹ ನೀರು ಹರಿಯುತ್ತದೆ? ಬ್ರಾಹ್ಮಣನೇ, ರೌರವವೆಂಬುದು ಹೇಗಿದೆ? ಕೂಟಶಾಲ್ಮಲಿಯ ರೂಪವೆಂತಹುದು?

೨೭-೨೮. ಆ ಯಮದೂತರು ಎಂತಹವರು? ಅವರ ಕಾರ್ಯವೆಂತಹದು? ಪರಾಕ್ರಮವೇನು? ಅವರು ಏನೇನು ಮಾಡುವರು? ಏನೇನು ಮಾಡುತ್ತ ಪ್ರಾಣಿಯು ಅಲ್ಲಿ ಪೂರ್ವದ ತೇಜಸ್ಸನ್ನು ಕಳೆದುಕೊಂಡುದಾಗಿ ಚಿತ್ತವನ್ನು ಪಡೆಯದಿರುವುದು?

ಧೃತಿಂ ನ ಲಭತೇ ಕಿಂಚಿತ್ತ್ರೈಸ್ತ್ರೈರ್ದೋಷೈಸ್ಸುವಾಸಿತಾಃ ।
ದೋಷಂ ಸತ್ಯಮಜಾನಂತಸ್ತಥಾ ಮೋಹೇನ ಮೋಹಿತಾಃ ॥ ೨೯ ॥
ಬೋದ್ಧವ್ಯಂ ನಾವಬುಧ್ಯಂತೇ ಗುಣಾನಾಂತು ಗುಣೋತ್ತರಂ ।
ಹಾಹಾಭೂತಾಶ್ಚ ಚಿಂತಾರ್ತಾಃ ಸರ್ವದೋಷಸಮನ್ವಿತಾಃ ॥ ೩೦ ॥
ಪರಂ ಪರಮಜಾನಂತೋ ರಮಂತೇ ಕಸ್ಯ ಮಾಯಯಾ ।
ಕ್ಲಿಶ್ಯಂತೇ ಬಹವಸ್ತತ್ರ ಕೃತ್ವಾ ಪಾಪಮಚೇತಸಃ । ॥ ೩೧
ಏತತ್ಕಥಯ ವತ್ಸ ತ್ವಂ ಯತಃ ಪ್ರತ್ಯಕ್ಷದರ್ಶಿವಾನ್ ॥ ೩೨ ॥

ಇತಿ ಶ್ರೀವರಾಹಪುರಾಣೇ ಸಂಸಾರಚಕ್ರೇ ಯಮಲೋಕಸ್ಥಪಾಪಿ ವರ್ಣನಂ ನಾಮ ಪಂಚನವತ್ಯಧಿಕಶತತಮೋಧ್ಯಾಯಃ

---

೨೯. ಅಜ್ಞಾನದಿಂದ ಮೋಹಿತರಾದವರು ದೋಷವನ್ನೂ ಸತ್ಯವನ್ನೂ ಅರಿಯದೆ ಆಯಾ ದೋಷಗಳಿಂದ ಕೂಡಿದವರಾಗಿ ಸ್ವಲ್ಪವೂ ಧೈರ್ಯವೇ ಇಲ್ಲದವರಾಗಿರುತ್ತಾರಲ್ಲವೆ ?

೩೦. ಸರ್ವದೋಷಗಳಿಂದ ಕೂಡಿದವರೂ, ಚಿಂತೆಯಿಂದ ಪೀಡಿತರೂ ಹಾಹಾರವುಳ್ಳವರೂ ಆಗಿ ಅರಿಯಬೇಕಾದುದೂ ಗುಣಗಳಲ್ಲೆಲ್ಲಾ ಉತ್ತಮವಾದುದೂ ಯಾವುದೋ ಅದನ್ನು ಅರಿಯುವುದಿಲ್ಲವಲ್ಲವೆ ?

೩೧. ಹಲವರು ಬುದ್ಧಿಹೀನರು ಪಾಪವನ್ನು ಮಾಡಿ, ಅಲ್ಲಿ ಯಾರ ಮಾಯೆಯಿಂದ ಉತ್ತಮವಾದ ಮತ್ತಾವುದನ್ನೂ ಅರಿಯದೆ ರಮಿಸುವರು ? ಅಥವಾ ಕ್ಲೇಶಪಡುವರು ?

೩೨. ವತ್ಸಾ, ಇದೆಲ್ಲವನ್ನೂ ನೀನು ಪ್ರತ್ಯಕ್ಷವಾಗಿ ನೋಡಿರುವುದರಿಂದ ಹೇಳು.

ಅಧ್ಯಾಯದ ಸಾರಾಂಶ :—

ವೈಶಂಪಾಯನಮುನಿಯು ಜನಮೇಜಯರಾಜನಿಗೆ— ನಚಿಕೇತನು ಋಷಿಗಳಿಗೆ ಯಮಲೋಕದ ವಿಚಾರವಾಗಿ ಹೇಳಲು ಪ್ರಾರಂಭಿಸಿದುದನ್ನೂ ಋಷಿಗಳು ಅವನಲ್ಲಿ ಕೇಳಿದ ಪ್ರಶ್ನೆಯನ್ನೂ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರತೊಂಬತ್ತೈದನೆಯ ಅಧ್ಯಾಯ.

|| ಶ್ರೀ ||

ಷಣ್ಣವತ್ಯಧಿಕ ಶತತಮೋಽಧ್ಯಾಯಃ

ಅಥ ಧರ್ಮರಾಜಪುರವರ್ಣನಂ

|| ವೈಶಂಪಾಯನ ಉವಾಚ ||

ತೇಷಾಂ ತದ್ವಚನಂ ಶ್ರುತ್ವಾ ಋಷೀಣಾಂ ಭಾವಿತಾತ್ಮನಾಂ ।
ಉವಾಚ ವಾಕ್ಯಂ ವಾಕ್ಯಜ್ಞಃ ಸರ್ವಂ ನಿರವಶೇಷತಃ । || ೧ ||

|| ನಚಿಕೇತ ಉವಾಚ ||

ಶ್ರೂಯತಾಂ ದ್ವಿಜಶಾರ್ದೂಲಾಃ ಕಥ್ಯಮಾನಂ ಮಯಾ ದ್ವಿಜಾಃ ।
ಯೋಜನಾನಾಂ ಸಹಸ್ರಂ ತು ವಿಸ್ತಾರಾದ್ದ್ವಿಗುಣಾಯತಂ । || ೨ ||

ದ್ವಿಗುಣಂ ಪರಿವೇಷೇಣ ತದ್ವೈ ಪ್ರೇತಪತೇಃ ಪುರಂ ।
ಭವನೈರಾವೃತಂ ದಿವ್ಯೈರ್ಜಾಂಬೂನದಮಯೈಶ್ಶುಭೈಃ । || ೩ ||

ನೂರತೊಂಬತ್ತಾರನೆಯ ಅಧ್ಯಾಯ

(ಯಮ)ಧರ್ಮರಾಜಪುರ ವರ್ಣನೆ.

೧. ವೈಶಂಪಾಯನ—ಸಂಸ್ಕೃತರಾದ ಆಋಷಿಗಳ ಆ ಮಾತನ್ನು ಕೇಳಿ ಮಾತುಬಲ್ಲವನಾದ ಆ ನಚಿಕೇತನು ಅವರಿಗೆ ಎಲ್ಲವನ್ನೂ ಪೂರ್ತಿಯಾಗಿ ಹೇಳಿದನು.

೨-೩. ನಚಿಕೇತ-ದ್ವಿಜೋತ್ತಮರೇ, ನಾನು ಹೇಳುವುದನ್ನು ಕೇಳಿರಿ. ಆ ಪ್ರೇತರಾಜಪುರವು ಸಾವಿರಯೋಜನ ಅಗಲವೂ, ಎರಡುಸಾವಿರ ಯೋಜನ ಉದ್ದವೂ, ಆರುಸಾವಿರಯೋಜನ ಸುತ್ತಳತೆಯೂ ಉಳ್ಳದಾಗಿ ಸುವರ್ಣ ಮಯವಾದ ದಿವ್ಯಶುಭಭವನಗಳಿಂದ ಆವೃತವಾಗಿದೆ.

ಹರ್ಮ್ಯಪ್ರಾಸಾದಸಂಬಾಧಮಹಾಟ್ಟಾಲಸಮನ್ವಿತಂ ।
ಸೌವರ್ಣೇನೈವ ಮಹತಾ ಪ್ರಾಕಾರೇಣಾಭಿವೇಷ್ಟಿತಂ । ॥ ೪ ॥

ಕೈಲಾಸಶಿಖರಾಕಾರೈರ್ಭವನೈರುಪಶೋಭಿತಂ ।
ತತ್ರ ವೈ ವಿಮಲಾ ನದ್ಯಸ್ತೋಯಪೂರ್ಣಾಸ್ಸುಶೋಭನಾಃ ॥ ೫ ॥

ದೀರ್ಘಿಕಾಶ್ಚ ತಥಾ ಕಾಂತಾ ನಲಿನ್ಯಶ್ಚ ಸರಾಂಸಿ ಚ ।
ತಡಾಗಾಶ್ಚೈವ ಕೂಪಾಶ್ಚ ವೃಕ್ಷಖಂಡಾಸ್ಸುಶೋಭನಾಃ ॥ ೬ ॥

ನರನಾರೀಸಮಾಕೀರ್ಣಾ ಗಜವಾಜಿಸಮಾಕುಲಾಃ ।
ನಾನಾದೇಶಸಮುತ್ಥಾನೈರ್ನಾನಾಜಾತಿಭಿರೇವ ಚ ॥ ೭ ॥

ಸರ್ವಜೀವೈಸ್ತಥಾಕೀರ್ಣಂ ತಸ್ಯ ರಾಜ್ಞಃ ಪುರೋತ್ತಮಂ । ॥ ೮ ॥

---

೪. ಧನಿಕರ ಮತ್ತು ದೇವತೆಗಳ ಉಪ್ಪರಿಗೆಗಳಿಂದ ನಿಬಿಡವಾಗಿ, ದೊಡ್ಡ ಅಟ್ಟಳಿಗೆಗಳಿಂದ ಕೂಡಿ ಸ್ವರ್ಣದ ದೊಡ್ಡದಾದ ಪ್ರಾಕಾರದಿಂದ ಸುತ್ತಿದು. ದಾಗಿರುವುದು.

೫-೬. ಕೈಲಾಸಶಿಖರಾಕಾರವಾದ ಮಂದಿರಗಳಿಂದ ಸೊಗಸುತ್ತಿರುವುದು. ಅಲ್ಲಿ ತುಂಬಿ ಹರಿಯುವ ನಿರ್ಮಲವಾದ ನದಿಗಳು ಮಂಗಳಕರವಾಗಿರುವುವು. ಅಲ್ಲಿಯ ಕೊಳಗಳೂ, ಸರೋವರಗಳೂ, ಕೆರೆಗಳೂ, ಬಾವಿಗಳೂ, ತಾವರೆಗಳಿಂದೊಪ್ಪುವುವು. ತೋಪುಗಳು ಬಹು ಸುಂದರವಾದುವು.

೭-೮. ಆಧರ್ಮರಾಜನ ಪಟ್ಟಣವು ನಾನಾದೇಶಗಳಿಂದ ಬಂದಿರುವ ನಾನಾಜಾತಿಯ ಸ್ತ್ರೀಪುರುಷರಿಂದಲೂ, ಆನೆ ಕುದುರೆಗಳಿಂದಲೂ, ಇತರ ಸರ್ವ ಪ್ರಾಣಿಗಳಿಂದಲೂ ತುಂಬಿದುದಾಗಿರುವುದು.

ಕ್ವಚಿದ್ಯುದ್ಧಂ ಕ್ವಚಿದ್ದ್ವಂದ್ವಂ ಕೇನ ಬದ್ಧೋ ಯಮಾಲಯೇ ।
ಕ್ವಂಚಿದ್ಗಾಯನ್ನ ಸಂಶ್ಚೈವ ಕ್ವಚಿದ್ದುಃಖೇನ ದುಃಖಿತಃ ।
ಕ್ವಚಿತ್ಕ್ರೀಡನ್ಕಥಾಕರ್ಮ ಕ್ವಚಿತ್ಕ್ರೀಡನ್ ಕ್ವಚಿತ್ಸ್ವಪನ್ । ॥ ೯ ॥

ಕ್ವಚಿನ್ನೃತ್ಯನ್ಕ್ವಚಿತ್ತಿಷ್ಠನ್ಕ್ವಚಿದ್ಬಂಧನಸಂಸ್ಥಿತಃ ।
ಏವಂ ಶತಸಹಸ್ರಾಣಿ ತಸ್ಯ ರಾಜ್ಞಃ ಪುರೋತ್ತಮೇ । ॥ ೧೦ ॥

ಸ್ವಕರ್ಮಭಿಃ ಪ್ರದೃಶ್ಯಂತೇ ಸ್ಥೂಲಾಸ್ಸೂಕ್ಷ್ಮಾಶ್ಚ ಜಂತವಃ ।
ಮಯಾ ದೃಷ್ಟಾ ದ್ವಿಜಶ್ರೇಷ್ಠಾಃ ತಸ್ಯ ರಾಜ್ಞಃ ಪುರೋತ್ತಮೇ ॥ ೧೧ ॥

ಅಂಗಾನಿ ಚೈವ ಸೀದಂತಿ ಮನೋ ವಿಹ್ವಲತೀವ ಮೇ ।
ದಿವ್ಯಭಾವಾಃ ಸ್ಪೃಶಂತ್ಯೇತೇ ಚಿಂತಯಾನಸ್ಯ ತತ್ಫಲಂ । ॥ ೧೨ ॥

ತಥಾಪಿ ಕಥಯಿಷ್ಯಾಮಿ ಯಥಾದೃಷ್ಟಂ ಯಥಾಶ್ರುತಂ ॥ ೧೩ ॥

---

೯. ಆ ಯಮಪುರದಲ್ಲಿ ಕೆಲವೆಡೆ ಯುದ್ಧ, ಕೆಲವೆಡೆ ಕೂಟ, ಕೆಲವೆಡೆ ಹಾಡುತ್ತಲೂ, ನಗುತ್ತಲೂ ಇರುವರು. ಕೆಲವೆಡೆಯಲ್ಲಿ ದುಃಖದಿಂದ ಪೀಡಿತರಾಗಿರುವರು. ಒಂದುಕಡೆ ಕ್ರಮವಾಗಿ ಆಟವಾಡುತ್ತಲೂ, ಮತ್ತೊಂದುಕಡೆ ಊಟಮಾಡುತ್ತಲೂ, ಇನ್ನೊಂದುಕಡೆ ನಿದ್ದೆಮಾಡುತ್ತಲೂ ಇರುವರು.

೧೦. ಕೆಲವುಕಡೆಯಲ್ಲಿ ಕುಣಿಯುತ್ತಲೂ, ಕೆಲವುಕಡೆಯಲ್ಲಿ ನಿಲ್ಲುತ್ತಲೂ, ಕೆಲವುಕಡೆಯಲ್ಲಿ ಬಂಧನದಲ್ಲಿರುತ್ತಲೂ ಇರುವರು. ಹೀಗೆ ಆಯಮರಾಜನ ಉತ್ತಮಪುರದಲ್ಲಿ ನೂರಾರುಸಾವಿರ ಜನರಿರುವರು

೧೧. ದ್ವಿಜಶ್ರೇಷ್ಠರೇ, ಆ ಧರ್ಮರಾಜನ ಮೇಲಾದ ನಗರದಲ್ಲಿ ತಮ್ಮ ಕರ್ಮಗಳಿಂದ ಸ್ಥೂಲವಾಗಿಯೂ, ಸೂಕ್ಷ್ಮವಾಗಿಯೂ ಇರುವ ಜಂತುಗಳು ಕಾಣುವುದನ್ನು ನಾನು ನೋಡಿದೆನು.

೧೨-೧೩. ಯಮನಗರದ ಫಲವನ್ನು ಚಿಂತಿಸಿದರೆ ನನ್ನ ಅವಯವಗಳು ಬಾಡುತ್ತವೆ. ಮನಸ್ಸು ದುಃಖಗೊಳ್ಳುವಂತಾಗುತ್ತದೆ. ದಿವ್ಯಭಾವಗಳುಂಟಾಗುತ್ತವೆ. ಆದರೂ ನೋಡಿದುದನ್ನೂ, ಕೇಳಿದುದನ್ನೂ ಹಾಗೆಯೇ ಹೇಳುತ್ತೇನೆ.

ಪುಷ್ಪೋದಕಾ ನಾಮ ತತ್ರ ನದೀನಾಂ ಪ್ರವರಾ ನದೀ ।
ದೃಶ್ಯತೇ ನ ಚ ದೃಶ್ಯೇತ ನಾನಾವೃಕ್ಷಸಮಾಕುಲಾ ॥ ೧೪ ॥

ಸುವರ್ಣಕೃತಸೋಪಾನಾ ದಿವ್ಯಕಾಂಚನವಾಲುಕಾ ।
ಪ್ರಸನ್ನೇನ ಚ ತೋಯೇನ ಶೀತಲೇನ ಸುಗಂಧಿನಾ ।
ಪುಷ್ಪ್ಯತ್ಫಲವನಾಕೀರ್ಣಾ ನಾನಾಪಕ್ಷಿಸಮಾಕುಲಾ ॥ ೧೫ ॥

ಭ್ರಾಜತೇ ಸರಿತಾಂ ಶ್ರೇಷ್ಠಾ ಸರ್ವಪಾಪಪ್ರಣಾಶಿನೀ ।
ತಸ್ಯಾಸ್ತೀರೇ ಮಯಾ ದೃಷ್ಟಾಃ ಪಾದಪಾಶ್ಚ ಸಹಸ್ರಶಃ ॥ ೧೬ ॥

ಅಮರಾಃ ಕ್ರೀಡಮಾನಾಶ್ಚ ಜಲಕ್ರೀಡಾಂ ಪುನಃ ಪುನಃ ।
ವಿಶಾಲಜಘನಾ ಯಸ್ಯಾಂ ಗಂಧರ್ವಾಸ್ಸಾಮಗಾ ಇವ ॥ ೧೭ ॥

---

೧೪. ಅಲ್ಲಿ ಪುಷ್ಪೋದಕವೆಂಬ ನದಿಯು ನದಿಗಳಲ್ಲೆಲ್ಲಾ ಉತ್ತಮವಾದುದು. ನಾನಾವೃಕ್ಷಗಳಿಂದಾವೃತವಾದ ಅದು ಕೆಲವುಕಡೆ ಕಾಣಿಸುತ್ತದೆ. ಮತ್ತೆ ಕೆಲವುಕಡೆ ಕಾಣಿಸುವುದಿಲ್ಲ.

೧೫. ಆ ನದಿಯು ಚಿನ್ನದ ಮೆಟ್ಟಿಲುಗಳುಳ್ಳುದೂ, ದಿವ್ಯವಾದ ಹೊನ್ನಿನ ಮರಳುಳ್ಳುದೂ, ಸುವಾಸನೆಯ ತಣ್ಣನೆಯ ತಿಳಿನೀರುಳ್ಳುದೂ ಆಗಿದೆ. ಅಲ್ಲದೆ ಹೂಹಣ್ಣುಕಾಯಿ ವನಗಳಿಂದ ಕೂಡಿದ ತೀರವುಳ್ಳುದು. ಬಗೆಬಗೆಯ ಹಕ್ಕಿಗಳಿಂದ ನಿಬಿಡವಾದುದು.

೧೬. ನದಿಗಳಲ್ಲಿ ಉತ್ತಮವಾದ ಅದು ಸರ್ವಪಾಪ ನಾಶಿನಿಯಾಗಿ ಹೊಳೆಯುತ್ತಿದೆ. ಅದರ ದಡದಲ್ಲಿ ನಾನು ಸಾವಿರಗಟ್ಟಲೆಯಾಗಿ ಮರಗಳನ್ನು ನೋಡಿದೆನು.

೧೭-೧೮. ಆ ನದಿಯಲ್ಲಿ ದೇವತೆಗಳು ಮತ್ತೆಮತ್ತೆ ಜಲಕ್ರೀಡೆಯನ್ನು ಆಡುವರು. ವಿಶಾಲಜಘನೆಯರಾದ ಸಾಮಗಾನಮಾಡುವ ಗಂಧರ್ವರೂ, ನಾಗ

ಭುಜಂಗಾವನತಾಂಗ್ಯಶ್ಚ ಕಿನ್ನರ್ಯಶ್ಚ ಸುಗಾಯನಾಃ |
ದಿವ್ಯಭೂಷಣಸಂಭೋಗೈಃ ಕ್ರೀಡಂತ್ಯತ್ರ ಸಮಾಗತಾಃ || ೧೮ ||

ಏವಂ ನಾರೀಸಹಸ್ರಾಣಿ ತತ್ರ ದಿವ್ಯಾನಿ ನಿತ್ಯಶಃ |
ಕ್ರೀಡಂತಿ ಸಲಿಸಲೇ ತತ್ರ ಪ್ರಾಸಾದೇಷು ಶುಭೇಷು ಚ || ೧೯ ||

ತತ್ರಾಪರೇ ವೃಕ್ಷಖಂಡಾ ನಿತ್ಯಪುಷ್ಪಫಲಾನ್ವಿತಾಃ |
ತೇ ಚ ಕಾಮಪ್ರದಾ ನಿತ್ಯಂ ತಥಾ ದ್ವಿಜಸಮಾಯುತಾಃ || ೨೦ ||

ಪ್ರಮದಾಶ್ಚ ಜಲೇ ತತ್ರ ಕಾಮರೂಪಾಸ್ಸನೇಖಲಾಃ |
ರಮಯಂತ್ಯೋ ನರಾಂಸ್ತತ್ರ ಯಥಾಕಾಮಂ ಯಥಾಸುಖಂ || ೨೧ ||

ತಾಂ ನದೀಂ ಕ್ಷೋಭಯತ್ಯಸ್ತಾಃ ಕ್ರೀಡಂತಿ ಸಹಿತಾಃ ಪ್ರಿಯೈಃ |
ಗಾಯಂತಿ ಸಲಿಲೇ ಕಾಶ್ಚಿನ್ಮಧುರಂ ಮಧುವಿಹ್ವಲಾಃ || ೨೨ ||

ವನಿತೆಯರೂ, ಚೆನ್ನಾಗಿ ಹಾಡುವ ಕಿನ್ನರಿಯರೂ ಅಲ್ಲಿಗೆ ಬಂದು ದಿವ್ಯಭೂಷಣ ಸಂಭೋಗಗಳಿಂದ ಕ್ರೀಡಿಸುವರು.

೧೯. ಹೀಗೆ ಸಾವಿರಾರುಜನ ದಿವ್ಯನಾರಿಯರು ಆ ನದಿಯ ನೀರಿನಲ್ಲಿಯೂ ಶುಭಕರವಾದ ಅಲ್ಲಿನ ಪ್ರಾಸಾದಗಳಲ್ಲಿಯೂ ವಿಹರಿಸುವರು.

೨೦. ಅಲ್ಲಿ ಇತರ ಮರಗಳ ಗುಂಪುಗಳೂ ಯಾವಾಗಲೂ ಹೂಹಣ್ಣು ಕಾಯಿಗಳಿಂದೊಪ್ಪುವುವು. ಅವು ಸದಾ ಇಷ್ಟಾರ್ಥಗಳನ್ನು ಕೊಡುವುವುಗಳಾಗಿ ದ್ವಿಜಾಶ್ರಯಗಳಾಗಿರುವುವು.

೨೧-೨೨. ಕಾಮರೂಪರೂ, ಒಳ್ಳೆಯ ಒಡ್ಯಾಣವುಳ್ಳವರೂ ಆದ ಪ್ರಮದೆಯರು ತಮ್ಮ ಪ್ರಿಯರನ್ನು ಇಷ್ಟಸುಖಗಳಿಂದ ಆನಂದಪಡಿಸುತ್ತ ಆನದಿಯ ನೀರನ್ನು ಕಲಕಿ ಪ್ರಿಯರೊಡನೆ ಕ್ರೀಡಿಸುವರು. ಕೆಲವರು ವನಿತೆಯರು ಮಧುಪಾನದಿಂದ ಮತ್ತರಾಗಿ ನೀರಿನಲ್ಲೇ ಇಂಪಾಗಿ ಹಾಡುವರು.

ಜಲತೂರ್ಯನಿನಾದೇನ ಭೂಷಣಾನಾಂ ಸ್ವನೇನ ಚ |
ಭಾತಿ ಸಾ ನಿಮ್ನಗಾ ದಿವ್ಯಾ ದಿವ್ಯರತ್ನೈರಲಂಕೃತಾ || ೨೩ ||

ವೈವಸ್ವತೀ ನಾಮ ಮಹಾನದೀ ಸಾ ।
ಶುಭಾ ನದೀನಾಂ ಪ್ರವರಾತಿರಮ್ಯಾ |
ಪ್ರಯಾತಿ ಮಧ್ಯೇ ನಗರಸ್ಯ ನಿತ್ಯಂ |
ಮಾತೇವ ಪುತ್ರಂ ಪರಿಪಾಲಯಂತೀ || ೨೪ ||

ತೋಯಾನುರೂಪಾ ಚ ಮನೋಹರಾ ಚ |
ದಿವ್ಯೇನ ತೋಯೇನ ಸದೈವ ಪೂರ್ಣಾ |
ಯಸ್ಯಾಸ್ತು ಹಂಸಾಃ ಪುಲಿನೇಷು ಮತ್ತಾಃ |
ಕುಂದೇಂದುವರ್ಣಾಃ ಪ್ರಚರಂತಿ ನಿತ್ಯಂ || ೨೫ ||

---

೨೩. ದಿವ್ಯವಾದ ಆಪುಷ್ಪೋದಕಾನದಿಯು ದಿವ್ಯರತ್ನಗಳಿಂದಲಂಕೃತವಾಗಿ ಜಲವಾದ್ಯಧ್ವನಿಯಿಂದಲೂ, ಸ್ತ್ರೀಯರ ಭೂಷಣಗಳ ಧ್ವನಿಯಿಂದಲೂ ಪ್ರಕಾಶಿಸುತ್ತದೆ.

೨೪. ನದಿಗಳಲ್ಲೆಲ್ಲಾ ಉತ್ತಮವಾದುದೂ, ಅತಿ ಮನೋಹರವಾದುದೂ, ಶುಭವೂ ಆದ ಆವೈವಸ್ವತಿಯೆಂಬ ಮಹಾನದಿಯು ಪುತ್ರನನ್ನು ಪಾಲಿಸುವ ತಾಯಿಯಂತೆ ಧರ್ಮರಾಜನಗರಿಯ ಮಧ್ಯದಲ್ಲಿ ಪ್ರವಹಿಸುತ್ತದೆ.

೨೫. ಆನದಿಯು ದಿವ್ಯೋದಕದಿಂದ ಯಾವಾಗಲೂ ತುಂಬಿ ಅದಕ್ಕನುರೂಪವಾಗಿ ಮನೋಹರವಾಗಿರುವುದು. ಕುಂದೇಂದುವರ್ಣದ ಮದಿಸಿದ ಹಂಸಗಳು ಆನದಿಯ ಮರಳುದಿಣ್ಣೆಗಳಮೇಲೆ ನಿತ್ಯವೂ ಸಂಚರಿಸುತ್ತವೆ.

ರಥಾಂಗಸಾಹ್ವೈಃ ಪ್ರವರೈಶ್ಚ ಪದ್ಮೈಃ ।
ಪ್ರತಪ್ತಜಾಂಬೂನದಕರ್ಣಿಕಾಭಿಃ ।
ಯಾ ದೃಶ್ಯತೇ ಚೈವ ಮನೋಜ್ಞರೂಪಾ ।
ಸುವರ್ಣಸೋಪಾನಯುತಾ ಸುಕಾಂತಾ ॥೨೬॥

ಯಸ್ಯಾಸ್ತು ತೋಯಂ ವಿಮಲಂ ಸುಗಂಧಿ ।
ಸ್ವಾದು ಪ್ರಸನ್ನಂ ತ್ವಮೃತೋಪಮಂ ಚ ।
ವೃಕ್ಷಾಸ್ತು ಯಂಸ್ಯಾ ವನಖಂಡಜಾತಾಃ ।
ಸದಾ ಶುಭೈಃ ಪುಷ್ಪಫಲೈರುಪೇತಾಃ ॥ ೨೭ ॥

ನಾರ್ಯಸ್ಸುರೂಪಾ ಮದವಿಹ್ವಲಾಶ್ಚ ।
ಕ್ರೀಡಂತಿ ತಾ ಯತ್ರ ಮನೋಜ್ಞರೂಪಾಃ ।
ಯಸ್ಯಾಂ ಜನಃ ಕ್ರೀಡನತಾಡನಾದ್ಯೈಃ ।
ವಿವರ್ಣತಾಂ ಯಾತಿ ನ ವೈ ಕದಾಚಿತ್ ॥ ೨೮ ॥

---

೨೬. ಉತ್ತಮವಾದ ಚಕ್ರವಾಕಪಕ್ಷಿಗಳಿಂದಲೂ, ಪುಟವಿಟ್ಟ ಚಿನ್ನದ ಕರ್ಣಿಕೆಗಳ ತಾವರೆಗಳಿಂದಲೂ, ಸುವರ್ಣ ಸೋಪಾನಗಳಿಂದಲೂ ರಮ್ಯವಾಗಿರುವ ಆ ನದಿಯು ಮನೋಹರರೂಪವುಳ್ಳದಾಗಿದೆ.

೨೭. ಆ ನದಿಯ ನೀರು ನಿರ್ಮಲವೂ, ಸುಗಂಧವುಳ್ಳದೂ, ಅಮೃತದಂತೆ ರುಚಿಯುಳ್ಳದೂ, ತಿಳಿಯೂ ಆಗಿದೆ. ಆದರ ದಡದ ವನಗಳಲ್ಲಿರುವ ಮರಗಳು ಯಾವಾಗಲೂ ಶುಭವಾದ ಪುಷ್ಪಫಲಗಳಿಂದ ಕೂಡಿದುವು.

೨೮. ಮನೋಹರವಾದ ಸುಂದರರೂಪದ ವನಿತೆಯರು ಮದಪರವಶರಾಗಿ ಆ ನದಿಯಲ್ಲಿ ಕ್ರೀಡಿಸುವರು. ಆ ನದಿಯಲ್ಲಿ ಕ್ರೀಡಿಸುವುದರಿಂದಲೂ, ನೀರನ್ನು ಬಡಿಯುವುದರಿಂದಲೂ ಜನರು ಎಂದಿಗೂ ಆಯಾಸದಿಂದ ವಿವರ್ಣತೆಯನ್ನು ಪಡೆಯುವುದಿಲ್ಲ.

ಯಾ ದೇವತಾನಾಮಪಿ ಪೂಜನೀಯಾ ।
ತಪೋನಿಧೀನಾಂ ಚ ತಥಾ ಮುನೀನಾಂ ।
ಯಾ ದೃಶ್ಯತೇ ತೋಯಭರೇಣ ಕಾಂತಾ ।
ಕೃತಿಃ ಕವೀನಾಮಿವ ನಿರ್ಮಲಾರ್ಥಾ ॥ ೨೯ ॥

ಜಲಂ ಚ ದತ್ತಂ ಬಹುಭಿರ್ನರೈಶ್ಚ ।
ತಸ್ಯಾಃ ಸ್ವರೂಪಪ್ರತಿಮಾ ಚ ನಿಷ್ಠಾ ।
ಪ್ರಾಸಾದಪಂಕ್ತಿರ್ಜ್ವಲನಪ್ರಕಾಶಾ ।
ತಸ್ಯಾಸ್ತು ತೀರೇ ಬಹುಭಕ್ತಿರಮ್ಯಾ ॥ ೩೦ ॥

ವಾದಿತ್ರಗೀತಸ್ವನತಾಲಯುಕ್ತಾ ।
ಗಾಯಂತಿ ನಾರ್ಯಸ್ಸಹಿತಾಸ್ಸದಾ ಹಿ ।
ಕನ್ಯಾಕುಲಾನಾಂ ಮೃದು ಭಾಷಿತಾನಿ ।
ಮನೋಹರಾಣಾಂ ಚ ವನೇಷು ತೇಷು ॥ ೩೧ ॥

---

೨೯. ಕವಿಗಳ ನಿರ್ಮಲಾರ್ಥದ (ಕಾಂತಾಕೃತಿ) ಮನೋಹರವಾದ ಕಾವ್ಯದಂತೆ ಜಲರಭಸದಿಂದ (ಕಾಂತಾಕೃತಿ) ಮನೋಹರವಾದ ರೂಪವುಳ್ಳದಾಗಿ ಒಪ್ಪುವ ಆ ನದಿಯು ದೇವತೆಗಳಿಗೂ, ತಪೋನಿಧಿಗಳಾದ ಮುನಿಗಳಿಗೂ ಪೂಜನೀಯವಾಗಿದೆ.

೩೦. ಬಹುಜನರು ಆ ನದಿಯ ನೀರಿನಿಂದ ಅರ್ಘ್ಯತರ್ಪಣಾದಿಗಳನ್ನು ಕೊಡುವರು. ಅಗ್ನಿಯಂತೆ ಪ್ರಕಾಶಿಸುವ ತೀರಪ್ರಾಸಾದಗಳ ಪಂಗ್ತಿಯು ಬಹು ಚಿತ್ರಗಳಿಂದ ಮನೋಹರವಾಗಿ ಆ ನದಿಯ ನೀರಿನಲ್ಲಿ ಪ್ರತಿಬಿಂಬಿಸಿರುವುದು.

೩೧. ಅಲ್ಲಿನ ವನಗಳಲ್ಲಿ ರಮಣಿಯರು ಗುಂಪುಕೂಡಿ, ಯಾವಾಗಲೂ ವಾದ್ಯತಾಳಗಳೊಡನೆ ಗಾನಮಾಡುವರು. ಕನ್ನೆಯರು ಗುಂಪುಕೂಡಿ ಮೃದುವಾಗಿ ಮಾತನಾಡುವರು.

ಕುರ್ವಂತಿ ಸಂಹರ್ಷಮಿವ ಸ್ವನೇನ ।
ಮನೋಜ್ಞರೂಪಾ ದಿವಿ ದೇವತಾನಾಂ ।
ಮೃದಂಗನಾದಶ್ಚ ಸುತಂತ್ರಿಯುಕ್ತಃ ।
ಗೀತಧ್ವನಿಶ್ಚೈವ ಸುವಂಶಯುಕ್ತಃ ॥ ೩೨ ॥

ಪ್ರಾಸಾದಕುಂಜೇಷು ವಿಹಾರ್ಯಮಾಣಾ ।
ನ ತೃಪ್ತಿಮೇವಂ ಬಹು ತಾಃ ಪ್ರಯಾಂತಿ ।
ಗಂಧಸ್ಸುಗಂಧೋಽಗುರುಚಂದನಾನಾಂ ।
ವಾತಶ್ಶುಭೋ ವಾತಿ ಸುಶೀತಮಂದಃ ॥ ೩೩ ॥

ಕ್ವಚಿತ್ಸುಗಂಧಃ ಪ್ರಚಚಾರ ಭೂಯಃ ।
ಪ್ರಾಸಾದರೋಧಂ ಪ್ರವಿರೂಢಮಾರ್ಗಃ ।
ಕ್ವಚಿಜ್ಜನಾಃ ಕ್ರೀಡನಕಾವಸಕ್ತಾಃ ।
ಕ್ವಚಿಚ್ಚ ನಾರೀನರಗೀತಶಬ್ದಾಃ ॥ ೩೪ ॥

---

೩೨. ಅಲ್ಲಿಯ ಮೃದಂಗನಾದವೂ, ವೀಣಾದಿತಂತ್ರೀವಾದ್ಯಗಳೊಡನೆಯೂ ಕೊಳಲಿನ ಧ್ವನಿಯೊಡನೆಯೂ ಕೂಡಿದ ಗಾನವೂ ಮನೋಹರಗಳಾಗಿ ಸ್ವರ್ಗದಲ್ಲಿರುವ ದೇವತೆಗಳಿಗೂ ಹೆಚ್ಚಾದ ಸಂತೋಷವಾಗುವಂತೆ ಮಾಡುವುವು.

೩೩. ಅಲ್ಲಿಯ ಉಪ್ಪರಿಗೆಯ ಮನೆಗಳ ಲತಾಗೃಹಗಳಲ್ಲಿ ಎಷ್ಟು ಹೆಚ್ಚಾಗಿ ವಿಹರಿಸುವವರೂ ತೃಪ್ತಿಯನ್ನೇ ಪಡೆಯುವುದಿಲ್ಲ. ಅಲ್ಲಿ ಅಗುರುಚಂದನಗಳ ಸುಗಂಧದಿಂದ ಕೂಡಿದ ಶೀತಲವೂ ಮಂದವೂ ಆದ ಗಾಳಿಯು ಶುಭವಾಗಿ ಬೀಸುತ್ತದೆ.

೩೪. ಅಲ್ಲಿ ಕೆಲವೆಡೆಯಲ್ಲಿ ಸುಗಂಧವು ಹೆಚ್ಚಾಗಿ ಉಪ್ಪರಿಗೆಗಳ ಮೇಲುಗಡೆಯ ವರೆಗೂ ಹರಡಿರುತ್ತದೆ. ಕೆಲವೆಡೆಗಳಲ್ಲಿ ಜನರು ಕ್ರೀಡಾಸಕ್ತರಾಗಿರುವರು. ಕೆಲವು ಕಡೆಯಲ್ಲಿ ಸ್ತ್ರೀಪುರುಷರ ಗಾನಧ್ವನಿ.

ತಥಾಪರೇ ಕ್ರೀಡನಕಾಸ್ಸಕಾಂತಾಃ ।
ಸುವರ್ಣವೇದೀಕೃತಸಾನುಶೋಭಾಃ ।
ವಿಮಾನಭೂತಾಃ ಪ್ರಚರಂತಿ ತೋಯೇ ।
ಪ್ರಮತ್ತನಾರೀನರಸಂಕುಲಾಶ್ಚ || ೩೫ ||

ಶಕ್ಯೋ ವಿಭಾಗೋ ನ ಹಿ ರಮ್ಯತಾಯಾ ।
ಹ್ಯಸೌ ದಿನೈರ್ವಾ ಬಹುಭಿಃ ಪ್ರವಕ್ತುಂ ।
ನೈಷಾ ಕಥಾ ಕರ್ಮಸಮಾಧಿಯುಕ್ತಾ ।
ಶಕ್ಯಾ ಪ್ರವಕ್ತುಂ ದಿವಸೈರನಲ್ಪೈಃ || ೩೬ ||

ಇತಿ ಶ್ರೀವರಾಹಪುರಾಣೇ ಸಂಸಾರಚಕ್ರೇ ಧರ್ಮರಾಜಪುರವರ್ಣನಂ ನಾಮ ಷಣ್ಣವತ್ಯಧಿಕ ಶತತಮೋಧ್ಯಾಯಃ

---

೩೫. ಹಾಗೆಯೇ ಮತ್ತೆ ಕೆಲವರು ಸುವರ್ಣದ ವೇದಿಕೆಗಳಿಗೆ ಅಲಂಕಾರ ಭೂತರಾಗಿ ಕಾಂತೆಯರೊಡನೆ ವಿಹರಿಸುತ್ತಿರುವರು. ಇನ್ನುಕೆಲವು ಪ್ರಮತ್ತ ರಾದಸ್ತ್ರೀಪುರುಷರ ಗುಂಪುಗಳು ನೀರಿನಲ್ಲಿ ವಿಮಾನಭೂತವಾಗಿ ಸಂಚರಿಸುವುವು.

೩೬. ಆರಮ್ಯತೆಯ ವಿಭಾಗ ಅಥವಾ ವಿವರವನ್ನು ಬಹುದಿವಸಗಳಲ್ಲೂ ಪೂರ್ತಿಯಾಗಿ ಹೇಳಲು ಸಾಧ್ಯವಿಲ್ಲ. ಕರ್ಮನಿರ್ಣಯದಿಂದ ಕೂಡಿದ ಈಕಥೆ ಯನ್ನು ಹಲವು ದಿವಸಗಳಲ್ಲೂ ಪೂರ್ಣವಾಗಿ ಹೇಳಲಾಗುವುದಿಲ್ಲ.

ಅಧ್ಯಾಯದ ಸಾರಾಂಶ—

ವೈಶಂಪಾಯನ ಮುನಿಯು ಜನಮೇಜಯರಾಜನಿಗೆ–ನಚಿಕೇತನು ಋಷಿ ಗಳಿಗೆ ಹೇಳಿದ ಯಮನಗರದ ವಿಸ್ತಾರಸೌಧನದ್ಯುಪವನಜನಸೌಖ್ಯಸೌಂದ ರ್ಯಾದಿಗಳ ವರ್ಣನೆಯನ್ನು ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರತೊಂಬತ್ತಾರನೆಯ ಅಧ್ಯಾಯ.

॥ ಶ್ರೀ ॥

ಸಪ್ತನವತ್ಯಧಿಕ ಶತತಮೋಧ್ಯಾಯಃ

॥ ಋಷಿಪುತ್ರ ಉವಾಚ ॥

ದಶಯೋಜನವಿಸ್ತಾರಂ ತತೋ ದ್ವಿಗುಣಮಾಯತಂ ।
ಪ್ರಾಕಾರೇಣ ಪರಿಕ್ಷಿಪ್ತಂ ಪ್ರಾಸಾದಶತಶೋಭಿತಂ ॥ ೧ ॥

ಸಮಾಲಿಖದಿವಾಕಾಶಂ ಪ್ರದೀಪ್ತಮಿವ ತೇಜಸಾ ।
ಗೋಪುರಂ ತೂತ್ತಮಂ ತತ್ರ ಪ್ರಾಸಾದಶತಶೋಭಿತಂ ॥ ೨ ॥

ನಾನಾಯಂತ್ರೈಸ್ಸಮಾಕೀರ್ಣಂ ಜ್ವಾಲಾಮಾಲಾಸಮಾಯುತಂ ।
ದೇವತಾನಾಮೃಷೀಣಾಂ ಚ ಯೇ ಚಾನ್ಯೇ ಶುಭಕಾರಿಣಃ ॥ ೩ ॥

ನೂರತೊಂಬತ್ತೇಳನೆಯ ಅಧ್ಯಾಯ.

೧–೨. ನಚಿಕೇತ–ಯಮಧರ್ಮರಾಜನಗರದ ಉತ್ತಮವಾದ ಗೋಪುರವು (ಹೆಬ್ಬಾಗಿಲು) ಹತ್ತುಯೋಜನ ಅಗಲವಾಗಿಯೂ, ಇಪ್ಪತ್ತುಯೋಜನ ಉದ್ದವಾಗಿಯೂ, ನೂರಾರು ಪ್ರಾಸಾದಗಳಿಂದ ಸೊಗಸುತ್ತ, ಪ್ರಾಕಾರದಿಂದ ಸುತ್ತುವರಿದುದಾಗಿ ತೇಜಸ್ಸಿನಿಂದ ಉರಿಯುತ್ತಿದೆಯೋ ಎಂಬಂತೆಯೂ ಆಕಾಶವನ್ನು ಮುಟ್ಟುತ್ತಿದೆಯೋ ಎಂಬಂತೆಯೂ ಇದೆ.

೩–೪. ಅದು ನಾನಾಯಂತ್ರಗಳಿಂದಲೂ, ಜ್ವಾಲೆಯ ಮಾಲೆಗಳಿಂದಲೂ ಕೂಡಿದುದಾಗಿದೆ. ದೇವತೆಗಳಿಗೂ, ಋಷಿಗಳಿಗೂ, ಇತರ ಶುಭಕರ್ಮಿಗಳಿಗೂ,

ರಾಜತೇ ಗೋಪುರಂ ಸರ್ವಂ ಶಾರದಾಭ್ರಚಯಪ್ರಭಂ ।
ಮಾನುಷಾಣಾಂ ಸುಕೃತಿನಾಂ ಪ್ರವೇಶಸ್ತತ್ರ ನಿರ್ಮಿತಃ ॥ ೪ ॥

ಅಗ್ನಿಧರ್ಮಸಮಾಕೀರ್ಣಂ ಸರ್ವದೋಷಸಮನ್ವಿತಂ ॥ ೫ ॥

ಆಯಸಂ ಗೋಪುರಂ ತತ್ರ ದಕ್ಷಿಣಂ ಭೀಮದರ್ಶನಂ ।
ರೌದ್ರಂ ಪ್ರತಿಭಯಾಕಾರಂ ಸುತಪ್ತಂ ದುರ್ನಿರೀಕ್ಷಣಂ ॥ ೬ ॥

ಪ್ರವೇಶೋ ಹಿ ತತಸ್ತೇನ ವಿಹಿತೋ ರವಿಸೂನುನಾ ॥ ೭ ॥

ಪಾಪಿಷ್ಠಾನಾಂ ನೃಶಂಸಾನಾಂ ಕ್ರವ್ಯಾದಾನಾಂ ದುರಾತ್ಮನಾಂ ।
ಪಾಪಾನಾಂ ಚೈವ ಸರ್ವೇಷಾಂ ಯೇ ಚಾನ್ಯೇ ಘಾತಕಾರಕಾಃ ॥ ೮ ॥

ಔದುಂಬರಮವೀಚೀಕಮುಚ್ಚಾವಚಮನಃಕೃತಂ ।
ಗೋಪುರಂ ಪಶ್ಚಿಮಂ ತಚ್ಚ ದುರ್ನಿರೀಕ್ಷ್ಯಂ ಸಮಂತತಃ ॥ ೯ ॥

ಧರ್ಮದರ್ಶಿಗಳಿಗೂ ಧರ್ಮರಾಜಪುರಕ್ಕೆ ಪ್ರವೇಶವು ಆಗೋಪುರದ್ವಾರದಿಂದಲೇ ವಿಹಿತವಾಗಿದೆ. ಆ ಗೋಪುರವೆಲ್ಲವೂ ಶರತ್ಕಾಲದ ಮೇಘದಂತೆ ಹೊಳೆಯುತ್ತದೆ. ಪುಣ್ಯಶಾಲಿಗಳಾದ ಮನುಷ್ಯರಿಗೂ ಅಲ್ಲಿಂದಲೇ ಪುರಪ್ರವೇಶವು ನಿಯತವಾಗಿದೆ.

೫–೬. ಅಲ್ಲಿಯ ದಕ್ಷಿಣಗೋಪುರವು ಕಬ್ಬಿಣದಿಂದ ನಿರ್ಮಿತವಾಗಿ ಅಗ್ನಿಯ ಮಹಾತಾಪದಿಂದಲೂ, ಸರ್ವದೋಷಗಳಿಂದಲೂ ಕೂಡಿದುದೂ, ನೋಡಲು ಭಯಂಕರವೂ ಆಗಿದೆ. ಆದನ್ನು ನೋಡುವುದೇ ಕಷ್ಟ.

೭-೮. ಸೂರ್ಯಪುತ್ರನಾದ ಯಮನು ಪಾಪಿಷ್ಠರಿಗೂ, ಕ್ರೂರಿಗಳಿಗೂ, ದುರಾತ್ಮರಾದ ರಾಕ್ಷಸರಿಗೂ, ಕೊಲೆಗಾರರಾದ ಎಲ್ಲಾ ಪಾಪಿಗಳಿಗೂ ಆ ಬಾಗಿಲಿನಿಂದಲೇ ಪುರಪ್ರವೇಶವನ್ನು ವಿಧಿಸಿರುವನು.

೯–೧೦. ಅತ್ತಿಯ ಮರದಿಂದಾದುದೂ, ಅವೀಚೀಕವೆಂಬ ಹೆಸರುಳ್ಳದೂ, ಅನೇಕ ವಿಧವಾಗಿ ಮನಸ್ಸಿಗೆ ಬಂದಂತೆ ಮಾಡಿರುವುದೂ ಆಗಿರುವ ಪಶ್ಚಿಮದ

ಮಹತಾ ವಹ್ನಿಜಾಲೇನ ಸಮಾಲಿಪ್ತಂ ಭಯಾನಕಂ ।
ದುಷ್ಕೃತೀನಾಂ ಪ್ರವೇಶಾರ್ಥಂ ಯಮೇನ ವಿಹಿತಂ ಸ್ವಯಂ ॥ ೧೦ ॥

ತಸ್ಮಿನ್ಪುರವರೇ ರಮ್ಯೇ ರಮ್ಯಾ ಪರಮಶೋಭನಾ ।
ಸರ್ವರತ್ನಮಯೀ ದಿವ್ಯಾ ವೈವಸ್ವತನಿಯೋಜಿತಾ ॥ ೧೧ ॥

ಸಭಾ ಪರಮಸಂಪನ್ನಾ ಧಾರ್ಮಿಕೈಸ್ಸತ್ಯವಾದಿಭಿಃ ।
ಜಿತಕ್ರೋಧೈರಲುಬ್ಧೈಶ್ಚ ವೀತರಾಗೈಸ್ತಪಸ್ವಿಭಿಃ ॥ ೧೨ ॥

ಸಾ ಸಭಾ ಧರ್ಮಯುಕ್ತಾನಾಂ ಸಾ ಸಭಾ ಪಾಪಕಾರಿಣಾಂ ।
ಸಾ ಸಭಾ ಸರ್ವಲೋಕಸ್ಯ ಶುಭಸ್ಯೈವಾಶುಭಸ್ಯ ಚ ।
ಕರ್ಮಣಾ ಸೂಚಿತಸ್ಯಾಥ ಸಾ ಸಭಾ ಧರ್ಮಸಂಹಿತಾ ॥ ೧೩ ॥

ಅನಿರ್ವರ್ತ್ಯ ಯಥಾಕರ್ಮ ಶಾಸ್ತ್ರದೃಷ್ಟೇನ ಕರ್ಮಣಾ ।
ನಿರ್ವಿಶಂಕಾ ನಿರಾಕ್ಷೇಪಾ ಧರ್ಮಜ್ಞಾ ಧರ್ಮಪಾಠಕಾಃ ।
ಚಿಂತಯಂತಿ ಚ ಕಾರ್ಯಾಣಿ ಸರ್ವಲೋಕಹಿತಾಯ ತೇ ॥ ೧೪ ॥

ಗೋಪುರವೂ ಒಟ್ಟಿನಲ್ಲಿ ಸಂಗ್ರಹವಾಗಿ ಹೇಳುವುದಾದರೆ ದುರ್ನಿರೀಕ್ಷ್ಯವಾಗಿದೆ. ಅದು ಮಹಾಗ್ನಿಜ್ವಾಲೆಯಿಂದ ಕೂಡಿ ಭಯಂಕರವಾಗಿದೆ. ದುಷ್ಕರ್ಮಿಗಳ ಪ್ರವೇಶಕ್ಕಾಗಿ ಅದನ್ನು ಯಮನು ತಾನೇ ವಿಧಿಸಿರುವನು.

೧೧-೧೩. ರಮ್ಯವಾದ ಆ ಯಮನಗರಿಯಲ್ಲಿ ಮನೋಹರವೂ, ಪರಮಶೋಭನವೂ, ಸರ್ವರತ್ನಮಯವೂ, ದಿವ್ಯವೂ, ಯಮನಿಂದ ನಿಯಮಿತವಾದುದೂ ಆದ ಪರಮಸಂಪನ್ನವಾದ ಸಭೆಯಿದೆ. ಅದು ಧರ್ಮಿಷ್ಠರಿಂದಲೂ, ಸತ್ಯವಾದಿಗಳಿಂದಲೂ, ಕೋಪವನ್ನು ಜಯಿಸಿ ಲೋಭರಾಗರಹಿತರೂ ತಪಸ್ವಿಗಳೂ ಆದವರಿಂದಲೂ ಒಪ್ಪುತ್ತಿದೆ. ಅದು ಧರ್ಮಯುಕ್ತರಿಗೂ ಸಭೆ. ಪಾಪಕಾರಿಗಳಿಗೂ ಸಭೆ. ಅದು ಶುಭಾಶುಭದ ಸರ್ವಲೋಕಕ್ಕೂ ಸಭೆ.

೧೪. ಅಲ್ಲಿ ಧರ್ಮಜ್ಞರು ಧರ್ಮಪಾಠಕರೂ, ಮನಸ್ಸಿಗೆ ತೋರಿದಂತೆ ಕೆಲಸಮಾಡದೆ ಸಂದೇಹವಿಲ್ಲದವರೂ, ನಿರಾಕ್ಷೇಪರೂ ಆಗಿ ಸರ್ವಲೋಕಹಿತಕ್ಕಾಗಿ ಕಾರ್ಯಗಳನ್ನು ಆಲೋಚಿಸುವರು.

ಯಥಾದೃಷ್ಟಂ ಯಥಾಶಾಸ್ತ್ರಂ ಯಥಾಕಾಲನಿವೇದಕಾಃ ।
ತೇತಸ್ಸರ್ವೇ ಚ ತತ್ಸರ್ವಂ ಚಿಂತಯಂತಿ ಸುಯಂತ್ರಿತಾಃ ॥ ೧೫ ॥

ಮನುಃ ಪ್ರಜಾಪತಿಶ್ಚೈವ ಪಾರಾಶರ್ಯೋ ಮಹಾಮುನಿಃ ।
ಅತ್ರಿರೌದ್ದಾಲಕಿಶ್ಚೈವ ಆಪಸ್ತಂಬಶ್ಚ ವೀರ್ಯವಾನ್ ॥ ೧೬ ॥

ಬೃಹಸ್ಪತಿಶ್ಚ ಶುಕ್ರಶ್ಚ ಗೌತಮಶ್ಚ ಮಹಾತಪಾಃ ।
ಶಂಖಶ್ಚ ಲಿಖಿತಶ್ಚೈವ ಹ್ಯಂಗಿರಾ ಭೃಗುರೇವ ಚ । ॥ ೧೭ ॥

ಪುಲಸ್ತ್ಯಃ ಪುಲಹಶ್ಚೈವ ಯೇ ಚಾನ್ಯೇ ಧರ್ಮಪಾಠಕಾಃ ।
ಯಮೇನ ಸಹಿತಾಸ್ಸರ್ವೇ ಚಿಂತಯಂತಿ ಪ್ರತಿಕ್ರಿಯಾಂ ॥ ೧೮ ॥

ಸರ್ವೇ ಚ ಕಾಮಪ್ರಚುರಾ ಯೇ ದಿವ್ಯಾ ಯೇ ಚ ಮಾನುಷಾಃ ॥ ೧೯ ॥

ಕುಂಡಲಾಭ್ಯಾಂ ಪಿನದ್ಧಾಭ್ಯಾಮಂಗದಾಭ್ಯಾಂ ಮಹಾತಪಾಃ ।
ಭ್ರಾಜತೇ ಮಕುಟೇಸ್ತಸ್ಯ ಬ್ರಹ್ಮದತ್ತೋ ಮಹಾದ್ಯುತಿಃ ॥ ೨೦ ॥

---

೧೫. ಕಾಲಕ್ಕೆ ಸರಿಯಾಗಿ ತಿಳಿಸುವವರೂ, ಸುನಿಯಮಬದ್ಧರೂ ಆದ ಎಲ್ಲರೂ ಎಲ್ಲವನ್ನೂ ಶಾಸ್ತ್ರಕ್ಕೂ, ಪ್ರತ್ಯಕ್ಷಕ್ಕೂ ವಿರೋಧವಿಲ್ಲದಂತೆ ಆಲೋಚಿಸುವರು.

೧೬–೧೯. ಮನು, ಪ್ರಜಾಪತಿ, ವ್ಯಾಸಮಹಾಮುನಿ, ಅತ್ರಿ ಋಷಿ, ಉದ್ದಾಲಕ ಪುತ್ರ, ವೀರ್ಯವಂತನಾದ ಆಪಸ್ತಂಬ, ಬೃಹಸ್ಪತಿ, ಶುಕ್ರ, ಮಹಾತಪಸ್ವಿಯಾದ ಗೌತಮಮುನಿ, ಶಂಖಲಿಖಿತರು, ಅಂಗಿರಸಮುನಿ, ಭೃಗುಋಷಿ, ಪುಲಸ್ತ್ಯ, ಪುಲಹ ಇವರೂ, ಇತರ ಧರ್ಮಪಾಠಕರೂ, ಕಾಮಪ್ರಚುರರಾದ ದೇವತೆಗಳೂ, ಮನುಷ್ಯರೂ, ಎಲ್ಲರೂ ಯಮನೊಡನೆ ಸೇರಿ, ಪ್ರತಿಕ್ರಿಯೆಗಳನ್ನು ಆಲೋಚಿಸುವರು.

೨೦. ಮಹಾತಪನಾದ ಯಮನು (ಕರ್ಣ)ಕುಂಡಲಗಳಿಂದಲೂ, ಭುಜಾಭರಣಗಳಿಂದಲೂ ಪ್ರಕಾಶಿಸುವನು. ಆತನ ಬ್ರಹ್ಮದತ್ತವಾದ ಕಿರೀಟವು ಹೊಳೆಯುತ್ತಿರುವುದು.

ತೇಜಸಾ ವಚಸಾ ಚೈವ ದುರ್ನಿರೀಕ್ಷ್ಯೋ ಮಹಾಬಲಃ ।
ಏಕಸ್ಥಮಿವ ಸರ್ವೇಷಾಂ ತೇಜಸ್ತೇಜಸ್ವಿನಾಂ ತದಾ ॥ ೨೦ ॥

ತಸ್ಯ ಪಾರ್ಶ್ವೇ ಮಹಾದಿವ್ಯಾ ಋಷಯೋ ಬ್ರಹ್ಮವಾದಿನಃ ।
ದೀಪ್ಯಮಾನಾಃ ಸ್ವವಪುಷಾ ವೇದವೇದಾಂಗಪಾರಗಾಃ ॥ ೨೨ ॥

ವೇದಾರ್ಥಾನಾಂ ವಿಚಾರಜ್ಞಾಃ ಸತ್ಯಧರ್ಮಪುರಸ್ಕೃತಾಃ ।
ಛಂದಶಿಕ್ಷಾವಿಕಲ್ಪಜ್ಞಾಃ ಸರ್ವಶಾಸ್ತ್ರವಿಕಲ್ಪಕಾಃ ॥ ೨೩ ॥

ನಿರುಕ್ತಮತಿವಾದಾಶ್ಚ ಸಾಮಗಾಂಧರ್ವಶೋಭಿತಾಃ ।
ಧಾತುವಾದಾಶ್ಚ ವಿವಿಧಾ ನಿರುಕ್ತಾಶ್ಚೈವ ನೈಗಮಾಃ ॥ ೨೪ ॥

ತತ್ರ ಚೈವ ಮಯಾ ದೃಷ್ಟಾ ಋಷಯಃ ಪಿತರಸ್ತಥಾ ।
ಭವನೇ ಧರ್ಮರಾಜಸ್ಯ ಪ್ರಗಾಯಂತಃ ಕಥಾಶ್ಶುಭಾಃ ॥ ೨೫ ॥

---

೨೧. ಮಹಾಬಲನಾದ ಆತನು ತೇಜದಿಂದಲೂ, ವಾಕ್ಕಿನಿಂದಲೂ ಸರ್ವ ತೇಜಸ್ವಿಗಳ ತೇಜಸ್ಸೂ ಒಂದೆಡೆಯಲ್ಲಿರುವಂತೆ ದುರ್ನಿರೀಕ್ಷ್ಯನಾಗಿರುವನು

೨೨-೨೪. ಆತನ ಪಕ್ಕದಲ್ಲಿ ಮಹಾದೇವತೆಗಳೂ, ಬ್ರಹ್ಮವಾದಿಗಳಾದ ಋಷಿಗಳೂ, ತಮ್ಮ ದೇಹಕಾಂತಿಯಿಂದ ಹೊಳೆಯುತ್ತಿರುವ ವೇದವೇದಾಂಗ ಪಾರಂಗತರೂ, ವೇದಾರ್ಥವಿಚಾರಜ್ಞರೂ, ಸತ್ಯಧರ್ಮಪುರಸ್ಕೃತರೂ, ಛಂದಸ್ಸು, ಶಿಕ್ಷೆ ಇವುಗಳ ವಿಕಲ್ಪವನ್ನರಿತವರೂ, ಸರ್ವಶಾಸ್ತ್ರಗಳನ್ನೂ ಕಲ್ಪಿಸುವವರೂ, ನಿರುಕ್ತ ಕಾರರೂ, ಸಾಮಗಾಂಧರ್ವವೇದದಿಂದೊಪ್ಪುವವರೂ, ಬಗೆಬಗೆಯ ಧಾತುವಾದಿ ಗಳೂ, *ನೈಗಮರೂ ಇರುವರು.

೨೫. ಆ ಧರ್ಮರಾಜ ಗೃಹದಲ್ಲಿಯೇ ಶುಭಕಥೆಗಳನ್ನು ಚೆನ್ನಾಗಿ ಹೇಳು ತ್ತಿರುವ ಋಷಿಗಳನ್ನೂ, ಪಿತೃದೇವತೆಗಳನ್ನೂ ನಾನು ನೋಡಿದೆನು.

---

* ನೈಗಮ= ಉಪನಿಷತ್ತು ; ವರ್ತಕ ; ಪಟ್ಟಣಿಗ ; ಪಟ್ಟಣಕ್ಕೆ ಸಂಬಂಧಿಸಿದುದು.

ತಸ್ಯ ಪಾರ್ಶ್ವೇ ಮಯಾ ದೃಷ್ಟಃ ಕೃಷ್ಣವರ್ಣೋ ಮಹಾಹನುಃ ।
ಉತ್ತಮಃ ಪ್ರಕೃತಾಕಾರ ಉಧ್ವಃ ರೋಮಾ ನಿರಾಕೃತಿಃ ॥ ೨೬ ॥

ವಾಮಬಾಹುಶ್ಚ ದಂಡೇನ ಪ್ರವರೇಣ ಸಮನ್ವಿತಃ ।
ವಿಕೃತಾಸ್ಯೋ ಮಹಾದಂಷ್ಟ್ರೋ ನಿತ್ಯಕ್ರುದ್ಧೋ ಭಯಾನಕಃ ॥ ೨೭ ॥

ಶಿಕ್ಷಾರ್ಥೇ ಧರ್ಮರಾಜೇನ ಸಂದಿಷ್ಟಸ್ಸ ಪುನಃ ಪುನಃ ।
ಶೃಣೋತಿ ಚೈವ ಕಾಲೋಽಸೌ ನಿತ್ಯಯುಕ್ತಸ್ಸನಾತನಃ ॥ ೨೮ ॥

ತಥಾನ್ಯೇ ಚಾಪರೇ ತತ್ರ ಶಾಸನೇಷು ಸಮಾಹಿತಾಃ ।
ದೃಷ್ಟಾಸ್ತತ್ರ ಮಯಾ ತಾತ ಸರ್ವತೇಜೋಮಯೀಶುಭಾ ॥ ೨೯ ॥

ಯಮೇನ ಪೂಜ್ಯಮಾನಾಸಾ ದಿವ್ಯಗಂಧಾನುಲೇಪನೈಃ ।
ಸಂಹಾರಸ್ಸರ್ವಲೋಕಾನಾಂ ಗತೀನಾಂಚ ಮಹಾಗತಿಃ ॥ ೩೦ ॥

೨೬-೨೭. ಆಯಮರಾಜನ ಪಾರ್ಶ್ವದಲ್ಲಿ ಕಪ್ಪುಬಣ್ಣದವನೂ, ವಿಶಾಲ ಕಪೋಲನೂ, ಉತ್ತಮನೂ, ತಕ್ಕದಾದ ಆಕಾರವುಳ್ಳವನೂ, ರೋಮಾಂಚಿತಾಂಗನೂ, ಸುಂದರಬಾಹುವೂ, ಉತ್ತಮವಾದ ದಂಡವನ್ನು ಧರಿಸಿರುವವನೂ, ಕೋರೆಯಹಲ್ಲುಗಳುಳ್ಳವನೂ, ವಿಕಾರವಾದ ಮುಖವುಳ್ಳವನೂ, ಯಾವಾಗಲೂ ಕೋಪವುಳ್ಳವನಾಗಿ ಭಯಂಕರನೂ ಆಗಿರುವವನೊಬ್ಬನನ್ನು ನೋಡಿದೆನು.

೨೮. ಶಿಕ್ಷಾರ್ಥವಾಗಿ ಯಮಧರ್ಮರಾಜನು ಮತ್ತೆಮತ್ತೆ ಮಾಡುವ ಆಜ್ಞೆಯನ್ನು ಯಾವಾಗಲೂ ಸಿದ್ಧನಾಗಿರುವ ಸನಾತನನಾದ ಆಕಾಲವೀರಪುರುಷನು ನಡೆಯಿಸುವನು.

೨೯-೩೦. ಆತನಲ್ಲದೆ ಇತರರು ಕೆಲವರೂ ಯಮನ ಆಜ್ಞೆಯನ್ನು ನಿರೀಕ್ಷಿಸುತ್ತಿರುವರು. ಅಪ್ಪಾ, ಅಲ್ಲಿ ಗತಿಗಳೆಲ್ಲೆಲ್ಲಾ ಮಹಾಗತಿಯೂ, ಸರ್ವಲೋಕಗಳ ಸಂಗ್ರಹವೂ, ಸರ್ವತೇಜೋಮಯವೂ ಆಗಿ, ಯಮನಿಂದ ದಿವ್ಯಗಂಧಾನುಲೇಪನಾದಿಗಳಿಂದ ಪೂಜಿಸಲ್ಪಡುವ ಆಶುಭಸಭೆಯನ್ನು ನೋಡಿದೆನು.

ಅತಃ ಪರಂ ನ ಕರ್ತವ್ಯಂ ಸಾಧನಂ ಕಥಿತಂ ಬುಧೈಃ ।
ಬಿಭ್ಯತಿ ಹ್ಯಸುರಾಸ್ತತ್ರ ಋಷಯಶ್ಚ ತಪೋಧನಾಃ ।
ಅಸುರಾಶ್ಚ ಸುರಾಶ್ಚೈವ ಯೋಗಿನಶ್ಚ ಮಹೌಜಸಃ ॥ ೩೦ ॥

ನಮಸ್ಕಾರ್ಯಾ ಚ ಪೂಜ್ಯಾ ಚ ಮೋಹಿನೀ ಸರ್ವಸಾಧನೀ ॥ ೩೧ ॥

ತಸ್ಯಾಂಗೇಭ್ಯಸ್ಸಮುದ್ಭೂತಾ ವ್ಯಾಧಯಃ ಕ್ಲೇಶಸಂಭವಾಃ ।
ಅಪರಾಶ್ಚ ಮಹಾಘೋರಾಃ ವ್ಯಾಧಯಃ ಕಾಲನಿರ್ಮಿತಾಃ ॥ ೩೨ ॥

ಪೌರುಷೇಣ ಸಮಾಯುಕ್ತಾಸ್ಸರ್ವಲೋಕನಯಾಯುತಾಃ ।
ಪ್ರಕೃತ್ಯಾ ದುರ್ವಿನೀತಶ್ಚ ಮಹಾಕ್ರೋಧಸ್ಸುದಾರುಣಃ ॥ ೩೪ ॥

ಮಹಾಸತ್ವೋ ಮಹಾತೇಜಾಃ ಜರಾಮರಣವರ್ಜಿತಃ ।
ಮೃತ್ಯುರ್ದೃಷ್ಟೋ ದುರಾಧರ್ಷೋ ದಿವ್ಯಗಂಧಾನುಲೇಪನಃ ॥ ೩೫ ॥

---

೩೦. ಅಲ್ಲಿ ಬುಧರು ಹೇಳಿದ ಕರ್ತವ್ಯಸಾಧನವನ್ನು ನಾನೂ ಇನ್ನೂ ಹೇಳಿಲ್ಲ. ಅಲ್ಲಿ ಅಸುರರೂ, ತಪೋಧನರಾದ ಋಷಿಗಳೂ, ದೇವತೆಗಳೂ, ಮಹೌಜಸರಾದ ಯೋಗಿಗಳೂ ಭಯಪಡುವರು.

೩೧-೩೪ ಅಲ್ಲಿರುವ ಸರ್ವಸಾಧನಳೂ, ಪೂಜ್ಯಳೂ ಆದ ಮೋಹಿನಿಯು ನಮಸ್ಕಾರಾರ್ಹಳು. ಕ್ಲೇಶವನ್ನುಂಟುಮಾಡುವ ವ್ಯಾಧಿಗಳು ಆಕೆಯ ಅಂಗ. ದಿಂದುದಿಸಿದುವು. ಮಹಾಘೋರವಾದುವೂ, ಪೌರುಷವುಳ್ಳವೂ, ಸರ್ವಲೋಕನೀತಿದೀರ್ಘವಾದುವೂ ಆದ ಬೇರೆಯ ವ್ಯಾಧಿಗಳೂ ಯಮನಿಂದ ಸೃಷ್ಟಿಸಲ್ಪಟ್ಟಿವೆ

೩೫ ಮಹಾಸತ್ವನೂ, ಮಹಾತೇಜನೂ, ಮುಪ್ಪುಸಾವುಗಳಿಲ್ಲದವನೂ, ತಿರಸ್ಕರಿಸಲಶಕ್ಯನೂ, ದಿವ್ಯಗಂಧಾನುಲಿಪ್ತನೂ ಆದ ಮೃತ್ಯುವನ್ನು ನಾನು ನೋಡಿದೆನು.

ಗಾಯಕಾ ಹಾಸಕಾಶ್ಚೈವ ಸರ್ವಜೀವಪ್ರಬೋಧಕಾಃ ।
ಮೃತ್ಯುನಾ ಸಹಿತಾ ನಿತ್ಯಂ ಕಾಲಜ್ಞಾಃ ಕಾಲಸಮ್ಮತಾಃ ॥
ದಿವ್ಯಾಭರಣಶೋಭಾಭಿರ್ಶೋಭಮಾನಾಸ್ಸುತೇಜಸಃ ॥ ೩೬ ॥

ಸವಾಲವ್ಯಜನಚ್ಛನ್ನೈಃ ಕೇಚಿತ್ತತ್ರ ಮಹೌಜಸಃ ।
ಪರ್ಯಾಸ್ತರಣಸಂಛನ್ನೇಷ್ವಾಸನೇಷು ತಥಾ ಪರೇ ॥ ೩೭ ॥

ಪೂಜ್ಯಮಾನಾ ಮಯಾ ದೃಷ್ಟಾಃ ಕೇಚಿತ್ತತ್ರ ಮಹೌಜಸಃ ॥ ೩೮ ॥

ಅನೇಕಾಶ್ಚ ಜ್ವರಾಸ್ತತ್ರ ವೇದನಾಶ್ಚ ಸುದಾರುಣಾಃ ।
ನಾರೀನರಸ್ವರೂಪಾಶ್ಚ ಮಯಾ ದೃಷ್ಟಾಸ್ತ್ವನೇಕಶಃ ॥ ೩೯ ॥

ಕಾಮಕ್ರೋಧವಿಚಾರಿಣ್ಯೋ ನಾನಾರೂಪಧರಾಸ್ತ್ರಿಯಃ ।
ಜೀವಭಕ್ಷಕರಾ ಘೋರಾಸ್ತೀವ್ರರೋಷಾ ಭಯಾನಕಾಃ ॥ ೪೦ ॥

---

೩೬. ಅಲ್ಲಿ ದಿವ್ಯಾಭರಣಗಳ ಕಾಂತಿಯಿಂದೊಪ್ಪುವವರೂ, ಸುತೇಜರೂ ಮಹೌಜಸರೂ, ಸರ್ವಜೀವರನ್ನೂ ಪ್ರಬೋಧಗೊಳಿಸುವವರೂ, ಯಮನಿಗೆ ಸಮ್ಮತರೂ ಆದ ಗಾಯಕರೂ, ಹಾಸ್ಯಗಾರರೂ, ಜ್ಞಾನಿಗಳೂ ಯಾವಾಗಲೂ ಅಮೃತ್ಯುದೇವನೊಡನೆ ಇರುವರು

೩೭–೩೮. ಅಲ್ಲಿ ಮಹೌಜಸರಾದ ಮತ್ತೆಕೆಲವರು ಚಿತ್ರಾಲಂಕೃತಗಳಾದ ವೇತ್ರಗಳನ್ನು ಹಾಸಿರುವ ಪೀಠಗಳಲ್ಲಿ ಕುಳಿತು, ಚಾಮರಾದಿಗಳಿಂದ ಪೂಜಿತ ರಾಗುತ್ತಿರುವುನ್ನು ನೋಡಿದೆನು.

೩೯. ಬಹು ಭಯಂಕರಗಳೂ, ಸ್ತ್ರೀಪುರುಷರೂಪಧಾರಿಗಳೂ ಆದ ಅನೇಕ ಜ್ವರಗಳನ್ನೂ, ವೇದನೆಗಳನ್ನೂ ನಾನು ಅಲ್ಲಿ ನೋಡಿದೆನು.

೪೦. ನಾನಾರೂಪಗಳನ್ನು ಧರಿಸಿದವರೂ, ಕಾಮಕ್ರೋಧ ವಿಚಾರಿಣಿಯರೂ ಜೀವಭಕ್ಷಕರೂ, ಘೋರರೂ, ಅತಿರೋಷವುಳ್ಳವರೂ, ಭಯಂಕರರೂ ಆದ ಸ್ತ್ರೀಯರನ್ನೂ ನಾನು ಅಲ್ಲಿ ನೋಡಿದೆನು.

ತಾಸಾಂ ಹಲಹಲಾಶಬ್ದಃ ಸರ್ವಾಸಾಂ ಚ ಸಮಂತತಃ |
ಧರ್ಮರಾಜಸಮೀಪೇ ತು ದಾರಯಂತಿ ಧರಾಮಿಮಾಂ || ೪೧ ||

ಕೂಷ್ಮಾಂಡಾ ಯಾತುಧಾನಾಶ್ಚ ರಾಕ್ಷಸಾಃ ಪಿಶಿತಾಶನಾಃ |
ಏಕಪಾದಾ ದ್ವಿಪಾದಾಶ್ಚ ತ್ರಿಪಾದಾ ಬಹುಪಾದಕಾಃ || ೪೨ ||

ಏಕಬಾಹುರ್ದ್ವಿಬಾಹುಶ್ಚ ತ್ರಿಬಾಹುರ್ಬಹುಬಾಹುಕಃ |
ಶಂಕುಕರ್ಣಾ ಮಹಾಕರ್ಣಾ ಹಸ್ತಿಕರ್ಣಾಸ್ತಥಾಪರೇ || ೪೩ ||

ಕೇಚಿತ್ತು ತತ್ರ ಪುರುಷಾಃ ಸರ್ವಶೋಭಾವಿಶೋಭಿತಾಃ |
ಕೇಯೂರೈರ್ಮುಕುಟೈಶ್ಚಾನ್ಯೇ ಚಿತ್ರೈರಂಗೈಸ್ತಥಾಪರೇ || ೪೪ ||

ಸ್ರಗ್ವಿಣೋ ಬದ್ಧಪಾದಾಶ್ಚ ಸರ್ವಾಭರಣಭೂಷಿತಾಃ |
ಸಕುಠಾರಾಸ್ಸಕುದ್ದಾಲಾಸ್ಸಚಕ್ರಾಶ್ಶೂಲಪಾಣಯಃ || ೪೫ ||

---

೪೧. ಎಲ್ಲಾ ಕಡೆಯೂ ಆಗುವ ಆ ಸ್ತ್ರೀಯರೆಲ್ಲರ ಕಲಕಲಶಬ್ದವು ಯಮ ಧರ್ಮರಾಜನ ಸಮೀಪದಲ್ಲಂತೂ ಈ ಭೂಮಿಯನ್ನೇ ಸೀಳಿಬಿಡುವುದು.

೪೨-೪೩. ಒಂದು, ಎರಡು, ಮೂರು ಅಥವಾ ಹಲವು ಕಾಲುಗಳೂ, ಒಂದು, ಎರಡು, ಮೂರು ಅಥವಾ ಹಲವು ಕೈಗಳೂ, ಈಟಿ ಅಥವಾ ಗೂಟದಂತೆ ಕಿವಿಯೂ, ದೊಡ್ಡಕಿವಿಯೂ, ಆನೆಯ ಕಿವಿಯೂ ಉಳ್ಳ ಕೂಷ್ಮಾಂಡರೂ, ಯಾತುಧಾನರೂ, ಪಿಶಾಚಿಗಳೂ ಅಲ್ಲಿರುವರು.

೪೪-೪೫. ಅಲ್ಲಿ ಕೆಲವರು ಪುರುಷರು ಸರ್ವಲಕ್ಷಣಗಳಿಂದೊಪ್ಪುತ್ತ ಭುಜಾಭರಣಕಿರೀಟಗಳಿಂದ ಸೊಗಸುತ್ತಿರುವರು. ಕೆಲವರು ವಿಚಿತ್ರಾಂಗವುಳ್ಳವರಾಗಿ ಮಾಲಾಧಾರಿಗಳಾಗಿಯೂ, ಕಾಲುಬಳೆಗಳೇ ಮೊದಲಾದ ಸರ್ವಾಭರಣಾಲಂಕೃತರಾಗಿಯೂ ಇರುವರು. ಕೆಲವರು ಕೊಡಲಿಗಳನ್ನೂ ಗುದ್ದಲಿಗಳನ್ನೂ, ಚಕ್ರಗಳನ್ನೂ, ಶೂಲಗಳನ್ನೂ ಹಿಡಿದಿರುವರು.

ಸಶಕ್ತಿತೋಮರಾಃ ಕೇಚಿತ್ಸಧನುಷ್ಕಾದುರಾಸದಾಃ ।
ಅಸಿಹಸ್ತಾಸ್ತಥಾ ಚಾನ್ಯೇ ತಥಾ ಮುದ್ಗರಪಾಣಯಃ ॥ ೪೬ ॥
ಸಜ್ಜಿತಾ ದಧಿಹಸ್ತಾಶ್ಚ ಗಂಧಹಸ್ತಾಹ್ಯನೇಕಶಃ ।
ವಿಚಿತ್ರಭಕ್ಷ್ಯಹಸ್ತಾಶ್ಚ ವಸ್ತ್ರಹಸ್ತಾಸ್ತಥೈವ ಚ ।
ಧೂಪಾನ್ಸ್ರಗ್ಗೃಹ್ಯ ವಿವಿಧಾನ್ವಾಸಾಂಸಿ ಶುಭದರ್ಶನಾಃ ॥ ೪೭ ॥
ಶಿಬಿಕಾಶ್ಚ ಮಹಾಶೋಭಾ ಯಾನಾನಿ ವಿವಿಧಾನಿ ಚ ।
ವಾಜಿಕುಂಜರಯುಕ್ತಾನಿ ಹಂಸಯುಕ್ತಾನಿ ಚಾಪರೇ ॥ ೪೮ ॥
ಶರಭೈ ಋಷಭೈಶ್ಚಾಪಿ ಹಸ್ತಿಭಿಶ್ಚ ಸುದರ್ಶನೈಃ ।
ಮಯೂರೈಃ ಸಾರಸೈಶ್ಚೈವ ಚಕ್ರವಾಕೈಶ್ಚ ವಾಜಿಭಿಃ ॥ ೪೯ ॥
ಏವಂರೂಪಾ ಮಯಾ ದೃಷ್ಟಾಸ್ತತ್ರ ಚಾನ್ಯೇ ಭಯಾನಕಾಃ ।
ಉಜ್ವಲಾ ಮಲಿನಾಶ್ಚೈವ ಜೀರ್ಣವಸ್ತ್ರಾ ನವಾಂಶುಕಾಃ ॥ ೫೦ ॥

---

೪೬. ಕೆಲವರು ಶಕ್ತಿತೋಮರಾಯುಧಗಳನ್ನು ಧರಿಸಿರುವರು. ಕೆಲವರು ಧನುರ್ಧಾರಿಗಳಾಗಿರುವರು. ಮತ್ತೆಕೆಲವರು ಮುದ್ಗರಾಯುಧವನ್ನು ಧರಿಸಿರುರುವರು.

೪೭. ಕೆಲವರು ಮೊಸರನ್ನೂ, ಕೆಲವರು ಗಂಧವನ್ನೂ, ಕೆಲವರು ಧೂಪವನ್ನೂ, ಕೆಲವರು ಬೇಕಾದಹಾಗೆ ವಿಚಿತ್ರವಾದ ಭಕ್ಷ್ಯಗಳನ್ನೂ, ವಸ್ತ್ರಗಳನ್ನೂ ಹಿಡಿದುಕೊಂಡು, ಸಿದ್ಧರಾಗಿ ನೋಡುವುದಕ್ಕೆ ಚೆನ್ನಾಗಿರುವರು.

೪೮–೪೯. ಅಲ್ಲಿ ಬಹಳ ಸೊಗಸಾದ ಪಲ್ಲಕ್ಕಿಗಳೂ, ಸುಂದರವಾದ ಆನೆ ಕುದುರೆಗಳಿಂದಲೂ, ಹಂಸಗಳಿಂದಲೂ, ಶಭರಗಳಿಂದಲೂ, ಎತ್ತುಗಳಿಂದಲೂ, ಕೂಡಿದ ಬಗೆಬಗೆಯ ಯಾನಗಳೂ, ಆನೆ, ಕುದುರೆ, ನವಿಲು, ಸಾರಸ, ಚಕ್ರವಾಕ ಮೊದಲಾದುವುಗಳೂ ಇರುವುವು.

೫೦. ಅಲ್ಲಿ ಕೆಲವರು ಭಯಂಕರರಾಗಿಯೂ ಕೆಲವರು ಹೊಳೆಯುವವರಾಗಿಯೂ, ಕೆಲವರು ಮಲಿನರಾಗಿಯೂ, ಕೆಲವರು ಹಳೆಯ ಬಟ್ಟೆಯನ್ನುಟ್ಟವರಾಗಿಯೂ, ಕೆಲವರು ಹೊಸ ಬಟ್ಟೆಗಳನ್ನು ಧರಿಸಿದವರಾಗಿಯೂ ನನಗೆ ಕಾಣಿಸಿದರು.

ಸುಮನಾ ವಿಮನಾ ಮೂಕಾ ಮಾರಕಾಶ್ಶತಮಾರಕಾಃ ॥ ೫೧ ॥
ಸಮಾರ್ಜಾರೀ ಕಾಚವರ್ಣಾ ಕೃಷ್ಣಾಚೈವ ಕಲಿಸ್ತಥಾ ।
ಧರ್ಮಹಸ್ತಾ ಯಶೋಹಸ್ತಾಃ ಕೀರ್ತಿಹಸ್ತಾಸ್ತಥಾಪರೇ ॥ ೫೨ ॥
ಏತೇ ಪುರೋಗಮಾಸ್ತತ್ರ ಕೃತಾಂತಸ್ಯ ಮಹಾತ್ಮನಃ ।
ಯದ್ಯೇತಾನಿ ಯಜೇದ್ವಿಪ್ರೋ ನಾಸ್ತಿ ತಸ್ಯ ಪರಾಭವಃ ॥ ೫೩ ॥
ನಮಸ್ಕಾರ್ಯಾಶ್ಚ ಪೂಜ್ಯಾಶ್ಚ ಆಪನ್ನೇನ ಹಿ ನಿತ್ಯಶಃ ।
ಪರಿತುಷ್ಯ ಕೃತಾ ನಿತ್ಯಂ ವಿಹಿತಾಸ್ಸರ್ವಲೌಕಿಕಾಃ ॥ ೫೪ ॥

ಇತಿ ಶ್ರೀವರಾಹಪುರಾಣೇ ಸಂಸಾರಚಕ್ರೇ ಕೃತಾಂತಕಾಲಮೃತ್ಯು ಕಿಂಕರವರವರ್ಣನಂ ನಾಮ ಸಪ್ತನವತ್ಯಧಿಕ ಶತತಮೋಧ್ಯಾಯಃ

---

೫೧. ಕೆಲವರು ಒಳ್ಳೆಯ ಮನಸ್ಸುಳ್ಳವರು. ಕೆಲವರು ಕೆಟ್ಟ ಮನಸ್ಸುಳ್ಳವರು ಕೆಲವರು ಮೂಕರು. ಕೆಲವರು ಕೊಲೆಗಾರರು. ಕೆಲವರು ನೂರಾರುಜನರನ್ನು ಕೊಲ್ಲುವವರು.

೫೨. ಅಲ್ಲಿ ಒಬ್ಬಳು ಬೆಕ್ಕನ್ನು ಹಿಡಿದುಕೊಂಡು, ಗಾಜಿನಂತೆ ಕಪ್ಪಾಗಿ ಶಕ್ತಳಾಗಿರುವಳು. ಮತ್ತೆಕೆಲವರು ಧರ್ಮಹಸ್ತರಾಗಿ ಕೀರ್ತಿಯನ್ನು ಪಡೆದಿರುವರು.

೫೩. ಮಹಾತ್ಮನಾದ ಯಮನ ಸಭೆಯಲ್ಲಿ (ಮೇಲೆ ಹೇಳಿದ) ಇವರೇ ಮೊದಲಾದವರಿರುವರು. ಇವರನ್ನು ಪೂಜಿಸಿದನಾದರೆ ಅವನಿಗೆ ಪರಾಭವವಿಲ್ಲ.

೫೪. ಆಪತ್ತಿಗೊಳಗಾಗಿರುವವನು ನಿತ್ಯವೂ ಇವರನ್ನು ನಮಸ್ಕರಿಸಿ ಪೂಜಿಸಬೇಕು. ಧರ್ಮರಾಜನು ಸಂತೋಷಗೊಂಡು ಇವರನ್ನು ಎಲ್ಲಾ ಲೋಕಗಳಲ್ಲೂ ಇರುವಂತೆ ಮಾಡಿಟ್ಟಿರುವನು.

ಅಧ್ಯಾಯದ ಸಾರಾಂಶ

ವೈಶಂಪಾಯನಮುನಿಯು ಜನಮೇಜಯರಾಯನಿಗೆ— ನಚಿಕೇತನು ಮುನಿಗಳೇಮೊದಲಾದವರಿಗೆ ಹೇಳಿದ ಯಮಪುರದ ನಾಲ್ಕು ಗೋಪುರಗಳ, ಯಮರಾಜನ ಸಭೆಯ ಮತ್ತು ಸಭಿಕರ ರೂಪಗುಣಕಾರ್ಯಮಹಿಮಾದಿಗಳ ವರ್ಣನೆಯನ್ನು ತಿಳಿಸುವನು.

ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ನೂರತೊಂಬತ್ತೇಳನೆಯ ಅಧ್ಯಾಯವು.

॥ ಶ್ರೀ ॥

ಅಷ್ಟನವತ್ಯಧಿಕಶತತಮೋಽಧ್ಯಾಯಃ

ಅಥ ಸಂಸಾರಚಕ್ರಯಾತನಾಸ್ವರೂಪವರ್ಣನಂ

॥ ನಚಿಕೇತ ಉವಾಚ ॥

ವರ್ತಮಾನಸ್ಸಭಾಮಧ್ಯೇ ರಾಜಾ ಪ್ರೇತಪುರಾಧಿಪಃ ।
ಮಾಮೇಕಮೃಷಭಂ ತತ್ರ ದರ್ಶನಂ ಚ ದದೌ ಯಮಃ ॥ ೧ ॥

ಯಾಥಾತಥ್ಯೇನ ಮೇ ಪೂಜಾ ಕಾರ್ಯೇಣ ವಿಧಿನಾಕರೋತ್ ।
ಆಸನಂ ಪಾದ್ಯಮರ್ಘ್ಯಂ ಚ ವೇದದೃಷ್ಟೇನ ಕರ್ಮಣಾ ॥ ೨ ॥

ಅಬ್ರವೀಚ್ಚ ಪುನರ್ಹೃಷ್ಟೋ ಹ್ಯಾಸ್ಯತಾಂ ಚ ವರಾಸನೇ ।
ಕಾಂಚನೇ ಕುಶಸಂಛನ್ನೇ ದಿವ್ಯಪುಷ್ಪೋಪಶೋಭಿತೇ ॥ ೩ ॥

ನೂರ ತೊಂಬತ್ತೆಂಟನೆಯ ಅಧ್ಯಾಯ

ಸಂಸಾರಚಕ್ರಯಾತನಾಸ್ವರೂಪವರ್ಣನಂ.

೧–೨ ನಚಿಕೇತ–ಆ ಸಭಾಮಧ್ಯದಲ್ಲಿದ್ದ ಪ್ರೇತಪುರಾಧಿಪತಿಯಾದ ಯಮರಾಜನು ನನ್ನನ್ನು ಒಬ್ಬ ಶ್ರೇಷ್ಠನನ್ನಾಗಿತಿಳಿದು ನನಗೆ ದರ್ಶನವನ್ನು ದಯಪಾಲಿಸಿ, ವೇದೋಕ್ತವಾದ ವಿಧಿಯಿಂದ ಆಸನವನ್ನೂ, ಅರ್ಘ್ಯಪಾದ್ಯಗಳನ್ನೂ ಕೊಟ್ಟು ನಿಜವಾಗಿಯೂ ಪೂಜೆಯನ್ನು ಮಾಡಿದನು.

೩. ಅಲ್ಲದೆ ದರ್ಭೆಯನ್ನು ಹಾಸಿ, ದಿವ್ಯಪುಷ್ಪಾಲಂಕೃತವಾಗಿರುವ ಸುವರ್ಣದ ಉತ್ತಮಾಸನದಲ್ಲಿ "ಕುಳಿತುಕೊಳ್ಳೋಣವಾಗಲಿ" ಎಂದು ಸಂತೋಷದಿಂದ ಹೇಳಿದನು.

ತಸ್ಯ ವಕ್ತ್ರಂ ಮಹಾರೌದ್ರಂ ನಿತ್ಯಮೇವ ಭಯಾನಕಂ ।
ಪಶ್ಯತಸ್ತಸ್ಯ ಮಾಂ ವಿಪ್ರಾಸ್ತತಸ್ಸೌಮ್ಯತರಂ ಬಭೌ ॥ ೪ ॥

ಲೋಹಿತೇ ತಸ್ಯ ವೈ ನೇತ್ರೇ ಜಲ್ಪತಶ್ಚ ಪುನಃ ಪುನಃ ।
ಪದ್ಮಪತ್ರನಿಭೇ ಚೈವ ಜಜ್ಞಾತೇ ಮಮ ಸೌಹೃದಾತ್ ॥ ೫ ॥

ತತೋಽಹಂ ತಸ್ಯ ಭಾವೇನ ಭಾವಿತಶ್ಚ ಪುನಃ ಪುನಃ ।
ಪ್ರಹೃಷ್ಟಮಾನಸೋ ಜಾತೋ ವಿಶ್ವಾಸಂ ಚ ಪರಂಗತಃ ॥ ೬ ॥

ತಸ್ಯ ಪ್ರೀತಿಕರಂ ಸದ್ಯಃ ಸರ್ವದೋಷವಿನಾಶನಂ ।
ಕಾಮದಂ ಚ ಯಶೋದಂಚ ದೈವತೈಶ್ಚಾಪಿ ಪೂಜಿತಂ ॥ ೭ ॥

ಕಾಲವೃದ್ಧಿಕರಂ ಸ್ತೋತ್ರಂ ಕ್ಷಿಪ್ರಂ ತತ್ರ ಉದೀರಯಂ ।
ತೇನ ಪ್ರೀತೋ ಮಹಾತೇಜಾ ಯಮಃ ಪರಮಧಾರ್ಮಿಕಃ ॥ ೮ ॥

---

೪. ಬ್ರಾಹ್ಮಣರೇ, ಯಾವಾಗಲೂ ಮಹಾರೌದ್ರವಾಗಿ ಭಯಂಕರವಾಗಿರುವ ಆತನ ಮುಖವು ನನ್ನನ್ನು ನೋಡುತ್ತಿರುವಾಗ ಬಹು ಸೌಮ್ಯವಾಗಿ ಹೊಳೆಯುತ್ತಿದ್ದಿತು.

೫. ಪ್ರೀತಿಯಿಂದ ನನ್ನೊಡನೆ ಮತ್ತೆಮತ್ತೆ ಮಾತನಾಡುತ್ತಿರುವಾಗ ಆ ಧರ್ಮರಾಜನ ಸಹಜವಾಗಿ ಕೆಂಪಾಗಿರುವ ಕಣ್ಣುಗಳು ತಾವರೆಯ ಎಸಳುಗಳಂತೆ ಕಾಣಿಸುತ್ತಿದ್ದುವು.

೬. ಬಳಿಕ ನಾನು ಆತನ ಸ್ವಭಾವಮಹಿಮೆಗಳನ್ನು ಮತ್ತೆ ಮತ್ತೆ ಆಲೋಚಿಸಿ ಅತಿಸಂತೋಷಗೊಂಡ ಮನಸ್ಸುಳ್ಳವನಾಗಿ ಆತನಲ್ಲಿ ಪರಮ ವಿಶ್ವಾಸವನ್ನೂ ಪಡೆದೆನು.

೭–೮. ಒಡನೆಯೇ ಆತನಿಗೆ ಪ್ರೀತಿಕರವೂ, ಸರ್ವದೋಷವಿನಾಶಕವೂ, ಇಷ್ಟಾರ್ಥಪ್ರದವೂ, ಕೀರ್ತಿದಾಯಕವೂ, ದೇವತೆಗಳಿಂದಲೂ ಪೂಜಿತವೂ ಕಾಲವೃದ್ಧಿಕರವೂ ಆದ (ಮುಂದಿರುವ) ಸ್ತೋತ್ರವನ್ನು ಬೇಗನೆ ಹೇಳಿದೆನು. ಪರಮಧಾರ್ಮಿಕನೂ, ಮಹಾತೇಜನೂ ಆದ ಯಮನು ಅದರಿಂದ ಪ್ರೀತನಾದನು

॥ ಸ್ತೋತ್ರಂ ॥

ತ್ವಂ ಧಾತಾ ಚ ವಿಧಾತಾ ಚ ಶ್ರಾದ್ಧೇಚೈವ ಹಿದೃಶ್ಯಸೇ ।
ಪಿತೃಣಾಂ ಪರಮೋ ದೇವಶ್ಚತುಷ್ಪಾದ ನಮೋಽಸ್ತುತೇ ॥ ೯ ॥

ಕಾಲಜ್ಞಶ್ಚ ಕೃತಜ್ಞಶ್ಚ ಸತ್ಯವಾದೀ ದೃಢವ್ರತಃ ।
ಪ್ರೇತನಾಥ ಮಹಾಭಾಗ ಧರ್ಮರಾಜ ನಮೋಽಸ್ತುತೇ ॥ ೧೦ ॥

ಕರ್ಮ ಕಾರಯಿತಾ ಚೈವ ಭೂತಭವ್ಯಭವ್ಯತ್ಪ್ರಭೋ ।
ಪಾವಕೋ ಮೋಹನಶ್ಚೈವ ಸಂಕ್ಷೇಪೋ ವಿಸ್ತರಸ್ತಥಾ । ॥ ೧೧ ॥

ದಂಡಪಾಣೇ ವಿರೂಪಾಕ್ಷ ಪಾಶಹಸ್ತ ನಮೋಽಸ್ತುತೇ ।
ಆದಿತ್ಯಸದೃಶಾಕಾರ ಸರ್ವಜೀವಹರ ಪ್ರಭೋ ॥ ೧೨ ॥

---

೯. ಸ್ತೋತ್ರ—ದೇವ, ನೀನೇ ಧಾತೃವೂ, ವಿಧಾತೃವೂ ಆಗಿದ್ದೀಯೆ ಶ್ರಾದ್ಧದಲ್ಲೂ ಪಿತೃಗಳಿಗೆ ಪರಮದೇವನಾಗಿ ಕಾಣಿಸುತ್ತೀಯೆ. ಚತುಷ್ಪಾದನಾದ ನಿನಗೆ ನಮಸ್ಕಾರ.

೧೦. ಧರ್ಮರಾಜನೇ, ನೀನು ಕಾಲವನ್ನರಿತವನೂ, ಕೃತಜ್ಞನೂ, ಸತ್ಯವಾದಿಯೂ, ದೃಢವ್ರತನೂ, ಆಗಿದ್ದೀಯೆ. ಪ್ರೇತನಾಥ, ಪೂಜ್ಯನೇ, ನಿನಗೆ ನಮಸ್ಕಾರ.

೧೧. ಪ್ರಭುವೇ, ಕರ್ಮವನ್ನು ಮಾಡಿಸುವವನೂ, ಹಿಂದಿದ್ದವನೂ, ಈಗಿರುತ್ತಿರುವವನೂ, ಮುಂದಿರುವವನೂ ನೀನೆ. ಪಾವಕನೂ, (ಸದಾಚಾರವೂ) ಅಗ್ನಿಯೂ ಮೋಹನನೂ, ಸಂಕ್ಷೇಪನೂ. ವಿಸ್ತಾರನೂ ನೀನೆ.

೧೨. ದಂಡಪಾಣಿಯೇ, ವಿರೂಪಾಕ್ಷ, ಪಾಶಹಸ್ತ, ಸರ್ವಜೀವಹರ, ಆದಿತ್ಯಸಮಾನಾಕಾರ, ಪ್ರಭೂ, ನಿನಗೆ ನಮಸ್ಕಾರ.

ಕೃಷ್ಣವರ್ಣ ದುರಾಧರ್ಷ ತ್ರೈಲರೂಪ ನಮೋಽಸ್ತು ತೇ ।
ಮಾರ್ತಂಡಸದೃಶ ಶ್ರೀಮನ್ಮಾರ್ತಂಡಸದೃಶದ್ಯುತಿಃ ।
ಹವ್ಯಕವ್ಯವಹಸ್ತ್ವಂ ಹಿ ಪ್ರಭವಿಷ್ಣೋ ನಮೋಽಸ್ತು ತೇ ॥ ೧೩ ॥

ಪಾಪಹಂತಾ ವ್ರತೀ ಶ್ರಾದ್ಧೀ ನಿತ್ಯಯುಕ್ತೋ ಮಹಾತಪಾಃ ।
ಏಕದೃಗ್ಬಹುದೃಗ್ಭೂತ್ವಾ ಕಾಲ ಮೃತ್ಯೋ ನಮೋಽಸ್ತು ತೇ ॥ ೧೪ ॥

ಕ್ವಚಿದ್ದಂಡೀ ಕ್ವಚಿನ್ಮುಂಡೀ ಕ್ವಚಿತ್ಕಾಲೋ ದುರಾಸದಃ ।
ಕ್ವಚಿದ್ಬಾಲಃ ಕ್ವಚಿದ್ವೃದ್ಧಃ ಕ್ವಚಿದ್ರೌದ್ರೋ ನಮೋಽಸ್ತು ತೇ ॥ ೧೫ ॥

ತ್ವಯಾ ವಿರಾಜಿತೋ ಲೋಕಃ ಶಾಸಿತೋ ಧರ್ಮಹೇತುನಾ ।
ಪ್ರತ್ಯಕ್ಷಂ ದೃಶ್ಯತೇ ದೇವ ತ್ವಾಂ ವಿನಾ ನ ಚ ಸಿಧ್ಯತಿ ॥ ೧೬ ॥

---

೧೩. ಕೃಷ್ಣವರ್ಣನೇ, ಭಯಪಡಿಸಲಶಕ್ಯನೇ, ತ್ರೈಲರೂಪನೇ, ನಿನಗೆ ನಮಸ್ಕಾರ. ಸೂರ್ಯಸಮಾನನೇ, ಶ್ರೀಮಂತನೇ, ಸೂರ್ಯಸಮಾನನಾದ ನೀನು ಹವ್ಯಕವ್ಯಗಳನ್ನು ವಹಿಸುವನಲ್ಲವೆ! ಸಮರ್ಥನೇ, ನಿನಗೆ ನಮಸ್ಕಾರ

೧೪. ಪಾಪನಾಶಕನೂ, ವ್ರತಿಯೂ, ಶ್ರಾದ್ಧದೇವನೂ, ನಿತ್ಯಯುಕ್ತನೂ, ಮಹಾತಪಸ್ವಿಯೂ, ಏಕದೃಷ್ಟಿಯೂ ಬಹುದೃಷ್ಟಿಯೂ ಉಳ್ಳ ಕಾಲಮೃತ್ಯುವೂ ಆದ ನಿನಗೆ ನಮಸ್ಕಾರ.

೧೫. ಕೆಲವುಸಂದರ್ಭಗಳಲ್ಲಿ ದಂಡಿಯೂ, ಕೆಲವು ಸಂದರ್ಭಗಳಲ್ಲಿ ಮುಂಡಿಯೂ, ಕೆಲವು ಸಂದರ್ಭಗಳಲ್ಲಿ ಸಮೀಪಿಸಲು ಕಷ್ಟನಾದ ಕಾಲ(ಯಮ)ನೂ, ಕೆಲವು ಸಂದರ್ಭಗಳಲ್ಲಿ ಬಾಲನೂ, ಮತ್ತೆಕೆಲವು ಸಂದರ್ಭಗಳಲ್ಲಿ ವೃದ್ಧನೂ ಕೆಲವು ಸಂದರ್ಭಗಳಲ್ಲಿ ರೌದ್ರನೂ ಆಗಿರುವ ನಿನಗೆ ನಮಸ್ಕಾರ.

೧೬. ದೇವ, ಧರ್ಮಪರಿಪಾಲನೆಗಾಗಿ ನಿನ್ನಿಂದ ಆಜ್ಞಪ್ತವಾಗಿ ಲೋಕವು ಪ್ರಕಾಶಗೊಳಿಸಲ್ಪಟ್ಟಿದೆಯೆಂಬುದು ಪ್ರತ್ಯಕ್ಷವಾಗಿ ಕಾಣುತ್ತದೆ. ನೀನಿಲ್ಲದೆ ಅದು ಸಾಧ್ಯವಾಗುವುದಿಲ್ಲ.

ದೇವಾನಾಂ ಪರಮೋ ದೇವಸ್ತಪಸಾಂ ಪರಮಂ ತಪಃ ।
ಜಪಾನಾಂ ಪರಮಂ ಜಪ್ಯಂ ತ್ವತ್ತಶ್ಚಾನ್ಯೋ ನ ದೃಶ್ಯತೇ ॥ ೧೭ ॥

ಋಷಯೋ ವಾ ತಥಾ ಕ್ರುದ್ಧಾ ಹತಬಂಧುಸುಹೃಜ್ಜನಾಃ ।
ಪತಿವ್ರತಾಸ್ತು ಯಾ ನಾರ್ಯೋ ದುಃಖಿತಾಸ್ತಪಸಿ ಸ್ಥಿತಾಃ ॥ ೧೮ ॥

ನತ್ವಾಂ ಶಕ್ತಾ ಇಹ ಸ್ಥಾನಾತ್ಪಾತನಾಯ ಕದಾಚನ ॥ ೧೯ ॥

ತಸ್ಮಾತ್ತ್ವಂ ಸರ್ವದೇವೇಷು ಚೈಕೋ ಧರ್ಮಭೃತಾಂ ವರಃ ।
ಕೃತಜ್ಞಸ್ಸತ್ಯವಾದೀ ಚ ಸರ್ವಭೂತಹಿತೇ ರತಃ ॥ ೨೦ ॥

॥ ವೈಶಂಪಾಯನ ಉವಾಚ ॥

ಏವಂ ಶ್ರುತ್ವಾ ಸ್ತವಂ ದಿವ್ಯಮೃಷಿಪುತ್ರೇಣ ಭಾಷಿತಂ ।
ಪರಿತುಷ್ಟಸ್ತದಾ ಧರ್ಮೋ ಹ್ಯೌದ್ದಾಲಕಸುತಂ ಪ್ರತಿ ॥ ೨೧ ॥

---

೧೭. ದೇವರಲ್ಲಿ ಪರಮದೇವನೂ, ತಪಸ್ಸುಗಳಲ್ಲಿ ಪರಮತಪಸ್ಸೂ ಜಪಮಾಡುವವರಿಗೆ ಉತ್ತಮಜಪ್ಯನೂ, ನಿನಗಿಂತಲೂ ಬೇರೆ ಯಾರೂ, ಕಾಣಿಸುವುದಿಲ್ಲ.

೧೮-೧೯. ಬಂಧುಮಿತ್ರರನ್ನು ನಿನ್ನಿಂದಕಳೆದುಕೊಂಡು ಅತಿ ಕೋಪವುಳ್ಳವರಾದ ಋಷಿಗಳೇ ಆಗಲಿ, ದುಃಖಿತರಾಗಿ ತಪಸ್ಸಿನಲ್ಲಿ ನಿಂತಿರುವ ಪತಿವ್ರತಾಸ್ತ್ರೀ, ಯರೇ ಆಗಲಿ ನಿನ್ನನ್ನು ಈ ಸ್ಥಾನದಿಂದ ಎಂದಿಗೂ ಕದಲಿಸಲಾರರು.

೨೦. ಆದುದರಿಂದ ಸರ್ವದೇವತೆಗಳಲ್ಲೂ ನೀನೊಬ್ಬನೇ ಧರ್ಮಿಷ್ಠರಲ್ಲಿ ಉತ್ತಮನೂ, ಕೃತಜ್ಞನೂ, ಸತ್ಯವಾದಿಯೂ, ಸರ್ವಪ್ರಾಣಿಹಿತನಿರತನೂ ಆಗಿದ್ದೀಯೆ.

೨೧. ವೈಶಂಪಾಯನ—ಋಷಿಕುಮಾರನಾದ ನಚಿಕೇತನು ಹೇಳಿದ ದಿವ್ಯವಾದ ಈ ಸ್ತುತಿಯನ್ನು ಕೇಳಿ, ಸಂತುಷ್ಟನಾದ ಧರ್ಮರಾಜನು ಅವನನ್ನು ಕುರಿತು ಹೀಗೆ ಹೇಳಿದನು.

|| ಯಮ ಉವಾಚ ||

ಪರಿತುಷ್ಟೋಽಸ್ಮಿ ಭದ್ರಂ ತೇ ಮಾಧುರ್ಯೇಣ ತವಾನಘ |
ಯಾಥಾತಥ್ಯೇನ ವಾಕ್ಯೇನ ಬ್ರೂಹಿ ಕಿಂ ಕರವಾಣಿ ತೇ || ೨೨ ||

ವರಂ ವರಯ ಭದ್ರಂ ತೇ ಯಂ ವರಂ ಕಾಂಕ್ಷಸೇ ದ್ವಿಜ |
ಶುಭಂ ವಾ ಶ್ರೇಯಸಾ ಯುಕ್ತಂ ಜೀವಿತಂ ವಾಪ್ಯನಾಮಯಂ || ೨೩ ||

|| ಋಷಿಪುತ್ರ ಉವಾಚ ||

ನೇಚ್ಛಾಮ್ಯಹಂ ಮಹಾಭಾಗ ಮೃತ್ಯುಂ ವಾಜೀವಿತಂ ಪ್ರಭೋ |
ಯದಿ ತ್ವಂ ವರದೋ ರಾಜನ್ಸರ್ವಭೂತಹಿತೇ ರತಃ |
ದ್ರಷ್ಟುಮಿಚ್ಛಾಮ್ಯಹಂ ದೇವ ತವ ದೇಶಂ ಯಥಾತಥಂ || ೨೪ ||

ಪಾಪಾನಾಂ ಚ ಶುಭಾನಾಂ ಚ ಯಾಗತಿಸ್ತ್ವಿಹ ದೃಶ್ಯತೇ |
ಸರ್ವಂ ದರ್ಶಯ ಮೇ ರಾಜನ್ಯದಿ ತ್ವಂ ವರದೋ ಮಮ || ೨೫ ||

---

೨೨. ಯಮ—ಪಾಪರಹಿತನೇ, ನಿನ್ನ ಸ್ತೋತ್ರಮಾಧುರ್ಯದಿಂದ ಸಂತುಷ್ಟನಾಗಿದ್ದೇನೆ. ನಿನಗೆ ಮಂಗಳವಾಗಲಿ. ನಿನಗೆ ನಾನು ಏನುಮಾಡಬೇಕೆಂಬುದನ್ನು ನಿಜವಾಗಿ ಹೇಳು.

೨೩. ಬ್ರಾಹ್ಮಣನೇ, ನಿನಗೆ ಮಂಗಳವಾಗಲಿ. ಶ್ರೇಯಸ್ಸಿನಿಂದ ಕೂಡಿದ ಶುಭವನ್ನೋ ಆರೋಗ್ಯವುಳ್ಳ ಜೀವನವನ್ನೋ ಯಾವ ವರವನ್ನು ಬಯಸುವೆಯೋ ಆ ವರವನ್ನು ಬೇಡು.

೨೪. ನಚಿಕೇತ—ಪೂಜ್ಯನೇ, ಪ್ರಭೂ, ನಾನು ಮರಣವನ್ನಾಗಲಿ, ಜೀವಿತವನ್ನಾಗಲಿ ಬಯಸುವುದಿಲ್ಲ. ರಾಜನೇ, ಸರ್ವಭೂತಹಿತನಿರತನಾದ ನೀನು ವರವನ್ನು ಕೊಡುವವನಾಗಿದ್ದರೆ, ದೇವಾ, ನಿನ್ನ ದೇಶವನ್ನು ಇರುವಂತೆ ನೋಡಲು ಇಚ್ಛಿಸುತ್ತೇನೆ.

೨೫. ರಾಜನೇ, ನೀನು ನನಗೆ ವರದನಾಗಿದ್ದರೆ, ಪಾಪಿಗಳಿಗೂ, ಪುಣ್ಯಶಾಲಿಗಳಿಗೂ ಇಲ್ಲಿ ಯಾವ ಗತಿಯುಂಟಾಗಿದೆಯೆಂಬುದೆಲ್ಲವನ್ನೂ ತೋರಿಸು.

ಚಿತ್ರಗುಪ್ತಂ ಚ ತಂ ರಾಜನ್ಕಾರ್ಯಾರ್ಥಂ ತವ ಚಿಂತಕಂ ।
ದರ್ಶಯಸ್ವ ಮಹಾಭಾಗ ಸರ್ವಲೋಕಸ್ಯ ಚಿಂತಕ ॥ ೨೬ ॥

ಯಥಾ ಕರ್ಮವಿಶೇಷಾಣಾಂ ದರ್ಶನಾರ್ಥಂ ಕರೋತಿ ಸಃ ॥ ೨೭ ॥

ಏವಮುಕ್ತೋ ಮಹಾತೇಜಾಃ ದ್ವಾರಸ್ಥಂ ಸಂದಿದೇಶ ಹ ।
ಚಿತ್ರಗುಪ್ತಸಕಾಶಂ ತು ನಯ ವಿಪ್ರ ಸುಯಂತ್ರಿತಂ ॥ ೨೮ ॥

ವಕ್ತವ್ಯಶ್ಚ ಮಹಾಬಾಹುರಸ್ಮಿನ್ವಿಪ್ರೇ ಯಥಾತಥಂ ।
ಪ್ರಾಪ್ತಕಾಲಂ ಚ ಯುಕ್ತಂ ಚ ತತ್ಸರ್ವಂ ವಕ್ತುಮರ್ಹಸಿ ॥ ೨೯ ॥

ತತೋಽಹಂ ತ್ವರಿತಂ ನೀತಃ ತೇನ ದೂತೇನ ದರ್ಶಿತಃ ।
ಪ್ರಾಪ್ತಶ್ಚ ಪರಯಾ ಪ್ರೀತ್ಯಾ ಚಿತ್ರಗುಪ್ತನಿವೇಶನಂ ॥ ೩೦ ॥

೨೬–೨೭. ಸರ್ವಲೋಕಚಿಂತಕನೇ, ಪೂಜ್ಯನೇ, ನಿನ್ನ ಕಾರ್ಯಾರ್ಥ ಚಿಂತಕನಾದ ಚಿತ್ರಗುಪ್ತನನ್ನೂ, ಅವನು ಕರ್ಮವಿಶೇಷಗಳನ್ನು ಹೇಗೆ ತಿಳಿಯುವನೆಂಬುದನ್ನೂ ತೋರಿಸು. ಎಂದೆನು.

೨೮–೨೯. ನಾನು ಹೀಗೆ ಹೇಳಲು, ಮಹಾತೇಜನಾದ ಯಮನು ದ್ವಾರಪಾಲಕನನ್ನು ಕರೆದು, " ಈ ಬ್ರಾಹ್ಮಣನನ್ನು ಸರಿಯಾದ ರಕ್ಷಣೆಯಿಂದ ಚಿತ್ರಗುಪ್ತನಹತ್ತಿರಕ್ಕೆ ಕರೆದುಕೊಂಡುಹೋಗು. ಶೂರನಾದ ಆ ಚಿತ್ರಗುಪ್ತನಿಗೆ– ‹ಈ ಬ್ರಾಹ್ಮಣನಿಗೆ ಕಾಲಕ್ಕೆತಕ್ಕುದೂ, ಯುಕ್ತವಾದುದೂ ಆದ ಎಲ್ಲವನ್ನೂ ಇದ್ದಂತೆ ಸರಿಯಾಗಿ ಹೇಳಬೇಕೆಂದು ತಿಳಿಸು" ಎಂದು ಅಪ್ಪಣೆಮಾಡಿದನು.

೩೦. ಬಳಿಕ ಆದೂತನೂ ನನ್ನನ್ನು ಬೇಗನೆ ಕರೆದುಕೊಂಡುಹೋಗಿ ಚಿತ್ರಗುಪ್ತನ ಮನೆಯನ್ನು ತೋರಿಸಿದನು. ನಾನು ಪರಮಪ್ರೀತಿಯಿಂದ ಆ ಮನೆಯನ್ನು ಹೊಕ್ಕೆನು.

ಪ್ರತ್ಯುತ್ಥಿತಶ್ಚ ಮಾಂ ದೃಷ್ಟ್ವಾ ಚಿಂತಯಿತ್ವಾ ತು ತತ್ತ್ವತಃ ।
ಸ್ವಾಗತಂ ಮುನಿಶಾರ್ದೂಲ ಯಥೇಷ್ಟಂ ಪರಿಗಮ್ಯತಾಂ ॥ ೩೧ ॥

ಏವಂ ಸಂಭಾಷ್ಯ ಮಾಂ ವೀರಃ ಸ್ವಾನ್ಭೃತ್ಯಾನ್ಸಂದಿದೇಶ ಹ ।
ಕೃತಾಂಜಲಿಪುಟಾನ್ಸರ್ವಾನ್ ಘೋರರೂಪಾನ್ಭಯಾನಕಾನ್ ॥ ೩೨ ॥

॥ ಚಿತ್ರಗುಪ್ತ ಉವಾಚ ॥

ಭೋ ಭೋ ಶೃಣುತ ಮೇ ದೂತಾ ಮಮ ಚಿತ್ತಾನುವರ್ತಕಾಃ ।
ಭಕ್ತಿಮಂತೋ ದುರಾಧರ್ಷಾ ನಿತ್ಯಂ ವ್ರತಪರಾಯಣಾಃ ॥ ೩೩ ॥

ಅಯಂ ವಿಪ್ರೋ ಮಯಾದಿಷ್ಟಃ ಪ್ರೇತವಾಸಂ ಗಮಿಷ್ಯತಿ ।
ಅಸ್ಯ ರಕ್ಷಾ ಚ ಗುಪ್ತಿಶ್ಚ ಭವದ್ಭಿಃ ಕ್ರಿಯತಾಮಿತಿ ॥ ೩೪ ॥

ನೈವ ದುಃಖೇನ ಖೇದಸ್ಸ್ಯಾನ್ನ ಚೋಷ್ಣೇನ ಚ ಶೀತತಃ ।
ಬುಭುಕ್ಷಾಪಿ ತೃಷಾ ವಾಪಿ ಏಷ ಆಜ್ಞಾಪಯಾಮಿ ವಃ ॥ ೩೫ ॥

---

೩೧. ಆತನು ನನ್ನನ್ನು ನೋಡಿ, ಸರಿಯಾಗಿ ಆಲೋಚಿಸಿ, ಎದುರುಗೊಂಡೆದ್ದು "ಮುನಿವರ್ಯನೇ, ಸುಖಾಗಮನವಾಗಲಿ. ನಿನ್ನ ಇಷ್ಟದಂತೆ ಇಲ್ಲಿ ಎಲ್ಲೆಲ್ಲಿಯೂ ಸಂಚರಿಸಬಹುದು".

೩೨. ವೀರನಾದ ಚಿತ್ರಗುಪ್ತನು ನನಗೆ ಹೀಗೆ ಹೇಳಿ, ಕೈಮುಗಿದುಕೊಂಡಿರುವ ಘೋರರೂಪರೂ, ಭಯಂಕರರೂ ಆದ ತನ್ನ ಭೃತ್ಯರಿಗೆ ಹೀಗೆ ಆಜ್ಞಾಪಿಸಿದನು.

೩೩. ಚಿತ್ರಗುಪ್ತ– ನನ್ನ ಚಿತ್ತವನ್ನನುಸರಿಸಿ ನಡೆಯುವವರೂ, ಸದಾ ವ್ರತಪರಾಯಣರೂ ಆದ ದೂತರೇ ಕೇಳಿ.

೩೪-೩೫. ನನ್ನ ಅನುಮತಿಯಿಂದ ಈ ಬ್ರಾಹ್ಮಣನು ಪ್ರೇತಾವಾಸವನ್ನು ನೋಡಲು ಹೋಗುವನು. ನೀವು ಈತನಿಗೆ ಸರಿಯಾಗಿ ರಕ್ಷಣೆಯನ್ನೂ, ಅನುಕೂಲವನ್ನೂ ಮಾಡಬೇಕು. ಯಾವ ದುಃಖದಿಂದಾಗಲಿ ಶೀತೋಷ್ಣಗಳಿಂದಾಗಲಿ, ಹಸಿವುಬಾಯಾರಿಕೆಗಳಿಂದಾಗಲಿ ಈತನಿಗೆ ಖೇದವು ಆಗಬಾರದು ಎಂದು ನಿಮಗೆ ಆಜ್ಞಾಪಿಸುತ್ತೇನೆ.

ಏವಂ ದತ್ತವರೋ ವಿಪ್ರೋ ಗುರುಚಿತ್ತಾನು ಚಿಂತಕಃ ।
ಸರ್ವಭೂತದಯಾವಾಂಶ್ಚ ದ್ರವ್ಯವಾಂಶ್ಚ ಸ ವೈ ದ್ವಿಜಃ ॥ ೩೬ ॥
ಯಥಾಕಾಮಮಯಂ ಪಶ್ಯೇದ್ಧರ್ಮರಾಜಪುರೋತ್ತಮಂ ।
ಏವಮುಕ್ತ್ವಾ ಮಹಾತೇಜಾ ಗಚ್ಛ ಗಚ್ಛೇತಿ ಚಾಬ್ರವೀತ್ ॥ ೩೭ ॥
ಸಂದಿಷ್ಟಾಶ್ಚ ತತೋ ದೂತಾಶ್ಚಿತ್ರಗುಪ್ತೇನ ಧೀಮತಾ ।
ಧಾವಂತಸ್ತ್ವರಮಾಣಾಸ್ತು ಗೃಹ್ಣಂತೋ ಘ್ನಂತ ಏವ ಚ ॥ ೩೮ ॥
ಬಂಧಯಂತಿ ಮಹಾಕಾಯಾ ನಿರ್ದಹಂತಿ ಮಹಾಬಲಾಃ ।
ಪಾಟಯಂತಿ ಪ್ರಹಾರೈಶ್ಚ ತಾಡಯಂತಿ ಪುನಃ ಪುನಃ ॥ ೩೯ ॥
ವೇಣುಯಷ್ಟಿಪ್ರಹಾರೈಶ್ಚ ಪ್ರಹರಂತಿ ತತೋಽಧಿಕೈಃ ।
ಭಗ್ನಾ ಭಿನ್ನಾ ವಿಭಿನ್ನಾಶ್ಚ ತಥಾ ಭಗ್ನಶಿರೋಧರಾಃ ॥ ೪೦ ॥
ರುದಂತಿ ಕರುಣಂ ಘೋರಂ ತ್ರಾತಾರಂ ನಾಪ್ನುವಂತಿ ತೇ ॥ ೪೧ ॥

೩೬–೩೭. ಹೀಗೆವರವನ್ನು ಪಡೆದವನೂ, ಗುರುಚಿತ್ತಾನುಸಾರವಾಗಿ ಚಿಂತಿಸುವವನೂ, ಸರ್ವಪ್ರಾಣಿದಯಾಪರನೂ, ಐಶ್ವರ್ಯವಂತನೂ ಆದ ಈ ಬ್ರಾಹ್ಮಣನು ಉತ್ತಮವಾದ ಈ ಧರ್ಮರಾಜಪುರವನ್ನು ಬೇಕಾದ ಹಾಗೆ ನೋಡಲಿ ಎಂದು ಹೇಳಿ, ಆ ಮಹಾತೇಜನು ನನಗೆ "ನೋಡು, ಹೋಗು, ಹೋಗು" ಎಂದೂ ಹೇಳಿದನು.

೩೮–೩೯. ಬಳಿಕ ಪ್ರಾಜ್ಞನಾದ ಆ ಚಿತ್ರಗುಪ್ತನಿಂದ ಆಜ್ಞಪ್ತರಾದ ದೂತರು ತ್ವರೆಯಿಂದ ಓಡುತ್ತ, ಉನ್ನತರೂ, ಅತಿಬಲರೂ ಆದ ಪಾಪಿಗಳನ್ನು ಹಿಡಿದುಕೊಳ್ಳುತ್ತಲೂ, ಹೊಡೆಯುತ್ತಲೂ, ಬಾಧಿಸುತ್ತಲೂ, ಸುಡುತ್ತಲೂ, ಹೊಡೆತಗಳಿಂದ ತಲೆ ಮೊದಲಾದುವನ್ನು ಒಡೆಯುತ್ತಲೂ, ಮತ್ತೆ ಮತ್ತೆ ಬಡಿಯುತ್ತಲೂ ಇದ್ದರು.

೪೦-೪೧. ಅದಕ್ಕಿಂತಲೂ ಹೆಚ್ಚಾಗಿ ಬಿದಿರುದೊಣ್ಣೆಗಳಿಂದ ಹೊಡೆಯುವರು ಅದರಿಂದ ಸ್ವಲ್ಪ ಒಡೆದೂ, ಸೀಳಿಯೂ, ಚೆನ್ನಾಗಿಒಡೆದೂಹೋದ ಅವಯವಗಳೂ, ತಲೆಯೂ ಉಳ್ಳವರಾದ ಪಾಪಿಗಳು ರಕ್ಷಕರನ್ನು ಕಾಣದೆ ಕರುಣೆಯುಂಟಾಗುವಂತೆ ಘೋರವಾಗಿ ಅಳುವರು.

ನರಕೇಽಪಿ ತಥಾ ಪೂರ್ಣೇ ಹ್ಯಗಾಧೇ ತಮಸಾವೃತೇ ।
ಕೇಚಿತ್ತು ತೇಷು ಪಚ್ಯಂತೇ ದಹ್ಯಂತೇ ಪಾವಕೇಂಧನಂ ॥ ೪೨ ॥

ತೈಲಪಾಕೇ ತಥಾ ಕೇಚಿತ್ಕೇಚಿತ್ ಕ್ಷಾರೇಣ ಸರ್ಪಿಷಾ ।
ಪತಂತಿ ತೇ ದುರಾತ್ಮಾನಸ್ತತ್ರ ತತ್ರ ಚ ಕರ್ಮಭಿಃ ॥ ೪೩ ॥

ಯಾತನಾಭಿರ್ದಹ್ಯಮಾನಾ ಘೋರಾಭಿಶ್ಚ ತತಸ್ತತಃ ।
ಕೇಚಿದ್ಯಂತ್ರಮುಪಾರೋಪ್ಯ ಸಂಪೀಡ್ಯಂತೇ ತಿಲಾ ಇವ ।
ತೇಷಾಂ ಸಂಪೀಡ್ಯಮಾನಾನಾಂ ಶೋಣಿತಂ ಸ್ರವತೇ ಬಹು ॥ ೪೪ ॥

ತತೋ ವೈತರಣೀ ಘೋರಾ ಸಂಭೂತಾ ನಿಮ್ನಗಾ ತಥಾ ।
ಸಫೇನಸಲಿಲಾವರ್ತಾ ದುಸ್ತರಾ ಪಾಪಕರ್ಮಿಣಾಂ ॥ ೪೫ ॥

ಅಥಾನ್ಯೇ ಶೂಲ ಆರೋಪ್ಯ ದೂತಾಃ ಪಾದೇಷು ಗೃಹ್ಯ ವೈ ।
ವೈತರಣ್ಯಾಂ ಸುಘೋರಾಯಾಂ ಪ್ರಕ್ಷಿಪಂತಿ ಸಹಸ್ರಶಃ ॥ ೪೬ ॥

೪೨-೪೩. ಅಗಾಧವೂ, ತುಂಬಿರುವುದೂ, ಕತ್ತಲೆಯುಳ್ಳುದೂ ಆದ ನರಕದಲ್ಲೂ ಹಾಗೆಯೇ ಕೆಲವರು ಬೇಯಿಸಲ್ಪಡುವರು. ಕೆಲವರು ಸೌದೆಯಂತೆ ಸುಡಲ್ಪಡುವರು. ಕೆಲವರು ದುರಾತ್ಮರು ತಮ್ಮ ಕರ್ಮಗಳಿಂದ, ಕುದಿಯುತ್ತಿರುವ ಎಣ್ಣೆಯಲ್ಲಿಯೂ, ಕಾರವಾದ ತುಪ್ಪದಲ್ಲಿಯೂ ಬೀಳುವರು.

೪೪. ಕೆಲವರು ಘೋರವಾದ ಯಾತನೆಗಳಿಂದ ಸುಡಲ್ಪಟ್ಟವರಾಗಿ ಆಗಾಗ ಯಂತ್ರಗಳಲ್ಲಿ ಎಳ್ಳಿನಂತೆ ಅರೆಯಲ್ಪಡುವರು. ಚೆನ್ನಾಗಿ ಅರೆಯಲ್ಪಡುವ ಅವರ ರಕ್ತವು ಬಹಳವಾಗಿ ಹರಿಯುವುದು.

೪೫. ಆ ರಕ್ತದಿಂದ ಘೋರವಾದ ವೈತರಣೀನದಿಯುಂಟಾಗಿದೆ. ನೊರೆಯಿಂದ ಕೂಡಿದ ನೀರಿನ ಸುಳಿಗಳುಳ್ಳ ಆನದಿಯು ಪಾಪಿಗಳಿಗೆ ದುಸ್ತರವಾಗಿದೆ.

೪೬. ಕೆಲವರು ದೂತರು ಪಾಪಿಗಳನ್ನು ಸಾವಿರಗಟ್ಟಲೆಯಾಗಿ ಶೂಲಕ್ಕೇರಿಸಿ, ಬಳಿಕ ಅವರನ್ನು ಕಾಲುಹಿಡಿದೆತ್ತಿ ಅತಿಘೋರವಾದ ಆವೈತರಣಿಯಲ್ಲಿ ಬಿಸುಡುವರು.

ನಾನುಷ್ಣೇ ರುಧಿರೇ ತತ್ರ ಫೇನಮಾಲಾಸಮಾಕುಲಾಃ ।
ದಶಂತಿ ಸರ್ಪಾಸ್ತಾಂಸ್ತತ್ರ ಪ್ರಾಣಿನಸ್ತು ಸಹಸ್ರಶಃ ॥ ೪೭ ॥
ಅನುತ್ತೀರ್ಯ ತದಾ ತಸ್ಯಾ ಉಚ್ಛ್ರಿತಾ ವಿಕೃತಾವಶಾಃ ।
ಆವರ್ತಾದೂರ್ಮಯಶ್ಚೈವ ಹ್ಯುತ್ತಿಷ್ಠಂತಿ ಸಹಸ್ರಶಃ ॥ ೪೮ ॥
ತತ್ರ ಶುಷ್ಯಂತಿ ತೇ ಪಾಪಾಃ ಸರ್ವದೋಷಸಮನ್ವಿತಾಃ ।
ಮಜ್ಜಂತಶ್ಚ ವಮಂತಶ್ಚ ತ್ರಾತಾರಂ ನಾಪ್ನುವಂತಿ ತೇ ॥ ೪೯ ॥
ಅಥಾನ್ಯೇ ಬಹವಸ್ತತ್ರ ಬಹುಭಿಶ್ಚಾಪಿ ದೂತಕೈಃ ।
ಕೂಟಶಾಲ್ಮಲಿಮಾರೋಪ್ಯ ಲೋಹಕಂಟಕಸಂವೃತಾಂ ।
ಅಸಿಶಕ್ತಿಪ್ರಹಾರೈಶ್ಚ ತಾಡಯಂತಿ ಪುನಃ ಪುನಃ ॥ ೫೦ ॥
ತತ್ರ ಶಾಖಾಸು ಘೋರಾಸು ಮಯಾ ದೃಷ್ಟಾಃಸಹಸ್ರಶಃ ।
ಕೂಷ್ಮಾಂಡಾ ಯಾತುಧಾನಾಶ್ಚ ಲಂಬಮಾನಾ ಭಯಾನಕಾಃ ॥ ೫೧ ॥

---

೪೭. ಆವೈತರಣಿಯ ಕಾಯ್ದ ರಕ್ತದನೊರೆಯ ರಾಶಿಗಳಲ್ಲಿ ಸೇರಿಕೊಂಡಿರುವ ಸಾವಿರಾರು ಸರ್ಪಗಳು ಸಾವಿರಗಟ್ಟಲೆ ಬೀಳುವ ಆ ಪ್ರಾಣಿಗಳನ್ನು ಕಚ್ಚುವುವು.

೪೮. ಆಗ ಆವೈತರಣಿಯ ಸುಳಿಗಳಿಂದ ತಪ್ಪಿಸಿಕೊಳ್ಳಲಾರದೆ ವಿಕಾರವುಳ್ಳವರೂ, ಪರವಶರೂ ಆದ ಆ ಸಾವಿರಾರು ಪ್ರಾಣಿಗಳು ಉನ್ನತವಾದ ಅಲೆಗಳೊಡನೆ ಮೇಲೇಳುವುವು.

೪೯. ಸರ್ವದೋಷಯುಕ್ತರಾದ ಆಪಾಪಿಗಳು ಅಲ್ಲಿ ಮುಳುಗುತ್ತಲೂ, ಕಾರುತ್ತಲೂ ಕೃಶರಾಗುವರು. ಅವರು ಕಾಪಾಡುವವರನ್ನು ಕಾಣರು.

೫೦. ಅಲ್ಲದೆ ಅಲ್ಲಿ ಬೇರೆ ಹಲವರುಪಾಪಿಗಳನ್ನು ಹಲವರು ದೂತರು ಉಕ್ಕಿನ ಮುಳ್ಳುಗಳಿಂದಿಡಿದು ದುರಾರೋಹವಾದ ಮಾಯೆಯ ಬೂರಗದ ಮರಕ್ಕೇರಿಸಿ, ಖಡ್ಗಶಕ್ತ್ಯಾಯುಧಗಳಿಂದ ಮತ್ತೆ ಮತ್ತೆ ಹೊಡೆಯುವರು.

೫೧. ಆಮರದ ಭಯಂಕರವಾದ ಕೊಂಬೆಗಳಲ್ಲಿ ಜೋಲಾಡುತ್ತಿರುವ ಸಾವಿರಾರುಜನ ಘೋರರಾದ ಕೂಷ್ಮಾಂಡರನ್ನೂ, ರಾಕ್ಷಸರನ್ನೂ (ಪಿಶಾಚಿಗಳನ್ನೂ) ನಾನು ನೋಡಿದೆನು.

ಅತಿಕ್ರಮ್ಯ ಚ ತೇ ಸ್ಕಂಧಾಸ್ತೀಕ್ಷ್ಣಕಂಟಕಸಂಕುಲಾಃ ।
ವೇದನಾರ್ತಾಸ್ತು ವೇಗೇನ ಶೀಘ್ರಂ ಶಾಖಾ ಉಪಾರುಹನ್ ॥ ೫೨ ॥

ತತ್ರ ತೇ ನಿಹತಾ ಘೋರಾ ರಾಕ್ಷಸಾಃ ಪಿಶಿತಾಶನಾಃ ।
ಘ್ನಂತಿ ಚಾರೂಢಗಾತ್ರಾಣಿ ನಿಶ್ಶಂಕಂ ತಮಸಾವೃತಂ ॥ ೫೩ ॥

ಸಂಕ್ರಮಾಚ್ಚೈವ ಖಾದಂತಿ ಶಾಲಾಯಾಂ ಕಪಿವದ್ಭೃಶಂ ॥ ೫೪ ॥

ಯಥಾ ಚ ಕುಕ್ಕುಟಂ ಖಾದೇತ್ಕಶ್ಚಿನ್ಮ್ಲೇಚ್ಛೋನಿರಾಕೃತಃ ।
ತಥಾ ಕಟಕಟಾಶಬ್ದಸ್ತಸ್ಮಿನ್ವೃಕ್ಷೇ ಮಯಾ ಶ್ರುತಃ ॥ ೫೫ ॥

ಪಕ್ವಮಾಮ್ರಫಲಂ ಯದ್ವನ್ನರಶ್ಚಾದೇದ್ಯಥಾ ವನೇ ।
ಏವಂ ತೇ ಮುಖತಃ ಕೃತ್ವಾ ಮಹಾವಕ್ತ್ರಾ ದುರಾಸದಾಃ ॥ ೫೬ ॥

ಚೂಷಯಿತ್ವಾ ತು ತಾನ್ಸರ್ವಾಂಸ್ತೇ ಚ ತಸ್ಮಿನ್ನಗೋತ್ತಮೇ ।
ವಿಸೃಜಂತಿ ಕ್ಷಿತಿಂ ಯಾವದಸ್ಥಿಭೂತಾನ್ನರಾಂಸ್ತಥಾ ॥ ೫೭ ॥

೫೨-೫೪. ಮೊನೆಯಾದ ಮುಳ್ಳುಗಳು ಒತ್ತಾಗಿ ನಾಟಿಕೊಂಡ ಮತ್ತು ಏಟುಗಳ ವೇದನೆಯಿಂದ ಪೀಡಿತಗಳಾದ ಪಾಪಿಶರೀರಗಳು ಬೇಗನೆ ಮುಂದ ಕಾಂಡದಿಂದ ಮುಂದೆಹೋಗಿ ಕೊಂಬೆಗಳನ್ನು ಏರಿದುವು. ಅಲ್ಲಿ ಮಾಂಸಭಕ್ಷಕರಾದ ಘೋರರಾದ ರಾಕ್ಷಸರೂ, ಪಿಶಾಚಿಗಳ ಹಾಗೆ ಏರಿದ ಆ ಪ್ರಾಣಿಗಳನ್ನು ಹೊಡೆದು ನಿರ್ಭೀತಿಯಾಗಿ ಆ ತಮೋಮಯವಾದ ದೇಹಗಳನ್ನು ಆಕ್ರಮಿಸಿ, ಅಡಿಗೆಯಮನೆಯನ್ನು ಹೊಕ್ಕ ಕಪಿಗಳಂತೆ ಬೇಕಾದಹಾಗೆ ತಿನ್ನುವುವು.

೫೫. ಧರ್ಮ (ನ್ಯಾಯ) ಬಾಹಿರನಾದಮ್ಲೇಚ್ಛನೊಬ್ಬನು ಕೋಳಿಯನ್ನು ಕಡಿದು ತಿನ್ನುವಾಗ ಆಗುವಂತಹ ಕಟಕಟಶಬ್ದವು ಆಮರದಲ್ಲಿ ನನಗೆ ಕೇಳಿಸಿತು.

೫೬-೫೭. ಮರದಲ್ಲಿರುವ ಹತ್ತಿರಹೋಗಲಾಗದ ದೊಡ್ಡಬಾಯಿನ ಆ ರಾಕ್ಷಸರು ಆಪಾಪಿಗಳನ್ನು ವನದಲ್ಲಿ ಕಳಿತಮಾವಿನಹಣ್ಣನ್ನು ಮನುಷ್ಯನು ಬಾಯಿಂದ ಕಚ್ಚಿ ಹೀರುವಂತೆ ಹೀರಿ, ಎಲುಬುಚರ್ಮಗಳಿಂದಮಾತ್ರ ಉಳಿದಿರುವ ಅವರನ್ನು ಭೂಮಿಗೆ ಬೀಳಿಸುವರು.

ತತೋ ಜವೇನ ಸಂಯುಕ್ತಾ ವನಸ್ಥಾಶ್ಚೋಷಿತಾಃ ಪುನಃ ।
ಅವಿಷ್ಟಾನಿ ಚ ಕರ್ಮಾಣಿ ಪುನಶ್ಚೀಷ್ಪ್ರಮುಕಾಮುಯುನ್ ॥ ೫೮ ॥

ಅಧಸ್ತಾತ್ತು ಪುನಸ್ತತ್ರ ಪಶ್ಯಂತಃ ಪಾಪಕರ್ಮಿಣಃ ।
ಬಹುಸಂಖ್ಯೇಷು ಪಾಪೇಷು ದಾರುಣೇಷು ಸುದುಃಖಿತಾಃ ॥ ೫೯ ॥

ಭೋ ದೇವ ಪಾಹಿ ಮುಂಚೇತಿ ವದಂತಃ ಪುರುಷಂ ವಚಃ ।
ಯಮದೂತಾ ದುರಾಮರ್ಷಾಃ ಸೂದಯಂತಿ ಪುನಃ ಪುನಃ ॥ ೬೦ ॥

ಪಾಷಾಣವರ್ಷೈಃ ಕೇಚಿತ್ತು ಪಾಂಸುವರ್ಷೈಶ್ಚ ವಿದ್ರುತಾಃ ।
ಪ್ರವಿಶಂತಿ ನಗಚ್ಛಾಯಾಂ ತತಸ್ತೇ ಪ್ರಜ್ವಲಂತಿ ತು ॥ ೬೧ ॥

ದ್ರವಂತಿ ಚ ಪುನಸ್ತತ್ರ ದೂತೈಶ್ಚಾಪಿ ದೃಢಂ ಹತಾಃ ।
ಭವನೇಷು ಚ ಘೋರೇಷು ಪಚ್ಯಂತೇ ತೇ ದೃಢಾಗ್ನಿನಾ ॥ ೬೨ ॥

೫೮-೫೯. ಹಾಗೆ ಹೀರಲ್ಪಟ್ಟು, ಕೆಳಗೆ ವನದಲ್ಲಿ ಬಿದ್ದಿರುವ ಪಾಪಿಗಳು ಮತ್ತೆ ಬೇಗನೆ ತಮಗೆ ಅಂಟಿರುವ ಕರ್ಮಗಳನ್ನು ಮಾಡಲು ಅಥವಾ ಅನುಭವಿಸಲು ಬಯಸುವರು. ಆ ಪಾಪಿಗಳು ಇನ್ನೂ ಘೋರವಾದ ಬಹುಸಂಖ್ಯೆಯ ಪಾಪಿಗಳಿರಲಾಗಿ, ಕೆಳಗಡೆಯಲ್ಲಿಯೂ ಮತ್ತೆ ಕಷ್ಟಗಳನ್ನೇ ನೋಡುತ್ತ ಅತಿ ದುಃಖಿತರಾಗುವರು.

೬೦. 'ಎಲೈದೇವಾ, ರಕ್ಷಿಸು ನಮ್ಮನ್ನು ಬಿಡು' ಎಂದು ಅಲ್ಲಿಯ ಅಧಿಕಾರಿಯನ್ನು ನಮಗೆ ಕೇಳಲಾಗದ ದೀನಧ್ವನಿಯಿಂದ ಬೇಡುವರು. ಅತಿಕೋಪವುಳ್ಳ ಯಮದೂತರು ಮತ್ತೆಮತ್ತೆ ಅವರನ್ನು ಹಿಂಸಿಸುವರು.

೬೧ ೬೨ ಕಲ್ಲುಗಳನ್ನೂ, ಧೂಳನ್ನೂ ತಮ್ಮಮೇಲೆ ಸುರಿಸಲಾಗಿ ಓಡಿದ ಕೆಲವರುಪಾಪಿಗಳು ಮರದ ನೆರಳಿಗೆ ಹೋಗುವರು. ಅಲ್ಲಿ ಅವರು ಉರಿದುಹೋಗಿ ಯಮದೂತರಿಂದಲೂ ಬಲವಾದ ಏಟನ್ನು ತಿಂದು ಮತ್ತೆ ಅಲ್ಲಿಂದಲೂ, ಓಡುವರು. ಅವರು ಘೋರವಾದ ಮನೆಗಳೊಳಗೂ ಬಲವಾದ ಅಗ್ನಿಯಿಂದ ಬೇಯುವರು.

ವಾರಿಪೂರ್ಣಂ ತತಃ ಕುಂಭಂ ಶೀತಲಂ ಚ ಜಲಂ ಪುನಃ ।
ದೀಯತಾಂ ದೀಯತಾಂ ಚೇತಿ ಬ್ರುವತೇ ನಃ ಪ್ರಸೀದಥ ॥ ೬೩ ॥

ತತಃ ಪಾನೀಯರೂಪೇಣ ಜಲಂ ತಪ್ತಂ ತು ದೀಯತೇ ।
ತೇನ ದಗ್ಧಾಶ್ಚ ಆರ್ತಾಶ್ಚ ಕ್ರೋಶಂತಶ್ಚ ಪರಸ್ಪರಂ ।
ಆಲಿಂಗ್ಯಾಲಿಂಗ್ಯ ದುಃಖಾರ್ತಾಃ ಕೇಚಿತ್ತತ್ರ ಪತಂತಿ ವೈ ॥ ೬೪ ॥

ತಥಾನ್ಯೇ ಕ್ಷುಧಿತಾಸ್ತತ್ರ ಹಾಹಾಭೂತಮಚೇತಸಃ ॥ ೬೫ ॥

ಅನ್ನಾನಾಂ ಚ ಸುಮಿಷ್ಟಾನಾಂ ಭಕ್ಷ್ಯಾಣಾಂ ಚ ವಿಶೇಷತಃ ।
ಪಶ್ಯಂತಿ ರಾಶಿಂ ತತ್ರಸ್ಥಾಂ ಸುಗಂಧಾಂ ಪರ್ವತೋಪಮಾಂ ॥ ೬೬ ॥

ದಧಿಕ್ಷೀರರಸಾಂಶ್ಚೈವ ಕೃಸರಾನ್ಪಾಯಸಂ ತಥಾ ।
ಮಧುಮಾಧವಪೂರ್ಣಾನಿ ಸುರಾಮೈರೇಯಕಸ್ಯ ಚ ॥ ೬೭ ॥

---

೬೩. ಅಲ್ಲಿ ಹಾಗೆ ಬೇಯುವ ಕೆಲವರು "ನೀರು ತುಂಬಿದ ಕೊಡ ಅಥವಾ ಚೊಂಬನ್ನೂ, ತಣ್ಣಗಿರುವ ನೀರನ್ನೂ ನಮಗೆ ಕೊಡಿ. ಕೊಡಿ. ನಮ್ಮಲ್ಲಿ ದಯೆಯಿಡಿ" ಎಂದು ಕೇಳುವರು.

೬೪. ಯಮಕಿಂಕರರು ಅವರಿಗೆ ಕುಡಿಯಲು ಬಹಳ ಬಿಸಿಯಾದ ನೀರನ್ನು ಕೊಡುವರು ಆದರಿಂದ ಕೈಬಾಯಿಗಂಟಲುಗಳೇಮೊದಲಾದುವನ್ನು ಸುಟ್ಟು ಕೊಂಡು ಆರ್ತರಾಗಿ ಅಳುತ್ತ ಆಶೋಚನೀಯರು ಪರಸ್ಪರ ಅಪ್ಪಿಕೊಂಡು ಅಪ್ಪಿಕೊಂಡು ದುಃಖಪೀಡಿತರಾಗಿ ಬೀಳುವರು.

೬೫–೬೬. ಮತ್ತೆ ಕೆಲವರು ಹಸಿದು ಹಾಹಾಕಾರಪಡುತ್ತಿರುವ ಚೇತನವಿಲ್ಲದ ಪಾಪಿಗಳು ಎದುರಿಗಿರುವ ಸುವಾಸನೆಯ ಮೃಷ್ಟಾನ್ನದ ಮತ್ತು ಭಕ್ಷ್ಯಗಳ ಪರ್ವತಾಕಾರವಾದ ರಾಶಿಗಳನ್ನು ನೋಡುತ್ತಿರುವರು.

೬೭–೬೯. ಆ ಪಾಪಿಗಳು, ಪುಣ್ಯಶಾಲಿಗಳ ತಪಸ್ಸಿನಿಂದ ಸಂಪಾದಿತಗಳಾಗಿ, ಅಲ್ಲಿ ಯಾವಾಗಲೂ ಇರುವ ಹಾಲುಮೊಸರುಗಳನ್ನೂ, ಕೃಸರ ಪಾಯಸಗಳನ್ನೂ

ಮಾಧ್ವೀಕಸ್ಯ ಚ ಪಾನಸ್ಯ ಸೀಧೋರ್ಜಾತೀರಸಸ್ಯ ಚ ।
ಪಾನಾನಿ ದಿವ್ಯಾನಿ ಸುಗಂಧೀನಿ ವೈ ಶೀತಲಾನಿ ಚ ॥ ೬೮ ॥

ಗೋರಸಸ್ಯ ಚ ಪಾನಾನಿ ಭಾಜನಾನಿ ಚ ನಿಶ್ಯಶಃ ।
ತಪೋರ್ಜಿತಾನಿ ದಿವ್ಯಾನಿ ತಿಷ್ಠಂತಿ ಸುಕೃತಾತ್ಮನಾಂ ॥ ೬೯ ॥

ಮಾಲ್ಯಾನಿ ಧೂಪಂ ಗಂಧಾಶ್ಚ ನಾನಾರಸಸಮಾಯುತಾಃ ।
ಮನೋಹರಾಶ್ಚ ಕಾಂತಾಶ್ಚ ಭೂಮಿಷ್ಠಾಶ್ಚ ಸಹಸ್ರಶಃ ॥ ೭೦ ॥

ಭೋಜನೇಷು ಚ ಸರ್ವೇಷು ಸ್ತ್ರಿಯಃ ಕಾಂತಾ ಮನೋಹರಾಃ ।
ಗೃಹೀತಕುಂಭಮಣಿಕಾಃ ಸರ್ವಾಭರಣಭೂಷಿತಾಃ ।
ಫಲಾನಿ ಕುಂಡಹಸ್ತಾಶ್ಚ ಪಾತ್ರಹಸ್ತಾಸ್ತಥಾಪರಾಃ ॥ ೭೧ ॥

ಸುಮನಃಪಾದ್ಯಹಸ್ತಾಶ್ಚ ಅದೀನಾಃ ಪರಮಾಂಗನಾಃ ।
ಅನ್ನದಾನರತಾಶ್ಚೈವ ಭೋಜಯಂತಿ ಸಹಸ್ರಶಃ ॥ ೭೨ ॥

ದಿವ್ಯವಾದ ಸುಗಂಧವುಳ್ಳ ಜೇನುತುಪ್ಪಗಳಿಂದಲೂ, ದ್ರಾಕ್ಷಾರಸ ಜಾತೀರಸವೇ ಮೊದಲಾದ ಹಲವು ಬಗೆಯ ಮದ್ಯಗಳಿಂದಲೂ, ದಿವ್ಯಸುಗಂಧವುಳ್ಳವುಗಳಾಗಿಯೂ ತಣ್ಣಗೂ ಇರುವ ಗೋರಸಪಾನೀಯಗಳಿಂದಲೂ ತುಂಬಿರುವ ಪಾತ್ರೆಗಳನ್ನು ನೋಡುತ್ತಿರುವರು.

೭೦. ಅಲ್ಲಿ ಉತ್ತಮವಾದ ಮಾಲೆಗಳೂ, ಧೂಪಗಳೂ, ಗಂಧಗಳೂ, ನಾನಾರಸಯುಕ್ತಗಳೂ, ಮನೋಹರಗಳೂ, ರುಚಿಕರಗಳೂ ಆದ ಸಾವಿರಾರು ಬಗೆಯ ಪದಾರ್ಥಗಳೂ ಹೆಚ್ಚಾಗಿರುವುವು.

೭೧-೭೨ ಅಲ್ಲಿ ಎಲ್ಲಾ ಭೋಜನಗಳಲ್ಲೂ ಅನ್ನದಾನರತರೂ, ಸರ್ವಾಭರಣ ಭೂಷಿತರೂ, ಮನೋಹರರೂ, ಉದಾರರೂ, ಆದ ಅನೇಕ ಉತ್ತಮಸ್ತ್ರೀಯರು ರತ್ನಕಲಶಗಳನ್ನೂ, ಅರ್ಘ್ಯಾದಿಜಲಪಾತ್ರಗಳನ್ನೂ, ಭೋಜನಪಾತ್ರೆಗಳನ್ನೂ ಹಿಡಿದುಕೊಂಡು ಸಾವಿರಾರು ಜನರಿಗೆ ಊಟಮಾಡಿಸುವರು.

ನೂಪುರೋಜ್ಜ್ವಲಪಾದಾಶ್ಚ ತಿಷ್ಠಂತಿ ಚ ಮನೋಹರಾಃ ।
ಉಪಸ್ಥಾಪ್ಯ ಮಹಾಯೋಗ್ಯಮತ್ರ ಕಾಲೇ ಚ ಯೋಷಿತಃ ॥ ೭೩ ॥

ಬ್ರುವಂತಿ ಸರ್ವಾಸ್ತಾಶ್ಚೈವ ತಸ್ಯಾಂ ತಸ್ಯ ಚ ದಕ್ಷಿಣಾಃ ॥ ೭೪ ॥

ನಿಘ್ನಂತಶ್ಚ ಹಸಂತಶ್ಚ ದೂತಾ ನಿಷ್ಠುರವಾದಿನಃ ।
ಭೋ ಭೋ ಕೃತಘ್ನಾ ಲುಬ್ಧಾಶ್ಚ ಪರದಾರಾಭಿಮರ್ಶಕಾಃ ॥ ೭೫ ॥

ಪಾಪಾಶಯಾ ನಿಷ್ಕೃತಿಕಾಃ ಸರ್ವದಾನವಿವರ್ಜಿತಾಃ ।
ಪರಾಪವಾದನಿರತಾಃ ಪಾಪೈರ್ಬದ್ಧಕಥಾಸಕಾಃ ॥ ೭೬ ॥

ನಿರ್ಲಜ್ಜಾ ಗೃಹಕಾದೇಯಾ ಯಾಚಿತುಂ ಮನಸಾಹಿತಾಃ ।
ಸುಲಭಾನಿ ನ ದತ್ತಾನಿ ವಿಭವೇ ಸತಿ ಲೌಕಿಕೇ ॥ ೭೭ ॥

ಪಾನಿಯಮಥ ಕಾಷ್ಠಾನಿ ಯದ್ಯನ್ನಂ ಸುಖಮಾಗತಂ ।
ತೇನ ವಧ್ಯಾ ಭವಂತೋ ವೈ ಯಾತನಾಭಿರನೇಕಶಃ ॥ ೭೮ ॥

೭೩-೭೪. ಬಳೆಗಳಿಂದೊಪ್ಪುವ ಕಾಲುಗಳುಳ್ಳವರೂ, ಸರಳಸ್ವಭಾವದವರೂ, ಮನೋಹರರೂ, ಆಗಿರುವ ಆಸ್ತ್ರೀಯರೆಲ್ಲರೂ ಈಗಲೂ ಬಹುಯೋಗ್ಯನಾದವನನ್ನು ಪೂಜಿಸಿ ಮಾತನಾಡಿಸುವರು.

೭೫-೭೮. ಕಠಿನವಾಗಿ ಮಾತನಾಡುವ ಆಯಮದೂತರು ಪಾಪಿಗಳನ್ನು ಹೊಡೆಯುತ್ತಲೂ, ನಗುತ್ತಲೂ, ಎಲೈ ಕೃತಘ್ನರೇ, ಎಲೈ ಲೋಭಿಗಳೇ, ಪರಸ್ತ್ರೀಗಾಮಿಗಳೇ, ಪಾಪಾಭಿಪ್ರಾಯವುಳ್ಳವರೇ, ಸದಾಚಾರರಹಿತರೇ, ಸರ್ವದಾನಗಳನ್ನೂ ಬಿಟ್ಟವರೇ, ಪರದೂಷಣನಿರತರೇ, ಪಾಪಗಳ ಕಥೆಯೆಂಬ ವಾದ್ಯಧ್ವನಿಯುಳ್ಳವರೇ, ಲಜ್ಜೆಗೆಟ್ಟವರೇ, ದಾನಕೊಡಬಹುದಾದ ಮನೆಗಳನ್ನು ಯಾಚಿಸಲು ನಿಮಗೆ ಮನಸ್ಸಿಗೆ ಹಿತವಾಗಿದ್ದಿತು. ಲೌಕಿಕವಾದ ಐಶ್ವರ್ಯವಿದ್ದರೂ ಸುಖವಾಗಿ ದೊರೆತ ಅನ್ನಪಾನಕಾಷ್ಠಾದಿಸುಲಭಪದಾರ್ಥಗಳನ್ನು ನೀವು ದಾನಮಾಡಲಿಲ್ಲ. ಆದುದರಿಂದ ನೀವು ಯಾತನೆಗಳಿಂದ ಕೊಲೆಗೆ ಅರ್ಹರು.

ಕಮಣಾಂ ಚಕ್ಷಯೋ ಜಾತಃ ಸಂಸಾರೇ ಯದಿ ಪಚ್ಯತೇ ।
ವಿಮುಕ್ತಾ ಇಹ ಲೋಕಾತ್ತು ಜನಿಷ್ಯಥ ಸುದುರ್ಗತಾಃ ॥ ೭೯ ॥

ಕುಲೇಷು ಸುದರಿದ್ರೇಷು ಸಂಜಾತಾಃ ಪಾಪಕರ್ಮಿಣಃ ।
ಪಾಪೈರನುಗತಾ ಘೋರೈರ್ಮಾನುಷಂ ಲೋಕಮಾಶ್ರಿತಾಃ ॥ ೮೦ ॥

ವೃತ್ತಸ್ಥಾ ಭುಂಜತೇ ಹೇಮಾಂಶ್ಚಾತುರ್ವರ್ಣ್ಯಾನ್ವಿಶೇಷತಃ ।
ತತಸ್ಸತ್ಯರತಾಶ್ಶಾಂತಾ ದಯಾವಂತಸ್ಸುಧಾರ್ಮಿಕಾಃ ॥ ೮೧ ॥

ಇಹ ವಿಶ್ರಾಮ್ಯ ತೇ ಧೀರಾಃ ಕಿಂಚಿತ್ಕಾಲಂ ಸಹಾನುಗಾಃ ।
ಗಚ್ಛಂತಿ ಪರಮಂ ಸ್ಥಾನಂ ಪೃಥಿವ್ಯಾಂ ವಾ ಮಹತ್ಕುಲೇ ॥ ೮೨ ॥

೭೯–೮೦. ಎಲೈ, ಪಾಪಕರ್ಮಿಗಳೇ, ಸಂಸಾರದಲ್ಲಿ ನೀವು ಬೆಂದಿರಾದರೆ ಪಾಪಕರ್ಮವು ಸ್ವಲ್ಪ ಕ್ಷಯಿಸುವುದು. ಈ ಲೋಕದಿಂದ ಕಳುಹಿಸಲ್ಪಟ್ಟವರಾಗಿ ಮನುಷ್ಯಲೋಕದಲ್ಲಿ ಘೋರಪಾಪದಿಂದ ಅನುಗತರಾಗಿ ಬಹು ದರಿದ್ರರಾದವರ ಮನೆ(ಅಥವಾವಂಶ)ಗಳಲ್ಲಿ ಬಹುದರಿದ್ರರಾಗಿ ಜನಿಸುವಿರಿ.

೮೧–೮೨. ಸತ್ಯನಿರತರೂ, ಶಾಂತರೂ, ದಯಾವಂತರೂ, ಸದ್ವೃತ್ತರೂ' ಸುಧಾರ್ಮಿಕರೂ ಆದವರು ಭೂಲೋಕದಲ್ಲಿ ಚಾತುರ್ವರ್ಣ್ಯದ ಐಶ್ವರ್ಯವನ್ನನು ಭವಿಸುವರು. ಬಳಿಕ ಆಧೀರರು ತಮ್ಮ ಪ್ರೀತಿಪಾತ್ರರೊಡನೆ ಇಲ್ಲಿ ಬಂದು ಸ್ವಲ್ಪಕಾಲ ವಿಶ್ರಮಿಸಿಕೊಂಡು ಪರಮಸ್ಥಾನವನ್ನು ಪಡೆಯುವರು. ಅಥವಾ ಭೂಮಿಯಲ್ಲಿ ಬಹು ಸುಂದರನಾರಿಯರುಳ್ಳದೂ, ಐಶ್ವರ್ಯದಿಂದ ತುಂಬಿದುದೂ

ಬಹುಸುಂದರನಾರೀಕೇ ಸಮೃದ್ಧೇ ಸುಸಮಾಹಿತಾಃ ।
ಅಜಾಯಂತ ತಥಾ ಕ್ಷಾಂತಾಃ ಪ್ರಾಪ್ಸ್ಯಂತಿ ಪರಮಾಂ ಗತಿಂ ॥ ೮೩ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಸಂಸಾರಚಕ್ರೇಯಾತನಾನಾಂ ಸ್ವರೂಪವರ್ಣನಂ ನಾಮ ಅಷ್ಟನವತ್ಯಧಿಕ ಶತತಮೋಽಧ್ಯಾಯಃ

ಆದ ಮಹಾಕಾಲದಲ್ಲಿ ಬಹುಶಾಂತರಾಗಿ ಜನಿಸುವರು. ಹಾಗೆಯೇ ಶಾಂತರಾಗಿ ಜೀವಿಸುತ್ತಿದ್ದು ಕಡೆಯಲ್ಲಿ ಪರಮಗತಿಯನ್ನು ಪಡೆಯುವರು.

ಅಧ್ಯಾಯದ ಸಾರಾಂಶ—

ನಚಿಕೇತನು ಋಷಿಗಳಿಗೆ (ಯಮ) ಧರ್ಮರಾಜನು, ತನಗೆ ಮಾಡಿದ ಗೌರವಾದರಗಳನ್ನೂ, ತಾನುಮಾಡಿದ ಆತನ ಸ್ತುತಿಯನ್ನೂ, ವರದಾಯಕನಾದ ಆತನಿಂದ ಯಮಪುರವನ್ನು ಪೂರ್ತಿಯಾಗಿ ನೋಡಲು ಸಮ್ಮತಿಯನ್ನು ಪಡೆದು ತಾನು ಅಲ್ಲಿನೋಡಿದ ಪಾಪಿಗಳ ನರಕಯಾತನೆಯನ್ನೂ, ಪುಣ್ಯಶಾಲಿಗಳ ಸೌಖ್ಯಾದಿಗಳನ್ನೂ, ಯಮದೂತರು ಪಾಪಿಗಳಿಗೆ ಹೇಳಿದ ಮಾತುಗಳನ್ನೂ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರತೊಂಬತ್ತೆಂಟನೆಯ ಅಧ್ಯಾಯ.

॥ ಶ್ರೀ ॥

ನವನವತ್ಯಧಿಕ ಶತತಮೋಽಧ್ಯಾಯಃ

ಅಥ ಪುನಸ್ಸಂಸಾರಚಕ್ರಯಾತನಾಸ್ವರೂಪವರ್ಣನಂ

॥ ಋಷಿಪುತ್ರ ಉವಾಚ ॥

ತಸ್ಮಿನ್ ಕ್ಷಿತಿಲಂ ಸರ್ವಮಾಯಸೈಃ ಕಂಟಕೈಶ್ಚಿತಂ ।
ಪ್ರಭವಂತಿ ಪುನಃ ಕೇಚಿದ್ವಿಷಮಂ ತಮಸಾಶ್ರಿತಂ ॥ ೧ ॥

ಅಥಾನ್ಯೇ ಛಿನ್ನಪಾದಾಸ್ತು ಛಿನ್ನಪಾಣಿಶಿರೋಧರಾಃ ।
ಪಾಪಚಾರಾಸ್ತಥಾ ದೇಶಾದುಪಸರ್ಪಂತಿ ಮಾ ಚಿರಂ ॥ ೨ ॥

ಯೇ ತು ಧರ್ಮರತಾ ದಾಂತಾ ವಪುಷ್ಮಂತೋಽಯಥಾ ಗೃಹೇ ।
ಪರಿಪಾಂತಿ ಕ್ಷಿತಿಂ ಸರ್ವೇ ಪಾಲ್ಯಂತೇಽಪಾಪಕಾರಿಣಃ ॥ ೩ ॥

ನೂರ ತೊಂಬತ್ತೊಂಬತ್ತನೆಯ ಅಧ್ಯಾಯ

ಸಂಸಾರ ಚಕ್ರಯಾತನಾಸ್ವರೂಪವರ್ಣನೆಯ ಮುನ್ನಡೆ

೧-೨. ನಚಿಕೇತ—ಆಯಮಲೋಕದಲ್ಲಿ ಒಂದುಕಡೆ ನೆಲವೆಲ್ಲವೂ ಹಳ್ಳ ತಿಟ್ಟುಗಳುಳ್ಳದಾಗಿ ಉಕ್ಕಿನ ಮುಳ್ಳುಗಳು ಹರಡಿರುವುದಾಗಿದೆ. ಪಾಪಾಚಾರರಾದ ಕೆಲವರು ಕತ್ತಲೆಗವಿದ ಅಲ್ಲಿ ಹುಟ್ಟಿ ಕಾಲುಗಳನ್ನೋ ಕೈಗಳನ್ನೋ ಕತ್ತನ್ನೋ ಕತ್ತರಿಸಿಕೊಂಡವರಾಗಿ, ಬಹುಕಾಲದವರೆಗೆ ಅಲ್ಲಿಂದೀಚೆಗೆ ಬರಲಾರರು.

೩-೪. ಧರ್ಮಾಸಕ್ತರೂ ಜಿತೇಂದ್ರಿಯರೂ ಧರ್ಮದಿಂದ ಭೂಮಿಯನ್ನು ರಕ್ಷಿಸುವವರೂ ಆದ ಪುಣ್ಯಶಾಲಿಗಳುಮಾತ್ರ ಅಲ್ಲೂ ಸ್ವಗೃಹದಲ್ಲಿ ಹೇಗೋಹಾಗೆಯೆ ಹೃಷ್ಟಪುಷ್ಟಾಂಗರಾಗಿ ರಕ್ಷಿತರಾಗುವರು. ಶ್ರೀದೇವಿಯಂತೆ ಸುಕುಮಾರಿಯರಾದ

ಯಥಾಚಚವಮಾನಾಃ ಸ್ಥಿತಾ ನಿತ್ಯಂ ಸುಶೀತೈಸ್ತೋಯಭೋಜನೈಃ ।
ಸ್ತ್ರಿಯಃ ಶ್ರೀರೂಪಸಂಕಾಶಾಸ್ಸುಕುಮಾರಾಸ್ಸುಭೋಜನಾಃ ।
ಕೃತ್ವಾ ಪೂಜಾಂ ಪರಾಂ ತತ್ರ ಪ್ರತೀಕ್ಷಂತೇ ಪರಂ ಜನಂ ॥ ೪ ॥

ಅಗ್ನಿತಪ್ತೇ ಸುಘೋರೇ ಚ ನಿಕ್ಷಿಪ್ಯಂತೇ ಶಿಲಾತಲೇ ।
ಆಲೋಕೇ ಚ ಪ್ರದರ್ಶ್ಯಂತೇ ವೃಕ್ಷಾಶ್ಚ ಭುವನಾನಿ ಚ ॥ ೫ ॥

ಆಯಾಂತಿ ದಹ್ಯಮಾನೇಷು ಪೃಷ್ಠಪಾದೋದರೇಷು ಚ ।
ತತ್ರ ಗತ್ವಾತು ತೇ ದೂತಾಃ ಪ್ರವಿಶಂತಿ ಸುದಾರುಣಾಃ ॥ ೬ ॥

ಕ್ಲಿಶ್ಯಂತಿ ಬಹವಸ್ತತ್ರ ತ್ರಾತಾರಂ ನಾಪ್ನುವಂತಿ ತೇ ॥ ೭ ॥

ಅಥಾನ್ಯೇ ತು ಶ್ವಭಿರ್ಘೋರೈರಾಪಾದತಲಮಸ್ತಕಂ ।
ಭಕ್ಷ್ಯಮಾಣಾ ರುದಂತಶ್ಚ ಕ್ರೋಶಂತಶ್ಚ ಪುನಃ ಪುನಃ ॥ ೮ ॥

ವನಿತೆಯರು ತಣ್ಣಗಿರುವ ಸ್ವಾದೂಕವನ್ನೂ ಮೃಷ್ಟಾನ್ನವನ್ನೂ ಸಿದ್ಧಪಡಿಸಿ, ಅವನ್ನು ಪರಿಗ್ರಹಿಸಬೇಕೆಂದು ಆಪುಣ್ಯಶಾಲಿಗಳನ್ನು ಯಾವಾಗಲೂ ಪ್ರಾರ್ಥಿಸುತ್ತಿರುವರು. ಸಾರ್ಥಕಜನ್ಮವುಳ್ಳ ಅಂತಹವರು. ಉತ್ತಮರನ್ನು ಚೆನ್ನಾಗಿಪೂಜಿಸಿ ಅಂತಹವರನ್ನು ಇನ್ನೂ ಪೂಜಿಸಲು ನಿರೀಕ್ಷಿಸುತ್ತಿರುವರು.

೫–೭. ಪಾಪಿಗಳನ್ನು ಬೆಂಕಿಯಿಂದ ಕಾಯ್ದು ಅತಿಭಯಂಕರವಾಗಿರುವ ಹಾಸುಗಲ್ಲಿನಮೇಲೆ ಹಾಕುವರು. ಹಾಗೆಬಿದ್ದವರ ಎದುರಿಗೆ ಮರಗಳೂ ನೀರೂ ಕಾಣಿಸುವುವು. ಪೃಷ್ಠಪಾದೋದರಗಳು ಬೆಂದುಹೋಗಲಾಗಿ ಆ ಮರಗಳ ಮತ್ತು ನೀರಿನ ಸಮೀಪಕ್ಕೆ ಓಡಿಬರುವ ಆಪಾಪಿಗಳನ್ನು ಅತಿ ಘೋರರಾದ ಆದೂತರುಹೋಗಿ ಅಲ್ಲಿಗೆ ಬಾರದಂತೆ ತಡೆಯುವರು. ಹೀಗೆ ಹಲವರು ಪಾಪಿಗಳು ಅಲ್ಲಿ ಕ್ಲೇಶಪಡುತ್ತ ರಕ್ಷಿಸುವವರನ್ನು ಪಡೆಯದಿರುವರು.

೮. ಮತ್ತೆಕೆಲವರು ಘೋರವಾದನಾಯಿಗಳು ತಮ್ಮನ್ನು ಕಾಲಿಂದ ತಲೆಯವರೆಗೂ ಕಚ್ಚಿ ತಿನ್ನುತ್ತಿರಲು, ಅಳುತ್ತಲೂ, ಮತ್ತೆಮತ್ತೆ ಕೂಗಿಕೊಳ್ಳುತ್ತಲೂ ಇರುವರು.

ಅಥಾನ್ಯೇತು ಮಹಾರೂಪಾಃ ಮಹಾದಂಷ್ಟ್ರಾ ಭಯಾನಕಾಃ ।
ಸೂಚೀಮುಖಂಕೃತಾಃ ಪಾಪಾಃ ಕ್ಷುಧಿತಾಸ್ತೃಷಿತಾಸ್ತಥಾ ॥ ೯ ॥

ಅನ್ನಾನಿ ದೀಯಮಾನಾನಿ ಭಕ್ಷ್ಯಾಣಿ ವಿವಿಧಾನಿ ಚ ।
ಭೋಜ್ಯಾನಿ ಲೇಹ್ಯಚೋಷ್ಯಾಣಿ ಯೈರ್ನಿಷಿದ್ಧಂ ದುರಾತ್ಮಭಿಃ ॥ ೧೦ ॥

ಅಸೌ ಸಾರಮಯೀ ನಾರೀ ವಹ್ನಿತಪ್ತಾ ಸುದಾರುಣಾ ।
ಆಲಿಂಗತಿ ನರಂ ತತ್ರ ಧಾವಂತಂ ಚಾನುಧಾವತಿ ॥ ೧೧ ॥

ಧಾವಂತಂ ಚಾನುಧಾವಂತೀ ತ್ವಿದಂ ವಚನಮಬ್ರವೀತ್ ।
ಅಹಂ ತೇ ಭಗಿನಿ ಪಾಪ ಹ್ಯಹಂ ಭಾರ್ಯಾಸುತಸುತಸ್ಯ ತೇ ॥ ೧೨ ॥

ಮಾತೃಷ್ವಸಾ ತೇ ದುರ್ಬುದ್ಧೇ ಮಾತುಲಾನೀ ಪಿತೃಷ್ವಸಾ ।
ಗುರುಭಾರ್ಯಾ ಮಿತ್ರಭಾರ್ಯಾ ಭ್ರಾತೃಭಾರ್ಯಾ ನೃಪಸ್ಯ ಚ ॥ ೧೩ ॥

೯-೧೦ ದಾತೃಗಳು ಇತರರಿಗೆ ಕೊಡುತ್ತಿದ್ದ ಅನ್ನಗಳನ್ನೂ, ಭಕ್ಷ್ಯಗಳನೂ ಬಗೆಬಗೆಯ ಲೇಹ್ಯಚೋಷ್ಯಗಳನ್ನೂ ಕೊಡದಂತೆ ತಡೆದಿದ್ದ ದುರಾತ್ಮರಾದ ಪಾಪಿಗಳು ಉನ್ನತಾಕಾರರೂ, ದೊಡ್ಡಹಲ್ಲುಗಳುಳ್ಳವರೂ, ಭಯಂಕರರೂ, ಹಸಿವುಬಾಯಾರಿಕೆಗಳುಳ್ಳವರೂ ಆಗಿ ಸೂಜಿಯ ಬಾಯಿಗೊಳಗಾಗಿರುವರು.

೧೧. ಬೆಂಕಿಯಲ್ಲಿ ಕಾಯ್ದು ಅತಿಭಯಂಕರವಾಗಿರುವ ಉಕ್ಕಿನಿಂದ ನಿರ್ಮಿತಳಾದ ನಾರಿಯು ಪಾಪಿಯನ್ನು ಆಲಂಗಿಸಿಕೊಂಡು ತಪ್ಪಿಸಿಕೊಂಡೋಡುವ ಅವನನ್ನು ಹಿಂದಟ್ಟಿಸಿಕೊಂಡು ಓಡುವಳು.

೧೨-೧೩. ಹಾಗೆ ಹಿಂಬಾಲಿಸಿ ಓಡುತ್ತ ಆ ಪಾಪಿಗೆ ಹೀಗೆ ಹೇಳುವಳು– "ಪಾಪನೇ, ನಾನು ನಿನ್ನ ಸಹೋದರಿ. ನಾನು ನಿನ್ನ ಸೊಸೆ, ದುರ್ಬುದ್ಧಿಯೇ, ನಾನು ನಿನ್ನ ತಾಯಸಹೊದರಿ. ಸೋದರಮಾವನಹೆಂಡತಿ, ಸೋದರತ್ತೆ. ಗುರುಪತ್ನಿ, ಮಿತ್ರಪತ್ನಿ, ಸಹೋದರನಪತ್ನಿ, ರಾಜಪತ್ನಿ.

ಶ್ರೋತ್ರಿಯಾಣಾಂ ದ್ವಿಜಾತೀನಾಂ ಭಾರ್ಯಾ ವೈ ಧರ್ಷಿತಾಸ್ತ್ವಯಾ ।
ಮೋಕ್ಷ್ಯಸೇ ನಹಿ ಪಾಪಾತ್ತ್ವಂ ರಸಾತಲಗತೋ ಯಥಾ ॥ ೧೪ ॥

ಕಿಂ ಪ್ರಧಾವಸಿ ನಿರ್ಲಜ್ಜ ವ್ಯಸನೈರುಪಪಾದಿತಃ ।
ಪನಿಷ್ಯೇಹಂ ಧ್ರುವಂ ಪಾಪ ಯಥಾಕರ್ಮ ತ್ವಯಾ ಕೃತಂ ॥ ೧೫ ॥

ಏವಂ ವೈ ಬೋಧಯಂತೀಹ ಶ್ರಾವಯಂತಿ ಪುನಃ ಪುನಃ ।
ಅಭಿದ್ರವಂತಿ ತಂ ಪಾಪಂ ಘೋರರೂಪಾ ಭಯಾನಕಾಃ ॥ ೧೬ ॥

ಜ್ಞಾನಿನಾಂ ಚ ಸಹಸ್ರೇಷು ಜಾತಂ ಜಾತಂ ತಥಾ ಸ್ತ್ರಿಯಃ ।
ಅನುಪೀಡ್ಯ ದುರಾತ್ಮಾನಂ ಧರ್ಷಯಂತಿ ಸುದಾರುಣಂ ॥ ೧೭ ॥

ವೃಷಲೀರ್ಬಹುಲೈರ್ದುಃಖೈಃ ಕಿಂ ಕ್ರಂದಸಿ ಪುನಃ ಪುನಃ ।
ಕಿಂ ಕ್ರಂದಸಿ ಸುದುರ್ಬುದ್ಧೇ ಪರಿಷ್ವಕ್ತಃ ಸ್ವಯಂ ಮಯಾ ॥ ೧೮ ॥

೧೪–೧೫ ಶ್ರೋತ್ರಿಯರಾದ ದ್ವಿಜರ ಪತ್ನಿಯರೊಡನೆ ನೀನು ಕ್ರೀಡಿಸಿದೆಯಲ್ಲವೆ! ಪಾತಾಳಕ್ಕೆ ಹೋದವನು ಹೇಗೆ ತಪ್ಪಿಸಿಕೊಳ್ಳಲಾರನೋ ಹಾಗೆ ನೀನು ಈ ಪಾಪದಿಂದ ತಪ್ಪಿಸಿಕೊಳ್ಳಲಾರೆ ನಾಚಿಕೆಗೆಟ್ಟವನೇ, ವ್ಯಸನಗಳಿಗೆ ಸಿಕ್ಕಿದವನಾಗಿ ಏಕೆ ಓಡುತ್ತೀಯೆ! ಪಾಪಿ! ನಿನ್ನ ಪಾಪಕ್ಕೆ ತಕ್ಕರೀತಿಯಿಲ್ಲಿ ನಿನ್ನನ್ನು ನಾನು ಹಿಂಸಿಸದೆ ಅಥವಾ ಕೊಲ್ಲದೆ ಬಿಡುವುದೇ ಇಲ್ಲ''

೧೬. ಹೀಗೆ ಅವನಿಗೆ ಕೇಳುವಂತೆ ಮತ್ತೆ ಮತ್ತೆ ಬೋಧಿಸುತ್ತ ಘೋರ ರೂಪವುಳ್ಳ ಭಯಂಕರರಾದ ಆಸ್ತ್ರೀಯರು ಅಟ್ಟಿಸಿಕೊಂಡು ಓಡುವರು.

೧೭–೧೮. ಹಾಗೆಯೇ ಇತರಸ್ತ್ರೀಯರೂ ಸಾವಿರಾರುಜನ ಜ್ಞಾನಿಗಳ ಮಧ್ಯದಲ್ಲಿ ಸ್ಪಷ್ಟವಾಗಿ ತಿಳಿಯುವ ದುರಾತ್ಮನನ್ನು ಸಮೀಪಿಸಿ, ಉಗ್ರವಾಗಿ ಪೀಡಿಸಿ " ವೃಷಲೀಸಂಗದಿಂದ ಅತಿಯಾದ ದುಃಖಗಳನ್ನು ಪಡೆದು, ಈಗ ಏಕೆ ಮತ್ತೆಮತ್ತೆ ಅಳುತ್ತೀಯೆ! ಬಹುದುರ್ಬುದ್ಧಿಯೇ ನಾನಾಗಿ ಆಲಿಂಗಿಸಿಕೊಂಡಿರುವಾಗ ಏಕೆ ಅಳುತ್ತೀಯೆ!

ದಶಧಾ ತ್ವಂ ಮಯಾ ಪಾಪ ನೀಯಮಾನಃ ಪುನಃ ಪುನಃ ।
ಅಂಜಲಿಂ ನಾಪಿ ಕುರ್ವಾಣೋ ಯಾಚಮಾನೋ ನಲಜ್ಜಸೇ ॥ ೧೯ ॥

ನಮೋಕ್ಷ್ಯಸೇ ಮಯಾ ಪಾಪ ಕುತೋ ಗಚ್ಛಸಿ ಮೂಢವ್ಯೈ ॥ ೨೦ ॥

ಯತ್ರ ಯತ್ರ ಪ್ರಯಾಸಿ ತ್ವಮಿತಿ ಗತ್ವಾ ಯಮಾಲಯೇ।
ತತ್ರ ತತ್ರೈವ ಪಾಪ ತ್ವಾಂ ನ ತ್ಯಕ್ಷ್ಯೇ ಪಾರದಾರಿಕಂ ॥ ೨೧ ॥

ಲೋಹಯಷ್ಟಿಪ್ರಹಾರೈಶ್ಚ ತಾಡಯಂತಿ ಪುನಃ ಪುನಃ ।
ಗೋಪಾಲಾ ಇವ ದಂಡೇನ ಕಾಲಯಂತೋ ಮುಹುರ್ಮುಹುಃ ॥ ೨೨ ॥

ವ್ಯಾಘ್ರಸಿಂಹಸೃಗಾಲೈಶ್ಚ ತಥಾ ಗರ್ದಭರಾಕ್ಷಸೈಃ ।
ಭಕ್ಷ್ಯಂತೇ ಶ್ವಾಪದೈರನ್ಯೈಃ ಶ್ವಭಿಃ ಕಾಕೈಸ್ತಥಾಪರೇ ॥ ೨೩ ॥

---

೧೯. ಪಾಪಿಯೇ, ನಿನ್ನನ್ನು ನಾನು ಹತ್ತುಸಾರಿ ಸೆಳೆದು ಕೊಂಡುಹೋದರೂ ಮತ್ತೆಮತ್ತೆ ನನಗೆ ಕೈಮುಗಿದು ಬೇಡುವುದಕ್ಕೆ ಲಜ್ಜೆಯಾಗುವುದಿಲ್ಲವೆ !

೨೦-೨೧. ಪಾಪಾತ್ಮನೇ, ನಾನು ನಿನ್ನನ್ನು ಬಿಡುವುದಿಲ್ಲ. ಮೂಢನೇ, ಎಲ್ಲಿ ಹೋಗುತ್ತೀಯೆ ? ಹೀಗೆ ನೀನು ಯಮಾಲಯದಲ್ಲಿ ಎಲ್ಲೆಲ್ಲಿಗೆ ಹೋದರೂ ಪರಸ್ತ್ರೀಗಾಮಿಯಾದ ನಿನ್ನನ್ನು ಹಿಡಿಯದೆ ಬಿಡುವುದಿಲ್ಲ.''

೨೨-೨೩. ಅಲ್ಲಿ ಕೆಲವರುಪಾಪಿಗಳನ್ನು ಲೋಹದ ಕೋಲುಗಳಿಂದ, ಗೊಲ್ಲರು ಹಸುಗಳನ್ನು ಸಾಮಾನ್ಯವಾದ ಕೋಲಿನಿಂದ ಹೊಡೆಯುವಂತೆ ಮತ್ತೆ ಮತ್ತೆ ಹೊಡೆಯುವರು. ಪಾಪಿಗಳಲ್ಲಿ ಕೆಲವರನ್ನು ಹುಲಿಗಳೂ, ಸಿಂಹಗಳೂ, ನರಿಗಳೂ, ಕತ್ತೆಯ ಆಕಾರದ ರಾಕ್ಷಸರೂ ಉಳಿದವರನ್ನು ಇತರ ಘಾತುಕ ಮೃಗಗಳೂ, ನಾಯಿಗಳೂ, ಕಾಗೆಗಳೂ ತಿನ್ನುವುವು.

ಅಸಿತಾಲವನಂ ತತ್ರ ಧೂಮಜ್ವಾಲಾಸಮಾಕುಲಂ ।
ದಾವಾಗ್ನಿಸದೃಶಾಕಾರಂ ಪ್ರದೀಪ್ತಂ ಸರ್ವತೋಽರ್ಚಿಷಾ ॥ ೨೪ ॥

ತತ್ರ ಕ್ಷಿಪ್ತ್ವಾ ತತಃ ಪಾಪಂ ಯಮದೂತೈಸ್ಸುದಾರುಣೈಃ ।
ದಹ್ಯಮಾನಾನ್ಸುತಪ್ತಾಂಶ್ಚ ಸಂಶ್ರಯಂತೇ ದ್ರುಮಾನ್ಪುನಃ ।
ಅಸಿಪತ್ರೈಸ್ತತೋ ವೃಕ್ಷಾಶ್ಛಿಂದಂತಿ ಬಹುಶೋ ನರಾನ್ ॥ ೨೫ ॥

ತತ್ರ ಛಿನ್ನಾಶ್ಚ ದಗ್ಧಾಶ್ಚ ಹನ್ಯಮಾನಾಶ್ಚ ಸರ್ವಶಃ ।
ವಿಘೃಷ್ಟಾ ವಿಕೃತಾಶ್ಚೈವ ದಹ್ಯಮಾನಾ ನದಂತಿ ತೇ ॥ ೨೬ ॥

ಅಸಿತಾಲವನದ್ವಾರಿ ಯೇ ತಿಷ್ಠಂತಿ ಮಹಾರಥಾಃ ।
ಪಾಪಕರ್ಮಸಮಾಯುಕ್ತಾಂಸ್ತರ್ಜಯಂತಿ ಸುದಾರುಣಾಃ ॥ ೨೭ ॥

ಭೋ ಭೋ ಪಾಪಸಮಾಚಾರಾ ಧರ್ಮಸೇತುವಿನಾಶಕಾಃ ।
ಅತೋ ನಿಮಿತ್ತಂ ಪಾಪಿಷ್ಠಾ ಯಾತನಾಭಿಸ್ಸಹಸ್ರಶಃ ॥ ೨೮ ॥

---

೨೪ ಅಲ್ಲಿರುವ ಅಸಿತಾಲವನವೆಂಬುದು ಹೊಗೆಯಿಂದಲೂ, ಉರಿಯಿಂದಲೂ ವ್ಯಾಪ್ತವಾಗಿದೆ ಕಾಡುಗಿಚ್ಚಿನಂತೆ ಎಲ್ಲಾ ಕಡೆಯಲ್ಲಿಯೂ ಉರಿಯಿಂದ ಪ್ರಜ್ವಲಿಸುತ್ತಿದೆ.

೨೫. ಅತಿಭೀಷಣರಾದ ಯಮದೂತರು ಪಾಪಿಗಳನ್ನು ಆ ಅಸಿತಾಲವನದಲ್ಲಿ ಹಾಕುವರು. ಅಲ್ಲಿ ಚೆನ್ನಾಗಿ ಉರಿದೂ, ಉರಿಯುತ್ತಲೂ ಇರುವ ಮರಗಳನ್ನು ಆ ಪಾಪಿಗಳು ಅಪ್ಪಿಕೊಳ್ಳುವರು. ಬಳಿಕ ಮರದೊಡನೆ ಸೇರಿಸಿಕೊಂಡಿರುವ ಆ ಮನುಷ್ಯರನ್ನು ಅಸಿಪತ್ರ (ಗರಗಸ) ಗಳಿಂದ ಅನೇಕಸಾರಿ ಕತ್ತರಿಸುವರು.

೨೬. ಅಲ್ಲಿ ಕತ್ತರಿಸಲ್ಪಟ್ಟವರೂ, ಸುಡಲ್ಪಟ್ಟವರೂ, ಹಿಂಸಿಸಲ್ಪಟ್ಟವರೂ ವಿಕಾರವುಳ್ಳವರೂ ಸಂತಾಪಗೊಂಡು ಎಲ್ಲೆಲ್ಲೂ ಕೂಗಿಕೊಳ್ಳುವರು.

೨೭ ಅಸಿತಾಲವನದ ಬಾಗಿಲಲ್ಲಿರುವ ಅತಿಕಠಿನರಾದ ಮಹಾರಥರು, ಪಾಪಕರ್ಮಗಳಿಂದ ಕೂಡಿದವರನ್ನು ಮುಂದಿನ ಮಾತುಗಳಿಂದ ಧಿಕ್ಕರಿಸುವರು.

೨೮-೨೯ "ಎಲೈ ಎಲೈ ಪಾಪಕಾರಿಗಳೇ, ಧರ್ಮಸೇತುವಿನಾಶಕರಾಗಿ ನೀವು ಪಾಪಿಷ್ಠರಾಗಿರುವುದರಿಂದ ಸಾವಿರಾರು ಬಗೆಯ ಯಾತನೆಗಳನ್ನೆಲ್ಲಾ ಅನುಭವಿಸಿ

ಅನುಭೂಯೇಹ ತತ್ಸರ್ವಂ ಮಾನುಷ್ಯಂ ಯದಿ ಯಾಸ್ಯಥ ।
ಕುಲೇಷು ಸುದರಿದ್ರಾಣಾಂ ಗರ್ಭವಾಸೇನ ಪೀಡಿತಾಃ ।
ಭೋಗೈಶ್ಚ ಪೀಡಿತಾ ನಿತ್ಯಂ ಉತ್ಪತ್ಸ್ಯಥ ಸುದುರ್ಗತಾಃ ॥ ೨೯ ॥

ಅಗ್ನಿಜ್ವಾಲಾನಿಭಾಸ್ತತ್ರ ಅಗ್ನಿಸ್ಪರ್ಶಾ ಮಹಾರವಾಃ ।
ಪಕ್ಷಿಣಶ್ಚಾಯಸೈಸ್ತುಂಡೈರ್ವ್ಯಾಘ್ರಾಶ್ಚೈವ ಸುದಾರುಣಾಃ ॥ ೩೦ ॥

ತತ್ರ ಘೋರಾ ಬಹುವಿಧಾಃ ಕ್ರವ್ಯಾದಾಃ ಶ್ವಾದಯಸ್ತಥಾ ।
ಖಾದಂತಿ ರುಷಿತಾಸ್ತತ್ರ ಬಹವೋ ಹಿಂಸಕಾಃ ನರಾನ್ ॥ ೩೧ ॥

ಋಕ್ಷದ್ವೀಪಿಸಮಾಕೀರ್ಣೇ ಬಹುಕೀಟಪಿಪೀಲಿಕೇ ।
ಅಸಿತಾಲವನೇ ವಿಪ್ರಾ ಬಹುದುಃಖಸಮಾಕುಲೇ ॥ ೩೨ ॥

ತತ್ರ ಕ್ಷಿಪ್ತಾ ಮಯಾ ದೃಷ್ಟಾ ಯಮದೂತೈರ್ಮಹಾಬಲೈಃ ॥ ೩೩ ॥

ನೀವು ಮನುಷ್ಯಲೋಕಕ್ಕೆ ಹೋದರೆ ಅಲ್ಲಿ ಅತಿದರಿದ್ರಕುಲಗಳಲ್ಲಿ ಗರ್ಭವಾಸದಿಂದಲೂ ಭೋಗಗಳಿಂದಲೂ ಪೀಡಿತರಾಗಿ ದುರ್ಗತಿಯುಳ್ಳವರಾಗಿ ಜನಿಸುವಿರಿ.''

೩೦-೩೧. ಅಲ್ಲಿ ಅಗ್ನಿಜ್ವಾಲೆಯಂತೆ ಇರುವುವೂ, ಅಗ್ನಿಸ್ಪರ್ಶವುಳ್ಳವೂ, ಮಹಾಧ್ವನಿಯುಳ್ಳವೂ, ಅತಿಭಯಂಕರಗಳೂ ಆದ ಪಕ್ಷಿಗಳೂ, ಹುಲಿಗಳೂ, ನಾಯಿಗಳೇ ಮೊದಲಾದ ಬಹುವಿಧದ ಹಿಂಸಕಗಳಾದ ಮಾಂಸಾಹಾರಿಗಳೂ, ಮನುಷ್ಯರನ್ನು ಕೋಪವುಳ್ಳವುಗಳಾಗಿ ತಿನ್ನುವುವು.

೩೨-೩೩. ಹುಲಿಕರಡಿಗಳಿಂದಲೂ, ಬಹು ದುಃಖಗಳುಳ್ಳ ಅಸಿತಾಲವನದಲ್ಲಿ ಯಮದೂತರು ಹಾಕಿದ ಬ್ರಾಹ್ಮಣರನ್ನು ನಾನು ನೋಡಿದೆನು.

ಅಸಿಪತ್ರಸುಭಗ್ನಾಂಗಾಃ ಶೂಲಲಗ್ನಾಸ್ತಥಾಪರೇ ।
ತಥಾಪರೋ ಮಹಾದೇಶೋ ನಾನಾರೂಪೋ ಭಯಾನಕಃ ॥ ೩೪ ॥
ಪುಷ್ಕರಿಣ್ಯಶ್ಚ ವಾಪ್ಯಶ್ಚ ಹ್ರದಾ ನದ್ಯಸ್ತಥೈವ ಚ ।
ತಡಾಗಾನಿ ಚ ಕೂಪಾಶ್ಚ ರುಧಿರಸ್ಯ ಸಹಸ್ರಶಃ ॥ ೩೫ ॥
ಪೂತಿಮಾಂಸಕ್ರಿಮೀಣಾಂ ಚ ಅಮೇಧ್ಯಸ್ಯ ತಥೈವ ಚ ।
ಅನ್ಯಾನಿ ಚ ಮಯಾ ತತ್ರ ದೃಷ್ಟಾನಿ ಮುನಿಸತ್ತಮಾಃ ॥ ೩೬ ॥
ತತ್ರ ಕ್ಲಿಶ್ಯಂತಿ ತೇ ಪಾಪಾಸ್ತಸ್ಮಿನ್ಮಧ್ಯೇ ಸಹಸ್ರಶಃ ।
ಜಿಘ್ರಂತಶ್ಚ ತಥಾಗಂಧಂ ಮಜ್ಜಂತಶ್ಚ ಸಹಸ್ರಶಃ ।
ಅಸ್ಥಿಪಾಷಾಣವರ್ಷಾಣಿ ರುಧಿರಸ್ಯ ಬಲಾಹಕಾಃ ॥ ೩೭ ॥
ಅಶ್ಮವರ್ಷಾಣಿತೇಘೋರಾಃ ಪಾತಯಂತಿ ಸಹಸ್ರಶಃ ॥ ೩೮ ॥
ಧಾವತಾಂ ಪ್ಲವತಾಂ ಚೈವ ಹಾ ಹತೋಽಸ್ಮೀತಿ ಭಾಷಿಣಾಂ ।
ಪ್ರಾಹತಾನಾಂ ಪುನಶ್ಚೋರ್ಧ್ವೇ ವಿಧ್ಯತಾಂ ಚ ಸುದಾರುಣಃ ॥ ೩೯ ॥
ಕ್ರಂದತಾಂ ಕರುಣೋನ್ಮಿಶ್ರಂ ದಿಶೋಽಪೂರಯರ್ನಂತ ಸರ್ವಶಃ ॥ ೪೦ ॥

೩೪–೩೫. ಅಸಿಪತ್ರ (ಗರಗಸ)ದಿಂದ ಪೂರ್ಣವಾಗಿ ಕತ್ತರಿಸಿ ಹೋಗಿರುವ ಅಂಗಗಳುಳ್ಳವರು ಕೆಲವರು. ಶೂಲದಲ್ಲಿ ಸಿಕ್ಕಿಬಿದ್ದಿರುವವರು ಮತ್ತೆ ಕೆಲವರು, ಇದಲ್ಲದೆ ಅಲ್ಲಿ ಮತ್ತೊಂದು ವಿಸ್ತಾರವಾದ ಪ್ರದೇಶವು ಬಹುವಿಧವಾಗಿ ಭಯಂಕರವಾಗಿದೆ. ಅಲ್ಲಿ ರಕ್ತದ ಕೊಳಗಳೂ, ಬಾವಿಗಳೂ ಸಾವಿರಾರಿವೆ

೩೬. ಮುನಿವರ್ಯರೇ, ದುರ್ಗಂಧಮಾಂಸಕ್ರಿಮಿಗಳ ಮತ್ತು ಅಮೇಧ್ಯದ ಬೇರೆಯ ಕೆರೆ, ಕೊಳ, ನದಿ ಮೊದಲಾದುವುಗಳನ್ನೂ ನಾನು ಅಲ್ಲಿ ನೋಡಿದೆನು.

೩೭. ಅವುಗಳ ಮಧ್ಯದಲ್ಲಿ ಪಾಪಿಗಳು ಸಾವಿರಗಟ್ಟಲೆಯಾಗಿ ಆ ದುರ್ಗಂಧವನ್ನು ಸೇವಿಸುತ್ತಲೂ ಇರುವರು.

೩೮. ರಕ್ತಪಾನಮಾಡುವ ಕ್ರೂರವಾದ ಸಾವಿರಾರುಪಕ್ಷಿಗಳು ಪಾಪಿಗಳ ಮೇಲೆ ರಕ್ತದಿಂದ ಕೂಡಿರುವ ಅಸ್ಥಿಗಳೆಂಬ ಕಲ್ಲುಗಳ ಮತ್ತು ನಿಜವಾದಕಲ್ಲುಗಳ ಮಳೆಯನ್ನು ಸುರಿಸುವುವು.

೩೯–೪೦. ಹೊಡೆಯಲ್ಪಡುತ್ತಲೂ, ಕೊಲ್ಲಲ್ಪಡುತ್ತಲೂ, ಹಾ! ಸತ್ತೆ ಸತ್ತೆ, ಎಂದು ಹೇಳುತ್ತಲೂ, ಅಳುತ್ತಿರುವ ಬಹು ಭಯಂಕರವೂ, ಕರುಣಾಜನಕವೂ ಆದ ಶಬ್ದವು ದಿಕ್ಕುಗಳಲ್ಲೆಲ್ಲಾ ತುಂಬಿತು.

ಕ್ವಚಿದ್ಬದ್ಧಾಃ ಕ್ವಚಿದ್ರುದ್ಧಾಃ ಕ್ವಚಿದ್ವಿದ್ಧಸ್ಸುದಾರುಣೈಃ ।
ಕ್ವಚಿತ್‌ಸ್ಥೂಲೈಸ್ತಥಾಬದ್ಧ ಉದ್ಬದ್ಧಶ್ಚ ಕ್ವಚಿತ್ತಥಾ ॥ ೪೧ ॥

ಹಾಹಾಭಯಾನಕೋನ್ಮಿಶ್ರಃ ಶಬ್ದೋಽಶ್ರೂಯತ ದಾರುಣಃ ॥ ೪೨ ॥

ಅಪಶ್ಯಂ ಪುನರನ್ಯತ್ರ ಯತ್‌ಸ್ಮೃತ್ವಾ ಚೋದ್ವಿಜೇನ್ನರಃ ॥ ೪೩ ॥

ಇತಿ ಶ್ರೀವರಾಹಪುರಾಣೇ ಸಂಸಾರಚಕ್ರೇ ಯಾತನಾಸ್ವರೂಪವರ್ಣನಂ ನಾಮ ನವನವತ್ಯಧಿಕ ಶತತಮೋಽಧ್ಯಾಯಃ

೪೧–೪೩. ಕೆಲವುಕಡೆ ಕಟ್ಟಲ್ಪಟ್ಟವರೂ ಕೆಲವುಕಡೆ ತಡೆಯಲ್ಪಟ್ಟವರೂ, ಕೆಲವೆಡೆ ಬಹಳ ಹರಿತವಾದ ಆಯುಧಗಳಿಂದ ಕೊರೆಯಲ್ಪಟ್ಟವರೂ, ಕೆಲವೆಡೆ ಸ್ಥೂಲರಾದವರಿಂದ ಬಂಧಿತರಾದವರೂ ಮಾಡುವ ಹಾ ಹಾ ! ಎಂಬ ಭಯಂಕರವಾದ ಶಬ್ದವು ಕೇಳಿಸಿತು. ಮತ್ತೊಂದೆಡೆಯಲ್ಲಿ ಜ್ಞಾಪಿಸಿಕೊಂಡ ಮಾತ್ರದಲ್ಲಿಯೇ ಮನುಷ್ಯನು ಉದ್ವೇಜನಗೊಳ್ಳುವಂತಾಗುವ ವಿಚಾರವನ್ನು ನೋಡಿದೆನು.

ಅಧ್ಯಾಯದ ಸಾರಂಶ—

ನಚಿಕೇತನು ಋಷಿಗಳಿಗೆ ನರಕವನ್ನೂ ಪಾಪಿಗಳು ಅಲ್ಲಿ ಅನುಭವಿಸುವ ದುಃಖಗಳನ್ನೂ ವರ್ಣಿಸಿ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ನೂರತೊಂಬತ್ತೊಂಬತ್ತನೆಯ ಅಧ್ಯಾಯ.

|| ಶ್ರೀಃ ||

ದ್ವಿಶತತಮೋಽಧ್ಯಾಯಃ

ಪುನಃ ನರಕಯಾತನಾಸ್ವರೂಪವರ್ಣನಂ

|| ಋಷಿಪುತ್ರ ಉವಾಚ ||

ತಪ್ತಂ ಚೈವ ಮಹಾತಪ್ತಂ ಮಹಾರೌರವರೌರವೌ ।
ಸಪ್ತತಾಲಶ್ಚ ನರಕೋ ನರಕಃ ಕಾಲಸೂತ್ರಕಃ || ೧ ||

ಅಂಧಕಾರಶ್ಚ ನರಕೋ ಅಂಧಕಾರವರಸ್ತಥಾ ।
ಅಷ್ಟಾವೇತೇ ತು ನರಕಾಃ ಪಚ್ಯಂತೇ ಯತ್ರಪಾಪಿನಃ || ೨ ||

ಪ್ರಥಮೋ ಪ್ರಥಮಂ ವಿದ್ಯಾದ್ದ್ವಿತೀಯೋ ದ್ವಿಗುಣಂ ತಥಾ ।
ತೃತೀಯೋ ತ್ರಿಗುಣಂ ವಿದ್ಯಾಚ್ಚತುರ್ಥೇ ತು ಚತುರ್ಗುಣಂ || ೩ ||

ಇನ್ನೂರನೆಯ ಅಧ್ಯಾಯ

ಮತ್ತೂ ನರಕಯಾತನಾಸ್ವರೂಪ ವರ್ಣನೆ.

೧-೨ ನಚಿಕೇತ—ಪಾಪಿಗಳನ್ನು ಸಂತಾಪಗೊಳಿಸುವ ತಪ್ತ, ಮಹಾತಪ್ತ ರೌರವ, ಮಹಾರೌರವ, ಸಪ್ತತಾಲ, ಕಾಲಸೂತ್ರಕ, ಅಂಧಕಾರ ಅಂಧಕಾರವರ ಎಂಬುದಾಗಿ ಎಂಟು ನರಕಗಳಿವೆ.

೩-೪ ಮೊದಲನೆಯ ನರಕದಲ್ಲಿ ಆಗುವ ಯಾತನೆಯ ಎರಡರಷ್ಟು ಎರಡನೆಯದರಲ್ಲೂ, ಮೂರರಷ್ಟು ಮೂರನೆಯದರಲ್ಲೂ, ನಾಲ್ಕರಷ್ಟು ನಾಲ್ಕನೆಯದ

ಪಂಚಮೇ ತು ಗುಣಾಃ ಪಂಚ ಷಷ್ಠೇ ಷಡ್ಗುಣಮುಚ್ಯತೇ ।
ಸಪ್ತಮೇ ತು ಗುಣಾಸ್ಸಪ್ತ ಅಷ್ಟಮೇಽಷ್ಟವಿಧಾ ಗುಣಾಃ ॥ ೪ ॥

ಅಹೋರಾತ್ರೇಣ ಚಾಧ್ವಾನಂ ಪ್ರೇತಾ ಗಚ್ಛಂತಿ ತತ್ಪುರಂ ।
ದುಃಖಿತಾನಾಂ ತತೋ ದುಃಖಂ ದುಃಖಾದ್ದುಃಖತರಂ ತತಃ ॥ ೫ ॥

ದುಃಖಮೇವಾತ್ರ ನ ಸುಖಂ ದುಃಖೈರ್ದುಃಖಂ ವಿವರ್ಧ್ಯತೇ ।
ಉಪಾಯಸ್ತತ್ರ ನೈವಾಸ್ತಿ ಯೇನ ಸ್ವಲ್ಪಂ ಸುಖಂ ಭವೇತ್ ॥ ೬ ॥

ಮುಚ್ಯತೇ ಚ ಮೃತಸ್ತತ್ರ ಮಾರಕಾಸ್ತತ್ರ ದುರ್ಲಭಾಃ ।
ಶಬ್ದೇ ಸ್ಪರ್ಶೇ ತಥಾ ರೂಪೇ ರಸೇ ಗಂಧೇತು ಪಂಚಮೇ ॥ ೭ ॥

ನ ಸುಖಂ ತತ್ರ ತಸ್ಯಾಸ್ತಿ ಕಿಂಚಿದೇವಾತ್ರ ವಿದ್ಯತೇ ।
ಶಾರೀರೈರ್ಮಾನಸೈಶ್ಚೈವ ದುಃಖೈರ್ದುಃಖಾಂತಗಾಮಿಭಿಃ ॥ ೮ ॥

ರಲ್ಲೂ, ಐದರಷ್ಟು ಐದನೆಯದರಲ್ಲೂ, ಆರರಷ್ಟು ಆರನೆಯದರಲ್ಲೂ, ಏಳರಷ್ಟು ಏಳನೆಯದರಲ್ಲಿಯೂ, ಎಂಟರಷ್ಟು ಎಂಟನೆಯದರಲ್ಲಿಯೂ ಆಗುವುದು.

೫–೬ ಪ್ರೇತಗಳು ಹಗಲೂ ರಾತ್ರಿಯೂ ದಾರಿಯನ್ನು ನಡೆದು ಆ ನರಕ ಪಟ್ಟಣಕ್ಕೆಹೋಗುವುವು. ದುಃಖಿಗಳಿಗೆ ಅದರಿಂದ ಇನ್ನಷ್ಟು ದುಃಖ ; ಹೆಚ್ಚಾದ ಆ ದುಃಖದಿಂದ ಅತಿದುಃಖ. ಹೀಗೆ ಅಲ್ಲಿ ದುಃಖವೇ ಹೊರತು ಸುಖವಿಲ್ಲ. ಹೆಚ್ಚಿದ ದುಃಖಗಳಿಂದ ಮೊದಲಿನ ಸಾಮಾನ್ಯದುಃಖವು ಹೋಗುವುದು. ಸ್ವಲ್ಪವಾದರೂ ಸುಖವನ್ನು ಪಡೆಯುವುದಕ್ಕೆ ಅಲ್ಲಿ ಯಾವ ಉಪಾಯವೂ ಇಲ್ಲವೇ ಇಲ್ಲ.

೭–೮. ಅಲ್ಲಿ ಮೃತನಾದವನು ಆ ಕಷ್ಟದಿಂದ ತಪ್ಪಿಸಿಕೊಳ್ಳುವನು. ಆದರೆ ಅಲ್ಲಿ ಕೊಲ್ಲುವವರು ದುರ್ಲಭರಾಗಿರುವರು. ದುಃಖಗಳಿಂದಲೇ ದುಃಖದ ಕೊನೆ ಗಾಣುವ ಅಲ್ಲಿರುವ ಪ್ರಾಣಿಗೆ ಶಬ್ದಸ್ಪರ್ಶರೂಪರಸಗಂಧಗಳೆಂಬ ವಿಷಯಗಳೈದರಲ್ಲಿ ಯಾವುದರಿಂದಲೂ ಸ್ವಲ್ಪವೂ ಸುಖವಿಲ್ಲ.

ಆಯಸ್ಯೈಃ ಕಂಟಕೈಸ್ತೀಕ್ಷ್ಣೈಸ್ತಸ್ತೈಸ್ತಸ್ತಾವೃತಾ ಮಹೀ ।
ಅಂತರಿಕ್ಷಂ ಖಗಾನೀಕೈರಗ್ನಿಜಿಹ್ವೈಸ್ಸಮಾವೃತಂ ॥ ೯ ॥

ಅತೀವ ಚ ಬುಭುಕ್ಷಾತ್ರ ಪಿಪಾಸಾ ಚಾಪ್ಯತೀವ ಹಿ ।
ಉಷ್ಣಮತ್ಯುಷ್ಣಮೇವಾತ್ರ ಶೀತಲಂ ಚಾತಿಶೀತಲಂ ॥ ೧೦ ॥

ಪಾತುಕಾಮಶ್ಚ ಪಾನೀಯಂ ರಾಕ್ಷಸೈರ್ನೀಯತೇ ಸರಃ ।
ಹಂಸಸಾರಸಸಂಕೀರ್ಣಂ ಪದ್ಮೋತ್ಪಲವಿಭೂಷಿತಂ ॥ ೧೧ ॥

ಪಾತುಕಾಮಶ್ಚ ಪಾನೀಯಂ ಸಹಸಾ ತತ್ರ ಧಾವತಿ ।
ಸಲಿಲಂ ಪ್ರೇಕ್ಷತೇ ಚೈವ ತತ್ರ ತಪ್ತತರಂ ತಥಾ ॥ ೧೨ ॥

ತತಃ ಪಕ್ವಾನಿ ಮಾಂಸಾನಿ ರಾಕ್ಷಸೈಃ ಪರಿಣೀಯತೇ ।
ಕ್ಷಾರೋದಕೇಽಪಿ ಚ ತಥಾ ಕ್ಷಿಪ್ಯತೇಽತ್ರ ಮಹಾಹ್ರದೇ ॥ ೧೩ ॥

---

೯. ಕಾಯ್ದಿರುವ ಉಕ್ಕಿನ ಮುಳ್ಳುಗಳಿಂದ ವ್ಯಾಪ್ತವಾಗಿರುವ ಅಲ್ಲಿನ ಭೂಮಿಯೂ ಕಾಯ್ದಿರುತ್ತದೆ. ಅಲ್ಲಿಯ ಆಕಾಶವು ಉರಿನಾಗೆಗಳುಳ್ಳ ಹಕ್ಕಿಗಳ ಗುಂಪುಗಳಿಂದಾವೃತವಾಗಿರುವುದು.

೧೦. ಅಲ್ಲಿ ಹಸಿವೂ, ಬಾಯಾರಿಕೆಯೂ ಬಹಳವಾಗಿರುತ್ತದೆ. ಉಷ್ಣವಾದರೋ ಅತ್ಯುಷ್ಣ ; ಶೀತವೆಂದರೆ ಅತಿಶೀತ.

೧೧ ನೀರುಕುಡಿಯಲಿಷ್ಟಪಡುವವನನ್ನು ರಾಕ್ಷಸರು ಹಂಸಸಾರಸಪಕ್ಷಿಗಳಿಂದಲೂ, ತಾವರೆನೈದಿಲೆಗಳಿಂದಲೂ ಒಪ್ಪುವ ಸರೋವರಕ್ಕೆ ಕರೆದುಕೊಂಡು ಹೋಗುವರು.

೧೨. ಬಾಯಾರಿದ ಆ ನಾರಕಿಯು ನೀರು ಕುಡಿಯಲು ತಟ್ಟನೆ ಓಡುವನು. ಆದರೆ ಅಲ್ಲಿ ಬಹಳ ಬಿಸಿಯಾಗಿರುವ ನೀರನ್ನು ನೋಡಿ ಖಿನ್ನನಾಗುವನು.

೧೩. ಬಳಿಕ ಅವನ ಬೆಂದ ಮಾಂಸವನ್ನು ರಾಕ್ಷಸರು ಸುತ್ತಲೂ ಕಿತ್ತು ತೆಗೆದುಕೊಂಡು ಅವನನ್ನು ಕಾರದ ನೀರುಳ್ಳ ದೊಡ್ಡ ಮಡುವಿನಲ್ಲಿ ಹಾಕುವರು.

ತತ್ರ ಚೈವ ಹ್ರದೇ ನೇಕಾ ಮತ್ಸ್ಯಾಃ ಖಾದಂತಿ ಸರ್ವಶಃ ।
ತತಃ ಕಾಲಾವಸಾನೇ ತು ಕಥಂಚಿತ್ತ್ರಪಲಾಯಿನಃ ॥ ೧೪ ॥

ಕಿಂಚಿದಂತರಮಾಗಮ್ಯ ವೇದನಾರ್ತಾಃಪತಂತಿ ಹಿ ।
ಯಾತನಾರ್ಥಂ ಪುನಸ್ತತ್ರ ಮಾಂಸಂ ಚೈವೋಪಜಾಯತೇ ॥ ೧೫ ॥

ಶಿರಸ್ಯೇವೋಪವಿಷ್ಟಸ್ಯ ಪ್ರಸ್ಥಿತಸ್ಯ ಪ್ರಧಾವತಃ ।
ತಸ್ಯಾರ್ತಾಯಾಮವಸ್ಥಾಯಾಂ ದುಃಖಂ ಭವತಿ ದಾರುಣಂ ॥ ೧೬ ॥

ಕರೀಷಗರ್ತಸ್ತತ್ರೈವ ಕುಂಭೀಪಾಕಸ್ಸುದಾರುಣಃ ।
ಪದ್ಮಪತ್ರಾಕೃತಿಸ್ತಸ್ಯ ಪೇಶೀಂ ತತ್ರ ಶರೀರಜಾಂ ॥ ೧೭ ॥

ಪಾಟಯಂತಿ ಸುಮಾರ್ಗೇಣ ರಾಕ್ಷಸಾಃ ಕರಪತ್ರಿಕಾಃ ।
ನಿಪೀಡ್ಯ ದಶನೈ ರೋಷಂ ಭೀಮನಾದಾಸ್ಸುರೋಷಿತಾಃ ॥ ೧೮ ॥

೧೪-೧೫. ಆ ಸರೋವರ ಅಥವಾ ಮಡುವಿನಲ್ಲಿರುವ ಹಲವು ಮೀನುಗಳು ಸರೋವರದಲ್ಲಿಳಿಯುವ ಪಾಪಿಗಳನ್ನು ಸುತ್ತಿಕೊಂಡು ಕಚ್ಚಿ ತಿನ್ನುವುವು. ಕಚ್ಚಿಸಿಕೊಂಡಾದಬಳಿಕ ಹೇಗೋ ಕಷ್ಟದಿಂದ ತಪ್ಪಿಸಿಕೊಂಡು ಓಡುವವರಾಗಿ ಸ್ವಲ್ಪದೂರಹೋಗಿ ನೋವಿನಿಂದಾರ್ತರಾಗಿ ಕೆಳಗೆ ಬೀಳುವರು. ಹಾಗೆ ಬಿದ್ದ ಅವರಿಗೆ ಮತ್ತೆ ಯಾತನೆಯನ್ನನುಭವಿಸುವುದಕ್ಕೆ ತಕ್ಕಷ್ಟು ಮಾಂಸವು ಬೆಳೆಯುವುದು.

೧೬. ತಲೆಯೂರಿ ಕುಳಿತೂ, ನಿಂತೂ, ಓಡುತ್ತಲೂ ಇರುವ ಅವನಿಗೆ ಆ ಆರ್ತಾವಸ್ಥೆಯಲ್ಲಿ ಘೋರವಾದ ದುಃಖವಾಗುತ್ತದೆ.

೧೭-೧೮. ಅಲ್ಲಿ ಕುಂಭೀಪಾಕವೆಂಬ ಅತಿಭಯಂಕರವಾದ ಬೆರಣಿಯಹಳ್ಳವಿದೆ. ಅಲ್ಲಿ ಬಿದ್ದ ಪಾಪಿಯ ಶರೀರದ ಮಾಂಸಪಿಂಡವನ್ನು ರಾಕ್ಷಸರು ಅತಿರೋಷದಿಂದ ಹಲ್ಲುಕಚ್ಚುತ್ತ ಭಯಂಕರವಾದ ಧ್ವನಿಯನ್ನು ಮಾಡುತ್ತ ಗರಗಸದಿಂದ ಕಮಲದ ಎಸಳಿನಂತೆ ಸರಿಯಾಗಿ ಕೊಯ್ಯುವರು.

ಅಸಿಪತ್ರವನಂ ಚಾತ್ರ ಶೃಂಗಾಟಕವನಂ ತಥಾ ।
ತತ್ರ ಶೃಂಗಟಕಾಶ್ಚೈವ ತಪ್ತವಾಲುಕಮಿಶ್ರಿತಾಃ ॥ ೧೯ ॥

ದಹ್ಯತೇ ಛಿದ್ಯತೇ ಚೈವ ವಿಧ್ಯತೇ ಭಿದ್ಯತೇ ತಥಾ ।
ಪಾಟ್ಯತೇ ಪೀಡ್ಯತೇ ಚೈವ ಕೃಷ್ಯತೇ ಚ ವಿಶಸ್ಯತೇ ॥ ೨೦ ॥

ಶ್ಯಾಮಾಶ್ಚ ಶಬಲಾಶ್ಚೈವ ಶ್ವಾನಸ್ತೇಽತ್ರ ದುರಾಸದಾಃ ।
ಖಾದಂತಿ ಚ ಸುಸಂರಬ್ಧಾಃ ಸರ್ಪವೃಶ್ಚಿಕಸನ್ನಿಭೈಃ ॥ ೨೧ ॥

ಕಂಟಕೈಃ ಪ್ರತಿಕೂಲೈಶ್ಚ ತತ್ರಾನ್ಯಾ ಕೂಟಶಾಲ್ಮಲಿಃ ।
ಕರ್ಷಂತಿ ತತ್ರ ಚೈನ್ಯೈನಂ ಯಾವದಸ್ಥ್ಯವಶೇಷಿತಃ ॥ ೨೨ ॥

ಯದ್ದುಃಖಂ ತಸ್ಯ ದುರ್ಬುದ್ಧೇಃ ಪ್ರತಿಕೂಲಂ ಚ ತಸ್ಯಯತ್ ।
ತತ್ತದೋತ್ಪದ್ಯತೇ ಶೀಘ್ರಂ ಯಾತನಾರ್ಥಾಯ ಯತ್ನತಃ ॥ ೨೩ ॥

---

೧೯. ಅಸಿಪತ್ರವನ ಶೃಂಗಾಟಕವನವೆಂಬುವು ಅಲ್ಲಿವೆ. ಅಲ್ಲಿ ನಾಲ್ಕುದಾರಿಗಳು ಸೇರುವಸ್ಥಳ (ಬೀದಿಯಚೌಕ)ಗಳು ಕಾದಮಳಲಿನಿಂದ ಕೂಡಿದವುಗಳಾಗಿವೆ.

೨೦. ಅಲ್ಲಿ ಪಾಪಿಯನ್ನು ಸುಡುವರು. ಕತ್ತರಿಸುವರು. ಕೊರೆಯುವರು. ಸೀಳುವರು, ಒಡೆಯುವರು. ಎಳೆಯುವರು ಕೊಲ್ಲುವರು.

೨೧-೨೨. ಅಲ್ಲಿರುವ ಕಪ್ಪಾದ ಮತ್ತು ಚಿತ್ರವರ್ಣದ ನಾಯಿಗಳಹತ್ತಿರ ಹೋಗಲಾಗುವುದಿಲ್ಲ. ಅವು ಅತಿರಭಸದಿಂದ ಕಚ್ಚುವುವು. ಹಾವು ಚೇಳುಗಳಂತಿರುವ ಗಾಳದ ಮುಳ್ಳುಗಳಿಂದ ಕೂಡಿದ ಕೂಟಶಾಲ್ಮಲಿಯೆಂಬ ಮರವೊಂದಿದೆ. ಆಮರದಮೇಲೆ ಪಾಪಿಯನ್ನು ಮಾಂಸನರಗಳೆಲ್ಲಾ ಹೋಗಿ ಎಲುಬುಗಳುಮಾತ್ರ ಉಳಿಯುವಂತಾಗುವವರೆಗೂ ಎಳೆಯುವರು.

೨೩. ದುರ್ಬುದ್ಧಿಯುಳ್ಳಪಾಪಿಗೆ ಯಾವುದು ದುಃಖವೋ, ಪ್ರತಿಕೂಲವೋ ಅದೆಲ್ಲವೂ ಅವನ ಯಾತನೆಗಾಗಿ ಬೇಗನೆ ಪ್ರಯತ್ನಪೂರ್ವಕವಾಗಿ ಸಿದ್ಧವಾಗುವುದು.

ಶೀತಕಾಮಸ್ಯ ವೈ ಚೋಷ್ಣಮುಷ್ಣಕಾಮಸ್ಯ ಶೀತಲಂ |
ಸುಖಕಾಮಸ್ಯ ವೈ ದುಃಖಂ ಸುಖಂ ನೈವಾತ್ರ ವಿದ್ಯತೇ ॥ ೨೪ ॥

ಛಿನ್ನಾಶ್ಚ ಶತಧಾಪ್ಯೇವಂ ಹ್ಯನಿಶಂ ತೈಃ ಸಹಸ್ರಶಃ |
ಛಿನ್ನಾಂಗಾಸ್ಸರ್ವಗಾತ್ರೇಷು ಸರ್ವಮೇವ ಸ ವಿದಂತಿ ॥ ೨೫ ॥

ಸಲಿಲಂ ಚ ನದೀಂ ಘೋರಾಂ ವ್ಯಾಲಾಕೀರ್ಣಾಂ ಭಯಾನಕಾಂ |
ಉತ್ತಾರ್ಯಂತೇ ಚ ತಾಂ ಪ್ರೇತಾಂ ಯಾಂ ದೃಷ್ಟ್ವೈವ ಭಯಂ ಭವೇತ್

ಕರಂಭವಾಲುಕಾ ನಾಮ ಶತಯೋಜನಮಾಯತಾ |
ಅಗ್ನಿಜ್ವಾಲಾಸಮಾ ಘೋರಾ ಪಥಾ ಯೇನ ಸ ಗಚ್ಛತಿ ॥ ೨೭ ॥

ತತೋ ವೈತರಣೀ ನಾಮ ಕ್ಷಾರೋದಾ ತು ಮಹಾನದೀ |
ಯೋಜನಾನಿ ತು ಪಂಚಾಶದಧಸ್ತಾತ್ಪಂಚಯೋಜನಂ ॥ ೨೮ ॥

---

೨೪. ಅಲ್ಲಿ ಶೀತವನ್ನು ಬಯಸುವವನಿಗೆ ಉಷ್ಣವೂ, ಉಷ್ಣವನ್ನು ಬಯಸುವವನಿಗೆ ಶೀತವೂ, ಸುಖವನ್ನು ಬಯಸುವವನಿಗೆ ದುಃಖವೂ ಆಗುವುದು. ಸುಖವೆಂಬುದು ಅಲ್ಲಿಲ್ಲವೇ ಇಲ್ಲ.

೨೫. ಯಮದೂತರು ಹೀಗೆ ಸಾವಿರಾರುಸಾರಿ ನೂರಾರು ಚೂರಾಗುವಂತೆ ಪಾಪಿಗಳನ್ನು ಕತ್ತರಿಸಿದರೂ, ಹಾಗೆ ಕತ್ತರಿಸಿದ ಅವರ ಅವಯವಗಳೆಲ್ಲವೂ ಮತ್ತೆ ಬೆಳೆದು ಸರಿಯಾಗುವುವು.

೨೬. ಸರ್ಪಗಳಿಂದ ತುಂಬಿ ಭಯಂಕರವಾಗಿ ನೋಡಿದರೇ ಹೆದರಿಕೆಯಾಗುವ ವೈತರಣೀನದಿಯ ನೀರನ್ನು ಪಾಪಿಗಳನ್ನು ದಾಟಿಸುವರು.

೨೭. ಕರಂಭವಾಲುಕೆಯೆಂಬುದು ನೂರು ಯೋಜನ ಉದ್ದವುಳ್ಳದಾಗಿದೆ. ಪಾಪಿಯು ಹೋಗಬೇಕಾಗಿರುವ ಅದು ಅಗ್ನಿಜ್ವಾಲೆಯಂತೆ ಘೋರವಾಗಿದೆ.

೨೮–೨೯. ಅದಾದಮೇಲೆ ವೈತರಣಿಯೆಂಬ ಕಾದನೀರಿನ ಮಹಾನದಿಯು ಐವತ್ತುಯೋಜನ ಅಳತೆ ಯುಳ್ಳದಾಗಿಯೂ, ಐದುಯೋಜನ ಆಳವುಳ್ಳದಾಗಿ

ಅಗಾಧಪಂಕಾ ವೈ ತತ್ರ ಚರ್ಮಮಾಂಸಾಸ್ಥಿಭೇದನಾ ।
ತತ್ರ ಕರ್ಕಟಕಾ ಘೋರಾ ವಜ್ರದಂಷ್ಟ್ರಾ ವಿಶಂತಿ ತಾಂ ॥ ೨೯ ॥
*ಜಲೂಕಾಶ್ಚ ಧನುರ್ಮಾತ್ರಾ ವಜ್ರಜಿಹ್ವಾಸ್ಥಿಭೇದನಾಃ ।
ಮಹಾವಿಷಾ ಮಹಾಕ್ರೋಧಾ ದುರ್ವಿಷಹ್ಯಾಸ್ಸುದಾರುಣಾಃ ॥ ೩೦ ॥
ಸಮುತ್ತೀರ್ಯ ತು ಕೃಚ್ಛ್ರೇಣ ತಸ್ಮಾದ್ಯೋಜನಕರ್ದಮಾತ್ ।
ವಸಂತ್ಯತ್ರ ಧರೇ ಕೇಚಿಚ್ಛೂನ್ಯಾಗಾರೇ ನಿರಾಶ್ರಯೇ ॥ ೩೧ ॥
ಯತ್ರ ವೈ ಮೂಷಿಕಗಣಾ ಭಕ್ಷಯಂತಿ ಹ್ಯನೇಕಶಃ ।
ಮೂಷಕೈರ್ಜಗ್ಧಗಾತ್ರಸ್ತು ಹ್ಯಸ್ಥಿಮಾತ್ರಾವಶೇಷಿತಃ ॥
ಪ್ರಭಾತೇ ವಾಯುನಾ ಸ್ಪೃಷ್ಟಃ ಪುನರ್ಮಾಂಸಂ ಸವಿಂದತಿ ॥ ೩೨ ॥

ಅಗಾಧವಾದ ಕೆಸರುಳ್ಳುದಾಗಿಯೂ ಇದೆ. ಅದರಲ್ಲಿ ವಜ್ರಕಠಿನವಾದ ಕೋರೆಯ ಹಲ್ಲುಗಳುಳ್ಳವುಗಳಾಗಿ ಪಾಪಿಗಳ ಚರ್ಮಮಾಂಸಾಸ್ಥಿಗಳನ್ನು ಭೇದಿಸುವ ಘೋರವಾದ ನಳ್ಳಿ (ಏಡಿ) ಗಳಿರುವುವು.

೩೦. ವಜ್ರಾಯುಧದಂತಿರುವ ನಾಲಗೆಗಳೂ, ಮಹಾವಿಷವೂ, ಕೋಪವೂ ಉಳ್ಳವಾಗಿ, ದುಸ್ಸಹಗಳೂ, ಅತಿಭಯಂಕರಗಳೂ ಆದ ಬಿಲ್ಲನಳತೆಯ ಜಿಗುಳೆಗಳು ಅಸ್ಥಿಯನ್ನೂ ಭೇದಿಸುವುವು.

೩೧. ಆ ಯೋಜನದಳತೆಯ ಕೆಸರಿನಿಂದ ಹೇಗೋ ಕಷ್ಟದಿಂದ ದಾಟಿ ಕೆಲವರುಪಾಪಿಗಳು ಬರಿಯದೂ ನಿರಾಶ್ರಯವೂ ಆದ ಮನೆಯಲ್ಲಿ ವಾಸ ಮಾಡುವರು.

೩೨. ಆಮನೆಯಲ್ಲಿ ಇಲಿಗಳ ದಂಡುಗಳು ಹಾಗೆ ಬಂದು ವಾಸಮಾಡುವವರನ್ನು ರಾತ್ರೆ ತಿಂದುಬಿಡುವುವು. ಅವು ತಿಂದಬಳಿ ಎಲುಬುಗಳು ಮಾತ್ರವೇ ಉಳಿದಿರುವ ಆ ಪ್ರಾಣಿಗಳು ಬೆಳಗಾಗುತ್ತಲೂ ಗಾಳಿ ಸೋಕಲಾಗಿ ಮತ್ತೆ ಮಾಂಸವನ್ನು ಪಡೆಯುವುವು.

---

* 'ಉಲೂಕಾಶ್ಚ' ಎಂದು ಮುದ್ರಿತಪುಸ್ತಕಗಳಲ್ಲಿದೆ. ಆದರೆ ಕೆಸರಿನಲ್ಲಿ ಉಲೂಕ (ಗೂಬೆ)ಗಳಿದ್ದುವೆಂಬುದಕ್ಕಿಂತ ಜಲೂಕ(= ಜಿಗುಣೆ)ಗಳಿದ್ದುವೆಂಬುದು ಉಚಿತವೆಂದು ತಿದ್ದಿದೆ.

ಶೂನ್ಯಾಗಾರಪ್ರವೇಶಾತ್ತು ಗವ್ಯೂತೇರ್ನಾತಿದೂರತಃ ।
ಸಹಕಾರವನಂ ನಾಮ ರೌದ್ರಾ ಯತ್ರ ಚ ಪಕ್ಷಿಣಃ ॥ ೩೩ ॥

ನಿಸ್ತ್ವಗಸ್ಥಿಸ್ತ್ಯೈಃ ಕ್ರಿಯತೇ ನಿರ್ಮಾಂಸಶ್ಚೈವ ಮಾನವಃ
ನಿಶ್ಶಿರಾಜಾಲಕಶ್ಚೈವ ನಿರಕ್ಷಿಶ್ರವಣಸ್ತಥಾ ॥ ೩೪ ॥

ವಟವೃಕ್ಷೋ ನಾತಿದೂರೇ ದಕ್ಷಿಣೇ ತು ತ್ರಯೋಜನಂ ।
ಸಂಧ್ಯಾಭ್ರ ಇವ ಚಾಭಾತಿ ಪ್ರದೀಪ್ತೋ ನಿತ್ಯಮೇವ ತು ॥ ೩೫ ॥

ದಶಯೋಜನವಿಸ್ತೀರ್ಣಾ ಅಧಶ್ಶತಸಮಾಯುತಾ ॥ ೩೬ ॥

ಯಮಚುಲ್ಲೀತಿ ವಿಖ್ಯಾತಾ ಗಂಭೀರಾ ಸಾ ತ್ರಿಯೋಜನಂ ।
ನಿತ್ಯಂ ಪ್ರಜ್ವಲಿತಾ ಸಾ ತು ನಿತ್ಯಂ ಧೂಮಾಂಧಕಾರಿತಾ ॥ ೩೭ ॥

೩೩-೩೪. ಆಬರಿಯಮನೆಗೆ ಸಮಿಪದಲ್ಲೇ ಎರಡುಹರಿದಾರಿಯಷ್ಟು ದೂರದಲ್ಲಿ ಕ್ರೂರಿಗಳಾದ ಹಕ್ಕಿಗಳಿರುವ ಸಹಕಾರವನವೆಂಬುದು ಇದೆ. ಅಲ್ಲಿ ಆ ಹಕ್ಕಿಗಳು ಮನುಷ್ಯನನ್ನು ಚರ್ಮಮಾಂಸಗಳೂ, ನರಗಳೂ, ಕಣ್ಣುಕಿವಿಗಳೂ ಇಲ್ಲದ ಬರಿಯ ಎಲುಬಿನವನನ್ನಾಗಿ ಮಾಡುತ್ತವೆ.

೩೫-೩೬. ಅದಕ್ಕೆ ಸ್ವಲ್ಪದೂರದಲ್ಲಿ ಎಂದರೆ ಮೂರುಗಾವುದ ದಕ್ಷಿಣದಲ್ಲಿ ಆಲದಮರವೊಂದಿದೆ. ಅದು ಯಾವಾಗಲೂ ಪ್ರಜ್ವಲಿಸುತ್ತ ಸಂಜೆಯ ಮುಗಿಲಂತೆ ಹೊಳೆಯುವುದು. ಅದು ಹತ್ತುಯೋಜನ ಅಗಲವುಳ್ಳದಾಗಿ ಕೆಳಗಡೆಯಲ್ಲಿ ನೂರುಯೋಜನ ವಿಸ್ತೀರ್ಣವುಳ್ಳದಾಗಿದೆ.

೩೭-೩೮. ಅದಕ್ಕೆ ಮೂರುಯೋಜನದೂರದಲ್ಲಿ ಆಳವಾದ ಯಮಚುಲ್ಲಿಯೆಂದು ಪ್ರಸಿದ್ಧವಾದ ಒಲೆ ಅಥವಾ ಕುಂಡವಿದೆ. ಯಾವಾಗಲೂ ಉರಿಯುತ್ತಿರುವ

ತತ್ರ ಪ್ರೇತಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ।
ಪ್ರಕ್ಷಿಪ್ಯಂತೇ ಹ್ಯಹೋರಾತ್ರಂ ರಾಕ್ಷಸೈರ್ಯಮಕಿಂಕರೈಃ ॥ ೩೮ ॥

ಮಾಸಮೇಕಂ ವಸತ್ಯನ್ಯೋ ತಸ್ಯಾಂ ಚುಲ್ಯಾಂ ಪರಿಭ್ರಮನ್ ।
ತತಶ್ಶಕುನಿಕಾ ನಾಮ ವಸಾಮೇದೋವಹಾ ನದೀ ॥
ಚುಲ್ಲೀಕುಕ್ಷೌ ತು ವಿಶ್ರಾಂತಾ ವೇಗಿನೀ ವಹತೇ ತು ಸಾ ॥ ೩೯ ॥

ತಾಂ ಸಮುತ್ತೀರ್ಯ ಕೃಚ್ಛ್ರೇಣ ಯಾತನಾಸ್ಸಪ್ತಕಾಃ ಪುನಃ ॥ ೪೦ ॥

ಏಕೈಕಂ ದುಸ್ತರಂ ಘೋರಂ ಯಥಾಪೂರ್ವಂ ಯಥಾಕ್ರಮಾತ್ ।
ಅನುಭುಂಕ್ತೇ ಸ ಕೃಚ್ಛ್ರೇಣ ದುಷ್ಕೃತೀ ತೀವ್ರವೇದನಾಃ ॥ ೪೧ ॥

ದಶ ತತ್ರ ಲತಾಶೂಲಾಃ ಕುಂಭೀಪಾಕಾಸ್ತ್ರಯೋದಶ ।
ಯಾತಿ ಪಾಪಮಹೋರಾತ್ರಂ ತಸ್ಮಿನ್ನಿಯಮಿತೇನ ತು ॥ ೪೨ ॥

ಅದು ಹೊಗೆಯಿಂದ ಕತ್ತಲೆಯುಳ್ಳದಾಗಿದೆ. ಯಮಕಿಂಕರರಾದ ರಾಕ್ಷಸರು ಹಗಲೂ ರಾತ್ರಿಯೂ ಅರ್ಬುದಸಂಖ್ಯೆಯ ಪ್ರೇತಗಳನ್ನು ಸಾವಿರಸಾವಿರಗಳಾಗಿ ಅದರಲ್ಲಿ ಹಾಕುವರು.

೩೯. ಒಬ್ಬೊಬ್ಬಪಾಪಿಯೂ ಒಂದು ತಿಂಗಳು ಆಕುಂಡದಲ್ಲಿಯೇ ಅಲೆಯುತ್ತ ಇರುವನು. ಶಕುನಿಯೆಂಬ ರಕ್ತಮೇದೋವಾಹಿನಿಯಾದ ನದಿಯೊಂದು ವೇಗವಾಗಿ ಹರಿಯುತ್ತ ಆ ಯಮಚುಲ್ಲಿಯಲ್ಲಿ (ಸೇರಿ) ವಿಶ್ರಾಂತವಾಗುವುದು.

೪೦–೪೧. ದುಷ್ಕೃತಿಯಾದವನು ಆನದಿಯನ್ನು ಕಷ್ಟದಿಂದ ದಾಟಿ ಸಪ್ತಯಾತನೆಗಳಲ್ಲಿ ದುಸ್ತರವೂ, ಘೋರವೂ ಆದ ಒಂದೊಂದು ತೀವ್ರವೇದನೆಯನ್ನೂ ಮೊದಲಿನಂತೆ ಅನುಕ್ರಮವಾಗಿ ಬಹುಕಷ್ಟದಿಂದ ಅನುಭವಿಸುವನು.

೪೨–೪೩. ಅಲ್ಲಿ ಹತ್ತು ಶೂಲಲತೆಗಳೂ, ಹದಿಮೂರು ಕುಂಭೀಪಾಕಗಳೂ ಹಗಲೂ ರಾತ್ರಿಯೂ ಪಾಪಿಗಳನ್ನು ಬಾಧಿಸುತ್ತವೆ. ದಯಾಹೀನರೂ, ದುರ್ನಿ

ರಾಕ್ಷಸೈರ್ನಿರನುಕ್ರೋಶೈರ್ದುರ್ನಿರೀಕ್ಷ್ಯೈಸ್ತತಸ್ತತಃ ।
ಅಂಗಾರೇಷು ವಿಧೂಮೇಷು ಶೂಲಪ್ರೋತಸ್ತು ಪಚ್ಯತೇ ॥ ೪೩ ॥

ಶುಷ್ಕೋದಪಾನೇ ಧೂಮೇ ಚ ಅಧಃಶೀರ್ಷೋಽವಲಂಬತೇ ।
ಜ್ವಾಲ್ಯತೇ ತೀಕ್ಷ್ಣತೈಲೇ ತು ಕಟಾಹೇ ಸ ತು ಪಚ್ಯತೇ ॥ ೪೪ ॥

ಕರೀಷಗರ್ತೇ ಸ ಪುನಃ ಪಚ್ಯತೇ ಮೇದವಹ್ನಿನಾ ।
ಏಕೈಕಸ್ಮಿದ್ದಶಾಹಂಚ ಶೂಲಾದಿಷು ಸ ಪಚ್ಯತೇ ॥ ೪೫ ॥

ಯಾತನಾಸ್ಸಪ್ತಕಾಸ್ತಸ್ಯ ನಿಷ್ಕ್ರಾಂತಸ್ಯ ತ್ರಿಯೋಜನೇ ।
ಯತೋ ಯಮನದೀ ನಾಮ ತಪ್ತತ್ರಪುಜಲೋರ್ಮಿಣೀ ॥ ೪೬ ॥

ಸಮುತ್ತೀರ್ಯ ತು ಕೃಚ್ಛ್ರೇಣ ದಹ್ಯಮಾನಸ್ತ್ವಚೇತನಃ ।
ತತೋ ಮುಹೂರ್ತಂ ವಿಶ್ರಾಂತಃ ಕಿಂಚಿದಂತರಮಾಗತಃ ॥ ೪೭ ॥

ರೀಕ್ಷ್ಯರೂ ಆದ ರಾಕ್ಷಸರು ಆಮೇಲೆ ಹೊಗೆಯಿಲ್ಲದ ಕೆಂಡಗಳಲ್ಲಿ ಶೂಲದಿಂದ ಚುಚ್ಚಿಹಿಡಿದು ಪಾಪಿಗಳನ್ನು ಬೇಯಿಸುವರು.

೪೪. ನೀರಿಲ್ಲದ ಬಾವಿಗಳಲ್ಲಿಯೂ, ಹೊಗೆಯಲ್ಲಿಯೂ ಪಾಪಿಯು ತಲೆಕೆಳಗಾಗಿ ಜೋಲುವನು. ಕುದಿಯುವ ಎಣ್ಣೆಯಿಂದ ತುಂಬಿದ ಕೊಪ್ಪರಿಗೆಗಳಲ್ಲಿ ಅವನನ್ನು ಬೇಯಿಸುವರು.

೪೫. ಅದೇಪಾಪಿಯನ್ನು ಮತ್ತೆ ಬೆರಣಿಯ ಹಳ್ಳದಲ್ಲಿ ಮೇದಸ್ಸಿನ ಅಗ್ನಿಯಿಂದ ಬೇಯಿಸುವರು. ಶೂಲವೇಮೊದಲಾದ ಪ್ರತಿಯೊಂದರಲ್ಲಿಯೂ ಅವನನ್ನು ಹತ್ತು ಹತ್ತುದಿನ ಸಂತಾಪಗೊಳಿಸುವರು.

೪೬. ಆಪಾಪಿಯು ಅಲ್ಲಿಂದ ಹೊರಟರೆ ಮೂರುಯೋಜನದೂರದಲ್ಲಿ ಕಾಯ್ದ ಸೀಸ ಅಥವಾ ತವರದ ದ್ರವದ ಅಲೆಗಳಿಂದಕೂಡಿದ ಯಮನದಿ ಯೆಂಬುದಿರುವ ಸಪ್ತಯಾತನೆಯ ಸ್ಥಳವಿದೆ.

೪೭-೪೮. ಅಲ್ಲಿ ಸುಡಲ್ಪಟ್ಟು ಅಚೇತನನಾಗಿ ಆಸಪ್ತಯಾತನೆಯ ಸ್ಥಳವನ್ನು ಕಷ್ಟದಿಂದ ದಾಟಿ, ಸ್ವಲ್ಪಹೊತ್ತು ವಿಶ್ರಮಿಸಿಕೊಂಡು, ಸ್ವಲ್ಪದೂರ

ದೀರ್ಘಿಕಾಮೀಕ್ಷತೇ ಕಾಂತಾಂ ಶೀತೋದಾಂ ಶೀತಕಾನನಾಂ ।
ಸರ್ವಕಾಮಾನ್ಸ ಲಭತೇ ಭಗಿನೀ ಸಾ ಯಮಸ್ಯ ತು ॥ ೪೮ ॥

ಭಕ್ಷ್ಯಂ ಭೋಜ್ಯಂಚ ಸರ್ವೈಸ್ತು ಪಾಪಿಭಿಸ್ತತ್ರ ಲಭ್ಯತೇ ।
ಸ ಸರ್ವಂ ವಿಸ್ಮರತ್ಯತ್ರ ತ್ರಿರಾತ್ರಮುಷಿತೋಽಪಿ ಸನ್ ॥ ೪೯ ॥

ತತಶ್ಶೂಲಗ್ರಹೋ ನಾಮ ಪರ್ವತಶ್ಶತಯೋಜನಃ ।
ನಿರಾಶ್ರಯ ಸ ಸತ್ವಾನಾಮೇಕಪಾಷಾಣ ಏವ ಚ ॥ ೫೦ ॥

ತತ್ರ ವರ್ಷತಿ ಪರ್ಜನ್ಯಸ್ತತ್ರ ತಪ್ತಜಲಂ ಸದಾ ।
ತತ್ರ ಕೃಚ್ಛ್ರೇಣ ತರತಿ ಅಹೋರಾತ್ರೇಣ ಮಾನವಃ ॥ ೫೧ ॥

ಶೃಂಗಾರಕವನಂ ನಾಮ ತತ್ರ ಪಶ್ಯತಿ ಶಾದ್ವಲಂ ।
ನೀಲಮಕ್ಷಿಕದಂಶೈಶ್ಚ ಸುವ್ಯಾಪ್ತಂ ತದ್ವನಂ ಮಹತ್ ॥ ೫೨ ॥

ಮುಂದೆ ಹೋಗಿ, ತಂಪಾದ ವನದಲ್ಲಿ ಶೀತೋದಕವುಳ್ಳ ಯಮಸಹೋದರಿಯಾದ ಮನೋಹರವಾದ ಕೊಳವೊಂದನ್ನು ನೋಡುವನು. ಅಲ್ಲಿ ಅವನು ಸರ್ವೇಷ್ಟಾರ್ಥಗಳನ್ನೂ ಪಡೆಯುವನು.

೪೯. ಪಾಪಿಗಳೆಲ್ಲರಿಗೂ ಅಲ್ಲಿ ಭಕ್ಷ್ಯಭೋಜ್ಯಗಳು ಲಭಿಸುವುವು. ಪಾಪಿಯು ಅಲ್ಲಿ ಮೂರುರಾತ್ರಿಗಳು ವಾಸಮಾಡಿದರೂ ಹಿಂದಿನ ಯಾತನೆಗಳನ್ನೆಲ್ಲಾ ಮರೆಯುವನು.

೫೦. ಆ ಕೊಳದಿಂದ ಆಚೆ ಶೂಲಗ್ರಹವೆಂಬ ನೂರುಯೋಜನ ಪ್ರಮಾಣದ ಪರ್ವತವಿರುವುದು. ಪ್ರಾಣಿಗಳಿಲ್ಲದ ಆ ಪರ್ವತವು ಒಂದೇ ಕಲ್ಲಾಗಿದೆ.

೫೧. ಆ ಪರ್ವತದಲ್ಲಿ ಮೇಘವು ಯಾವಾಗಲೂ ಕಾಯ್ದನೀರಿನ ಮಳೆಯನ್ನು ಸುರಿಸುವುದು. ಮನುಷ್ಯನು ಅದನ್ನು ಒಂದು ಹಗಲಿರುಳಿನಲ್ಲಿ ಕಷ್ಟದಿಂದ ದಾಟುವನು.

೫೨. ಅಲ್ಲಿ ಹುಲ್ಲಿನಿಂದ ಹಸುರಾಗಿರುವ ಶೃಂಗಾರಕವನವೆಂಬುದನ್ನು ನೋಡುವನು. ದೊಡ್ಡದಾದ ಆ ಕಾಡು ನೀಲವಾದ ನೊಣಕಾಡುನೊಣಗಳಿಂದ ತುಂಬಿದೆ.

ಯೈಸ್ತು ಸ್ಪೃಷ್ಟಶ್ಚ ದಷ್ಟಶ್ಚ ಕೃಮಿರೂಪಶ್ಚ ಜಾಯತೇ ।
ಪ್ರೇತೋ ವರ್ಷತಿ ಮಾಂಸಾಸೃಗಸ್ಮಾತ್ಕೃಚ್ಛ್ರಾತ್ತು ನಿರ್ಗತಃ ॥
ತತೋಽನ್ಯಲ್ಲಭತೇ ಚೈವ ಯಾತನಾರ್ಥಂ ಪ್ರಯತ್ನತಃ ॥ ೫೩ ॥

ತತಃ ಪಶ್ಯತಿ ಪುತ್ರಾಂಸ್ತು ಮಹದ್ದುಃಖಂ ಸುದಾರುಣಂ ॥ ೫೪ ॥

ಮಾತರಂ ಪಿತರಂ ಚೈವ ಪುತ್ರಾನ್ದಾರಾಂಸ್ತಥಾ ಪ್ರಿಯಾನ್ ।
ಪುರಸ್ತಾದ್ವಧ್ಯಮಾನಂ ಸ ಕ್ರಂದಮಾನಮಚೇತನಂ ॥ ೫೫ ॥

ಹಾ ತ್ರಾಹಿ ತ್ರಾಹಿ ಪುತ್ರೇತಿ ಕ್ರಂದಮಾನಸ್ತತಸ್ತತಃ ।
ಲಗುಡೈರ್ಮುದ್ಗರೈರ್ದಂಡೈರ್ಜಾನುಭಿರ್ವೇಣುಭಿಸ್ತಥಾ ॥ ೫೬ ॥

ಮುಷ್ಟಿಭಿಶ್ಚ ಕಶಾಭಿಶ್ಚ ವ್ಯಾಲೈರಂಕಗತೈರಪಿ ।
ತದ್ದೃಷ್ಟ್ವಾ ತಾದೃಶಂ ದುಃಖಂ ತತೋ ಮೋಹಂ ಸಗಚ್ಛತಿ ॥ ೫೭ ॥

---

೫೩. ಆ ನೋಣಗಳು ಮುಟ್ಟಿದ ಅಥವಾ ಕಚ್ಚಿದ ಪ್ರೇತನು ರಕ್ತಮಾಂಸಗಳನ್ನು ಸುರಿಸಿ ಕೃಮಿರೂಪನಾಗುವನು. ಆ ಕಷ್ಟದಿಂದ ತಪ್ಪಿಸಿಕೊಂಡು ಹೊರಟು ಯಾತನೆಯನ್ನನ್ನುನುಭವಿಸುವುದಕ್ಕಾಗಿ ಪ್ರಯತ್ನಪೂರ್ವಕವಾಗಿ ಬೇರೆಯ ದೇಹವನ್ನು ಪಡೆಯುವನು.

೫೪–೫೭. ಬಳಿಕ ಆಪಾಪಿಯು ಅತಿಭಯಂಕರವಾಗಿ ದೊಣ್ಣೆಗಳಿಂದಲೂ, ಮುದ್ಗರ (ಕಬ್ಬಿಣದ ಹಾರೆ) ಗಳಿಂದಲೂ, ಮೊಳಕಾಲುಗಳಿಂದಲೂ, ಬಿದಿರುಗಳಿಂದಲೂ, ಮುಷ್ಟಿಗಳಿಂದಲೂ ಚಾವಟಿಗಳಿಂದಲೂ, ಮೈಗೆ ಅಂಟಿಕೊಂಡಿರುವ ಹಾವುಗಳಿಂದಲೂ ತನ್ನೆದುರಿಗೆ ಕೊಲ್ಲಲ್ಪಡುತ್ತ ಹಾ ಮಗನೇ, ಕಾಪಾಡು, ಎಂದು ಮತ್ತೆ ಮತ್ತೆ ಕೂಗಿಕೊಳ್ಳುತ್ತ ಅಚೇತನರಾಗುವ ತನ್ನ ತಾಯಿ ತಂದೆಗಳನ್ನೂ, ಹೆಂಡತಿಮಕ್ಕಳನ್ನೂ, ಪ್ರಿಯರನ್ನೂ ಅತಿದುಃಖದಿಂದ ನೋಡುವನು. ಅಂತಹ ಆ ದುಃಖವನ್ನು ನೋಡಿ, ಬಳಿಕ ಮೂರ್ಛೆಗೊಳ್ಳುವನು.

ಏವಮೇವವಾತ್ಮಕರ್ಮಾಣಿ ಪರ್ಯಾಯೇಣ ಪುನಃ ಪುನಃ ।
ಪ್ರಾಪ್ನುವಂತೀಹ ತೇತ್ರೈವ ನರಾ ದುಷ್ಕೃತಕಾರಿಣಃ ॥ ೫೮ ॥

ಪಾತಕಾನಿ ಚ ಚತ್ವಾರಿ ಸಮಾಚಾರೇಣ ಪಂಚಮಂ ।
ಕೃತ್ವಾ ತಾನಿ ನರಾ ಯಾಂತಿ ತಂ ದೇಶಂ ಪಾಪಕಾರಿಣಃ ॥ ೫೯ ॥

ತದಾದಿಷು ಚ ಸರ್ವೇಷು ಗುಣಾಂತರಪಥಂ ಗತಃ ।
ಯದಾ ಭವತಿ ಸ ಪ್ರೇತಸ್ತದಾ ಸ್ಥಾವರತಾಂ ವ್ರಜೇತ್ ॥ ೬೦ ॥

ತದಾ ವಾ ಸ್ಥಾವರೇ ತೇಷು ಜಾತಸ್ಯ ಹಿ ಭವೇನ್ನರಃ ।
ಕ್ರಮಶಸ್ಸ ಭವೇತ್ಪ್ರೇತಸ್ತದಾ ಪಶುಗಣೇಷ್ವಪಿ ॥ ೬೧ ॥

ಷಷ್ಟಿವರ್ಷಸಹಸ್ರಾಣಿ ಷಷ್ಟಿವರ್ಷಶತಾನಿ ಚ ।
ಗತಸ್ಸ ವಸತಿ ಪ್ರೇತೋ ನರಕೇತು ಪುನಃ ಪುನಃ ॥ ೬೨ ॥

---

೫೮. ಪಾಪಕಾರ್ಯಮಾಡುವ ಮನುಷ್ಯರು ಹೀಗೆಯೇ ಅಲ್ಲಿ ಆತ್ಮಕರ್ಮಗಳ ಫಲವನ್ನು ಮತ್ತೆ ಮತ್ತೆ ಅನುಕ್ರಮವಾಗಿ ಪಡೆಯುವರು.

೫೯. ಸುರಾಪಾನಾದಿ ಚತುರ್ವಿಧ ಪಾಪಗಳನ್ನು ಮಾಡಿದ ಮತ್ತೂ ಆ ಪಾಪಿಗಳ ಸಹವಾಸವೆಂಬ ಐದನೆಯ ಪಾಪವನ್ನು ಮಾಡಿದ ಪಾಪಕರ್ಮಿಗಳೂ ಆ ಸ್ಥಳವನ್ನು ಸೇರುವರು.

೬೦ ಪ್ರೇತನು ಮೇಲೆ ಹೇಳಿರುವೆಡೆಗಳಲ್ಲೆಲ್ಲಾ ಎಲ್ಲಾ ಬಗೆಯ ದುಃಖಗಳನ್ನೂ ಅನುಭವಿಸಿದಬಳಿಕ ವೃಕ್ಷಾದಿಸ್ಥಾವರ (ಅಚರ) ಜನ್ಮವನ್ನು ಪಡೆಯುವನು.

೬೧–೬೨. ಆ ಸ್ಥಾವರ ಜನ್ಮವು ಕಳೆದಬಳಿಕ ಪ್ರೇತನಾದ ಆ ಮನುಷ್ಯನು ಕ್ರಮವಾಗಿ ಪ್ರಾಣಿ (ಪಶು) ಜನ್ಮಗಳಲ್ಲಿ ಜನಿಸುವನು. ಆ ಒಂದೊಂದು ಜನ್ಮವೂ ಕಳೆದಬಳಿಕ ಮತ್ತೆ ಪ್ರೇತನಾಗಿ ಅರವತ್ತಾರುಸಾವಿರವರ್ಷಕಾಲ ಮತ್ತೆ ಮತ್ತೆ ನರಕದಲ್ಲಿ ವಾಸಿಸುವನು.

ತತೋ ನಿವೃತ್ತಕರ್ಮಾ ತು ಸ್ವೇದಜಸ್ಸಂಭವೇತ್ಪುನಃ ।
ಸ್ವೇದಜಾನಾಂ ತತೋ ನಿತ್ಯಂ ಸರ್ವಸಂಸಾರಚಂಕ್ರಮಾತ್ ॥ ೬೩ ॥

ತತಶ್ಚ ಪಕ್ಷಿಣಾಂ ಯೋನಿಂ ಸರ್ವಾಂ ಸಂಸರತೇಪುನಃ ।
ಗೋಯೋನೌ ತು ತತೋ ಗತ್ವಾ ಪುನರ್ಮಾನುಷತಾಂ ವ್ರಜೇತ್॥ ೬೪ ॥

ಮಾನುಷೇ ಶೂದ್ರತಾಂ ಯಾತಿ ಲಬ್ಧ್ವಾ ಯದಿ ತು ತುಷ್ಯತಿ ।
ತತೋ ವೈಶ್ಯತ್ವಮಾಗಚ್ಛೇತ್ಕರ್ಮಣಾನೇನ ವೇಷ್ಟಿತಃ ॥ ೬೫ ॥

ವೈಶ್ಯಾತ್ ಕ್ಷತ್ರಿಯತಾಂ ಯಾತಿ ತಸ್ಮಾಚ್ಚ ಬ್ರಾಹ್ಮಣೋ ಭವೇತ್ ।
ಬ್ರಾಹ್ಮಣತ್ವಮಪಿ ಪ್ರಾಪ್ತಃ ಪಾಪಕರ್ಮಾ ದುರಾತ್ಮವಾನ್ ॥ ೬೬ ॥

ದುಶ್ಶಿಕ್ಷಿತೇನ ಮನಸಾ ಹ್ಯಾತ್ಮದ್ರೋಗ್ಧಾ ಭವೇತ್ತದಾ ।
ಶರೀರಂ ಮಾನಸಂ ಘೋರಂ ವ್ಯಸನೈರುಪಪಾದಿತಂ ।
ಉಪಯುಕ್ತೋ ನರೋ ಜಾತಃ ಪೂರ್ವಕರ್ಮಭಿರನ್ವಿತಃ ॥ ೬೭ ॥

೬೩–೬೪. ಬಳಿಕ ನಿವೃತ್ತಕರ್ಮನಾದ ಅವನು ಹೇನೇಮೊದಲಾದ ಸ್ವೇದಜಜನ್ಮಗಳೆಲ್ಲವೂ ಕಳೆದಬಳಿಕ ಪಕ್ಷಿಜನ್ಮಗಳನ್ನೆಲ್ಲಾ ಮುಗಿಸುವನು. ಆಮೇಲೆ ಗೋವಾಗಿ ಹುಟ್ಟಿ, ಆ ಜನ್ಮವೂ ಕಳೆದಬಳಿಕ ಮತ್ತೆ ಮನುಷ್ಯನಾಗಿ ಜನಿಸುವನು.

೬೫. ಮನುಷ್ಯಜನ್ಮದಲ್ಲಿಯೂ ಮೊದಲು ಶೂದ್ರನಾಗಿ ಜನಿಸಿ ಅದರಿಂದ ಸಂತೋಷಗೊಂಡನಾದರೆ ಮುಂದೆ ವೈಶ್ಯತ್ವವನ್ನು ಪಡೆಯುವನು.

೬೬–೬೭. ವೈಶ್ಯಜನ್ಮವು ಕಳೆದಬಳಿಕ ಕ್ಷತ್ರಿಯನಾಗಿ ಜನಿಸಿ, ಆಮೇಲೆ ಬ್ರಾಹ್ಮಣನಾಗಿ ಉದಿಸುವನು. ಬ್ರಾಹ್ಮಣತ್ವವನ್ನು ಪಡೆದರೂ ದುಶ್ಶಿಕ್ಷಿತವಾದ ಮನಸ್ಸುಳ್ಳವನೂ, ದುರಾತ್ಮನೂ, ಪಾಪಕರ್ಮಿಯೂ ಆಗಿ ಆತ್ಮದ್ರೋಹಿಯಾಗುವನು. ಅವನ ದೇಹವೂ ಮನಸ್ಸೂ ಘೋರವಾದ ಕಷ್ಟಗಳುಳ್ಳದಾಗುವುದು. ಪೂರ್ವಕರ್ಮಗಳಿಂದ ಕೂಡಿ ಅದನ್ನು ಅನುಭವಿಸಲು (ತಕ್ಕವನಾಗಿ) ಜನಿಸಿದವನಾಗುವನು.

ಜ್ಞೇಯಶ್ಚ ಬ್ರಹ್ಮಹಾ ಕುಷ್ಠೀ ಕಾಕಾಕ್ಷಃ ಕಾಕತಾಲುಕಃ ।
ಸುರಾಪಃ ಶ್ಯಾವದಂತಶ್ಚ ಪೂತಿಗಂಧಶ್ಚ ಪಾಪಕೃತ್ ॥ ೬೮ ॥
ರಾಜಹಾ ಪಿತೃಹಾ ಚೈವ ಸುರಾಪಶ್ಚಾಪಿಯೋ ಭವೇತ್
ಸುವರ್ಣಹರ್ತಾ ಚ ನರೋ ಬ್ರಹ್ಮಘ್ನೇನ ಸಮೋ ಹಿ ಸಃ ॥ ೬೯ ॥
ಕ್ವಚಿಚ್ಚಾತ್ರ ವಿರೂಪಾಣಾಂ ನರಾಣಾಂ ಪಾಪಕರ್ಮಿಣಾಂ ।
ಯಾವದ್ಭಿಃ ಕರ್ಮಭಿಸ್ತೈಸ್ತೈಸ್ತೇಷು ನಿರ್ಯಾಣವೇಶ್ಮಸು ॥ ೭೦ ॥
ಭಿನ್ನಭಿನ್ನವಿಶಸ್ತಾನಾಂ ರುಧಿರೇಣ ಸಮಂತತಃ ।
ವ್ಯಾಪ್ತಂ ಮಹೀತಲಂ ಸರ್ವಮಾಪಗಾಶ್ಚಾಪಿ ನಿರ್ಗತಾಃ ॥ ೭೧ ॥
ಅಜಸ್ರಂ ಕ್ಲಿಶ್ಯಮಾನಾನಾಂ ಕ್ರಂದತಾಂ ಚ ಸುದಾರುಣಂ ।
ಸಮುತ್ತಸ್ಥೌ ಮಹಾನಾದೋ ಹಾಹಾಕಾರಸಮಾಕುಲಃ ॥ ೭೨ ॥

---

೬೮. ಈಜನ್ಮದಲ್ಲಿ ಕುಷ್ಠರೋಗಿಯೂ, ಕಾಕದೃಷ್ಟಿಯುಳ್ಳವನೂ, ಕಾಕತಾಲುಕನೂ ಆಗಿರುವವನನ್ನು ಪೂರ್ವಜನ್ಮದಲ್ಲಿ ಬ್ರಹ್ಮಹತ್ಯಮಾಡಿದ್ದವನೆಂದರಿಯಬೇಕು. ಧೂಮವರ್ಣದ ಹಲ್ಲಿನವನನ್ನೂ, ದುರ್ಗಂಧವುಳ್ಳಬಾಯಿ ಅಥವಾ ದೇಹವುಳ್ಳವನನ್ನೂ ಪೂರ್ವದಲ್ಲಿ ಮದ್ಯಪಾನಮಾಡಿದ ಪಾಪಿಯನ್ನಾಗಿ ತಿಳಿಯಬೇಕು.

೬೯. ರಾಜನನ್ನು ಕೊಂದವನೂ, ತಂದೆಯನ್ನು ಕೊಂದವನೂ, ಸುರಾಪಾನ ಮಾಡಿದವನೂ, ಬಂಗಾರವನ್ನು ಕದ್ದವನೂ ಬ್ರಹ್ಮಹತ್ಯೆಮಾಡಿದ ಪಾಪಿಗೆ ಸಮಾನನೇ ಆಗುವನು.

೭೦-೭೧. ಆನರಕದ ಕೆಲವೆಡೆಯಲ್ಲಿ ವಿರೂಪವನ್ನು ಪಡೆದ ಪಾಪಕರ್ಮಿಗಳಾದ ಮನುಷ್ಯರನ್ನು ಆಯಾ ಕರ್ಮಗಳಿಗನುಸಾರವಾಗಿ ಕೊಲ್ಲುವ ಮನೆಗಳಿರುವುವು. ಅಲ್ಲಿ ಛೇದಿಸಿಯೂ, ಸೀಳಿಯೂ ಕೊಲ್ಲಲ್ಪಟ್ಟವರ ರಕ್ತವು ನೆಲದಮೇಲೆ ಎಲ್ಲಾಕಡೆಯಲ್ಲೂ ಹರಡಿದೆ. ಅಲ್ಲದೆ ಅಲ್ಲಿಂದ ರಕ್ತನದಿಗಳೂ ಹರಿಯುತ್ತವೆ.

೭೨. ಅಲ್ಲಿ ಯಾವಾಗಲೂ ಕ್ಲೇಶಗೊಂಡು ಭಯಂಕರವಾಗಿ ಅಳುವವರ ಹಾಹಾಕಾರದಿಂದ ಕೂಡಿದ ಮಹಾಧ್ವನಿಯು ಕೇಳಿಸುವುದು.

ಬಧ್ನಂತೋ ವಿವಿಧೈರ್ಬಂಧೈರ್ಘಾತಯಂತಶ್ಚ ದಾರುಣಂ || ೭೩ ||

ಲೋಹಯಷ್ಟಿಪ್ರಹಾರೈಶ್ಚ ಆಯುಧೈಶ್ಚ ಸುದಾರುಣೈಃ |
ಛೇದನೈರ್ಭೇದನೈಶ್ಚೋಗ್ರೈಃ ಪೀಡನಾಭಿಶ್ಚ ಸರ್ವಶಃ || ೭೪ ||

ಶ್ರಾಂತಾಃ ಕರ್ಮಕರಾ ದೂತಾ ಮೋಹೇನಾಯತ್ತಚೇತಸಃ |
ಯದಾ ಶ್ರಾಂತಾಶ್ಚ ಖಿನ್ನಾಶ್ಚ ಹಂತಾರಃ ಪಾಪಕರ್ಮಿಣಾಂ || ೭೫ ||

ವಿಜ್ಞಾಪಯೇತ್ತದಾ ದೂತಾಶ್ಚಿತ್ರಗುಪ್ತಂ ಮಹೌಜಸಂ || ೭೬ ||

ಇತಿ ಶ್ರೀವರಾಹಪುರಾಣೇ ಸಂಸಾರಚಕ್ರೇ ನರಕಯಾತನಾಸ್ವರೂಪ ವರ್ಣನಂ ನಾಮ ದ್ವಿಶತತಮೋಽಧ್ಯಾಯಃ

೭೩-೭೬. ಪಾಪಿಗಳನ್ನು ಬಗೆಬಗೆಯ ಕಟ್ಟುಗಳಿಂದ ಬಂಧಿಸಿ ಕಠಿನವಾಗಿ ಭಯಂಕರವಾದ ರೀತಿಯಲ್ಲಿ ಕೊಲ್ಲುತ್ತ, ಆವೇಶಗೊಂಡು ಲೋಹದ ದೊಣ್ಣೆಗಳಿಂದ ಹೊಡೆಯುವುದರಿಂದಲೂ ಹರಿತವಾದ ಆಯುಧಗಳಿಂದ ಕತ್ತರಿಸುವುದರಿಂದಲೂ ಪೀಡಿಸುವುದರಿಂದಲೂ ಆ ಕಾರ್ಯಗಳನ್ನು ಮಾಡುವ ದೂತರು ತಾವು ಆಯಾಸಗೊಂಡು ಖಿನ್ನರಾದಾಗ ಮಹೌಜಸನಾದ ಚಿತ್ರಗುಪ್ತನಿಗೆ ಅದನ್ನು ವಿಜ್ಞಾಪಿಸುವರು.

ಅಧ್ಯಾಯದ ಸಾರಾಂಶ—

ನಚಿಕೇತನು ಋಷಿಗಳೇ ಮೊದಲಾದವರಿಗೆ ನರಕಯಾತನೆಯ ವಿಚಾರವನ್ನು ತಿಳಿಸುತ್ತ ವೈತರಣೀನದಿ, ಸಹಕಾರವನ, ಯಮಚುಲ್ಲಿಯೆಂಬ ಅಗ್ನಿಕುಂಡ, ಶೂಲಗ್ರಹಪರ್ವತ ಮೊದಲಾದುವುಗಳ ವರ್ಣನೆಯನ್ನೂ, ಅಲ್ಲಿಯ ಕಷ್ಟಾದಿಗಳನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರನೆಯ ಅಧ್ಯಾಯ.

॥ ಶ್ರೀ ॥

ಏಕಾಧಿಕದ್ವಿಶತತಮೋಽಧ್ಯಾಯಃ

ಅಥ ರಾಕ್ಷಸಕಿಂಕರಯುದ್ಧಂ

॥ ಋಷಿಪುತ್ರ ಉವಾಚ ॥

ತತಸ್ತೇ ಸಹಿತಾಸ್ಸರ್ವೇ ಚಾನ್ಯೋನ್ಯಾಭಿರತಾಸ್ಸದಾ ।
ನಾನಾವೇಷಧರಾ ದೂತಾಃ ಕೃತಾಂಜಲಿಪುಟಾಸ್ತದಾ ॥ ೧ ॥

॥ ದೂತಾ ಊಚುಃ ॥

ವಯಂ ಶ್ರಾಂತಾಶ್ಚ ಕ್ಷೀಣಾಶ್ಚ ಹ್ಯನ್ಯಾನ್ಯೋಜಿತುಮರ್ಹಸಿ ।
ವಯಮನ್ಯತ್ಕರಿಷ್ಯಾಮಃ ಸ್ವಾಮಿನ್ಕಾರ್ಯಂ ಸುದುಷ್ಕರಂ ॥ ೨ ॥
ಅನ್ಯೇ ಹಿ ತಾವತ್ತತ್ಕಾರ್ಯಂ ಕುರ್ಯುರ್ಯಥೇಷ್ಟಂ ತವ ಸುವ್ರತ ।
ಭಗವನ್ ಸ್ಮ ಪರಿಕ್ಲಿಷ್ಟಾಃ ತ್ರಾಹಿ ನಃ ಪರಮೇಶ್ವರ ॥ ೩ ॥

ಇನ್ನೂರೊಂದನೆಯ ಅಧ್ಯಾಯ

ರಾಕ್ಷಸಸೇವಕರ ಯುದ್ಧ.

೧ ನಚಿಕೇತ—ಬಳಿಕ ಯಾವಾಗಲೂ ಪರಸ್ಪರ ಸ್ನೇಹವುಳ್ಳವರೂ, ಬಗೆ ಬಗೆಯ ವೇಷವುಳ್ಳವರೂ, ಪಾಪಿಗಳನ್ನು ಹಿಂಸಿಸುವವರೂ ಆದ ಆ ಯಮದೂತರೆಲ್ಲರೂ ಒಟ್ಟಾಗಿ ಚಿತ್ರಗುಪ್ತನಿಗೆ ಕೈಮುಗಿದುಕೊಂಡು ವಿಜ್ಞಾಪಿಸಿದರು.

೨-೩. ದೂತರು—ಸ್ವಾಮೀ, ನಾವು ಈ ಕಾರ್ಯದಿಂದ ಬಳಲಿ ಕುಂದಿರುವೆವು. ನಾವು ಬೇರಾವುದಾದರೂ ಕಾರ್ಯವನ್ನು ಮಾಡುವೆವು. ಅತಿದುಷ್ಕರವಾದ ಈ ಕಾರ್ಯವನ್ನು ಬೇರೆಯವರು ನಿನ್ನ ಇಷ್ಟದಂತೆ ಮಾಡಲಿ. ಸುವ್ರತನೇ, ಪೂಜ್ಯನೇ, ಪರಮೇಶ್ವರ, ಬಹಳವಾಗಿ ಶ್ರಮಪಟ್ಟಿದ್ದೇವೆ. ನಮ್ಮನ್ನು ಕಾಪಾಡು.

ತತೋ ವಿವೃತ್ತರಕ್ತಾಕ್ಷಸ್ತೇನ ವಾಕ್ಯೇನ ರೋಷಿತಃ ।
ವಿನಿಃಶ್ವಸ್ಯ ಯಥಾನಾಗೋ ಹ್ಯಪಶ್ಯತ್ಸರ್ವತೋ ದಿಶಂ ॥ ೪ ॥

ಅದೂರೇ ದೃಷ್ಟವಾನ್ಕಂಚಿತ್ಪುರುಷಂ ಸ ಹ್ಯನಾಕೃತಿಂ ।
ಸ ತು ವೇಗೇನ ಸಂಪ್ರಾಪ್ತ ಇಂಗಿತಜ್ಞೋ ದುರಾತ್ಮವಾನ್ ॥ ೫ ॥

ನಿಸ್ಸೃತಸ್ಸ ಚ ರೋಷೇಣ ಚಿತ್ರಗುಪ್ತೇನ ಧೀಮತಾ ।
ತತಸ್ಸ ತ್ವರಿತಂ ಗತ್ವಾ ಮಂದೇಹೋ ನಾಮ ರಾಕ್ಷಸಃ ॥ ೬ ॥

ನಾನಾರೂಪಧರಾ ಘೋರಾ ನಾನಾಭರಣಭೂಷಿತಾಃ ॥ ೭ ॥

ವಿನಾಶಾಯ ಮಹಾಸತ್ವೋ ಯತ್ರ ತಿಷ್ಠನ್ಮಹಾಯಶಾಃ ।
ಚಿತ್ರಗುಪ್ತೋ ಮಹಾಬಾಹುಃ ಸರ್ವಲೋಕಾರ್ಥಚಿಂತಕಃ ॥ ೮ ॥

೪–೫. ಬಳಿಕ ಚಿತ್ರಗುಪ್ತನು ಆ ಮಾತಿನಿಂದ ರೇಗಿ ಕೆಂಪಾದ ಕಣ್ಣುಗಳುಳ್ಳವನಾಗಿ ಸರ್ಪನಂತೆಬುಸುಗುಟ್ಟುತ್ತ ಸುತ್ತಲೂ ನೋಡಿದನು. ಸ್ವಲ್ಪ ದೂರದಲ್ಲಿ ರೂಪಹೀನನಾದ ಒಬ್ಬ ಪುರುಷನನ್ನು ಕಂಡನು. ಇಂಗಿತವನ್ನರಿತವನೂ, ದುರಾತ್ಮನೂ ಆದ ಅವನು ಬೇಗನೆ ಹತ್ತಿರ ಬಂದನು.

೬–೮. ಬುದ್ಧಿವಂತನಾದ ಚಿತ್ರಗುಪ್ತನು ರೋಷದಿಂದ ಹೇಳಿಕಳುಹಲಾಗಿ ಬೇಗನೆ ಹೊರಟುಹೋದ ಆ ಮಂದೇಹನೆಂಬ ರಾಕ್ಷಸನು, ನಾನಾರೂಪಧಾರಿಗಳೂ, ಘೋರರೂ, ಬಗೆ ಬಗೆಯ ಆಭರಣಗಳಿಂದಲಂಕೃತರೂ ಆದ ಹಲವರು ರಾಕ್ಷಸರನ್ನು ದಂಡನೆಯಕಾರ್ಯವನ್ನು ಮಾಡಲಾರೆವೆಂದು ಹೇಳಿದ ದೂತರನ್ನು ವಿನಾಶಮಾಡುವುದಕ್ಕಾಗಿ ಮಹಾಯಶನೂ, ಮಹಾಸತ್ವನೂ, ಸರ್ವಲೋಕಾರ್ಥಚಿಂತಕನೂ, ಬಾಹುಬಲವುಳ್ಳವನೂ ಆದ ಆ ಚಿತ್ರಗುಪ್ತನಿದ್ದೆಡೆಗೆ ಕರೆತಂದನು.

ಸಮಸ್ಸರ್ವೇಷು ಭೂತೇಷು ಭೂತಾನಾಂ ಚ ಸಮಾದಿಶತ್ ।
ತತಸ್ತೇ ವಿವಿಧಾಕಾರಾ ರಾಕ್ಷಸಾಃ ಪಿಶಿತಾಶನಾಃ ॥
ಉಪರುಹ್ಯ ತಥಾ ಸರ್ವೇ ಮಾತಂಗಾಂಶ್ಚ ಹಯಂ ತಥಾ ॥ ೯ ॥

ಬದ್ಧಗೋಧಾಂಗುಲಿತ್ರಾಣಾ ನಾನಾಯುಧಧರಾಸ್ತಥಾ ।
ಅಗ್ರತಃ ಕಿಂಕರಾಃ ಕೃತ್ವಾ ತಿಷ್ಠನ್ಪಾದಾಭಿವಂದನಂ ॥ ೧೦ ॥

ಬ್ರುವಂತಶ್ಚ ಪುನರ್ಹೃಷ್ಟಾಃ ಶೀಘ್ರಮಾಜ್ಞಾಪಯ ಪ್ರಭೋ ।
ತವ ಸಂದೇಶಕರ್ತಾರಃ ಕಸ್ಯ ಕೃಂತಾಮ ಜೀವಿತಂ ॥ ೧೧ ॥

ತೇಷಾಂ ತದ್ವಚನಂ ಶ್ರುತ್ವಾ ಚಿತ್ರಗುಪ್ತೋ ಹ್ಯಭಾಷತ ।
ರೋಷಗದ್ಗದಯಾ ವಾಚಾ ನಿಃಶ್ವಸನ್ವೈ ಮುಹುರ್ಮುಹುಃ ॥ ೧೨ ॥

ಭೋ ಭೋ ಮಂದೇಹಕಾ ವಿರಾಃ ಮಮ ಚಿತ್ತಾನುಪಾಲಕಾಃ ।
ಏತಾನ್ಬಧ್ನೀತ ಗೃಹ್ಣೀತ ಭೂತರಾಕ್ಷಸಪುಂಗವಾಃ ॥ ೧೩ ॥

೯-೧೧. ಆಮೇಲೆ ಸರ್ವಪ್ರಾಣಿಗಳಲ್ಲಿಯೂ ಸಮದೃಷ್ಟಿಯುಳ್ಳ ಆ ಚಿತ್ರಗುಪ್ತನು ಆ ರಾಕ್ಷಸರಿಗೆ ಆಜ್ಞಾಪಿಸಿದನು. ಒಡನೆಯೇ ಬಗೆಬಗೆಯ ರೂಪವುಳ್ಳವರೂ, ಮಾಂಸಾಹಾರಿಗಳೂ ಆದ ಆ ರಾಕ್ಷಸರೆಲ್ಲರೂ ನಾನಾವಿಧವಾದ ಆಯುಧಗಳನ್ನೂ, ಕೈಚೀಲಗನ್ನೂ ಧರಿಸಿ, ಆನೆ ಕುದುರೆಗಳನ್ನೇರಿದವರಾಗಿ ಚಿತ್ರಗುಪ್ತನೆದುರಿಗೆ ನಿಂತು ಈತನ ಪಾದಗಳಿಗೆ ವಂದಿಸಿ, ಸಂತೋಷದಿಂದ, "ಪ್ರಭುವೇ ಆಜ್ಞಾಪಿಸು. ನಿನ್ನಆಜ್ಞೆಯನ್ನು ನಡೆಸುವ ನಾವು ಯಾರಪ್ರಾಣವನ್ನು ತೆಗೆಯೋಣ" ಎಂದರು.

೧೨-೧೩. ಅವರ ಆಮಾತನ್ನು ಕೇಳಿ ಚಿತ್ರಗುಪ್ತನು ಕೋಪದಿಂದ ಮತ್ತೆ ಮತ್ತೆ ಬುಸುಗುಟ್ಟುತ್ತ ಗದ್ಗದಸ್ವರವುಳ್ಳವನಾಗಿ, "ಓ, ಓ, ನನ್ನ ಚಿತ್ತಾನುವರ್ತಿಗಳಾದ ಮಂದೇಹಕವೀರರೇ, ಭೂತ ರಾಕ್ಷಸೋತ್ತಮರೇ, ಇವರನ್ನು ಬಂಧಿಸಿರಿ; ಹಿಡಿದುಕೊಳ್ಳಿ.

ಏವಂ ಹತ್ವಾ ಚ ಬಧ್ವಾ ಚ ಹ್ಯಾಗಚ್ಛತ ಪುನರ್ಯಥಾ ।
ಹಂತಾರಸ್ಸರ್ವಭೂತಾನಾಂ ಕೃತಜ್ಞಾ ದೃಢವಿಕ್ರಮಾಃ ॥ ೧೪ ॥
ಹತ್ವಾ ವೈ ಪಾಪಕಾನೇತಾನ್ಮಮ ವಿಪ್ರಿಯಕಾರಿಣಃ ।
ಏತಚ್ಛ್ರುತ್ವಾ ವಚಸ್ತಸ್ಯ ವಚನಂ ಚೇದಮಬ್ರುವನ್ ॥ ೧೫ ॥

॥ *ಸೇವಕಾ ಊಚುಃ ॥

ಶ್ರಾಂತಾ ವಾ ಕ್ಷುಧಿತಾ ವಾಪಿ ದುಃಖಿತಾ ವಾ ತಪೋಧನಾಃ ।
ಅಮಾತ್ಯಾ ಏವ ಜ್ಞಾತವ್ಯಾಃ+ ಭೃತ್ಯಾಶ್ಶತಸಹಸ್ರಶಃ ॥ ೧೬ ॥
ಏತೇ ವಧಾರ್ಥಂ ನಿರ್ದಿಷ್ಟಾಸ್ತ್ವಯ್ಯೈವ ಚ ಮಹಾತ್ಮನಾ ।
ನಯುಕ್ತಂ ವಿವಿಧಾಕಾರಾ ಹ್ಯಸ್ಮಾಕಂ ನಾಶನಾಯ ವೈ ॥ ೧೭ ॥
ಯಥಾ ಹ್ಯೇತೇ ಸಮುತ್ಪನ್ನಾಸ್ಸರ್ವಧರ್ಮಾನುಚಿಂತಕಾಃ ।
ತಥಾ ವಯಂ ಸಮುತ್ಪನ್ನಾಸ್ತದರ್ಥಂ ಹಿ ಭವಾನಪಿ ॥ ೧೮ ॥

೧೪-೧೫. ಸರ್ವಪ್ರಾಣಿಗಳನ್ನೂ ಕೊಲ್ಲುವವರೇ, ದೃಢಪರಾಕ್ರಮಿಗಳೇ ಕೃತಜ್ಞರೇ, ನನಗೆ ಅಹಿತವನ್ನು ಮಾಡುವ ಇವರನ್ನು ಬಂಧಿಸಿ ಕೊಂದು, ಬಳಿಕ ಹಿಂದಿನಂತೆ ನನ್ನ ಬಳಿಗೆ ಬನ್ನಿ" ಎಂದನು. ಆತನ ಈ ಮಾತನ್ನು ಕೇಳಿ, ಆಸೇವಕರು ಹೀಗೆ ಹೇಳಿದರು.

೧೬-೧೮. ಸೇವಕರು:-ಬಳಲಿದ, ಹಸಿದ ಅಥವಾ ದುಃಖಿತರಾದ ಭೃತ್ಯರನ್ನೂ ತಪೋಧನರನ್ನೂ ಅಮಾತ್ಯರೆಂದು ತಿಳಿಯಬೇಕು. ಮಹಾತ್ಮನಾದ ನೀನೇ ಲಕ್ಷಾಂತರಜನವಿರುವ ಈ ನಮ್ಮನ್ನು ಕೊಲ್ಲಿಸಲು ಇವರಿಗೆ ತೋರಿಸುತ್ತೀಯೆ. ವಿವಿಧಾಕಾರರಾದ ನಮ್ಮನ್ನು ನಾಶಮಾಡುವುದು ಯುಕ್ತವಲ್ಲ. ಸರ್ವಧರ್ಮಾನು ಚಿಂತಕರಾದ ಇವರು ಉದಿಸಿರುವಂತೆಯೇ ನಾವೂ ಉದಿಸಿದ್ದೇವೆ. ನೀನೂ ಜನಿಸಿದ್ದೀಯೆ.

---

* ರಾಕ್ಷಸಾಃ ಎಂದು ಬೊಂ. ಕ. ಪುಸ್ತಕಗಳಲ್ಲಿದೆ. ಮುಂದೆ ೨೦ ನೆಯ ಶ್ಲೋಕದಲ್ಲಿ "ರಕ್ಷೋಭಿಃ ಹನ್ಯಮಾನಾನಸ್ಮಾನ್ ಪರಿತ್ರಾಯಸ್ವ" ಎಂದಿರುವುದರಿಂದ ಸೇವಕರ ಮಾತಾಗಿರಬೇಕೆಂದು ತಿದ್ದಿದೆ.

\+ ಲಕ್ಷಾಂತರಜನ ಕೊಲ್ಲುವವರೋ, ಕೊಲ್ಲಿಸಿಕೊಳ್ಳುವವರೋ ಸ್ಪಷ್ಟವಾಗುವುದಿಲ್ಲ.

ಮಾ ಚ ಮಿಥ್ಯಾ ಪ್ರತಿಜ್ಞಾತಂ ಧರ್ಮಿಷ್ಠಸ್ಯ ಭವತ್ವಿತಿ ।
ಅಸ್ಮಾಕಂ ವಿಗ್ರಹೇ ವೀರ ಮುಚ್ಯಂತಾಂ ಯದಿ ಮನ್ಯಸೇ ॥ ೧೯ ॥

ಪರಿತ್ರಾಯಸ್ವ ನೋವೀರ ಕಿಂಕರಾಣಾಂ ಮಹಾಬಲಾನ್ ।
ಹನ್ಯಮಾನಾನ್ಹಿ ರಕ್ಷೋಭಿರಸ್ಮಾನದ್ಯ ರಣಾಜಿರೇ ॥ ೨೦ ॥

ಏವಮುಕ್ತ್ವಾ ತತೋ ಘೋರಾ ವ್ಯಾಧಯಃ ಕಾಮರೂಪಿಣಃ ।
ಸನ್ನದ್ಧಾಸ್ತ್ವರಿತಂ ಶೂರಾ ಭೀಮರೂಪಾ ಭಯಾನಕಾಃ ॥ ೨೧ ॥

ಗಜೈರನ್ಯೇ ತಥಾ ಚಾಶ್ವೈಃ ರಥೈಶ್ಚಾಪಿ ಮಹಾಬಲಾಃ ।
ಕಂಟಕೈಸ್ತುರಗೈರ್ಹಂಸೈರನ್ಯೇ ಸಿಂಹೈಸ್ತಥಾಪರೇ ॥ ೨೨ ॥

ಮೃಗೈಸ್ಸೃಗಾಲೈರ್ಮಹಿಷೈರ್ವ್ಯಾಘ್ರೈರ್ಮೇಷೈಸ್ತಥಾಪರೇ ।
ಗೃಧ್ರೈಶ್ಶ್ಯೇನೈರ್ಮಯೂರೈಶ್ಚ ಸರ್ಪಗರ್ದಭಕುಕ್ಕುಟೈಃ ॥ ೨೩ ॥

೧೯-೨೦. ವೀರನೇ, ಆದರೆ ಧರ್ಮಿಷ್ಠನಾದ ನಿನ್ನ ಪ್ರತಿಜ್ಞೆಯು ಸುಳ್ಳಾಗದಿರುವುದಕ್ಕಾಗಿ ನಿನ್ನ ಮನಸ್ಸಿಗೆ ಇಷ್ಟವಾದರೆ ನಮ್ಮನ್ನು (ಪರಸ್ಪರ) ಯುದ್ಧಕ್ಕೆ ಬಿಡು. ನಮ್ಮ ಸೇವಕಮಹಾಸೈನ್ಯವನ್ನು ರಕ್ಷಿಸು. ಈಗ ರಾಕ್ಷಸರಿಂದ ಯುದ್ಧರಂಗದಲ್ಲಿ ಕೊಲ್ಲಲ್ಪಡುವ ನಮ್ಮನ್ನು ಕಾಪಾಡು.

೨೧-೨೫. ಹೀಗೆ ಹೇಳಿ ಬಳಿಕ ಯುದ್ಧಸನ್ನದ್ಧರೂ, ಘೋರರೂ, ಕಾಮರೂಪಿಗಳೂ, ಶೂರರೂ, ಭಯಂಕರರೂ, ಆದ ವ್ಯಾಧಿಗಳೂ, ಮಹಾಬಲರಾದ ಇತರರೂ ಕೆಲವರು ಆನೆಗಳನ್ನೂ, ಕುದುರೆಗಳನ್ನೂ, ರಥಗಳನ್ನೂ, ಮುಳ್ಳು ಕುದುರೆಗಳನ್ನೂ, ಹಂಸಗಳನ್ನೂ, ಸಿಂಹಗಳನ್ನೂ, ಮೃಗಗಳನ್ನೂ, ನರಿಗಳನ್ನೂ, ಕೋಣಗಳನ್ನೂ ಹದ್ದುಗಳನ್ನೂ, ಗಿಡಗ (ಶ್ಯೇನ) ಗಳನ್ನೂ, ನವಿಲುಗಳನ್ನೂ

ಏವಂ ವಾಹನಸಂಯುಕ್ತಾ ನಾನಾಪ್ರಹರಣೋದ್ಯತಾಃ ।
ಸಮಾಗತಾ ಮಹಾಸತ್ವಾ ಅನ್ಯೋನ್ಯಮಭಿಕಾಂಕ್ಷಿಣಃ ॥ ೨೪ ॥

ತೂರ್ಯಕ್ಷ್ವೇಡಿತಸಂಘುಷ್ಟೈರ್ಬಲಿತಾಸ್ಫೋಟಿತೈರಪಿ ।
ಜಯಾರ್ಥಿನೋ ದ್ರುತಂ ವೀರಾಶ್ಚಾಲಯಂತಶ್ಚ ಮೇದಿನೀಂ ॥ ೨೫ ॥

ತತಸ್ಸಮಭವದ್ಯುದ್ಧಂ ತಸ್ಮಿಂಸ್ತಮಸಿ ಸಂತತೇ ।
ಮಕುಟೈರಂಗದೈಶ್ಚಿತ್ರೈಃ ಕೇಯೂರೈಃ ಪಟ್ಟಿಶಾಸಿಕೈಃ ॥ ೨೬ ॥

ಸಕುಂಡಲೈಶ್ಶಿರೋಭಿಶ್ಚ ಭ್ರಾಜತೇ ವಸುಧಾತಲಂ ।
ಬಹುಭಿಶ್ಚ ಸಕೇಯೂರೈಶ್ಛತ್ರೈಶ್ಚ ಮಣಿಭೂಷಣೈಃ ॥ ೨೭ ॥

ಶೂಲಶಕ್ತಿಪ್ರಹಾರೈಶ್ಚ ಯಷ್ಟಿತೋಮರಪಟ್ಟಿಶೈಃ ।
ಅಸಿಖಡ್ಗಪ್ರಹಾರೈಶ್ಚ ಬಲಪ್ರಾಣಸಮೀರಿತೈಃ ॥ ೨೮ ॥

ಅಭವದ್ದಾರುಣಂ ಯುದ್ಧಂ ತುಮುಲಂ ಲೋಮಹರ್ಷಣಂ ॥ ೨೯ ॥

ಸರ್ಪಗಳನ್ನೂ, ಕತ್ತೆಗಳನ್ನು, ಕೆಲಕೆಲವರು ಕೋಳಿಗಳನ್ನೂ, ವಾಹನಗಳಾಗಿ ಏರಿ, ನಾನಾವಿಧವಾದ ಆಯುಧಗಳನ್ನು, ಎತ್ತಿಹಿಡಿದು, ಪರಸ್ಪರ ಯುದ್ಧವನ್ನೂ, ಜಯವನ್ನೂ ಬಯಸುವವರಾಗಿ, ವಾದ್ಯಗಳನ್ನು ವೇಗವಾಗಿ ಊದುತ್ತಲೂ, ಬಾರಿಸುತ್ತಲೂ ಭೂಮಿಯನ್ನು ಅದುರಿಸುತ್ತ ತ್ವರೆಯಿಂದ ಬಂದರು.

೨೬-೨೭. ಬಳಿಕ ಸಂತತವಾದ ಆಕತ್ತಲೆಯಲ್ಲಿ ಆಸೇವಕಯೋಧರಿಗೂ, ರಾಕ್ಷಸಯೋಧರಿಗೂ ಯುದ್ಧವಾಯಿತು. ವೀರರ ವಿಚಿತ್ರವಾದ ಕಿರೀಟಗಳಿಂದಲೂ ಕೇಯೂರ (ತೋಳ ಬಂದಿ) ಗಳಿಂದಲೂ, ಕರ್ಣಾಭರಣಗಳಿಂದಲೂ, ಇತರ ಬಗೆಬಗೆಯ ಆಭರಣಗಳಿಂದಲೂ ಅಲಂಕೃತರಾದವರ ತಲೆಗಳಿಂದಲೂ, ರತ್ನಾಲಂಕೃತವಾದ ಹಲವು ಛತ್ರಿಗಳಿಂದಲೂ ಆಲ್ಲಿ ಭೂಪ್ರದೇಶವು ಹೊಳೆಯುತ್ತಿದ್ದಿತು

೨೮-೨೯. ಶೂಲ, ಶಕ್ತಿ, ದೊಣ್ಣೆ, ತೋಮರ, ಪಟ್ಟಿಸ, ಕತ್ತಿ, ಖಡ್ಗ ಇವುಗಳಿಂದ ಬಲವನ್ನು ಪ್ರಯೋಗಿಸಿ ಹೊಡೆಯುವ ಏಟುಗಳಿಂದ ರೋಮಾಂಚವನ್ನುಂಟುಮಾಡುವ ಭಯಂಕರವಾದ ತುಮುಲಯುದ್ಧವಾಯಿತು.

ನಖೈರ್ದಂತೈಶ್ಚ ಪಾದೈಶ್ಚ ತೇನ್ಯೋನ್ಯಮಭಿಜಘ್ನಿರೇ ।
ಬಾಹುಭಿಸ್ಸಮಸುಪ್ರಾಪ್ತಾಃ ಕೇಶಾಕೇಶಿ ತತಃ ಪರಂ ।
ಅಯುಕ್ತಮತುಲಂ ಯುದ್ಧಂ ತೇಷಾಂ ವೈ ಸಮಜಾಯತ ॥ ೩೦ ॥

ತತಸ್ತೇ ರಾಕ್ಷಸಾ ಭಗ್ನಾ ದೂತೈರ್ಘೋರಪರಾಕ್ರಮೈಃ ।
ದೇಹಿ ದೇಹಿ ವದಂತ್ಯೇವ ಛಿಂಧಿ ಗೃಹ್ಣೀಷ್ವ ತಿಷ್ಠ ಚ ।
ವಧ್ಯಮಾನಾಃ ಪಿಶಾಚಾಸ್ತೇ ಯೇ ನಿವೃತ್ತಾ ರಣಾರ್ದಿತಾಃ ॥ ೩೧ ॥

ಆಹೂಯಂತ ಪ್ರತಿಭಯಾತ್ಕ್ರೋಧ ಸಂರಕ್ತಲೋಚನಾಃ ।
ತಿಷ್ಠ ತಿಷ್ಠ ಕ್ವ ಯಾಸೀತಿ ನ ಗಚ್ಛಾಮಿ ದೃಢೋ ಭವ ॥ ೩೨ ॥

ಮಯಾ ಮುಕ್ತಮಿದಂ ಶಸ್ತ್ರಂ ತವ ದೇಹವಿನಾಶನಂ ।
ಕಿಂತು ಮೂಢ ತ್ವಯಾ ಶಸ್ತ್ರಂ ನಮುಕ್ತಂ ಮೇ ರುಜಾಕರಂ ॥ ೩೩ ॥

---

೩೦. ಅಲ್ಲದೆ, ಉಗುರುಗಳಿಂದಲೂ, ಹಲ್ಲುಗಳಿಂದಲೂ, ಕಾಲುಗಳಿಂದಲೂ ಅವರು ಪರಸ್ಪರ ಹಿಂಸೆಮಾಡಿದರು. ಆಮೇಲೆ ಮಲ್ಲಯುದ್ಧವೂ ಕೇಶಾಕೇಶಿ ಯುದ್ಧವೂ ಆಯಿತು. ಹೀಗೆ ಅವರಿಗೆ ಅಯುಕ್ತವೂ, ಅಸಮಾನವೂ ಆದ ಯುದ್ಧವುಂಟಾಯಿತು.

೩೧. ಅನಂತರ ಉಗ್ರಪರಾಕ್ರಮಿಗಳಾದ ಯಮದೂತರಿಂದ ಆ ರಾಕ್ಷಸರು ಭಂಗಹೊಂದಿದರು. ಕೊಲ್ಲಲ್ಪಡುವ ಆ ಪಿಶಾಚ (ರಾಕ್ಷಸರು) ರು "ಕೊಡು, ಕೊಡು, ಕತ್ತರಿಸು. ತೆಗೆದುಕೊ ನಿಲ್ಲು." ಎಂದು ಹೇಳುತ್ತಲೇ ಯುದ್ಧಪೀಡಿತ ರಾಗಿ ಹಿಂದಿರುಗುತ್ತಿದ್ದರು.

೩೨–೩೩. ಕೋಪದಿಂದ ಕೆಂಪಾದ ಕಣ್ಣುಳ್ಳ ಕೆಲವರು ವೀರರು ಭಯಂಕರವಾಗಿ, ನಿಲ್ಲು. ನಿಲ್ಲು. ಎಲ್ಲಿ ಹೋಗುವೆ?" ಎಂದು ಕರೆಯುತ್ತಿದ್ದರು. ಕೆಲವರು ಹೋಗುವುದಿಲ್ಲ ಧೈರ್ಯವಾಗಿರು. ನಿನ್ನ ದೇಹವನ್ನು

ಮಯಾ ಕ್ಷಿಪ್ತಾಸ್ತು ಇಷವಃ ಪ್ರತೀಚ್ಛ ಕ್ವ ಪಲಾಯಸೇ ॥ ೩೪ ॥
ಕಿಂ ತ್ವಂ ವದಸಿ ದುರ್ಬುದ್ಧೇ ಏಷೋಽಹಂ ಪಾರಗೋ ರಣೇ ।
ಮಮ ಬಾಹುವಿಮುಕ್ತಸ್ತ್ವ ಯದಿ ಜೀವಸ್ಯತೋ ವದ ॥ ೩೫ ॥
ತತ್ರ ತೇ ಸಹಸಾಘೋರಾ ರಾಕ್ಷಸಾಃ ಪಿಶಿತಾಶನಾಃ ।
ಮಂದೇಹಾ ನಾಮ ನಾಮ್ನಾ ತೇ ವಧ್ಯಮಾನಾಸ್ಸಹಸ್ರಶಃ ॥ ೩೬ ॥
ತತೋ ಭಗ್ನಾ ಯದಾ ತೇ ತು ರಾಕ್ಷಸಾಃ ಕಾಮರೂಪಿಣಃ ।
ಪ್ರತ್ಯಪದ್ಯಂತ ತೇ ಮಾಯಾಂ ತಾಮಸೀಂ ತಮಸಾ ವೃತಾಃ ॥ ೩೭ ॥
ಅದೃಶ್ಯಾಶ್ಚೈವ ದೃಶ್ಯಾಶ್ಚ ತದ್ಬಲಂ ತಮಸಾ ವೃತಾಃ ।
ಮಂದೇಹಾ ನಾಮ ನಾಮ್ನಾ ವೈ ರಾಕ್ಷಸಾಃ ಪಿಶಿತಾಶನಾಃ ॥ ೩೮ ॥
ಖಾದಂತಿ ಚೈವ ಘ್ನಂತಿ ಸ್ಮ ಚಿತ್ರಗುಪ್ತೇನ ಚೋದಿತಾಃ ।
ವ್ಯಾಧೀನಾಂ ಚ ಸಹಸ್ರಾಣಿ ದೂತಾನಾಂ ಚ ಮಹಾಬಲಾಃ ॥ ೩೯ ॥

ನಾಶಮಾಡುವ ಈ ಶಸ್ತ್ರವನ್ನು ನಾನು ಪ್ರಯೋಗಿಸಿದ್ದೇನೆ. ಮೂಢನೇ, ಆದರೆ ನೀನು ಪ್ರಯೋಗಿದಶಸ್ತ್ರವು ನನಗೆ ತೊಂದರೆಯನ್ನುಂಟುಮಾಡುವುದಾಗಿಲ್ಲ. ನಾನು ಬಿಟ್ಟ ಬಾಣಗಳನ್ನಾದರೂ ನೋಡು. ಎಲ್ಲಿ ಓಡುವೆ?'' ಎನ್ನುತ್ತಿದ್ದರು.

೩೫. "ದುರ್ಬುದ್ಧಿಯೇ, ನೀನು ಏನು ಹೇಳುತ್ತೀಯೆ! ನಾನು ಯುದ್ಧದಲ್ಲಿ ಪಾರಂಗತನಾಗಿದ್ದೇನೆ ನನ್ನ ಕಯ್ಯಿಂದ ತಪ್ಪಿಸಿಕೊಂಡು ನೀನು ಬದುಕಿದೆಯಾದರೆ ಆಮೇಲೆ ಮಾತನಾಡು"

೩೬–೩೭. ಅಲ್ಲಿ ಘೋರರೂ, ಮಾಂಸಾಹಾರಿಗಳೂ ಆದ ಮಂದೇಹರೆಂಬ ಹೆಸರಿನ ರಾಕ್ಷಸರು ತಟ್ಟನೆ ಸಾವಿರಗಟ್ಟಲೆಯಾಗಿ ಕೊಲ್ಲಲ್ಪಡುವವರಾಗಲು, ಕಳೆದುಳಿದ ತಮೋಮಯರೂ, ಕಾಮರೂಪಿಗಳೂ ಆದ ಅವರು ಬಳಿಕ ತಾಮಸಮಾಯೆಯನ್ನುಂಟುಮಾಡಿದರು.

೩೮–೩೯. ತಮದಿಂದ ಆವೃತರೂ, ಮಾಂಸಾಹಾರಿಗಳೂ ಆದ ಮಂದೇಹರೆಂಬ ರಾಕ್ಷಸರು ಮಾಯೆಯಿಂದ ದೃಶ್ಯಾದೃಶ್ಯರಾಗಿ ಚಿತ್ರಗುಪ್ತನಿಂದ ಪ್ರೇರಿತರಾಗಿ ಆಯಮದೂತರ ಸೈನ್ಯವನ್ನೂ ಸಾವಿರಾರು ವ್ಯಾಧಿಗಳನ್ನೂ ಕೊಂದುತಿಂದರು.

ತತಸ್ತೇ ಶರಣಂ ಜಗ್ಮುರ್ಜ್ವರಂ ಪರಮಭೀಷಣಂ ।
ಶೂಲಪಾಣಿಂ ವಿರೂಪಾಕ್ಷಂ ಸರ್ವಪ್ರಾಣಿಪ್ರಣಾಶನಂ ।
ವಯಮದ್ಯ ಮಹಾಭಾಗ ತ್ರಾಯಸ್ವ ಜಗತಃ ಪತೇ ॥ ೪೦ ॥

ತತಸ್ತೇಷಾಂ ವಚಃ ಶ್ರುತ್ವಾ ದೂತಾನಾಂ ಕಾಮರೂಪಿಣಾಂ ।
ಜ್ವರಃ ಕ್ರುದ್ಧೋ ಮಹಾತೇಜಾ ಯೋಧಾನಾಂ ತು ಸಹಸ್ರಶಃ ॥ ೪೧ ॥

ಕಾಲೋ ಮುಂಡಃ ಕೇಕರಾಕ್ಷೋ ಲೋಹಯಷ್ಟಿಪರಿಗ್ರಹಃ ।
ವಿವಿಧಾನ್ಸಂದಿದೇಶಾತ್ರ ಪುರುಷಾನಗ್ನಿವರ್ಚಸಃ ॥ ೪೨ ॥

ಬದ್ಧಾಂಜಲಿಪುಟಾನ್ಸರ್ವಾನಿದಮಾಹ ಸುರೇಶ್ವರಃ ॥ ೪೩ ॥

ಪಚ ಶೀಘ್ರಮಿಮಾನ್ಪಾಪಾನ್ಯೋಗೇನ ಚ ಬಲೇನ ಚ ।
ತತಸ್ತೇ ತ್ವರಿತಂ ಗತ್ವಾ ಯತ್ರ ತೇ ಪಿಶಿತಾಶನಾಃ ॥ ೪೪ ॥

---

೪೦. ಬಳಿಕ ಉಳಿದ ಮಹಾಬಲವುಳ್ಳ ಆ ದೂತ ಮುಖ್ಯರು ಶೂಲಹಸ್ತನೂ ವಿರೂಪಾಕ್ಷನೂ, ಸರ್ವಪ್ರಾಣಿವಿನಾಶಕನೂ, ಪರಮಭಯಂಕರನೂ ಆದ ಜ್ವರನಿಗೆ ಶರಣಾಗತರಾಗಿ "ಮಹಾಭಾಗ್ಯನೇ, ನಾವು ಈಗ ನಾಶವಾಗುತ್ತಿದ್ದೇವೆ. ಜಗದೊಡೆಯನೇ, ನಮ್ಮನ್ನು ಕಾಪಾಡು" ಎಂದರು.

೪೧-೪೩. ಕಾಮರೂಪಿಗಳಾದ ಆದೂತರ ಮಾತನ್ನು ಕೇಳಿ, ಸುರೇಶನೂ, ಮಹಾತೇಜನೂ, ಕಪ್ಪುಬಣ್ಣವುಳ್ಳವನೂ, ಬೋಳುತಲೆಯುಳ್ಳವನೂ ಕೇಕರ ನೇತ್ರನೂ, ಮೆಳ್ಳಗಣ್ಣನೂ ಆದ ಜ್ವರನು ಅತಿಕೋಪವುಳ್ಳವನಾಗಿ ಪರಿಘಾಯುಧವನ್ನು ತೆಗೆದುಕೊಂಡು, ಬಗೆಬಗೆಯಾಗಿಯೂ ಅಗ್ನಿಯಂತೆ ತೇಜಸ್ವಿಗಳಾಗಿಯೂ ಇದ್ದು ಕೈಗಳನ್ನು ಮುಗಿದುಕೊಂಡು ನಿಂತಿರುವ ಸಾವಿರಾರುಜನ ಯೋಧಪುರುಷರಿಗೆ ಈ ಮುಂದಿನ ಮಾತನ್ನು ಹೇಳಿದನು.

೪೪-೪೬ "*ಯೋಗದಿಂದಲೂ, ಬಲದಿಂದಲೂ ಈ ಪಾಪಿಗಳನ್ನು ಬೇಯಿಸಿರಿ" ಎನಲು ಆ ಜ್ವರನ ಆಜ್ಞೆಯಿಂದ ಮಾಂಸಹಾರಿಗಳಾದ ಆ

---

* ಯೋಗ = ಸನ್ನಾಹ ; ಉಪಾಯ ; ಧ್ಯಾನ.

ಜ್ವರಾಜ್ಞಯಾ ಚ ತೇ ಸರ್ವೇ ಜೀಮೂತಘನನಿಸ್ವನಾಃ ।
ಬಹೂಂಸ್ತೇ ರಾಕ್ಷಸಾನ್ ಘೋರಾನ್ ದರ್ಪೋತ್ಸಿಕ್ತಾನ್ಸಹಸ್ರಶಃ ॥ ೪೫ ॥

ಬಹುಶಸ್ತ್ರಪ್ರಹಾರೈಶ್ಚ ಶಸ್ತ್ರೈಶ್ಚ ವಿವಿಧೋಜ್ಜ್ವಲೈಃ ।
ತರಸಾ ರಾಕ್ಷಸಾ ವಿಗ್ನಾ ರುಧಿರೇಣ ಪರಿಪ್ಲುತಾಃ ॥ ೪೬ ॥

ಮೋಚಯಾಮಾಸ ಸಂಗ್ರಾಮಂ ಸ್ವಯಮೇವ ಯಮಸ್ತತಃ ।
ರಾಕ್ಷಸಾನ್ಮೋಚಯಿತ್ವಾಥ ಹನ್ಯಮಾನಾನ್ಸಮಂತತಃ ॥ ೪೭ ॥

ಗತ್ವಾ ಜ್ವರಂ ಮಹಾಭಾಗಂ ವಿನಯಾತ್ಸಾಂತ್ವಯನ್ಮುಹುಃ ।
ಪೂಜಯನ್ಸ್ವೈ ಜ್ವರಂ ದಿವ್ಯಂ ಗೃಹ್ಯ ಹಸ್ತೇ ಮಹಾಯಶಾಃ ॥ ೪೮ ॥

ಪ್ರವಿವೇಶ ಗೃಹಂ ಸ್ವಂತು ಸಂಭ್ರಮೇಣೇದೃಶೇನ ತು ॥ ೪೯ ॥

ಆನನಂ ತು ಸಮುತ್ಪ್ರೋಂಛ್ಯ ಸಂಗ್ರಾಮೇ ಸ್ವೇದಬಿಂದುವತ್ ।
ಧರ್ಮರಾಜೋಥ ವಿಶ್ರಾಂತಂ ಕಾಲಭೂತಂ ಮಹಾಜ್ವರಂ ।
ಕಿಂ ಕಿಂ ವೃತ್ತಮಿದಂ ದೇವ ವ್ಯಾಪಿನಸ್ತ್ವಂ ಮಹಾತಪಾಃ ॥ ೫೦ ॥

ಯೋಧರೆಲ್ಲರೂ ಗುಡುಗಿನಂತೆ ಗರ್ಜಿಸುತ್ತ ದರ್ಪದಿಂದ ಕೊಬ್ಬಿದ ಬಹುಜನ ಘೋರರಾಕ್ಷಸರನ್ನು ಬಾಹುಶಸ್ತ್ರಗಳ ಮತ್ತು ಹೊಳೆಯುವ ಬಗೆಬಗೆಯಾದ ಶಸ್ತ್ರಗಳ ಹೊಡೆತಗಳಿಂದ ರಕ್ತದಿಂದ ಸ್ನಾನಮಾಡಿಸಿ ಬೇಗನೆ ನಾಶಗೊಳಿಸಿದರು.

೪೭–೪೯. ಬಳಿಕ ಮಹಾಕೀರ್ತಿವಂತನಾದ ಯಮನು ತಾನೇ ಬಂದು ಆ ಯುದ್ಧವನ್ನು ನಿಲ್ಲಿಸಿ, ಉಳಿದ ರಾಕ್ಷಸರ ಕೊಲೆಯನ್ನು ತಪ್ಪಿಸಿ, ಪೂಜ್ಯನಾದ ದ್ವಿವ್ಯಜರನ ಹತ್ತಿರಕ್ಕೆ ಹೋಗಿ ವಿನಯದಿಂದ ಮತ್ತೆ ಮತ್ತೆ ಸಮಾಧಾನಪಡಿಸುತ್ತ ಪೂಜಿಸಿ ಅವನ ಕೈಹಿಡಿದುಕೊಂಡು, ಅತಿಸಡಗರದಿಂದ ತನ್ನ ಮನೆಗೆ ಕರೆದುಕೊಂಡು ಹೋದನು.

೫೦–೫೨. ಯಮಧರ್ಮರಾಜನು ತನ್ನ ಮನೆಯಲ್ಲಿ ಯಮಸ್ವರೂಪನೇ ಆದ ಆ ಮಹಾಜ್ವರನ ಮುಖದಲ್ಲಿ ಯುದ್ಧಶ್ರಮದಿಂದುಂಟಾಗಿರುವ ಬೆವರು ಹನಿಗಳನ್ನೊರಸಿ, ವಿಶ್ರಾಂತನಾದ ಅವನನ್ನು ಕುರಿತು, "ದೇವೇಶ, ಮಹಾತಪ,

ರೋಷಾಯಾಸಕರಂ ಚೈವ ಸರ್ವಲೋಕನಮಸ್ಕೃತಃ ।
ಅಹಂ ತ್ವಂ ಚೈವ ದೇವೇಶ ಇಮಂ ಲೋಕಂ ಚರಾಚರಂ ॥ ೫೦ ॥

ಶಾಸೇಮಹಿ ಯಥಾಕಾಮಂ ಯಥಾದೃಷ್ಟಂ ಯಥಾಶ್ರುತಂ ।
ತ್ವಯಾ ಗ್ರಾಹ್ಯೋ ಹ್ಯಹಂ ದೇವ ಮೃತ್ಯುನಾ ಚ ಸುಸಂವೃತಃ ॥ ೫೨ ॥

ಲೋಕಾನ್ಸರ್ವಾನಹಂ ಹನ್ಮಿ ಸರ್ವಘಾತೀ ನ ಸಂಶಯಃ ।
ಗಚ್ಛ ಗಚ್ಛ ಯಥಾಸ್ಥಾನಂ ಯುದ್ಧಂ ಚ ತ್ಯಜತು ತ್ವಯಂ ॥ ೫೩ ॥

ರಾಕ್ಷಸಾನಾಂ ಹತಾಸ್ತತ್ರ ಷಷ್ಟಿಕೋಟ್ಯೋ ರಣಾಜಿರೇ ।
ಅಮರಾಶ್ಚಾಕ್ಷಯಾಶ್ಚೈವ ನ ಹಿ ತ್ವಾಂ ಪ್ರಾಪಯಂತಿ ವೈ ॥ ೫೪ ॥

ತತೋ ಹ್ಯುಪರತಂ ಯುದ್ಧಂ ಧರ್ಮರಾಜೋ ಯಮಸ್ಸ್ವಯಂ ।
ದೂತಾನಾಂ ಚಿತ್ರಗುಪ್ತೇನ ಸಖ್ಯಮೇಕಮಕಾರಯತ್ ॥ ೫೫ ॥

ಇಲ್ಲಿ ನಿನಗೆ ರೋಷಾಯಾಸಕರವಾದ ಏನೇನು ನಡೆಯಿತು? ಸರ್ವಲೋಕ ವಂದ್ಯನಾದ ನೀನೂ, ನಾನೂ ಚರಾಚರಗಳಿಂದ ಕೂಡಿದ ಈ ಲೋಕವನ್ನು ಎಲ್ಲರೂ ಕೇಳಿಯೂ, ತಿಳಿದೂ ಇರುವಂತೆ ನಮ್ಮ ಇಷ್ಟಾನುಸಾರವಾಗಿ ಆಳುತ್ತೇವೆ. ದೇವ ಮೃತ್ಯುವಾದ ನೀನೂ ಗೂಢನಾದ ನನ್ನನ್ನು ಪರಿಗ್ರಹಿಸ್ಲ ಬೇಕಲ್ಲವೆ!

೫೩–೫೪. ಸರ್ವನಾಶಕನಾದ ನಾನು ನಿಜವಾಗಿಯೂ ಲೋಕಗಳನ್ನೆಲ್ಲಾ ಕೊಲ್ಲುವೆನು. ನೀನು ಯುದ್ಧವನ್ನು ನಿಲ್ಲಿಸು. ನಿನ್ನೆಡೆಗೆ ಹೋಗು. ನಡೆ. ಯುದ್ಧರಂಗದಲ್ಲಿ ಅರವತ್ತುಸಾವಿರ ರಾಕ್ಷಸರು ಹತರಾಗಿರುವರು. ಅಮರರೂ, ಅಕ್ಷಯರೂ, ಆದವರು ನಿನ್ನನ್ನು ಸೇರರಲ್ಲವೆ?” ಎಂದನು.

೫೫. ಬಳಿಕ ಯುದ್ಧವು ನಿಂತಿತು. ಧರ್ಮರಾಜನಾದ ಯಮನು ತಾನೇ ಆ ದೂತರಿಗೆ ಚಿತ್ರಗುಪ್ತನೊಡನೆ ಸ್ನೇಹವನ್ನುಂಟುಮಾಡಿದನು.

ಸಂಭಾಷಂತೇ ತತೋ ದೂತಾಶ್ಚಿತ್ರಗುಪ್ತಂ ತಥೈವ ಚ ।
ನಿಯುಂಜಸ್ವ ಯಥಾಪೂರ್ವಂ ಸರ್ವಕರ್ಮಾಣಿ ಜಂತುಷು ॥ ೫೬ ॥

ಸ್ವಕರ್ಮಗುಣಭೂತಾನಿ ಹ್ಯಶುಭಾನಿ ಶುಭಾನಿ ಚ ।
ರುದ್ರಂ ದೂತಾಸ್ಸಮಾಗಮ್ಯ ಚಿತ್ರಗುಪ್ತಸ್ಯ ಪಾರ್ಶ್ವತಃ ।
ಉಪಸ್ಥಾನಂ ಚ ಕುರ್ವಂತಿ ಕಾಲಚಿಂತಕಮಬ್ರುವನ್ ॥ ೫೭ ॥
ಯಥಾ ಲೋಕಾ ಯಥಾ ರಾಜಾ ಯಥಾ ಮೃತ್ಯುಸ್ಸನಾತನಃ ॥ ೫೮ ॥
ತಥೈವೋತ್ತಿಷ್ಠ ತಿಷ್ಠೇತಿ ಕ್ಷಮ್ಯತಾಂ ಕ್ಷಮ್ಯತಾಂ ಪ್ರಭೋ ॥ ೫೯ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಸಂಸಾರಚಕ್ರೇ ರಾಕ್ಷಸಕಿಂಕರ ಯುದ್ಧಂ ನಾಮ ಏಕಾಧಿಕದ್ವಿಶತತಮೋಽಧ್ಯಾಯಃ

೫೬–೫೭. ಆಮೇಲೆ ಆ ಯಮದೂತರು ರುದ್ರನೂ, ಕಾಲಚಿಂತಕನೂ, ಆದ ಆ ಚಿತ್ರಗುಪ್ತನ ಪಕ್ಕದಲ್ಲಿ ಬಂದು ನಿಂತು, ಹಿಂದಿನಂತೆಯೇ, ಜಂತುಗಳಿಗೆ ಅವರವರ ಕರ್ಮಗಳಿಗನುಸಾರವಾದ ಸರ್ವಶುಭಾಶುಭಗಳನ್ನೂ ಮಾಡಲು ನಿಯಮಿಸು.'' ಎಂದು ಹೇಳಿದರಲ್ಲದೆ ಆವನಿಗೆ ನಮಸ್ಕಾರವನ್ನೂ ಮಾಡಿದರು.

೫೮–೫೯. ಅಲ್ಲದೆ ಆಗಲೇ ಅವರು, "ಲೋಕವೂ, ಮೃತ್ಯುವೂ, ರಾಜನೂ ಹೇಗೆ ಸನಾತನನೋ ಹಾಗೆಯೇ ನೀನೂ. ಏಳು ಏಳು. ಪ್ರಭುವೇ, ಕ್ಷಮಿಸು'' ಎಂದರು.

ಅಧ್ಯಾಯದ ಸಾರಾಂಶ—

ನಚಿಕೇತನು ಋಷಿಗಳೇ ಮೊದಲಾದವರಿಗೆ — ಯಮಲೋಕದ ನರಕದಲ್ಲಿ ಪಾಪಿಗಳನ್ನು ದಂಡಿಸಿ ಸೋತು, ಬೇಸರಗೊಂಡ ದೂತರು ತಾವು ಇನ್ನು ಆ ಕಾರ್ಯವನ್ನು ಮಾಡಲಾರೆವೆಂದು ಚಿತ್ರಗುಪ್ತನಿಗೆ ಹೇಳಲು, ಅದರಿಂದ ಕೋಪಗೊಂಡ ಚಿತ್ರಗುಪ್ತನು ಆ ದೂತರನ್ನು ದಂಡಿಸುವಂತೆ ಮಂದೇಹರೆಂಬ ರಾಕ್ಷಸರನ್ನು ನೇಮಿಸಲಾಗಿ ಆ ರಾಕ್ಷಸರಿಗೂ, ಯಮದೂತರಿಗೂ ಘೋರ ಯುದ್ಧವು ನಡೆಯಿತೆಂದು ಅದರ ವಿವರವನ್ನು ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರೊಂದನೆಯ ಅಧ್ಯಾಯ.

॥ ಶ್ರೀಃ ॥

ದ್ವ್ಯಧಿಕದ್ವಿಶತತಮೋಧ್ಯಾಯಃ

ಅಥ ನಾರಕಿದಂಡನಕರ್ಮವಿಪಾಕವರ್ಣನಂ

॥ ಯುಧಿಷ್ಠಿರುವಾಚ ॥

ವಿಸ್ಮಯಸ್ತು ಮಯಾ ದೃಷ್ಟಸ್ತಸ್ಮಿನ್ನದ್ಭುತದರ್ಶನಃ ।
ಚಿತ್ರಗುಪ್ತಸ್ಯ ಸಂದೇಶೋ ಧರ್ಮರಾಜೇನ ಧೀಮತಾ ॥ ೧ ॥

ಪ್ರಾಪ್ನುವಂತಿ ಫಲಂ ತೇ ವೈ ಯೇ ಚ ಕ್ಷಿಪ್ತಾಃ ಪುರಾಜನಾಃ ।
ಅಗ್ನಿನಾ ವೈ ಪ್ರತಪ್ತಾಸ್ತೇ ಬದ್ಧಾ ಬಂಧೈಸ್ಸುದಾರುಣೈಃ ॥
ಸಂತಪ್ತಾ ಬಹವೋ ಯೇ ತೇ ತೈಸ್ತೈಃ ಕರ್ಮಭಿರುಲ್ಬಣೈಃ ॥ ೨ ॥

ಇನ್ನೂರೆರಡನೆಯ ಅಧ್ಯಾಯ

ನಾರಕಿಗಳ ದಂಡನಕರ್ಮವಿಪಾಕ ವರ್ಣನೆ

೧. ನಚಿಕೇತಮುನಿ- ಆಶ್ಚರ್ಯ! ಆನರಕದಲ್ಲಿ ಬುದ್ಧಿವಂತನಾದ ಯಮಧರ್ಮರಾಜನು ಚಿತ್ರಗುಪ್ತನಿಗೆ ಉಪದೇಶಿಸಿದುದು ನನಗೆ ಅದ್ಭುತವಾಗಿ ಕಾಣಿಸಿತು.

೨. ಯಮ.— ಯಾರು ಹಿಂದೆ ಅತಿ ಕಠಿಣವಾದ ಬಂಧನಗಳಿಂದ ಕಟ್ಟು ಪಡೆದರೋ, ಬೆಂಕಿಯಿಂದ ಸುಡಲ್ಪಟ್ಟರೋ ಅಥವಾ ಬೇರೆ ವಿಧದಲ್ಲಿ ಸಂತಾಪ ಗೊಂಡರೋ ಅವರೆಲ್ಲರೂ ಉತ್ಕಟವಾದ ತಮ್ಮ ಆಯಾ ಕರ್ಮಗಳಿಗೆ ತಕ್ಕ ಫಲವನ್ನು ಪಡೆಯುವರು.

ಶ್ಯಾವೂಶ್ಚ ದಶನಾಭಿರ್ಯೇ ತ್ವಿವಮಾನ್ ಶೀಘ್ರಂ ಪ್ರಮಾಪಯ ॥ ೩ ॥

ದುರಾಚಾರಂ ಪಾಪರತಂ ನಿರ್ಘೃಣಂ ಪಾಪಚೇತಸಂ ।
ಶ್ವಾನಸ್ತು ಹಿಂಸಕಾ ಯೇ ಚ ಭಕ್ಷಯಂತು ದುರಾತ್ಮಕಂ ॥ ೪ ॥

ಪಿತೃಘ್ನೋ ಮಾತೃಗೋಘ್ನಸ್ತು ಸರ್ವದೋಷಸಮನ್ವಿತಃ ।
ಆರೋಪ್ಯ ಶಾಲ್ಮಲೀಂ ಘೋರಾಂ ಕಂಟಕೈಸ್ತ್ವೈರ್ವಿಪಾಟಯ ॥ ೫ ॥

ಏನಂ ಪಾಚಯ ತೈಲಸ್ಯ ಘೃತಕ್ಷೌದ್ರಸ್ಯ ವಾ ಪುನಃ ।
ತಪ್ತದ್ರೋಣ್ಯಾಂ ತತೋ ಮುಂಚ ತಾಮ್ರತಪ್ತಖಲೇ ಪುನಃ ॥ ೬ ॥

ನರಾಧಮಮಿಮಂ ಕ್ಷಿಪ್ತ್ವಾ ಪ್ರದೀಪ್ತೇ ಹವ್ಯವಾಹನೇ ।
ತತೋ ಮನುಷ್ಯತಾಂ ಪ್ರಾಪ್ಯ ಖಣ್ಣೈಸ್ತತ್ರ ಪ್ರದೀಪ್ಯತೇ ॥ ೭ ॥

೩-೪. ಹಲ್ಲುಗಳು ಕಪ್ಪಾಗಿರುವ ಇವರನ್ನು ಬೇಗನೆ ಕೊಲ್ಲಿಸು. ದುರಾಚಾರನೂ, ಪಾಪಾಸಕ್ತನೂ, ನಿರ್ದಯನೂ, ದುಷ್ಟಚೇತನನೂ ಆದ ಈ ದುರಾತ್ಮನನ್ನು ಹಿಂಸಕಗಳಾದ ನಾಯಿಗಳು ತಿನ್ನಲಿ.

೫. ತಂದೆಯನ್ನು ಕೊಂದವರೂ, ತಾಯಿಯನ್ನು ಕೊಂದವರೂ, ಸರ್ವದೋಷಯುಕ್ತರೂ ಆದ ಇವರನ್ನು ಘೋರವಾದ ಶಾಲ್ಮಲೀವೃಕ್ಷವನ್ನೇರಿಸಿ ಆ ಮರದ ಮುಳ್ಳುಗಳಿಂದ ಸೀಳಿಸು.

೬. ಇವನನ್ನು ಕುದಿಯುವ ಎಣ್ಣೆಯ, ತುಪ್ಪದ ಅಥವಾ ಜೇನುತುಪ್ಪದ ಕೊಪ್ಪರಿಗೆಯಲ್ಲಿ ಬೇಯಿಸು. ಬಳಿಕ ಕಾಯ್ದಿರುವ ತಾಮ್ರದ ಕಣದಲ್ಲಿ ಬಿಡು

೭. ಈ ನರಾಧಮನನ್ನು ಚೆನ್ನಾಗಿ ಉರಿವ ಬೆಂಕಿಯಲ್ಲಿ ಹಾಕಿ. ಬಳಿಕ ಇವನು ಮನುಷ್ಯನಾಗಿ ಜನಿಸಿ ಸಾಲದಬೆಂಕಿಯಿಂದ ಬೇಯುವನು.

ಶಯನಾಸನಹರ್ತಾರಮಗ್ನಿದಾಯೀ ಚ ಯೋ ನರಃ ।
ವೈತರಣ್ಯಾಮಯಂ ಚೈವ ಕ್ಷಿಪ್ಯತಾಮಚಿರಂ ಪುನಃ ॥ ೮ ॥

ಪಾಪಕರ್ಮಾಯಮತ್ಯರ್ಥಂ ಸರ್ವತೀರ್ಥವಿನಾಶಕಃ ।
ತಸ್ಯ ಪ್ರದೀಪ್ತಃ ಕೀಲೋಯಂ ವಹ್ನಿತಪ್ತೋತಿದುಃಸ್ಪೃಶಃ
ಆದೇಶ್ಯ ಚೋಭಯೋರಸ್ಯ ಕರ್ಣಯೋಃ ಕೂಟಸಾಕ್ಷಿಕಃ ॥ ೯ ॥

ಯೋ ನರಃ ಪಿಶುನಃ ಕೂಟಸಾಕ್ಷೀ ಚಾಲೀಕಜಲ್ಪಕಃ ।
ಗ್ರಾಮಯಾಜನಕಂ ವಿಪ್ರಮಧ್ರುವಂ ದಾಂಭಿಕಂ ಶಠಂ ॥ ೧೦ ॥

ಬಧ್ವಾ ತು ಬಂಧನೇ ಘೋರೇ ದೀಯತಾಂ ತು ನ ಕಿಂಚನ ॥ ೧೧ ॥

ಜಿಹ್ವಾಸ್ಯ ಛಿದ್ಯತಾಂ ಶೀಘ್ರಂ ವಾಚಾ ದುಷ್ಟಸ್ಯ ಪಾಪಿನಃ ॥
ಗಮ್ಯಾಗಮ್ಯಂ ಪುರಾ ಯೇನ ವಿಜ್ಞಾತಂ ನ ದುರಾತ್ಮನಾ ॥ ೧೨ ॥

---

೮. ಹಾಸಿಗೆ ಮಂಚ ಮಣೆಗಳನ್ನು ಕದ್ದವನನ್ನೂ, ಮನೆಯೇ ಮೊದಲಾದುವುಗಳಿಗೆ ಬೆಂಕಿಯನ್ನು ಹಾಕಿದವನನ್ನೂ ಮತ್ತೆ ಬೇಗನೆ ವೈತರಣಿಯಲ್ಲಿ ಹಾಕಲಿ.

೯. ಸರ್ವತೀರ್ಥಗಳನ್ನೂ ನಾಶಗೊಳಿಸಿದ ಇವನು ಅತಿಪಾಪಕರ್ಮಿ. ಬೆಂಕಿಯಲ್ಲಿ ಕೆಂಪಗೆ ಕಾಯ್ದು ಹೊಳೆಯುವ ಮುಟ್ಟಲಾಗದ ಈ ಕೀಲನ್ನು ಇವನ ಮತ್ತು ಸುಳ್ಳಾಗಿ ಸಾಕ್ಷಿಹೇಳಿದವನ ಎರಡು ಕಿವಿಗಳಿಗೂ ಪೆಟ್ಟುವಂತೆ ಆಜ್ಞಾಪಿಸು.

೧೦–೧೧ ಸುಳ್ಳಾಗಿ ಸಾಕ್ಷಿಹೇಳುವವನೂ, ಚಾಡಿಹೇಳುವವನೂ, ಸುಳ್ಳು ಹೇಳುವವನೂ, ಗ್ರಾಮಪುರೋಹಿತನಾದ ಬ್ರಾಹ್ಮಣನೂ, ಚಂಚಲನೂ, ದುಷ್ಟನೂ ಜಂಬಗಾರನೂ ಆದ ಅವರನ್ನು ಘೋರವಾದ ಬಂಧನದಲ್ಲಿಟ್ಟು, ಅವರಿಗೆ ಏನನ್ನೂ ಕೊಡದಿರಬೇಕು.

೧೨-೧೩. ಮಾತಿನಲ್ಲಿ ದುಷ್ಟನಾದ ಈ ಪಾಪಿಯ ನಾಲಗೆಯನ್ನು ಬೇಗನೆ ಸೀಳಲಿ. ಕಾಮಸಮ್ಮೋಹಿತನೂ, ದುರಾಸೆಯುಳ್ಳವನೂ ಆದ ಯಾವ

ಕೃಶಂ ಲೋಭಾಭಿಭೂತೇನ ಕಾಮಸಮ್ಮೋಹಿತೇನ ಚ ।
ತಸ್ಯ ಛಿತ್ವಾ ತತೋ ಲಿಂಗಂ ಕ್ಷಾರಮಗ್ನಿಂ ಚ ದೀಪಯ ॥ ೧೩ ॥

ಇಮಂ ತು ಖಲಕಂ ಕೃತ್ವಾ ದುರಾತ್ಮಾ ಪಾಪಕಾರಿಣಂ ।
ದಾಯಾದಾ ಬಹವೋ ಯೇನ ಸ್ವಾರ್ಥಹೇತೋರ್ವಿನಾಶಿತಾಃ ॥ ೧೪ ॥

ಇಮಂ ವಾರ್ಧುಷಿಕಂ ವಿಪ್ರಂ ಸರ್ವತ್ರಾಂಗೇಷು ಭೇದಯ ।
ತಥಾಯಂ ಯಾತನಾಂ ಯಾತು ಪಾಪಂ ಬಹು ಸಮಾಚರನ್ ॥ ೧೫ ॥

ಸುವರ್ಣಸ್ತೇಯಿನಂ ಪಾಪಂ ಕೃತಘ್ನಂ ಚ ತಥಾ ನರಂ ।
ಕ್ರೂರಂ ಪಿತೃಹಣಂ ಚೈನಂ ಬ್ರಹ್ಮಘ್ನೇಷು ಸಮೀಕುರು ॥ ೧೬ ॥

ಅಸ್ಥಿ ಛಿತ್ವಾ ತತಃ ಕ್ಷಿಪ್ರಂ ಕ್ಷಾರಮಗ್ನಿಂ ಚ ದಾಪಯ ।
ಇಮಂ ತು ವಿಪ್ರಂ ಖಾದಂತು ತೀಕ್ಷ್ಣದಂಷ್ಟ್ರಾಸ್ಸುದಾರುಣಾಃ ॥ ೧೭ ॥

ದುರಾತ್ಮನು ಗಮ್ಯಾಗಮ್ಯ ವಿಚಾರವನ್ನು ಮಾಡದೆ ವರ್ತಿಸಿದನೋ ಅವನ ಲಿಂಗವನ್ನು ಕತ್ತರಿಸಿ, ಬಳಿಕ ಆಯೆಡೆಯನ್ನು ಕಾರವನ್ನು ಹಾಕಿಸಿ ಬೆಂಕಿಯಿಂದ ಸುಡಿಸು.

೧೪-೧೫. ಸ್ವಪ್ರಯೋಜನಕ್ಕಾಗಿ ಹಲವರು ದಾಯಾದರನ್ನು ನಾಶಮಾಡಿದ ಪಾಪಕಾರಿಯಾದ ದುರಾತ್ಮನನ್ನು ಒಡ್ಡನಾಗಿ ಮಾಡಿ. ಬಡ್ಡಿಯಿಂದ ಜೀವಿಸಿದ ಈ ಬ್ರಾಹ್ಮಣನ ಸರ್ವಾವಯಗಳನ್ನೂ ಕತ್ತರಿಸು. ಬಹು ಪಾಪಮಾಡಿದ ಇವನು ಆದರಿಂದ ಯಾತನೆಯನ್ನನುಭವಿಸಲಿ.

೧೬. ಚಿನ್ನವನ್ನು ಕದ್ದವನನ್ನೂ, ಕೃತಘ್ನನನ್ನೂ, ಪಿತೃಘಾತುಕನನ್ನೂ ಬ್ರಹ್ಮಹತ್ಯೆಮಾಡಿದವರಿಗೆ ಸಮನಾಗಿ ತಿಳಿ.

೧೭-೧೮. ಇವರ ಎಲಬುಗಳನ್ನು ಕತ್ತರಿಸಿ, ಬಳಿಕ ಬೇಗನೆ ಕಾರವನ್ನೂ, ಬೆಂಕಿಯನ್ನೂ ಹಾಕಿಸು. ಚಾಡಿಕೋರನಾದ ಈ ಬ್ರಾಹ್ಮಣನನ್ನು ಅತಿಭಯಂ

ಪಿಶುನಂ ಹಿ ಮಹಾವ್ಯಾಘ್ರಾಃ ಪಂಚ ಘೋರಾಸ್ಸುದಾರುಣಾಃ ।
ಇಮಂ ಪಚತ ಪಾಕೇಷು ಬಹುಧಾ ಮರ್ಮಭೇದಿನಂ ॥ ೧೮ ॥

ಯೇನಾಗ್ನಿರುಜ್ಝಿತಃ ಪೂರ್ವಂ ಗೃಹೀತ್ವಾ ಚ ನ ಪೂಜಿತಃ ।
ಇಮಂ ಪಾಪಸಮಾಚಾರಂ ವೀರಘ್ನಮತಿಪಾಪಿನಂ ॥ ೧೯ ॥

ಕರ್ಕಟಿಸ್ಯ ತು ಘೋರಸ್ಯ ನಿತ್ಯಕ್ರುದ್ಧಸ್ಯ ಮೋಚಯ ।
ಇಮಂ ಘೋರೇ ಹ್ರದೇಕ್ಷಿಪ್ತಂ ಸರ್ವಯಾಜನಯಾಜಕಂ ॥ ೨೦ ॥

ಸರ್ವೇಷಾಂ ತು ಪಶೂನಾಂ ಯೋ ನಿತ್ಯಂ ಧಾರಯತೇ ಜಲಂ ।
ನ ತ್ರಾತಾ ನ ಚ ದಾತಾ ಚ ಪಾಪಸ್ಯಾಸ್ಯ ದುರಾತ್ಮನಃ ॥ ೨೧ ॥

ಅದಾನವ್ರತಿನೋ ವಿಪ್ರಾಃ ವೇದವಿಕ್ರಯಿಣಸ್ತಥಾ ।
ಸರ್ವಕರ್ಮಾಣಿ ಕುರ್ಯುರ್ಯೇ ದೀಯತೇ ನ ಚಕಿಂಚನ ॥ ೨೨ ॥

ಕರಗಳೂ, ಹರಿತವಾದ ಕೋರೆಯ ಹಲ್ಲುಳ್ಳವೂ, ಕ್ರೂರಿಗಳೂ ಆದ ಐದು ಹುಲಿಗಳು ತಿನ್ನಲಿ. ಮರ್ಮಭೇದಕನಾದ ಇವನನ್ನು ಬಗೆಬಗೆಯಲ್ಲಿ ಅಡಿಗೆಯಾಗಿ ಬೇಯಿಸಿ.

೧೯–೨೦. ದ್ವಿಜನಾಗಿ ಯಾರು ಅಗ್ನಿಯನ್ನು ಪೂಜಿಸದೆ ಬಿಟ್ಟನೋ ಆ ಪಾಪಾಚಾರನನ್ನೂ, ವೀರನನ್ನು ಮೋಸದಿಂದ ಕೊಂದ ಅತಿಪಾಪಿಯನ್ನೂ ಯಾವಾಗಲೂ ಅತಿಕೋಪವುಳ್ಳ ಘೋರವಾದ ಕರ್ಕಟಕ್ಕೆ (ಏಡಿಗೆ) ಹಾಕಿಸು. ಸರ್ವರಿಂದಲೂ ಯಜ್ಞಗಳನ್ನು ಮಾಡಿಸುವ ಇವನನ್ನು ಮಡುವಿನಲ್ಲಿ ಹಾಕಿಸು.

೨೧-೨೨. ಯಾವಾಗಲೂ ಯಾವ ಪಶುಗಳಿಗೂ ನೀರನ್ನೂ, ಆಹಾರವನ್ನೂ ಕೊಟ್ಟು ಕಾಪಾಡದ ಲೋಭಿಯೂ, ದುರಾತ್ಮನೂ ಆದ ಈ ಪಾಪಿಯನ್ನೂ ದಾನವ್ರತಿಯಲ್ಲದವನೂ, ವೇದ ವಿಕ್ರಯ ಮಾಡುವವನೂ, ಆದ ಬ್ರಾಹ್ಮಣ

ತೋಯಭಾಜನಹರ್ತಾರಂ ಭೋಜನಂ ಯೋನಿವಾರಯನ್ ।
ಹನ್ಯತಾಂ ಸುದೃಢೈರ್ದಂಡೈರ್ಯಮದೂತೈರ್ಮಹಾಬಲೈಃ ॥ ೨೩ ॥

ವೇಣುದಂಡಕಶಾಭಿಶ್ಚ ಲೋಹದಂಡೈಸ್ತಥೈವ ಚ ।
ಜಲಮನ್ನಂ ನ ದಾತವ್ಯಂ ಭೋಜನಂ ಚ ಕಥಂಚನ ॥ ೨೪ ॥

ತಸ್ಮಾ ಅನ್ನಂ ಚ ಪಾನಂ ಚ ನ ದಾತವ್ಯಂ ಕದಾಚನ ।
ಹತವಿಶ್ವಾಸ್ಯಹಂತಾರಂ ವಹ್ನೌ ಶೀಘ್ರಂ ಪ್ರಪಾಚಯ ॥ ೨೫ ॥

ಬ್ರಹ್ಮದೇಯಂ ಹೃತಂ ಯೇನ ತಂ ವೈ ಶೀಘ್ರಂ ವಿಪಾಚಯ ।
ಬಹುವರ್ಷಸಹಸ್ರಾಣಿ ಪಾತಯೇಃ ಕರ್ಮವಿಸ್ತರೇ ॥ ೨೬ ॥

ನನ್ನೂ, ತಮಗೆ ಅನರ್ಹವಾದುದೆಂದೆಣಿಸದೆ ಸರ್ವಕರ್ಮಗಳನ್ನೂ ಮಾಡುವವರನ್ನೂ, ಯಾವುದನ್ನೂ ದಾನಮಾಡದವರನ್ನೂ, ಮತ್ತೊಬ್ಬರಿಗೆ ನೀರುಕೊಡುವುದನ್ನೂ, ಅನ್ನವಿಕ್ಕುವುದನ್ನೂ ತಪ್ಪಿಸಿದವರನ್ನೂ ಮಹಾಬಲಶಾಲಿಗಳಾದ ದೂತರು ಗಟ್ಟಿಯಾದ ದೊಣ್ಣೆಗಳಿಂದ ಹೊಡೆಯಲಿ.

೨೪. ಬಿದಿರು ದೊಣ್ಣೆಗಳಿಂದಲೂ, ಛಾವಟಿಗಳಿಂದಲೂ, ಲೋಹದ ಸಲಾಕಿಗಳಿಂದಲೂ ಇವನನ್ನು ಹೊಡೆಯಲಿ. ಇವನಿಗೆ ಎಂದಿಗೂ ಅನ್ನವನ್ನೂ, ನೀರನ್ನೂ ಕೊಡಬಾರದು.

೨೫. ಅವನಿಗೂ ಎಂದೂ ಆಹಾರವನ್ನಾಗಲಿ, ನೀರನ್ನಾಗಲಿ ಕೊಡಕೂಡದು. ವಿಶ್ವಾಸಘಾತಕನಾದ ಪಾಪಿಯನ್ನು ಬೇಗನೆ ಬೆಂಕಿಯಲ್ಲಿ ಸುಡು.

೨೬. ದೇವರಿಗೆ ಅಥವಾ ಬ್ರಾಹ್ಮಣರಿಗೆ ಸಲ್ಲಬೇಕಾದುದನ್ನು ಅಪಹರಿಸಿದವನನ್ನು ಶೀಘ್ರವಾಗಿ ಚೆನ್ನಾಗಿ ಬೇಯಿಸು. ಹಲವುಸಾವಿರವರ್ಷಗಳಕಾಲ ಹಲವು ಕರ್ಮಗಳನ್ನು ಅನುಭವಿಸುವಂತೆ ತಳ್ಳು.

ಸಮುತ್ತೀರ್ಣಂ ತತಃ ಪಶ್ಚಾತ್ತಿರ್ಯಗ್ಯೋನೌ ಪ್ರಪಾತಯೇಃ ।
ಸೂಕ್ಷ್ಮದೇಹವಿಪಾಕೇಷು ಕೀಟಪಕ್ಷಿವಿಜಾತಿಷು ॥
ಕ್ಲಿಷ್ಟೋ ಜಾತಿಸಹಸ್ರೈಸ್ತು ಜಾಯತೇ ಮಾನುಷಸ್ತತಃ ॥ ೨೭ ॥

ತತ್ರ ಜಾತೋ ದುರಾತ್ಮಾ ಚ ಕುಲೇಷು ವಿವಿಧೇಷು ಚ ॥ ೨೮ ॥

ಹಿಂಸಾರೂಪೇಣ ಘೋರೇಣ ಬ್ರಹ್ಮವಧ್ಯಾಂ ಪ್ರದಾಪಯೇತ್ ।
ರಾಜ್ಞಸ್ತು ಮಾರಕಂ ಘೋರಂ ಬ್ರಹ್ಮಘ್ನಂ ದುಷ್ಕೃತಂ ತಥಾ ॥ ೨೯ ॥

ಸುವರ್ಣಸ್ತೇಯಿನಂ ಚೈವ ಸುರಾಪಂ ಚೈವ ಕಾರಯೇತ್ ।
ಅನುಭೂಯ ತತಃ ಕಾಲೇ ತತೋ ಯಕ್ಷ್ಮಪ್ರಯೋಜಯೇತ್ ॥ ೩೦ ॥

ಗೋಘಾತಕೋ ಹ್ಯಯಂ ಪಾಪಃ ಕೂಟಶಾಲ್ಮಲಿಮಾರುಹೇತ್ ।
ಕೃಷ್ಯತೇ ವಿವಿಧೈರ್ಘೋರೈ ರಾಕ್ಷಸೈರ್ಘೋರದರ್ಶನೈಃ ॥ ೩೧ ॥

---

೨೭. ಅವನು ಅವುಗಳನ್ನನುಭವಿಸಿ ಉತ್ತೀರ್ಣನಾದ ಬಳಿಕ ತಿರ್ಯಗ್ಜನ್ಮಕ್ಕೆ ಹಾಕು. ಸಾವಿರಾರು ಸೂಕ್ಷ್ಮದೇಹಗಳಲ್ಲಿಯೂ, ಕ್ರಿಮಿಕೀಟಪಕ್ಷಿಜನ್ಮಗಳಲ್ಲಿಯೂ ಕ್ಲೇಶಗೊಂಡು, ಆಮೇಲೆ ಮನುಷ್ಯನಾಗಿ ಹುಟ್ಟುವನು.

೨೮-೩೦. ಆ ದುರಾತ್ಮನು ಆ ಮನುಷ್ಯಜನ್ಮದಲ್ಲಿಯೂ ವಿವಿಧವಾದ ಕುಲಗಳಲ್ಲಿ ಜನಿಸಿ, ಘೋರವಾದ ಹಿಂಸೆಯಿಂದ ಬ್ರಹ್ಮಹತ್ಯೆ ನೃಪಹತ್ಯೆ ಸುವರ್ಣ ಚೌರ್ಯ ಮದ್ಯಪಾನಗಳೆಂಬ ದುಷ್ಕರ್ಮಗಳನ್ನು ಆಚರಿಸುವಂತೆ ಮಾಡಬೇಕು. ಅದನ್ನು ಅನುಭವಿಸಿ ಬಳಿಕ ಕಾಲಾಂತರದಲ್ಲಿ ಅವನು ಕ್ಷಯವನ್ನು ಪಡೆಯಬೇಕು.

೩೧. ಗೋಹತ್ಯೆಮಾಡಿದ ಈ ಪಾಪಿಯು ಕೂಟಶಾಲ್ಮಲಿವೃಕ್ಷವನ್ನೇರಲಿ. ಅಲ್ಲಿ ನೋಡಲು ಭಯಂಕರವಾಗಿರುವ ಬಗೆಬಗೆಯ ಕ್ರೂರರಾಕ್ಷಸರು ಅವನನ್ನು ಸೀಳುವರು.

ಪೂತಿಪಾಕೇಷು ಪಚ್ಯೇತ ಜಂತುಭಿಸ್ಸಂಪ್ರಯೋಜಿತಃ ।
ಬ್ರಹ್ಮವಧ್ಯಾಚ್ಚತುರ್ಭಾಗೈರ್ಮೃಗತ್ವಂ ಪಶುತಾಂ ಗತಃ ॥ ೩೨ ॥
ಉದ್ವಿಗ್ನವಾಸಂ ಪತಿತಂ ಯತ್ರ ಯತ್ರೋಪಪದ್ಯತೇ ।
ಪಾಪಕರ್ಮಸಮುದ್ವಿಗ್ನೋ ಜಾತೋ ಜಾತಃ ಪುನಃ ಪುನಃ ॥ ೩೩ ॥
ಅಯಂ ತಿಷ್ಠತಿ ಕಿಂ ಪಾಪಃ ಪಿತೃಘಾತೀ ದುರಾತ್ಮವಾನ್ ।
ತೇತು ವರ್ಷಶತಂ ಸಾಗ್ರಂ ಭಕ್ಷಯಂತು ವಿಚೇತಸಃ ॥ ೩೪ ॥
ತತಃ ಪಾಕೇಷು ಘೋರೇಷು ಪಚ್ಯತಾಂ ಚ ನರಾಧಮಃ ।
ತತೋ ಮಾನುಷತಾಂ ಪ್ರಾಪ್ಯ ಗರ್ಭಸ್ಥೋ ಮ್ರಿಯತಾಂ ಪುನಃ ॥ ೩೫ ॥
ವ್ಯಾಪನ್ನೋ ದಶಗರ್ಭೇಷು ತತಃ ಪಶ್ಚಾದ್ವಿಮುಚ್ಯತಾಂ ।
ತತ್ರಾಪಿ ಲಬ್ಧ್ವಾ ಮಾನುಷ್ಯಂ ಕ್ಲೇಶಭಾಗೀಚ ಜಾಯತಾಂ ॥ ೩೬ ॥
ಬುಭುಕ್ಷಾರುಗ್ವಿಕಾರೈಶ್ಚ ಸತತಂ ತತ್ರ ಪೀಡ್ಯತಾಂ ॥ ೩೭ ॥

---

೩೨. ಬ್ರಹ್ಮಹತ್ಯೆಯ ನಾಲ್ಕನೆಯ ಒಂದುಭಾಗ ಪಾಪದಿಂದ ಮೃಗವಾಗಿ ಪಶುತ್ವವನ್ನು ಪಡೆದ ಇವನನ್ನು ದುರ್ಗಂಧಪಾಕಗಳಲ್ಲಿ ಬೇರೆಯ ಜಂತುಗಳೊಡನೆ ಬೇಯಿಸಿರಿ.

೩೩-೩೪. ದುಃಖವಾಸವು ಎಲ್ಲೆಲ್ಲಿ ದೊರೆಯುವುದೋ ಅಲ್ಲಲ್ಲಿ ಮತ್ತೆಮತ್ತೆ ಪಾಪಕರ್ಮದಿಂದ ಪೂರ್ಣದುಃಖಿಯಾಗಿ ಹುಟ್ಟಿದ ಈ ಪಿತೃಘಾತುಕನೂ, ದುರಾತ್ಮನೂ ಆದ ಪಾಪಿಯು ಇಲ್ಲಿರುವನೇನು? ಇವನನ್ನು ಆ ದುಷ್ಟಚಿತ್ತರಾದ ರಾಕ್ಷಸರು ನೂರುವರ್ಷ ಪೂರ್ತಿಯಾಗಿ ತಿನ್ನಲಿ.

೩೫. ಬಳಿಕ ಈ ನರಾಧಮನು ಘೋರಪಾಪಗಳಲ್ಲಿ ಬೇಯಲಿ. ಆಮೇಲೆ ಮನುಷ್ಯನಾಗಿ ಜನಿಸಿ, ತಾಯಿಯ ಗರ್ಭದಲ್ಲಿರುವಾಗಲೇ ಮತ್ತೆ ಸಾಯಲಿ.

೩೬-೩೭. ಹಾಗೆ ಹತ್ತು ಗರ್ಭಗಳಲ್ಲಿ ಜನಿಸಿ ಅಲ್ಲೇ ಸತ್ತು ಬಳಿಕ ಆ ಗರ್ಭವ್ಯುತಿಯಿಂದ ವಿಮುಕ್ತನಾಗಿ ಮನುಷ್ಯನಾಗಿ ಜನಿಸಿ ಜೀವಿಸಿದರೂ ಕ್ಲೇಶಗಳಿಗೆ ಭಾಗಿಯಾಗಲಿ. ಹಸಿವುಬೇನೆಗಳ ವಿಕಾರಗಳಿಂದ ಯಾವಾಗಲೂ ಪೀಡಿತನಾಗಲಿ.

ಪಾಪಾಚಾರಮಿಮಂ ಘೋರಂ ಮಿತ್ರವಿಶ್ವಾಸಘಾತಕಂ ।
ಯಂತ್ರೇಣ ಪೀಡ್ಯತಾಂ ಕ್ಷಿಪ್ರಂ ತತಃ ಪಶ್ಚಾದ್ವಿಮುಚ್ಯತಾಂ ।
ದೀಪ್ಯತಾಂ ಜ್ವಲನೇ ಘೋರೇ ವರ್ಷಾಣಾಂ ಚ ಶತದ್ವಯಂ ॥ ೩೮ ॥

ಜಾಯತಾಂ ಚ ತತಃ ಪಶ್ಚಾಚ್ಛುನಾಂ ಯೋನೌ ದುರಾತ್ಮವಾನ್ ।
ಭ್ರಷ್ಟೋಽಪಿ ಜಾಯತಾಂ ತಸ್ಮಾನ್ಮಾನುಷಃ ಕ್ಲೇಶಭಾಜನಃ ॥ ೩೯ ॥

ಪ್ರಾಪ್ತವಾನ್ವಿವಿಧಾನ್ರೋಗಾನ್ಸಂಸಾರೇ ಚೈವ ದಾರುಣಾನ್ ।
ಬ್ರಹ್ಮಸ್ವಹಾರೀ ಪಾಪೋಽಯಂ ನರೋ ಲವಣತಸ್ಕರಃ ॥ ೪೦ ॥

ವರ್ಷಾಣಾಂ ತು ಶತಂ ಪಂಚ ತತ್ರ ಕ್ಲಿಷ್ಟೋಽದುರಾತ್ಮವಾನ್ ।
ಕೃಮಿಕೋ ಜಾಯತೇ ಪಶ್ಚಾದ್ವಿಷ್ಠಾಯಾಂ ಕೃಮಿಕೋಽಪರಃ ॥ ೪೧ ॥

ಶಕುಂತೋ ಜಾಯತೇ ಘೋರಸ್ತತ್ರ ಪಶ್ಚಾದ್ವೃಕೋ ಭವೇತ್ ।
ಇಮಮಗ್ನಿಪ್ರದಂ ಘೋರಂ ಕಾಷ್ಠಾಗ್ನಾ ಸಂಪ್ರತಾಪಯ ॥ ೪೨ ॥

---

೩೮. ಮಿತ್ರವಿಶ್ವಾಸಘಾತಕನಾದ ಈ ಘೋರಪಾಪಾಚಾರನನ್ನು ಯಂತ್ರದಿಂದ ಬೇಗನೆ ಪೀಡಿಸಿ ಆಮೇಲೆ ಘೋರಾಗ್ನಿಯಲ್ಲಿ ಇನ್ನೂರುವರ್ಷಕಾಲ ಉರಿಸಬೇಕು.

೩೯. ಬಳಿಕ ಈ ದುರಾತ್ಮನು ನಾಯಿ ಜನ್ಮದಲ್ಲಿ ಹುಟ್ಟಲಿ. ಆ ನಾಯಿಯ ಜನ್ಮದಿಂದ ತಪ್ಪಿಸಿಕೊಂಡರೂ ಕಷ್ಟಗಳಿಗೆ ಪಾತ್ರನಾದ ಮನುಷ್ಯನಾಗಿ ಜನಿಸಲಿ.

೪೦-೪೧. ಬ್ರಹ್ಮಸ್ವವನ್ನು ಅಪಹರಿಸಿದ ಈ ಪಾಪಿಯೂ, ಉಪ್ಪನ್ನು ಕದ್ದ ಈ ಪಾಪಿ ಮನುಷ್ಯನೂ ಜನ್ಮಪರಂಪರೆಯಲ್ಲಿ ಘೋರವಾದ ಬಗೆಬಗೆಯ ರೋಗಗಳನ್ನು ಪಡೆದು ಐನೂರುವರ್ಷಕಾಲ ಕಷ್ಟಪಟ್ಟು ಆಮೇಲೆ ಅಮೇಧ್ಯದಲ್ಲಿ ಕ್ರಿಮಿಯಾಗಿ ಜನಿಸುವನು.

೪೨. ಬಳಿಕ ಪಕ್ಷಿಯಾಗಿಯೂ, ಅನಂತರ ಘೋರವಾದ ತೋಳನಾಗಿಯೂ ಜನಿಸುವನು. ಮನೆಗಳೇ ಮೊದಲಾದುವುಗಳಿಗೆ ಬೆಂಕಿಯನ್ನಿಡುವ ಈ ಕ್ರೂರಿಯನ್ನು ಕಟ್ಟಿಗೆಯ ಬೆಂಕಿಯಲ್ಲಿ ಘೋರವಾಗಿ ಸುಡಿಸು.

ಸ್ವಕರ್ಮಸು ವಿಹೀನೇಷು ಪಶ್ಚಾಲ್ಲಬ್ಧಗತಿಸ್ತಥಾ ।
ತತಶ್ಚಾಥ ಮೃಗೋ ವಾಪಿ ತತೋ ಮಾನುಷತಾಂ ವ್ರಜೇತ್ ॥ ೪೩ ॥

ತತ್ರಾಪಿ ದಾರುಣಂ ದುಃಖಮುಪಭುಂಕ್ತೇ ದುರಾತ್ಮವಾನ್ ।
ಸರ್ವದುಷ್ಕೃತಕಾರ್ಯೇಷು ಸಹ ಸಂಘಾತಚಿಂತಕೈಃ ॥ ೪೪ ॥

ಏವಂ ಕರ್ಮಸಮಾಯುಕ್ತಾಸ್ತೇ ಭವಂತು ಸಹಸ್ರಶಃ ।
ಪರದ್ರವ್ಯಾಪಹಾರಾಶ್ಚ ರೌರವೇ ಪತಿತಾಸ್ತಥಾ ॥ ೪೫ ॥

ಕುಂಭೀಪಾಕೇಷು ನಿರ್ದಗ್ಧಃ ಪಶ್ಚಾದ್ಗರ್ದಭತಾಂ ಗತಃ ।
ತತೋ ಜಾತಸ್ತ್ವಸೌ ಪಾಪಃ ಸೂಕರೋ ಮಲಭುಕ್ತಥಾ ॥ ೪೬ ॥

ಪ್ರಾಪ್ನೋತು ವಿವಿಧಾಂಸ್ತಾಪಾನ್ಯಥಾ ಹೃತಧನಶ್ಚ ಸನ್ ।
ಕ್ಷುಧಾತೃಷ್ಣಾಪರಾಕ್ರಾಂತೋ ಗರ್ದಭೋ ದಶಜನ್ಮಸು ॥ ೪೭ ॥

೪೩-೪೪ ಆಮೇಲೆ ಇವನು ಮೃಗವಾಗಿಯೂ, ಬಳಿಕ ಸ್ವಕರ್ಮವಿಹೀನರಾದವರ ಕುಲದಲ್ಲಿ ಮನುಷ್ಯನಾಗಿಯೂ ಜನಿಸಲಿ. ಆಜನ್ಮದಲ್ಲಿಯೂ ಈ ದುರಾತ್ಮನು ಸರ್ವದುಷ್ಕಾರ್ಯಗಳನ್ನೂ ಮಾಡುವುದರಲ್ಲಿಯೇ ಚಿಂತೆಯುಳ್ಳ ಸಂಗಡಿಗರೊಡನೆ ದಾರುಣವಾದ ದುಃಖವನ್ನನುಭವಿಸುವನು.

೪೫. ಪರದ್ರವ್ಯಾಪಹಾರಿಗಳಾದ ಅಸಾವಿರಾರು ಜನರೂ ಹೀಗೆಯೇ ದುಷ್ಕರ್ಮಯುಕ್ತರಾಗಿ ರೌರವದಲ್ಲಿ ಬಿದ್ದಿರುವರಾಗಲಿ.

೪೬-೪೭. ಧನವನ್ನಪಹರಿಸಿದ ಈ ಪಾಪಿಯು ಕುಂಭೀಪಾಕದಲ್ಲಿ ಬೆಂದು ಬಳಿಕ ಕತ್ತೆಯಾಗಿ ಹುಟ್ಟಿ ಆ ಜನ್ಮವೂ ಕಳೆದಮೇಲೆ ಅಮೇಧ್ಯವನ್ನು ತಿನ್ನುವ ಹಂದಿಯಾಗುವನು ಇವನು ಹತ್ತು ಜನ್ಮಗಳಲ್ಲಿ ಕತ್ತೆಯಾಗಿ ಹುಟ್ಟಿ ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿ ಬಗೆಬಗೆಯ ಕಷ್ಟಗಳನ್ನು ಪಡೆಯಲಿ.

ಮಾನುಷ್ಯಂ ಸಮನುಪ್ರಾಪ್ಯ ಚೌರೋ ಭವತಿ ಪಾಪಕೃತ್ ।
ಪರೋಪಘಾತೀ ನಿರ್ಲಜ್ಜಃ ಸರ್ವದೋಷಸಮನ್ವಿತಃ ॥ ೪೮ ॥

ವೃಕ್ಷಶಾಖಾವಲಂಬೋತ್ರ ಹ್ಯಧಃಶೀರ್ಷಃಪ್ರಜಾಯತೇ ।
ಅಗ್ನಿನಾ ಪಚ್ಯತಾಂ ಪಶ್ಚಾಲ್ಲುಬ್ಧೋ ವೈ ಪುರುಷಾಧಮಃ ॥ ೪೯ ॥

ತತೋ ವರ್ಷಶತೇ ಪೂರ್ಣೇ ಮುಚ್ಯತೇ ಸ ಪುನಃ ಪುನಃ ।
ಅಜಿತಾತ್ಮಾ ತಥಾ ಪಾಪಃ ಪಿಶುನಶ್ಚ ದುರಾತ್ಮವಾನ್ ॥ ೫೦ ॥

ಪೂರ್ವೈಶ್ಚ ಸೂಕರೋ ಭೂತ್ವಾ ನಕುಲೋ ಜಾಯತೇಪುನಃ ।
ವಿಮುಕ್ತಶ್ಚ ತತಃ ಪಶ್ಚಾನ್ಮಾನುಷ್ಯಂ ಲಭತೇ ಚಿರಾತ್ ॥ ೫೧ ॥

ಧಿಕ್ಕೃತಸ್ಸರ್ವಲೋಕೇನ ಕೂಟಸಾಕ್ಷ್ಯನೃತವ್ರತಃ ।
ನ ಶರ್ಮ ಲಭತೇ ಕ್ವಾಪಿ ಕರ್ಮಣಾ ಸ್ವೇನ ಗರ್ಹಿತಃ ॥ ೫೨ ॥

---

೪೮. ಪರಹಿಂಸಕನೂ, ನಾಚಿಕೆಗೆಟ್ಟವನೂ, ಸರ್ವದೋಷಯುತನೂ ಆದ ಈ ಪಾಪಿಯು ಮತ್ತೆ ಮನುಷ್ಯನಾಗಿ ಜನಿಸಿ ಕಳ್ಳನಾಗುವನು.

೪೯. ಇಲ್ಲಿ ಮರದ ಕೊಂಬೆಯಲ್ಲಿ ಜೋಲುತ್ತಿರುವ ಇವನನ್ನು ತಲೆಕೆಳಗಾಗುವಂತೆ ಮಾಡಬೇಕು. ಲೋಭಿಯಾದ ಈ ಪುರುಷಾಧಮನನ್ನು ಆಮೇಲೆ ಬೆಂಕಿಯಿಂದ ಬೇಯಿಸಬೇಕು.

೫೦-೫೧. ಹಾಗೆ ನೂರುವರ್ಷ ಕಳೆದಬಳಿಕ ಆ ಜಿತೇಂದ್ರಿಯನೂ, ಚಾಡಿಕೋರನೂ, ದುರಾತ್ಮನೂ ಆದ ಈ ಪಾಪಿಯು ಮೊದಲ ಜನ್ಮಗಳಲ್ಲಿ ಹಂದಿಯಾಗಿ ಜನಿಸಿ ಬಳಿಕ ಮುಂಗಸಿಯಾಗುವನು. ಆಮೇಲೆ ಬಹುಕಾಲಾನಂತರ ಮನುಷ್ಯನಾಗಿ ಜನಿಸುವನು.

೫೨. ಆಗಲೂ ಕಪಟಸಾಕ್ಷಿ ಹೇಳುವ ಸುಳ್ಳುಗಾರನು ಎಲ್ಲರ ಧಿಕ್ಕಾರಕ್ಕೂ ನಿಂದೆಗೂ ಗುರಿಯಾಗಿ ಎಲ್ಲೂ ಸುಖವಿಲ್ಲದವನಾಗುವನು.

ಇಮಂ ಹ್ಯಾನೃತಿಕಂ ದುಷ್ಟಂ ಕ್ಷೇತ್ರಹಾರಕಮೇವ ಚ |
ಸ್ವಕರ್ಮ ದುಷ್ಕೃತಂ ಯಾವತ್ತಾವದ್ದುಃಖಂ ಭುನಕ್ತ್ವಸೌ ॥ ೫೩ ॥

ಕರ್ಮಣ್ಯೇಕೈಕಶಶ್ಚಾಯಂ ಸ ತು ತಿಷ್ಠತ್ವಯಂ ಪುನಃ |
ವರ್ಷಲಕ್ಷಂ ನ ಸಂದೇಹಸ್ತತಸ್ತಿಷ್ಠತ್ವಯಂ ಪುನಃ ॥ ೫೪ ॥

ತತೋ ಜಾತೀಃ ಸ್ಮರೇತ್ಸರ್ವಾಸ್ತಿರ್ಯಗ್ಯೋನಿಂ ಸಮಾಶ್ರಿತಃ |
ಜಾಯತಾಂ ಮಾನುಷಃ ಪಶ್ಚಾತ್ ಕ್ಷುಧಯಾ ಪರಿಪೀಡಿತಃ ॥ ೫೫ ॥

ಸರ್ವಕಾಮವಿಮುಕ್ತಸ್ತು ಸರ್ವದೋಷಸಮನ್ವಿತಃ |
ಕ್ವಚಿಜ್ಜಾತ್ಯಾಂ ಭವೇದಂಧಃ ಕ್ವಚಿದ್ಬಧಿರ ಏವ ಚ ॥ ೫೬ ॥

ಕ್ವಚಿನ್ಮೂಕಶ್ಚ ಕಾಣಶ್ಚ ಕ್ವಚಿದ್ವ್ಯಾಧಿಸಮನ್ವಿತಃ ॥ ೫೭ ॥

---

೫೩. ಈ ಸುಳ್ಳುಗಾರನೂ, ಕ್ಷೇತ್ರಾಪಹಾರಿಯೂ ಆದ ದುಷ್ಟನು ಅವನ ಪಾಪಕರ್ಮವು ಮುಗಿಯುವವರೆಗೂ ದುಃಖವನ್ನನುಭವಿಸಲಿ.

೫೪. ಅವನಾದರೋ ಒಂದೊಂದು ಕರ್ಮದ ಫಲವನ್ನೂ ಅನುಭವಿಸುತ್ತ ಒಂದು ಲಕ್ಷವರ್ಷಕಾಲ ಇರಬೇಕೆಂಬುದರಲ್ಲಿ ಸಂದೇಹವಿಲ್ಲ.

೫೫. ಆಮೇಲೆ ತಿರ್ಯಗ್ಜನ್ಮಗಳಲ್ಲಿ ಜನಿಸಿ, ಹಿಂದಿನ ಜನ್ಮಗಳನ್ನೆಲ್ಲಾ ಸ್ಮರಿಸಿಕೊಂಡು ಸಂಕಟಪಟ್ಟು ಬಳಿಕ ಮನುಷ್ಯನಾಗಿ ಜನಿಸಿ ಹಸಿವಿನಿಂದ ಪೀಡಿತನಾಗಲಿ.

೫೬-೫೭. ಆ ಮನುಷ್ಯ ಜನ್ಮದಲ್ಲಿಯೂ ಯಾವ ಇಷ್ಟಾರ್ಥಗಳನ್ನೂ ಪಡೆಯದೆ ಸರ್ವದೋಷಯುಕ್ತನಾದ ಇವನು ಬಳಿಕ ಒಂದು ಜನ್ಮದಲ್ಲಿ ಕುರುಡನಾಗಿಯೂ, ಇನ್ನೊಂದು ಜನ್ಮದಲ್ಲಿ ಕಿವುಡನಾಗಿಯೂ, ಮತ್ತೊಂದರಲ್ಲಿ ಮೂಕನೂ, ಕುರುಡನೂ ಆಗಿಯೂ, ಇನ್ನೂ ಒಂದರಲ್ಲಿ ರೋಗಪೀಡಿತನಾಗಿಯೂ ಜನಿಸಲಿ.

ಏವಂ ಹಿ ಸ್ಸ್ರಾಪ್ನುಯಾದ್ದುಃಖಂ ನ ಚ ಸೌಖ್ಯಮವಾಪ್ನುಯಾತ್ ।
ಜಾತ್ಯಂತರಸಹಸ್ರಾಣಿ ಪ್ರಯುತಾನ್ಯರ್ಬುದಾನಿ ಚ ॥ ೫೮ ॥

ಶಾಂತಿಂ ನ ಲಭತೇ ಚೈವ ಭೂಮ್ಯಾಂ ಕ್ಷೇತ್ರಹರೋನರಃ ।
ತೀವ್ರೈರಂತರ್ಗತೈರ್ದುಃಖೈರ್ಭೂಮಿಹರ್ತಾ ನರಾಧಮಃ ॥ ೫೯ ॥

ಇಮಂ ಬಂಧೈರ್ದೃಢೈರ್ಬಧ್ವಾ ಪಿಪಾಚಯ ತಥಾಚಿರಂ ।
ಪ್ರಬದ್ಧಸ್ಸುಚಿರಂಕಾಲಂ ಮಮ ಲೋಕಗತೋ ನರಃ ।
ಜಾಯತಾಂ ಸ ಚಿರಂ ಪಾಪೋ ಮಾರ್ಜಾರಸ್ತೇನ ಕರ್ಮಣಾ ॥ ೬೦ ॥

ತೀವ್ರಕ್ಷುಧಾಪರಿಕ್ಲಿಷ್ಟೋ ಬದ್ಧೋ ಬಂಧನಯಂತ್ರಿತಃ ।
ದುಃಖಾನ್ಯನುಭವಂಸ್ತತ್ರ ಪಾಪಕರ್ಮಾ ನರಾಧಮಃ ।
ಸಪ್ತಧಾ ಸಪ್ತ ಚೈಕಾಂ ಚ ಜಾತಿಂ ಗತ್ವಾ ಸ ಪಚ್ಯತೇ ॥ ೬೧ ॥

೫೮-೫೯. ಹೀಗೆಯೇ ಈ ಪಾಪಿಯು ಸಾವಿರ, ಹತ್ತುಸಾವಿರ ಅಥವಾ ಅರ್ಬುದಸಂಖ್ಯೆಯ ಜನ್ಮಾಂತರಗಳನ್ನು ಪಡೆದು ದುಃಖವನ್ನನುಭವಿಸಲಿ. ಇವನು ಸೌಖ್ಯವನ್ನು ಪಡೆಯಬಾರದು. ಕ್ಷೇತ್ರಾಪಹಾರಕನಾದ ನರಾಧಮನು ತೀವ್ರವಾದ ಅಂತರ್ದುಃಖಗಳುಳ್ಳವನಾಗಿ ಭೂಮಿಯಲ್ಲಿ ಶಾಂತಿಯನ್ನು ಪಡೆಯದಿರುವನು.

೬೦. ಇವನನ್ನು ಕಟ್ಟುಗಳಿಂದ ಬಲವಾಗಿ ಕಟ್ಟಿಸಿ ಬಹುಕಾಲ ಬೇಯಿಸಬೇಕು. ನನ್ನ ಲೋಕಕ್ಕೆ ಬಂದ ಈ ಪಾಪಿಯು ಚಿರಕಾಲ ಬಂಧಿತನಾಗಿದ್ದು ಬಳಿಕ ತನ್ನ ಕರ್ಮದಿಂದ ಬೆಕ್ಕಾಗಿ ಹುಟ್ಟಲಿ.

೬೧. ಪಾಪಕರ್ಮನಾದ ಈನರಾಧಮನು ಅಲ್ಲಿ ಬಂಧನಕ್ಕೊಳಗಾಗಿ ಬಹಳ ಹಸಿವಿನಿಂದ ಸಂಕಟಪಟ್ಟು, ಹಾಗೆ ಇಪ್ಪತ್ತೊಂದು ಜನ್ಮಗಳಲ್ಲಿ ಜನಿಸಿ ಬೇಯುವನು.

ಇಮಂ ಶಾಕುನಿಕಂ ಪಾಪಂ ಶ್ವಭಿರ್ಗೃಧ್ರೈಶ್ಚ ಘಾತಯ ।
ತತಃ ಕುಕ್ಕುಟಿತಾಂ ಯಾತು ವಿಡ್ಭಕ್ಷಶ್ಚ ದುರಾತ್ಮವಾನ್ ॥ ೬೨ ॥

ದಂಶಶ್ಚ ಮಶಕಶ್ಚೈವ ತತಃ ಪಶ್ಚಾದ್ಭವೇತ್ತು ಸಃ ।
ಜಾತಿಕರ್ಮಸಹಸ್ರಂತು ತತೋ ಮಾನುಷತಾಂ ವ್ರಜೇತ್ ॥ ೬೩ ॥

ಇಮಂ ಸೌಕರಿಕಂ ಪಾಪಂ ಮಹಿಷಾಘಾತಯಂತು ತಂ ।
ವರ್ಷಾಣಾಂ ಚ ಸಹಸ್ರಂ ತು ಧಾವಮಾನಂ ತತಸ್ತತಃ ॥ ೬೪ ॥

ವಿಭಿನ್ನಂ ಚ ಪ್ರಭಿನ್ನಂ ಚ ಶೃಂಗಾಭ್ಯಾಂ ಪದ್ಭಿರೇವ ಚ ॥ ೬೫ ॥

ತಸ್ಮಾದ್ದೇಶಾತ್ತತೋ ಮುಕ್ತಸ್ತತಸ್ಸೂಕರತಾಂ ವ್ರಜೇತ್ ।
ಮಹಿಷಃ ಕುಕ್ಕುಟಶ್ಚೈವ ತತೋ ಜಂಬುಕ ಏವ ಚ ॥ ೬೬ ॥

೬೨-೬೩. ಹಕ್ಕಿಬೇಟೆಗಾರನಾದ ಈ ಪಾಪಿಯನ್ನು ನಾಯಿಗಳಿಂದಲೂ, ಹದ್ದುಗಳಿಂದಲೂ ಕೊಲ್ಲಿಸು. ಬಳಿಕ ಈದುರಾತ್ಮನು ಮಲವನ್ನು ತಿನ್ನುವ ಕೋಳಿಯಾಗಿ ಜನಿಸಲಿ. ಕೋಳಿಯ ಜನ್ಮವು ಕಳೆದಮೇಲೆ ಕಾಡುನೊಣವಾಗಿಯೂ ಸೊಳ್ಳೆಯಾಗಿಯೂ ಹುಟ್ಟಲಿ ಸಾವಿರಾರು ಹೀನಜನ್ಮಗಳಲ್ಲಿ ಜನಿಸಿ ಬಳಿಕ ಮತ್ತೆ ಮನುಷ್ಯನಾಗಿ ಹುಟ್ಟಲಿ.

೬೪-೬೫. ಹಂದಿಗೊಲೆಗಾರನಾದ ಈ ಪಾಪಿಯುನ್ನು ಎಮ್ಮೆಯ ಕೋಣಗಳು ಸಾವಿರಾರು ವರ್ಷಕಾಲ ಓಡಾಡಿಸಿಕೊಂಡು, ಕೊಂಬುಗಳಿಂದಲೂ, ಕಾಲುಗಳಿಂದಲೂ ಚೂರುಚೂರಾಗಿ ಸೀಳಿ ಕೊಲ್ಲಲಿ.

೬೬. ಆಸ್ಥಳದಿಂದ ತಪ್ಪಿಸಿಕೊಂಡ ಇವನು ಬಳಿಕ ಅನುಕ್ರಮವಾಗಿ ಹಂದಿಯಾಗಿಯೂ, ಎಮ್ಮೆಯಾಗಿಯೂ, ಕೋಳಿಯಾಗಿಯೂ, ಮೊಲವಾಗಿಯೂ ನರಿಯಾಗಿಯೂ ಹುಟ್ಟಲಿ.

ಯಾಂ ಯಾಂ ಯಾತಿ ಪುನರ್ಜಾತಿಂ ತತ್ರ ಭಕ್ಷ್ಯೋ ಭವೇತ್ತು ಸಃ ।
ಕರ್ಮಕ್ಷಯೇಽನ್ಯಥಾ ನಾಸ್ತಿ ಮಯಾ ಪೂರ್ವಂ ವಿನಿರ್ಮಿತಂ ॥ ೬೭ ॥
ಪ್ರಾಪ್ಯ ಮಾನುಷತಾಂ ಪಶ್ಚಾತ್ಪುನರ್ವ್ಯಾಧೋ ಭವಿಷ್ಯತಿ ।
ಅನ್ಯಥಾ ನಿಷ್ಕೃತಿರ್ನಾಸ್ತಿ ಜಾತಿಜನ್ಮಶತೈರಪಿ ॥ ೬೮ ॥
ಉಚ್ಛಿಷ್ಟಾನ್ನಪ್ರದಾತಾರಂ ಪಾಪಾಚಾರಮಧಾರ್ಮಿಕಂ ।
ಅಂಗಾರೈಃ ಪಚತಾಂ ಚೈನಂ ತ್ರೀಣಿ ವರ್ಷಶತಾನಿ ಚ ॥ ೬೯ ॥
ಭಿನ್ನಚಾರಿತ್ರದುಃಶೀಲಾ ಭರ್ತುರ್ವ್ಯಲೀಕಕಾರಿಣೀ ।
ಆಯಸಾನ್ಪುರುಷಾನ್ಸಪ್ತ ಹ್ಯಾಲಿಂಗತು ಸಮಂತತಃ ॥ ೭೦ ॥
ತತಶ್ಶುನೀ ಭವೇತ್ಪಶ್ಚಾತ್ಸೂಕರೀ ಚ ತತಃ ಪರಂ ।
ಕರ್ಮಕ್ಷಯೇ ತತಃ ಪಶ್ಚಾನ್ಮಾನುಷೀ ದುಃಖಿತಾ ಭವೇತ್ ।
ನ ಚ ಸೌಖ್ಯಮವಾಪ್ನೋತಿ ತೇನ ದುಃಖೇನ ದುಃಖಿತಾ ॥ ೭೧ ॥

---

೬೭. ಇವನು ಹುಟ್ಟುವ ಹಂದಿಯೇ ಮೊದಲಾದ ಎಲ್ಲಾ ಜನ್ಮಗಳಲ್ಲಿಯೂ ಇವನು ಭಕ್ಷ್ಯವಾಗಲಿ. ಹಾಗಿಲ್ಲವಾದರೆ ನಾನು ಮೊದಲೇ ನಿರ್ಣಯಿಸಿರುವಂತೆ ಇವನ ಕರ್ಮವು ಸವೆಯಲಾರದು.

೬೮. ಹಾಗೆ ಆ ಜನ್ಮಗಳೆಲ್ಲವೂ ಕಳೆದ ಬಳಿಕ ಇವನು ಮನುಷ್ಯನಾಗಿ ಜನಿಸಿ ಅನಂತರ ಮತ್ತೆ ಬೇಡನಾಗುವನು. ಇಲ್ಲವಾದರೆ ಇವನಿಗೆ ನೂರಾರು ಜಾತಿಗಳಲ್ಲಿ ಜನಿಸಿದರೂ ಪಾಪಪರಿಹಾರವಾಗಲಾರದು.

೬೯. ಎಂಜಲನ್ನವನ್ನು ದಾನಮಾಡಿದ ಅಧಾರ್ಮಿಕನಾದ ಈ ಪಾಪಿಯನ್ನು ಮುನ್ನೂರುವರ್ಷಕಾಲ ಕೆಂಡಗಳಿಂದ ಸುಡಬೇಕು.

೭೦. ದುಶ್ಚರಿತ್ರೆಯೂ, ದುಶ್ಶೀಲೆಯೂ, ಪತಿಗೆ ಅಪ್ರಿಯವನ್ನಾಚರಿಸುವವಳೂ ಆದ ಇವಳು ಸುತ್ತಲೂ ಇರುವ ಏಳು ಉಕ್ಕಿನ ಪುರುಷಮೂರ್ತಿಗಳನ್ನು ಆಲಂಗಿಸಿಕೊಳ್ಳಲಿ.

೭೧. ಬಳಿಕ ಇವಳು ಹೆಣ್ಣುನಾಯಿಯೂ, ಆಮೇಲೆ ಹೆಣ್ಣುಹಂದಿಯೂ ಆಗಿ ಜನಿಸಲಿ. ಕರ್ಮಕ್ಷಯವಾಗಲು ಬಳಿಕ ದುಃಖಿತೆಯಾದ ಮನುಷ್ಯಳಾಗಲಿ, ಆ ದುಃಖದಿಂದ ಪೀಡಿತಳಾಗಿ ಇವಳು ಸುಖವನ್ನು ಪಡೆಯದಿರುವಳು.

ಅನೇನ ಭೃತ್ಯಾ ಬಹವಶ್ಶ್ರಾಂತಾಶ್ಶಾಂತಾಃ ಪ್ರವಾಹಿತಾಃ ॥ ೭೨ ॥
ಭಕ್ಷ್ಯಂ ಭೋಜ್ಯಂ ಚ ಪಾನಂ ಚ ನತೇಷಾಮುಪಪಾದಿತಂ ।

ಅನುಮೋನೇ ಪ್ರಜಾ ದೃಷ್ಟ್ವಾ ಲಿಪ್ಸಮಾನೋ ದುರಾತ್ಮವಾನ್ ॥ ೭೩ ॥

ಏನಂ ಕುರುತ ಭದ್ರಂ ವೋ ಮಮ ಪಾರ್ಶ್ವೇ ತು ದುರ್ಮತಿಂ ।
ರೌರವೇ ನರಕೇ ಘೋರೇ ಸರ್ವದೋಷಸಮನ್ವಿತೇ ॥ ೭೪ ॥

ಸರ್ವಕರ್ಮಾಣಿ ಕುರ್ವಾಣಂ ಕ್ಷಪಯಧ್ವಂ ದುರಾಸದಂ ।
ವರ್ಷಾಣಾಂ ತು ಸಹಸ್ರಾಣಿ ತೈಸ್ತೈಃ ಕರ್ಮಭಿರಾವೃತಂ ॥ ೭೫ ॥

ಪ್ರಕ್ಷಿಪ್ಯತಾಮಯಂ ಪಶ್ಚಾದ್ದಸ್ಯುಜಾತೌ ದುರಾತ್ಮವಾನ್ ।
ಜಾಯತಾಮುರಗಃ ಪಶ್ಚಾತ್ತತಃ ಕರ್ಮ ಸಮಾಶ್ರಯೇತ್ ॥ ೭೬ ॥

೭೨-೭೬. ಇವನು ಶ್ರಾಂತರಾದ ಹಲವರು ಸೇವಕರನ್ನು ಹೆಚ್ಚು ಹೊರೆಯನ್ನು ಹೊರಿಸಿ ಬಳಲಿಸಿದನು. ಅವರಿಗೆ ಭಕ್ಷ್ಯಭೋಜ್ಯ ಪಾನೀಯಗಳನ್ನು ಕೊಡಲಿಲ್ಲ. ತನ್ನ ಸಂತೋಷಕ್ಕಾಗಿ ಪ್ರಜೆಗಳನ್ನು ಹಿಂಸಿಸುತ್ತಿದ್ದನು. ನಿಮಗೆ ಶುಭವಾಗಲಿ. ನನ್ನ ಪಾರ್ಶ್ವದಲ್ಲಿರುವ ಇವನನ್ನು ಸರ್ವದೋಷಗಳಿಂದಲೂ ಕೂಡಿದ ಘೋರವಾದ ರೌರವನರಕದಲ್ಲಿ ಮಾಡಲು ಕಷ್ಟವಾದ ಸರ್ವಕರ್ಮಗಳನ್ನು ಸಾವಿರವರ್ಷಗಳು ಮಾಡಿಸಿ ಕ್ಷೀಣಗೊಳಿಸಿರಿ. ಬಳಿಕ ಈ ದುರಾತ್ಮನನ್ನು ದಸ್ಯು (ಕಳ್ಳರ) ಜಾತಿಯಲ್ಲಿ ಹುಟ್ಟುವಂತೆ ಹಾಕಿರಿ. ಆಮೇಲೆ ಇವನು ಹಾವಾಗಿ ಹುಟ್ಟಿ ಕರ್ಮಮಾಡಲಿ.

ತತಃ ಪಶ್ಚಾದ್ಭವೇತ್ಪಾಪಶ್ಚೇತರಃ ಸರ್ವಪಾಪಕೃತ್ ।
ಸೂಕರಸ್ತು ಭವೇತ್ಪಶ್ಚಾನ್ಮೇಷಸ್ಸಂಜಾಯತೇ ಪುನಃ ॥ ೭೭ ॥

ಹಸ್ತ್ಯಶ್ವಶ್ಚ ಶೃಗಾಲಶ್ಚ ಸೂಕರೋ ಬಕ ಏವ ಚ ।
ತತೋ ಜಾತಸ್ತು ಸರ್ವೇಷು ಸಂಸಾರೇಷು ಪುನಃ ಪುನಃ ।
ವರ್ಷಾಣಾಮಯುತಂ ಸಾಗ್ರಂ ತತೋ ಮಾನುಷತಾಂ ವ್ರಜೇತ್॥ ೭೮ ॥

ಪಂಚಗರ್ಭೇಷು ಸಾಪತ್ಸು ಪಂಚ ಜಾತೋ ಮ್ರಿಯೇತ ಸಃ ।
ಅಪ್ಸೋಗಂಡೋ ಮ್ರಿಯೇತ್ಪಂಚ ಕರ್ಮಶೇಷಕ್ಷಯೇ ತು ಸಃ ॥ ೭೯ ॥

ತತೋ ಮಾನುಷತಾಂ ಯಾತಿ ಚೈಷ ಕರ್ಮವಿನಿರ್ಣಯಃ ॥ ೮೦ ॥

೭೭-೭೮. ಆ ಜನ್ಮವೂ ಕಳೆದ ಬಳಿಕ ಇತರ ಕೆಲವು ಜನ್ಮಗಳಲ್ಲಿಯೂ ಹುಟ್ಟಿ ಆಮೇಲೆ ಅನುಕ್ರಮವಾಗಿ ಹಂದಿಯೂ, ಕುರಿಯೂ, ಆನೆಯೂ, ಕುದುರೆಯೂ, ನರಿಯೂ, ಬಕನೂ ಆಗಿ ಸರ್ವಸಂಸಾರಗಳಲ್ಲಿಯೂ ಮತ್ತೆಮತ್ತೆ ಹತ್ತು ಸಾವಿರವರ್ಷಕಾಲ ಪೂರ್ಣವಾಗುವವರೆಗೆ ಹುಟ್ಟಿ ಬಳಿಕ ಮನುಷ್ಯನಾಗಿ ಜನಿಸಲಿ.

೭೯-೮೦. ಆ ಮನುಷ್ಯಜನ್ಮದಲ್ಲಿಯೂ ಐದುಸಾರಿ ಗರ್ಭದಲ್ಲಿಯೇ ಆಪತ್ತುಗಳಿಂದ ಸಾಯುವನು. ಮತ್ತೈದುಸಾರಿ ಮಗುವಾಗಿ ಹುಟ್ಟಿ ಸಾಯುವನು. ಇನ್ನು ಐದು ಮನುಷ್ಯಜನ್ಮಗಳಲ್ಲಿ ನೀರಲ್ಲಿ ಮುಳುಗಿ (ಜಲಗಂಡದಿಂದ) ಸಾಯುವನು. ಹೀಗೆ ಕರ್ಮಶೇಷವು ಕಳೆದುಹೋದ ಬಳಿಕ ಸರಿಯಾದ ಮನುಷ್ಯನಾಗುವನು. ಇದು ಕರ್ಮವಿನಿರ್ಣಯವಾಗಿದೆ.

ಪಾಪಸ್ಯ ಸುಕೃತಸ್ಯಾಥ ಪ್ರಜಾನಾಂ ವಿನಿಪಾತನೇ ।
ಭೂತಾನಾಂ ಚಾಪ್ಯಸಂಮಾನಂ ದುಷ್ಪ್ರಹಾರಶ್ಚ ಸರ್ವಶಃ ।
ಕೃತಃಸ್ಸ್ವಯಂಭುವಾ ಪೂರ್ವಂ ಕರ್ಮಪಾಕೋ ಯಥಾರ್ಥವತ್॥ ೮೧ ॥

ಇತಿ ಶ್ರೀವರಾಹಪುರಾಣೇ ಸಂಸಾರಚಕ್ರೇ ನಾರಕಿದಂಡಕರ್ಮವಿಪಾಕ ವರ್ಣನಂ ನಾಮ ದ್ವ್ಯಧಿಕದ್ವಿಶತತಮೋಽಧ್ಯಾಯಃ

---

೮೧. ಪ್ರಜೆಗಳ ಪಾಪಪುಣ್ಯಗಳ ಪರಿಹಾರಕ್ಕಾಗಿ ಅವರು ಇತರ ಪ್ರಾಣಿಗಳಾಗಿ ಉದಿಸಿದಾಗಲೂ ಎಲ್ಲೆಲ್ಲೂ ತಿರಸ್ಕಾರಪುರಸ್ಕಾರಗಳೂ ಕಷ್ಟಸುಖಗಳೂ ಉಂಟಾಗುವಂತೆ ಪೂರ್ವದಲ್ಲೇ ಬ್ರಹ್ಮನು ಯಥಾರ್ಥವಾಗಿ ಕರ್ಮ ಫಲವನ್ನು ನಿರ್ಣಯಮಾಡಿರುವನು.

ಅಧ್ಯಾಯದ ಸಾರಾಂಶ—

ನಚಿಕೇತನು ಋಷಿಗಳೇ ಮೊದಲಾದವರಿಗೆ ಯಮಲೋಕದಲ್ಲಿ ನಾರಕಿಗಳಿಗಾಗುವ ದಂಡನೆಯನ್ನೂ ಕರ್ಮವಿಪಾಕವಿಚಾರವನ್ನೂ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರೆರಡನೆಯ ಅಧ್ಯಾಯವು.

॥ ಶ್ರೀ ॥

ತ್ರ್ಯಧಿಕದ್ವಿಶತತಮೋಽಧ್ಯಾಯಃ

ಅಥ ಪಾಪಸಮೂಹಾನುಕ್ರಮವರ್ಣನಂ

॥ ಋಷಿಪುತ್ರ ಉವಾಚ ॥

ಅನ್ಯಾನ್ಯಪಿ ಚ ಪಾಪಾನಿ ಚಿತ್ರಗುಪ್ತೋ ದಿದೇಶ ಹ ।
ವ್ಯಾಮಿಶ್ರಾನ್ಕಥ್ಯಮಾನಾಂಶ್ಚ ಶೃಣುಧ್ವಂ ತಾನ್ಮಹೌಜಸಃ ॥ ೧ ॥

ಶೀಲಸಂಯಮಹೀನಾನಾಂ ಕೃಷ್ಣಪಕ್ಷಾನುಗಾಮಿನಾಂ ।
ಮಹಾಪಾಪೈರುಪೇತಾನಾಂ ಕಥ್ಯತಾಂ ತತ್ಪರಾಭವಂ ॥ ೨ ॥

ರಾಜದ್ವಿಷ್ಟಾ ಗುರುದ್ವಿಷ್ಟಾಃ ಸರ್ವೇ ತೇ ವೈ ವಿಗರ್ಹಿತಾಃ ।
ಅವಿಶ್ವಾಸ್ಯಾ ಹ್ಯಸಂಭಾಷ್ಯಾಃ ಕುಕ್ಷಿಮಾತ್ರಪರಾಯಣಾಃ ॥ ೩ ॥

ಇನ್ನೂರಮೂರನೆಯ ಅಧ್ಯಾಯ

ಪಾಪಸಮೂಹಾನುಕ್ರಮವರ್ಣನೆ.

೧. ನಚಿಕೇತ—ಮಹೌಜಸರೇ, ಚಿತ್ರಗುಪ್ತನು ಸಂಕೀರ್ಣ (ಮಿಶ್ರ)ವಾದ ಬೇರೆಯ ಹಲವು ಪಾಪಗಳನ್ನೂ ತಿಳಿಸಿದನು. ನಾನು ಹೇಳುವ ಅವನ್ನೂ ಕೇಳಿ.

೨. ಶೀಲವ್ರತಹೀನರೂ, ತಮೋಮಾರ್ಗವನ್ನನುಸರಿಸುವವರೂ, ಮಹಾಪಾಪಯುಕ್ತರೂ ಆದವರಿಗೆ ಆ ಪಾಪಗಳಿಂದಾಗುವ ಪರಾಭವವನ್ನು ಹೇಳಿರಿ.

೩. ರಾಜದ್ವೇಷಿಗಳೂ, ಗುರುದ್ವೇಷಿಗಳೂ, ಉದರಪೋಷಣಮಾತ್ರದಲ್ಲಿ ನಿರತರೂ ನಿಂದ್ಯರಾದವರು. ಅವರು ವಿಶ್ವಾಸಕ್ಕೂ ಸಂಭಾಷಣೆಗೂ ಅನರ್ಹರು.

ಹಿಂಸಾವಿಹಾರಿಣಃ ಕ್ರೂರಾಸ್ಸೂಚಕಾಃ ಕಾರ್ಯದೂಷಕಾಃ ।
ಗವೇಡಕಸ್ಯ ವಧಕಾ ಸುಹಿಷಾಜಾದಿಕಸ್ಯ ಚ ॥ ೪ ॥

ದಾವಾಗ್ನಿಂ ಯೇ ಚ ಮುಂಚಂತಿ ಯೇ ಚ ಸೌಕರಿಕಾಸ್ತಥಾ ।
ತತ್ರ ಕಾಲಮಸಂಖ್ಯೇಯಂ ಪಚ್ಯಂತೇ ಪಾಪಕಾರಿಣಃ ॥ ೫ ॥

ಕರ್ಮಕ್ಷಯಾದ್ಯದಾ ಭೂಯೋ ಮಾನುಷ್ಯಂ ಪ್ರಾಪ್ನುವಂತಿ ತೇ ।
ಅಲ್ಪಾಯುಷೋ ಭವಂತೀಹ ವ್ಯಾಧಿಗ್ರಸ್ತಾಶ್ಚ ನಿತ್ಯಶಃ ॥ ೬ ॥

ಗರ್ಭ ಏವ ವಿಪದ್ಯಂತೇ ಮ್ರಿಯಂತೇ ಬಾಲಕಾಸ್ತಥಾ ।
ಪರಿರಿಂಗರತಾಃ ಕೇಚಿನ್ಮ್ರಿಯಂತೇ ಪುರುಷಾಧಮಾಃ ॥ ೭ ॥

ಕಾಷ್ಠವಂಶೇ ಚ ಶಸ್ತ್ರೇ ಚ ವಾಯುನಾ ಜ್ವಲನೇನ ಚ ।
ತೋಯೇನ ವಾ ಪಾಶಬಂಧೈಃ ಪತನೇನ ವಿಷೇಣ ವಾ ॥ ೮ ॥

೪-೫. ಹಿಂಸಾವಿಹಾರಿಗಳಾದ ಕ್ರೂರಿಗಳೂ, ಚಾಡಿಕೋರರೂ, ಸತ್ಕಾರ್ಯ ದೂಷಕರೂ, ಗೋವುಗಳನ್ನೂ, ಆಡುಕುರಿಗಳನ್ನೂ, ಎಮ್ಮೆಗಳನ್ನೂ, ಹಂದಿಗಳನ್ನೂ, ಕೊಲ್ಲುವವರೂ, ಕಾಡಿಗೆ ಬೆಂಕಿಯನ್ನಿಡುವವರೂ, ಆದ ಪಾಪಿಗಳು ಆ ನರಕದಲ್ಲಿ ಲೆಕ್ಕವಿಲ್ಲದಷ್ಟು ಕಾಲ ಬೇಯುವರು.

೬. ಅವರು ಕರ್ಮನಾಶವಾದ ಬಳಿಕ ಮತ್ತೆ ಮನುಷ್ಯಜನ್ಮವನ್ನು ಪಡೆದರೂ ಯಾವಾಗಲೂ ರೋಗಪೀಡಿತರೂ, ಅಲ್ಪಾಯುಗಳೂ ಆಗುವರು.

೭-೮. ಕೆಲವರು ಗರ್ಭದಲ್ಲಿಯೇ ಸಾಯುವರು. ಕೆಲವರು ಬಾಲಕರಾಗಿ ಸಾಯುವರು. ಕೆಲವರು ಪುರುಷಾಧಮರು ಪರಿರಿಂಗ (ಸುತ್ತುತಿರುಗುವುದರಲ್ಲಿ) ರತರಾಗಿಯೋ, ಬಿದಿರುದೊಣ್ಣೆಯ ಏಟಿನಿಂದಲೋ, ಶಸ್ತ್ರದಿಂದಲೊ, ಅಗ್ನಿಯಿಂದಲೋ, ನೀರಿನಿಂದಲೋ, ನೇಣಿನಿಂದಲೋ, ಬೀಳುವುದರಿಂದಲೋ ಅಥವಾ ವಿಷದಿಂದಲೋ ಸಾಯುವರು.

ಮಾತಾಪಿತೃವಧಂಕಷ್ಟಂ ಮಿತ್ರಸಂಬಂಧಿಬಂಧಜಂ ॥ ೯ ॥

ಬಹುಶಃ ಪ್ರಾಪ್ನುವಂತ್ಯೇತೇ ವಿದ್ರವಂಚಾಪ್ಯಭೀಕ್ಷ್ಣಶಃ ।
ಪ್ರಾಣಾತಿಪಾತನಂ ತೇ ವೈ ಪ್ರಾಪ್ನುವಂತಿ ಯಥಾ ತಥಾ ॥ ೧೦ ॥

ಲೋಹಕಾಃ *ಕಾರುಕಾಶ್ಚೈವ ಗರ್ಭಾಣಾಂ ವಿನಿಹಿಂಸಕಾಃ ।
ಮೂಲಕರ್ಮಕರಾ ಯೇ ಚ ಗರದಾಃ ಪುರದಾಹಕಾಃ ॥ ೧೧ ॥

ಯೇ ಚ ಪಂಜರಕರ್ತಾರೋ ಯೇ ಚ ಶೂಲೋಪಘಾತಕಾಃ ।
ಪಿಶುನಾಃ ಕಲಹಾಶ್ಚೈವ ಯೇ ಚ ಮಿಥ್ಯಾವಿದೂಷಕಾಃ ॥ ೧೨ ॥

ಗೋಕುಂಜರಖರೋಷ್ಟ್ರಾಣಾಂ ಚರ್ಮಕಾ ಮಾಂಸಭೇದಕಾಃ ।
ಉದ್ವೇಜನಕರಾಶ್ಚಂಡಾಃ ಪಚ್ಯಂತೇ ನರಕೇಷು ತೇ ॥ ೧೩ ॥

೯-೧೦. ಅಲ್ಲದೆ ಅವರು ತಾಯಿತಂದೆಗಳ ಕೊಲೆಯ ಮತ್ತು ಮಿತ್ರ ಸಂಬಂಧಿಗಳ ಬಂಧನದ ದುಃಖವನ್ನು ಹಲವು ವೇಳೆ ಪಡೆಯುವರು. ಅನೇಕಾವೃತ್ತಿ, ಬೇಕಾದ ಕಾರ್ಯದಿಂದ ಹಿಂದಿರುಗುವಿಕೆಯನ್ನು ಅಥವಾ ಓಡುಹೋಗುವಿಕೆಯನ್ನೂ ಹಾಗೂ ಹೀಗೂ ಪ್ರಾಣಾಪಾಯವನ್ನೂ ಪಡೆಯುವರು.

೧೦-೧೩. ಕಂಚುಗಾರರೂ, *ಕಾರುಕರೂ, ಗರ್ಭಹಿಂಸಕರೂ, ಮೂಲಿಕೆಗಳಿಂದ ಸ್ತಂಭನವಶೀಕರಣಾದಿಗಳನ್ನು ಮಾಡುವವರೂ, ವಿಷಪ್ರಯೋಗಿಗಳೂ, ಪಟ್ಟಣಗಳನ್ನು ಸುಡುವವರೂ, ಪಂಜರಗಳನ್ನು ಮಾಡುವವರೂ, ಶೂಲಕ್ಕೇರಿಸಿ ಕೊಲ್ಲುವವರೂ, ಚಾಡಿಕೋರರೂ, ಜಗಳಗಂಟಿಗರೂ, ಸುಳ್ಳಾದ ದೂಷಣೆಗಳನ್ನು ಮಾಡುವವರೂ, ಗೋವು, ಆನೆ,ಕತ್ತೆ ಒಂಟೆಗಳ ಚರ್ಮವನ್ನು ಸುಲಿಯುವವರೂ, ಮಾಂಸವನ್ನು ಕತ್ತರಿಸುವವರೂ ಆದ ಆ ಭಯಂಕರರಾದ ಕ್ರೂರಿಗಳು ನರಕಗಳಲ್ಲಿ ಬೇಯಿಸಲ್ಪಡುವರು.

---

* ಕಾರುಕ- ನೆಯ್ಗೆ, ಕ್ಷೌರ ಮೊದಲಾದ ಉದ್ಯೋಗಗಳನ್ನು ಮಾಡುವನು.

ತತ್ರ ಕಾಲಂ ತು ಸಂಪ್ರಾಪ್ಯ ಯಾತನಾಶ್ಚ ಸುದುಸ್ಸಹಾಃ |
ಕರ್ಮಕ್ಷಯೋ ಯದಾ ಭೂಯೋ ಮಾನುಷ್ಯಂ ಪ್ರಾಪ್ನುವಂತಿ ತೇ ||
ಹೀನಾಂಗಾಸ್ಸದರಿದ್ರಾಶ್ಚ ಭವಂತಿ ಪುರುಷಾಧಮಾಃ || ೧೪ ||

ಶ್ರವಣಚ್ಛೇದನಂ ಚೈವ ನಾಸಾಚ್ಛೇದನಮೇವ ಚ |
ಛೇದನಂ ಹಸ್ತಪಾದಾನಾಂ ಪ್ರಾಪ್ನುವಂತಿ ಸ್ವಕರ್ಮಣಾ || ೧೫ ||

ಶಾರೀರಂ ಮಾನಸಂ ದುಃಖಂ ಪ್ರಾಪ್ನುವಂತಿ ಪುನಃ ಪುನಃ |
ಗಲಬಾಧಾಸ್ತಥೋಗ್ರಾಶ್ಚ ತಥಾ ಮಸ್ತಕವೇದನಾಃ ||
ಕುಕ್ಷ್ಯಾಮಯಂ ತಥಾ ತೀವ್ರಂ ಪ್ರಾಪ್ನುವಂತಿ ನರಾಧಮಾಃ || ೧೬ ||

ಜಡಾಂಧಬಧಿರಾ ಮೂಕಾಃ ಪಂಗವಃ ಪಾದಸರ್ಪಿಣಃ || ೧೭ ||

ಏಕಪಕ್ಷಹತಾಃ ಕಾಣಾಃ ಕುನಖಾಶ್ಚಾಮಯಾವಿನಃ |
ಕುಬ್ಜಾಃ ಖಂಜಾಸ್ತಥಾ ಹೀನಾ ವಿಕಲಾಶ್ಚ ಘಟೋದರಾಃ || ೧೮ ||

---

೧೪. ಆ ನರಕದಲ್ಲಿ ಅತಿ ದುಸ್ಸಹವಾದ ಯಾತನೆಗಳನ್ನು ಪಡೆದು ಕಾಲಾಂತರದಲ್ಲಿ ಕರ್ಮಕ್ಷಯವಾದ ಬಳಿಕ ಮತ್ತೆ ಮನುಷ್ಯರಾಗಿ ಹುಟ್ಟುವ ರಾದರೂ ಆ ಪುರುಷಾಧಮರು ಅಂಗಹೀನರೂ, ಅತಿದರಿದ್ರರೂ, ಆಗುವರು.

೧೫. ಅವರು ತಮ್ಮ ಕರ್ಮದಿಂದಲೇ ಕಿವಿಮೂಗುಗಳನ್ನೂ, ಕೈಕಾಲು ಗಳನ್ನೂ ಕತ್ತರಿಸಿಕೊಳ್ಳುವರು.

೧೬. ಆ ನರಾಧಮರು ಶಾರೀರಕವಾದ ಮತ್ತು ಮಾನಸಿಕವಾದ ದುಃಖ ವನ್ನು ಮತ್ತೆಮತ್ತೆ ಪಡೆಯುವರು. ಉಗ್ರವಾದ ಕತ್ತುಗಂಟಲುನೋವನ್ನೂ, ತಲೆನೋವನ್ನೂ, ಉದರವ್ಯಾಧಿಯನ್ನೂ ಪಡೆಯುವರು.

೧೭–೧೮. ಅದೂ ಅಲ್ಲದೆ ಆ ಹೀನರು ಜಡರೂ, ಕುರುಡರೂ, ಕಿವುಡರೂ, ಮೂಗರೂ, ಕುಂಟರೂ, ಹೆಳವರೂ, ಪಾರ್ಶ್ವವಾಯುಪೀಡಿತರೂ, ಉಗುರುಗೆಟ್ಟ ವರೂ, ಕುಬ್ಜರೂ, ಮಹೋದರವುಳ್ಳವರೂ, ಇತರ ರೋಗವುಳ್ಳವರೂ ಆಗುವರು.

ಗಲತ್ಕುಷ್ಠಾಃ ಶ್ವಿತ್ರಕುಷ್ಠಾ ಭವಂತಿ ಸ್ವೈಶ್ಚ ಕರ್ಮಭಿಃ |
ವಾತಾಂಡಾಶ್ಚಾಂಡಹೀನಾಶ್ಚ ಪ್ರಮೇಹಮಧುಮೇಹಿನಃ || ೧೯ ||

ಯೋನಿಶೂಲಾಕ್ಷಿಶೂಲಾಶ್ಚ ಶ್ವಾಸಹೃದ್ಗುಹ್ಯಶೂಲಿನಃ |
ಪಿಂಡಕಾವರ್ತಭೇದೈಶ್ಚ ಪ್ಲೀಹಗುಲ್ಮಾದಿರೋಗಿಣಃ || ೨೦ ||

ಬಹುಭಿರ್ದಾರುಣೈರ್ಘೋರೈರ್ವ್ಯಾಧಿಭಿಸ್ಸಮನುದ್ಗತಾಃ |
ಇತ್ಯೇತಾನ್ಹಿಂಸಕಾನ್ಕ್ರೂರಾನ್ಘಾತಯಂತು ಸುದಾರುಣಾನ್ || ೨೧ ||

ಮಿಥ್ಯಾಪ್ರಲಾಪಿನೋ ದೂತಾನ್ಪಾಚಯಂತು ಯಥಾಕ್ರಮಂ || ೨೨ ||

ಕರ್ಕಶಾಃ ಪುರುಷಾಸತ್ಯಾ ಯೇ ಚ ಯೋಷಾನಿರರ್ಥಕಾಃ ।
ಏಷಾಂ ಚತುರ್ವಿಧಾ ಭಾಷಾ ಯಾ ಮಿಥ್ಯಾಪ್ಯಭಿಧೀಯತೇ ||
ಹಾಸ್ಯರೂಪೇಣ ಯಾ ಭಾಷಾ ಚಿತ್ರರೂಪೇಣ ವಾ ಪುನಃ ॥ ೨೩ ||

೧೯–೨೧. ಅವರು ಕೀವು ಸೋರುವ ಕುಷ್ಠರೋಗವುಳ್ಳವರೂ, ತೊನ್ನು ಹತ್ತಿದವರೂ, ಅಂಡವಾಯುವುಳ್ಳವರೂ, ಪ್ರಮೇಹಮಧುಮೇಹವುಳ್ಳವರೂ,ಅಂಡ ಹೀನರೂ, ಯೋನಿಶೂಲೆ ಶ್ವಾಸಕೋಶಹೃದಯಶೂಲೆಗಳುಳ್ಳವರೂ, ಜಠರಾ ವಯವವ್ಯತ್ಯಾಸಗಳಿಂದ ಪ್ಲೀಹಗುಲ್ಮಾದಿಗಳ ರೋಗಗಳುಳ್ಳವರೂ, ಇನ್ನೂ ಭಯಂಕರವಾದ ಬಹುಕಠಿನರೋಗಗಳಿಂದ ಪೀಡಿತರೂ ಆಗುವರು. ಹಿಂಸಕ ರಾದ ಈ ಕ್ರೂರಿಗಳನ್ನು ಘೋರವಾಗಿ ಘಾತಿಸಬೇಕು.

೨೨. ಸುಳ್ಳುಮಾತುಗಳನ್ನಾಡುವ ದೂತರನ್ನು ಯಥಾಕ್ರಮವಾಗಿ ಬೇಯಿಸಬೇಕು.

೨೩–೨೫. ಯಾರು ಕಠಿನರೂ, ಅಸತ್ಯವಂತರೂ ಆಗಿ ಸ್ತ್ರೀಯರನ್ನು ಹಾಳುಮಾಡುವರೋ, ಯಾರು ನಾಲ್ಕು ವಿಧವಾಗಿ ಎಂದರೆ ಹಾಸ್ಯರೂಪ ವಾಗಿಯಾಗಲಿ, ವಿಚಿತ್ರರೂಪವಾಗಿಯಾಗಲಿ, ರಹಸ್ಯವೋ ಅರಹಸ್ಯವೋ ಆದ ಚಾಡಿಯಾಗಿಯಾಗಲಿ, ನಿಂದೆಯಾಗಿಯಾಗಲಿ ಸುಳ್ಳು ಹೇಳುವರೋ, ಉದ್ವೇಗ ವನ್ನುಂಟುಮಾಡುವುದಾಗಿಯೂ, ಕಠಿನವಾಗಿಯೂ, ಲೋಕನಿಂದ್ಯವಾಗಿಯೂ,

ಅರಹಸ್ಯಂ ರಹಸ್ಯಂ ವಾ ಪೈಶುನ್ಯೇನ ತು ನಿಂದನಾತ್ ।
ಉದ್ವೇಗಜನನಾ ವಾಪಿ ಕಟುಕಾ ಲೋಕಗರ್ಹಿತಾಃ ॥ ೨೪ ॥

ಸ್ನೇಹಕ್ಷಯಕರಾಂ ರೂಕ್ಷಾಂ ಭಿನ್ನವೃತ್ತವಿಭೂಷಿತಾಂ ।
ಕದಲೀಗರ್ಭನಿಸ್ಸಾರಾಂ ಮರ್ಮಸ್ಪೃಕ್ಕಟುಕಾಕ್ಷರಾಂ ॥ ೨೫ ॥

ಸ್ವರಹೀನಾಮಸಂಖ್ಯೇಯಾಂ ಭಾಷಂತೇ ಚ ನಿರರ್ಥಕಂ ।
ಅಯಂತ್ರಿತಮುಖಾ ಯೇ ಚ ಯೇ ನಿಬದ್ಧಾಃ ಪ್ರಲಾಪಿನಃ ॥ ೨೬ ॥

ದೂಷಯಂತಿ ಹಿ ಜಲ್ಪಂತೋಽನ್ಯಜವೋ ನಿಷ್ಠುರಾಶ್ರಿತಾಃ ।
ನಿಂದಯಾ ಗತಲಜ್ಜಾಶ್ಚ ಮೂರ್ಖಾ ಮರ್ಮವಿಭೇದಿನಃ ॥ ೨೭ ॥

ನ ಮರ್ಷಯಂತಿಯೇಽನ್ಯೇಷಾಂ ಕೀರ್ತ್ಯಮಾನಾಂಛುಭಾನ್ಗುಣಾನ್ ।
ದುರ್ವಾಚಃ ಪರುಷಾಂಶ್ಚಂಡಾನ್ಬಂಧಯಧ್ವಂ ನರಾಧಮಾನ್ ॥ ೨೮ ॥

ತತಸ್ತಿರ್ಯಕ್ತ್ರಜಾಯಂತೇ ಬಹುಧಾ ಕೀಟಪಕ್ಷಿಣಃ ॥ ೨೯ ॥

ಸ್ನೇಹನಾಶಕವಾಗಿಯೂ, ಕ್ರೂರವಾಗಿಯೂ, ದುಶ್ಚರಿತ್ರೆಯಿಂದ ಕೂಡಿಯೂ ಬಾಳೆಯ ಗಿಡದ ಗರ್ಭದಂತೆ ನಿಸ್ಸಾರವಾಗಿಯೂ, ಮರ್ಮಭೇದಕವಾಗಿ ಕಠಿಣಾಕ್ಷರಗಳಿಂದ ಕೂಡಿಯೂ, ಅಪಸ್ವರದಿಂದ ಕೂಡಿಯೂ ಇರುವ ನಿರರ್ಥಕವಾದ ಲೆಕ್ಕವಿಲ್ಲದ ಮಾತುಗಳನ್ನಾಡುವರೋ, ಯಾರು ಬಾಯ ಹಿಡಿತವಿಲ್ಲದೆ ಸ್ವೇಚ್ಛೆಯಾಗಿ ಮಾತನಾಡುವರಾಗಿಯೂ, ಕುಟಿಲರಾಗಿಯೂ ಇತರರನ್ನು ದೂಷಿಸುವರೋ, ಕಠೋರಶಠರೋ, ನಿಂದೆಯಿಂದಲೂ ಲಜ್ಜೆಗೊಳ್ಳದ ಮರ್ಮಭೇದಿಗಳಾದ ಮೂರ್ಖರೋ, ಯಾರು ಇತರರ ಒಳ್ಳೆಯ ಗುಣಗಳ ಶ್ಲಾಘನೆಯನ್ನು ಸಹಿಸರೋ ಆ ದುರ್ವಾಕ್ಯೂ, ಕಾಠಿನ್ಯವೂ ಉಳ್ಳ ಕ್ರೂರಿಗಳಾದ ನರಾಧಮರನ್ನು ಬಂಧಿಸಿರಿ.

೨೯-೩೦. ಬಳಿಕ ನಾನಾವಿಧವಾಗಿ ಕೀಟಗಳಾಗಿಯೂ, ಪಕ್ಷಿಗಳಾಗಿಯೂ ತಿರ್ಯಗ್ಜನ್ಮದಲ್ಲಿ ಉದಿಸುವರು ಲೋಕದಲ್ಲಿ ದೋಷಕರರಾಗಿಯೂ, ಲೋಕ

ಲೋಕೇ ದೋಷಕರಾಶ್ಚೈವ ಲೋಕದ್ವಿಷ್ಟಾಸ್ತಥಾಪರೇ ।
ತತ್ರ ಕಾಲಂ ಚಿರಂ ಘೋರಂ ಪಚ್ಯಂತೇ ಪಾಪಕಾರಿಣಃ ॥ ೩೦ ॥

ಕರ್ಮಕ್ಷಯೋ ಯದಾ ಭೂಯೋ ಮಾನುಷ್ಯಂ ಪ್ರಾಪ್ನುವಂತಿ ತೇ ।
ಪರಿಭೂತಾ ಅವಿಜ್ಞಾನಾ ನಷ್ಟಚಿತ್ತಾ ಅಕೀರ್ತಯಃ ।
ಅನರ್ಚಾಶ್ಚಾಪ್ಯನರ್ಹಾಶ್ಚ ಸ್ವಪಕ್ಷೇ ಹ್ಯವಮಾನಿತಃ ॥ ೩೧ ॥

ತ್ಯಕ್ತ್ವಾ ಮಿತ್ರಾಣಿ ಮಿತ್ರೇಷು ಜ್ಞಾತಿಭಿಶ್ಚ ನಿರಾಕೃತಾಃ ।
ಲೋಕದೋಷಕರಾಶ್ಚೈವ ಲೋಕದ್ವೇಷ್ಯಾಶ್ಚಯೇ ನರಾಃ ॥ ೩೨ ॥

ಅನ್ಯೈರಪಿ ಕೃತಂ ಪಾಪಂ ತೇಷಾಂ ಪತತಿ ಮಸ್ತಕೇ ।
ವಜ್ರಂ ಶಸ್ತ್ರಂ ವಿಷಂ ವಾಪಿ ದೇಹಾದ್ದೇಹನಿಪಾತನಂ ॥ ೩೩ ॥

ಮಿಥ್ಯಾಪ್ರಲಾಪಿನಾಮೇಷಾಮುಕ್ತಾ ಕ್ಲೇಶಪರಂಪರಾ ॥ ೩೪ ॥

ದ್ವೇಷಿಗಳಾಗಿಯೂ ಅಲ್ಲಿ ಬಹುಕಾಲ ಪಾಪಕಾರಿಗಳಾದ ಅವರು ಘೋರವಾಗಿ ಬೇಯುವರು.

೩೧. ಅವರ ಕರ್ಮವು ನಾಶವಾದಾಗ ಮತ್ತೆ ಮನುಷ್ಯರಾಗಿ ಜನಿಸುವರು ಆ ಮನುಷ್ಯಜನ್ಮದಲ್ಲಿಯೂ ಎಲ್ಲರಿಂದ ತಿರಸ್ಕೃತರೂ, ತಿಳಿಯದವರೂ, ಅಪಕೀರ್ತಿಯುಳ್ಳವರೂ, ಅಪೂಜ್ಯರೂ, ಅನರ್ಹರೂ ತಮ್ಮ ಕಡೆಯವರಿಂದಲೇ ಅವಮಾನಿತರೂ ಆಗುವರು.

೩೨-೩೪. ಮಿತ್ರರನ್ನು ತ್ಯಜಿಸಿ, ಅವರಿಂದಲೂ, ಜ್ಞಾತಿಗಳಿಂದಲೂ ನಿರಾಕೃತರಾಗುವರು. ಲೋಕಕ್ಕೆ ಕೇಡನ್ನುಂಟುಮಾಡುವವರೂ, ಲೋಕದ್ವೇಷಿಗಳೂ ಆದ ಬೇರೆ ಮನುಷ್ಯರು ಮಾಡಿದ ಪಾಪವೂ ಅವರ ತಲೆಯಮೇಲೆ ಬೀಳುವುದು. ಸಿಡಿಲೋ, ಶಸ್ತ್ರವೋ, ವಿಷವೋ ಅವರಿಗೆ ಬಿದ್ದು ಅವರಿಗೆ ದೇಹಾಂತರಗಳನ್ನುಂಟುಮಾಡುವುದು. ಸುಳ್ಳುಹೇಳುವವರಿಗೆ ಈ ಕ್ಲೇಶಪರಂಪರೆಯನ್ನು ಹೇಳಿದೆ.

ಸ್ತೇಯಂ ಹಾರಂ ಪ್ರಹಾರಂ ಚ ನೀತಿಹಾರಂ ತಥೈವ ಚ |
ಸ್ತೇಯಕರ್ಮಾಣಿ ಕುರ್ವಂತಿ ಪ್ರಸಹ್ಯ ಹರಣಾನಿ ಚ || ೩೫ ||

ಕರಚಂಡಾಶಿನೋ ಯೇ ಚ ರಾಜಶಬ್ದೋಪಜೀವಿನಃ |
ಪೀಡಯಂತಿ ಜನಾನ್ಸರ್ವಾನ್ಕೃಪಣಾನ್ಗ್ರಾಮಕೂಟಿಕಾನ್ || ೩೬ ||

ಸುವರ್ಣಮಣಿಮುಕ್ತಾನಾಂ ಕೂಟಕರ್ಮಾನುಕಾರಕಾಃ |
ಸಮಯೇ ಕೃತಹರ್ತಾರೋ ಲೋಕಪೀಡಾಕರಾ ನರಾಃ || ೩೭ ||

ಭೂತನಿಷ್ಠಾಭಿಯೋಗಜ್ಞಾ ವ್ಯವಹಾರೇಷ್ವನರ್ಥಕಾಃ |
ಭೇದಕಾರಾಶ್ಚ ಧಾತೂನಾಂ ರಜತಸ್ಯ ಚ ಕಾರಕಾಃ || ೩೮ ||

ನ್ಯಾಸಾರ್ಥಹಾರಕಾ ಯೇ ಚ ಸಮ್ಮೋಹನಕರಾಶ್ಚ ಯೇ |
ಯೇ ತಥೋಪಾಧಿಕಾಃ ಕ್ಷುದ್ರಾಃ ಪಚ್ಯಂತೇ ತೇಷು ತೇಷ್ವಥ || ೩೯ ||

೩೫–೩೬. ರಾಜ್ಯಾಧಿಕಾರಿಗಳೆನಿಸಿಕೊಂಡು ಜೀವಿಸುತ್ತ, ಕಳ್ಳರು ಕದ್ದುದರಲ್ಲಿ ತಾವೂ ಅಷ್ಟನ್ನು ಅಪಹರಿಸಿ, ಅವರ ಕಳ್ಳತನವನ್ನು ಮುಚ್ಚಿ ನ್ಯಾಯವಿರೋಧಮಾಡುವವರೂ, ನಿರಪರಾಧಿಗಳನ್ನು ದಂಡಿಸುವವರೂ, ಕಳ್ಳತನಮಾಡುವವರೂ, ಬಲಾತ್ಕಾರದಲ್ಲಿ ಜನರಿಂದ ಕಿತ್ತುಕೊಳ್ಳುವವರೂ, ಕಂದಾಯವನ್ನೇ ಕ್ರೂರತೆಯಿಂದ ತಿನ್ನುವವರೂ, ದರಿದ್ರರಾದ ಗ್ರಾಮವಾಸಿಗಳೆಲ್ಲರನ್ನೂ ಪೀಡಿಸುವವರೂ ಆಯಾ ನರಕಗಳಲ್ಲಿ ಬೇಯಿಸಲ್ಪಡುವರು.

೩೭–೩೯. ಸುವರ್ಣರತ್ನಗಳಲ್ಲಿ ಮೋಸಮಾಡುವವರೂ, ಸಮಯದಲ್ಲಿ ಮಾಡಿದ ಉಪಕಾರವನ್ನು ಮರೆಯುವವರೂ, ಲೋಕಹಿಂಸಕರೂ, ಅತಿಸ್ವಾರ್ಥಪರರಾದ ಚಂಚಲಬುದ್ಧಿಗಳೂ, ಭೂತಾನಿಷ್ಟಗಳ ವಿಚಾರದಲ್ಲಿ ಉಪಾಯಗಳನ್ನರಿತು ಲೋಕವ್ಯವಹಾರದಲ್ಲಿ ಅನರ್ಥಮಾಡುವವರೂ, ತಮ್ಮಲ್ಲಿ ಮತ್ತೊಬ್ಬರು ರಕ್ಷಣೆಗಾಗಿ ಇಟ್ಟ ದ್ರವ್ಯವನ್ನು ಅಪಹರಿಸುವವರೂ, ಜನರನ್ನು ಸಮ್ಮೋಹನಗೊಳಿಸುವವರೂ ಆದ ಕ್ಷುದ್ರರು ಆಯಾಯ ನರಕಗಳಲ್ಲಿ ಬೇಯುವರು.

ನಿರಯೇಷ್ವಪ್ರತಿಷ್ಠೇಷು ದಾರುಣೇಷು ತತಸ್ತತಃ ।
ತತ್ರ ಕಾಲಂ ತು ಸುಚಿರಂ ಪಚ್ಯಂತಾಂ ಪಾಪಕಾರಿಣಃ ॥ ೪೦ ॥

ಕರ್ಮಕ್ಷಯೋ ಯದಾ ತೇಷಾಂ ಮಾನುಷ್ಯಂ ಪ್ರಾಪ್ನುವಂತಿ ತೇ ।
ತತ್ರ ತತ್ರೋಪಪದ್ಯಂತೇ ಯತ್ರ ಯತ್ರ ಮಹದ್ಭಯಂ ॥ ೪೧ ॥

ಯಸ್ಮಿಂಶ್ಚೋರಭಯಂ ದೇಶೇ ಕ್ಷುದ್ಭಯಂ ರಾಜತೋ ಭಯಂ ।
ಆಪದ್ಭ್ಯೋಽಪಿ ಭಯಂ ಯತ್ರ ವ್ಯಾಧಿಮೃತ್ಯುಭಯಂ ತಥಾ ॥ ೪೨ ॥

ಈತಯೋ ಯತ್ರ ದೇಶೇಷು ಲುಬ್ಧೇಷು ನಗರೇಷು ಚ ।
ಕ್ಷಯಾಃ ಕಾಲೋಪಸರ್ಗಾವಾ ಜಾಯಂತೇ ತತ್ರ ತೇ ನರಾಃ ॥ ೪೩ ॥

ಬಹುದುಃಖಪರಿಕ್ಲಿಷ್ಟಾ ಗರ್ಭವಾಸೇನ ಪೀಡಿತಾಃ ।
ಏಕಹಸ್ತಾ ದ್ವಿಹಸ್ತಾ ವಾ ಕೂಟಾಶ್ಚ ವಿಕೃತೋದರಾಃ ॥ ೪೪ ॥

---

೪೦. ಆ ಪಾಪಕಾರಿಗಳನ್ನು ಹೀನವೂ, ಭೀಷಣವೂ ಆದ ನರಕಗಳಲ್ಲಿ ಬಹುಕಾಲ ಬೇಯಿಸಿರಿ.

೪೧–೪೩. ಅವರ ಕರ್ಮವು ಕ್ಷಯಿಸಿದಾಗ ಅವರು ಮತ್ತೆ ಮನುಷ್ಯತ್ವವನ್ನು ಪಡೆಯುವರು. ಆಗಲೂ ಅವರು ಎಲ್ಲೆಲ್ಲಿ ಮಹಾಭಯವೋ ಎಂದರೆ ಯಾವ ದೇಶದಲ್ಲಿ ಚೋರಭಯವೂ, ಹಸಿವಿನ ಭೀತಿಯೂ, ರಾಜಭೀತಿಯೂ, ಆಪತ್ತುಗಳ ಮತ್ತು ವ್ಯಾಧಿಮೃತ್ಯುಗಳ ಭೀತಿಯೂ, ಯಾವ ದೇಶಗಳಲ್ಲಿ ಈತಿಬಾಧೆಗಳೂ, ಯಾವ ನಗರಗಳಲ್ಲಿ ಕ್ಷಯರೋಗವೂ, ಸಾಂಕ್ರಾಮಿಕಾದಿರೋಗಗಳೂ ಇರುವವೋ ಅಲ್ಲಲ್ಲಿ ಹುಟ್ಟುವರು.

೪೪–೪೫. ಅಲ್ಲದೆ ಅವರು ಬಹುದುಃಖಗಳಿಂದ ಪೂರ್ಣಕ್ಲೇಶವುಳ್ಳವರೂ, ಗರ್ಭವಾಸದಿಂದ ಪೀಡಿತರೂ, ಒಂದು ಕಯ್ಯುಳ್ಳವರೂ, ಮೋಸಗಾರರೂ, ವಿಕಾ

ಶಿರಾದಿವ್ಯಕ್ತಗಾತ್ರಾಶ್ಚ ಹೀನಾಂಗಾ ವಾತರೋಗಿಣಃ ।
ಅಶ್ರುಸ್ರಾತಿತನೇತ್ರಾಶ್ಚ ಭಾರ್ಯಾಂ ನ ಪ್ರಾಪ್ನುವಂತಿ ತೇ ॥ ೪೫ ॥
ತೇಷಾಮಪತ್ಯಂ ನ ಭವೇತ್ತದ್ರೂಪಂ ಚ ಸುಲಕ್ಷಣಂ ।
ಅತಿಹ್ರಸ್ವಂ ವಿವರ್ಣಂ ಚ ವಿಕೃತಂ ಭ್ರಾಂತಲೋಚನಂ ।
ಸಂಸಾರೇ ಚ ಯಥಾ ಪಕ್ವಂ ಕೃಪಣಂ ಭೈರವಸ್ವನಂ ॥ ೪೬ ॥
ಮಹತಃ ಪರಿವಾರಸ್ಯ ತುಷ್ಟಶ್ಚೋಚ್ಛಿಷ್ಟಭೋಜಕಃ ।
ರೂಪತೋ ಗುಣತೋ ಹೀನೋ ಬಲತಶ್ಶೀಲತಸ್ತಥಾ ॥ ೪೭ ॥
ರಾಜಭೃತ್ಯಾ ಭವಂತ್ಯೇತೇ ಪೃಥಿವೀಪರಿಚಾರಕಾಃ ॥ ೪೮ ॥
ಅನಾಲಯಾ ನಿರಾಮರ್ಷಾ ವೇದನಾಭಿಸ್ಸುಸಂವೃತಾಃ ।
ಸಮಕಾರ್ಯಸಜಾತ್ಯಾನಾಂ ಮಿತ್ರಸಂಬಂಧಿನಾಂ ತಥಾ ॥ ೪೯ ॥
ಕರ್ಮಾಂತಕಾರಕಾ ಹ್ಯೇತೇ ತೃಣೀಭೂತಾ ಭವಂತಿ ತೇ ॥ ೫೦ ॥

ರವಾದ ಉದರವುಳ್ಳವರೂ, ನರಗಳು ಮೇಲುಗಡೆ ಕಾಣುವಂತೆ ಉಬ್ಬಿ ಹಾಡಿದ ಅವಯವವುಳ್ಳವರೂ, ಅಂಗಹೀನರೂ, ವಾತರೋಗಿಗಳೂ, ನೀರುಸುರಿಯುವ ಕಣ್ಣುಳ್ಳವರೂ ಆಗುವರು. ಅವರಿಗೆ ಹೆಂಡತಿಯಿರುವುದಿಲ್ಲ.

೪೬ ಅವರಿಗೆ ಮಕ್ಕಳಾಗುವುದಿಲ್ಲ, ಅವರ ರೂಪವೂ ಸುಲಕ್ಷಣವುಳ್ಳದಾಗಿರುವುದಿಲ್ಲ, ಅತಿಕುಳ್ಳರೂ, ವಿವರ್ಣರೂ, ವಿಕಾರವುಳ್ಳವರೂ, ಕಪಟಗಣ್ಣಿನವರೂ, ದೀನವೂ ಭಯಂಕರವೂ ಆದ ಧ್ವನಿಯುಳ್ಳವರೂ ಆಗುವರು.

೪೭–೪೮. ರೂಪಗುಣಬಲಶೀಲಹೀನರಾದ ಅವರು ಬಹುಪರಿವಾರವುಳ್ಳ ರಾಜನ ಭೃತ್ಯರಾಗಿ, ಭೂಮಿಯಲ್ಲೆಲ್ಲಾ ಅಲೆಯುವವರೂ, ಉಚ್ಛಿಷ್ಟಭೋಜನರೂ ಆಗುವರು.

೪೯–೫೦. ಅವರು ಮನೆಯಿಲ್ಲದವರೂ, ಕೋಪವಿಲ್ಲದವರೂ, ಬಹು ವೇದನೆಗಳುಳ್ಳವರೂ, ಸಜಾತೀಯರೂ ಸಮೋದ್ಯೋಗಿಗಳೂ ಆದವರಿಗೂ ಬಂಧುಮಿತ್ರರಿಗೂ ಕರ್ಮಾಂತಕಾರಕರಾದರೂ ಅವರಿಂದ ತೃಣೀಕರಿಸಲ್ಪಟ್ಟವರೂ ಆಗುವರು.

ಅನರ್ಥೋ ರಾಜದಂಡೋ ವಾ ನಿತ್ಯಮುತ್ಪಾದ್ಯತೇ ವಧಃ ।
ಕರ್ಮಕಲ್ಯಾಣಕೃಚ್ಛ್ರೇಷು ಭೃಶಂ ಚಾಪಿ ವಿಮುಹ್ಯತಿ ॥ ೫೧ ॥

ಕರ್ಷಕಾಃ ಪಶುಪಾಲಾಶ್ಚ ವಾಣಿಜ್ಯಸ್ಯೋಪಜೀವಕಾಃ ।
ಯದ್ಯತ್ಕುರ್ವಂತಿ ತೇ ಕರ್ಮ ಸರ್ವತ್ರ ಕ್ಷಯಭಾಗಿನಃ ।
ಸತ್ಯಮನ್ವಿಷ್ಯಮಾಣಾಶ್ಚ ನೈವ ತೇ ಕೀರ್ತಿಭಾಗಿನಃ ॥ ೫೨ ॥

ಯತ್ಕಿಂಚಿದಶುಭಂ ಕರ್ಮ ಯಸ್ಮಿನ್ದೇಶೇ ಸಮುಚ್ಛ್ರಿತಂ ।
ತಸ್ಯ ದೇಶಸ್ಯ ನೈವಾಸ್ತಿ ವರ್ಜಯಿತ್ವಾತುರಾನ್ನರಾನ್ ॥ ೫೩ ॥

ಸುವೃಷ್ಟ್ಯಾಮಪಿ ತೇಷಾಂ ವೈ ಕ್ಷೇತ್ರಂ ತಂ ತು ವಿವರ್ಜಯೇತ್ ।
ಅಶನಿರ್ವಾ ಪತೇತ್ತತ್ರ ಕ್ಷೇತ್ರಂ ವಾಪಿ ವಿನಶ್ಯತಿ ॥ ೫೪ ॥

ನ ಸುಖಂ ನಾಪಿ ನಿರ್ವಾಣಂ ತೇಷಾಂ ಮಾನುಷತಾ ಭವೇತ್ ।
ಉತ್ಪದ್ಯತೇ ನೃಶಂಸಾನಾಂ ತೀವ್ರಃ ಕ್ಲೇಶಸ್ಸುದಾರುಣಃ ॥ ೫೫ ॥
ಸ್ತೇಯಕರ್ಮಪ್ರಯುಕ್ತಾನಾಂ ಮುಕ್ತ್ವಾ ಕ್ಲೇಶಪರಂಪರಾಂ ॥ ೫೬ ॥

೫೧–೫೨. ಶುಭಾಶುಭಕರ್ಮಗಳಲ್ಲಿ ಅವರು ಹುಚ್ಚರಂತಾಗುವರು. ಕೃಷಿಕರಾಗಿಯೋ, ಪಶುಪಾಲಕರಾಗಿಯೋ, ವಣಿಜರಾಗಿಯೋ, ಅವರು ಯಾವ ಯಾವ ಕಾರ್ಯಗಳನ್ನು ಮಾಡಿದರೂ ಎಲ್ಲದರಲ್ಲೂ ನಷ್ಟಕ್ಕೆ ಗುರಿಯಾಗುವರು. ಅವರು ಸತ್ಯವನ್ನು ಅರಿಯಲು ಹೊರಟರೂ ಕೀರ್ತಿಭಾಗಿಗಳಾಗುವುದಿಲ್ಲ.

೫೩. ಯಾವುದಾದರೂ ಅಶುಭಕರ್ಮವು ದೇಶದಲ್ಲಿ ಹೆಚ್ಚಿದರೆ ಆದೇಶಕ್ಕೆ ರೋಗಿಗಳಾದ ಜನರನ್ನು ಬಿಟ್ಟು ಬೇರೇನೂ ಇರುವುದಿಲ್ಲ.

೫೪ ಬೇರೆಡೆಗಳಲ್ಲಿ ಒಳ್ಳೆಯ ಮಳೆ ಸುರಿದರೂ ಆಪಾಪಿಗಳ ನೆಲಕ್ಕೆ ಅದು ಇಲ್ಲವಾಗುವುದು ಅಥವಾ ಅಲ್ಲಿಗೆ ಸಿಡಿಲು ಬಿದ್ದು ಆ ಕ್ಷೇತ್ರವೇ ಹಾಳಾಗುವುದು.

೫೫–೫೬. ಕಳ್ಳತನಕ್ಕೆ ಕೈಹಾಕಿದ ಘಾತುಕರಿಗೆ ಭಯಂಕರವೂ, ತೀವ್ರವೂ ಆದ ಕಷ್ಟವೊದಗುವುದು. ಅವರಿಗೆ ಕ್ಲೇಶಪರಂಪರೆಯೋ ಹೊರತು ಉತ್ತಮನಾದ ಮನುಷ್ಯನಿಗಾಗುವ ಸುಖವೂ ಇಲ್ಲ. ನಿರ್ವಾಣ(ಮೋಕ್ಷ)ವೂ ಇಲ್ಲ.

ಪರದಾರಪ್ರಸಕ್ತಾನಾಮಿಮಾಂ ಶೃಣುತ ಯಾತನಾಂ ।
ತಿರ್ಯಗ್ಜನ್ಮಸುಪದೇಶೇಷು ಯಾಂತಿ ವಿಕ್ಷಿಪ್ತಮಾನಸಾಃ ।
ವಿಹರಂತಿ ಹ್ಯಧರ್ಮೇಷು ಧರ್ಮಚಾರಿತ್ರದೂಷಕಾಃ ॥ ೫೭ ॥
ತಾಂಸ್ತೇಯೇನ ಪ್ರದಾನೇನಾ ಸಂಗ್ರಹೇಣ ಗ್ರಹೇಣ ವಾ ।
ಮೂಲಕರ್ಮಪ್ರಯೋಗೇಣ ರಾಷ್ಟ್ರಸ್ಯಾತಿಕ್ರಮೇಣ ವಾ ॥ ೫೮ ॥
ಪ್ರಸಹ್ಯ ವಾ ಪ್ರಕೃತ್ವಾ ವೈ ಯೇ ಚರಂತಿ ಕುಲಾಂಗನಾಃ ।
ವರ್ಣಸಂಕರಕರ್ತಾರಃ ಕುಲಧರ್ಮಾದಿದೂಷಕಾಃ ॥ ೫೯ ॥
ಶೀಲಶೌಚಾದಿಸಂಪನ್ನಂ ಯೇ ಜನಂ ಧರ್ಮಲಕ್ಷಣಂ ।
ಧರ್ಷಯಂತಿ ಚ ಯೇ ಪಾಪಾಃ ಶ್ರೂಯತಾಂ ತತ್ಪರಾಭವಃ ॥ ೬೦ ॥
ನಿರಯಂ ಪಾಪಭೂಯಿಷ್ಠಾ ಅನುಭೂಯ ಮಹಾಭಯಂ ।
ಬಹುವರ್ಷಸಹಸ್ರಾಣಿ ಕರ್ಮಣಾ ತೇನ ದುಷ್ಕೃತಾಃ ।
ಕರ್ಮಕ್ಷಯೇ ಯದಾ ಭೂಯೋ ಮಾನುಷ್ಯಂ ಯಾಂತಿ ದಾರುಣಂ ॥ ೬೧ ॥

---

೫೭. ಇನ್ನು ಪರಸ್ತ್ರೀಯರಲ್ಲಿ ಆಸಕ್ತರಾದವರ ಈ ಯಾತನೆಯನ್ನು ಕೇಳಿ. ಧರ್ಮಚಾರಿತ್ರದೂಷಕರಾಗಿ ಅಧರ್ಮಗಳಲ್ಲಿ ಮನಸ್ಸಿಟ್ಟು, ವಿಹರಿಸುವವರು ಅನೇಕ ತಿರ್ಯಗ್ಜನ್ಮನುಷ್ಯಜನ್ಮಗಳನ್ನು ಪಡೆಯುವರು.

೫೮–೬೦. ಕಳ್ಳತನದಿಂದಲೋ. ಅವಳಿಗೆ ಬೇಕಾದುದನ್ನು ಕೊಡುವುದರಿಂದಲೋ, ಮೂಲಿಕೆಗಳನ್ನು ಪ್ರಯೋಗಿಸಿ ವಶೀಕರಣ ಮಾಡುವುದರಿಂದ ಬೇರೆಯ ದೇಶಕ್ಕೆ ಕರೆದುಕೊಂಡು ಹೋಗುವುದರಿಂದ ಸಂಗ್ರಹಿಸಿಕೊಂಡೋ, ಬಲಾತ್ಕಾರದಿಂದಲೋ, ಸಹಜವಾಗಿಯೋ ಕುಲಾಂಗನೆಯಾದ ಪರಸ್ತ್ರೀಯುಗಮನಮಾಡುವ ವರ್ಣಸಂಕರಕಾರರೂ, ಕುಲಧರ್ಮವಿದೂಷಕರೂ ಆದ ಪಾಪಿಗಳಿಗೂ, ಶುಚಿತ್ವ ಸೌಶೀಲ್ಯಗಳುಳ್ಳ ಧರ್ಮಲಕ್ಷಣರಾದ ಜನರನ್ನು ತಿರಸ್ಕರಿಸುವ ಪಾಪಿಗಳಿಗೂ ಆಗುವ ಪರಾಭವವನ್ನು ಕೇಳಿ.

೬೧. ಅತಿಪಾಪಿಗಳಾದ ಅವರು ಆ ಪರಸ್ತ್ರೀಸಂಗದಿಂದ ಪಾಪವನ್ನಾಚರಿಸಿ ಅದರಿಂದ ಹಲವು ಸಾವಿರವರ್ಷಕಾಲ ಮಹಾಭಯಂಕರವಾದ ನರಕವನ್ನನುಭವಿಸಿ ಕರ್ಮಕ್ಷಯವಾಗಲು ತಿರುಗಿ ಮನುಷ್ಯಜನ್ಮವನ್ನು ಭೀಷಣವಾಗಿ ಪಡೆಯುವರು.

ಸಂಕೀರ್ಣಯೋನಿಜಾಃ ಕ್ಷುದ್ರಾ ಭವಂತಿ ಪುರುಷಾಧಮಾಃ ।
ವೇಶ್ಯಾಲಂಘಟಕಕೂಟಾನಾಂ ಶೌಂಡಿಕಾನಾಂ ತಥೈವ ಚ ॥ ೬೨ ॥

ದುಷ್ಟಪಾಷಂಡನಾರೀಣಾಂ ನೈಕಮೈಥುನಗಾಮಿನಾಂ ॥ ೬೩ ॥

ನಿರ್ಲಜ್ಜಪುಂಡ್ರಕಾಃ ಕೇಚಿದ್ವೃದ್ಧಪೌರುಷಗಂಡಕಾಃ ।
ಸ್ತ್ರೀಬಂಧಕಾಃ ಸ್ತ್ರೀವಿನಾಶಾಃ ಸ್ತ್ರೀವೇಷಾಃ ಸ್ತ್ರೀವಿಹಾರಿಣಃ ॥ ೬೪ ॥

ಸ್ತ್ರೀಣಾಂ ಚಾನುಪ್ರವೃದ್ಧಾ ಯೇ ಸ್ತ್ರೀಭೋಗಪರಿಭೋಗಿನಃ ।
ತದ್ದೈವತಾಸ್ತನ್ನಿಯಮಾಸ್ತದ್ವೇಷಾಸ್ತತ್ಪ್ರಭಾಷಿತಾಃ ।
ತದ್ಭಾವಾಸ್ತತ್ಕಥಾಲಾಪಾಸ್ತದ್ಭೋಗಾಃ ಪರಿಭೋಗಿನಃ ॥ ೬೫ ॥

೬೨-೬೩. ಆ ಪುರುಷಾಧಮರು ವೇಶ್ಯಾಸಂಗಮಾಡುವ ಮತ್ತು ಮದ್ಯಪಾಯಿಗಳಾದ ಪುರುಷರಿಂದ ದುಷ್ಟಪಾಷಂಡರೂ, ಹಲವರು ಪುರುಷರ ಸಂಗಮಾಡುವವರೂ ಆದ ಹೆಂಗಸರಲ್ಲಿ ಸಂಕೀರ್ಣಜಾತಿಯವರೂ, ನೀಚರೂ ಆಗಿ ಜನಿಸುವರು.

೬೪-೬೫. ಅವರು ಲಜ್ಜೆಗೆಟ್ಟ ಹುಲಿಗಳೂ, ಪೌರುಷವನ್ನು ಕೊಚ್ಚಿಕೊಳ್ಳುವ ವೀರರೂ, ಸ್ತ್ರೀಬಂಧಕರೂ, ಸ್ತ್ರೀವಿನಾಶಕರೂ, ಸ್ತ್ರೀವೇಷಧಾರಿಗಳೂ, ಸ್ತ್ರೀವಿಹಾರಿಗಳೂ, ದುಷ್ಟಸ್ತ್ರೀಯರಲ್ಲೂ ವೃದ್ಧರೂ ಕಾಮಸುಖವನ್ನು ವಿಶೇಷವಾಗಿ ಅನುಭವಿಸಿದವರೂ ಆದವರನ್ನು ದೇವರಂತೆ ಭಾವಿಸಿ, ಅವರ ನಿಯಮದಂತೆ ನಡೆಯುವವರೂ, ಅವರ ವೇಷವನ್ನು ಧರಿಸದವರೂ, ಅವರ ವಿಚಾರವಾಗಿಯೇ ಹೆಚ್ಚಾಗಿ ಮಾತನಾಡುವವರೂ, ಅವರಲ್ಲಿಯೇ ಭಾವವುಳ್ಳವರೂ, ಅವರ ಕಥೆಯನ್ನೇ ಹೇಳುವವರೂ, ಅವರ ಸುಖವುಳ್ಳವರೂ ಆಗುವರು.

ವಿಪ್ರಲೋಭಂ ಚ ದಾನೇಷು ಪ್ರಾಪ್ನುವಂತಿ ನರಾಧಮಾಃ ।
ಸೌಭಾಗ್ಯಪರಮಾಸಕ್ತಾ ನರಾ ಭೀಭತ್ಸದರ್ಶನಾಃ ॥ ೬೬ ॥

ಅಬುದ್ಧೈಸ್ಸಹ ಸಂವಾಸಂ ಪ್ರಿಯಂ ಚಾಪಿಪ್ರಿಯಂ ತಥಾ ॥ ೬೭ ॥

ಶಾರೀರಂ ಮಾನಸಂ ದುಃಖಂ ಪ್ರಾಪ್ನುವಂತಿ ನರಾಧಮಾಃ ॥ ೬೮ ॥

ಕೃಮಿಭಿರ್ಭಕ್ಷಣಂ ಚೈವ ತಪ್ತತೈಲೋಪಸೇಚನಂ ।
ಅಗ್ನಿಕ್ಷಾರನದೀಭ್ಯಾಂ ತು ಪ್ರಾಪ್ನುವಂತಿ ನ ಸಂಶಯಃ ॥ ೬೯ ॥

ಪರದಾರಪ್ರಸಕ್ತಾನಾಂ ಭಯಂ ಭವತಿ ನಿಗ್ರಹಃ ।
ಸರ್ವಂ ಚ ನಿಖಿಲಂ ಕಾರ್ಯಂ ಯನ್ಮಯಾ ಸಮುದಾಹೃತಂ ॥ ೭೦ ॥

ಇತಿ ಶ್ರೀವರಾಹಪುರಾಣೇ ಪಾಪಸಮೂಹಾನುಕ್ರಮೋ ನಾಮ
ತ್ರ್ಯಧಿಕದ್ವಿಶತತಮೋಽಧ್ಯಾಯಃ

೬೬–೬೭. ಆ ನರಾಧಮರು ಸೌಭಾಗ್ಯದಲ್ಲಿ ಅತ್ಯಾಸಕ್ತರಾಗಿ ದಾನಗಳನ್ನು ತೆಗೆದುಕೊಳ್ಳುವುದರಲ್ಲಿ ಅತ್ಯಾಸೆಯುಳ್ಳವರಾಗುವರು. ನೋಡಲು ಅಸಹ್ಯಕರರಾಗಿ ದಡ್ಡರೊಡನೆ ಹಿತವಾಗಿದ್ದರೂ ಅಹಿತವಾಗಿದ್ದರೂ ವಾಸಿಸುವರು.

೬೮-೬೯. ಆ ಮನುಷ್ಯಾಧಮರು ಕ್ರಿಮಿಗಳಿಂದ ತಿನ್ನಿಸಿಕೊಳ್ಳುವುದರಿಂದಲೂ, ಕುದಿಯುವ ಎಣ್ಣೆಯನ್ನು ಚಿಮುಕಿಸಿಕೊಳ್ಳುವುದರಿಂದಲೂ, ಅಗ್ನಿನದಿ, ಕಾರದನದಿಗಳಲ್ಲಿ ಬೀಳುವುದರಿಂದಲೂ, ಶಾರೀರಕಮಾನಸಿಕ ದುಃಖಗಳನ್ನು ಪಡೆಯುವುದರಲ್ಲಿ ಸಂಶಯವಿಲ್ಲ.

೭೦. ಪರಸ್ತ್ರೀಪ್ರಸಕ್ತರಿಗೆ ಭಯಂಕರವಾದ ದಂಡನೆಯಾಗುವುದು. ನಾನು ಹೇಳಿದುದೆಲ್ಲವನ್ನೂ ಪೂರ್ಣವಾಗಿ ಮಾಡಬೇಕು.

ಅಧ್ಯಾಯದ ಸಾರಂಶ—

ನಚಿಕೇತನು ಋಷಿಗಳಿಗೆ—ನರಕದಲ್ಲಿ ಚಿತ್ರಗುಪ್ತನು ತನ್ನ ಅಧೀನರಿಗೆ ಹೇಳಿದ ಪಾಪಗಳ ಮತ್ತು ಅವುಗಳನ್ನು ಮಾಡಿದವರಿಗೆ ಆಗುವ ದಂಡನೆಯು ಮತ್ತು ಜನ್ಮಾಂತರಾದಿಗಳ ವಿಚಾರವನ್ನು ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರ ಮೂರನೆಯ ಅಧ್ಯಾಯ

॥ ಶ್ರೀ ॥

ಚತುರಧಿಕದ್ವಿಶತತಮೋಽಧ್ಯಾಯಃ

ಅಥ ದೂತಪ್ರೇಷಣವರ್ಣನಂ

॥ ಋಷಿರುವಾಚ ॥

ಇದಂ ಚೈವಾಪರಂ ತಸ್ಯ ವದತೋ ಹಿ ಮಯಾ ಶ್ರುತಂ ।
ಚಿತ್ರಗುಪ್ತಸ್ಯ ವಿಪ್ರೇಂದ್ರಾ ವಚನಂ ಲೋಕಶಾಸಿನಃ ॥ ೧ ॥

ದೂರೇಽಸಾವಿತಿ ಕಿಂ ಕಾರ್ಯಂ ನ ಕ್ಷಯೋಽಸ್ತ್ಯಸ್ಯ ಕರ್ಮಣಃ ।
ಕಿಂ ಕೃಪಾಂ ಕುರುತೇ ತಸ್ಮಿನ್ಗೃಹಾಣ ಜಹಿ ಮಾ ವ್ಯಥಃ ॥ ೨ ॥

ವ್ರೀಡಿತಃ ಕಿಂ ಭವಾನ್ ಜ್ಞಾತಂ ಕಿಂ ತಿಷ್ಠತಿ ಪರಾಙ್ಮುಖಃ ।
ಕಿಂ ನ ಗಚ್ಛಸಿ ವೇಗೇನ ಕಿಂ ತ್ವಯಾ ಸುಚಿರಂ ಕೃತಂ ॥ ೩ ॥

ಇನ್ನೂರನಾಲ್ಕನೆಯ ಅಧ್ಯಾಯ

ದೂತಪ್ರೇಷಣವರ್ಣನೆ.

೧. ನಚಿಕೇತ:— ಬ್ರಾಹ್ಮಣೋತ್ತಮರೇ, ಲೋಕನಿಯಾಮಕನಾದ ಆ ಚಿತ್ರಗುಪ್ತನು ಹೇಳಿದ ಈ ಬೇರೆಯ ಮಾತನ್ನೂ ನಾನು ಕೇಳಿದೆನು.

೨. ಚಿತ್ರಗುಪ್ತ:— ಅವನು ದೂರದಲ್ಲಿರುವನೆಂದಮಾತ್ರಕ್ಕೆ ಮಾಡುವುದೇನು? ಅವನ ಕರ್ಮವು ಇನ್ನೂ ಕಳೆದಿಲ್ಲ. ಅವನಲ್ಲಿ ಕೃಪೆಮಾಡುವೆಯೇನು? ತೆಗೆದುಕೊ ಹಿಂಸಿಸು, ಕೊಲ್ಲು; ವ್ಯಥೆಪಡಬೇಡ.

೩. ತಿಳಿಯಿತು. ನೀನು ನಾಚಿಕೊಳ್ಳುತ್ತೀಯೇನು! ಏಕೆ ಮುಖವನ್ನು ತಿರುಗಿಸಿಕೊಂಡು ನಿಲ್ಲುತ್ತೀಯೆ! ವೇಗವಾಗಿ ಹೋಗುವುದಿಲ್ಲವೆ? ಏಕೆ ನೀನು ಬಹಳ ತಡಮಾಡಿದೆ!

ಗಚ್ಛ ಗಚ್ಛ ಪುನಸ್ತತ್ರ ಶೀಘ್ರಂ ಚೈನಮಿಹಾನಯ ।
ಅಶಕ್ತೋಽಸ್ಮೀತಿ ಕಿಂ ರೋಷಮರ್ಹಂ ತೇ ದರ್ಪಮೀದೃಶಂ ॥ ೪ ॥

ಕಿಂ ತ್ವಂ ವದಸಿ ದುರ್ಬುದ್ಧೇ ವಿವಾಹಸ್ತಸ್ಯ ವರ್ತತೇ ।
ಊರ್ಧ್ವರೇತಾಸ್ತಪಸ್ವೀತಿ ತ್ವಂ ಮಾಂ ಭಾಷಯಸೇ ಕಥಂ ॥ ೫ ॥

ಕಿಂ ತ್ವಂ ವದಸಿ ಗರ್ಹ್ಯಂ ಚ ಮುಹೂರ್ತಂ ಪರಿಪಾಲಯ ।
ರಮತೇ ಕಾಂತಯಾ ಸಾರ್ಧಮಿತಿ ಕಿಂ ತ್ವಂ ಪ್ರಭಾಷಸೇ ॥ ೬ ॥

ಪತಿವ್ರತೇತಿ ಸಾಧ್ವೀತಿ ರಹಸ್ಯಂ ಭಾಷಸೇ ಪುನಃ ।
ಕಿಂ ಕಿಂ ವದಸಿ ಬಾಲೋ ಹಿ ನಿಶಿ ಚೈವಾಗತೋ ಗೃಹಂ ॥ ೭ ॥

ಆನೀಯತೇ ಕಥಂ ಜ್ಞಾತ್ವಾ ಭೋಕ್ತುಕಾಮಂ ಕಥಂ ಹರೇ ।
ಜಲಶಾಯಿನಂ ಕಥಂ ಚೈವ ದಾತುಕಾಮಂ ಕಥಂ ಹರೇ ॥ ೮ ॥

---

೪. ಮತ್ತೆ ಅಲ್ಲಿಗೆ ಹೋಗು ನಡೆ. ಅವನನ್ನು ಬೇಗನೆ ಇಲ್ಲಿ ಕರೆದುಕೊಂಡುಬಾ. ಅಶಕ್ತನಾಗಿದ್ದೇನೆಂದು ನಿನಗೆ ಕೋಪವೋ? ಇಂತಹ ದರ್ಪವು ನಿನಗಿರಬೇಕಾದುದು.

೫. ದುರ್ಬುದ್ಧೀ, ನೀನು ಏನು ಹೇಳುವೆ? "ಅವನಿಗೆ ಮದುವೆಯಾಗುತ್ತಿದೆ, ಅವನು ಊರ್ಧ್ವರೇತನಾದ ತಪಸ್ವಿ" ಎಂದು ನೀನು ನನಗೆ ಹೇಳುವೆಯಾ!

೬. ನೀನು ನಿಂದ್ಯವಾದ ಏನನ್ನು ಹೇಳುತ್ತೀಯೆ? 'ಸ್ವಲ್ಪಕಾಲ ತಾಳು ಅವನು ತನ್ನ ಪ್ರಿಯೆಯೊಡನೆ ರಮಿಸುತ್ತಿದ್ದಾನೆ' ಎಂದು ಹೇಳುತ್ತಿಯೋ?

೭-೮. ಅವಳು ಪತಿವ್ರತೆ. ಸಾಧ್ವಿ ಎಂದು ರಹಸ್ಯವನ್ನು ಮತ್ತೆ ನನಗೆ ಹೇಳುತ್ತೀಯೆ. ಏನು ಏನು ಹೇಳುತ್ತೀಯೆ! 'ಅವನು ಬಾಲಕ. ರಾತ್ರೆ ತಾನೆ ಮನೆಗೆ ಬಂದನು. ಊಟಮಾಡಲು ಆಸೆಯುಳ್ಳವನಾಗಿದ್ದಾನೆಂದು ತಿಳಿದೂ ಹೇಗೆ ತಾನೆ ಕರೆದುಕೊಂಡು ಬರಲಿ? ಸ್ವಾಮೀ, ಜಲಶಾಯಿಯಾಗಿರುವವನನ್ನೂ ದಾನಮಾಡುವಲಿಚ್ಛಿಸುವವರನ್ನೂ ಹೇಗೆ ಕರೆತರಲಿ? ಎನ್ನುವೆಯೋ?!

ಧಾರ್ಮಿಕಾ ಯೂಯಮೇವಾತ್ರ ಅಹಮೇಕೋ ನೃಶಂಸವತ್ ।
ಯಾತ ಯಾತ ತಥಾ ದೃಷ್ಟ್ವಾ ಯಥಾಕಾಲೋ ನಾತಿಕ್ರಮೇತ್ ॥ ೯ ॥

ಶೀಘ್ರಂ ತ್ವಂ ಭವ ಸರ್ಪೋಽಹಿ ವ್ಯಾಘ್ರಸ್ತ್ವಂ ಚ ಸರೀಸೃಪಃ ।
ಜಲೇ ಗ್ರಾಹೋ ಭವ ತ್ವಂ ಹಿ ತ್ವಂ ಕೃಮಿಸ್ತ್ವಂ ಸರೀಸೃಪಃ ॥ ೧೦ ॥

ನರಕಾನುಗತಸ್ತ್ವಂ ಹಿ ವ್ಯಾಧೀಭೂತಸ್ಸಮಾಶ್ರಯಃ ।
ಅತೀಸಾರೋ ಭವ ತ್ವಂ ಹಿ ತ್ವಂ ಛರ್ದಿಸ್ತ್ವಂ ಪುನರ್ಭವಃ ॥ ೧೧ ॥

ಕರ್ಣರೋಗೋ ವಿಷೂಚಿ ಚ ನಿತ್ಯರೋಗಶ್ಚ ಸಂಭವಃ ।
ಜ್ವರೋ ಭವ ಮಹಾಘೋರೋ ಜಲೇಗ್ರಾಹೋ ದುರಾಸದಃ ॥ ೧೨ ॥

ವಾತವ್ಯಾಧಿಸ್ತಥಾ ಘೋರಸ್ತಥೈವ ತ್ವಂ ಜಲೋದರಃ ।
ಅಪಸ್ಮಾರಸ್ತ್ವಮುನ್ಮಾದೋಽವಾತರೋಗಸ್ತಥೈವ ಚ ॥ ೧೩ ॥

---

೯. ಈ ವಿಚಾರದಲ್ಲಿ ನೀವೇ ಧಾರ್ಮಿಕರು! ನಾನೊಬ್ಬನೇ ಕ್ರೂರಿಯಂತೆಯೋ? ಕಾಲವು ಮೀರದಹಾಗೆ ನಡೆಯಿರಿ, ನಡೆಯಿರಿ.

೧೦. ನೀನು ಬೇಗನೆ ಹಾವಾಗು. ನೀನು ಹುಲಿಯಾಗು 'ನೀನು ನೀರಲ್ಲಿ ಮೊಸಳೆಯಾಗು, ನೀನು ಕ್ರಿಮಿಯಾಗು.

೧೧. ನರಕವನ್ನನುಸರಿಸುವ ನೀನು ರೋಗವಾಗಿ ಅತಿಸಾರವಾಗು. ನೀನು ವಾಂತಿಯಾಗು.

೧೨. ನೀನು ಕರ್ಣರೋಗವಾಗು. ನೀನು ವಿಷೂಚಿಕೆಯೆಂಬ ವ್ಯಾಧಿಯಾಗು. ನೀನು ನಿತ್ಯರೋಗವಾಗು. ನೀನು ಮಹಾಘೋರಜ್ವರವಾಗು. ನೀನು ನೀರಲ್ಲಿ ಹತ್ತಿರಹೋಗಲು ಭಯಂಕರವಾದ ದೊಡ್ಡ ಮೊಸಳೆಯಾಗು.

೧೩. ನೀನು ವಾತರೋಗವಾಗು ನೀನು ಘೋರವಾದ ಜಲೋದರ ವ್ಯಾಧಿಯಾಗು. ನೀನು ಅಪಸ್ಮಾರವೂ, ನೀನು ಹುಚ್ಚೂ ಆಗಿರಿ.

ವಿಭ್ರಮಸ್ತ್ವಂ ಭವೇಚ್ಛೀಘ್ರಂ ವಿಷ್ಟಂಭಶ್ಚ ಪುನರ್ಭವ ।
ವ್ಯಾಧಿರ್ಭವ ಮಹಾಘೋರೋ ಹ್ಯಯಂ ತೃಷ್ಣಾಂ ತು ವಿಂದತು ॥ ೧೪ ॥
ಯಥಾಕಾಲಂ ಯಥಾದೃಷ್ಟಂ ತಾವತ್ಕಾಲೋಽತ್ರ ತಿಷ್ಠತು ।
ಕಾಲಸಂಹರಣೇ ವಾಪಿ ಶುಭಸ್ಯಾಗಮನೇಽಪಿ ವಾ ॥ ೧೫ ॥
ಯೂಯಂ ಚ ಕೃತಕರ್ಮಾಣಸ್ತತೋ ಮೋಕ್ಷಮವಾಪ್ಸ್ಯಥ ।
ದ್ರುತಂ ದ್ರವತ ವೇಗೇನ ಸರ್ವೇ ಗಚ್ಛತ ಮಾ ಚಿರಂ ॥ ೧೬ ॥
ವರಾಜ್ಞಾ ಧರ್ಮರಾಜಸ್ಯ ಯಾ ಮಯಾ ಸಮುದಾಹೃತಾ ।
ಏಕಾಹಂ ಕ್ಷಪಯೇಸ್ತತ್ರ ದ್ವಿರಾತ್ರಂ ತತ್ರ ಮಾ ಚಿರಂ ॥ ೧೭ ॥
ತ್ರಿರಾತ್ರಂ ಚತೂರಾತ್ರಂ ವೈ ಷಡ್ರಾತ್ರಂ ದಶರಾತ್ರಕಂ ।
ಪಕ್ಷಂ ವಾ ಮಾಸಮೇಕಂ ವಾ ಬಹೂನ್ಮಾಸಾಂಸ್ತಥಾಪಿ ವಾ ।
ಕ್ಷಪಯಿತ್ವಾ ಯಥಾಕಾಲಂ ತತೋ ಮೋಕ್ಷಮವಾಪ್ಸ್ಯಥ ॥ ೧೮ ॥

---

೧೪. ನೀನು ಬೇಗನೆ ಭ್ರಾಂತಿ ಅಥವಾ ದುಃಖವಾಗು. ನೀನು ವಿಷ್ಟಂಭವೆಂಬ ವ್ಯಾಧಿಯಾಗು. ನೀನು ಮಹಾಘೋರವಾದ ರೋಗವಾಗು. ಇವನು ಬಾಯಾರಿಕೆಯಾಗಲಿ.

೧೫–೧೬. ಕಾಲವನ್ನು ಮೀರದೆ ನನ್ನೆದುರಿಗೆ ಅದುವರೆಗೂ ಇಲ್ಲೇ ನೀನಿರು. ನಿಯತಕಾಲವು ಕಳೆದರೂ, ಶುಭವು ಸಂಭವಿಸಿದರೂ ಕೃತಕೃತ್ಯರಾದ ನೀವು ಬಿಡುವನ್ನು ಪಡೆಯುವಿರಿ. ವೇಗವಾಗಿ ಓಡಿ. ಎಲ್ಲರೂ ಹೋಗಿ. ತಡ ಮಾಡಬೇಡಿ.

೧೭. ನಾನು ಹೇಳಿದುದು ಯಮಧರ್ಮರಾಜನ ಉತ್ತಮಾಜ್ಞೆ. ಅಲ್ಲಿ ಒಂದು ದಿನವನ್ನು ಕಳೆಯಬೇಕು. ಅಲ್ಲಿ ಎರಡುರಾತ್ರೆ ಮಾತ್ರ ಇರಬೇಕು. ಹೆಚ್ಚು ಕಾಲವಿರಬಾರದು.

೧೮. ಅಲ್ಲಿ ಮೂರುರಾತ್ರೆ, ಅಲ್ಲಿ ನಾಲ್ಕುರಾತ್ರೆ, ಅಲ್ಲಿ ಆರುರಾತ್ರೆ, ಇನ್ನೊಂದೆಡೆಯಲ್ಲಿ ಹತ್ತುರಾತ್ರೆ ಇರಬೇಕು. ಒಂದು ಪಕ್ಷವೋ, ಒಂದು ತಿಂಗಳೋ, ಹಲವು ತಿಂಗಳೋ ಕಾಲವನ್ನತಿಕ್ರಮಿಸದೆ ಅಲ್ಲಿದ್ದು, ಬಳಿಕ ವಿಶ್ರಾಂತಿಯನ್ನು ಪಡೆಯುವಿರಿ.

ಭೂತಾತ್ಮಾ ನೋಽಹವಾಂಸ್ತತ್ರ ಕರುಣಃ ಕಷ್ಟಮೇವ ಚ ॥ ೧೯ ॥

ಯಸ್ಮಿನ್ಯಸ್ಮಿಂಸ್ತು ಕಾಲೇಽಹಂ ಯಾವತಶ್ಚ ಶ್ರಯಾಮ್ಯಹಂ ।
ತಸ್ಮಿಂಸ್ತಸ್ಮಿನ್ಮಹಾಕಾಲಂ ಯೂಯಂ ತತ್ಕರ್ತುಮರ್ಹಥ ॥ ೨೦ ॥

ವಿನಿಯೋಗಾ ಮಯಾ ಸೂಕ್ತಾ ಯಥಾಪೂರ್ವಂ ಯಥಾಶ್ರುತಂ ।
ಜಾಗ್ರತಂ ವಾ ಪ್ರಮತ್ತಂ ವಾ ಯಥಾ ಕಾಲೋ ನ ಸಂಪತೇತ್ ॥ ೨೧ ॥

ಯತ್ನಾತ್ತಥಾ ತು ಕರ್ತವ್ಯಂ ಭವದ್ಭಿರ್ಮಮ ಶಾಸನಾತ್ ।
ಅಭಯಂ ಚಾತ್ರ ಯಚ್ಛಾಮಿ ಬ್ರಾಹ್ಮಣೇಭ್ಯೋ ನ ಸಂಶಯಃ ॥ ೨೨ ॥

ತಸ್ಮಾದ್ಯಾತು ಋಷಿಭ್ಯಶ್ಚ ಸ್ತ್ರೀಭ್ಯಶ್ಚೈವ ಮಹಾಬಲಾಃ ।
ಯಾತನಾಯಾ ನ ಭೇತವ್ಯಮಹಮಾಜ್ಞಾಪಯಾಮಿ ವಃ ॥ ೨೩ ॥

೧೯-೨೦. ಭೂತಾತ್ಮನಾದ ಯಮರಾಜನು ಆ ವಿಷಯದಲ್ಲಿ ನಿಮ್ಮಲ್ಲಿ ಪ್ರೀತಿಯೂ, ಕರುಣೆಯೂ ಉಳ್ಳವನಾಗಿರುವನು. ಕಷ್ಟವೇ ಆದರೂ ಯಾವ ಯಾವ ಕಾಲದಲ್ಲಿ ನಾನು ಎಷ್ಟುಹೊತ್ತು ಇರುವೆನೋ ಆಯಾಕಾಲದಲ್ಲಿ ಅಷ್ಟು [ಹೆಚ್ಚು] ಹೊತ್ತು ನೀವೂ ಆಕಾರ್ಯವನ್ನು ಮಾಡಬೇಕು.

೨೧-೨೨. ಮೊದಲೇ ನಾನು ನಿಮಗೆ ನೀವು ನೀವು ಮಾಡಬೇಕಾದುದನ್ನ ವಿಭಾಗಿಸಿ ಸರಿಯಾಗಿ ಹೇಳಿರುವುದನ್ನು ಕೇಳಿರುವಿರಿ. ಆ ನನ್ನ ಆಜ್ಞೆಯಂತೆ ಎಚ್ಚರಗೊಂಡವನಾಗಲಿ, ಪ್ರಮತ್ತನಾಗಿರಲಿ, ಕಾಲವು ಮೀರದಂತೆ ಪ್ರಯತ್ನ ಪೂರ್ವಕವಾಗಿ ನೀವು ನಡೆಯಿಸಬೇಕು. ಈ ವಿಚಾರದಲ್ಲಿ ನಿಮಗೆ ಬ್ರಾಹ್ಮಣರಿಂದ ಅಭಯವನ್ನು ಕೊಡುತ್ತೇನೆ ಸಂದೇಹವಿಲ್ಲ.

೨೩. ಆದುದರಿಂದ, ಮಹಾಬಲರೇ, ನಡೆಯಿರಿ. ನಿಮಗೆ ನಾನು ಆಜ್ಞಾಪಿಸುತ್ತೇನೆ. ಋಷಿಗಳ ಮತ್ತು ಸ್ತ್ರೀಯರ ಯಾತನೆಗೆ ನೀವು ಹೆದರಬೇಕಾದುದಿಲ್ಲ.

ಯಥಾವಾಚ್ಯಂ ಚ ಕುರುತ ಯಥಾಕಾಲೋ ನ ಗಚ್ಛತಿ ।
ಯಥಾಕಾಮಂ ಪ್ರಕುರತ ಯಚ್ಚ ದೃಷ್ಟಂ ಯಥಾ ಯಥಾ ॥ ೨೪ ॥

ಮಯಾಜ್ಞಪ್ತಾ ವಿಶೇಷೇಣ ಮೃತ್ಯುನಾ ಸಹ ಸಂಗತಃ ।
ಯಥಾವೀರೋ ಮಹಾತೇಜಾಶ್ಚಿತ್ರಗುಪ್ತೋ ಮಹಾಯಶಾಃ ॥ ೨೫ ॥

ಯಥಾಬ್ರವೀತ್ಸ್ವಯಂ ರುದ್ರೋ ಯಥಾ ಶಕ್ರಶ್ಶಚೀಪತಿಃ ।
ಯಥಾಜ್ಞಾಪಯತೇ ಬ್ರಹ್ಮಾ ಚಿತ್ರಗುಪ್ತಸ್ತಥಾ ಪ್ರಭುಃ ॥ ೨೬ ॥

ಇತಿ ಶ್ರೀವರಾಹಪುರಾಣೇ ಸಂಸಾರಚಕ್ರೇ ದೂತಪ್ರೇಷಣಂ ನಾಮ ಚತುರಧಿಕದ್ವಿಶತತಮೋಽಧ್ಯಾಯಃ

---

೨೪. ಕಾಲವು ಕಳೆಯದಂತೆ ನಾನು ಹೇಳಿದಹಾಗೆ ಮಾಡಿ. ಸಮಯಕ್ಕೆ ತಕ್ಕಹಾಗೆ ಇಷ್ಟಾನುಸಾರವಾಗಿ ನಡೆಯಿಸಿ.

೨೫. ಮೃತ್ಯುವಿನೊಡಗೂಡಿದ ವೀರನೂ, ಮಹಾತೇಜನೂ, ಮಹಾಯಶಸ್ವಿಯೂ, ಚಿತ್ರಗುಪ್ತನೂ ಆದ ನಾನು ನಿಮಗೆ ವಿಶೇಷವಾಗಿ ಆಜ್ಞಾಪಿಸಿದ್ದೇನೆ.

೨೬. ರುದ್ರನು ತಾನೇ ಹೇಗೆ ಆಜ್ಞಾಪಿಸುವನೋ, ಶಚೀಪತಿಯಾದ ಇಂದ್ರನು ಹೇಗೆ ಆಜ್ಞಾಪಿಸುವನೋ, ಹಾಗೆಯೇ ಪ್ರಭುವಾದ ಚಿತ್ರಗುಪ್ತನೂ ಆಜ್ಞೆಮಾಡುವನು.

ಅಧ್ಯಾಯದ ಸಾರಾಂಶ—

ನಚಿಕೇತನು ಋಷಿಗಳೇ ಮೊದಲಾದವರಿಗೆ ಯಮಲೋಕದಲ್ಲಿ ಚಿತ್ರಗುಪ್ತನು ಯಮದೂತರಿಗೆ ಭೂಲೋಕದಿಂದ ಮನುಷ್ಯರನ್ನು ಎಳೆದುತರಲು ಮಾಡಿದ ಆಜ್ಞೆಗಳನ್ನು ವಿವರಿಸಿ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರನಾಲ್ಕನೆಯ ಅಧ್ಯಾಯ.

॥ ಶ್ರೀಃ ॥

ಪಂಚಾಧಿಕದ್ವಿಶತತಮೋಽಧ್ಯಾಯಃ

ಅಥ ಶುಭಾಶುಭಫಲಾನುಕೀರ್ತನವರ್ಣನಂ

॥ ಋಷಿಪುತ್ರ ಉವಾಚ ॥

ಇದಮನ್ಯಚ್ಛ್ರುತಂ ವಿಪ್ರಾಃ ಶ್ರೂಯತಾಂ ತಸ್ಯ ಭಾಷಿತಂ ।
ಯಮಸ್ಯ ಚಿತ್ರಗುಪ್ತಸ್ಯ ಯಚ್ಚ ತತ್ರ ಮಯಾ ಶ್ರುತಂ ॥ ೧ ॥

ಅಯಂ ತು ಭವತಾಂ ಯಾತು ಯಾತು ಸ್ವರ್ಗಂ ಮಹೀಕ್ಷಿತಾಃ ।
ಅಯಂ ವೃಕ್ಷಸ್ತ್ವಯಂ ತಿರ್ಯಗಯಂ ಮೋಕ್ಷಂ ವ್ರಜೇನ್ನರಃ ॥ ೨ ॥

ಅಯಂ ನಾಗೋ ಭವೇಚ್ಛೀಘ್ರಮಯಂ ತು ಪರಮಾಂ ಗತಿಂ ।
ಸ್ವಪೂರ್ವಕಾನ್ಸ್ವಶ್ಯತೇಽಯಮಾತ್ಮನಸ್ತು ಪಿತಾಮಹಾನ್ ॥ ೩ ॥

ಇನ್ನೂರೈದನೆಯ ಅಧ್ಯಾಯ

ಶುಭಾಶುಭಫಲಕೀರ್ತನೆಯ ವರ್ಣನೆ.

೧. ಋಷಿಪುತ್ರನಾದ ನಚಿಕೇತ:— ಬ್ರಾಹ್ಮಣರೇ, ಹಿಂದೆ ಆಯಮನೂ, ಚಿತ್ರಗುಪ್ತನೂ ಅಲ್ಲಿಹೇಳಿದ ಮತ್ತು ನಾನು ತಿಳಿದಿರುವ ಈ ಬೇರೆಯ ಮಾತನ್ನೂ ಕೇಳಿ.

೨. ಯಮಚಿತ್ರಗುಪ್ತರು:— ಪೂಜ್ಯರಾದ ರಾಜರಲ್ಲಿ ಈತನು ಸ್ವರ್ಗಕ್ಕೆ ಹೋಗಲಿ. ಈ ವೃಕ್ಷವೂ, ಈ ತಿರ್ಯಗ್ಜಂತುವೂ, ಈ ಮನುಷ್ಯನೂ ಮೋಕ್ಷವನ್ನು ಪಡೆಯಲಿ.

೩-೪. ಇವನು ಬೇಗನೆ ನಾಗನಾಗಲಿ. ಈತನು ಪರಮಗತಿಯನ್ನು ಪಡೆಯಲಿ. ಈತನು ಕ್ಲೇಶಪಡುತ್ತ, ಅಳುತ್ತ, ಮತ್ತೆಮತ್ತೆ ಮಾತನಾಡುತ್ತಿರುವ ತನ್ನ

ಕ್ಲಿಶ್ಯತೋ ರುದತಶ್ಚೈವ ವದತಶ್ಚ ಪುನಃ ಪುನಃ ।
ಸ್ವೇನ ದೋಷೇಣ ಸರ್ವೇ ವಾ ಅಕ್ಷಯಂ ನರಕಂಗತಾಃ ॥ ೪ ॥

ದಾರತ್ಯಾಗೀ ತ್ವಧರ್ಮಿಷ್ಠಃ ಪುತ್ರಪೌತ್ರವಿವರ್ಜಿತಃ ।
ಕ್ಷಿಪ್ತಂ ವೈ ರೌರವೇ ಹ್ಯೇನಂ ಕ್ಷಪಯಂತು ಮಹೌಜಸಃ ॥ ೫ ॥

ಮುಚ್ಯಂತಾಂ ತ ಇಮೇ ಸರ್ವೇ ಹ್ಯತೀತಾನಾಗತಾಸ್ತಥಾ ।
ಮುಚ್ಯಂತಾಮಾಶು ಮುಚ್ಯಂತಾಂ ತ ಏತೇ ಪಾಪವರ್ಜಿತಾಃ ॥ ೬ ॥

ಆಗಮೇ ಚ ವಿಪತ್ತೌ ಚ ಸರ್ವಧರ್ಮಾನುಪಾಲಕಾಃ ।
ತೇ ತು ಕಲ್ಪಾನ್ಬಹೂನ್ಸ್ವರ್ಗ ಉಷಿತ್ವಾ ಹ್ಯನಸೂಯಕಾಃ ॥ ೭ ॥

ಬಹುಸುಂದರನಾರ್ಯಂಕೇ ಹ್ಯಾದ್ಯೇ ಪರಮಧಾರ್ಮಿಕಂ ।
ಕಲೌ ಮಾನುಷತಾಂ ಯಾತು ಧರ್ಮಸ್ನೇಹ ನಿದರ್ಶನಂ ॥ ೮ ॥

ಪೂರ್ವಜರಾದ ಅಜ್ಜಂದಿರನ್ನು ನೋಡುವನು. ಆವರೆಲ್ಲರೂ ಆತ್ಮದೋಷದಿಂದ ಅಕ್ಷಯನರಕವನ್ನು ಸೇರಿದರು

೫ ಪತ್ನಿಯನ್ನು ತ್ಯಜಿಸಿದವನೂ, ಪುತ್ರಪೌತ್ರರಿಲ್ಲದವನೂ ಆದ ಈ ಅಧರ್ಮಿಷ್ಠನನ್ನು ರೌರವನರಕದಲ್ಲಿಟ್ಟು, ಬಹು ಬಲಶಾಲಿಗಳಾದವರು ನಾಶ ಮಾಡಲಿ.

೬. ಅವಧಿಯು ಕಳೆದವರೂ, ಪಾಪರಹಿತರೂ ಆದ ಆ ಇವರೆಲ್ಲರನ್ನೂ ಬಿಟ್ಟುಬಿಡಬೇಕು. ಬೇಗನೆ ಬಿಡಿ. ಬೇಗನೆ ಬಿಡಿ. ಇವರು ಪಾಪವಿಲ್ಲದವರು.

೭–೮. ಅನುಕೂಲದಲ್ಲಿಯೂ, ವಿಪತ್ತಿನಲ್ಲಿಯೂ ಅವರು ಸರ್ವಧರ್ಮಗಳನ್ನೂ ಪರಿಪಾಲಿಸಿದವರು. ಅಸೂಯೆಯಿಲ್ಲದವರಾದ ಅವರು ಬಹುಕಲ್ಪಗಳ ಕಾಲ ಸ್ವರ್ಗದಲ್ಲಿ ವಾಸಮಾಡಿ, ಆದಿಕಲಿಯುಗದಲ್ಲಿ ಪರಮಧರ್ಮಿಷ್ಠರಾದ ಮನುಷ್ಯರಾಗಿ ಪರಮಸುಂದರಿಯರಾದ ನಾರಿಯರ ತೊಡೆಯಮೇಲೆ ಮಕ್ಕಳಾಗಿ ಆಡಿ ಇಹಲೋಕದ ಧರ್ಮಸ್ನೇಹಕ್ಕೆ ನಿದರ್ಶನವಾಗಲಿ.

ತ್ರಿವಿಷ್ಟಪೇಽ ಪರಿಕ್ಲೇಶೋ ವಾಸೋ ಹ್ಯಸ್ಯಾಕ್ಷಯೋ ಭವೇತ್ ।
ಅಯಮಾಯೋಧನೇ ಶತ್ರುಂ ಹತ್ವಾ ತು ನಿಧನಂ ಗತಃ ॥ ೯ ॥

ಬ್ರಾಹ್ಮಣಾರ್ಥೇ ಗವಾರ್ಥೇ ವಾ ರಾಷ್ಟ್ರಾರ್ಥೇ ನಿಧನಂ ಗತಃ ।
ಶಕ್ರಸ್ಯ ಹ್ಯಮರಾವತ್ಯಾಂ ನಿವೇದಯತ ಮಾ ಚಿರಂ ।
ತತ್ರ ವೈಮಾನಿಕೋ ಭೂತ್ವಾ ಕಲ್ಪಮೇಕಂ ನಿವತ್ಸ್ಯತಿ ॥ ೧೦ ॥

ತಥೈವಾಯಂ ಮಹಾಭಾಗೋ ಧರ್ಮಾತ್ಮಾ ಧರ್ಮವತ್ಸಲಃ ।
ಬಹುದಾನರತೋ ನಿತ್ಯಂ ಸರ್ವಭೂತಾನುಕಂಪಕಃ ॥ ೧೧ ॥

ಏನಂ ಗಂಧೈಶ್ಚ ಮಾಲ್ಯೈಶ್ಚ ಶೀಘ್ರಮೇವ ಪ್ರಪೂಜಯ ॥ ೧೨ ॥

ಅಸ್ಮೈ ಪೂಜಾ ಭವೇದ್ದೇಯಾ ಮಯಾ ದಿಷ್ಟಾ ಮಹಾತ್ಮನೇ ।
ವೀಜ್ಯತಾಂ ಚಾಮರೈರೇಷ ರಥಮಸ್ಮೈ ಪ್ರದೀಯತಾಂ ॥ ೧೩ ॥

---

೯. ಈತನು ಯುದ್ಧದಲ್ಲಿ ಶತ್ರುವನ್ನು ಸಂಹರಿಸಿ ಮೃತನಾದವನು. ಈತನಿಗೆ ಸ್ವರ್ಗದಲ್ಲಿ ಕ್ಲೇಶವಿಲ್ಲದ ಅಕ್ಷಯವಾಸವಾಗಲಿ.

೧೦. ಈತನು ಬ್ರಾಹ್ಮಣರಿಗಾಗಿಯೂ, ಗೋವುಗಳಿಗಾಗಿಯೂ, ರಾಷ್ಟ್ರಕ್ಕಾಗಿಯೂ ಪ್ರಾಣಬಿಟ್ಟವನು. ಅಮರಾವತಿಗೆ ಹೋಗಿ ಇಂದ್ರನಿಗೆ ತಿಳಿಸು, ತಡಮಾಡಬೇಡ ಅಲ್ಲಿ ಈತನು ವೈಮಾನಿಕನಾಗಿ ಒಂದು ಕಲ್ಪಕಾಲ ವಾಸಿಸುವನು.

೧೧-೧೨. ಹಾಗೆಯೇ ಈ ಪೂಜ್ಯನು ಧರ್ಮಾತ್ಮನೂ ಧರ್ಮದಲ್ಲಿ ವಾತ್ಸಲ್ಯವುಳ್ಳವನೂ, ಯಾವಾಗಲೂ ಬಹುದಾನಾಸಕ್ತನೂ, ಸರ್ವಪ್ರಾಣಿದಯಾಪರನೂ ಆದವನು. ಈತನನ್ನು ಶೀಘ್ರವಾಗಿ ಗಂಧಪುಷ್ಪಮಾಲೆಗಳಿಂದ ಚೆನ್ನಾಗಿ ಪೂಜಿಸು.

೧೩. ಈ ಮಹಾತ್ಮನಿಗೆ ನಾನು ಹೇಳಿದಂತೆ ಪೂಜೆಮಾಡಬೇಕು. ಈತನಿಗೆ ಚಾಮರದಿಂದ ಗಾಳಿಯನ್ನು ಬೀಸಿರಿ. ರಥವನ್ನು ಕೊಡಿ-

ಪ್ರೇತವಾಸಂ ಸಮುತ್ಸೃಜ್ಯ ಹೀತೋ ಯಾತು ತ್ರಿವಿಷ್ಟಪಂ ।
ಇಂದ್ರಸ್ಯೋರ್ಧ್ವಂ ಭವೇಚ್ಛೈವಂ ದೇವದೇವಸ್ಯ ಧೀಮತಃ ॥ ೧೪ ॥

ಶಂಖತೂರ್ಯನಿನಾದೇನ ತತ್ರ ವೈ ವಿಜಯೇನ ಚ ।
ತತ್ರ ವೈ ಪೂಜಯಿತ್ವಾ ಚ ಪ್ರಾಯಶೋ ಲಭತಾಂ ಸುಖಂ ॥ ೧೫ ॥

ಅಯಂ ಗಚ್ಛತು ಭದ್ರಂ ಚಾಪೀಂದ್ರದೇಶಂ ದುರಾಸದಂ ।
ಅನೇನ ವೈ ಕೀರ್ತಿಮತಾ ಲೋಕಸ್ಸರ್ವೋ ಹಿ ಲಂಘಿತಃ ॥ ೧೬ ॥

ಗುಣೈಶ್ಚ ಶತಸಂಖ್ಯಾಕೈಃ ಶಕ್ರ ಏನಂ ಪ್ರತೀಕ್ಷತೇ ।
ತಾವತ್ತಾಸ್ಯತಿ ಧರ್ಮಾತ್ಮಾ ಯಾವಚ್ಛಕ್ರಸ್ತ್ರಿವಿಷ್ಟಪೇ ॥ ೧೭ ॥

ತಾವತ್ಸ ಮೋದತೇ ಸ್ವರ್ಗೇ ಯಾವದ್ಧರ್ಮೋಽನುಮೀಯತೇ ।
ತತಶ್ಚ್ಯುತಶ್ಚ ಕಾಲೇನ ಮಾನುಷ್ಯೇ ಸುಖಮಶ್ನುತೇ ॥ ೧೮ ॥

---

೧೪. ಈತನು ಪ್ರೇತಾವಾಸವನ್ನು ಬಿಟ್ಟು ಇಲ್ಲಿಂದ ಸ್ವರ್ಗಕ್ಕೆ ಹೋಗಲಿ. ಈ ಬುದ್ಧಿವಂತನಿಗೆ ದೇವದೇವನಾದ ಇಂದ್ರನಿಗಿಂತಲೂ ಮೇಲಾದ ಸ್ಥಾನವು ಲಭಿಸುವುದು.

೧೫. ಅಲ್ಲಿ ಈತನು ವಿಜಯದಿಂದ ಶಂಖತೂರ್ಯಧ್ವನಿಗಳೊಡನೆ ಪೂಜಿತನಾಗಿ ಬಹು ಸುಖವನ್ನು ಪಡೆಯಲಿ.

೧೬–೧೭. ಈತನು, ಪಡೆಯಲು ಕಷ್ಟವೂ ಶುಭವೂ ಆದ ಇಂದ್ರಲೋಕಕ್ಕೆ ಹೋಗಲಿ. ಈ ಕೀರ್ತಿವಂತನು ತನ್ನ ನೂರಾರುಗುಣಗಳಿಂದ ಲೋಕದಲ್ಲಿ ಮೇಲಾಗಿರುವನು. ಈತನನ್ನು ಇಂದ್ರನು ನಿರೀಕ್ಷಿಸುತ್ತಿರುವನು. ಇಂದ್ರನು ಸ್ವರ್ಗದಲ್ಲಿರುವವರೆಗೂ ಈ ಧರ್ಮಾತ್ಮನೂ ಅಲ್ಲಿರುವನು.

೧೮. ಆತನ ತನ್ನ ಧರ್ಮವು ಮುಗಿಯುವವರೆಗೂ ಸ್ವರ್ಗದಲ್ಲಿ ಸಂತೋಷದಿಂದಿರುವನು. ಬಳಿಕ ಅಲ್ಲಿಂದ ಚ್ಯುತನಾಗಿ ಮನುಷ್ಯನಾಗಿ ಜನಿಸಿ ಸುಖಪಡುವನು.

ರತ್ನವೇಣುಪ್ರದಶ್ಚೈವ ಸರ್ವಧರ್ಮೈರಲಂಕೃತಃ |
ಅಶ್ವಿನೋರ್ನಯ ಲೋಕಂ ತು ಸರ್ವಸೌಖ್ಯಸಮನ್ವಿತಂ ॥ ೧೯ ॥

ಅಯಂ ಯಾತು ಮಹಾಭಾಗೋ ದೇವದೇವಂ ಸನಾತನಂ |
ಅತಿಸೃಷ್ಟಾಃ ಪುರಾ ಯೇನ ಯಥೋಕ್ತಾಸ್ಸುಖದೋಹನಾಃ ॥ ೨೦ ॥

ಸರ್ವಶಕ್ತ್ಯಾ ಸಮೇತೇನ ದ್ವಿಜೇಭ್ಯ ಉಪಪಾದಿತಾಃ |
ಶುಚೀನಾಂ ಬ್ರಾಹ್ಮಣಾನಾಂ ಬಹ್ವನ್ನದಾನಂ ವಿಶೇಷತಃ ॥ ೨೧ ॥

ತೇನ ಕಲ್ಪಂ ವಸಿಷ್ಯಂತಿ ರುದ್ರಕನ್ಯಾ ಮನೋರಮಾಃ |
ತತ್ರ ಕಲ್ಪಂ ವಸೇದ್ಗತ್ವಾ ರುದ್ರಲೋಕಂ ನ ಸಂಶಯಃ ॥ ೨೨ ॥

ತೇನ ದತ್ತಂ ದ್ವಿಜಾತಿಭ್ಯೋ ಮಧು ಖಂಡಪುರಸ್ಸರಂ |
ರಸೈಶ್ಚ ವಿವಿಧೈರ್ಯುಕ್ತಂ ಸರ್ವಗಂಧಮನೋರಮಂ ॥ ೨೩ ॥

---

೧೯. ಈತನು ರತ್ನವೇಣು [ರತ್ನವನ್ನೂ ಕೊಳಲನ್ನೂ ಅಥವಾ ರತ್ನದ ಕೊಳಲನ್ನು] ದಾನಮಾಡಿದವನೂ, ಸರ್ವಧರ್ಮಗಳಿಂದಲೂ ಅಲಂಕೃತನೂ ಆಗಿರುವನು. ಈತನನ್ನು ಸರ್ವಸುಖಗಳಿಂದ ಕೂಡಿದ ಅಶ್ವಿನೀದೇವರ ಲೋಕಕ್ಕೆ ಕರೆದುಕೊಂಡು ಹೋಗು.

೨೦-೨೧. ಈ ಮಹಾಭಾಗ್ಯನು ಸನಾತನನಾದ ದೇವದೇವನೆಡೆಗೆ ಹೋಗಲಿ. ಸರ್ವಶಕ್ತನಾದ ಈತನು ಪೂರ್ವದಲ್ಲಿ ಶುಚಿಗಳಾದ ಬ್ರಾಹ್ಮಣರಿಗೆ ಸುಖವಾಗಿ ಕರೆಯುವ, ಶಾಸ್ತ್ರದಲ್ಲಿ ಹೇಳಿರುವಂತಹ ಹಸುಗಳನ್ನು ದಾನಮಾಡಿರುವನು. ಅನ್ನದಾನವನ್ನು ವಿಶೇಷವಾಗಿ ಮಾಡಿರುವನು.

೨೨. ಆದುದರಿಂದ ಮನೋಹರರಾದ ರುದ್ರಕನ್ಯೆಯರು ಕಲ್ಪಕಾಲ ಎಲ್ಲಿ ವಾಸಿಸುವರೋ ಆ ರುದ್ರಲೋಕಕ್ಕೆ ಈತನೂ ಹೋಗಿ ಕಲ್ಪಕಾಲದವರೆಗೆ ವಾಸ ಮಾಡುವುದರಲ್ಲಿ ಸಂಶಯವಿಲ್ಲ.

೨೩. ಆತನು ಬ್ರಾಹ್ಮಣರಿಗೆ ಸಕ್ಕರೆಯೊಡನೆ ವಿವಿಧರಸಗಳಿಂದ ಕೂಡಿ ಸರ್ವಸುಗಂಧಮನೋಹರವೂ ಆದ ಮಧು (ಪರ್ಕ) ವನ್ನು ಕೊಟ್ಟಿರುವನು.

ತರುಣೀ ಕ್ಷೀರಸಂಪನ್ನಾ ಗೌಃ ಸುವರ್ಣಯುತಾ ಶುಭಾ ।
ಸವತ್ಸಾ ಹೇಮವಾಸಾಶ್ಚ ದತ್ತಾನೇನ ಮಹಾತ್ಮನಾ ॥ ೨೪ ॥
ಅಸ್ಯ ಲೇಖ್ಯಂ ಮಯಾ ದೃಷ್ಟಂ ತಿಸ್ರಃ ಕೋಟ್ಯಸ್ತ್ರಿವಿಷ್ಟಪೇ ।
ಸ್ವರ್ಗಾತ್ಪರಿಚ್ಯುತಶ್ಚಾಯಮೃಷೀಣಾಂ ಜಾಯತೇ ಕುಲೇ ॥ ೨೫ ॥
ಸುವರ್ಣಸ್ಯ ಪ್ರದಾತಾ ಚ ತ್ರಿದಶೇಭ್ಯೋ ನಿವೇದ್ಯತಾಂ ।
ತ್ರಿದಶಾನಭ್ಯನುಜ್ಞಾಪ್ಯ ಯಾತು ದೇವಮುಮಾಪತಿಂ ॥ ೨೬ ॥
ತತ್ರೈಷ ವೈ ಮಹಾತೇಜಾ ಯಥೇಷ್ಟಂ ಕಾಮಮಾಪ್ನುಯಾತ್ ।
ತತ್ರೈವಾಯಮಪಿ ಪ್ರೇತಗಣಭಕ್ತೋ ಮಹಾತಪಾಃ ॥ ೨೭ ॥
ಪ್ರಯಾತು ಪಿತೃಭಿಸ್ಸಾರ್ಧಂ ತರ್ಪಿತಾ ಯೇನ ಪೂರ್ವಜಾಃ ।
ದಾನವ್ರತಾ ದಿವಂ ಯಾಂತು ನಾನಾಲೋಕನಮಸ್ಕೃತಾಃ ॥ ೨೮ ॥

---

೨೪. ಆ ಮಹಾತ್ಮನು ಕರುವಿನೊಡಗೂಡಿ ಹಾಲುಕರೆಯುವ ಶುಭಕರವಾದ ಪ್ರಾಯದ ಹಸು (ಗೋ) ವನ್ನು ಪೀತಾಂಬರದಿಂದಲಂಕರಿಸಿ ಸುವರ್ಣದೊಡನೆ ದಾನಮಾಡಿದನು

೨೫. ನಾನು ಈತನ ಮೂರುಕೋಟಿ ಲೇಖನಗಳನ್ನೂ ಸ್ವರ್ಗದಲ್ಲಿ ನೋಡಿದ್ದೇನೆ. ಈತನು ಸ್ವರ್ಗದಿಂದ ಪರಿಚ್ಯುತನಾದರೂ ಋಷಿಗಳ ಕುಲದಲ್ಲುದಿಸುವನು.

೨೬. ಸುವರ್ಣವನ್ನು ಹೆಚ್ಚಾಗಿ ದಾನಮಾಡಿದ ಈತನ ವಿಚಾರವನ್ನು ದೇವತೆಗಳಿಗೆ ವಿಜ್ಞಾಪಿಸಿರಿ. ಈತನು ದೇವತೆಗಳ ಅನುಮತಿಯನ್ನು ಪಡೆದು, ಮಹಾದೇವನನ್ನು ಸೇವಿಸಲು ಹೋಗಲಿ.

೨೭. ಅಲ್ಲಿ ಮಹಾತೇಜನಾದ ಈತನು ಬೇಕಾದಹಾಗೆ ಬೇಕಾದುದನ್ನು ಪಡೆಯುವನು. ಮಹಾತಪನೂ, ಪ್ರೇತಗಣಭಕ್ತನೂ ಆದ ಈತನೂ ಅಲ್ಲಿಯೇ ಹೋಗಲಿ.

೨೮. ಪೂರ್ವಜರನ್ನು ತೃಪ್ತಿಪಡಿಸಿದವನು ಪಿತೃಗಳೊಡನೆ ಹೋಗಲಿ. ನಾನಾಲೋಕನಮಸ್ಕೃತರಾದ ದಾನವ್ರತಿಗಳು ಸ್ವರ್ಗಕ್ಕೆ ಹೋಗಲಿ.

ಅಯಂ ಭದ್ರೋ ಮಹಾಕಾಮಂ ಸರ್ವಭೂತಹಿತೇ ರತಃ ।
ಸರ್ವಕಾಮೈರಯಂ ಪೂಜ್ಯಸ್ಸರ್ವಕಾಮಪ್ರದೋ ನರಃ ॥ ೨೯ ॥

ಕ್ಷಿತಿಪ್ರದೋ ದ್ವಿಜಾತಿಭ್ಯೋ ಹ್ಯಯಂ ಯಾತು ತ್ರಿವಿಷ್ಟಪಂ ।
ತತ್ರೈವ ತಿಷ್ಠತಾ ದ್ವೀರೋ ಬ್ರಹ್ಮಲೋಕೇ ಸಹಾನುಗಃ ॥ ೩೦ ॥

ವಿವಿಧೈಃ ಕಾಮಭೋಗೈಸ್ತು ಸೇವ್ಯಮಾನೋ ನರೋತ್ತಮಃ ।
ಅಕ್ಷಯಂ ಚಾಜರಂ ಸ್ಥಾನಂ ಪೂಜ್ಯಮಾನೋ ಮಹರ್ಷಿಭಿಃ ॥ ೩೧ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಸಂಸಾರಚಕ್ರೇ ಶುಭಾಶುಭ ಫಲಾನುಕೀರ್ತನಂ ನಾಮ ಪಂಚಾಧಿಕದ್ವಿಶತತಮೋಧ್ಯಾಯಃ

---

೨೯. ಸರ್ವಪ್ರಾಣಿಹಿತನಾದ ಈ ಭದ್ರನು ತನ್ನ ಮಹಾಕಾಮಗಳನ್ನು ಪಡೆಯಲಿ. ಸರ್ವರ ಇಷ್ಟಗಳನ್ನೂ ನೆರವೇರಿಸುವ ಈತನು ಸರ್ವೇಷ್ಟಾರ್ಥಗಳಿಂದಲೂ ಪೂಜ್ಯನು.

೩೦-೩೧. ಬ್ರಾಹ್ಮಣರಿಗೆ ಭೂದಾನಮಾಡಿದ ಈತನು ಸ್ವರ್ಗಕ್ಕೆಹೋಗಲಿ ನರೋತ್ತಮನಾದ ಈ ವೀರನು ತನ್ನ ಅನುಗಾಮಿಗಳೊಡನೆ ಕ್ಷಯವೂ ಮುಪ್ಪೂ ಇಲ್ಲದ ಬ್ರಹ್ಮಲೋಕಕ್ಕೆ ಹೋಗಿ, ಬಗೆಬಗೆಯ ಇಷ್ಟಸುಖಗಳನ್ನು ಅನುಭವಿಸುತ್ತಲೂ, ಮಹರ್ಷಿಗಳಿಂದ ಪೂಜೆಗೊಳ್ಳುತ್ತಲೂ ಅಲ್ಲಿಯೇ ಇರಲಿ.

ಅಧ್ಯಾಯದ ಸಾರಾಂಶ:—

ನಚಿಕೇತನು ಋಷಿಗಳಿಗೆ– ಯಮಲೋಕದಲ್ಲಿ ಯಮನೂ, ಚಿತ್ರಗುಪ್ತನೂ ಶುಭಾಶುಭಕರ್ಮಿಗಳಿಗೆ ಅವರವರಿಗೆ ಸಲ್ಲಬೇಕಾದ ಸ್ಥಾನಗಳನ್ನೂ, ಫಲವನ್ನೂ, ವಿವರವಾಗಿ ತಿಳಿಸಿದುದನ್ನು ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರೈದನೆಯ ಅಧ್ಯಾಯ.

॥ ಶ್ರೀ ॥

ಷಡಧಿಕದ್ವಿಶತತಮೋಽಧ್ಯಾಯಃ

ಅಥ ಶುಭಕರ್ಮಫಲೋದಯಪ್ರಕರಣಂ

॥ ಋಷಿರುವಾಚ ॥

ಚಿತ್ರಗುಪ್ತಸ್ಯ ಸಂದೇಶೋ ವದತೋ ಯೋ ಮಯಾ ಶ್ರುತಃ ।
ಶ್ರೂಯತಾಂ ವೈ ಮಹಾಭಾಗಾಸ್ತಪಸ್ಸಿದ್ಧಾ ದ್ವಿಜೋತ್ತಮಾಃ ॥ ೧ ॥

ಇಮಂ ಸರ್ವಾತಿಥಿಂ ದಾಂತಂ ಸರ್ವಭೂತಾನುಕಂಪಕಂ ।
ಸಮಾನ್ನದಾನದಾತಾರಂ ಶೇಷಭೋಜನಭೋಜನಂ ॥ ೨ ॥

ಮುಂಚ ಮುಂಚ ಮಹಾಭೃತ್ಯ ಚೈಷ ಧರ್ಮಸ್ಯ ನಿರ್ಣಯಃ ।
ಅಹಂ ಕಾಲೇನ ಸಾರ್ಧಂ ಹಿ ಮೃತ್ಯುನಾ ಪ್ರೇರಿತಸ್ತಥಾ ॥ ೩ ॥

ಇನ್ನೂರಾರನೆಯ ಅಧ್ಯಾಯ

ಶುಭಕರ್ಮಫಲೋದಯ

೧. ನಚಿಕೇತಋಷಿ:— ಪೂಜ್ಯರೂ ತಪಸ್ಸಿದ್ಧರೂ ಆದ ಬ್ರಾಹ್ಮಣೋತ್ತಮರೇ, ಚಿತ್ರಗುಪ್ತನ ಸಂದೇಶಗಳಲ್ಲಿ ನಾನು ಕೇಳಿದುದನ್ನು ತಿಳಿಸುತ್ತೇನೆ. ಕೇಳಿರಿ.

೨-೩. ಚಿತ್ರಗುಪ್ತ:- ಸೇವಕೋತ್ತಮನೇ, ಸರ್ವಾತಿಥಿಗಳನ್ನೂ ಆದರಿಸುವವನೂ, ಜಿತೇಂದ್ರಿಯನೂ, ಸರ್ವಪ್ರಾಣಿದಯಾಪರನೂ, ಪಂಕ್ತಿಭೇದವಿಲ್ಲದೆ ಸಮವಾಗಿ ಅನ್ನದಾನಮಾಡುವವನೂ, ಅತಿಥಿಶೇಷಾನ್ನವನ್ನು ಭುಜಿಸುವವನೂ ಆದ ಈತನನ್ನು ಬಿಡು ಬಿಡು. ಇದು ಧರ್ಮದ ನಿರ್ಣಯ. ನಾನು ಮೃತ್ಯುವಾದ ಯಮನಿಂದ ಹಾಗೆ ಆಜ್ಞಾಪಿಸಲ್ಪಟ್ಟಿದ್ದೇನೆ.

ಮಮ ಸ್ಥಾಸ್ಯಂತಿ ಪಾರ್ಶ್ವೇಷು ಪಾಪಾ ವೈ ವಿಕೃತಾಸ್ತಥಾ ।
ಏನಂ ಗಾಸ್ಯಂತಿ ಗಂಧರ್ವಾ ಗಗನೇಽಪ್ಸರಸಸ್ತಥಾ ॥ ೪ ॥

ದೀಯತಾಮಾಸನಂ ದಿವ್ಯಂ ತಥಾನ್ಯದ್ಯಾನಮೇವ ಚ ।
ಅನ್ಯಾನ್ಯಾನ್ಕಾಮಯೇತ್ಕಾಮಾನ್ಮನಸಾ ಯಾನಿ ಚೇಚ್ಛತಿ ॥ ೫ ॥

ತತ್ತು ಶೀಘ್ರಂ ಪ್ರದಾತವ್ಯಂ ಧರ್ಮರಾಜಸ್ಯ ಶಾಸನಾತ್ ।
ಅಕ್ರಿಯಾಣಿ ತು ದಾನಾನಿ ಪೂರ್ವಂ ದತ್ತಾನಿ ಧೀಮತಾ ॥ ೬ ॥

ಪ್ರೇಕ್ಷತಾಂ ಚ ಮಹಾಭಾಗೋ ಭೋಕ್ತುಂ ಚೈವ ಸಹಾನುಗಃ ।
ತಿಷ್ಠತ್ಯೇಷೋಽತ್ರ ವೈ ವೀರೋ ಯಮಾದೇಶಾನ್ಮಹಾಯಶಾಃ ॥ ೭ ॥

ಯಾವತ್ಸ್ವರ್ಗಾದ್ವಿಮಾನಾನಿ ಸಮಾಗಚ್ಛಂತಿ ಕೃತ್ಸ್ನಶಃ ।
ತತಸ್ಸ ಪ್ರವರೈರ್ಯಾನೈಸ್ಸಾನುಗಃ ಸಪರಿಚ್ಛದಃ ॥ ೮ ॥

ದೇವಾನಾಂ ಭವನಂಯಾತು ದೈವತೈರಭಿಪೂಜಿತಃ ।
ತತ್ರೈವ ರಮತಾಂ ವೀರೋ ಯಾವಲ್ಲೋಕೋ ಹಿ ಧಾರ್ಯತೇ ॥ ೯ ॥

೪-೬. ವಿಕೃತರೂ, ಪಾಪಿಗಳೂ ನನ್ನ ಪಕ್ಕಗಳಲ್ಲಿರುವರು. ಈತನನ್ನು ಆಕಾಶದಲ್ಲಿ ಗಂಧರ್ವರೂ, ಅಪ್ಸರರೂ ಗಾನಮಾಡುವರು. ಈತನಿಗೆ ದಿವ್ಯಾಸನವನ್ನೋ, ಒಂದು ವಿಮಾನವನ್ನೋ ಅಥವಾ ಬೇರಾವ ಇಷ್ಟಾರ್ಥಗಳನ್ನು ಬಯಸುವನೋ ಅದನ್ನೂ ಧರ್ಮರಾಜನ ಅಪ್ಪಣೆಯಾಗಿರುವುದರಿಂದ ಬೇಗನೆ ಕೊಡಬೇಕು. ಈ ವಿದ್ವಾಂಸನು ಇತರರು ಕೊಡಲಾಗದ ದಾನಗಳನ್ನು ಕೊಟ್ಟಿರುವನು.

೭-೯. ಈ ವೀರನು ಇಲ್ಲಿರುವನಷ್ಟೆ. ಸ್ವರ್ಗದಿಂದ ವಿಮಾನಗಳು ಬರುವವರೆಗೂ ಈ ಮಹಾಶಯನಿಗೆ ಈತನ ಜತೆಯವರೊಡನೆ ಸರಿಯಾದ ಭೋಜನವಾಗುವಂತೆ ನೋಡಿಕೊಳ್ಳಿ. ನಾನು ನಿಯಮಿಸಿದ್ದೇನೆ. ಉತ್ತಮಯಾನಗಳು ಬಂದ ಬಳಿಕ ಸಂಗಡಿಗರೊಡನೆಯೂ ಪರಿವಾರದೊಡನೆಯೂ ಅವುಗಳಲ್ಲಿ ದೇವಲೋಕಕ್ಕೆ ಹೋಗಲಿ. ಈ ವೀರನು ದೇವತೆಗಳಿಂದ ಪೂಜಿತನಾಗಿ ಲೋಕವಿರುವವರೆಗೂ ಅಲ್ಲಿಯೇ ರಮಿಸಲಿ.

ಸ ಕೃತಾರ್ಥಸ್ಸದಾ ಲೋಕೇ ಯತ್ರೈಷೋಽಭಿಪ್ರಯಾಸ್ಯತಿ ।
ತತ್ರ ಮೇಧ್ಯಂ ಪವಿತ್ರಂ ಚ ಯತ್ರ ಸ್ಥಾಸ್ಯತ್ಯಯಂ ಶುಚಿಃ ॥ ೧೦ ॥

ನೈಕಕನ್ಯಾಪ್ರದಾತಾರಂ ನೈಕಯಜ್ಞಕೃತಂ ತಥಾ ।
ಪೂಜ್ಯತಾಂ ಸರ್ವಕಾಮೈಸ್ತು ಪದಂ ಗಚ್ಛತು ವೈಷ್ಣವಂ ॥ ೧೧ ॥

ತತ್ರೈಷ ರಮತಾಂ ಧೀರಃ ಸಹಸ್ರಮಯುತಂ ಸಮಾಃ ।
ತತೋ ವೈ ಮಾನುಷೇ ಲೋಕ ಆದ್ಯೇ ವೈ ಜಾಯತಾಂ ಕುಲೇ ॥ ೧೨ ॥

ಭೂತಾನುಕಂಪಕೋ ಹ್ಯೇಷ ಕ್ರಿಯತಾಮಸ್ಯ ಚಾರ್ಚನಂ ।
ವರ್ಷಾಣಾಮಯುತಂ ಚಾಯಂ ತತ್ರ ತಿಷ್ಠತು ದೇವವತ್ ।
ಜಾಯತೇ ತು ತತಃ ಪಶ್ಚಾತ್ಸರ್ವಮಾನುಷಪೂಜಿತಃ ॥ ೧೩ ॥

ಉಪಾನಹೌ ಚ ಛತ್ರಂ ಚ ಜಲಭಾಜನಮೇವ ಚ ।
ಅಸಕೃದ್ಯೇನ ದತ್ತಾನಿ ತಸ್ಮೈ ಪೂಜಾಂ ಪ್ರಯಚ್ಛತ ॥ ೧೪ ॥

---

೧೦. ಲೋಕದಲ್ಲಿ ಕೃತಾರ್ಥನಾದ ಈ ಶುದ್ಧಾತ್ಮನು ಎಲ್ಲಿ ಹೋಗುವನೋ ಎಲ್ಲಿರುವನೋ ಆ ಪ್ರದೇಶವು ಸದಾ ಪವಿತ್ರವೂ ಶುಚಿಯೂ ಆಗುವುದು.

೧೧-೧೨. ಅನೇಕ ಕನ್ಯಾದಾನಗಳನ್ನು ಮಾಡಿದ ಮತ್ತು ಅನೇಕಯಜ್ಞಗಳನ್ನು ಮಾಡಿದ ಈತನನ್ನು ಸರ್ವೇಷ್ಟಾರ್ಥಗಳನ್ನೂ ಅರ್ಪಿಸಿ ಪೂಜಿಸಿರಿ. ಈ ವಿದ್ವಾಂಸನು ವೈಷ್ಣವಲೋಕವನ್ನು ಸೇರಿ ಅಲ್ಲಿಯೇ ಕೋಟ್ಯಂತರವರ್ಷಗಳು ಆನಂದಿಸಲಿ. ಬಳಿಕ ಮನುಷ್ಯಲೋಕದಲ್ಲಿ ಬ್ರಾಹ್ಮಣಕುಲದಲ್ಲಿ ಜನಿಸಲಿ.

೧೩. ಪ್ರಾಣಿದಯಾಪರನಾದ ಈತನನ್ನು ಅರ್ಚಿಸಿರಿ. ಹತ್ತುಸಾವಿರ ವರ್ಷಕಾಲ ಈತನೂ ದೇವನಂತೆ ಅಲ್ಲಿರಲಿ. ಬಳಿಕ ಸರ್ವಜನಪೂಜಿತನಾಗಿ ಜನಿಸುವನು.

೧೪. ಪಾದರಕ್ಷೆಗಳನ್ನೂ, ಕೊಡೆಯನ್ನೂ, ನೀರಿನಪಾತ್ರೆಯನ್ನೂ ಅನೇಕ ವೇಳೆ ದಾನಮಾಡಿದ ಆತನಿಗೆ ಪೂಜೆಯನ್ನು ಮಾಡಿ.

ಸಭಾ ಯತ್ರ ಪ್ರವರ್ತಂತೇ ಯಸ್ಮಿನ್ದೇಶೇ ಸಹಸ್ರಶಃ ।
ಹಸ್ತೇನ ಸಂಸ್ಪೃಶತ್ಯೇಷ ಮೃದುನಾ ಶೀತಲೇನ ಚ ॥ ೧೫ ॥

ವಿದ್ಯಾಧರಸ್ತಥಾ ಹ್ಯೇಷ ನಿತ್ಯಂ ಮುದಿತಮಾನಸಃ ॥ ೧೬ ॥

ಮಹಾಪದ್ಮಾನಿ ಚತ್ವಾರಿ ತಸ್ಮಿಂಸ್ತಿಷ್ಠಂತು ನಿತ್ಯಶಃ ।
ತತಶ್ಚ್ಯುತಶ್ಚ ಕಾಲೇನ ಮಾನುಷಂ ಲೋಕಮಾಸ್ಥಿತಃ ।
ಬಹುಸುಂದರನಾರೀಕೇ ಕುಲೇ ಜನ್ಮ ಸಮಾಪ್ನುಯಾತ್ ॥ ೧೭ ॥

ದಧಿ ಕ್ಷೀರಂ ಘೃತಂ ಚೈವಂ ಯೇನ ದತ್ತಂ ದ್ವಿಜಾತಿಷು ।
ಏಷ ವಾ ಯಾತು ನಃ ಪಾರ್ಶ್ವಮಸ್ಮೈ ಪೂಜಾಂ ಪ್ರಯಚ್ಛತ ॥ ೧೮ ॥

ನೀಯತಾಂ ನೀಯತಾಂ ಶೀಘ್ರಂ ಯತ್ರ ಯತ್ರ ನ ಚಾಲಯೇತ್ ।
ಗೋರಸಸ್ಯ ತು ಪೂರ್ಣಾನಿ ಭಾಜನಾನಿ ಸಹಸ್ರಶಃ ॥ ೧೯ ॥

೧೫–೧೭ ಆತನು ಎಲ್ಲಿ ಸಾವಿರಾರು ಸಭೆಗಳು ನಡೆಯುವುವೋ ಅಲ್ಲಿಗೆ ವಿದ್ಯಾಧರನಾಗಿ ಹೋಗಿ, ತನ್ನ ಮೃದುಶೀತಲವಾದ ಹಸ್ತದಿಂದ ಆಸಭಿಕರಿಗೆ ಹಸ್ತಲಾಘವವನ್ನು ಕೊಡುವನು. ಅಲ್ಲಿ ಸಂತುಷ್ಟಮನನಾಗಿ ನಾಲ್ಕುಮಹಾ ಪದ್ಮವರ್ಷಕಾಲ ಸ್ಥಿರವಾಗಿರಲಿ. ಬಳಿಕ ಅಲ್ಲಿಂದ ಪರಿಚ್ಯುತನಾಗಿ ಮನಷ್ಯ ಲೋಕಕ್ಕೆ ಬಂದು ಬಹುಸುಂದರನಾರಿಯರುಳ್ಳ ಕುಲದಲ್ಲಿ ಜನಿಸುವನು.

೧೮–೧೯. ದ್ವಿಜರಿಗೆ ಹಾಲುಮೊಸರುತುಪ್ಪಗಳನ್ನು ದಾನಮಾಡಿದ ಈತನು ನನ್ನ ಪಕ್ಕಕ್ಕೆ ಬರಲಿ. ಪೂಜೆಯನ್ನು ಮಾಡಿರಿ. ಗೋರಸ (ಗೋವಿನ ಹಾಲು ಮೊಸರು ತುಪ್ಪ)ಗಳಿಂದ ತುಂಬಿದ ಪಾತ್ರೆಗಳು ಸಾವಿರಾರು ತಪ್ಪದೆ ಎಲ್ಲಿ ಇರುವುವೋ ಅಲ್ಲಿಗೆ ಈತನನ್ನು ಬೇಗನೆ ಕರೆದುಕೊಂಡು ಹೋಗಿ.

ಯತ್ರ ದತ್ವಾ ಚ ಪೀತ್ವಾ ಚ ಬಾಂಧವೇಭ್ಯೋ ವಿಭಾಗಶಃ ।
ತತಃ ಪಶ್ಚಾದಯಂ ಯಾತು ಯತ್ರ ಲೋಕೋಽನಸೂಯಕಃ ॥ ೨೦ ॥
ತತ್ರೈವ ರಮತಾಂ ಧೀರೋ ಬಹುವರ್ಷಶತಾನ್ಯಯಂ ॥ ೨೧ ॥
ಬಹು ಸುಂದರನಾರೀಭಿಃ ಸೇವ್ಯಮಾನೋ ಮಹಾತಪಾಃ ।
ಅಮರತ್ವೋ ಭವೇತ್ತತ್ರ ಗೋಲೋಕೇಷು ಸಮಾಹಿತಃ ॥ ೨೨ ॥
ಇದಮೇವಾಪರಂ ಚೈವ ಚಿತ್ರಗುಪ್ತಸ್ಯ ಭಾಷಿತಂ ।
ಸರ್ವದೇವಮಯಾ ದೇವ್ಯಃ ಸರ್ವವೇದಮಯಾಸ್ತಥಾ ॥ ೨೩ ॥
ಅಮೃತಂ ಧಾರಯಂತ್ಯಶ್ಚ ಪ್ರಚರಂತಿ ಮಹೀತಲೇ ।
ತೀರ್ಥಾನಾಂ ಪರಮಂ ತೀರ್ಥಮತಸ್ತೀರ್ಥಂ ನ ವಿದ್ಯತೇ ॥ ೨೪ ॥
ಪವಿತ್ರಂ ಚ ಪವಿತ್ರಾಣಾಂ ಪುಷ್ಟೀನಾಂ ಪುಷ್ಟಿರೇವ ಚ ।
ತಸ್ಮಾತ್ಪರಸ್ತು ದಾತವ್ಯಂ ಗವಾಂ ವೈ ಮೇಧ್ಯಕಾರಣಾತ್ ॥ ೨೫ ॥

೨೦–೨೧. ಅಲ್ಲಿ ಈತನು ಗೋರಸವನ್ನು ತನ್ನ ಬಂಧುಗಳೊಡನೆ ತಾನೂ ಬೇಕಾದಹಾಗೆ ಸೇವಿಸಿ, ಬಳಿಕ ಅಸೂಯೆಯಿಲ್ಲದ ಲೋಕಕ್ಕೆ ಹೋಗಿ, ಅಲ್ಲಿ ಸಾವಿರಾರುವರ್ಷಗಳಕಾಲ ರಮಿಸಲಿ.

೨೨. ಶಾಂತನಾದ ಈ ಮಹಾತಪನು ಆಸ್ವರ್ಗಲೋಕದಲ್ಲಿ ಬಹುಸುಂದರ ನಾರಿಯರಿಂದ ಸೇವಿತನಾಗಿ ಅಮರನೆನಿಸಿಕೊಳ್ಳುವನು.

೨೩-೨೪. ಈ ಬೇರೊಂದು ಮಾತೂ ಚಿತ್ರಗುಪ್ತನು ಹೇಳಿದುದು. ' ಸರ್ವ ದೇವಮಯರೂ, ಸರ್ವವೇದಮಯರೂ ಆಗಿ, ಅಮೃತವನ್ನು ಧರಿಸಿರುವ ಈ ಗೋದೇವಿಯರು ಭೂಮಿಯಲ್ಲಿ ಸಂಚರಿಸುವರು. ತೀರ್ಥಗಳಲ್ಲೆಲ್ಲಾ ಗೋ ದೇವಿಯೇ ಪರಮತೀರ್ಥ. ಅದಕ್ಕಿಂತ ಮೇಲಾದ ತೀರ್ಥವಿಲ್ಲ.

೨೫. ಗೋರಸವು ಪವಿತ್ರವಾದುವುಗಳಲ್ಲೆಲ್ಲಾ ಪರಮಪವಿತ್ರವೂ, ಪುಷ್ಟಿ ಕರವಾದವುಗಳಲ್ಲಿ ಅತಿಪುಷ್ಟಿಕರವೂ ಆದುದು. ಹೀಗೆ ಪರಿಶುದ್ಧವಾಗಿರುವುದರಿಂದ ಗೋರಸವನ್ನು ಅತಿಥಿಗಳೇ ಮೊದಲಾದವರಿಗೆ ಮೊದಲು ಅರ್ಪಿಸಬೇಕು.

ದಧ್ನಾ ಹಿ ತ್ರಿದಶಾಸ್ಸರ್ವೇ ಕ್ಷೀರೇಣ ಚ ಮಹೇಶ್ವರಃ ।
ಘೃತೇನ ಪಾವಕೋ ನಿತ್ಯಂ ಪಾಯಸೇನ ಪಿತಾಮಹಃ ॥ ೨೬ ॥

ಸಕೃದ್ದತ್ತೇನ ಪ್ರೀಯಂತೇ ವರ್ಷಾಣಾಂ ಹಿ ತ್ರಯೋದಶ ।
ತಾಂ ದತ್ವಾ ಚೈವ ಪೀತ್ವಾ ಚ ಪ್ರೀತೋ ಮೇಧ್ಯಸ್ತು ಜಾಯತೇ ॥ ೨೭ ॥

ಪಂಚಗವ್ಯೇನ ಪೀತೇನ ವಾಜಿಮೇಧಫಲಂ ಲಭೇತ್ ।
ಗವ್ಯಂ ತು ಪರಮಂ ಮೇಧ್ಯಂ ಗವ್ಯಾದನ್ಯನ್ನವಿದ್ಯತೇ ॥ ೨೮ ॥

ದಂತೇಷು ಮರುತೋ ದೇವಾ ಜಿಹ್ವಾಯಾಂ ತು ಸರಸ್ವತೀ ।
ಖುರಮಧ್ಯೇತು ಗಂಧರ್ವಾಃ ಖುರಾಗ್ರೇಷು ತು ಪನ್ನಗಾಃ ॥ ೨೯ ॥

ಸರ್ವಸಂಧಿಷು ಸಾಧ್ಯಾಶ್ಚ ಚಂದ್ರಾದಿತ್ಯೌ ತು ಲೋಚನೇ ।
ಕಕುದೇ ಸರ್ವನಕ್ಷತ್ರಾಣಿ ಲಾಂಗೂಲೇ ಧರ್ಮ ಆಶ್ರಿತಃ ॥ ೩೦ ॥

೨೬-೨೭. ಒಂದುಸಾರಿ ಕೊಟ್ಟಮಾತ್ರದಲ್ಲಿ ಹಸುವಿನ ಮೊಸರಿನಿಂದ ಎಲ್ಲಾ ದೇವತೆಗಳೂ, ಹಾಲಿನಿಂದ ಮಹೇಶ್ವರನೂ, ತುಪ್ಪದಿಂದ ಅಗ್ನಿಯೂ, ಹಾಲಿನ ಪಾಯಸದಿಂದ ಬ್ರಹ್ಮನೂ ಹದಿಮೂರುವರ್ಷಗಳಕಾಲ ತೃಪ್ತಿಯನ್ನು ಪಡೆಯುವರು. ಅವುಗಳನ್ನು ಕೊಟ್ಟೂ, ಸೇವಿಸಿಯೂ ಮನುಷ್ಯನು ಸಂತೋಷವುಳ್ಳವನೂ, ಪವಿತ್ರನೂ ಆಗುವನು.

೨೮. ಹಸುವಿನ ಹಾಲು ಮೊಸರು ಮೊದಲಾದುವುಗಳಿಗಿಂತ ಪವಿತ್ರವಾದುದು ಬೇರೆ ಇಲ್ಲ. ಪಂಚಗವ್ಯವನ್ನು ಸೇವಿಸುವುದರಿಂದ ಅಶ್ವಮೇಧಫಲವು ಲಭಿಸುವುದು.

೨೯-೩೦. ಗೋವಿನ ಹಲ್ಲುಗಳಲ್ಲಿ ಮರುದ್ದೇವತೆಗಳೂ, ನಾಲಗೆಯಲ್ಲಿ ಸರಸ್ವತಿಯೂ, ಗೊರಸುಗಳ ನಡುವೆ ಗಂಧರ್ವರೂ, ಕೊನೆಗಳಲ್ಲಿ ನಾಗರೂ, ಎಲ್ಲಾ ಸಂಧಿಪ್ರದೇಶಗಳಲ್ಲಿಯೂ ಸಾಧ್ಯರೂ, ಕಣ್ಣುಗಳಲ್ಲಿ ಚಂದ್ರಸೂರ್ಯರೂ, ಹಿಣಿಲಿ

ಅಪಾನೇ ಸರ್ವತೀರ್ಥಾನಿ ಪ್ರಸ್ರಾವೇ ಜಾಹ್ನವೀ ನದೀ ।
ನಾನಾದ್ವೀಪಸಮಾಕೀರ್ಣಾಶ್ಚತ್ವಾರಸ್ಸಾಗರಾಸ್ತಥಾ ॥ ೩೧ ॥

ಋಷಯೋ ರೋಮಕೂಪೇಷು ಗೋಮಯೇ ಪದ್ಮಧಾರಿಣೀ ।
ರೋಮೇ ವಸಂತಿ ವಿದ್ಯಾಶ್ಚ ತ್ವಕ್ಕೇಶೇಷ್ವಯನದ್ವಯಂ ॥ ೩೨ ॥

ಧೈರ್ಯಂ ಧೃತಿಶ್ಚ ಶಾಂತಿಶ್ಚ ಪುಷ್ಟಿರ್ವೃದ್ಧಿಸ್ತಥೈವ ಚ ।
ಸ್ಮೃತಿರ್ಮೇಧಾ ತಥಾ ಲಜ್ಜಾ ವಪುಃ ಕೀರ್ತಿಸ್ತಥೈವ ಚ ॥ ೩೩ ॥

ವಿದ್ಯಾ ಶಾಂತಿರ್ಮತಿಶ್ಚೈವ ಸಂತತಿಃ ಪರಮಾ ತಥಾ ।
ಗಚ್ಛಂತಮನುಗಚ್ಛಂತಿ ಹ್ಯೇತಾ ಗಾವೋ ನ ಸಂಶಯಃ ॥ ೩೪ ॥

ಯತ್ರ ಗಾವೋ ಜಗತ್ತತ್ರ ದೇವದೇವಪುರೋಗಮಾಃ ।
ಯತ್ರ ಗಾವಸ್ತತ್ರ ಲಕ್ಷ್ಮೀಃ ಸಾಂಖ್ಯಧರ್ಮಶ್ಚ ಶಾಶ್ವತಃ ॥ ೩೫ ॥

ನಲ್ಲಿ ಸರ್ವಕ್ಷತ್ರಿಯರೂ, ಬಾಲದಲ್ಲಿ ಧರ್ಮನೂ ನೆಲಸಿರುವರು. ಗುದದಲ್ಲಿ ಸರ್ವತೀರ್ಥಗಳೂ, ಗಂಜಲದಲ್ಲಿ ಗಂಗಾನದಿಯೂ, ಅನೇಕ ದ್ವೀಪಗಳಿಂದ ವ್ಯಾಪ್ತವಾಗಿರುವ ನಾಲ್ಕು ಸಾಗರಗಳೂ ಇರುವುವು.

೩೨–೩೩. ಗೋವಿನ ರೋಮಕೂಪಗಳಲ್ಲಿ ಋಷಿಗಳೂ, ಸಗಣಿಯಲ್ಲಿ ಲಕ್ಷ್ಮಿಯೂ ಇರುವರು. ರೋಮದಲ್ಲಿ ವಿದ್ಯೆಯೂ, ಚರ್ಮಕೇಶಗಳಲ್ಲಿ ಎರಡು ಅಯನಗಳೂ, ಧೈರ್ಯ, ಶಾಂತಿ, ಪುಷ್ಟಿ, ವೃದ್ಧಿ, ಸ್ಮೃತಿ, ಮೇಧೆ, ಲಜ್ಜೆ, ದೇಹ ಕೀರ್ತಿ ಇವುಗಳೂ ಇರುವುವು.

೩೪. ಈ ಹಸುಗಳನ್ನು ಸೇವಿಸುವವನಿಗೆ ವಿದ್ಯೆ, ಶಾಂತಿ, ಮತಿ, ಪರಮ ಸಂತತಿ ಇದೆಲ್ಲವೂ ಲಭಿಸುವುವು.

೩೫. ಎಲ್ಲಿ ಗೋವುಗಳೋ ಅಲ್ಲಿ ಜಗತ್ತಿರುವುದು. ದೇವನೂ, ದೇವತೆಗಳೇ ಮೊದಲಾದವರೂ ಇರುವರು. ಎಲ್ಲಿ ಗೋವುಗಳಿರುವುವೋ ಅಲ್ಲಿ ಲಕ್ಷ್ಮಿಯು ಸ್ಥಿರವಾಗಿರುವಳು. ಸಾಂಖ್ಯಧರ್ಮವೂ ಸ್ಥಿರವಾಗಿರುವುದು.

ಸರ್ವರೂಪೇಷು ತಾ ಗಾವಸ್ತಿಷ್ಠಂತ್ಯಭಿಮತಾಸ್ತಥಾ ।
ಭವನೇಷು ವಿಶಾಲೇಷು ಸರ್ವಪ್ರಾಸಾದಪಂಕ್ತಿಷು ॥ ೩೬ ॥

ಸ್ತ್ರಿಯಶ್ಚ ಪುರುಷಾಶ್ಚೈವ ರಕ್ಷಂತಶ್ಚ ಸುಯಂತ್ರಿತಾಃ ।
ಶಯನಾಸನಪಾನೇಷು ಹ್ಯುಪವಿಷ್ಟಾಸ್ಸಹಸ್ರಶಃ ॥ ೩೭ ॥

ಕ್ರೀಡಂತಿ ವಿವಿಧೈರ್ಭೋಗೈರ್ಭಾಗೇಷು ಚ ಸಹಸ್ರಶಃ ।
ತತ್ರ ಪಾನಗೃಹೇಷ್ವನ್ಯೇ ಪುಷ್ಪಮಾಲಾವಿಭೂಷಿತಾಃ ॥ ೩೮ ॥

ಭಕ್ಷ್ಯಾಣಾಂ ವಿವಿಧಾನಾಂ ಚ ಭೋಜನಾನಾಂ ಚ ಸಂಚಯಾತ್ ।
ಶಯನಾಸನಪಾನಾನಿ ವಾಜಿನೋ ವಾರಣಾಸ್ತಥಾ ॥ ೩೯ ॥

ಅಪಶ್ಯನ್ವಿವಿಧಾಸ್ತತ್ರ ಸ್ತ್ರಿಯಶ್ಚ ಶುಭಲೋಚನಾಃ ।
ಶೋಭಯಂತಿ ಸ್ತ್ರಿಯಃ ಕಾಶ್ಚಿಜ್ಜಲಕ್ರೀಡಾಗತಾಸ್ತಥಾ ।
ಉದ್ಯಾನೇಷು ತಥಾ ಚಾನ್ಯಾ ಭವನೇಷು ಚ ಪುಣ್ಯತಃ ॥ ೪೦ ॥

೩೬-೩೭. ಆದುದರಿಂದ ಆ ಗೋವುಗಳು ವಿಶಾಲವಾದ ಮನೆಗಳಲ್ಲಿಯೂ, ಪ್ರಾಸಾದಪಂಕ್ತಿಗಳಲ್ಲಿಯೂ ಅವಕ್ಕೆ ಇಷ್ಟಬಂದರೂಪಗಳಲ್ಲಿ ಬೇಕಾದಂತಿರುವುವು. ಅವುಗಳಿಗೆ ಆಹಾರವನ್ನೂ, ನೀರನ್ನೂ, ಮಲಗಲಿಡೆಯನ್ನೂ ಸಿದ್ಧಪಡಿಸಿ ರಕ್ಷಿಸಲು ಸರಿಯಾಗಿ ನಿಯಮಿತರಾದ ಸಾವಿರಾರುಜನಸ್ತ್ರೀಯರೂ, ಪುರುಷರೂ ಇರುವರು. ಎಂದನು.

೩೮-೩೯. ಆಯಮಲೋಕದಲ್ಲಿ ಹೀಗೆ ಸಾವಿರಾರುಜನ ಸ್ತ್ರೀಯರೂ, ಪುರುಷರೂ ಪುಷ್ಪಮಾಲೆಗಳಿಂದಲಂಕೃತರಾಗಿ ಬಗೆಬಗೆಯ ಭಕ್ಷ್ಯಭೋಜ್ಯಗಳಿಂದಲೂ, ಕೆಲವರು ಪಾನಗೃಹಗಳಿಂದಲೂ, ಶಯನಾಸನಪಾನಗಳಿಂದಲೂ, ವಿವಿಧ ಭೋಗಗಳಿಂದ ವಿಹರಿಸುವರು. ಅಲ್ಲಿ ಅನೇಕುದುರೆಗಳೂ ಇರುವುವು.

೪೦. ಅಲ್ಲಿ ಶುಭನೇತ್ರೆಯರಾದ ಬಗೆಬಗೆಯ ಸ್ತ್ರೀಯರೂ ಕಂಡರು. ಪುಣ್ಯದಿಂದ ಅವರಲ್ಲಿ ಕೆಲವರು ಜಲಕ್ರೀಡೆಯಲ್ಲಾಸಕ್ತರಾಗಿಯೂ, ಮತ್ತೆ ಕೆಲವರು ಉದ್ಯಾನವನಗಳಲ್ಲಿಯೂ, ಇನ್ನೂ ಕೆಲವರು ಮನೆಗಳಲ್ಲಿಯೂ ವಿಹರಿಸುತ್ತ ಆ ಸ್ಥಳವನ್ನು ಸೊಗಸುಗೊಳಿಸುತ್ತಿರುವರು.

ಅನೇನ ಸದೃಶಂ ನಾಸ್ತಿ ಹ್ಯಸ್ಮಾದನ್ಯನ್ನ ವಿದ್ಯತೇ ॥ ೪೧ ॥

ಅಹೋ ಸೂತ್ರಕೃತಂ ಶಿಲ್ಪಮಹೋ ರತ್ನೈರಲಂಕೃತಂ ।
ಏವಂ ಗೃಹಾದ್ಗೃಹಂ ಗಚ್ಛನ್ನಹಂ ತತ್ರ ತತಸ್ತತಃ ॥ ೪೨ ॥

ತತಸ್ತು ನಿಖಿಲಂ ಸಮ್ಯಗ್ದೃಷ್ಟ್ವಾ ಕರ್ಮಮಹೋದಯಂ ।
ಪುನರೇವಾಗತಃ ಪಾರ್ಶ್ವಂ ಯಮಸ್ಯ ದ್ವಿಜಸತ್ತಮಾಃ ॥ ೪೩ ॥

ಇತಿ ಶ್ರೀವರಾಹಪುರಾಣೇ ಸಂಸಾರಚಕ್ರೇ ಶುಭಕರ್ಮಫಲೋದಯೋ ನಾಮ ಷಡಧಿಕದ್ವಿಶತತಮೋಧ್ಯಾಯಃ

೪೧-೪೩. ಬ್ರಾಹ್ಮಣೋತ್ತಮರೇ, ನಾನು ‘ ಇದಕ್ಕೆ ಸಮಾನವಾದುದಿಲ್ಲ. ಇದಕ್ಕಿಂತ ಮೇಲಾದುದು ಬೇರೆ ಇಲ್ಲ. ಆಹಾ ! ಈ ಸೂತ್ರಾನುಸಾರವಾಗಿ ಮಾಡಿರುವ ಶಿಲ್ಪವು ಎಷ್ಟು ಚೆನ್ನಾಗಿದೆ ! ಈ ರತ್ನಾಲಂಕಾರವು. ಆಶ್ಚರ್ಯಕರವಾಗಿದೆ ’ ಎಂದುಕೊಳ್ಳುತ್ತ ಮನೆಯಿಂದ ಮನೆಗೆ ಹೋಗಿ ಆ ಆಧಿಪತ್ಯದ ಕ್ರಮವೆಲ್ಲವನ್ನೂ ಚೆನ್ನಾಗಿ ನೋಡಿ, ಮತ್ತೆ ಯಮನ ಪಾರ್ಶ್ವಕ್ಕೇ ಬಂದೆನು.

ಅಧ್ಯಾಯದ ಸಾರಾಂಶ:—

ನಚಿಕೇತನು ಋಷಿಗಳೇ ಮೊದಲಾದವರಿಗೆ- ಯಮಲೋಕದಲ್ಲಿ ತಾನು ನೋಡಿದ ಪುಣ್ಯಶಾಲಿಗಳಿಗೆ ಅಥವಾ ಶುಭಕರ್ಮಿಗಳಿಗೆ ಆಗುವ ಸುಖಗೌರವಗಳ ವಿಚಾರವನ್ನು ವಿವರಿಸಿ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರಾರನೆಯ ಅಧ್ಯಾಯಂ.

|| ಶ್ರೀ ||

ಸಪ್ತಾಧಿಕದ್ವಿಶತತಮೋಽಧ್ಯಾಯಃ

ಅಥ ಸಂಸಾರಚಕ್ರಪುರುಷವಿಲೋಭನಪ್ರಕರಣಂ

|| ಋಷಿಪುತ್ರ ಉವಾಚ ||

ಇದಮನ್ಯನ್ಮಹಾಭಾಗಾನ್ನಾರದಾತ್ಕಲಹಪ್ರಿಯಾತ್ ।
ಶ್ರುತಂ ವಿಪ್ರಾ ಯಥಾ ತತ್ರ ಯಮಸ್ಯ ಸದಸಿ ಸ್ವಯಂ || ೧ ||

ತಥಾ ಚ ಪೃಚ್ಛತಸ್ತಸ್ಯ ಪುರಾವೃತ್ತಂ ಮಹಾತ್ಮನಃ ।
ಆಖ್ಯಾನಂ ಕಥಯಾಮಾಸ ಯದುಕ್ತಂ ಚಿತ್ರಭಾನುನಾ । || ೨ ||

ಯಥಾ ಚ ಜನಕೋ ರಾಜಾ ಕಾಮಾನ್ದಿವ್ಯಾನವಾಪ್ತವಾನ್ ।
ತತ್ಸರ್ವಂ ಕಥಯಿಷ್ಯಾಮಿ ಶ್ರೂಯತಾಂ ಮುನಿಸತ್ತಮಾಃ || ೩ ||

ಇನ್ನೂರೇಳನೆಯ ಅಧ್ಯಾಯ

ಸಂಸಾರಚಕ್ರಪುರುಷವಿಲೋಭನಪ್ರಕರಣ.

೧-೩. ನಚಿಕೇತ:— ಬ್ರಾಹ್ಮಣರೇ, ಋಷಿವರ್ಯರೇ, ಪೂಜ್ಯನೂ ಕಲಹಪ್ರಿಯನೂ ಆದ ನಾರದಮುನಿಯು ಯಮನನ್ನು ಸಭೆಯಲ್ಲಿ ಪ್ರಶ್ನಿಸಲು ಆ ಯಮನೇ ತಾನು *ಚಿತ್ರಭಾನುವಿನಿಂದ ಕೇಳಿದ್ದ, ಜನಕರಾಜನು ದಿವ್ಯಕಾಮಗಳನ್ನು ಹೇಗೆ ಪಡೆದನೆಂಬ ಕಥೆಯೇ ಮೊದಲಾದುದನ್ನು ಆ ನಾರದಮುನಿಗೆ ಹೇಳಿದನು. ನಾನು ಕೇಳಿದ ಅದೆಲ್ಲವನ್ನೂ ನಿಮಗೆ ಹೇಳುತ್ತೇನೆ ಲಾಲಿಸಿ.

---

* ಚಿತ್ರಭಾನು= ಸೂರ್ಯ ; ಅಗ್ನಿ.

ಅಯಂ ತತ್ರ ಮಹಾತೇಜಾ ನಾರದೋ ಮುನಿಸತ್ತಮಃ ।
ಧರ್ಮರಾಜಸಭಾಂ ಪ್ರಾಪ್ತಸ್ತಪಸಾ ದ್ಯೋತಿತಪ್ರಭಃ ॥ ೪ ॥

ತತ್ರ ರಾಜಾಥ ವೇಗೇನ ತಂ ದೃಷ್ಟ್ವಾ ಸ್ವಯಮಾಗತಂ ।
ಅರ್ಚಯಿತ್ವಾ ಯಥಾನ್ಯಾಯಂ ಕೃತ್ವಾ ಚೈವ ಪ್ರದಕ್ಷಿಣಂ ।
ಉವಾಚ ಚ ಮಹಾತೇಜಾಸ್ಸೂರ್ಯಪುತ್ರಃ ಪ್ರತಾಪವಾನ್ ॥ ೫ ॥

ಸ್ವಾಗತಂ ತೇ ದ್ವಿಜಶ್ರೇಷ್ಠ ದಿಷ್ಟ್ಯಾ ಪ್ರಾಪ್ತೋಽಸಿ ನಾರದ ॥ ೬ ॥

ಸರ್ವಜ್ಞಸ್ಸರ್ವದರ್ಶೀ ಚ ಸರ್ವಧರ್ಮವಿದಾಂ ವರಃ ।
ಗಾಂಧರ್ವಸ್ಯೇತಿಹಾಸಸ್ಯ ವಿಜ್ಞಾತಾ ತ್ವಂ ಮಹಾಮುನೇ ॥ ೭ ॥

ವಯಂ ಪೂತಾಶ್ಚ ಮೇಧ್ಯಾಶ್ಚ ತ್ವಾಂದೃಷ್ಟ್ವಾ ಹ್ಯಾಗತಂ ವಿಭೋ ।
ಅಯಂ ದೇಶಃ ಪುನಃ ಪೂತಸ್ಸರ್ವತೋ ಮುನಿಸತ್ತಮ ॥ ೮ ॥

---

೪. ಮಹಾತೇಜನೂ, ಮುನಿವರ್ಯನೂ ಆದ ನಾರದನು ಒಂದುದಿನ ಯಮರಾಜನ ಸಭೆಗೆ ಬಂದನು.

೫. ಸೂರ್ಯಪುತ್ರನೂ, ಪ್ರತಾಪಶಾಲಿಯೂ ಆದ ಧರ್ಮರಾಜನು, ತಾನಾಗಿ ಬಂದ ಆತನನ್ನು ತಟ್ಟನೆ ನೋಡಿ, ತಕ್ಕಂತೆ ಪೂಜಿಸಿ ಪ್ರದಕ್ಷಿಣನಮಸ್ಕಾರಗಳನ್ನು ಮಾಡಿ, ಮುಂದಿನಂತೆ ಹೇಳಿದನು.

೬–೮. ‘ ದ್ವಿಜೋತ್ತಮನೇ, ನಿನಗೆ ಸುಖಾಗಮನ. ನನ್ನ ಭಾಗ್ಯದಿಂದ ನೀನು ಇಲ್ಲಿಗೆ ದಯಮಾಡಿಸಿದ್ದೀಯೆ. ಮಹಾಮುನಿಯೇ, ವಿಭೂ, ಸರ್ವಜ್ಞೋತ್ತಮನೂ, ಸರ್ವದರ್ಶಿಯೂ ಗಾಂಧರ್ವವೇದೇತಿಹಾಸಗಳನ್ನರಿತವನೂ ಆದ ನಿನ್ನನ್ನು ಇಲ್ಲಿ ನೋಡಿದ ನಾವು ಧನ್ಯರು. ಪವಿತ್ರರು. ಈದೇಶವೆಲ್ಲವೂ ಪವಿತ್ರವಾಯಿತು.

ಯಃ ಕಾರ್ಯಂ ಯೇನ ವಾ ಕಾರ್ಯಂ ಯದ್ವೈ ಮನಸಿ ವರ್ತತೇ ।
ಪ್ರಬ್ರೂಹಿ ಭಗವಾನ್ನಾಶು ಯಚ್ಚಾನ್ಯತ್ಕಿಂಚಿದುತ್ತಮಂ ॥ ೯ ॥

ದುರ್ಲಭಂ ತ್ರಿಷು ಲೋಕೇಷು ಯಚ್ಚ ಪ್ರಿಯತರಂ ತವ ।
ತಪೋಮಯಾನಾಂ ಸರ್ವೇಷಾಂ ದ್ವಿಜಾತೀನಾಂ ಚ ಸುವ್ರತ ॥ ೧೦ ॥

ಇತಿ ಧರ್ಮವಚಶ್ಶ್ರುತ್ವಾ ನಾರದಃ ಪ್ರಾಹ ಧರ್ಮವಿತ್ ।
ಅಹಂ ತೇ ಕಥಯಿಷ್ಯಾಮಿ ಯತ್ಪೃಷ್ಟಂ ಸಂಶಯಾಸ್ಪದಂ ॥ ೧೧ ॥

॥ ನಾರದ ಉವಾಚ ॥

ಭವಾನ್ ಪಾತಾ ಚ ಗೋಪ್ತಾ ಚ ನೇತಾ ಧರ್ಮಸ್ಯ ನಿತ್ಯಶಃ ।
ಸತ್ಯೇನ ತಪಸಾ ಕ್ಷಾಂತ್ಯಾ ಧೈರ್ಯೇಣ ಚ ನ ಸಂಶಯಃ ॥ ೧೨ ॥

ಭಾವಜ್ಞಶ್ಚ ಕೃತಜ್ಞಶ್ಚ ತ್ವದನ್ಯೋ ನ ಹಿ ವಿದ್ಯತೇ ।
ಸಂಶಯಂ ಸುಮಹತ್ಪ್ರಾಪ್ತಸ್ತನ್ಮಮಾಚಕ್ಷ್ವ ಸುವ್ರತ ॥ ೧೩ ॥

೯-೧೦. ಭಗವಂತನೇ, ಸುವ್ರತನೇ, ನಿನಗೆ ಯಾರಿಂದ ಯಾವ ಕಾರ್ಯವಾಗಬೇಕು? ಯಾವುದಾದರೂ ಅತಿಪ್ರಿಯವಾದ ಉತ್ತಮವಸ್ತುವು ಮೂರು ಲೋಕಗಳಲ್ಲಿಯೂ ನಿನಗೆ ದುರ್ಲಭವಾಗಿದೆಯೇ? ಅಥವಾ ತಪೋಧರರಾದ ದ್ವಿಜರೆಲ್ಲರಿಗೂ ಯಾವುದಾದರೂ ದುರ್ಲಭವಾಗಿದೆಯೇ? ನಿನ್ನ ಮನಸ್ಸಿನಲ್ಲಿರುವುದನ್ನು ಬೇಗನೆ ಹೇಳು.'

೧೧. ಯಮಧರ್ಮನ ಆ ಮಾತನ್ನು ಕೇಳಿ, ಧರ್ಮಜ್ಞನಾದ ನಾರದನು, 'ನೀನು ಕೇಳಿದ ನನಗೆ ಸಂಶಯಾಸ್ಪದವಾಗಿರುವ ವಿಚಾರವನ್ನು ಹೇಳುತ್ತೇನೆ' ಎಂದನು.

೧೨. ನಾರದ:— ನೀನು, ಸತ್ಯದಿಂದಲೂ, ತಪಸ್ಸಿನಿಂದಲೂ, ಕ್ಷಮೆಯಿಂದಲೂ, ಧೈರ್ಯದಿಂದಲೂ ಸದಾ ಧರ್ಮದ ರಕ್ಷಕನೂ, ಪೋಷಕನೂ, ನಾಯಕನೂ ಆಗಿರುವೆಯೆಂಬುದರಲ್ಲಿ ಸಂಶಯವಿಲ್ಲ.

೧೩. ಭಾವಜ್ಞನೂ, ಕೃತಜ್ಞನೂ ಆದವನು ನೀನಲ್ಲದೆ ಬೇರೊಬ್ಬನಿಲ್ಲ. ಸುವ್ರತನೇ, ನನಗೆ ಮಹಾಸಂಶಯವುಂಟಾಗಿದೆ. ಅದಕ್ಕೆ ತಕ್ಕುದನ್ನು ಹೇಳಿ, ಪರಿಹರಿಸು.

ಅಮರತ್ವಂ ಕಥಂ ಯಾತಿ ವ್ರತೇನ ನಿಯಮೇನ ಚ ।
ಕೇನ ವಾ ದಾನಧರ್ಮೇಣ ತಪಸಾ ವಾ ಸುರೋತ್ತಮ ॥ ೧೪ ॥

ಅತುಲಾಂ ಚ ಶ್ರಿಯಂ ಲೋಕೇ ಕೀರ್ತಿಂ ಚ ಸುಮಹತ್ಫಲಂ ।
ಲಭಂತೇ ಶಾಶ್ವತಂ ಸ್ಥಾನಂ ದುರ್ಲಭಂ ವಿಗತಜ್ವರಾಃ ॥ ೧೫ ॥

ಕೇನ ಗಚ್ಛಂತಿ ನರಕಂ ಪಾಪಿಷ್ಠಂ ಲೋಕಗರ್ಹಣಂ ।
ಸರ್ವಮಾಖ್ಯಾಹಿ ತತ್ವೇನ ಪರಂ ಕೌತೂಹಲಂ ಹಿ ಮೇ ॥ ೧೬ ॥

॥ ಯಮ ಉವಾಚ ॥

ಗಚ್ಛಂತಿ ಹಿ ನರಾ ಘೋರಾ ಬಹವೋಽಧರ್ಮನಿರ್ಮಿತಂ ।
ಬಂಧಾಂಶ್ಚ ಸುಬಹೂಂಸ್ತತ್ರ ಪ್ರಾಪ್ನುವಂತಿ ತಪೋಧನ ॥ ೧೭ ॥

ವಿಸ್ತರೇಣ ತು ತತ್ಸರ್ವಂ ಬ್ರವೀಮಿ ಮುನಿಸತ್ತಮ ।
ಶ್ರೂಯತಾಂ ತನ್ಮಹಾಭಾಗ ಶ್ರುತ್ವಾ ಚೈವೋಪಧಾರಯ ॥ ೧೮ ॥

೧೪-೧೬. ಸುರೋತ್ತಮನೇ, ಹೇಗೆ ಯಾವ ವ್ರತದಿಂದ, ನಿಯಮದಿಂದ ದಾನಧರ್ಮದಿಂದ ಅಥವಾ ತಪಸ್ಸಿನಿಂದ ಮನುಷ್ಯರು ಅಮರತ್ವವನ್ನು ಪಡೆಯುವರು? ಯಾವುದರಿಂದ ಲೋಕದಲ್ಲಿ ಅತುಳೈಶ್ವರ್ಯವನ್ನೂ, ಕೀರ್ತಿಯನ್ನೂ, ಉತ್ತಮವಾದ ಮಹಾಫಲವನ್ನೂ ಪಡೆಯುವರು? ಅಥವಾ ತಾಪರಹಿತರಾಗಿ ದುರ್ಲಭವಾದ ಶಾಶ್ವತಸ್ಥಾನವನ್ನು ಪಡೆಯುವರು? ಯಾವುದರಿಂದ ಲೋಕ ನಿಂದ್ಯವಾದ ಪಾಪಿಷ್ಠನರಕಕ್ಕೆ ಹೋಗುವರು? ನನಗೆ ಬಹು ಕುತೂಹಲವಾಗಿದೆ. ಎಲ್ಲವನ್ನೂ ನಿಜವಾಗಿ ಹೇಳು.

೧೭-೧೮. ಯಮ:—ತಪೋಧನನೇ, ಘೋರರಾದ ಬಹುಜನರು ಅಧರ್ಮ ದಿಂದ (ಉಂಟಾಗುವ) ನರಕವನ್ನು ಸೇರಿ ಅಲ್ಲಿ ಬಹುವಿಧಬಂಧನಗಳನ್ನು ಪಡೆಯು ವರು. ಪೂಜ್ಯಮುನಿವರ್ಯನೇ, ಅದೆಲ್ಲವನ್ನೂ ವಿವರವಾಗಿ ಹೇಳುತ್ತೇನೆ ಕೇಳು ಕೇಳಿ ಬಳಿಕ ಮನಸ್ಸಿಗೆ ತಂದುಕೊ.

ನಾಗ್ನಿಚಿನ್ನರಕಂ ಯಾತಿ ನ ಪುತ್ರೀ ನ ಚ ಭೂಮಿದಃ ।
ಶೂರಶ್ಚ ಶತವರ್ಷೀ ಚ ವೇದಾನಾಂ ಚೈವಪಾರಗಃ ॥ ೧೯ ॥

ಪತಿವ್ರತಾ ನ ಗಚ್ಛಂತಿ ಸತ್ಯವಾಕ್ಯಾಶ್ಚ ಯೇ ನರಾಃ ।
ಅಜಿತಾಶ್ಚಾಶಕಾಶ್ಚೈವ ಸ್ವಾಮಿಭಕ್ತಾಶ್ಚ ಯೇ ನರಾಃ ॥ ೨೦ ॥

ಅಹಿಂಸಕಾ ನ ಗಚ್ಛಂತಿ ಬ್ರಹ್ಮಚರ್ಯವ್ಯವಸ್ಥಿತಾಃ ।
ಪತಿವ್ರತಾ ದಾನವಂತೋ ದ್ವಿಜಭಕ್ತಾಶ್ಚ ಯೇ ನರಾಃ ॥ ೨೧ ॥

ಸ್ವದಾರನಿರತಾ ದಾಂತಾಃ ಪರದಾರವಿವರ್ಜಕಾಃ ।
ಸರ್ವಭೂತಾತ್ಮಭೂತಾಶ್ಚ ಸರ್ವಭೂತಾನುಕಂಪಕಾಃ ॥ ೨೨ ॥

ನ ಗಚ್ಛಂತಿ ತು ತಂ ದೇಶಂ ಪಾಪಿಷ್ಠಂ ತಮಸಾವೃತಂ ।
ಯಾತನ ಸ್ಥಾನಸಂಪೂರ್ಣಂ ಹಾಹಾಕಾರಭಯಾಕುಲಂ ॥ ೨೩ ॥

---

೧೯. ಅಗ್ನಿಹೋತ್ರಮಾಡುವವನೂ, ಪುತ್ರವಂತನೂ, ಭೂದಾನಮಾಡಿದವನೂ, ಶೂರನೂ ನೂರುವರ್ಷಬದುಕಿದವನೂ. ವೇದಪಾರಂಗತನೂ ನರಕಕ್ಕೆ ಹೋಗುವುದಿಲ್ಲ.

೨೦. ಪತಿವ್ರತೆಯರೂ, ಸತ್ಯವಾಕ್ಕುಳ್ಳವರೂ, ಜಿತೇಂದ್ರಿಯರೂ, ದುಷ್ಟಾತ್ಮರಲ್ಲದವರೂ, ಸ್ವಾಮಿಭಕ್ತರೂ ನರಕಕ್ಕೆ ಹೋಗುವುದಿಲ್ಲ.

೨೧–೨೨. ಅಹಿಂಸಾಪರರೂ, ಬ್ರಹ್ಮಚರ್ಯವ್ರತಿಗಳೂ, ದಾನಶೀಲರೂ, ದ್ವಿಜಭಕ್ತರೂ, ಸ್ವಪತ್ನೀವ್ರತಿಗಳಾಗಿ ಪರಸ್ತ್ರೀವಿಮುಖರಾಗಿರುವವರೂ, ಇಂದ್ರಿಯಗಳನ್ನು ನಿಗ್ರಹಿಸಿದವರೂ, ಸರ್ವಪ್ರಾಣಿದಯಾಪರರಾಗಿ ಸರ್ವಭೂತಗಳನ್ನೂ ತನ್ನಂತೆ ಭಾವಿಸುವವರೂ ನರಕಕ್ಕೆ ಬೀಳುವುದಿಲ್ಲ.

೨೩–೨೫. ಜ್ಞಾನಿಗಳಾದ ದ್ವಿಜರೂ, ವಿದ್ಯಾಪಾರಂಗತರೂ, ಲಾಭನಷ್ಟಗಳಲ್ಲಿಯೂ, ಶತ್ರುಮಿತ್ರರಲ್ಲಿಯೂ ಉದಾಸೀನರಾಗಿರುವವರೂ, ಸ್ವಾಮಿಗಾಗಿ

ಜ್ಞಾನವಂತೋ ದ್ವಿಜಾ ಯೇ ಚ ಯೇ ಚ ವಿದ್ಯಾಂ ಪರಾಂಗತಾಃ |
ಉದಾಸೀನಾ ನ ಗಚ್ಛಂತಿ ಸ್ವಾಮ್ಯರ್ಥೇ ಚ ಹತಾ ನರಾಃ || ೨೪ ||

ನ ಗಚ್ಛಂತ್ಯತ್ರ ದಾತಾರಃ ಸರ್ವಭೂತಹಿತೇ ರತಾಃ |
ಶುಶ್ರೂಷಕಾ ಮಾತೃಪಿತ್ರೋರ್ನ ಗಚ್ಛಂತಿ ಚ ತೇನರಾಃ || ೨೫ ||

ತಿಲಾನ್ಗಾಂಚ ಹಿರಣ್ಯಂ ಚ ಪೃಥಿವೀಂ ಚಾಪಿ ಶಾಶ್ವತೀಂ |
ಬ್ರಾಹ್ಮಣೇಭ್ಯಃ ಪ್ರಯಚ್ಛಂತಿ ನ ಗಚ್ಛಂತಿ ನ ಸಂಶಯಃ || ೨೬ ||

ಯಥೋಕ್ತಂ ಯಜಮಾನಾಶ್ಚ ಸತ್ರಯಾಜಿನ ಏವ ಚ |
ಚಾತುರ್ಮಾಸ್ಯಕರಾ ಯೇ ಚ ಯೇ ದ್ವಿಜಾ ಆಹಿತಾಗ್ನಯಃ || ೨೭ ||

ಗುರುಚಿತ್ತಾನುಪಾಲಾಶ್ಚ ಕೃತಿನೋ ಮೌನಯಂತ್ರಿತಾಃ |
ನಿತ್ಯಸ್ವಾಧ್ಯಾಯಿನೋ ದಾಂತಾಸ್ಸದಾ ಸಭ್ಯಾಶ್ಚ ಯೇ ನರಾಃ || ೨೮ ||

ಮಾಂ ನ ಪಶ್ಯಂತಿ ತೇ ಚೈವ ಸ್ವಾತ್ಮಭಾವೇನ ಭಾವಿತಾಃ |
ಅಪರ್ವಮೈಥುನಾ ಯೇ ಚ ನ ಗಚ್ಛಂತಿ ಜಿತೇಂದ್ರಿಯಾಃ || ೨೯ ||

ಹತರಾದವರೂ, ಮಾತಾಪಿತೃಶುಶ್ರೂಷೆ ಮಾಡುವವರೂ ಪಾಪಿಷ್ಠವೂ, ಕತ್ತಲೆಗವಿದಿರುವುದೂ, ಯಾತನೆಯ ಸ್ಥಾನಗಳಿಂದ ಕೂಡಿದುದೂ, ಹಾಹಾಕಾರದಿಂದ ಭಯಂಕರವೂ ಆದ ಆ ನರಕಕ್ಕೆ ಹೋಗುವುದಿಲ್ಲ.

೨೬. ಎಳ್ಳನ್ನೂ, ಹಸುಗಳನ್ನೂ, ಸ್ಥಿರವಾದ ಭೂಮಿಯನ್ನೂ ಬ್ರಾಹ್ಮಣರಿಗೆ ದಾನಮಾಡುವವರು ನರಕಕ್ಕೆ ಹೋಗುವುದಿಲ್ಲವೆಂಬುದರಲ್ಲಿ ಸಂಶಯವಿಲ್ಲ.

೨೭–೨೯. ಶಾಸ್ತ್ರೋಕ್ತವಾಗಿ ಯಜ್ಞಮಾಡುವವರೂ, ಸತ್ರಯಾಜಿಗಳೂ, ಚಾತುರ್ಮಾಸ್ಯವ್ರತಮಾಡುವವರೂ, ಆಹಿತಾಗ್ನಿಗಳೂ ಆದ ದ್ವಿಜರೂ, ಗುರುಚಿತ್ತಾನುವರ್ತಿಗಳೂ, ಮೌನವ್ರತಿಗಳಾದ ವಿದ್ವಾಂಸರೂ, ನಿತ್ಯವೂ ವೇದಾಧ್ಯಯನಮಾಡುವವರೂ, ಯಾವಾಗಲೂ ಜಿತೇಂದ್ರಿಯರಾದ ಸಭ್ಯಜನರೂ, ಪರ್ವಕಾಲಗಳಲ್ಲಿ ಸ್ತ್ರೀಸಂಗಮಾಡದ ಜಿತೇಂದ್ರಿಯರೂ, ಒಳ್ಳೆಯ ಮನಸ್ಸಿನಿಂದ ಪೂಜ್ಯರಾದವರು ಅಥವಾ ಪರಮಾತ್ಮನನ್ನ ಧ್ಯಾನಿಸುವವರೂ ನರಕಕ್ಕೆ ಹೋಗುವುದಿಲ್ಲ. ಅಲ್ಲದೆ ಅವರು ನನ್ನನ್ನೂ ನೋಡುವುದಿಲ್ಲ.

ಬ್ರಾಹ್ಮಣಾ ಅಮರತ್ವಂ ಚ ಪ್ರಾಪ್ನುವಂತಿ ನ ಸಂಶಯಃ ॥ ೩೦ ॥
ನಿವೃತ್ತಾಸ್ಸರ್ವಕಾಮೇಭ್ಯೋ ನಿರಾಶಾಸ್ಸುಜಿತೇಂದ್ರಿಯಾಃ ।
ನ ಗಚ್ಛಂತಿ ಹಿ ತದ್ಘೋರಂ ಯತ್ರ ತೇ ಪಾಪಕರ್ಮಿಣಃ ॥ ೩೧ ॥

॥ ನಾರದ ಉವಾಚ ॥

ಕಿಂ ದಾನಂ ಶ್ರೇಯ ಆಹೋಸ್ವಿತ್ಪಾತ್ರೇಣ ಫಲಮುಚ್ಯತೇ ।
ಕಿಂ ವಾ ಕರ್ಮ ಮಹತ್ಕೃತ್ವಾ ಸ್ವರ್ಗಲೋಕೇ ಮಹೀಯತೇ ॥ ೩೨ ॥
ರೂಪಂ ವಾ ಧನಧಾನ್ಯಂ ವಾ ಹ್ಯಾಯುಶ್ಚ ಕುಲಮೇವ ವಾ ।
ಪ್ರಾಪ್ಯತೇ ಯೇನ ದಾನೇನ ತನ್ಮಮಾಚಕ್ಷ್ವ ಸುವ್ರತ ॥ ೩೩ ॥

॥ ಯಮ ಉವಾಚ ॥

ನ ಶಕ್ಯಂ ವಿಸ್ತರೇಣೇಹ ವಕ್ತುಂ ವರ್ಷಶತೈರಪಿ ।
ಶುಭಾಶುಭಾನಾಂ ಗತಯೋ ದ್ರಷ್ಟುಂ ವಾ ಪ್ರಷ್ಟುಮೇವ ವಾ ॥ ೩೪ ॥
ಕಿಂಚಿನ್ಮಾತ್ರಂ ಪ್ರವಕ್ಷ್ಯಾಮಿ ಯೇನ ಯತ್ಪ್ರಾಪ್ಯತೇ ನರೈಃ ।
ವಿವಿಧಾನಿ ಚ ಸೌಖ್ಯಾನಿ ಪ್ರಾಯಶಸ್ತು ಗುಣಾಗುಣೈಃ ॥ ೩೫ ॥

೩೦-೩೧. ಸರ್ವಕಾಮಗಳನ್ನೂ ತ್ಯಜಿಸಿ, ನಿರಾಶರೂ, ಸುಜಿತೇಂದ್ರಿಯರೂ ಆದ ಬ್ರಾಹ್ಮಣರು, ಪಾಪಕರ್ಮಿಗಳಿರುವೆಡೆಯಾದ ಘೋರನರಕಕ್ಕೆ ಹೋಗದಿರುವರು ಅಲ್ಲದೆ ಸಂಶಯವಿಲ್ಲದೆ ಅಮರತ್ವವನ್ನೂ ಪಡೆಯುವರು.

೩೨. ನಾರದ:— ದಾನವೇ ಶ್ರೇಯಸ್ಕರವೋ? ಅಥವಾ ದಾನತೆಗೆದುಕೊಳ್ಳುವ ಪಾತ್ರಕ್ಕನುಸಾರವಾಗಿ ಫಲವೋ? ಯಾವಮಹಾಕಾರ್ಯವನ್ನು ಮಾಡಿ, ಮನುಷ್ಯನು ಸ್ವರ್ಗಲೋಕದಲ್ಲಿ ಗೌರವವನ್ನು ಪಡೆಯುವನು?

೩೩. ಸುವ್ರತನೇ, ರೂಪವಾಗಲಿ, ಧನಧಾನ್ಯವಾಗಲಿ, ಆಯುಸ್ಸಾಗಲೀ, ಕುಲವಾಗಲಿ ಯಾವ ದಾನದಿಂದ ಲಭಿಸುವುದೋ ಅದನ್ನು ನನಗೆ ಹೇಳು.

೩೪-೩೫. ಯಮ:—ಶುಭಾಶುಭಗಳ ಗತಿಗಳನ್ನು ಇಲ್ಲಿ ನೂರುವರ್ಷಗಳಲ್ಲಿಯೂ ವಿಸ್ತಾರವಾಗಿ ಹೇಳಲೂ,ನೋಡಲೂ, ಕೇಳಲೂ ಸಾಧ್ಯವಾಗುವುದಿಲ್ಲ. ಪ್ರಾಯಿಕವಾಗಿ ಜನರು ಯಾವಯಾವ ಗುಣಗಳಿಂದ ಯಾವಯಾವಬಗೆಯ ಸೌಖ್ಯಗಳನ್ನು ಪಡೆಯುವರೆಂಬುದನ್ನು ಸ್ವಲ್ಪಮಟ್ಟಿಗೆ ಹೇಳುತ್ತೇನೆ.

ರಹಸ್ಯಮಿದಮಾಖ್ಯಾನಂ ಶ್ರೂಯತಾಂ ಮುನಿಸತ್ತಮ ।
ಯಾ ಗತಿಃ ಪ್ರಾಪ್ಯತೇ ಯೇನ ಪ್ರೇತ್ಯಭಾವೇ ನ ಸಂಶಯಃ ॥ ೩೬ ॥

ತಪಸಾ ಪ್ರಾಪ್ಯತೇ ಸ್ವರ್ಗಸ್ತಪಸಾ ಪ್ರಾಪ್ಯತೇ ಯಶಃ ।
ಆಯುಃಪ್ರಕರ್ಷೋ ಭೋಗಾಶ್ಚ ಭವಂತಿ ತಪಸೈವ ತು ॥ ೩೭ ॥

ಜ್ಞಾನವಿಜ್ಞಾನಮಾರೋಗ್ಯಂ ರೂಪಸೌಭಾಗ್ಯಸಂಪದಃ ।
ತಪಸಾ ಪ್ರಾಪ್ಯತೇ ಭೋಗೋ ಮನಸಾ ನೋಪದಿಶ್ಯತೇ ॥ ೩೮ ॥

ಏವಂ ಪ್ರಾಪ್ನೋತಿ ಪುಶ್ಯೇನ ಮೌನೇನಾಜ್ಞಾಂ ಮಹಾಮುನೇ ।
ಉಪಭೋಗಾಂಸ್ತು ದಾನೇನ ಬ್ರಹ್ಮಚರ್ಯೇಣ ಜೀವಿತಂ ॥ ೩೯ ॥

ಅಹಿಂಸಯಾ ಪರಂ ರೂಪಂ ದೀಕ್ಷಯಾ ಕುಲಜನ್ಮ ಚ ।
ಫಲಮೂಲಾಶಿನೋ ರಾಜ್ಯಂ ಸ್ವರ್ಗಃ ಪರ್ಣಾಶಿನಾಂ ಭವೇತ್ ॥ ೪೦ ॥

---

೩೬. ಮುನಿವರ್ಯನೇ, ಮನುಷ್ಯರು ಮರಣವನ್ನು ಪಡೆದಬಳಿಕ ಯಾರು ಯಾವುದರಿಂದ ಯಾವ ಗತಿಯನ್ನು ಸಂಶಯವಿಲ್ಲದೆ ಪಡೆಯುವರೆಂಬ ನಾನು ಹೇಳುವ ಈ ರಹಸ್ಯವನ್ನು ಕೇಳು.

೩೭. ತಪಸ್ಸಿನಿಂದ ಸ್ವರ್ಗವು ಲಭಿಸುವುದು. ತಪಸ್ಸಿನಿಂದ ಯಶಸ್ಸು ಲಭಿಸುವುದು. ದೀರ್ಘಾಯುಸ್ಸೂ. ಭೋಗಗಳೂ ತಪಸ್ಸಿನಿಂದಲೇ ಲಭಿಸುವುವು

೩೮. ಜ್ಞಾನವಿಜ್ಞಾನಗಳೂ, ಆರೋಗ್ಯವೂ, ರೂಪಸೌಭಾಗ್ಯಸಂಪತ್ತುಗಳೂ ಮನಸ್ಸಿನಲ್ಲಿ ಅಪೇಕ್ಷಿಸದಿದ್ದರೂ ತಪಸ್ಸಿನಿಂದ ಲಭಿಸುವುವು.

೩೯-೪೦. ಮಹಾಮುನಿಯೇ, ಮನುಷ್ಯರು ಹೀಗೆ ಮೌನವ್ರತದಿಂದ ಆಜ್ಞೆಮಾಡುವ ಅಧಿಕಾರವನ್ನೂ, ದಾನದಿಂದ ಉಪಭೋಗಗಳನ್ನೂ, ಬ್ರಹ್ಮಚರ್ಯದಿಂದ ದೀರ್ಘಜೀವಿತವನ್ನೂ, ಅಹಿಂಸಾವ್ರತದಿಂದ ಉತ್ತಮರೂಪವನ್ನೂ, ದೀಕ್ಷೆಯಿಂದ ಉತ್ತಮಕುಲದಲ್ಲಿ ಜನ್ಮವನ್ನೂ, ಫಲಕಂದಮೂಲಾಹಾರದಿಂದ ರಾಜ್ಯವನ್ನೂ, ಪರ್ಣಾಹಾರದಿಂದ ಸ್ವರ್ಗವನ್ನೂ ಪಡೆಯುವರು.

ಪಯೋಭಕ್ಷ್ಯಾ ದಿವಂ ಯಾಂತಿ ಜಾಯತೇ ದ್ರವಿಣಾಢ್ಯತಾ ।
ಗುರುಶುಶ್ರೂಷಯಾ ನಿತ್ಯಂ ಶ್ರಾದ್ಧದಾನೇನ ಸಂತತಿಃ ॥ ೪೧ ॥
ಗವಾದ್ಯಾಃ ಕಾಲದೀಕ್ಷಾಭಿರ್ಯೇ ತು ವಾ ತೃಣಶಾಯಿನಃ ।
ಸ್ವಯಂ ತ್ರಿಷವಣಾದ್ಬ್ರಹ್ಮ ತ್ವಪಃ ಪೀತ್ವೇಷ್ಟಲೋಕಭಾಕ್ ॥ ೪೨ ॥
ಕ್ರತುಯಷ್ಟಾ ದಿವಂ ಯಾತಿ ಚೋಪಹಾರಂ ಚ ಸುವ್ರತ ।
ಕೃತ್ವಾ ತು ದಶವರ್ಷಾಣಿ ನೀರಪಾನಾದ್ವಿಶಿಷ್ಯತೇ ॥ ೪೩ ॥
ರಸಾನಾಂ ಪ್ರತಿಸಂಹಾರಾತ್ಸೌಭಾಗ್ಯಮನುಜಾಯತೇ ।
ಆಮಿಷಸ್ಯ ಪ್ರತೀಹಾರಾದ್ಭವತ್ಯಾಯುಷ್ಮತೀ ಪ್ರಜಾ ॥ ೪೪ ॥
ಗಂಧಮಾಲ್ಯನಿವೃತ್ತ್ಯಾ ತು ಮೂರ್ತಿರ್ಭವತಿ ಪುಷ್ಕಲಾ ।
ಅನ್ನದಾನೇನ ಚ ನರಃ ಸ್ಮೃತಿಂ ಮೇಧಾಂ ಚ ವಿಂದತಿ ॥ ೪೫ ॥

---

೪೧. ಹಾಲನ್ನೇ ಸೇವಿಸಿ ನಿಯಮದಿಂದಿದ್ದವರು ಸ್ವರ್ಗವನ್ನು ಸೇರುವರು. ನಿತ್ಯವೂ ಗುರುಶುಶ್ರೂಷೆಮಾಡುವುದರಿಂದ ಐಶ್ವರ್ಯವೂ, ಶ್ರಾದ್ಧದಾನದಿಂದ ಸಂತಾನವೂ ಲಭಿಸುವುದು.

೪೨. ಕಾಲನಿಯಮಗಳನ್ನು ಅನುಸರಿಸುವುದರಿಂದಲೂ, ಹುಲ್ಲಿನಮೇಲೆ ಮಲಗುವುದರಿಂದಲೂ ಮನುಷ್ಯನಿಗೆ ಹಸುಗಳೇ ಮೊದಲಾದುವುಗಳು ಲಭಿಸುವುವು. ತ್ರಿಷವಣಮಾಡುವವನಾಗಿ ಜಲಪಾನವ್ರತಮಾಡುವುದರಿಂದ ಇಷ್ಟ ಲೋಕವನ್ನೂ ಪರಬ್ರಹ್ಮನನ್ನೂ ಪಡೆಯುವನು.

೪೩. ಸುವ್ರತನೇ, ಯಜ್ಞಗಳನ್ನು ಮಾಡುವವನು ಸ್ವರ್ಗವನ್ನೂ, ರಾಜಗೌರವವನ್ನೂ ಪಡೆಯುವನು. ಹತ್ತುವರ್ಷಗಳ ಕಾಲ ಜಲಪಾನವನ್ನು ಮಾಡುತ್ತ ಜೀವಿಸುವುದರಿಂದ ಇನ್ನೂ ಮೇಲ್ಮೆಯನ್ನು ಪಡೆಯುವನು.

೪೪. ರಸಗಳನ್ನು ತ್ಯಜಿಸುವುದರಿಂದ ಸೌಭಾಗ್ಯವುಂಟಾಗುವುದು. ಮಾಂಸವನ್ನು ಪರಿತ್ಯಜಿಸುವುದರಿಂದ ಆಯುಷ್ಮಂತರಾದ ಮಕ್ಕಳು ಜನಿಸುವರು.

೪೫. ಗಂಧಮಾಲ್ಯಗಳನ್ನು ಪರಿತ್ಯಜಿಸುವ ವ್ರತದಿಂದ ದೀರ್ಘವೂ, ಪುಷ್ಟವೂ ಆದ ದೇಹವನ್ನು ಪಡೆಯುವನು. ಅನ್ನದಾನದಿಂದ ಮನುಷ್ಯನು ಸ್ಮೃತಿಮೇಧಾಶಕ್ತಿಗಳನ್ನು ಪಡೆಯುವನು.

ಛತ್ರಪ್ರದಾನೇನ ಗೃಹಂ ವರಿಷ್ಠಂ ।
ರಥಂ ಹ್ಯುಪಾನದ್ಯುಗಸಂಪ್ರದಾನಾತ್ ।
ವಸ್ತ್ರಪ್ರದಾನೇನ ಸುರೂಪತಾ ಚ ।
ಧನೈಶ್ಚ ಪುತ್ರೈಶ್ಚ ಭೃತಾ ಭವಂತಿ ॥ ೪೬ ॥

ಪಾನೀಯಸ್ಯ ಪ್ರದಾನೇನ ತೃಪ್ತಿರ್ಭವತಿ ಶಾಶ್ವತೀ ।
ಅನ್ನಪಾನಪ್ರದಾನೇನ ಕಾಮಭೋಗೈಸ್ತು ತೃಪ್ಯತೇ ॥ ೪೭ ॥

ಪುಷ್ಪೋಪಗಂಧಂ ಚ ಫಲೋಪಗಂಧಂ ।
ಯಃ ಪಾದಪಂ ಸ್ಪರ್ಶಯತೇ ದ್ವಿಜಾಯ ।
ಸ ಸ್ತ್ರೀಸಮೃದ್ಧಂ ಹಿ ಸುರತ್ನಪೂರ್ಣಂ ।
ಗೃಹಂ ಹಿ ಸರ್ವೋಪಚಿತಂ ಲಭೇತ ॥ ೪೮ ॥

---

೪೬. ಛತ್ರಿ (ಕೊಡೆ) ಯ ದಾನದಿಂದ ಮನುಷ್ಯರು ಮುಂದೆ ಉತ್ತಮವಾದ ಮನೆಯನ್ನೂ, ಪಾದರಕ್ಷೆಗಳ ದಾನದಿಂದ ರಥವನ್ನೂ, ವಸ್ತ್ರದಾನದಿಂದ ಸೌಂದರ್ಯವನ್ನೂ, ಧನದಾನದಿಂದ ಪುತ್ರಸಂಪತ್ತನ್ನೂ ಪಡೆಯುವರು.

೪೭. ಪಾನೀಯದಾನದಿಂದ ಮನುಷ್ಯರು ಮುಂದೆ ಶಾಶ್ವತವಾದ ತೃಪ್ತಿಯನ್ನು ಪಡೆಯುವರು. ಅನ್ನದಾನಮಾಡುವುದರಿಂದ ಬೇಕಾದ ಭೋಗಗಳಿಂದ ತೃಪ್ತಿಪಡುವರು.

೪೮. ಫಲಪುಷ್ಪಭರಿತವಾದ ಮರವನ್ನು ಬ್ರಾಹ್ಮಣನಿಗೆ ದಾನಮಾಡುವವನು ಸ್ತ್ರೀಸಮೃದ್ಧವೂ, ರತ್ನಪೂರ್ಣವೂ, ಸರ್ವಾನುಕೂಲವುಳ್ಳದೂ ಆದ ಮನೆಯನ್ನು ಪಡೆಯುವನು.

ವಸ್ತ್ರಾನ್ನಪಾನೀಯರಸಪ್ರದಾನಾನ್ ।
ಪ್ರಾಪ್ನೋತಿ ತಾನೇವ ರಸಪ್ರದಾನಾತ್ ।
ಸ್ರಗ್ಧೂಪಗಂಧಾನ್ಯನುಲೇಪನಾನಿ ।
ಪುಷ್ಪಾಣಿ ಗೃಹ್ಯಾಣಿ ಮನೋರಮಾಣಿ ॥ ೪೯ ॥

ದತ್ವಾ ದ್ವಿಜೇಭ್ಯಸ್ಸ ಭವೇತ್ಸುರೂಪೋ ।
ರೋಗಾಂಶ್ಚ ಕಾಂಶ್ಚಿಲ್ಲಭತೇ ನ ಜಾತು ।
ಬೀಜೈರಶೂನ್ಯೈಶ್ಶಯನಾಭಿರಾಮಂ ।
ದದ್ಯಾದ್ಗೃಹಂ ಯಃ ಪುರುಷೋ ದ್ವಿಜಾಯ ॥ ೫೦ ॥

ಸ ಸ್ತ್ರೀಸಮೃದ್ಧಂ ಗಜವಾಜಿಪೂರ್ಣಂ ।
ಲಭೇದಧಿಷ್ಠಾನವರಂ ವರಿಷ್ಠಂ ।
ಧೂಪಪ್ರದಾನೇನ ತಥಾ ಗವಾಂ ಚ ।
ಲೋಕಾನವಾಪ್ನೋತಿ ನರೋ ವಸೂನಾಂ ॥ ೫೧ ॥

೪೯-೫೧. ವಸ್ತ್ರಾನ್ನಪಾನೀಯರಸದಾನಗಳಿಂದ ಮನುಷ್ಯನು ತಾನೂ ಮುಂದೆ ಅವುಗಳನ್ನೇ ವಿಶೇಷವಾಗಿ ಪಡೆಯುವನು. ಮನೋಹರವಾದ ಗಂಧ ಮಾಲ್ಯಾನುಲೇಪನಗಳನ್ನೂ, ಹೂವುಗಳನ್ನೂ ದ್ವಿಜರಿಗೆ ದಾನಮಾಡುವುದರಿಂದ ಮುಂದೆ ಸುರೂಪವಂತನಾಗುವನು. ಅಲ್ಲದೆ ಎಂದೂ ಯಾವ ರೋಗವೂ ಇಲ್ಲದವನಾಗುವನು. ಧಾನ್ಯಗಳಿಂದ ಕೂಡಿ, ಮಂಚ ಮೊದಲಾದುವುಗಳಿಂದ ಕೂಡಿದ ಮನೆಯನ್ನು ದ್ವಿಜರಿಗೆ ದಾನಮಾಡುವವನು ಬೇಕಾದಷ್ಟು ಜನ ಸ್ತ್ರೀಯರುಳ್ಳದೂ ಆನೆಕುದುರೆಗಳಿಂದ ತುಂಬಿದುದೂ ಆದ ಅತ್ಯುತ್ತಮವಾದ ವಾಸಸ್ಥಾನವನ್ನು ಪಡೆಯುವನು. ಅಲ್ಲದೆ ಧೂಪದಾನದಿಂದ ಗೋಲೋಕವನ್ನೂ, ವಸುಲೋಕವನ್ನೂ ಸೇರುವನು.

ಗಜಂ ತಥಾ ಗೋವೃಷಭಪ್ರದಾನೈಃ ।
ಸ್ವರ್ಗೇ ಸುಖಂ ಶಾಶ್ವತಮಾಮನಂತಿ ।
ಘೃತೇನ ತೇಜಸ್ಸುಕುಮಾರತಾಂ ಚ ।
ಪ್ರಾಣದ್ಯುತಿಂ ಸ್ನಿಗ್ಧತಾಂ ಚಾಪಿ ತೈಲೈಃ ॥ ೫೨ ॥

ಕ್ಷೌದ್ರೇಣ ನಾನಾರಸತೃಪ್ತತಾಂ ಚ ।
ದೀಪಪ್ರದಾನಾದ್ದ್ಯುತಿಮಾಪ್ನುವಂತಿ ॥ ೫೩ ॥

ಪಾಯಸೇನ ವಪುಃಪುಷ್ಟಿಂ ಕೃಸರಾತ್ಸ್ನಿಗ್ಧಸೌಮ್ಯತಾಂ ।
ಫಲೈಸ್ತು ಲಭತೇ ಪುತ್ರಂ ಪುಷ್ಪೈಸ್ಸೌಭಾಗ್ಯಮೇವ ಚ ॥ ೫೪ ॥

---

೫೨. ಹಾಗೆಯೇ ಮನುಷ್ಯರು ಗೋವೃಷಭದಾನಗಳಿಂದ ಮುಂದೆ ಆನೆಯನ್ನೂ, ಶಾಶ್ವತವಾದ ಸ್ವರ್ಗಸುಖವನ್ನೂ ಪಡೆಯುವನೆನ್ನುವರು. ತುಪ್ಪವನ್ನು ದಾನಮಾಡುವುದರಿಂದ ಮನುಷ್ಯನು ತೇಜಸ್ಸನ್ನೂ, ಸುಕುಮಾರತೆಯನ್ನೂ, ತೈಲದಾನದಿಂದ ಪ್ರಾಣಕಾಂತಿಯನ್ನೂ, ಸ್ನೇಹಪರತೆಯನ್ನೂ ಪಡೆಯುವನು.

೫೩. ಜೇನುತುಪ್ಪವನ್ನು ದಾನಮಾಡುವುದರಿಂದ ಮನುಷ್ಯರು ಮುಂದೆ ನಾನಾರಸತೃಪ್ತಿಯನ್ನೂ, ದೀಪದಾನದಿಂದ ಕಾಂತಿಯನ್ನೂ ಪಡೆಯುವರು.

೫೪. ಪಾಯಸದಾನದಿಂದ ದೇಹಪುಷ್ಟಿಯನ್ನೂ, ಚಿಗುಳಿಯ ದಾನದಿಂದ ಸೌಮ್ಯತೆಯನ್ನೂ ಲಾವಣ್ಯವನ್ನೂ, ಫಲದಾನದಿಂದ ಪುತ್ರನನ್ನೂ, ಪುಷ್ಪದಾನದಿಂದ ಸೌಭಾಗ್ಯವನ್ನೂ ಪಡೆಯುವರು.

ರಥೈರ್ದಿವ್ಯಂ ವಿಮಾನಂ ತು ಶಿಬಿಕಾಂ ಚೈವ ಮಾನವಃ ।
ಪ್ರೇಕ್ಷಣೈರಪಿ ಸೌಭಾಗ್ಯಂ ಪ್ರಾಪ್ನೋತೀಹ ನ ಸಂಶಯಃ ॥
ಅಭಯಸ್ಯ ಪ್ರದಾನೇನ ಸರ್ವಕಾಮಾನವಾಪ್ನುಯಾತ್ ॥ ೫೫ ॥

ಇತಿ ಶ್ರೀವರಾಹಪುರಾಣೇ ಸಂಸಾರಚಕ್ರೇ ಪುರುಷವಿಲೋಭನಂ ನಾಮ ಸಪ್ತಾಧಿಕದ್ವಿಶತತಮೋಽಧ್ಯಾಯಃ

---

೫೫. ರಥದಾನದಿಂದ ಮನುಷ್ಯರು ಮುಂದೆ ವಿಮಾನವನ್ನೂ ಪಲ್ಲಕ್ಕಿಯನ್ನೂ, ದೇವಗುರುದರ್ಶನದಿಂದ ಸೌಭಾಗ್ಯವನ್ನೂ, ಅಭಯಪ್ರದಾನದಿಂದ ಸರ್ವೇಷ್ಟಾರ್ಥಗಳನ್ನೂ ಸಂಶಯವಿಲ್ಲದೆ ಪಡೆಯುವರು.

ಅಧ್ಯಾಯದ ಸಾರಾಂಶ

ಮನುಜರು ಯಾವಯಾವ ಧರ್ಮವ್ರತಾದಿಗಳಿಂದ ನರಕವನ್ನು ತಪ್ಪಿಸಿಕೊಂಡು ಕೀರ್ತಿಸೌಭಾಗ್ಯಾದಿಗಳನ್ನೂ, ಅಮರತ್ವವನ್ನೂ ಪಡೆಯುವರೆಂದು ಪ್ರಶ್ನಿಸಿದ ನಾರದಮುನಿಗೆ ಯಮರಾಜನು ಹೇಳಿದ ವಿವಿಧಧರ್ಮಫಲಗಳನ್ನು ವಿವರಿಸಿದೆ.

ಇಲ್ಲಿಗೆ ಶ್ರೀ ವರಾಹಪುರಾಣದಲ್ಲಿ ಇನ್ನೂರೇಳನೆಯ ಅಧ್ಯಾಯ.

॥ ಶ್ರೀಃ ॥

ಅಷ್ಟಾಧಿಕದ್ವಿಶತತಮೋಽಧ್ಯಾಯಃ
ಅಥ ಪತಿವ್ರತೋಪಾಖ್ಯಾನವರ್ಣನಂ

॥ ಋಷಿಪುತ್ರ ಉವಾಚ ॥

ಮುಹೂರ್ತಸ್ಯ ತು ಕಾಲಸ್ಯ ದಿವ್ಯಾಭರಣಭೂಷಿತಾನ್ ।
ಪ್ರಯಾತಾನ್ದಿವಿ ಸಂಪ್ರೇಕ್ಷ್ಯ ವಿಮಾನೈಸ್ಸೂರ್ಯಸನ್ನಿಭೈಃ ॥ ೧ ॥

ಬ್ರಾಹ್ಮಣಾಸ್ತಪಸಾ ಸಿದ್ಧಾಸ್ಸಪತ್ನಿಕಾಸ್ಸಬಾಂಧವಾಃ ।
ಸಾನುರಾಗಾ ಹ್ಯುಭಯತೋ ಮನುಷ್ಯನಾಭಿಪರಿಪ್ಲುತಾಃ ॥ ೨ ॥

ವಿವರ್ಣವದನೋ ರಾಜಾ ಪ್ರಭಾತೇಜೋವಿವರ್ಜಿತಃ ।
ಅಚಿರಾದೇವ ಸಂಜಾತಃ ಕ್ರೋಧೇನ ಭೃಶದುಃಖಿತಃ ॥ ೩ ॥

ಇನ್ನೂರೆಂಟನೆಯ ಅಧ್ಯಾಯ
ಪತಿವ್ರತೋಪಾಖ್ಯಾನವರ್ಣನೆ.

೧-೩ ನಚಿಕೇತ:— ಯಮನು ಸ್ವಲ್ಪಕಾಲ ಆಕಾಶದಲ್ಲಿ ದಿವ್ಯಾಭರಣಲಂಕೃತರೂ, ಸಪತ್ನೀಕರೂ, ಎರಡು ಪಕ್ಕಗಳಲ್ಲಿಯೂ ಅನುರಕ್ತರಾದ ಬಂಧುಗಳಿಂದೊಡಗೂಡಿದವರೂ ಆಗಿ ಸೂರ್ಯನಂತೆ ಹೊಳೆಯುವ ವಿಮಾನಗಳಲ್ಲಿ ಬರುತ್ತಿರುವ ತಪಸ್ಸಿದ್ಧರಾದ ಬ್ರಾಹ್ಮಣರನ್ನು ನೋಡಿ, ಶೋಕಪೀಡಿತನಾಗಿ ಸ್ವಲ್ಪಹೊತ್ತಿನಲ್ಲಿಯೇ ಬಣ್ಣಗೆಟ್ಟು ಕಂದಿದ ಮುಖವುಳ್ಳವನೂ, ಕೋಪದಿಂದಲೂ ಬಹುದುಃಖದಿಂದಲೂ ಕೂಡಿದವನೂ ಆದನು.

ತಂ ತಥಾ ನಿಷ್ಪ್ರಭಂ ದೃಷ್ಟ್ವಾ ಧರ್ಮರಾಜಂ ತಪೋಧನಃ ।
ನಾರದಸ್ತ್ವಾಬ್ರವೀತ್ತತ್ರ ಜ್ಞಾತ್ವಾ ತಸ್ಯ ಮನೋಗತಂ ॥ ೪ ॥

ಅಪಿ ತ್ವಂ ಭ್ರಾಜಮಾನಸ್ತು ಪಶೋಃ ಪತಿರಿವಾಪರಃ ।
ಕಸ್ಮಾತ್ತೇ ಶೋಭನಂ ವಕ್ತ್ರಂ ಕ್ಷಣಾದ್ವೈವರ್ಣ್ಯಮಾಪತತ್ ॥ ೫ ॥

ವಿನಿಃಶ್ವಸನ್ಯಥಾ ನಾಗಃ ಕಸ್ಮಾತ್ತ್ವಂ ಪರಿತಪ್ಯಸೇ ।
ರಾಜನ್ಕಸ್ಮಾದ್ಬಿಭೇಷಿ ತ್ವಮೇತದಿಚ್ಛಾಮಿ ವೇದಿತುಂ ॥ ೬ ॥

॥ ಯಮ ಉವಾಚ ॥

ವಿವರ್ಣಂ ಜಾಯತೇ ವಕ್ತ್ರಂ ಶುಷ್ಯತೇ ನ ಚ ಸಂಶಯಃ ।
ಯನ್ಮಯಾ ಹೀದೃಶಂ ದೃಷ್ಟಂ ಶ್ರೂಯತಾಂ ತನ್ಮಹಾಮುನೇ ॥ ೭ ॥

ಯಾಯಾವರಾಸ್ತು ಯೇ ವಿಪ್ರಾ ಉಂಛವೃತ್ತಿಪರಾಯಣಾಃ ।
ದೃಢಸ್ವಾಧ್ಯಾಯತಪಸೋ ಹ್ರೀಮಂತೋ ಹ್ಯನಸೂಯಕಾಃ ॥ ೮ ॥

---

೪. ತಪೋಧನನಾದ ನಾರದಮುನಿಯು, ಹಾಗೆ ಕಾಂತಿಹೀನನಾದ ಆ ಧರ್ಮರಾಜನನ್ನು ನೋಡಿ, ಅವನ ಇಂಗಿತವನ್ನರಿತು, ಹೀಗೆ ಹೇಳಿದನು.

೫-೬ ‘ ನೀನು, ಎರಡನೆಯ ಈಶ್ವರನಂತೆ ಹೊಳೆಯುತ್ತಿದ್ದೆ. ಸುಂದರವಾಗಿದ್ದ ನಿನ್ನ ಮುಖವು ಕ್ಷಣಮಾತ್ರದಲ್ಲಿ ಈಗ ಏಕೆ ವಿವರ್ಣತೆಯನ್ನು ಪಡೆಯಿತು! ಸರ್ಪನಂತೆ ಬುಸುಗುಟ್ಟುತ್ತ ಏತಕ್ಕಾಗಿ ಸಂಕಟಪಡುತ್ತೀಯೆ? ದೊರೆಯೇ, ಯಾರಿಂದ ಅಥವಾ ಏತರಿಂದ ನೀನು ಭೀತನಾಗಿದ್ದೀಯೆ? ಅದನ್ನು ತಿಳಿಯಲು ಬಯಸುತ್ತೇನೆ ’

೭. ಯಮ— ಮಹಾಮುನಿಯೇ, ನಿಜವಾಗಿಯೂ ನನ್ನ ಮುಖವು ಕಂದಿ ಕುಂದುತ್ತಿದೆ. ನಾನು ಏನನ್ನು ನೋಡಿದೆನೋ ಅದನ್ನು ಕೇಳು.

೮-೯. ಬ್ರಾಹ್ಮಣನೇ, ಯಾಯಾವರ (ಭಿಕ್ಷು)ದಲ್ಲಿಯೂ, ÷ಉಂಛವೃತ್ತಿಯಲ್ಲಿಯೂ ನಿರತರಾಗಿದ್ದ, ದೃಢಾಧ್ಯಾಯನತಪೋನಿಷ್ಠರೂ, ಲಜ್ಜಾಶೀಲರೂ,

ಅತಿಥಿಪ್ರಿಯಕಾಶ್ಚೈವ ನಿತ್ಯಯುಕ್ತಾ ಜಿತೇಂದ್ರಿಯಾಃ ।
ತೇ ತ್ವಹಂಮಾನಿನಸ್ಸರ್ವೇ ಗಚ್ಛಂತ್ಯುಪರಿ ಮೇ ದ್ವಿಜ ॥ ೯ ॥

ನ ಚ ಮಾಮುಪತಿಷ್ಠಂತಿ ನ ಚೈವ ವಶಗಾ ಮಮ ।
ಮಸ್ತಕೇ ಮಮ ಗಚ್ಛಂತಿ ಸಪತ್ನೀಕಾಸ್ಸಹಾನುಗಾಃ ॥ ೧೦ ॥

ದಿವ್ಯಗಂಧೈರ್ವಿಲಿಪ್ತಾಂಗಾ ಮಾಲ್ಯಭೂಷಿತವಾಸಸಃ ।
ಸೃಜಂತೋ ಮಮ ಮಾಲ್ಯಾನಿ ತೇನ ತಾಮ್ಯೇ ದ್ವಿಜೋತ್ತಮ ॥ ೧೧ ॥

ಮೃತ್ಯೋ ತಿಷ್ಠಸಿ ಕಸ್ಯಾರ್ಥೇ ಕೋ ವಾ ಮೃತ್ಯುಃ ಕಥಂ ಭವೇತ್ ॥೧೨॥

ಕಿಂ ತ್ವಂ ನ ಭಾಷಸೇ ಮೃತ್ಯೋ ಬ್ರೂಹಿ ಲೋಕೇ ನಿರರ್ಥಕಃ ।
ಲೋಭಾಸಕ್ತಾನ್ಯದಾ ಹಂಸಿ ಪಾಪಿಷ್ಠಾನ್ಧರ್ಮವರ್ಜಿತಾನ್ ॥ ೧೩ ॥

ಅಸೂಯೆಯಿಲ್ಲದವರೂ, ಅತಿಥಿಪ್ರಿಯರೂ, ನಿತ್ಯನಿಯಮರೂ, ಜಿತೇಂದ್ರಿಯರೂ ಆದ ಬ್ರಾಹ್ಮಣರೆಲ್ಲರೂ ಅಹಂಕಾರವುಳ್ಳವರಾಗಿ ನನ್ನ ಮೇಲೆ ಸಂಚರಿಸುವರು.

೧೦. ಅವರು ನನ್ನ ಹತ್ತಿರವೂ ಬರುವುದಿಲ್ಲ ಅಥವಾ ಸೇವಿಸುವುದೂ ಇಲ್ಲ. ಅವರು ನನ್ನ ಅಧೀನದಲ್ಲಿಯೇ ಇಲ್ಲ. ಸಪತ್ನೀಕರೂ, ಸಾನುಗರೂ, ಆಗಿ ನನ್ನ ತಲೆಯ ಮೇಲೆ ನಡೆಯುವರು.

೧೧. ದಿವ್ಯಗಂಧಲೇಪಿತಾಂಗರೂ, ದಿವ್ಯಮಾಲಾವಸ್ತ್ರಭೂಷಿತರೂ ಆಗಿ ಮೇಲೆ ಹೋಗುತ್ತ ಅವರು ಮುಡಿದ ಹೂಮಾಲೆಯನ್ನು ನನ್ನ ಮೇಲೆ ಬೀಳಿಸುವರು. ಬ್ರಾಹ್ಮಣೋತ್ತಮನೇ, ಆದರಿಂದ ಸಂಕಟಪಡುತ್ತಿದ್ದೇನೆ

೧೨–೧೩ "ಮೃತ್ಯುವೇ, ನೀನು ಯಾರು ? ಯಾರಿಗಾಗಿರುವೆ ? ಮೃತ್ಯುವೆಂಬುವನು ಹೇ ಾಗುವನು ? ಅಥವಾ ಮರಣವು ಹೇಗಾಗುವುದು ? ಮೃತ್ಯುವೇ, ಏಕೆ ಮಾತನಾಡುವುದಿಲ್ಲ ! ಹೇಳು. ಲೋಕದಲ್ಲಿ ನಿರರ್ಥಕನಾದ ನೀನು ಅತ್ಯಾಸೆಯುಳ್ಳವರೂ, ಧರ್ಮವನ್ನು ಬಿಟ್ಟವರೂ ಆದ ಪಾಪಿಗಳನ್ನು ಯಾವಾಗಲೂ ಕೊಲ್ಲುವೆ " ಎನ್ನುವರು.

---

* ಉಂಛವೃತ್ತಿ= ಹೊಲಗದ್ದೆಗಳಲ್ಲಿ ಉದುರಿದ್ದ ಹಂಕಲುಕಾಳನ್ನು ಆರಿಸುವುದು.

ಏಷಾಂ ತಪಸಿ ಸಿದ್ಧಾನಾಂ ನಾಹಂ ವಿಗ್ರಹವಾನಿಹ ।
ನಿಗ್ರಹಾನುಗ್ರಹೌ ನಾಪಿ ಮಯಾ ಶಕ್ಯೌ ಮಹಾತ್ಮನಾಂ ।
ಕರ್ತುಂ ವಾ ಪ್ರತಿಷೇದ್ಧುಂ ವಾ ತೇನ ತಪ್ಯೇ ಭೃಶಂ ಮುನೇ ॥ ೧೪ ॥

ಏತಸ್ಮಿನ್ನಂತರೇ ತತ್ರ ವಿಮಾನೇನ ಮಹಾದ್ಯುತಿಃ ।
ಪತಿವ್ರತಾ ಸಮಂ ಭರ್ತ್ರಾ ಸಾನುಗಾ ಸಪರಿಚ್ಛದಾ ।
ಮಹತಾ ತೂರ್ಯಘೋಷೇಣ ಸಂಪ್ರಾಪ್ತಾ ಪ್ರಿಯದರ್ಶನಾ ॥ ೧೫ ॥

ಧರ್ಮರಾಜಹಿತಂ ಸರ್ವಂ ಧರ್ಮಜ್ಞಾ ಧರ್ಮವತ್ಸಲಾ ।
ಸಾಬ್ರವೀತ್ತು ವಿಮಾನಸ್ಥಾ ಸಾಧಯಂತೀ ಶುಭಾಂಗನಾ ॥ ೧೬ ॥

ವಿಚಿತ್ರಂ ಪ್ರಸೃತಂ ವಾಕ್ಯಂ ಸರ್ವಸತ್ವಸುಖಾವಹಂ ॥ ೧೭ ॥

---

೧೪. ಮುನಿಯೇ, ಈ ತಪಸ್ಸಿದ್ಧರಿಗೆ ನಾನು ಇಲ್ಲಿ ದೇಹವನ್ನು ಧರಿಸಿ ಇರುವವನಾಗಿಯೇ ಕಾಣುವುದಿಲ್ಲ. ಈ ಮಹಾತ್ಮರ ನಿಗ್ರಹವಾಗಲಿ, ಅನುಗ್ರಹವಾಗಲಿ ನನಗೆ ಸಾಧ್ಯವಿಲ್ಲವ ಗಿದೆ. ಅವರಿಗೆ ಏನಾದರೂ ಮಾಡುವುದಕ್ಕಾಗಲಿ, ಅವರು ಮಾಡುವುದನ್ನು ತಡೆಯುವುದಕ್ಕಾಗಲಿ ನನಗೆ ಶಕ್ತಿಯಿಲ್ಲ. ಆದುದರಿಂದ ನಾನು ಹೆಚ್ಚಾಗಿ ಪರಿತಾಪಪಡುತ್ತಿದ್ದೇನೆ. ಎಂದನು.

೧೫. ಅಷ್ಟರೊಳಗೆ, ಪ್ರಿಯದರ್ಶನೆಯೂ, ಮಹಾಕಾಂತಿವಂತೆಯೂ, ಆದ ಪತಿವ್ರತೆಯೊಬ್ಬಳು ತನ್ನ ಪತಿಯೊಡನೆಯೂ, ಮಿತ್ರಪರಿವಾರದೊಡನೆಯೂ ಕೂಡಿದವಳಾಗಿ ವಿಮಾನದಲ್ಲಿ ಮಹಾಧ್ವನಿಯೊಡನೆ ಅಲ್ಲಿಗೆ ಬಂದಳು.

೧೬-೧೭. ಧರ್ಮವನ್ನರಿತವಳೂ, ಧರ್ಮದಲ್ಲಿ ಪ್ರೀತಿಯುಳ್ಳವಳೂ ಆದ ಆ ಶುಭಾಂಗನೆಯು ವಿಮಾನದಲ್ಲಿಯೇ ಇದ್ದುಕೊಂಡು ಯಮನ ಹಿತವನ್ನು ಸಾಧಿಸುವವಳಾಗಿ ಸರ್ವಸುಖಕರವಾಗಿ ವಿನಯದೊಡಗೂಡಿದ ವಿಚಿತ್ರ ವಾಕ್ಯವನ್ನು ಹೇಳಿದಳು.

॥ ಪತಿವ್ರತೋವಾಚ ॥

ಧರ್ಮರಾಜ ಮಹಾಬಾಹೋ ಕೃತಜ್ಞಸ್ಸರ್ವಸಮ್ಮತ ।
ಮೈವಮೀರ್ಷ್ಯಾಂ ಕುರುಷ್ವ ತ್ವಂ ಬ್ರಾಹ್ಮಣೇಷು ತಪಸ್ವಿಷು ॥ ೧೮ ॥

ಏತೇಷಾಂ ತಪಸಾಂ ವೀರ ಮಾಹಾತ್ಮ್ಯಂ ಬಲಮೇವ ಚ ।
ಅಚಿಂತ್ಯಾಸ್ಸರ್ವಭೂತಾನಾಂ ಬ್ರಾಹ್ಮಣಾ ವೇದಪಾರಗಾಃ ॥ ೧೯ ॥

ಬ್ರಾಹ್ಮಣಾಸ್ಸತತಂ ಪೂಜ್ಯಾ ಬ್ರಾಹ್ಮಣಾಸ್ಸರ್ವದೇವತಾಃ ।
ಮಾತ್ಸರ್ಯಂ ಕ್ರೋಧಸಂಯುಕ್ತಂ ನ ಕರ್ತವ್ಯಂ ದ್ವಿಜಾತಿಷು ॥ ೨೦ ॥

ತ್ವಯಾ ಕಾರ್ಯಂ ಶುಭಂ ಕರ್ಮ ನಿತ್ಯಂ ಪೂಜಾ ಮನಸ್ವಿನಾಂ ।
ರಾಗೋ ವಾ ರೋಷಮೋಹೌ ವಾ ನ ಕರ್ತವ್ಯೌ ಸದಾ ಸತಾಂ ॥ ೨೧ ॥

ಪ್ರಯಾತಾ ಗಗನೇ ದೃಷ್ಟ್ವಾ ವಿದ್ಯುತ್ಸೌದಾಮಿನೀ ಯಥಾ ॥ ೨೨ ॥

---

೧೮ ಪತಿವ್ರತೆ—"ಮಹಾಬಾಹುವಾದ ಧರ್ಮರಾಜನೇ, ಕೃತಜ್ಞನೂ, ಸರ್ವಸಮ್ಮತನೂ ಆದ ನೀನು ತಪಸ್ವಿಗಳಾದ ಬ್ರಾಹ್ಮಣರಲ್ಲಿ ಹೀಗೆ ಈರ್ಷ್ಯೆ (ಹೊಟ್ಟೆಕಿಚ್ಚು) ಮಾಡಬೇಡ.

೧೯. ವೀರನೇ, ಈ ಬ್ರಾಹ್ಮಣರ ತಪೋಮಹಿಮೆಯೂ, ಬಲವೂ ಅಚಿಂತ್ಯವಾದುದು. ವೇದಪಾರಂಗತರಾದ ಬ್ರಾಹ್ಮಣರು ಸರ್ವಭೂತಗಳಿಗೂ ಅಚಿಂತ್ಯರು.

೨೦. ಬ್ರಾಹ್ಮಣರು ಯಾವಾಗಲೂ ಪೂಜ್ಯರು. ಬ್ರಾಹ್ಮಣರು ಸರ್ವದೇವತಾಸ್ವರೂಪರು. ದ್ವಿಜರಮೇಲೆ ಕೋಪಯುಕ್ತವಾದ ಮಾತ್ಸರ್ಯವನ್ನು ಮಾಡಬಾರದು.

೨೧-೨೨. ನೀನು ನಿತ್ಯವೂ ಶ್ರೇಷ್ಠವಾದ ಮನಸ್ಸುಳ್ಳವರ ಪೂಜಾರೂಪವಾದಶುಭಕರ್ಮವನ್ನು ಮಾಡಬೇಕು. ಸತ್ಪುರುಷರ ವಿಷಯದಲ್ಲಿ ಮಾತ್ಸರ್ಯವನ್ನಾಗಲಿ,ರೋಷಮೋಹಗಳನ್ನಾಗಲಿ ಎಂದೂ ಮಾಡಬಾರದು." ಎಂದು ಹೇಳಿ,

ದೃಷ್ಟ್ವಾ ಪತಿವ್ರತಾಂ ನಾರೀಂ ಧರ್ಮರಾಜೇನ ಪೂಜಿತಾಂ |
ಅಬ್ರವೀನ್ನಾರದಸ್ತತ್ರ ಧರ್ಮರಾಜಂ ತಥಾಗತಂ ॥ ೨೩ ॥

॥ ನಾರದ ಉವಾಚ ॥

ಕಾ ಚೈಷಾ ಸುಮಹಾಭಾಗ ಸುರೂಪಾಪ್ರಮದೋತ್ತಮಾ |
ಯಾತ್ವಯಾ ಪೂಜಿತಾ ರಾಜನ್ ಹಿತಮುಕ್ತ್ವಾ ಗತಾ ಪುನಃ ॥ ೨೪ ॥

ಏತದಿಚ್ಛಾಮ್ಯಹಂ ಜ್ಞಾತುಂ ಪರಂ ಕೌತೂಹಲಂ ಹಿ ಮೇ |
ಏತನ್ಮೇ ಸುಮಹಾಭಾಗ ಕಥಯಸ್ವ ಸಮಾಸತಃ ॥ ೨೫ ॥

॥ ಯಮ ಉವಾಚ ॥

ಅಹಂ ತೇ ಕಥಯಿಷ್ಯಾಮಿ ಕಥಾಂ ಪರಮಶೋಭನಾಂ |
ಏಷಾ ಮಯಾಯಥಾ ತಾತ ಪೂಜಿತಾಪಿ ಚ ಕೃತ್ಸ್ನಶಃ ॥ ೨೬ ॥

ಯಮನಿಂದ ಪೂಜಿತಳಾಗಿ ಸೌದಾಮಿನಿಯೆಂಬ ಮಿಂಚಿನಂತೆ ಆ ಪತಿವ್ರತೆ ಆಕಾಶದಲ್ಲಿ ಹೋಗುತ್ತಿರುವುದು ಕಾಣಿಸಿತು. ಹಾಗೆ ಹೋಗುತ್ತಿರುವ ಆಕೆಯನ್ನು ನೋಡಿ, ನಾರದನು ಪುನರಾವೃತ್ತಿಯಿಲ್ಲದ ಮುಕ್ತಿಯನ್ನು ಪಡೆಯುವವನಾದ ಆ ಧರ್ಮರಾಜನನ್ನು ಕುರಿತು ಮುಂದಿನಂತೆ ಹೇಳಿದನು.

೨೪-೨೫. ನಾರದ—ಸುಪೂಜ್ಯನೇ, ಇಲ್ಲಿ ಬಂದು ನಿನ್ನಿಂದ ಪೂಜಿತಳಾಗಿ ಹಿತವನ್ನು ನುಡಿದು ಮತ್ತೆ ಹೊರಟುಹೋದ ಸುಂದರಿಯೂ, ಪೂಜ್ಯಳೂ ಆದ ಈ ಉತ್ತಮವನಿತೆ ಯಾರು ? ಇದನ್ನು ತಿಳಿಯಲು ನನಗೆ ಬಹು ಕುತೂಹಲ ವಾಗಿದೆ. ಈ ವಿಚಾರವನ್ನು ನನಗೆ ಸಂಗ್ರಹವಾಗಿ ಹೇಳು.

೨೬. ಯಮ—ತಾತ, ಈಕೆಯು ಏಕೆ ನನ್ನಿಂದ ಚೆನ್ನಾಗಿ ಪೂಜಿತಳಾದ ಳೆಂಬುದಕ್ಕೆ ಬಹಳ ಸೊಗಸಾದ ಕಥೆಯೊಂದನ್ನು ನಿನಗೆ ಹೇಳುತ್ತೇನೆ.

ಪುರಾ ಕೃತಯುಗೇ ತಾತ ನಿಮಿರ್ನಾಮ ಮಹಾಯಶಾಃ ।
ಆಸೀದ್ರಾಜಾ ಮಹಾತೇಜಾಃ ಸತ್ಯಸಂಧ ಇತಿ ಶ್ರುತಃ । ॥ ೨೭ ॥

ತಸ್ಯ ಪುತ್ರೋ ಮಿಥಿರ್ನಾಮ ಜನನಾಜ್ಜನಕೋಽಭವತ್ ।
ತಸ್ಯ ರೂಪವತೀ ನಾಮ ಪತ್ನೀ ಪ್ರಿಯಹಿತೇ ರತಾ ॥ ೨೮ ॥

ಸಾ ಚಾಪಿ ಶುಭಕರ್ಮಾಣಿ ಪತಿಭಕ್ತಾ ಪತಿವ್ರತಾ ।
ಪ್ರೀತ್ಯಾ ಪರಮಯಾ ಯುಕ್ತಾ ಭರ್ತುರ್ವಚನಕಾರಿಣೀ ॥ ೨೯ ॥

ಸೋಽಪಿ ರಾಜಾ ಮಹಾಭಾಗಃ ಸರ್ವಭೂತಹಿತೇ ರತಃ ।
ಧರ್ಮಾತ್ಮಾ ಚ ಮಹಾತ್ಮಾ ಚ ಸತ್ಯಸಂಧೋ ಮಹಾತಪಾಃ ॥ ೩೦ ॥

ಯ ಇಮಾಂ ಪೃಥಿವೀಂ ಸರ್ವಾಂ ಧರ್ಮೇಣ ಪರಿಪಾಲಯನ್ ॥ ೩೧ ॥

---

೨೭. ತಾತ, ಪೂರ್ವದಲ್ಲಿ ಕೃತಯುಗದಲ್ಲಿ ಸತ್ಯಸಂಧನೆಂದು ಪ್ರಸಿದ್ಧನೂ, ಮಹಾಯಶನೂ, ಮಹಾತೇಜನೂ ಆದ ನಿಮಿಯೆಂಬ ದೊರೆಯಿದ್ದನು.

೨೮. ಆ ನಿಮಿರಾಜನ ಪುತ್ರನಾದ ಮಿಥಿಯೆಂಬುವನು ಜನನನಿಮಿತ್ತವಾಗಿ ಜನಕನೆಂಬ ಹೆಸರನ್ನೂ ಪಡೆದಿದ್ದನು. ಆ ಜನಕಮಹಾರಾಜನಿಗೆ ಪತಿಹಿತಾಸಕ್ತಳಾದ ರೂಪವತಿಯೆಂಬ ಪತ್ನಿಯಿದ್ದಳು.

೨೯. ಪರಮಪ್ರೀತಿಯುಕ್ತಳಾಗಿ, ಪತಿಯ ಮಾತಿನಂತೆ ನಡೆಯುವ ಪತಿಭಕ್ತೆಯೂ, ಪತಿವ್ರತೆಯೂ ಆದ ಆಕೆ ಬಹು ಶುಭಕರ್ಮಗಳನ್ನು ಮಾಡಿದಳು.

೩೦–೩೧. ಮಹಾಭಾಗ್ಯನೂ, ಧರ್ಮಾತ್ಮನೂ, ಮಹಾತ್ಮನೂ, ಸತ್ಯಸಂಧನೂ, ಮಹಾತಪಸ್ವಿಯೂ ಆದ ಆ ರಾಜನೂ ಧರ್ಮದಿಂದ ಈ ಭೂಮಿಯನ್ನು ಪರಿಪಾಲಿಸುತ್ತ ಸರ್ವಭೂತಹಿತಾಸಕ್ತನಾಗಿದ್ದನು.

ನ ವ್ಯಾಧಿರ್ನ ಜರಾ ಮೃತ್ಯುಸ್ತಸ್ಮಿನ್ರಾಜನಿ ಶಾಸತಿ ॥ ೩೨ ॥

ವವರ್ಷ ಸತತಂ ದೇವಸ್ತಸ್ಯ ರಾಷ್ಟ್ರೇ ಮಹಾದ್ಯುತೇಃ ।
ಏವಂ ಬಹುಗುಣೋಪೇತಂ ತಸ್ಯ ರಾಜ್ಯಂ ಮಹಾತ್ಮನಃ ।
ನ ಕಶ್ಚಿದ್ದೃಶ್ಯತೇ ಮರ್ತ್ಯೋ ರುಜಾರ್ತೋ ದುಃಖಿತೋಽಪಿ ವಾ ॥ ೩೩ ॥

ಅಥಾತ್ರ ಬಹುಕಾಲಸ್ಯ ರಾಜಾನಂ ಮಿಥಿಲಾಧಿಪಂ ।
ಉವಾಚ ರಾಜ್ಞೀ ವಿಪ್ರೇಂದ್ರ ವಿನಯಾತ್ಪ್ರಶ್ರಿತಂ ವಚಃ ॥ ೩೪ ॥

॥ ರಾಜ್ಞ್ಯುವಾಚ ॥

ಭೃತ್ಯಾನಾಂ ಚ ದ್ವಿಜಾತೀನಾಂ ತಥಾ ಪರಿಜನಸ್ಯ ಚ ।
ಯದಸ್ತಿ ದ್ರವಿಣಂ ಕಿಂಚಿತ್ಪೃಥಿವ್ಯಾಂ ಯದ್ಗೃಹೇ ಚತೇ ॥ ೩೫ ॥

೩೨-೩೩. ಆ ದೊರೆಯು ಆಳುತ್ತಿರುವಾಗ ಪ್ರಜೆಗಳಿಗೆ ವ್ಯಾಧಿಯಾಗಲಿ, ಮುಪ್ಪಾಗಲಿ, ಅಕಾಲಮರಣವಾಗಲಿ ಇರಲಿಲ್ಲ. ಮಹಾತೇಜಸ್ವಿಯಾದ ಆತನ ರಾಷ್ಟ್ರದಲ್ಲಿ ಇಂದ್ರದೇವನು ಸರಿಯಾಗಿ ಮಳೆಯನ್ನು ಸುರಿಸುತ್ತಿದ್ದನು. ಅಲ್ಲಿ ರೋಗಪೀಡಿತನಾದ ಅಥವಾ ದುಃಖಪೀಡಿತನಾದ ಮನುಷ್ಯನೊಬ್ಬನೂ ಕಾಣುತ್ತಿರಲಿಲ್ಲ. ಮಹಾತ್ಮನಾದ ಆ ಜನಕರಾಜನ ರಾಜ್ಯವು ಹೀಗೆ ಬಹು ಗುಣಗಳುಳ್ಳುದಾಗಿದ್ದಿತು.

೩೪. ವಿಪ್ರೇಂದ್ರನೆ, ಹೀಗಿರುತ್ತಿರಲು ಬಹುಕಾಲದಮೇಲೆ ಒಂದುದಿನ ರಾಣಿಯು ರಾಜನೊಡನೆ ವಿನಯದಿಂದ ಮೃದುವಾದ ಮುಂದಿನ ಮಾತನಾಡಿದಳು.

೩೫-೩೬. ರಾಣಿ:—ದೊರೆಯೇ, ಭೂಮಿಯಲ್ಲಿಯೂ, ಅರಮನೆಯಲ್ಲಿಯೂ, ಇದ್ದ ನಿನ್ನ ದ್ರವ್ಯವೆಲ್ಲವೂ ಭೃತ್ಯರಿಗೂ, ದ್ವಿಜರಿಗೂ, ಪರಿಜನಕ್ಕೂ ಉಪಯುಕ್ತ

ವಿನಿಯುಕ್ತಂ ತು ತತ್ಸರ್ವಂ ಸಾನ್ನಿಧ್ಯಂತು ತಥಾತ್ವಯಾ ।
ನ ಚ ರಾಜನ್ವಿಜಾನಾಸಿ ಭೋಜನಸ್ಯ ಪ್ರಶಂಸಸಿ ॥ ೩೭ ॥

ನಾಸ್ತಿ ತನ್ನಿಯಮಃ ಕಶ್ಚಿತ್ಸುಪ್ರಮೂಲ್ಯಂ ಚ ನಾಸ್ತಿ ನಃ ।
ನ ವಾ ಗವಾದಿಕಂ ಕಿಂಚಿನ್ನ ಚ ವಸ್ತ್ರಾಣಿ ಕರ್ಹಿಚಿತ್ ॥ ೩೭ ॥

ನ ಚೈವ ವಾರ್ಷಿಕಃ ಕಶ್ಚಿದ್ವಿದ್ಯತೇ ಭೋಜನಸ್ಯ ಚ ।
ದೃಶ್ಯತೇ ಹಿ ಮಹಾರಾಜ ಮಮ ಚೈವಾಥ ಸುವ್ರತ ॥ ೩೮ ॥

ಯತ್ಕರ್ತವ್ಯಂ ಮಯಾ ವಾಪಿ ತನ್ಮೇ ಬ್ರೂಹಿ ನರಾಧಿಪ ।
ಕರ್ತ್ರ್ಯಸ್ಮ್ಯಹಂ ವಿಶೇಷೇಣ ಯದ್ವಾಕ್ಯಮಪಿ ಮನ್ಯಸೇ ॥ ೩೯ ॥

॥ ರಾಜೋವಾಚ ॥

ನ ಶಕ್ಯಮುಪರೋಧೇನ ವಕ್ತುಂ ಭಾಮಿನಿ ವಿಪ್ರಿಯಂ ।
ನ ಚ ಪಶ್ಯಾಮ್ಯಹಂ ದೇವಿ ತವ ಚೈವ ಜನಸ್ಯ ಚ ॥ ೪೦ ॥

ವಾಯಿತು. ಮುಂದೆ ಭೋಜನಕ್ಕೆ ಹೇಗೆಂಬುದನ್ನು ಯೋಚಿಸುವುದೂ ಇಲ್ಲ. ಹೇಳುವುದೂ ಇಲ್ಲ.

೩೭. ಧನಸಂಪಾದನೆಗೆ ಯಾವ ನಿಯಮವೂ ಇಲ್ಲವೆ? ಹೂವಿಗೆ ಬೇಕಾದಷ್ಟುದುಡ್ಡೂ ನಮ್ಮಲ್ಲಿಲ್ಲವಾಗಿದೆ. ದನಕರುಗಳೇ ಮೊದಲಾದುವಾಗಲಿ, ವಸ್ತ್ರಗಳಾಗಲಿ ಯಾವುವೂ ಇಲ್ಲ.

೩೮ ಸುವ್ರತನಾದ ಮಹಾರಾಜನೇ, ವರ್ಷಕ್ಕೆ ಬೇಕಾದ ಭೋಜನದ ಪದಾರ್ಥವಾವುದೂ ಇಲ್ಲವೇ ಇಲ್ಲವೆಂದು ನನಗೆ ಕಾಣುತ್ತದೆ.

೩೯. ದೊರೆಯೇ, ನಾನು ಈಗ ಏನು ಮಾಡಬೇಕೋ ಅದನ್ನು ಹೇಳು. ನೀನು ಆಲೋಚಿಸಿ ಏನುಮಾಡಬೇಕೆಂದು ಹೇಳಿದರೂ ಅದನ್ನು ಅವಶ್ಯವಾಗಿ ಆಸಕ್ತಿಯಿಂದ ಮಾಡುವವಳಾಗಿದ್ದೇನೆ.

೪೦-೪೧. ರಾಜ:—' ದೇವಿ, ಬಲಾತ್ಕಾರದಿಂದ ಅಹಿತವನ್ನು ಹೇಳಲು ಸಾಧ್ಯವಿಲ್ಲ. ನಿನಗೂ, ಜನಕ್ಕೂ ಹೇಗೆಂಬುದನ್ನರಿಯೆನು. ಆದುದರಿಂದ ಪ್ರಿಯೇ,

ತದ್ಬ್ರವೀಮಿ ಯಥಾಶಕ್ತ್ಯಾ ಯದಿ ಮೇ ಮನ್ಯಸೇ ಪ್ರಿಯೇ।
ಹವಿಷ್ಯೇ ವರ್ತಮಾನಾನಾಮಿದಂ ವರ್ಷಶತಂ ಗತಂ ॥ ೪೧ ॥

ಕುದ್ದಾಲೇನ ಹಿ ಕಾಷ್ಠೇನ ಕ್ಷೇತ್ರಂ ವೈ ಕುರ್ಮಹೇ ಪ್ರಿಯೇ ।
ತತೋ ಧರ್ಮವಿಧಿಂ ಕೃತ್ವಾತ್ಪ್ರಾಪ್ಸ್ಯಾಮೋ ನ ಸಂಶಯಃ ॥ ೪೨ ॥

ಭಕ್ಷ್ಯಂ ಭೋಜ್ಯ ಚ ಯೋ ಯೋ ಚ ತತಸ್ತ್ವಂ ಸುಖಮಾಪ್ಸ್ಯಸಿ ।
ಏವಮುಕ್ತ್ವಾ ತತೋ ರಾಜ್ಞೀ ರಾಜಾನಮಿದಮಬ್ರವೀತ್ ॥ ೪೩ ॥

॥ ದೇವ್ಯುವಾಚ ॥

ಭೃತ್ಯಾನಾಂ ತು ಸಹಸ್ರಾಣಿ ತವ ರಾಜನ್ನಿವೇಶನೇ ।
ಅಶ್ವಾನಾಂ ಚ ಗಜಾನಾಂ ಚ ಸೈರಿಭಾನಾಂ ತಥೈವ ಚ ॥ ೪೪ ॥

ಉಷ್ಟ್ರಾಣಾಂ ಮಹಿಷಾಣಾಂ ಚ ಖರಾಣಾಂ ಚ ಮಹಾಯಶಾಃ ।
ಏತೇ ಸರ್ವೇ ಕಥಂ ರಾಜನ್ನ ಕುರ್ವಂತಿ ತವೇಪ್ಸಿತಂ ॥ ೪೫ ॥

ನೀನು ಮನಸ್ಸಿಗೆ ತಂದುಕೊಳ್ಳುವುದಾದರೆ ಯಥಾಶಕ್ತಿಯಾಗಿ ಹೇಳುತ್ತೇನೆ. ಯಜ್ಞಕಾರ್ಯದಲ್ಲಿದ್ದ ನಮಗೆ ನೂರುವರ್ಷ ಕಳೆದುಹೋಯಿತು.

೪೨-೪೩ ಪ್ರಿಯೇ, ನಾವು ಮರದ ಗುದ್ದಲಿಯಿಂದ ಹೊಲಗದ್ದೆಗಳನ್ನು ವ್ಯವಸಾಯ ಮಾಡೋಣ. ಅದರಿಂದ ನನ್ನ ಧರ್ಮವಿಧಿಯನ್ನು ನಾನು ನಿಜವಾಗಿಯೂ ಪಡೆಯುವೆನು ಸಂದೇಹವಿಲ್ಲ. ಭಕ್ಷ್ಯಭೋಜ್ಯಗಳಾವುವು ಬೇಕೋ ಅವೆಲ್ಲವನ್ನೂ ಅದರಿಂದ ಪಡೆಯಬಹುದು ಬಳಿಕ ನಿನಗೆ ಸುಖವುಂಟಾಗುವುದು ’ ದೊರೆಯು ಹೀಗೆನಲು ರಾಣಿಯು ಆತನನ್ನು ಕುರಿತು ಈ ಮುಂದಿನ ಮಾತನಾಡಿದಳು.

೪೪-೪೫. ದೇವಿ:—, ಪ್ರಭುವೇ, ನಿನ್ನ ಅರಮನೆಯಲ್ಲಿ ಸಾವಿರಾರುಜನ ಸೇವಕರಿರುವರು. ಹೆಸರುಗೊಂಡ ಸಾವಿರಾರು ಕುದುರೆಗಳೂ, ಆನೆಗಳೂ ಒಂಟೆಗಳೂ, ಕೋಣಗಳೂ, ಕಾಡುಕೋಣಗಳೂ, ಕತ್ತೆಗಳೂ ಇವೆ. ಇವೆಲ್ಲವೂ ಏಕೆ ನಿನ್ನ ಇಷ್ಟಕಾರ್ಯವನ್ನು ಮಾಡದಿರುವುವು ?

|| ರಾಜೋವಾಚ ||

ನಿಯುಕ್ತಾನಿ ಹಿ ಕರ್ಮಾಣಿ ವಾರ್ಷಿಕಾಣೀತರಾಣಿ ಚ |
ಸರ್ವಕರ್ಮಾಣಿ ಕುರ್ವಂತಿ ಯೇ ಭೃತ್ಯಾ ಮೇ ವರಾನನೇ || ೪೬ ||

ಬಲೀವರ್ದಾಃ ಖರಾ ಅಶ್ವಾ ಗಜಾ ಉಷ್ಟ್ರಾ ಹ್ಯನೇಕಶಃ |
ಸರ್ವೇ ನಿಯುಕ್ತಾ ಮೇ ದೇವಿ ಸರ್ವಕರ್ಮಸು ಶೋಭನೇ || ೪೭ ||

ಆಯಸಂತ್ರಪುಷಂ ತಾಮ್ರಂ ರಾಜತಂ ಕಾಂಚನಂ ತಥಾ |
ನಿಯುಕ್ತಾನಿ ತು ಸರ್ವಾಣಿ ಸರ್ವಕರ್ಮಸ್ವನಿಂದಿತೇ || ೪೮ ||

ನನು ಪಶ್ಯಾಮ್ಯಹಂ ದೇವಿ ಕಿಂಚಿದ್ಧೈಮಂ ನ ಚಾಯಸಂ |
ಯೇನ ಕುರ್ಯಾಮ್ಯಹಂ ದೇವಿ ಕುದ್ದಾಲಂ ಸುಸಮಾಹಿತಃ || ೪೯ ||

ಏವಮುಕ್ತಾ ಮಹಾದೇವಿ ತೇನ ರಾಜ್ಞಾ ಸುಶೋಭನಾ |
ಹೃಷ್ಟಪುಷ್ಟಮನಾ ದೇವೀ ರಾಜಾನಮಿದಮಬ್ರವೀತ್ |
ಗಚ್ಛ ರಾಜನ್ಯಥಾಕಾಮಮನುಯಾಸ್ಯಾಮಿ ಪೃಷ್ಠತಃ || ೫೦ ||

೪೬–೪೭. ರಾಜ:— ' ಸುಂದರಮುಖೀ, ಸರ್ವಕಾರ್ಯಗಳನ್ನೂ ಮಾಡುವ ಭೃತ್ಯರಿಗೆ ವರ್ಷದಲ್ಲಿ ಮಾಡಬೇಕಾದ ಕಾರ್ಯಗಳನ್ನು ನಿಯಮಿಸಿದುದಾಗಿದೆ. ದೇವಿ, ಅನೇಕವಾಗಿರುವ ಎತ್ತುಗಳೂ, ಕತ್ತೆಗಳೂ, ಆನೆ ಕುದುರೆಗಳೂ, ಒಂಟೆಗಳೂ, ಎಲ್ಲವೂ ಬೇರೆಬೇರೆಯಾದ ಸಕಲಕಾರ್ಯಗಳಲ್ಲೂ ನಿಯಮಿತವಾಗಿವೆ.

೪೮–೪೯. ಅನಿಂದಿತೇ, ಕಬ್ಬಿಣ, ಸೀಸ, ತವರ, ಬೆಳ್ಳಿ, ಚಿನ್ನ ಇವುಗಳಿಂದ ಮಾಡಿದ ಉಪಕರಣಗಳೆಲ್ಲವೂ ಸರ್ವಕಾರ್ಯಗಳಿಗೂ ನಿಷ್ಕರ್ಷೆಯಾಗಿ ಉಪಯೋಗದಲ್ಲಿವೆ. ದೇವಿ, ಸಮಾಧಾನದಿಂದ ಗುದ್ದಲಿಯನ್ನು ಮಾಡಬಹುದಾದ ಕಬ್ಬಿಣವನ್ನಾಗಲಿ, ಚಿನ್ನವನ್ನಾಗಲಿ ಸ್ವಲ್ಪವನ್ನೂ ಕಾಣೆನು. "

೫೦. ಆ ದೊರೆಯು ಹೀಗೆ ಹೇಳಲು ಮಂಗಳೆಯಾದ ಮಹಾರಾಣಿಯು ಹರ್ಷದಿಂದುಬ್ಬಿದ ಮನವುಳ್ಳವಳಾಗಿ ರಾಜನನ್ನು ಕುರಿತು " ದೊರೆಯೇ, ಬೇಕಾದೆಡೆಗೆ ನಡೆ, ನಾನೂ ನಿನ್ನನ್ನು ಹಿಂಬಾಲಿಸುವೆನು " ಎಂದಳು.

ಏವಮುಕ್ತಸ್ಸನಿಷ್ಕ್ರಾಂತಸ್ಸಭಾರ್ಯಸ್ಸ ನರೇಶ್ವರಃ ॥ ೫೧ ॥

ತತೋಽ ರಾಜಾ ಚ ದೇವೀ ಚ ಕ್ಷೇತ್ರಂ ಮೃಗಯತಸ್ತದಾ ।
ಗತೌ ಚ ಪರಮಾಧ್ವಾನಂ ತತೋ ರಾಜಾಬ್ರವೀದಿದಂ ॥ ೫೨ ॥

ಇದಂ ಭದ್ರಂ ಮಮ ಕ್ಷೇತ್ರಮಾಸ್ಸ್ವಾತ್ರ ವರವರ್ಣಿನಿ ।
ಯಾವದ್ಗುಲ್ಮಾನಿಮಾನ್ಭದ್ರೇ ಕಂಟಕಾಂಶ್ಚ ವರಾನನೇ ॥ ೫೩ ॥

ಅಹಂ ಛಿನದ್ಮಿ ವೈ ದೇವಿ ತ್ವಮೇತಾಂಛೋದಯ ಪ್ರಿಯೇ ।
ಏಷ ತೇ ಕರ್ಮಯೋಗಸ್ತು ತತಃ ಪ್ರಾಪ್ಸ್ಯಾಮಿ ಚೇಪ್ಸಿತಂ ॥ ೫೪ ॥

ಏವಮುಕ್ತಾ ಮಹಾದೇವೀ ತೇನ ರಾಜ್ಞಾ ತಪೋಧನ ।
ಉವಾಚ ಮಧುರಂ ವಾಕ್ಯಂ ಪ್ರಹಸಂತೀ ನೃಪಾಂಗನಾ ॥ ೫೫ ॥

ವೃಕ್ಷೋತ್ರ ದೃಶ್ಯತೇ ಪಾರ್ಶ್ವೇ ಸೌವರ್ಣೋ ಗುಲ್ಮ ಏವ ಚ ।
ಪಾನೀಯಸ್ಯ ತು ಸಾನ್ನಿಧ್ಯಂ ನ ಕಿಂಚಿದಿಹ ದೃಶ್ಯತೇ ॥ ೫೬ ॥

೫೧-೫೪. ಹೀಗೆ ಹೇಳಿಸಿಕೊಂಡ ಆ ರಾಜನು ರಾಣಿಯೊಡನೆ ಹೊರಟನು. ಬಳಿಕ ಅವರಿಬ್ಬರೂ ಗದ್ದೆಯನ್ನು ಹುಡುಕುತ್ತ ಬಹುದೂರ ನಡೆದರು. ಆಮೇಲೆ ಅಲ್ಲಿ ದೊರೆಯು ರಾಣಿಯನ್ನು ನೋಡಿ, ' ಉತ್ತಮೇ, ಇದು ಮಂಗಳಕರವಾದ ನನ್ನ ಕ್ಷೇತ್ರ. ಭದ್ರೇ, ನೀನು ಇಲ್ಲಿಯೇ ಇದ್ದು ನಾನು ಈ ಪೊದೆಗಳನ್ನೂ, ಮುಳ್ಳುಗಳನ್ನೂ ಕತ್ತರಿಸಿ ಮುಗಿಸುವಷ್ಟರಲ್ಲಿ ನೀನು ಅವುಗಳನ್ನು ಎತ್ತಿ ನೆಲವನ್ನು ಶೋಧಿಸು. ಇದೇ ನಿನ್ನ ಕಾರ್ಯ. ಆಮೇಲೆ ಇಷ್ಟವನ್ನು ಪಡೆಯುವೆ. ' ಎಂದನು.

೫೫. ತಪೋಧನನೇ, ದೊರೆಯಿಂದ ಹೀಗೆ ಹೇಳಿಸಿಕೊಂಡ ಮಹಾದೇವಿಯು ನಗುತ್ತ ಇಂಪಾದ ದನಿಯಿಂದ ಮುಂದಿನ ಮಾತನಾಡಿದಳು.

೫೬-೫೭. " ಇಲ್ಲಿ ಪಕ್ಕದಲ್ಲಿ ಸುವರ್ಣದ ವೃಕ್ಷವೂ ಪೊದೆಯೂ ಇದೆ. ಆದರೆ ಇಲ್ಲಿ ಸಮೀಪದಲ್ಲಿ ಜಲಾಶಯವಾವುದೂ ಕಾಣುವುದಿಲ್ಲ. ನಾವು ಇಲ್ಲಿ

ಕಥಂ ಕ್ಷೇತ್ರಂ ಕರಿಷ್ಯಾಮೋ ಹ್ಯದ್ರೋಗಸ್ಯ ತು ಕಾರಕಂ ।
ಅಸ್ಮಿನ್ನಾಪಿ ಕೃತಂ ಕರ್ಮ ಕಥಂ ಗುಣಕರಂ ಭವೇತ್ ॥ ೫೭ ॥

ತಸ್ಯಾಸ್ತದ್ವಚನಂ ಶ್ರುತ್ವಾ ರಾಜಾ ವಚನಮಬ್ರವೀತ್ ।
ಶುಭಂ ಸಾನುನಯಂ ವಾಕ್ಯಂ ಭೂತಾನಾಂ ಗುಣವತ್ಸಲಃ ॥ ೫೮ ॥

ಪೂರ್ವಗ್ರಹೇ ಭವೇತ್ಪೂರ್ವಂ ವಿನಿಯುಕ್ತಂ ತಥಾ ಪ್ರಿಯೇ ।
ಇಯಂ ನದೀ ಹ್ಯಯಂ ವೃಕ್ಷ ಇಯಂ ಭೂಮಿಸ್ಸಮಾಂಸಲಾ ॥ ೫೯ ॥

ಪಾನೀಯಸ್ಯ ತು ಪಾರ್ಶ್ವೇನ ಸನ್ನಿಕೃಷ್ಟೇನ ಸುಂದರಿ ।
ಚತುರ್ಯೋಜನಪರ್ಯಂತಂ ನ ಕಿಂಚಿದಿಹ ದೃಶ್ಯತೇ ।
ಅಯಂ ಗ್ರಾಹೋ ಮಹಾದೇವಿ ನ ಚ ಬಾಧಾತ್ರ ಕಸ್ಯಚಿತ್ ॥ ೬೦ ॥

ಕ್ಷೇತ್ರವನ್ನು ಮಾಡುವುದು ಹೇಗೆ? ಇಲ್ಲಿ ಮಾಡಿದ ವ್ಯವಸಾಯಕಾರ್ಯವಾದರೂ ಹೇಗೆ ಗುಣಕರವಾಗುವುದು? '

೫೮. ರಾಣಿಯು ಆ ಮಾತನ್ನು ಕೇಳಿ, ಗುಣವತ್ಸಲನಾದ ಆ ದೊರೆಯು ಸಮಾಧಾನಕರವೂ, ಪ್ರಾಣಿಗಳಿಗೆ ಶುಭಕರವೂ ಆದ ಈ ಮುಂದಿನ ಮಾತನಾಡಿದನು.

೫೯-೬೦. ' ಪ್ರಿಯೇ, ಸುಂದರೀ, ಈ ಕ್ಷೇತ್ರದ ಪೂರ್ವದಕಡೆಯ ಭಾಗವನ್ನು ತೆಗೆದುಕೊಂಡರೆ ಅದು ಅದರ ಪೂರ್ವಭಾಗದಲ್ಲಿ ಪಕ್ಕದಲ್ಲಿಯೇ ಇರುವ ಜಲಾಶಯಕ್ಕೆ ಬಹಳ ಹತ್ತಿರದಲ್ಲಿಯೇ ಇದೇ ನದಿ, ಇದೇ ಉತ್ತಮವಾದ ಭೂಮಿ, ಇದೇ ಮರ' ಎಂದು ಹೇಳುವಂತೆ ಇದೆ. ಆದರೆ ಇಲ್ಲಿಗೆ ನಾಲ್ಕು ಯೋಜನದವರೆಗೂ ಏನೂ ಕಾಣಿಸುವುದಿಲ್ಲ. ಮಹಾದೇವಿ, ಇದು ನೆರೆಯು ನೆಲವಾಗಿದೆ, ಇಲ್ಲಿ ಯಾರಿಗೂ ಯಾವುದಕ್ಕೂ ತೊಂದರೆಯಿಲ್ಲ' ಎಂದನು.

ತತಸ್ತು ಚಿಂತಯಾಮಾಸ ತತ್ಕ್ಷೇತ್ರಂ ಭಾರ್ಯಯಾ ಸಹ ॥ ೬೧ ॥

ವಿಯನ್ಮಧ್ಯೇ ತಥೋಗ್ರಶ್ಚ ಸವಿತಾ ತಪತೇ ಸದಾ ।
ಸಮ್ಪ್ರವೃತ್ತಶ್ಚ ತದಾ ತತ್ರ ನಿದಾಘಃ ಕಾಲ ಆಗತಃ ॥ ೬೨ ॥

ಪ್ರವೃದ್ಧೋ ದಾರುಣೋ ಘರ್ಮಃ ಕಾಲಶ್ಚೈವಾತಿದಾರುಣಃ ।
ತತಸ್ಸಾ ತೃಷಿತಾ ದೇವೀ ಕ್ಷುಧಿತಾ ಚ ತಪಸ್ವಿನೀ । ॥ ೬೩ ॥

ಸ್ನಿಗ್ಧೌ ತಾಮ್ರತಲೌ ಪಾದೌ ತಸ್ಯಾಂ ಸಂತಾಪಮಾಗತೌ ।
ಗುಣಪ್ರವಾಹರಕ್ತೌ ತು ತಸ್ಯಾಃ ಪಾದೌ ಚ ಸುವ್ರತ ॥ ೬೪ ॥

ಸೂರ್ಯಸ್ಯ ಪಾದಾ ಮಧ್ಯಾಹ್ನೇ ತಾಪಯಂತ್ಯಗ್ನಿಸನ್ನಿಭಾಃ ।
ತತಸ್ಸಾ ವ್ಯಥಿತಾ ದೇವೀ ಭರ್ತಾರಮಿದಮಬ್ರವೀತ್ ॥ ೬೫ ॥

ತೃಷಿತಾಸ್ಮಿ ಮಹಾರಾಜ ಭೃಶಮುಷ್ಣೇನ ಪೀಡಿತಾ ।
ಪಾನೀಯಂ ದೀಯತಾಂ ರಾಜನ್ಮಮ ಶೀಘ್ರಂ ಪ್ರಸಾದತಃ ॥ ೬೬ ॥

೬೧-೬೨. ಬಳಿಕ ಜನಕರಾಜನು ರಾಣಿಯೊಡನೆ ಆ ಕ್ಷೇತ್ರವನ್ನು ಶೋಧಿಸಿ ಹದಗೊಳಿಸಿದನು. ಆಗ ಅಲ್ಲಿ ಕಡುಬೇಸಗೆಯೊದಗಿತು. ಆಕಾಶಮಧ್ಯದಲ್ಲಿ ಸೂರ್ಯನು ಉಗ್ರವಾಗಿ ತಪಿಸುತ್ತಿದ್ದನು.

೬೩-೬೪. ಬಿಸಿಲ ತಾಪವು ಭಯಂಕರವಾಯಿತು. ಸುವ್ರತನೇ, ತಪಸ್ವಿನಿಯಾದ ಆ ರಾಣಿಯು ಹಸಿವುಬಾಯಾರಿಕೆಗಳಿಂದ ಪೀಡಿತಳಾದಳು. ಮೃದುವಾಗಿಯೂ, ಕೆಂಪಾಗಿಯೂ ಇರುವ ಆಕೆಯ ಅಂಗಾಲುಗಳಲ್ಲಿ ಬಹು ತಾಪದಿಂದ ರಕ್ತವು ಹರಿಯತೊಡಗಿತು.

೬೫. ಮಧ್ಯಾಹ್ನದಲ್ಲಿ ಸೂರ್ಯಕಿರಣಗಳು ಬೆಂಕಿಯಂತೆ ಸುಡುತ್ತಿದ್ದುವು. ಆದ್ದರಿಂದ ಕ್ಲೇಶಗೊಂಡ ರಾಣಿಯು ಪತಿಯನ್ನು ಕುರಿತು ಹೀಗೆ ಹೇಳಿದಳು.

೬೬-೬೮. "ಮಹಾರಾಜ, ನಾನು ಬಿಸಿಲಬೇಗೆಯಿಂದ ಪೀಡಿತಳಾಗಿ ಬಹಳವಾಗಿ ಬಾಯಾರಿರುವೆನು. ದಯೆಯಿಂದ ನನಗೆ ಬೇಗನೆ ನೀರನ್ನು ತಂದು

ಇತ್ಯುಕ್ತ್ವಾ ಪತಿತಾ ದೇವೀ ವಿಹ್ವಲಾ ದುಃಖಪೀಡಿತಾ |
ಪತಂತ್ಯಾ ಚ ತಯಾ ಸೂರ್ಯೋ ದೃಷ್ಟೋ ವಿಹ್ವಲಯಾ ತಥಾ || ೬೭ ||

ಯದೃಚ್ಛಯಾ ಪತಂತ್ಯಾ ತು ಸೂರ್ಯಃ ಕೋಪೇನ ವೀಕ್ಷಿತಃ || ೬೮ ||

ತತೋ ವಿವಸ್ವಾನ್ಭಗವಾನ್ ಸಂತ್ರಸ್ತೋ ಗಗನೇ ತದಾ |
ದಿವಂ ಮುಕ್ತ್ವಾ ಮಹಾತೇಜಾಃ ಪತಿತೋ ಧರಣೀತಲೇ || ೬೯ ||

ತತೋ ದೃಷ್ಟ್ವಾ ತು ರಾಜಾಸೌ ಸ್ವಭಾವೇನ ಚ ವರ್ಜಿತಂ |
ಕಿಮರ್ಥಮಿಹ ತೇಜಸ್ವಿಂಸ್ತ್ಯಕ್ತ್ವಾ ಮಂಡಲಮಾಗತಃ |
ಕಿಂ ಕರೋಮಿ ಮಹಾತೇಜಾಃ ಸರ್ವಲೋಕನಮಸ್ಕೃತಃ || ೭೦ ||

ಏವಂ ಬ್ರುವಂತಂ ರಾಜಾನಂ ಸೂರ್ಯಸ್ಸಾನುನಯೋಽಬ್ರವೀತ್ |
ಪತಿವ್ರತಾ ಶುಭಾಕ್ಷೀ ಚ ಮನ್ಯೈಷಾ ರುಷಿತಾ ಭೃಶಂ || ೭೧ ||

ಕೊಡು" ಎಂದು ಹೇಳಿ ದಾಹದುಃಖಪರವಶಳಾದ ಆದೇವಿಯು ಕೆಳಗೆ ಬಿದ್ದು ಬಿಟ್ಟಳು ಬೀಳುವಾಗ ಅಕಸ್ಮಾತ್ತಾಗಿ ಸೂರ್ಯನನ್ನು ಕಂಡು ಅವನನ್ನು ಕೋಪದಿಂದ ನೋಡಿದಳು.

೬೯. ಮಹಾತೇಜನೂ, ಪೂಜ್ಯನೂ ಆದ ಸೂರ್ಯನು ಆಕೆಯ ಕೋಪ ದೃಷ್ಟಿಯಿಂದ ಅತಿಭೀತನಾಗಿ ಆಕಾಶವನ್ನು ಬಿಟ್ಟು ಭೂಮಿಯಮೇಲೆ ಬಿದ್ದನು.

೭೦. ಆಜನಕರಾಜನು, ತನ್ನ ಸಹಜಶಕ್ತಿಗುಣಗಳನ್ನು ಕಳೆದುಕೊಂಡು ಬಿದ್ದ ಆಸೂರ್ಯನನ್ನು ನೋಡಿ, "ತೇಜಸ್ವಿಯೇ, ನಿನ್ನ ನಭೋಮಂಡಲವನ್ನು ಬಿಟ್ಟು ಏತಕ್ಕಾಗಿ ಇಲ್ಲಿ ಬಂದೆ? ಮಹಾತೇಜ, ಸರ್ವಲೋಕನಮಸ್ಕೃತ, ನಿನಗೆ ನಾನು ಮಾಡಬೇಕಾದುದೇನು?" ಎಂದನು.

೭೧–೭೨. ಹಾಗೆ ಹೇಳಿದ ದೊರೆಯನ್ನು ಕುರಿತು ಸೂರ್ಯನು ಅನುನಯ ದಿಂದ ಹೇಳಿದನು. "ದೊರೆಯೇ, ಪತಿವ್ರತೆಯಾದ ಈ ಶುಭನೇತ್ರೆಯು ನನ್ನ

ತತೋಽಹಂ ಪತಿತೋ ರಾಜಂಸ್ತವ ಕಾರ್ಯಾನುಶಾಸನಃ ॥ ೭೨ ॥

ಅನಯಾ ಸದೃಶೀ ನಾರೀ ತ್ರೈಲೋಕ್ಯೇ ನೈವ ವಿದ್ಯತೇ ।
ಪೃಥಿವ್ಯಾಂ ಸ್ವರ್ಗಲೋಕೇ ವಾ ನ ಕಾಚಿದಿಹ ದೃಶ್ಯತೇ ।
ಅಹೋಽಸ್ಯಾಃ ಪರಮಂ ಸತ್ವಮಹೋಽಸ್ಯಾಃ ಪರಮಂ ತಪಃ ॥ ೭೩ ॥

ಅಹೋ ಧೈರ್ಯಂ ಚ ಶಕ್ತಿಶ್ಚ ತನ್ವೈವಂ ಶಂಸಿತಾ ಗುಣಾಃ ।
ತಥೇಯಂ ತೇ ಮಹಾಭಾಗ ತವ ಚಿತ್ತಾನುಸಾರಿಣೀ ॥ ೭೪ ॥

ಅನುರೂಪಾ ವಿಶುದ್ಧಾ ಚ ತಪಸಾ ಚ ವರಾಂಗನಾ ।
ಪತಿವ್ರತಾ ಚ ಸಾಧ್ವೀ ಚ ನಿತ್ಯಂ ತವ ಹಿತೇ ರತಾ ॥ ೭೫ ॥

ಸದೃಶೀ ತೇ ಮಹಾಭಾಗ ಶಕ್ರಸ್ಯೇಹ ಯಥಾ ಶಚೀ ।
ಪಾತ್ರಂ ಪಾತ್ರವತಾ ಪ್ರಾಪ್ತಂ ಸುಕೃತಸ್ಯ ಮಹತ್ಫಲಂ ॥ ೭೬ ॥

ಮೇಲೆ ಬಹಳ ಸಿಟ್ಟುಗೊಂಡಳು. ಆದುದರಿಂದ ನಿನ್ನ ಕಾರ್ಯವನ್ನು ನೇರವೇರಿಸುವವನಾಗಿ ನಾನು ಭೂಮಿಗೆ ಬಿದ್ದೆನು.

೭೩. ಈಕೆಗೆ ಸಮಾನಳಾದ ನಾರಿಯು ಮೂರು ಲೋಕದಲ್ಲಿಯೂ ಇಲ್ಲ. ಭೂಮಿಯಲ್ಲಾಗಲಿ, ಸ್ವರ್ಗಲೋಕದಲ್ಲಿಯಾಗಲಿ ಯಾರೂ ಕಾಣಿಸುವುದಿಲ್ಲ. ಈಕೆಯ ಪರಮಸತ್ವವೂ, ಈಕೆಯ ಪರಮತಪಸ್ಸೂ ಆಶ್ಚರ್ಯಕರವಾದುದು.

೭೪. ಮಹಾಭಾಗ್ಯನೇ, ಆಶ್ಚರ್ಯ! ನಿನ್ನಲ್ಲಿರುವ ಧೈರ್ಯಶಕ್ತಿ ಮೊದಲಾದ ಶ್ಲಾಘ್ಯಗುಣಗಳು ಈಕೆಯಲ್ಲಿಯೂ ಇವೆ. ಈಕೆ ನಿನ್ನ ಚಿತ್ತಾನುವರ್ತಿನಿಯಾಗಿರುವಳು.

೭೫-೭೬. ಉತ್ತಮಾಂಗನೆಯೂ, ನಿನಗೆ ಅನುರೂಪಳೂ, ತಪಸ್ಸಿನಿಂದ ಶುದ್ಧಳೂ, ಪತಿವ್ರತೆಯೂ ಯಾವಾಗಲೂ ನಿನ್ನ ಹಿತದಲ್ಲಿಯೇ ನಿರತಳೂ ಆದ ಈಕೆ ಇಂದ್ರನಿಗೆ ಶಚಿ ಹೇಗೋ ಹಾಗೆ ನಿನಗೆ ತಕ್ಕವಳಾಗಿರುವಳು. ಸುಕೃತದ ಮಹಾಫಲರೂಪವಾದ ಪಾತ್ರವು ಸತ್ಪಾತ್ರಕ್ಕೆ ದೊರಕಿತು.

ಅನುರೂಪಸ್ಸುರೂಪೋ ವಾ ಯತೋ ಜಾತಸ್ಸ್ವಯಂತ್ರಿತಃ ।
ಮಾ ಚಕೇ ವಿತಥಃ ಕಾಮೋ ಭವೇಚ್ಚೈವ ನರಾಧಿಪ ॥ ೭೭ ॥

ಕುರುಷ್ವ ದಯಿತಂ ಕ್ಷೇತ್ರಂ ಯಥಾ ಮನಸಿ ವರ್ತತೇ ।
ಭೋಜನಾರ್ಥಂ ಮಹಾರಾಜ ತ್ವದನ್ಯೋ ನ ಹಿ ವಿದ್ಯತೇ ।
ಫಲದಂ ಚ ಯಶಸ್ಯಂ ಚ ಭವಿಷ್ಯತಿ ಹಿ ಕಾಮದಂ ॥ ೭೮ ॥

ಏವಮುಕ್ತ್ವಾ ತತಸ್ಸೂರ್ಯಸ್ಸಸರ್ಜ ಜಲಭಾಜನಂ ।
ಉಪಾನಹೌ ಚ ಛತ್ರಂ ಚ ದಿವ್ಯಾಲಂಕಾರಭೂಷಿತಂ ॥ ೭೯ ॥

ದದೌ ಚ ರಾಜ್ಞೇ ಸವಿತಾ ಪ್ರೀತ್ಯಾ ಪರಮಯಾ ಯುತಃ ।
ಉಪಭೋಕ್ತುಂ ಸುಖಸ್ಯಾರ್ಥಂ ಸುಪುಣ್ಯಸ್ಯ ವಿಶೇಷತಃ ॥ ೮೦ ॥

ದತ್ವಾ ತತ್ಪುಣ್ಯಕರ್ಮಾಣಂ ತತಃ ಪ್ರಾಹ ದಿವಾಕರಃ ।
ಏವಮುಕ್ತ್ವಾ ತು ಭಗವಾಂಸ್ತಥಾ ತತ್ರೈವಾನ್ವಚಿತ್ ॥ ೮೧ ॥

೭೭-೭೮. ದೊರೆಯೇ, ನಿನಗೆ ಅನುರೂಪವೋ, ಸುರೂಪವೋ ಹೇಗೋ ಈ ವ್ಯವಸಾಯದಲ್ಲಿ ಮನಸ್ಸುಂಟಾಯಿತು. ನಿನ್ನ ಇಷ್ಟವು ಸುಳ್ಳು ಅಥವಾ ವ್ಯರ್ಥವಾಗಬಾರದು. ನಿನ್ನ ಮನಸ್ಸಿನಲ್ಲಿರುವಂತೆ ಭೋಜನಾರ್ಥವಾಗಿ ನಿನಗೆ ಪ್ರಿಯವಾದ ಕ್ಷೇತ್ರವನ್ನು ಮಾಡು. ಮಹಾರಾಜ, ನಿನ್ನ ಸಮಾನನು ಬೇರೊಬ್ಬ ನಿಲ್ಲ. ನಿನ್ನ ಕಾರ್ಯವು ಫಲಪ್ರದವೂ, ಇಷ್ಟಾರ್ಥದಾಯಕವೂ, ಕೀರ್ತಿಕರವೂ ಆಗುವುದು.

೭೯-೮೧. ಸೂರ್ಯನು ಹೀಗೆ ಹೇಳಿ ಬಳಿಕ ದಿವ್ಯಾಲಂಕಾರಭೂಷಿತವಾದ ನೀರಿನಪಾತ್ರೆಯನ್ನೂ, ಪಾದರಕ್ಷೆಗಳನ್ನೂ, ಕೊಡೆಯನ್ನೂ ಸೃಷ್ಟಿಸಿ, ಪರಮಪ್ರೀತಿಯಿಂದ ಅವನ್ನು ವಿಶೇಷಪುಣ್ಯಶಾಲಿಯಾದ ಆ ರಾಜನಿಗೆ ಕೊಟ್ಟು, ಸುಖಾರ್ಥವಾಗಿ ಅವನ್ನು ಭೋಗಿಸಲು ಹೇಳಿ, ಅಲ್ಲೇ ಒಂದೆಡೆಯಲ್ಲಿದ್ದನು.

ರಾಜ್ಞಾ ಚ ಜನಕೇನೈವ ಪ್ರಿಯಾಯಾ ಹಿತಕಾಮ್ಯಯಾ ।
ತತಸ್ಸಾಪ್ಯಾಯಿತಾ ದೇವೀ ತೋಯೇನ ಶುಭಲಕ್ಷಣಾ ॥ ೮೨ ॥

ಲಬ್ಧಸಂಜ್ಞಾ ಗತಭಯಾ ರಾಜಾನಮಿದಮಬ್ರವೀತ್ ।
ದೇವೀ ದೃಷ್ಟ್ವಾ ತದೈಶ್ವರ್ಯಂ ವಿಸ್ಮಯೋತ್ಫುಲ್ಲಲೋಚನಾ ॥ ೮೩ ॥

ಕೇನ ದತ್ತಂ ಶುಭಂ ತೋಯಂ ದಿವ್ಯಂ ಛತ್ರಮುಪಾನಹೌ ।
ಏತನ್ಮೇ ಸಂಶಯಂ ರಾಜನ್ಕಥಯಸ್ವ ತಪೋಧನ ॥ ೮೪ ॥

॥ ರಾಜೋವಾಚ ॥

ಏಷ ದೇವೋ ಮಹಾದೇವಿ ವಿವಸ್ವಾನ್ನಾಮ ನಾಮತಃ ।
ತವಾನುಕಂಪಯಾ ದೇವಿ ಮುಕ್ತ್ವಾಕಾಶಮಿಹಾಗತಃ ॥ ೮೫ ॥

ಏವಮುಕ್ತಾ ತು ಸಾ ದೇವೀ ಭರ್ತಾರಮಿದಮಬ್ರವೀತ್ ।
ಕರವಾಣ್ಯಸ್ಯ ಕಾಂ ಪ್ರೀತಿಂ ಜ್ಞಾಯತಾಮಸ್ಯ ವಾಂಛಿತಂ ॥ ೮೬ ॥

---

೮೨. ಜನಕರಾಜನೂ ತನ್ನ ಪ್ರಿಯೆಯ ಹಿತೇಚ್ಛೆಯಿಂದ ತಾನೇ ಶುಭ ಲಕ್ಷಣೆಯಾದ ಆ ದೇವಿಯನ್ನು ನೀರಿನಿಂದ ಶೈತ್ಯೋಪಚಾರಮಾಡಿ ಸಂತೈಸಿದನು.

೮೩-೮೪. ಮೂರ್ಛೆಯಿಂದೆಚ್ಚೆತ್ತು ಜ್ಞಾನವನ್ನು ಪಡೆದು ಭಯದಿಂದ ಪಾರಾದ ಆದೇವಿಯು ಆಐಶ್ವರ್ಯವನ್ನು ನೋಡಿ, ಆಶ್ಚರ್ಯದಿಂದ ಅರಳಿದ ಕಣ್ಣುಳ್ಳವಳಾಗಿ ದೊರೆಯನ್ನು ಕುರಿತು, 'ತಪೋಧನನಾದ ದೊರೆಯೇ, ದಿವ್ಯ ವಾದ ಈ ಶುಭೋದಕವನ್ನೂ, ಛತ್ರಿಪಾದರಕ್ಷೆಗಳನ್ನೂ ಯಾರು ಕೊಟ್ಟರು? ನನಗೆ ಸಂದೇಹವಾಗಿದೆ. ಹೇಳು.' ಎಂದಳು.

೮೫. ರಾಜ:—ಮಹಾದೇವಿ, ವಿವಸ್ವಂತ (ಸೂರ್ಯ)ನೆಂಬ ಹೆಸರಿನ ಈ ದೇವನು ನಿನ್ನಲ್ಲಿ ದಯೆಯಿಂದ ಆಕಾಶವನ್ನು ಬಿಟ್ಟು, ಇಲ್ಲಿಗೆ ಬಂದು, ಇವನ್ನು ಕೊಟ್ಟನು.

೮೬. ದೊರೆಯು ಹಾಗೆ ಹೇಳಲು, ಆರಾಣಿಯೂ ದೊರೆಗೆ 'ಈತನಿಗೆ ಯಾವ ಪ್ರೀತಿಯನ್ನುಂಟುಮಾಡಲಿ? ಈತನ ಇಷ್ಟವನ್ನು ತಿಳಿಯೋಣವಾಗಲಿ' ಎಂದು ಹೇಳಿದಳು.

ತತೋ ರಾಜಾ ಮಹಾತೇಜಾಃ ಪ್ರಣಿಪತ್ಯ ಕೃತಾಂಜಲಿಃ ।
ವಿಜ್ಞಾಪಯಾಮಾಸ ತದಾ ಭಗವನ್ ಕಿಂ ಕರೋಮಿ ತೇ ॥ ೮೭ ॥

ಏವಮುಕ್ತೋ ನರೇಂದ್ರೇಣ ಸೂರ್ಯೋ ವಚನಮಬ್ರವೀತ್ ।
ಅಭಯಂ ಮೇ ಮಹಾರಾಜ ಸ್ತ್ರೀಭ್ಯೋ ಭವತಿ ಮಾನದ ॥ ೮೮ ॥

ತಚ್ಛ್ರುತ್ವಾ ವಚನಂ ತಸ್ಯ ಭಾಸ್ಕರಸ್ಯ ತು ಮಾನದಃ ।
ತಾಂ ಪ್ರಿಯಾಂ ಪ್ರೀತಹೃದಯಾಂ ಶ್ರಾವಯಂಸ್ತಸ್ಯ ಭಾಷಿತಂ ॥ ೮೯ ॥

ರಾಜ್ಞಸ್ತು ವಚನಂ ಶ್ರುತ್ವಾ ದೇವೀ ವಚನಮಬ್ರವೀತ್ ।
ಪ್ರೀತ್ಯಾ ಪರಮಯಾ ಯುಕ್ತಾ ತಸ್ಯ ರಾಜ್ಞೋ ಮನಃಪ್ರಿಯಾ ॥ ೯೦ ॥

ರಶ್ಮೀನಾಂ ವಾರಣಾರ್ಥಾಯ ಛತ್ರಂ ದತ್ವಾ ತು ಕುಂಡಿಕಾಂ ।
ಇಮೌ ಚೋಪಾನಹೌ ದತ್ವಾ ಚೋಭೌ ಪಾದಸ್ಯ ಶಂಕರೌ ॥ ೯೧ ॥

ಅಭಯಂ ತೇ ಮಹಾಭಾಗ ಯಥಾ ತ್ವಂ ವೃತವಾನಸಿ ॥ ೯೨ ॥

---

೮೭. ಬಳಿಕ ಮಹಾತೇಜನಾದ ಜನಕರಾಜನು, ಸೂರ್ಯನಿಗೆ ಪ್ರಣಾಮ ಮಾಡಿ, ಕೈಮುಗಿದುಕೊಂಡು, 'ಭಗವಂತನೇ ನಿನಗೆ ನಾವು ಮಾಡಬೇಕಾದು ದೇನು'? ಎಂದನು.

೮೮. ದೊರೆ ಹಾಗೆ ಹೇಳಲು ಸೂರ್ಯನು, 'ಮಹಾರಾಜ, ಮಾನದ ನನಗೆ ಸ್ತ್ರೀಯರಿಂದ ಅಭಯದಾನವು ಬೇಕಾಗಿದೆ.' ಎಂದು ಹೇಳಿದನು

೮೯. ಸೂರ್ಯನಿಗೆ ಗೌರವವನ್ನು ಕೊಡುವ ಆ ದೊರೆ ಆತನ ಆ ಮಾತನ್ನು ಕೇಳಿ, ಪ್ರೀತಮನಳಾದ ಆ ಪ್ರಿಯೆಗೆ ಅದನ್ನು ತಿಳಿಸಿದನು.

೯೦-೯೨. ಪರಮಪ್ರೀತಿಯುಳ್ಳ ಆ ರಾಜಮನೋವಲ್ಲಭೆಯು, 'ಪೂಜ್ಯನೇ ನಿನ್ನ ಕಿರಣಗಳ ನಿವಾರಣೆಗಾಗಿ ಛತ್ರಿಯನ್ನೂ, ಈ ಜಲಪಾತ್ರೆಯನ್ನೂ, ಕಾಲಿಗೆ ಸುಖಕರವಾದ ಈ ಪಾದರಕ್ಷೆಗಳನ್ನೂ ಕೊಟ್ಟು, ನೀನು ಕೇಳಿದ ಅಭಯವನ್ನು ಪಡೆದಿರುವೆ' ಎಂದಳು.

ಏವಂ ಪತಿವ್ರತಾಂ ವಿಪ್ರ ಪೂಜಯಾಮಿ ನಮಾಮಿ ಚ ॥ ೯೩ ॥

ಇತಿ ಶ್ರೀವರಾಹಪುರಾಣೇ ಸಂಸಾರಚಕ್ರೇ ಪತಿವ್ರತೋಪಾಖ್ಯಾನಂ ನಾಮ ಅಷ್ಟಾಧಿಕದ್ವಿಶತತಮೋಽಧ್ಯಾಯಃ

---

೯೩. ಮುನಿಯೇ, ಆದುದರಿಂದ ಹೀಗೆ ನಾನು ಪತಿವ್ರತೆಯನ್ನು ಪೂಜಿಸಿ ನಮಿಸುತ್ತೇನೆ.

ಅಧ್ಯಾಯದ ಸಾರಾಂಶ—

ನಚಿಕೇತನು " ನಾನು ಯಮಲೋಕದಲ್ಲಿದ್ದಾಗ ಯಮನ ಬಳಿಗೆ ನಾರದ ಮುನಿಗಳು ಬಂದರು. ಅವರನ್ನು ಆದರಿಸುತ್ತ ಯಮನು ಇದ್ದಕ್ಕಿದ್ದಹಾಗೆ ಭೀತನಾಗಿ, ತನ್ನೆಡೆಗೆ ಬಂದ ಸ್ತ್ರೀಯೊಬ್ಬಳನ್ನು ಪೂಜಿಸಿ, ಅವಳಿಂದ ಬುದ್ಧಿವಾದ ವನ್ನೂ ವಿನಯದಿಂದ ಕೇಳಿದನು. ಆದರಿಂದ ಆಶ್ಚರ್ಯಗೊಂಡು ಪ್ರಶ್ನಿಸಿದ ನಾರದರಿಗೆ ಯಮರಾಜನು ಪತಿವ್ರತಾಮಹಿಮೆಯನ್ನು ತಿಳಿಸುತ್ತ, ಪತಿವ್ರತೆ ಯಾದ ಜನಕರಾಜಪತ್ನಿಗೆ ಸೂರ್ಯನೂ ಭೀತನಾಗಿ ಸೇವೆಗೈದು ಆಕೆಯಿಂದ ವರವನ್ನು ಪಡೆದ ಕಥೆಯನ್ನು ಹೇಳಿದನು. " ಎಂದು ಋಷಿಗಳಿಗೆ ಹೇಳಿದನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರೆಂಟನೆಯ ಅಧ್ಯಾಯ.

॥ ಶ್ರೀ ॥

ನವಾಧಿಕದ್ವಿಶತತಮೋಽಧ್ಯಾಯಃ

ಅಥ ಪತಿವ್ರತಾಮಾಹಾತ್ಮ್ಯವರ್ಣನಂ

॥ ನಾರದ ಉವಾಚ ॥

ಕರ್ಮಣಾ ಕೇನ ರಾಜೇಂದ್ರ ತಪಸಾ ವಾ ತಪೋಧನಾಃ ।
ಉತ್ತಮಾಂ ಚ ಗತಿಂ ಯಾಂತಿ ಕೃಷ್ಣವಾಸಃ ಪ್ರಶಂಸ ಮೇ ।
ಏವಮುಕ್ತಸ್ತು ಧರ್ಮಾತ್ಮಾ ನಾರದೇನಾಬ್ರವೀತ್ತದಾ ॥ ೧ ॥

॥ ಯಮ ಉವಾಚ ॥

ನ ತಸ್ಯ ನಿಯಮೋ ವಿಪ್ರ ತಪೋ ನೈವ ಚ ಸುವ್ರತ ।
ಉಪವಾಸೋ ನ ದಾನಂ ವಾ ನ ದೇವೋ ವಾ ಮಹಾಮುನೇ ॥ ೨ ॥

ಇನ್ನೂರೊಂಬತ್ತನೆಯ ಅಧ್ಯಾಯ.

ಪತಿವ್ರತಾಮಹಿಮೆ.

೧. ನಾರದ;— ' ರಾಜೇಂದ್ರ, ತಪೋಧನೆಯರಾದ ವನಿತೆಯರು ಯಾವ ಕರ್ಮದಿಂದ ಅಥವಾ ತಪಸ್ಸಿನಿಂದ ಉತ್ತಮಗತಿಯನ್ನು ಪಡೆಯುವರೋ ಅದನ್ನು ನನಗೆ ಹೇಳು, ನಾರದನು ಹೀಗೆ ಕೇಳಲು ಧರ್ಮಾತ್ಮನಾದ ಯಮನು ಆಗ ಹೀಗೆಂದನು.

೨-೩. ಯಮ:— ಸುವ್ರತನೇ, ಮಹಾಮುನಿಯೇ, ಸ್ತ್ರೀಗೆ ಉತ್ತಮ ಗತಿಯನ್ನು ಪಡೆಯಲು ಬೇರಾವ ನಿಯಮವೂ, ತಪಸ್ಸೂ, ಉಪವಾಸವೂ,

ಯಾದೃಶೀ ತು ಭವೇದ್ವಿಪ್ರ ಶೃಣು ತತ್ತ್ವಂ ಸಮಾಸತಃ || ೩ ||

ಪ್ರಸುಪ್ತೇ ಯಾ ಪ್ರಸ್ವಪಿತಿ ಜಾಗರ್ತಿ ವಿಬುಧೇ ಸ್ವಯಂ |
ಭುಂಕ್ತೇ ತು ಭೋಜಿತೇ ವಿಪ್ರ ಸಾ ಮೃತ್ಯುಂ ಜಯತಿ ಧ್ರುವಂ || ೪ ||

ಮೌನೇ ಮೌನಾ ಭವೇದ್ಯಾ ತು ಸ್ಥಿತೇ ತಿಷ್ಠತಿ ಯಾ ಸ್ವಯಂ |
ಸಾ ಮೃತ್ಯುಂ ಜಯತೇ ವಿಪ್ರ ನಾನ್ಯತ್ಪಶ್ಯಾಮಿ ಕಿಂಚನ || ೫ ||

ಏಕದೃಷ್ಟಿರೇಕಮನಾ ಭರ್ತುರ್ವಚನಕಾರಿಣೀ |
ತಸ್ಯಾ ಬಿಭೀಮಹೇ ಸರ್ವೇ ಯೇ ತಥಾನ್ಯೇ ತಪೋಧನ || ೬ ||

ದೇವಾನಾಮಪಿ ಸಾ ಸಾಧ್ವೀ ಪೂಜ್ಯಾ ಪರಮಶೋಭನಾ |
ಭರ್ತ್ರಾ ಚಾಭಿಹಿತಾ ಯಾಪಿ ನ ಪ್ರತ್ಯಾಖ್ಯಾಯಿನೀ ಭವೇತ್ || ೭ ||

ದಾನವೂ, ದೇವರೂ ಬೇಕಿಲ್ಲ. ಅವಳು ಹೇಗಿರಬೇಕೆಂಬ ತತ್ತ್ವವನ್ನು ಸಂಗ್ರಹವಾಗಿ ಹೇಳುತ್ತೇನೆ. ಕೇಳು.

೪. ಯಾರು ಪತಿಯು ಮಲಗಿದ ಬಳಿಕ ತಾನು ಮಲಗುವಳೋ, ಆತನೇಳುತ್ತಲೂ ತಾನೂ ಏಳುವಳೋ, ಆತನಿಗೆ ಊಟಮಾಡಿಸಿ ತಾನೂ ಮಾಡುವಳೋ ಆಕೆ ನಿಜವಾಗಿಯೂ ಮೃತ್ಯುವನ್ನು ಜಯಿಸುವಳು.

೫. ಬ್ರಾಹ್ಮಣನೇ, ಪತಿಯು ಮೌನದಿಂದಿದ್ದರೆ ತಾನೂ ಹಾಗೆಯೇ ಇರುತ್ತ ಆತನು ನಿಂತಿದ್ದರೆ ತಾನೂ ಎದ್ದು ನಿಲ್ಲುತ್ತ ಇರುವವಳು ಮೃತ್ಯುವನ್ನು ಜಯಿಸುವಳು. ಮೃತ್ಯುಜಯಕ್ಕೆ ಬೇರಾವುದೂ ಕಾರಣವು ನನಗೆ ತೋರುವುದಿಲ್ಲ.

೬. ತಪೋಧನ, ಏಕಮನಸ್ಕಳೂ, ಏಕದೃಷ್ಟಿಯೂ ಆಗಿ ಪತಿಯು ಹೇಳಿದುದನ್ನು ನಡೆಯಿಸುವವಳಿಗೆ ನಾವೂ ಇತರರೂ ಹೆದರುವೆವು.

೭. ಯಾರು ಪತಿಯು ಹೇಳಿದುದನ್ನು ನಿರಾಕರಿಸದಿರುವಳೋ ಆ ಪರಮ ಮಂಗಳೆಯಾದ ಸಾಧ್ವಿಯು ದೇವತೆಗಳಿಗೂ ಪೂಜ್ಯಳಾಗುವಳು.

ವರ್ತಮಾನಾಪಿ ವಿಪ್ರೇಂದ್ರ ಪ್ರತ್ಯಾಖ್ಯಾತಾಪಿ ವಾ ಸದಾ ।
ನ ದೈವತಂ ಸಂಪ್ರಯಾತಿ ಪಶ್ಯರನ್ಯಂ ಕದಾಚನ ॥ ೮ ॥

ಸಾ ನ ಮೃತ್ಯುಮುಖಂ ಯಾತಿ ಏವಂ ಯಾ ಸ್ತ್ರೀ ಪತಿವ್ರತಾ ॥ ೯ ॥

ಏವಂ ಯಾ ತು ಭವೇನ್ನಿತ್ಯಂ ಭರ್ತುಃ ಪ್ರಿಯಹಿತೇ ರತಾ ।
ಅನುವೇಷ್ಟನಭಾವೇನ ಭರ್ತಾರಮನುಗಚ್ಛತಿ ।
ಸಾ ತು ಮೃತ್ಯುಮುಖದ್ವಾರಂ ನ ಗಚ್ಛೇದ್ಬ್ರಹ್ಮಸಂಭವ ॥ ೧೦ ॥

ಏಷ ಮಾತಾ ಪಿತಾ ಬಂಧುರೇಷ ಮೇ ದೈವತಂ ಪರಂ ।
ಏವಂ ಶುಶ್ರೂಷತೇ ಯಾ ತು ಸಾ ಮಾಂ ವಿಜಯತೇ ಸದಾ ॥ ೧೧ ॥

ಪತಿವ್ರತಾ ತು ಯಾ ಸಾಧ್ವೀ ತಸ್ಯಾಂ ಚಾಹಂ ಕೃತಾಂಜಲಿಃ ।
ಭರ್ತಾರಮನುಧ್ಯಾಯಂತೀ ಭರ್ತಾರಮನುಗಚ್ಛಂತೀ ।
ಭರ್ತಾರಮನುಶೋಚಂತೀ ಮೃತ್ಯುದ್ವಾರಂ ನ ಪಶ್ಯತಿ ॥ ೧೨ ॥

೮–೯. ಬ್ರಾಹ್ಮಣೋತ್ತಮಾ, ಪತಿಯು ಸದಾ ತಿರಸ್ಕರಿಸುತ್ತಿದ್ದರೂ ಪತಿಯನ್ನು ಹೊರತು ಬೇರೆಯ ದೇವರನ್ನು ಎಂದೂ ಸಮೀಪಿಸದೆ ಪತಿಯ ಹತ್ತಿರವೇ ಇರುವ ಪತಿವ್ರತೆಯಾದ ರಮಣಿಯು ಮೃತ್ಯುವಿನ ಬಾಯಿಗೆ ತುತ್ತಾಗುವುದಿಲ್ಲ.

೧೦. ಬ್ರಹ್ಮಪುತ್ರನೇ, ಯಾವಾಗಲೂ ಪತಿಪ್ರಿಯಹಿತಾಸಕ್ತಳಾಗಿ ದೇವಭಾವದಿಂದ ಅವನನ್ನು ಅನುಸರಿಸುವವಳು ಯಮನ ಬಾಯಿಗೆ ಬೀಳುವುದಿಲ್ಲ.

೧೧. ಪತಿಯನ್ನು, ನನಗೆ ಈತನೇ ತಾಯಿ, ತಂದೆ, ಬಂಧು, ದೇವರು ಎಂದು ಭಾವಿಸಿ ಸದಾ ಆತನ ಶುಶ್ರೂಷೆಮಾಡುವ ವನಿತೆಯು ನನ್ನನ್ನು ಜಯಿಸುವಳು.

೧೨. ಸಾಧುಗುಣವುಳ್ಳ ಪತಿವ್ರತೆಗೆ ನಾನು ಕೈಮುಗಿದು ವಂದಿಸುತ್ತೇನೆ. ಪತಿಯನ್ನೇ ಸ್ಮರಿಸುತ್ತಲೂ, ಅನುಸರಿಸುತ್ತಲೂ, ಅವನ ದುಃಖದಲ್ಲಿ ತಾನೂ ದುಃಖಿಸುತ್ತಲೂ ಇರುವ ಸ್ತ್ರೀಯು ಯಮಗೃಹದ ಬಾಗಿಲನ್ನು ನೋಡುವುದೂ ಇಲ್ಲ.

ಗೀತವಾದಿತ್ರನೃತ್ಯಾನಿ ಪ್ರೇಕ್ಷಣೀಯಾನ್ಯನೇಕಶಃ ।
ನ ಶೃಣೋತಿ ನ ಪಶ್ಯೇದ್ಯಾ ಮೃತ್ಯುದ್ವಾರಂ ನ ಪಶ್ಯತಿ ॥ ೧೩ ॥

ಸ್ನಾಂತೀ ಚ ತಿಷ್ಠತೀ ವಾಪಿ ಕುರ್ವಂತೀ ವಾ ಪ್ರಸಾಧನಂ ।
ನಾನ್ಯಂ ಯಾ ಮನಸಾ ಪಶ್ಯೇನ್ಮೃತ್ಯುದ್ವಾರಂ ನ ಪಶ್ಯತಿ ॥ ೧೪ ॥

ದೇವತಾ ಅರ್ಚಯಂತಂ ವಾ ಭುಂಜ್ಯಮಾನಮಪಿ ದ್ವಿಜಾನ್ ।
ಪತಿಂ ನ ತ್ಯಜತೇ ಚಿತ್ತಾನ್ಮೃತ್ಯುದ್ವಾರಂ ನ ಪಶ್ಯತಿ ॥ ೧೫ ॥

ಭಾನೌ ಚಾನುದಿತೇ ವಾಪಿ ಉತ್ಥಾಯ ಚ ತಪೋಧನ ।
ಗೃಹಂ ಮಾರ್ಜಯತೇ ನಿತ್ಯಂ ಮೃತ್ಯುದ್ವಾರಂ ನ ಪಶ್ಯತಿ ॥ ೧೬ ॥

ಚಕ್ಷುರ್ದೇಹಶ್ಚ ಭಾವಶ್ಚ ಯಸ್ಯಾ ನಿತ್ಯಂ ಸುಸಂವೃತಂ ।
ಶೌಚಾಚಾರಸಮಾಯುಕ್ತಾ ಸಾ ಪಿ ಮೃತ್ಯುಂ ನ ಪಶ್ಯತಿ ॥ ೧೭ ॥

---

೧೩. ಶ್ರಾವ್ಯಗಳಾದ ಅನೇಕ ಗೀತವಾದ್ಯಗಳನ್ನು ಕೇಳದೆಯೂ, ದರ್ಶನೀಯಗಳಾದ ಅನೇಕ ನೃತ್ಯಾದಿಗಳನ್ನು ನೋಡದೆಯೂ ಇರುವ ಪತಿವ್ರತೆಯು ಮೃತ್ಯುನಿವಾಸದ ಬಾಗಿಲನ್ನು ನೋಡುವುದಿಲ್ಲ.

೧೪. ಸ್ನಾನಮಾಡುವಾಗಲಾಗಲಿ, ನಿಂತಿರುವಾಗಲಾಗಲಿ, ಅಲಂಕರಿಸುಕೊಳ್ಳುವಾಗಲಾಗಲಿ ಪತಿಯನ್ನಲ್ಲದೆ ಬೇರೆಯವನನ್ನು ಮನಸ್ಸಿನಿಂದಲೂ ನೋಡದ ಸಾಧ್ವಿಯು ಯಮಪುರದ್ವಾರವನ್ನು ನೋಡುವುದಿಲ್ಲ.

೧೫ ಪತಿಯು ದೇವತೆಗಳನ್ನಾಗಲಿ, ದ್ವಿಜರನ್ನಾಗಲಿ ಅರ್ಚಿಸುವಾಗಲೂ, ಭೋಜನಮಾಡುವಾಗಲೂ ಆತನನ್ನು ಮನಸ್ಸಿನಿಂದ ಬಿಡದಿರುವ ಪತಿಪರಾಯಣೆಯು ಮೃತ್ಯುದ್ವಾರವನ್ನು ನೋಡುವುದಿಲ್ಲ.

೧೬. ತಪೋಧನಾ, ಸೂರ್ಯೋದಯಕ್ಕೆ ಮೊದಲೇ ಎದ್ದು ನಿತ್ಯವೂ ಮನೆಯನ್ನು ಶುದ್ಧಿಗೊಳಿಸುವ ಪತಿವ್ರತೆಯು ಯಮನ ಬಾಗಿಲನ್ನು ನೋಡುವುದಿಲ್ಲ.

೧೭. ತನ್ನ ದೃಷ್ಟಿಯನ್ನೂ ಭಾವವನ್ನೂ ಯಾವಾಗಲೂ ಸ್ವಾಧೀನದಲ್ಲಿಟ್ಟುಕೊಂಡು, ಶೌಚಾಚಾರಗಳುಳ್ಳವಳಾಗಿರುವವಳೂ ಮೃತ್ಯುವನ್ನು ನೋಡುವುದಿಲ್ಲ.

ಭರ್ತುರ್ಮುಖಂ ಪ್ರಪಶ್ಯೇದ್ಯಾ ಭರ್ತುಶ್ಚಿತ್ತಾನುಸಾರಿಣೀ ।
ವರ್ತತೇ ಚ ಹಿತೇ ಭರ್ತುರ್ಮೃತ್ಯುದ್ವಾರಂ ನ ಪಶ್ಯತಿ ॥ ೧೮ ॥

ಏವಂ ಕೀರ್ತಿಮತಾಂ ಲೋಕೇ ದೃಶ್ಯಂತೇ ದಿವಿದೇವತಾಃ ।
ಮಾನುಷಾಣಾಂ ಚ ಭಾರ್ಯಾಸ್ತೈ ತತ್ರ ದೇಶೇ ತು ದೃಶ್ಯತೇ ॥ ೧೯ ॥

ಕಥಿತೈವ ಪುರಾ ವಿಪ್ರ ಆದಿತ್ಯೇನ ಪತಿವ್ರತಾ ।
ಮಯಾ ತಸ್ಮಾತ್ತು ವಿಪ್ರರ್ಷೇ ಯಥಾವೃತ್ತಂ ಯಥಾಶ್ರುತಂ ॥ ೨೦ ॥

ಗುಹ್ಯಮೇತತ್ತತೋ ದೃಷ್ಟ್ವಾ ಪೂಜಯಾಮಿ ಪತಿವ್ರತಾಃ ॥ ೨೧ ॥

ಇತಿ ಶ್ರೀವರಾಹಪುರಾಣೇ ಸಂಸಾರಚಕ್ರೇ ಪತಿವ್ರತಾಮಾಹಾತ್ಮ್ಯಂನಾಮ
ನವಾಧಿಕದ್ವಿಶತತಮೋಽಧ್ಯಾಯಃ

---

೧೮. ಪತಿಯ ಮುಖವನ್ನೇ ನೋಡುತ್ತ ಆತನ ಚಿತ್ತಾನುಸಾರಿಣಿಯಾಗಿ ಆತನ ಹಿತವನ್ನೇ ಆಚರಿಸುವ ವನಿತೆಯು ಯಮನ ಬಾಗಿಲನ್ನು ಕಾಣುವುದಿಲ್ಲ.

೧೯. ಹೀಗೆ ಕೀರ್ತಿವಂತರಾದವರಲ್ಲಿ ಹಲವರು ಸ್ವರ್ಗದಲ್ಲಿ ದೇವತೆಗಳಾಗಿರುವರು. ಮನುಷ್ಯಪತ್ನಿಯರಾಗಿಯೂ ಅಲ್ಲಲ್ಲಿಯೇ ದೇಶಗಳಲ್ಲಿ ಕೆಲವರು ಕಾಣಿಸುವರು.

೨೦-೨೧. ಬ್ರಾಹ್ಮಣನೇ, ಸೂರ್ಯನೂ ಪತಿವ್ರತೆಯ ವಿಚಾರದಲ್ಲಿ ಹೇಗೆ ನಡೆದುಕೊಂಡನೆಂಬುದನ್ನು ನಾನು ನೋಡಿಯೂ ಕೇಳಿಯೂ ಇರುವ ಹಾಗೆ ನಿನಗೆ ಮೊದಲೇ ಹೇಳಿದ್ದೇನೆ. ಬ್ರಹ್ಮರ್ಷಿಯೇ, ಈ ರಹಸ್ಯವನ್ನರಿತೇ ಈಚೆಗೆ ನಾನು ಪತಿವ್ರತೆಯರನ್ನು ಪೂಜಿಸುತ್ತೇನೆ.

ಅಧ್ಯಾಯದ ಸಾರಾಂಶ—

ಯಮನು ನಾರದನಿಗೆ ಪತಿವ್ರತೆಯರ ಮಹಿಮೆಯನ್ನೇ ಮುಂದುವರಿಸಿ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರೊಂಬತ್ತನೆಯ ಅಧ್ಯಾಯ.

॥ ಶ್ರೀಃ ॥

ದಶಾಧಿಕದ್ವಿಶತತಮೋಽಧ್ಯಾಯಃ

ಅಥ ಪಾಪನಾಶೋಪಾಯನಿರೂಪಣಂ

॥ ನಾರದ ಉವಾಚ ॥

ರಹಸ್ಯಂ ಧರ್ಮಮಾಖ್ಯಾನಂ ತ್ವಯೋಕ್ತಂ ತು ಮಹಾಯಶಾಃ ।
ಸ್ತ್ರೀಣಾಂ ಮಾಹಾತ್ಮ್ಯಮುದ್ದಿಶ್ಯ ಭಾಸ್ಕರಸ್ಯ ಮತಂ ಯಥಾ ॥ ೧ ॥

ಇದಂ ಹಿ ಸರ್ವಭೂತೇಷು ಪರಂ ಕೌತೂಹಲಂ ಮಮ ।
ತದಹಂ ಶ್ರೋತುಮಿಚ್ಛಾಮಿ ಕಥಯಸ್ವ ಮಹಾತಪಾಃ ॥ ೨ ॥

ಯೇ ನರಾ ದುಃಖಸಂತಪ್ತಾಸ್ತಪಸ್ತೀವ್ರಂ ಸಮಾಶ್ರಿತಾಃ ।
ನಾನಾವ್ರತಶತೋಪಾಯೈಃ ಸುಖಹೇತೋರ್ಮಹಾಪ್ರಭ ॥ ೩ ॥

ಇನ್ನೂರಹತ್ತನೆಯ ಅಧ್ಯಾಯ

ಪಾಪನಾಶೋಪಾಯನಿರೂಪಣೆ.

೧ ನಾರದ:— ಮಹಾಯಶ (ಯಮ)ನೇ, ಸ್ತ್ರೀಯರ ಮಹಿಮೆಯ ವಿಚಾರದಲ್ಲಿ ಸೂರ್ಯನ ಇಷ್ಟದಂತೆ ರಹಸ್ಯವಾದ ಧರ್ಮಕಥೆಯನ್ನು ನೀನು ಹೇಳಿದೆ.

೨. ಸರ್ವಪ್ರಾಣಿಗಳ ವಿಚಾರದಲ್ಲೂ ಇದು ನನಗೆ ಅತಿಕುತೂಹಲವಾಗಿದೆ. ಆದುದರಿಂದ ಕೇಳಲಿಚ್ಛಿಸುತ್ತೇನೆ. ಮಹಾತಪನೇ, ಹೇಳು.

೩-೪. ಮಹಾಪ್ರಭನೇ, ದುಃಖಸಂತಪ್ತರಾದ ಬಹು ಜನರು ಸುಖವನ್ನು ಪಡೆಯುವುದಕ್ಕಾಗಿ ಮನಸ್ಸನ್ನು ದೃಢಮಾಡಿ ಸರ್ವಪ್ರಿಯಾಪ್ರಿಯಗಳನ್ನು

ಮನಸಾ ನಿಶ್ಚಿತಾತ್ಮಾನಸ್ತ್ಯಕ್ತ್ವಾ ಸರ್ವಪ್ರಿಯಾಪ್ರಿಯಂ ।
ಕಾಂಕ್ಷಂತೇ ಬಹವಃಕೇಚಿತ್ಕೇನಚಿದ್ವಿನಿಹನ್ಯತೇ ॥ ೪ ॥
ಶ್ರುತಾ ಲೋಕೇ ಶ್ರುತಿಸ್ತಾತ ಶ್ರೇಯೋಧರ್ಮಾ ಹಿ ನಿತ್ಯಶಃ ।
ಸಮ್ಯಕ್ಚಾಶ್ರಿತಸ್ಯಾಥ ಕಥಂ ಪಾಪೇ ಮತಿರ್ಭವೇತ್ ॥ ೫ ॥
ಕಸ್ಯೈತಚ್ಚೇಷ್ಟಿತಂ ತಾತ ಕರ್ತಾ ಕಾರಯಿತಾಪಿ ವಾ ।
ಕಃ ಕರ್ಷತಿ ಜಗಚ್ಚೈಕೋ ಭೂತಗ್ರಾಮಂ ಚತುರ್ವಿಧಂ ॥ ೬ ॥
ಕಂ ವಾ ದ್ವೇಷಂ ಪುರಸ್ಕೃತ್ಯ ಮತಿಸ್ತಸ್ಯ ಪ್ರವರ್ತತೇ ।
ಸುಖದುಃಖಾದಿ ಲೋಕೇಸ್ಮಿನ್ಕರೋತಿ ಸುದಾರುಣಂ ॥ ೭ ॥
ಯದ್ಯೇವಂ ತು ಮಯಾ ಗುಹ್ಯಂ ದುರ್ವಿಜ್ಞೇಯಂ ಸುರೈರಪಿ ।
ಶಕ್ಯಂ ಶ್ರೋತುಂ ಮಹಾರಾಜ ತದಾಖ್ಯಾಹಿ ತಪೋಧನ ॥ ೮ ॥

ತೊರೆದು ತಪಸ್ಸನ್ನು ಆಶ್ರಯಿಸಿಯೂ, ಬಗೆಬಗೆಯಾದ ನೂರಾರುವ್ರತಗಳ ಉಪಾಯದಿಂದಲೂ, ಬಯಸುವರು. ಆದರೆ ಕೆಲವರು ಯಾರಿಂದಲೋ ಅಥವಾ ಏತರಿಂದಲೋ ಭಂಗಹೊಂದುವರು.

೫. ಅಪ್ಪಾ, ಲೋಕದಲ್ಲಿ ಶ್ರೇಯಸ್ಸನ್ನುಂಟುಮಾಡುವ ಧರ್ಮವನ್ನು ತಿಳಿಸುವ ಶ್ರುತಿಯನ್ನು ಜನರು ನಿತ್ಯವೂ ಕೇಳುತ್ತಿದ್ದಾರೆ. ಕಷ್ಟದಿಂದಲಾದರೂ ಚೆನ್ನಾಗಿ ಅದನ್ನು ಆಶ್ರಯಿಸಿದವರಿಗೆ ಬಳಿಕ ಪಾಪದಲ್ಲಿ ಹೇಗೆ ಬುದ್ಧಿಯುಂಟಾಗುವುದು?

೬-೭. ಅಪ್ಪಾ, ಅದು ಎಂದರೆ ಕಾರ್ಯಭಂಗವನ್ನೂ, ಪಾಪಬುದ್ಧಿಯನ್ನೂ ಉಂಟುಮಾಡುವುದು ಯಾರ ಚೇಷ್ಟೆ? ಮಾಡುವವನು ಅಥವಾ ಮಾಡಿಸುವವನು ಯಾರು? ನಾಲ್ಕುವಿಧವಾದ ಪ್ರಾಣಿಸಮೂಹದಿಂದ ಕೂಡಿರುವ ಜಗತ್ತನ್ನು ಸೆಳೆಯುವನಾರು? ಯಾವ ತಪ್ಪನ್ನು ಮುಂದು ಅಥವಾ ಕಾರಣಮಾಡಿಕೊಂಡು ಅವನಿಗೆ ಹಾಗೆ ಮಾಡಲು ಬುದ್ಧಿಯುಂಟಾಗುವುದು? ಈ ಲೋಕದಲ್ಲಿ ಸುಖದುಃಖಾದಿಯಾದುದು ಏಕೆ ದಾರುಣವಾಗುವುದು?

೮. ತಪೋಧನನಾದ ಮಹಾರಾಜ, ದೇವತೆಗಳಿಗೂ ತಿಳಿಯಲು ಕಷ್ಟವಾದ ಈ ರಹಸ್ಯವನ್ನು ನನಗೆ ನಿನ್ನಿಂದ ಕೇಳಲು ಹೇಗೂ ಸಾಧ್ಯವಾಗಿದೆ. ಆದುದರಿಂದ ಹೇಳು.

ನಾರದೇನೈವಮುಕ್ತಸ್ತು ಧರ್ಮರಾಜೋ ಮಹಾಮನಾಃ ।
ವಿನಯಾತ್ಪ್ರಶ್ರಿತಂ ವಾಕ್ಯಮಿದಮಾಹ ಮಹಾಮುನಿಂ ॥ ೯ ॥

॥ ಯಮ ಉವಾಚ ॥

ದೇವರ್ಷೇ ಶ್ರೂಯತಾಂ ಪುಣ್ಯಂ ಯದ್ಬ್ರವೀಷಿ ಮಹಾಮುನೇ ।
ತ್ವದುಕ್ತ್ಯಾ ಮೇ ಕಥಯತಃ ಶೃಣುಷ್ವಾವಹಿತೋಽನಘ ॥ ೧೦ ॥

ನ ಕಶ್ಚಿದ್ದೃಶ್ಯತೇ ಲೋಕೇ ಕರ್ತಾ ಕಾರಯಿತಾಪಿ ವಾ ।
ಯದ್ವೈ ಪರಮಧರ್ಮಾತ್ಮನ್ಯಸ್ಮಿನ್ಸರ್ವಂ ಪ್ರತಿಷ್ಠಿತಂ ॥ ೧೧ ॥

ಯಸ್ಯ ವೈ ಕೀರ್ತ್ಯತೇ ನಾಮ ಯೇನ ಚಾಜ್ಞಾಪ್ಯತೇ ಜಗತ್ ।
ವ್ಯವಹರಾಮಿ ವಚಶ್ಚಾಂ ಯಃ ಹ ಕರೋತಿ ಸ್ವಯಂ ಕೃತಂ ॥ ೧೨ ॥

ದಿವ್ಯೇಽಸ್ಮಿನ್ಸದಸಿ ಬ್ರಹ್ಮನ್ಬ್ರಹ್ಮರ್ಷಿಗಣಸಂವೃತೇ ।
ಯಥಾಶ್ರುತಂ ಯಥಾದೃಷ್ಟಂ ಕಥಯಿಷ್ಯಾಮ್ಯಹಂ ವಿಭೋ ॥ ೧೩ ॥

---

೯. ನಾರದರು ಹೀಗೆ ಹೇಳಲು, ಉದಾರಮನಸ್ಕನಾದ ಧರ್ಮರಾಜನು ಆ ಮಹಾಮುನಿಗೆ ವಿನಯದಿಂದ ಮೃದುವಾದ ಈ ಮಾತನ್ನು ಹೇಳಿದನು.

೧೦. ಯಮ:— ದೇವರ್ಷಿಯೇ, ನೀನು ಹೇಳಿದ ಪುಣ್ಯವಿಚಾರವನ್ನು ಕೇಳು. ಮಹಾಮುನಿಯೇ, ನಿನ್ನ ಮಾತಿನಂತೆ ನಾನು ಹೇಳುತ್ತಿರುವುದನ್ನು ಗಮನವಿಟ್ಟು ಲಾಲಿಸು.

೧೧–೧೨. ಲೋಕದಲ್ಲಿ ಯಾರ ನಾಮವನ್ನು ಕೀರ್ತಿಸುವೆವೋ, ಯಾರಿಂದ ಜಗತ್ತು ಆಜ್ಞಪ್ತವಾಗುವುದೋ, ಯಾರು ಪರಮಧರ್ಮಾತ್ಮನೋ, ಯಾವನಲ್ಲಿ ಸರ್ವಕರ್ಮವೂ ನಿಂತಿರುವುದೋ ಯಾರುತಾನೇಕರ್ಮವನ್ನುಮಾಡುವನೋ ನಾನು ಯಾರ ಮಾತನ್ನಾಡುವೆನೋ ಅವನು ಹೊರತು ಬೇರಾವನೂ ಮಾಡುವವನೂ, ಮಾಡಿಸುವವನೂ ಕಾಣುವುದಿಲ್ಲ.

೧೩. ವಿಭೂ, ಬ್ರಹ್ಮನೇ, ಬ್ರಹ್ಮರ್ಷಿಸಮೂಹದಿಂದ ತುಂಬಿದ ಈದಿವ್ಯಸಭೆಯಲ್ಲಿ ನಾನು ಕೇಳಿರುವುದನ್ನೂ, ಕಂಡಿರುವುದನ್ನೂ ಇರುವಂತೆ ಹೇಳುತ್ತೇನೆ.

ಸ್ವೈಃಕರ್ಮಭಿರ್ಭುಜ್ಯತೇ ತಾತ ಸಂಭೂತೈರ್ಯತ್ಕೃತಂ ಸ್ವಯಂ ।
ಆತ್ಮಾನಂ ಪಾತಯತ್ಯಾತ್ಮಾ ಕಿಂಚಿತ್ಕರ್ಮ ಚ ಕಾರಯೇತ್ ॥ ೧೪ ॥

ವಾಯುನಾ ಭವಿತಾ ಸಂಜ್ಞಾ ಸಂಸಾರೇ ಸಾ ದೃಢೀಕೃತಾ ।
ತಾಮೇವ ಭಜತೇ ಜಂತುಃ ಸುಕೃತಂ ವಾಥ ದುಷ್ಕೃತಂ ॥ ೧೫ ॥

ಅಭಿಘಾತಾಭಿಭೂತಸ್ತು ಆತ್ಮನಾತ್ಮಾನಮುದ್ಧರೇತ್ ।
ಆತ್ಮಾ ಶತ್ರುಶ್ಚ ಬಂಧುಶ್ಚ ನ ಕಶ್ಚಿದ್ಬಂಧುರಾತ್ಮನಃ ॥ ೧೬ ॥

ಬಂಧುಂ ಬಂಧುಪರಿಕ್ಲೇಶಂ ನಿರ್ಮಿತಂ ಪೂರ್ವಕರ್ಮಭಿಃ ॥
ಜಗತ್ಯಾಮುಪಭುಂಕ್ತೇ ವೈ ಜೀವೋ ಯೋನಿಶತೈರಪಿ ॥ ೧೭ ॥

ಮಿಥ್ಯಾಪ್ರವೃತ್ತಃ ಶಬ್ದೋಽಯಂ ಜಗದ್ಧಮತಿ ಸರ್ವಶಃ ।
ಯಾವತ್ತತ್ಕುರುತೇ ಕರ್ಮ ತಾವತ್ಕರ್ಮ ಸ್ವಯಂ ಕೃತಂ ॥ ೧೮ ॥

---

೧೪. ತಂದೆಯೇ, ಜನಿಸಿದ ಪ್ರಾಣಿಗಳು ತಾವು ಯಾವುದನ್ನು ಮಾಡಿರುವುವೋ ತಮ್ಮ ಆ ಕರ್ಮವನ್ನು ಅನುಭವಿಸುತ್ತವೆ. ಆತ್ಮನು ತನ್ನನ್ನು ತಾನೇ ಬೀಳಿಸಿಕೊಳ್ಳುವನು. ಕರ್ಮವೂ ಸ್ವಲ್ಪಮಾಡಿಸುವುದು.

೧೫-೧೬. ಜನ್ಮಪರಂಪರೆಯಲ್ಲಿ ದೃಢವಾದ ಹಿಂದಿನ ಆ ಬುದ್ಧಿಯೇ ವಾಯುವಿನಿಂದ ಬರುವುದು. ಜಂತುವು ಸಾಮಾನ್ಯವಾಗಿ ಸುಕೃತ ಅಥವಾ ದುಷ್ಕೃತ ರೂಪವಾದ ಅದನ್ನೇ ಸೇವಿಸುವುದು. ತೊಂದರೆಗೊಳಗಾದವನು ತನ್ನನ್ನು ತಾನು ಉದ್ಧರಿಸಿಕೊಳ್ಳಬೇಕು. ಆತ್ಮನು ತನಗೆ ತಾನೇ ಶತ್ರುವೂ ಬಂಧುವೂ ಆಗಿರುವನು. ಆತ್ಮನಿಗೆ ಬೇರೆಯ ಬಂಧುವಿಲ್ಲ.

೧೭-೧೮ ಜೀವನು ನೂರಾರುಜನ್ಮಗಳಲ್ಲಿ ಪೂರ್ವಕರ್ಮಗಳಿಂದ ನಿರ್ಮಿತವಾದ ಬಂಧವೆಂಬ ಬಂಧುಪರಿಕ್ಲೇಶವನ್ನು ಬಂಧುವನ್ನಾಗಿ ಅನುಭವಿಸುವನು. ಸುಳ್ಳುಸುಳ್ಳಾಗಿ ಹುಟ್ಟಿರುವ ಈ ಬಂಧುವೆಂಬ ಶಬ್ದವು ಲೋಕವನ್ನೆಲ್ಲಾ ಊದಿ ಉರಿಸುತ್ತದೆ. ತಾನು ಮಾಡಿದ ಕರ್ಮವು ಎಲ್ಲಿಯವರೆಗಿರುವುದೋ ಅಲ್ಲಿಯವರೆಗೂ ಅದು ಕೆಲಸಮಾಡುವುದು.

ಯಥಾ ಯಥಾ ಕ್ಷಯಂ ಯಾತಿ ಹ್ಯಶುಭಂ ಪುರುಷಸ್ಯ ವೈ ।
ತಥಾ ತಥಾ ಶುಭಾ ಬುದ್ಧಿರ್ಮನುಜಸ್ಯ ಪ್ರವರ್ತತೇ ॥ ೧೯ ॥

ಸಂಸಾರೇ ಪ್ರಾಪ್ತದೋಷಸ್ಯ ಜಾಯಮಾನಸ್ಯ ದೇಹಿನಃ ।
ಪತತಾಂ ಚ ಗತೋ ಭಾವಃ ಪಾಪಕರ್ಮಕ್ಷಯೇನ ತು ॥ ೨೦ ॥

ಶುಭಾಶುಭಕರೀಂ ಬುದ್ಧಿಂ ಲಭತೇ ಪೌರ್ವದೈಹಿಕೀಂ ।
ದುಷ್ಕೃತೈಃ ಕರ್ಮಭಿರ್ದೇಹೀ ಶುಭೈರ್ವಾ ಸ್ವಯಮರ್ಜಿತೈಃ ॥ ೨೧ ॥

ಕ್ಲೇಶಕ್ಷಯಂ ಪಾಪಹರಂ ಶುಭಂ ಕರ್ಮಕರೋತ್ಯಥ ।
ಶುಭಾಶುಭಂ ನರಃ ಪ್ರಾಪ್ಯ ಕರ್ಮಾಕರ್ಮತಥೈವ ಚ ।
ವಿವೃತೇ ವಿಮಲೇ ಕರ್ಮಣ್ಯಮರೇಷು ಮಹೀಯತೇ ॥ ೨೨ ॥

ಸ್ವರ್ಗಶ್ಶುಭಫಲಪ್ರಾಪ್ತಿರ್ನಿರಯಃ ಪಾಪಸಂಭವಃ ।
ನೈವ ಕಶ್ಚಿತ್ಪ್ರದಾತಾ ಚ ನಾಪಹರ್ತಾ ಪ್ರದೃಶ್ಯತೇ ॥ ೨೩ ॥

---

೧೯. ಮನುಷ್ಯರ ಅಶುಭಕರ್ಮವು ಕ್ಷೀಣವಾದಹಾಗೆಲ್ಲಾ ಅವರಿಗೆ ಸದ್ಬುದ್ಧಿಯುಂಟಾಗುತ್ತ ಬರುವುದು.

೨೦ ಪಾಪವಾಡಿ ಸಂಸಾರದಲ್ಲಿ ಜನಿಸುವ ಆತ್ಮನಿಗೆ ಬಿದ್ದುಹೋಗುವ ಪಾಪಕರ್ಮಕ್ಷಯದಿಂದ ಅಶುಭಭಾವವೂ ಹೋಗುವುದು.

೨೧. ಆತ್ಮನು ತಾನು ಸಂಪಾದಿಸಿದ ಶುಭಕರ್ಮ ಅಥವಾ ದುಷ್ಕರ್ಮಗಳಿಂದ ತನ್ನ ಪೂರ್ವಜನ್ಮದ ಶುಭಾಶುಭಕರವಾದ ಬುದ್ಧಿಯನ್ನು ಪಡೆಯುವನು.

೨೨. ಮನುಷ್ಯನು ಶುಭಾಶುಭಕರ್ಮಫಲಗಳನ್ನು ಪಡೆಯುತ್ತಿದ್ದು, ಪುಣ್ಯಕರ್ಮವು ಅಧಿಕವಾಗಿದ್ದು ಅದು ಪಕ್ವವಾದರೆ ದೇವತೆಗಳೊಡನೆ ವಾಸಿಸುವನು. ಅಥವಾ ಗೌರವವನ್ನು ಪಡೆಯುವನು.

೨೩. ಸ್ವರ್ಗವು ಶುಭಕರ್ಮಫಲದ ಲಾಭ. ನರಕವು ಪಾಪದಿಂದುಂಟಾದುದು. ಇವುಗಳನ್ನು ಕೊಡುವವನಾಗಲಿ, ಅಪಹರಿಸುವವನಾಗಲಿ ಯಾರೂ (ಕಾಣುವುದೇ) ಇಲ್ಲ.

|| ನಾರದ ಉವಾಚ ||

ಯದ್ಯೇವಂ ಸ್ವಕೃತಂ ಕರ್ಮ ಸಮನ್ವೇತಿ ಶುಭಾಶುಭಂ |
ಶುಭಸ್ಯೇಹ ಭವೇದ್ವೃದ್ಧಿರಶುಭಸ್ಯ ಕ್ಷಯೋಽಪಿ ವಾ || ೨೪ ||

ಮನಸಾ ಕರ್ಮಣಾ ವಾಪಿ ತಪಸಾ ಚರಿತೇನ ವಾ ।
ಯಥಾ ನ ರೋಹತೇ ಜಂತುಸ್ತಥಾ ತ್ವಂ ವಕ್ತುಮರ್ಹಸಿ || ೨೫ ||

ಯಮ ಉವಾಚ ||

ಇದಂ ಪುಣ್ಯಂ ಪವಿತ್ರಂ ಚ ಹ್ಯಶುಭಾನಾಂ ಶುಭಪ್ರದಂ |
ಕೀರ್ತಯಿಷ್ಯಾಮಿ ತೇ ಸಮ್ಯಕ್ಪಾಪದೋಷಕ್ಷಯಂ ಸದಾ || ೨೬ ||

ಪ್ರಣಮ್ಯ ಶಿರಸಾ ಸಮ್ಯಕ್ಪಾಪಪುಣ್ಯಕರಾಯ ಚ ।
ಕರ್ತ್ರೇ ಜಗತೋ ನಿತ್ಯಂ ವಿಶ್ವಸ್ಯ ಜಗತೋ ಹರಿಂ || ೨೭ ||

೨೪–೨೫. ನಾರದ:— ಹೀಗೆ ಆತ್ಮನು ತಾನು ಮಾಡಿದ ಶುಭಾಶುಭ ಕರ್ಮವನ್ನು ಅನುಸರಿಸುವುದಾದರೆ ಇಹದಲ್ಲಿ ಶುಭಕರ್ಮ ವೃದ್ಧಿಯೂ, ಅಶುಭ ಕರ್ಮದ ನಾಶವೂ ಮನಸ್ಸಿನಿಂದಲೋ, ಕಾರ್ಯದಿಂದಲೋ, ತಪಸ್ಸಿನಿಂದಲೋ ಒಳ್ಳೆಯ ನಡತೆಯಿಂದಲೋ ಆಗಿ, ಆತ್ಮನು ಮತ್ತೆ ಪ್ರಾಣಿಯಾಗಿ ಜನಿಸದಂತೆ ಹೇಗಾಗುವುದೆಂಬುದನ್ನು ನೀನು ಹೇಳಬೇಕು.

೨೬. ಯಮ:— ಯಾವಾಗಲೂ ಪುಣ್ಯವೂ, ಪವಿತ್ರವೂ, ಶುಭಕರವೂ ಅಶುಭಕರ್ಮಗಳ ಪಾಪದೋಷನಾಶಕರವೂ ಆದ ಈ ವಿಚಾರವನ್ನು ನಿನಗೆ ಚೆನ್ನಾಗಿ ಹೇಳುವೆನು.

೨೭–೨೯. ಸರ್ವಪ್ರಾಣಿಗಳಲ್ಲೂ ಸಮಬುದ್ಧಿಯುಳ್ಳವನೂ, ಜಿತೇಂದ್ರಿಯನೂ, ಶಾಂತಮನಸ್ಕನೂ, ಸರ್ವವೇದಜ್ಞನೂ ಆದ ಮನುಷ್ಯನು ಪಾಪಪುಣ್ಯ

ಯೇನ ಸೃಷ್ಟಮಿದಂ ಸರ್ವಂ ತ್ರೈಲೋಕ್ಯಂ ಸಚರಾಚರಂ ।
ಅನಾದಿಮಧ್ಯನಿಧನಂ ದುರ್ವಿಜ್ಞೇಯಂ ಸುರಾಸುರೈಃ ॥ ೨೮ ॥

ಯಸ್ಸಮಸ್ಸರ್ವಭೂತೇಷು ಜಿತಾತ್ಮಾ ಶಾಂತಮಾನಸಃ ।
ಸ ಪಾಪೇಭ್ಯೋ ವಿಮುಚ್ಯೇತ ಜ್ಞಾನವಾನ್ಸರ್ವವೇದವಿತ್ ॥ ೨೯ ॥

ತತ್ವಾರ್ಥಂ ವೇತ್ತಿಯಸ್ಸಮ್ಯಕ್ಪುರುಷಂ ಪ್ರಕೃತಿಂ ತಥಾ ।
ಜ್ಞಾತ್ವಾ ವಾ ಯೋ ನ ಮುಹ್ಯೇತ ಪದಂ ಪ್ರಾಪ್ನೋತಿ ಶಾಶ್ವತಂ ॥ ೩೦ ॥

ಗುಣಾಗುಣಪರಿಜ್ಞಾತಾ ಹ್ಯಕ್ಷಯಸ್ಯ ಕ್ಷಯಸ್ಯ ಚ ।
ಧ್ಯಾನೇನೈವ ಹ್ಯಸಂಮೂಢಸ್ಸ ಪಾಪೇಭ್ಯಃ ಪ್ರಮುಚ್ಯತೇ ॥ ೩೧ ॥

ಸ್ವದೇಹೇ ಪರದೇಹೇ ಚ ಸುಖದುಃಖೇನ ನಿತ್ಯಶಃ ।
ವಿಚಾರಜ್ಞೋ ಭವೇದ್ಯಸ್ತು ಸ ಮುಚ್ಯೇತೈನಸಾ ಧ್ರುವಂ । ॥ ೩೨ ॥

ಕರನೂ, ಸಕಲಜಗತ್ಕರ್ತೃವೂ, ನಿತ್ಯನೂ, ಚರಾಚರಸಹಿತವಾದ ತ್ರೈಲೋಕ್ಯವೆಲ್ಲವನ್ನೂ ಸೃಷ್ಟಿಸಿದವನೂ, ಅನಾದಿಮಧ್ಯಾಂತನೂ, ಸುರಾಸುರರಿಂದಲೂ ದುರ್ವಿಜ್ಞೇಯನೂ ಆದ ಹರಿಯನ್ನು ನಿತ್ಯವೂ ಚೆನ್ನಾಗಿ ಶಿರಸಾ ಪ್ರಣಾಮಮಾಡಿ ವಂದಿಸಿ, ಪಾಪಗಳಿಂದ ವಿಮುಕ್ತನಾಗುವನು.

೩೦. ಯಾರು ತತ್ವಾರ್ಥವನ್ನು ಎಂದರೆ ಪ್ರಮಾಣಪ್ರಸಿದ್ಧವಾದ ಪರಮಾತ್ಮಸ್ವರೂಪವನ್ನೂ, ಪ್ರಕೃತಿಯನ್ನೂ, ಪುರುಷನನ್ನೂ ಚೆನ್ನಾಗಿ ತಿಳಿಯುವನೋ, ತಿಳಿದೂ ಭ್ರಾಂತನಾಗುವುದಿಲ್ಲವೋ ಅವನು ಶಾಶ್ವತಪದವನ್ನು ಪಡೆಯುವನು.

೩೧. ಅಸಮ್ಮೂಢನಾಗಿ ಜ್ಞಾನದಿಂದ ಕ್ಷಯದ ಮತ್ತು ಅಕ್ಷಯದ ಗುಣಾಗುಣಗಳನ್ನು ಚೆನ್ನಾಗಿ ಅರಿತವನು ಪಾಪಗಳಿಂದ ಬಿಡುಗಡೆಯನ್ನು ಹೊಂದುವನು.

೩೨. ನಿತ್ಯವೂ ತನ್ನ ದೇಹದಲ್ಲೂ, ಇತರರ ದೇಹದಲ್ಲೂ ಉಂಟಾಗುವ ಸುಖದುಃಖಗಳ ವಿಚಾರವನ್ನು ಸರಿಯಾಗಿ ಅರಿತವನು ಪಾಪಗಳಿಂದ ನಿಜವಾಗಿಯೂ ಬಿಡುಗಡೆಯನ್ನು ಹೊಂದುವನು.

ಅಹಿಂಸ್ರಸ್ಸರ್ವಭೂತೇಷು ತೃಷ್ಣಾಕ್ರೋಧವಿವರ್ಜಿತಃ ।
ಶುಭನ್ಯಾಯಸ್ಸದಾ ಯಶ್ಚ ಸ ಪಾಪೇಭ್ಯಃ ಪ್ರಮುಚ್ಯತೇ ॥ ೩೩ ॥

ಪ್ರಾಣಾಯಾಮೈಶ್ಚ ನಿಗೃಹ್ಯ ತ್ವಧಸ್ಸಂಧಾರಣಾನಿ ಚ ।
ವ್ಯವಸ್ಥಿತಮನಾ ಯಸ್ತು ಸ ಪಾಪೇಭ್ಯಃ ಪ್ರಮುಚ್ಯತೇ ॥ ೩೪ ॥

ನಿರಾಶಸ್ಸರ್ವತಸ್ತಿಷ್ಠೇದಿಷ್ಟಾರ್ಥೇಷು ನ ಲೋಲುಪಃ ।
ಪರೀತಾತ್ಮಾ ತ್ಯಜೇತ್ಪ್ರಾಣಾನ್ಸರ್ವಪಾಪಾತ್ಪ್ರಮುಚ್ಯತೇ ॥ ೩೫ ॥

ಶ್ರದ್ಧಧಾನೋ ಜಿತಕ್ರೋಧಃ ಪರದ್ರವ್ಯವಿವರ್ಜಕಃ ।
ಅನಸೂಯಶ್ಚ ಯೋ ಮರ್ತ್ಯಸ್ಸ ಪಾಪೇಭ್ಯಃ ಪ್ರಮುಚ್ಯತೇ ॥ ೩೬ ॥

ಗುರುಶುಶ್ರೂಷಯಾ ಯುಕ್ತಸ್ತ್ವಹಿಂಸಾನಿರತಶ್ಚ ಯಃ ।
ಅಕ್ಷುದ್ರಶೀಲಸ್ತು ನರಸ್ಸ ಪಾಪೇಭ್ಯಃ ಪ್ರಮುಚ್ಯತೇ ॥ ೩೭ ॥

---

೩೩. ಯಾವ ಪ್ರಾಣಿಯನ್ನೂ ಹಿಂಸಿಸದೆ ಆಶಾಕೋಪಗಳನ್ನು ಬಿಟ್ಟು ಸದಾ ಶುಭನೀತಿಯುಳ್ಳವನಾಗಿರುವವನು ಪಾಪಗಳಿಂದ ಪ್ರಮುಕ್ತನಾಗುವನು.

೩೪. ಪ್ರಾಣಾಯಾಮಗಳಿಂದ ನಿಶ್ವಾಸೋಚ್ಛ್ವಾಸಗಳನ್ನು ನಿಗ್ರಹಿಸಿ ಸ್ಥಿರ ಮನಸ್ಕನಾಗಿರುವವನು ಪಾಪಗಳನ್ನು ಕಳೆದುಕೊಳ್ಳುವನು.

೩೫. ಇಷ್ಟಾರ್ಥಲೋಲುಪನಾಗದೆ ನಿರಾಶನಾಗಿ ಎಲ್ಲಾದರಲ್ಲಿರುತ್ತ ಪರಿವ್ರಾಜಕನಾಗಿ ಪ್ರಾಣಬಿಡುವವನು ಸರ್ವಪಾಪಗಳನ್ನೂ ಕಳೆದುಕೊಳ್ಳುವನು.

೩೬. ಆಸ್ತಿಕನೂ, ಕೋಪಾಸೂಯೆಗಳನ್ನೂ ಪರದ್ರವ್ಯವನ್ನೂ ತ್ಯಜಿಸಿದವನೂ ಆದ ಮನುಷ್ಯನು ಪಾಪಗಳನ್ನು ಕಳೆದುಕೊಳ್ಳುವನು.

೩೭. ಗುರುಶುಶ್ರೂಷೆಯಲ್ಲೂ, ಅಹಿಂಸೆಯಲ್ಲೂ ನಿರತನಾಗಿ ಕಪಟಸ್ವಭಾವವಿಲ್ಲದವನಾಗಿರುವವನು ಪಾಪಗಳಿಂದ ಬಿಡುಗಡೆಯನ್ನು ಹೊಂದುವನು.

ಪ್ರಶಸ್ತಾನಿ ಚ ಯಃ ಕುರ್ಯಾದಪ್ರಶಸ್ತಾನಿ ವರ್ಜಯೇತ್ ।
ಮಂಗಲೇ ಪಂವೋ ಯಶ್ಚ ಸ ಪಾಪೇಭ್ಯಃ ಪ್ರಮುಚ್ಯತೇ ॥ ೩೮ ॥

ಯೋಽಭಿಗಚ್ಛತಿ ತೀರ್ಥಾನಿ ವಿಶುದ್ಧೇನಾಂತರಾತ್ಮನಾ ।
ಪಾಪಾದುಪರತೋ ನಿತ್ಯಂ ಸ ಪಾಪೇಭ್ಯಃ ಪ್ರಮುಚ್ಯತೇ ॥ ೩೯ ॥

ಉತ್ಥಾಯ ಬ್ರಾಹ್ಮಣಂ ಗಚ್ಛೇನ್ನರೋ ಭಕ್ತ್ಯಾ ಸಮನ್ವಿತಃ ।
ಅಭಿಗಮ್ಯ ಪ್ರದಾನೇನ ಸ ಪಾಪೇಭ್ಯಃ ಪ್ರಮುಚ್ಯತೇ ॥ ೪೦ ॥

॥ ನಾರದ ಉವಾಚ ॥

ಏತಚ್ಛ್ರೇಯೋ ಹಿತಂ ಚೈವ ಸರ್ವೇಷಾಂ ವೈ ಪರಂತಪ ।
ಉಪಪನ್ನಂ ಚ ಯುಕ್ತಂ ಚ ತತ್ತ್ವಯಾ ಸಮುದಾಹೃತಂ ॥ ೪೧ ॥

ವಿವಿಧೈಃ ಕಾರಣೋಪಾಯೈಸ್ಸಮ್ಯಕ್ಕೃತ್ವಾರ್ಥದರ್ಶಿತೈಃ ।
ಸಂಶಯೋಽಭೂನ್ಮಮ ಪುರಾ ಸತ್ವಯಾ ನಾಶಿತಃ ಪ್ರಭೋ ॥ ೪೨ ॥

---

೩೮. ಕಾರ್ಯಗಳಲ್ಲಿ ಪ್ರಶಸ್ತವಾದುವುಗಳನ್ನು ಆಚರಿಸುತ್ತ ಅಪ್ರಶಸ್ತವಾದುವುಗಳನ್ನು ಪರಿತ್ಯಜಿಸುತ್ತ ಶುಭಾಸಕ್ತನಾಗಿರುವವನು ಪಾಪಗಳನ್ನು ಕಳೆದುಕೊಳ್ಳುವನು.

೩೯. ಪರಿಶುದ್ಧಮನಸ್ಕನಾಗಿ ತೀರ್ಥಯಾತ್ರೆಯನ್ನು ಮಾಡುತ್ತ, ಪಾಪಗಳನ್ನು ಮತ್ತೆ ಮಾಡದಿರುವವನು ತನ್ನ ಹಿಂದಿನ ಪಾಪಗಳನ್ನೆಲ್ಲಾ ಕಳೆದುಕೊಳ್ಳುವನು.

೪೦. ಪ್ರಾತಃಕಾಲದಲ್ಲಿ ಎದ್ದು ಭಕ್ತಿಯಿಂದ ಶ್ರೋತ್ರಿಯನಾದ ಬ್ರಾಹ್ಮಣನ ಸಮೀಪಕ್ಕೆ ಹೋಗಿ, ಏನಾದರೂ ದಾನಮಾಡಿ, ವಂದಿಸುವವನು ಪಾಪಗಳನ್ನು ಕಳೆದುಕೊಳ್ಳುವನು.

೪೧–೪೨. ನಾರದಮುನಿ:— ಶತ್ರುಸಂತಾಪಕನೇ, ನೀನು ಹೇಳಿದ ಇದು ಸರ್ವರಿಗೂ ಸಂಬಂಧಿಸಿದುದೂ, ಯುಕ್ತವೂ, ಹಿತವೂ, ಶ್ರೇಯಸ್ಕರವೂ ಆಗಿದೆ. ಪ್ರಭೂ, ನನಗೆ ಮೊದಲು ಸಂದೇಹವುಂಟಾಗಿದ್ದಿತು. ಅದನ್ನು ನೀನು ಅರ್ಥವತ್ತಾಗಿ ತೋರಿಸಿ, ಬಗೆಬಗೆಯ ಕಾರಣೋಪಾಯಗಳಿಂದ ಚೆನ್ನಾಗಿ ಪರಿಹರಿಸಿದೆ.

ತತೋಽಪ್ಯಲ್ಪತರಶ್ಚೇತ್ಸ್ಯಾದುಪಾಯೋ ಯೋಗವಿತ್ತಮ ।
ಕಥ್ಯತಾಂ ಮೇ ಮಹಾಭಾಗ ಯೇನ ಪಾಪಂ ಪ್ರಣಶ್ಯತಿ ॥ ೪೩ ॥

ದುಷ್ಕರಂ ಪೂರ್ವಮುಕ್ತಂ ಹಿ ಯೋಗಧರ್ಮಸ್ಯ ಸಾಧನಂ ।
ಪಾಪಾಪಹರಣಂ ಲೋಕೇ ಯದನ್ಯತ್ಸುಖಸಾಧನಂ ॥ ೪೪ ॥

ಅಲ್ಪೋಪಾಯಕರಂ ಚೈವ ಸುಖೋಪಾಯಂ ಚ ಸರ್ವಶಃ ।
ಯೇನ ಪಾಪಕೃತಾನ್ದೋಷಾನಪೋಹತಿ ಸುದಾರುಣಾನ್ ॥ ೪೫ ॥

ಆತ್ಮಾಯತ್ತಶ್ಚ ಯೋ ನಿತ್ಯಂ ನ ಚ ವಿಸ್ತಾರವಿಸ್ತರಃ ।
ಗುಣೈಶ್ಚ ವಿವಿಧೈರ್ಯುಕ್ತಾ ಇಹಲೋಕೇ ಪರತ್ರ ಚ ॥ ೪೬ ॥

ಕರ್ಮಣಾಮಶುಭಾನಾಂ ಚ ವಿವಿಧೋತ್ಪತ್ತಿಜನ್ಮನಾಂ ।
ಯಸ್ಸಮರ್ಥಸ್ಸೋಽಪೋಹಿತುಂ ತನ್ಮೇ ಬ್ರೂಹಿ ಮಹಾತಪಾಃ ॥ ೪೭ ॥

---

೪೩. ಯೋಗಜ್ಞೋತ್ತಮನೇ, ನೀನು ಈಗ ಹೇಳಿದುದಕ್ಕಿಂತಲೂ ಸುಲಭವಾಗಿ ಪಾಪಗಳನ್ನು ಹೋಗಲಾಡಿಸುವ ಉಪಾಯವಾವುದಾದರೂ ಇದ್ದರೆ, ಪೂಜ್ಯನೇ, ಅದನ್ನು ನನಗೆ ಹೇಳು.

೪೪–೪೭. ಮಹಾತಪನೇ, ನೀನು ಇದುವರೆಗೆ ಹೇಳಿದ ಯೋಗಧರ್ಮ ಸಾಧನವು ದುಷ್ಕರವಾದುದಾಗಿದೆ. ಲೋಕದಲ್ಲಿ ಪಾಪಪರಿಹಾರಕವೂ, ಸುಖಸಾಧನವೂ, ಅಲ್ಪೋಪಾಯದಿಂದಾಗುವುದೂ, ಎಲ್ಲರಿಗೂ ಸುಖೋಪಾಯವೂ, ಪಾಪಿಗಳ ಅತಿಭೀಷಣವಾದ ದೋಷಗಳನ್ನೂ ಹೋಗಲಾಡಿಸುವುದೂ, ಬೇರೆಯ ವಿಸ್ತಾರವಾದ ಸಾಧನಗಳನ್ನವೇಕ್ಷಿಸದೆ ಯಾವಾಗಲೂ ತನ್ನಷ್ಟಕ್ಕೆ ತಾನು ಸ್ವತಂತ್ರವಾಗಿ ಆಚರಿಸಬಹುದಾದುದೂ, ಇಹಪರಗಳಲ್ಲಿ ವಿವಿಧಗುಣಗಳುಳ್ಳದೂ, ಹಲವು ಜನ್ಮಗಳ ಅಶುಭಕರ್ಮಗಳನ್ನು ಹಾರಿಸುವುದಕ್ಕೆ ಶಕ್ತಿಯುಳ್ಳದೂ ಆದುದು ಬೇರಾವುದಾದರೂ ಇದ್ದರೆ ಅದನ್ನು ನನಗೆ ಹೇಳು.

|| ಯಮ ಉವಾಚ ||

ಯಥಾ ಸ ಭಗವಾನಾಹ ಧರ್ಮಮೇಶಂ ಪ್ರಜಾಪತಿಃ |
ತದಹಂ ಭಾವಯಿಷ್ಯಾಮಿ ನಮಸ್ಕೃತ್ಯ ಸ್ವಯಂಭುವಂ || ೪೮ ||

ಲೋಕಾನಾಂ ಶ್ರೇಯಸೋರ್ಥಂ ತು ಪಾಪಾನಾಂ ತು ವಿನಾಶನಂ |
ಕ್ರಿಯಾಕಾರನಿಯೋಗಂ ಚ ಪ್ರೋಚ್ಯಮಾನಂ ವಿಬೋಧ ಮೇ || ೪೯ ||

ಕೈವಲ್ಯಮಭಿಸಂಪನ್ನೇ ಶ್ರದ್ದಧಾನೋ ಭವೇನ್ನರಃ |
ಅನನ್ಯಮಾನಸಃ ಕುರ್ಯಾದ್ಯಥಾ ಧರ್ಮಾನುಶಾಸನಂ || ೫೦ ||

ಪ್ರಾಪ್ನುಯಾದೀಪ್ಸಿತಾನ್ಕಾಮಾನ್ಪಾಪೈರ್ಮುಕ್ತೋ ಯಥಾಸುಖಂ |
ಯಃ ಕುರ್ಯಾದ್ಧರ್ಮಸಂಯುಕ್ತಂ ವಿಶುದ್ಧೇನಾಂತರಾತ್ಮನಾ || ೫೧ ||

ಯಸ್ತು ಕಾರಯತೇ ರೂಪಂ ಶಿಶುಮಾರಂ ಪ್ರಜಾಪತಿಂ |
ದೃಷ್ಟ್ವಾ ನಮಸ್ಯೇತ್ಪ್ರಯತಸ್ಸ ಪಾಪೇಭ್ಯಃ ಪ್ರಮುಚ್ಯತೇ || ೫೨ ||

---

೪೮. ಆ ಭಗವಂತನೂ, ಸ್ವಯಂಭುವೂ ಆದ ಬ್ರಹ್ಮನು ಹೇಳಿದಂತೆ ಈ ಧರ್ಮವನ್ನು ಆತನಿಗೆ ನಾನು ನಮಸ್ಕರಿಸಿ, ಗೌರವಿಸಿ, ನನ್ನ ಮನಸ್ಸಿಗೆ ತಂದು ಕೊಂಡು ಹೇಳುತ್ತೇನೆ.

೪೯. ಲೋಕಗಳ ಪಾಪನಾಶಕವೂ, ಶ್ರೇಯಃಪ್ರಯೋಜಕವೂ ಆದ ನಾನು ಹೇಳುವ ಕರ್ಮಕರಣನಿಯೋಗವನ್ನು ಕೇಳು.

೫೦. ಮನುಷ್ಯನು, ಕೈವಲ್ಯನಾಥನಾದ ಪರಮಾತ್ಮನಲ್ಲಿ ನಂಬಿಕೆಯನ್ನೂ ಅಪೇಕ್ಷೆಯನ್ನೂ ಇಡಬೇಕು. ಅನನ್ಯಮನಸ್ಕನಾಗಿ ಧರ್ಮಶಾಸ್ತ್ರನಿಯಮದಂತೆ ಆಚರಿಸಬೇಕು.

೫೧. ಪರಿಶುದ್ಧಾಂತರಾತ್ಮನಾಗಿ ಧರ್ಮಯುಕ್ತವಾದುದನ್ನು ಮಾಡುವವನು ಪಾಪಗಳಿಂದ ವಿಮುಕ್ತನಾಗಿ ಸುಖದಿಂದ ಬೇಕಾದ ಇಷ್ಟಾರ್ಥಗಳನ್ನು ಪಡೆಯುವನು.

೫೨. ಯಾರು ರೂಪವನ್ನು ಮಾಡಿಸುವನೋ ಆ ಪರಮಾತ್ಮನನ್ನು ಪರಿಶುದ್ಧನಾಗಿ ಸಂದರ್ಶಿಸಿ ನಮಸ್ಕರಿಸುವವನು ಪಾಪಗಳಿಂದ ವಿಮುಕ್ತನಾಗುವನು.

ಯದಾ ತಸ್ಯ ಶರೀರಸ್ಥಂ ಸೋಮಂ ಪಶ್ಯೇತ್ಸಮಾಹಿತಃ ।
ಮಹಾಪಾತಕನಾಶಸ್ತು ತದಾ ತಸ್ಯ ವಿಧೀಯತೇ ॥ ೫೩ ॥

ಲಲಾಟೇ ತೂತ್ಥಿತಂ ದೃಷ್ಟ್ವಾ ಮುಚ್ಯತೇ ಚ ಸ ಪಾತಕೈಃ ।
ಕಂಠಸ್ಥಂ ಪಾತಕೈಸ್ಸರ್ವೈರ್ಹೃದಿಸ್ಥಂ ಚ ಕೃತಾಕೃತೈಃ ॥ ೫೪ ॥

ಮನಸಾ ಕರ್ಮಣಾ ವಾಚಾ ಯತ್ಕಿಂಚಿತ್ಕಲುಷಂ ಕೃತಂ ।
ಉದರಸ್ಥಂ ತು ತಂ ದೃಷ್ಟ್ವಾ ಮುಚ್ಯತೇ ನಾತ್ರ ಸಂಶಯಃ ॥ ೫೫ ॥

ವಾಙ್ಮನೋಭಿಃ ಕೃತಾನಾಂ ತು ಪಾಪಾನಾಂ ವಿಪ್ರ ಮೋಕ್ಷಣಂ ।
ಯದಾ ಲಾಂಗಲಕಂಠೇ ತು ಸ್ಥಿತಂ ಪಶ್ಯೇದ್ದಿವಾಕರಂ ॥ ೫೬ ॥

---

೫೩. ಅವನ ದೇಹದಲ್ಲಿರುವ *ಸೋಮನನ್ನು ಶಾಂತನಾಗಿ ಯಾವಾಗ ನೋಡುವನೋ ಆಗ ಮನುಷ್ಯನ ಮಹಾಪಾತಕನಾಶವಾಗುವುದೆಂದು ವಿಧಿಸಿದೆ.

೫೪. ಹಣೆಯಲ್ಲುದಿಸಿದ ಸೋಮನ ದರ್ಶನದಿಂದಲೂ ಪಾಪಗಳನ್ನು ಕಳೆದುಕೊಳ್ಳುವನು. ಕಂಠಸ್ಥನಾದ ಸೋಮನನ್ನು ಸಂದರ್ಶಿಸುವುದರಿಂದ ಸರ್ವ ಪಾಪಗಳನ್ನೂ, ಹೃದಯದಲ್ಲಿರುವ ಸೋಮನನ್ನು ಸಂದರ್ಶಿಸುವುದರಿಂದ ಕೃತಾಕೃತಪಾಪಗಳನ್ನೂ ಎಂದರೆ ಹಿಂದೆ ಮಾಡಿದ ಮತ್ತು ಮುಂದೆ ಮಾಡಬಹುದಾದ ಪಾಪಗಳನ್ನೂ ಕಳೆದುಕೊಳ್ಳುವನು.

೫೫. ಮನಸ್ಸಿನಿಂದಾಗಲಿ, ಕರ್ಮದಿಂದಾಗಲಿ, ವಾಕ್ಕಿನಿಂದಾಗಲಿ ಯಾವುದೊಂದು ಪಾಪವನ್ನು ಮಾಡಿದ್ದರೂ ಆತನ ಉದರದಲ್ಲಿರುವ ಸೋಮನನ್ನು ಸಂದರ್ಶಿಸುವುದರಿಂದ ಅದನ್ನು ಕಳೆದುಕೊಳ್ಳುವುದರಲ್ಲಿ ಸಂಶಯವಿಲ್ಲ.

೫೬. ಮಾತಿನಿಂದಲೂ, ಮನಸ್ಸಿನಿಂದಲೂ ಮಾಡಿದ ಪಾಪಗಳಿಗೆ ನೇಗಿಲ ಕಂಠದಲ್ಲಿರುವ ಸೂರ್ಯನನ್ನು ಕಂಡಾಗ ವಿಮೋಚನೆಯಾಗುವುದು.

---

* ಸೋಮ= ಚಂದ್ರ ; ಈಶ್ವರ.

ತದಾ ಸ ದುಷ್ಕೃತಾನ್ಸರ್ವಾನ್ವಿನಾಶಯತಿ ಮಾನವಃ ।
ಯದಾ ಸೋಮಂ ಗುರುಂ ಸರ್ವಂ ಯಃ ಕುರ್ಯಾತ್ತು ಪ್ರದಕ್ಷಿಣಂ ॥ ೫೭ ॥

ಧ್ಯಾಯೇತ ಹ್ಯಕ್ಷಯಂ ಯಸ್ತು ಸ ಪಾಪೇಭ್ಯಃ ಪ್ರಮುಚ್ಯತೇ ॥ ೫೮ ॥

ಭೃಗುರ್ಭುಧಶ್ಶನೈಶ್ಚಾರೋ ಲೋಹಿತಾಂಗಶ್ಚ ವೀರ್ಯವಾನ್ ।
ಸೌಮ್ಯರೂಪೋ ಯದಾ ಚಂದ್ರಃ ಕುರುತೇ ಚ ಪ್ರದಕ್ಷಿಣಂ ॥ ೫೯ ॥

ಹೃದಿ ಕೃತ್ವಾ ತು ತತ್ಪಾಪಂ ಯೋ ಧ್ಯಾಯೇದಕ್ಷರಂ ಶುಚಿಃ ।
ತದಾ ನಿರ್ಮಲತಾಂ ಯಾತಿ ಚಂದ್ರಮಾಶ್ಶಾರದೋ ಯಥಾ ॥ ೬೦ ॥

ಪ್ರಾಣಾಯಾಮಶತಂ ಕೃತ್ವಾ ಸರ್ವಪಾಪೈಃ ಪ್ರಮುಚ್ಯತೇ ।
ಜಘನಸ್ಥಂ ಶುಚಿರ್ದೃಷ್ಟ್ವಾ ನರಶ್ಚಂದ್ರಮಸಂ ಮುನೇ ।
ನಮಸ್ಯೇತ್ಪ್ರಯತೋ ಭೂತ್ವಾ ಸರ್ವಪಾಪೈಃ ಪ್ರಮುಚ್ಯತೇ ॥ ೬೧ ॥

೫೭-೫೮. ಮನುಷ್ಯನು ಗುರುಸೋಮಾದಿಗಳೆಲ್ಲರನ್ನೂ ಪ್ರದಕ್ಷಿಣಮಾಡಿದಾಗ ಸರ್ವಪಾಪಗಳನ್ನೂ ಹೋಗಲಾಡಿಸಿಕೊಳ್ಳುವನು. ಅಕ್ಷಯನಾದ ಪರಮಾತ್ಮನನ್ನು ಧ್ಯಾನಿಸುವನು ಪಾಪಗಳಿಂದ ವಿಮುಕ್ತನಾಗುವನು.

೫೯–೬೦. ಶುಕ್ರ, ಬುಧ, ಶನಿ. ವೀರ್ಯವಂತನಾದ ಮಂಗಳ, ಸೌಮ್ಯರೂಪನಾದ ಚಂದ್ರ, ಇವರು ಪ್ರದಕ್ಷಿಣೆಮಾಡುವಾಗ ಅಕ್ಷರನಾದ ಆ ಪರಮಾತ್ಮನನ್ನು ಶುಚಿಯಾಗಿ ಧ್ಯಾನಿಸುವವನು ಮನಸ್ಸಿನಿಂದ ಮಾಡಿದ ಪಾಪಗಳನ್ನು ಕಳೆದುಕೊಂಡು ಶರತ್ಕಾಲದ ಚಂದ್ರನಂತೆ ನಿರ್ಮಲನಾಗುವನು.

೬೧. ಮನುಷ್ಯನು ನೂರು ಪ್ರಾಣಾಯಾಮಗಳನ್ನು ಮಾಡಿ, ಸರ್ವಪಾಪಗಳಿಂದಲೂ ಮುಕ್ತನಾಗುವನು. ಮುನಿಯೇ, ಪರಮಾತ್ಮನ (ಕಿಬ್ಬೊಟ್ಟೆ)ಜಘನದಲ್ಲಿರುವ ಚಂದ್ರನನ್ನು ಶುಚಿಯಾಗಿ ಸಂದರ್ಶಿಸಿ ನಮಸ್ಕಾರಮಾಡಿದರೆ ಮನುಷ್ಯನು ಸರ್ವಪಾಪಗಳನ್ನೂ ಕಳೆದುಕೊಳ್ಳುವನು.

ಆರ್ದ್ರಸ್ಸೌಮ್ಯಕರ್ಮಾ ತು ಧ್ಯಾತ್ವಾ ಚಾಷ್ಟದಶಾಕ್ಷರಂ ।
ಯದಾ ಚಂದ್ರಶ್ಚ ಸೂರ್ಯಶ್ಚ ದ್ವಾವನ್ಯೋಽನ್ಯಂ ಪ್ರಪಶ್ಯತಃ ॥ ೬೨ ॥

ಸಂಪೂರ್ಣೌ ವಿಮಲೌ ಸಮ್ಯಗ್ಭ್ರಾಜಮಾನೌ ಸ್ವತೇಜಸಾ ।
ಕೃತ್ವಾ ಹೃದಿ ತಥಾ ಪಾಪಂ ಯೋ ಧ್ಯಾಯೇತ್ಪರಮಾವ್ಯಯಂ ॥ ೬೩ ॥

ವಾಮನಂ ಬ್ರಾಹ್ಮಣಂ ದೃಷ್ಟ್ವಾ ವಾರಾಹಂ ಚ ಜಲೋತ್ಥಿತಂ ।
ಧರಣೀ ಚೋದ್ಧೃತಾ ಯೇನ ಸಿಂಹಂ ಚಾಪಿ ಮಹಾಮುನೇ ॥ ೬೪ ॥

ನಮಸ್ಯೇದ್ವೈ ಪಯೋಭಕ್ಷಃ ಸ ಪಾಪೇಭ್ಯಃ ಪ್ರಮುಚ್ಯತೇ ।
ಪ್ರಾಣಾಯಾಮಂ ಚ ಯಃ ಕುರ್ಯಾತ್ಸೋಽಪಿಪಾಪಾತ್ಪ್ರಮುಚ್ಯತೇ॥೬೫॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಸಂಸಾರಚಕ್ರೇ ಪಾಪನಾಶೋಪಾಯನಿರೂಪಣಂ ನಾಮ ದಶಾಧಿಕದ್ವಿಶತತಮೋಽಧ್ಯಾಯಃ

೬೨-೬೩. ಚಂದ್ರನೂ, ಸೂರ್ಯನೂ ಸಂಪೂರ್ಣನಿರ್ಮಲರೂ, ತಮ್ಮ ತೇಜಸ್ಸಿನಿಂದ ಚೆನ್ನಾಗಿ ಹೊಳೆಯುವವರೂ ಆಗಿ ಒಬ್ಬರನ್ನೊಬ್ಬರು ನೋಡುವಾಗ ಎಂದರೆ ಪೌರ್ಣಿಮೆಯಲ್ಲಿ ಅಷ್ಟಾಕ್ಷರ ದಶಾಕ್ಷರ ಮಂತ್ರಗಳಿಂದ ಪ್ರತಿಪಾದ್ಯನೂ, ದಯಾರ್ದ್ರನೂ, ಪರಮಾವ್ಯಯನೂ ಆದ ಪರಮಾತ್ಮನನ್ನು, ಸೌಮ್ಯಕರ್ಮನಾಗಿ ಧ್ಯಾನಿಸುವವನು ಸರ್ವಪಾಪಗಳನ್ನೂ ಕಳೆದುಕೊಳ್ಳುವನು.

೬೪-೬೫. ಮಹಾಮುನೀ, ವಾಮನರೂಪಬ್ರಾಹ್ಮಣನಾದ ಪರಮಾತ್ಮನನ್ನೂ, ಭೂದೇವಿಯನ್ನುದ್ಧರಿಸಿದ ಜಲಸ್ಥನಾದ ಶ್ರೀವರಾಹಮೂರ್ತಿಯನ್ನೂ, ನರಸಿಂಹನನ್ನೂ, ಹಾಲನ್ನು ಮಾತ್ರ ಸೇವಿಸುವವನಾಗಿ ವಂದಿಸುವವನು ಪಾಪಗಳಿಂದ ವಿಮುಕ್ತನಾಗುವನು. ಪ್ರಾಣಾಯಾಮಮಾಡುವವನೂ ಪಾಪದಿಂದ ವಿಮುಕ್ತನಾಗುವನು.

ಅಧ್ಯಾಯದ ಸಾರಾಂಶ:—

ಯಮನು ತನ್ನನ್ನು ಪ್ರಶ್ನಿಸಿದ ನಾರದಮುನಿಗೆ ಮನುಷ್ಯನ ಸುಖದುಃಖಗಳಿಗೆ ಅವನ ಕರ್ಮವೇ ಕಾರಣವೆಂದೂ, ಜೀವನು ತನಗೆ ತಾನೇ ಬಂಧುವೂ, ಶತ್ರುವೂ ಆಗಿರುವನೆಂದೂ ತಿಳಿಸಿ, ಮನುಷ್ಯರ ಪಾಪನಾಶಕ್ಕೆ ಪ್ರಾಣಾಯಾಮ ದೇವವಂದನಾದ್ಯನೇಕ ಉಪಾಯಗಳನ್ನೂ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರಹತ್ತನೆಯ ಅಧ್ಯಾಯ.

॥ ಶ್ರೀ ॥

ಏಕಾದಶಾಧಿಕದ್ವಿಶತತಮೋಽಧ್ಯಾಯಃ

ಪುನಃ ಪಾಪನಾಶೋಪಾಯವರ್ಣನಂ

॥ ಋಷಿಪುತ್ರ ಉವಾಚ ॥

ಏತಚ್ಛ್ರುತ್ವಾ ಶುಭಂ ವಾಕ್ಯಂ ಧರ್ಮರಾಜಸ್ಯ ನಾರದಃ ।
ಇದಂ ಭಾವೇನ ಭಕ್ತ್ಯಾ ಚ ಪುನರ್ವಚನಮಬ್ರವೀತ್ ॥ ೧ ॥

॥ ನಾರದ ಉವಾಚ ॥

ಸಮಸ್ಸರ್ವೇಷು ಭೂತೇಷು ಸ್ಥಾವರೇಷು ಚರೇಷು ಚ ।
ಧರ್ಮರಾಜ ಮಹಾಬಾಹೋ ಪಿತೃತುಲ್ಯಪರಾಕ್ರಮ ॥ ೨ ॥

ಬ್ರಾಹ್ಮಣಾನಾಂ ಹಿತಾರ್ಥಾಯ ಯದುಕ್ತಂ ಮೇ ಪ್ರದಕ್ಷಿಣಂ ।
ಇದಂ ಶ್ರೇಯಃಸಮಾಖ್ಯಾನಂ ಶ್ರುತಂ ಶ್ರುತಪರಂಪದಂ ॥ ೩ ॥

ಇನ್ನೂರಹನ್ನೊಂದನೆಯ ಅಧ್ಯಾಯ

ಪಾಪನಾಶೋಪಾಯವರ್ಣನೆ.

೧. ನಚಿಕೇತ:— ನಾರದಮುನಿಯು ಯಮರಾಜನ ಈ (ಮೇಲಿನ) ಶುಭವಾಕ್ಯಗಳನ್ನು ಕೇಳಿ, ಭಕ್ತಿಯಿಂದಲೂ, ಸದ್ಭಾವದಿಂದಲೂ ಈ ಮುಂದಿನ ಮಾತನ್ನಾಡಿದನು.

೨-೩. ನಾರದಮುನಿ:— ಚರಾಚರಗಳೆಂಬ ಸರ್ವಭೂತಗಳಲ್ಲಿಯೂ ಸಮದೃಷ್ಟಿಯುಳ್ಳವನೂ, ತಂದೆಯಾದ ಸೂರ್ಯನಂತೆ ಪರಾಕ್ರಮಿಯೂ, ಮಹಾಬಾಹುವೂ ಆದ ಧರ್ಮರಾಜನೇ, ಬ್ರಾಹ್ಮಣರ ಹಿತಾರ್ಥವಾಗಿ ನನಗೆ ನೀನು ಹೇಳಿದ ಶಾಸ್ತ್ರದ ಪರಮೋಕ್ತಿಯಾದ ಈ ಶ್ರೇಯೋವಿಚಾರವನ್ನು ಕೇಳಿದುದಾಯಿತು.

ತ್ರಯೋವರ್ಣಾ ಮಹಾಭಾಗ ಯಜ್ಞಸಾಮಾನ್ಯಭಾಗಿನಃ ।
ಶೂದ್ರಾ ವೇದಪವಿತ್ರೇಭ್ಯೋ ಬ್ರಾಹ್ಮಣೈಸ್ತು ಬಹಿಷ್ಕೃತಾಃ ॥ ೪ ॥

ಯಥೈವ ಸರ್ವಸಮತಾ ತವ ಭೂತೇಷು ಮಾನದ ।
ತಥೈವ ತೇಷಾಮಪಿ ಹಿ ಶ್ರೇಯೋ ವಾಚ್ಯಂ ಮಹಾಮತೇ ।
ಯಥಾ ಕರ್ಮ ಹಿತಂ ವಾಕ್ಯಂ ಶೂದ್ರಾಣಾಮಪಿ ಕಥ್ಯತಾಂ ॥ ೫ ॥

॥ ಯಮ ಉವಾಚ ॥

ಅಹಂ ತೇ ಕಥಯಿಷ್ಯಾಮಿ ಚಾತುರ್ವರ್ಣ್ಯಸ್ಯ ನಿತ್ಯಶಃ ।
ಯದ್ಧಿತಂ ಧರ್ಮಯುಕ್ತಂ ಚ ನಿತ್ಯಂ ಭವತಿ ಸುವ್ರತ ॥ ೬ ॥

ಕೇವಲಂ ಶ್ರುತಿಸಂಯೋಗಾಚ್ಛ್ರದ್ಧಯಾ ನಿಯಮೇನ ಚ ।
ಕರೋತಿ ಪಾಪನಾಶಾರ್ಥಮಿದಂ ವಕ್ಷ್ಯಾಮಿ ತಚ್ಛೃಣು ॥ ೭ ॥

---

೪. ಪೂಜ್ಯನೇ, ವರ್ಣತ್ರಯದವರು ಯಜ್ಞಸಾಮಾನ್ಯದಲ್ಲಿ ಭಾಗಿಗಳು. ಶೂದ್ರರು ವೇದಪವಿತ್ರಗಳಾದ ಯಜ್ಞಾದಿಕರ್ಮಗಳಿಗೆ ಅನರ್ಹರೆಂದು ವೇದದ ಬ್ರಾಹ್ಮಣವೆಂಬ ಭಾಗದ ವಾಕ್ಯಗಳು ಅವರನ್ನು ಬಹಿಷ್ಕರಿಸಿವೆ.

೫. ಮಾನದನೇ, ಮಹಾಮತಿಯೇ, ನೀನು ಸರ್ವಪ್ರಾಣಿಗಳಲ್ಲಿಯೂ ಸಮತೆಯನ್ನು ಹೇಗೆ ವಹಿಸಿರುವೆಯೋ ಹಾಗೆಯೇ ಆ ಶೂದ್ರರಿಗೂ ಶ್ರೇಯಸ್ಕರವಾದುದನ್ನು ನೀನು ಹೇಳಬೇಕು. ಶೂದ್ರರಿಗೂ ಕರ್ಮಕ್ಕೆ ತಕ್ಕ ಹಿತೋಕ್ತಿಯನ್ನು ಹೇಳು.

೬. ಯಮ:— ಸುವ್ರತನೇ, ನಾಲ್ಕು ವರ್ಣಕ್ಕೂ ಯಾವುದು ಯಾವಾಗಲೂ ಹಿತವೂ, ಧರ್ಮಯುಕ್ತವೂ ಆಗಿರುವುದೋ ಅದನ್ನು ನಾನು ನಿನಗೆ ಹೇಳುತ್ತೇನೆ,

೭. ಮನುಷ್ಯರು ಕೇಳಿದ ಮಾತ್ರದಲ್ಲೇ ಆಸಕ್ತಿಯಿಂದಲೂ, ನಿಯಮದಿಂದಲೂ ಪಾಪನಾಶಾರ್ಥವಾಗಿ ಯಾವುದನ್ನು ಮಾಡುತ್ತಾರೋ ಅದನ್ನು ಹೇಳುವೆನು. ಕೇಳು.

ಗಾವಃ ಪವಿತ್ರಾ ಮಂಗಲ್ಯಾ ದೇವಾನಾಮಪಿ ದೇವತಾಃ ।
ಯಸ್ತಾಃ ಶುಶ್ರೂಷತೇ ಭಕ್ತ್ಯಾ ಸ ಪಾಪೇಭ್ಯಃ ಪ್ರಮುಚ್ಯತೇ ॥ ೮ ॥

ಸೌಮ್ಯೇ ಮುಹೂರ್ತೇ ಸಂಯುಕ್ತೇ ಪಂಚಗವ್ಯಂ ತು ಯಃ ಪಿಬೇತ್ ।
ಯಾವಜ್ಜೀವಕೃತಾತ್ಪಾಪಾತ್ತತ್‌ಕ್ಷಣಾದೇವ ಮುಚ್ಯತೇ ॥ ೯ ॥

ಲಾಂಗೂಲೇನೋದ್ಧೃತಂ ತೋಯಂ ಮೂರ್ಧ್ನಾ ಗೃಹ್ಣಾತಿ ಯೋ ನರಃ ।
ಸರ್ವತೀರ್ಥಫಲಂ ಪ್ರಾಪ್ಯ ಸ ಪಾಪೇಭ್ಯಃ ಪ್ರಮುಚ್ಯತೇ ॥ ೧೦ ॥

*ಪ್ರಸ್ರಾವೇಣ ಚ ಯಃ ಸ್ನಾಯಾ÷ದ್ರೋಹಿಣ್ಯಾ ಮಾನವೋ ದ್ವಿಜ ।
ಸರ್ವಪಾಪಕೃತಾನ್ದೋಷಾನ್ದಹತ್ಯಾಶು ನ ಸಂಶಯಃ ॥ ೧೧ ॥

---

೮. ಗೋವುಗಳು ಪವಿತ್ರಗಳೂ, ಮಂಗಳಕರಗಳೂ, ದೇವತೆಗಳಿಗೂ ದೇವತೆಗಳೂ ಆಗಿವೆ. ಯಾರು ಅದನ್ನು ಸೇವಿಸುವರೋ ಅವರು ಪಾಪಗಳಿಂದ ವಿಮುಕ್ತರಾಗುವರು.

೯. ಸೌಮ್ಯವಾದ ಮುಹೂರ್ತದಲ್ಲಿ ಪಂಚಗವ್ಯವನ್ನು ಸೇವಿಸುವವರು ಅವರ ಜೀವಿತಕಾಲದಲ್ಲಿ ಮಾಡಿದ ಎಲ್ಲ ಪಾಪದಿಂದಲೂ ಒಡನೆಯೇ ವಿಮುಕ್ತ ರಾಗುವರು.

೧೦. ಗೋವಿನ ಬಾಲದಿಂದ ಹಾರುವ ಅಥವಾ ಸೋರುವ ನೀರನ್ನು ತಲೆಯಮೇಲೆ ಪ್ರೋಕ್ಷಿಸಿಕೊಳ್ಳುವವರು ಸರ್ವತೀರ್ಥಫಲವನ್ನು ಪಡೆದು ಪಾಪ ಗಳನ್ನು ಕಳೆದುಕೊಳ್ಳುವರು.

೧೧. ಬ್ರಾಹ್ಮಣನೇ, ಕರೆಯುವ ಹಸುವಿನ ಗಂಜಲದಿಂದ ಸ್ನಾನಮಾಡು ವವರು ಸರ್ವಪಾಪದೋಷಗಳನ್ನೂ ತಟ್ಟನೆ ಸುಟ್ಟುರಿಸುವುದರಲ್ಲಿ ಸಂಶಯವಿಲ್ಲ.

---

*ಪ್ರಸ್ರವೇಣ ÷ರೋಹಿಣ್ಯಾಂಮಾನವೇ

ಧೇನುಸ್ತನಾದ್ವಿನಿಷ್ಕ್ರಾಂತಾಂ ಧಾರಾಂ ಕ್ಷೀರಸ್ಯ ಯೋ ನರಃ ।
ಶಿರಸಾ ಪ್ರತಿಗೃಹ್ಣಾತಿ ಸ ಪಾಪೇಭ್ಯಃ ಪ್ರಮುಚ್ಯತೇ ॥ ೧೨ ॥

ಬ್ರಾಹ್ಮಣಸ್ತು ಸದಾ ಸ್ನಾತೋ ಭಕ್ತ್ಯಾ ಪರಮಯಾ ಯುತಃ ।
ನಮಸ್ಯೇತ್ಪ್ರಯತೋ ಭೂತ್ವಾ ಸ ಪಾಪೇಭ್ಯಃ ಪ್ರಮುಚ್ಯತೇ. ॥ ೧೩ ॥

ಉದಯಾನ್ನಿಸ್ಸೃತಂ ಸೂರ್ಯಂ ಭಕ್ತ್ಯಾ ಪರಮಯಾ ಯುತಃ ।
ನಮಸ್ಯೇತ್ಪ್ರಯತೋ ಭೂತ್ವಾ ಸ ಪಾಪೇಭ್ಯಃ ಪ್ರಮುಚ್ಯತೇ ॥ ೧೪ ॥

ದಧ್ಯಕ್ಷತಾಂಜಲೀಭಿಸ್ತು ತ್ರಿಭಿಃ ಪೂಜಯತೇ ಶುಚಿಃ ।
ತಸ್ಯ ಭಾನುಃ ಪ್ರಸನ್ನಶ್ಚ ಹ್ಯಶುಭಂ ಯತ್ಸಮಾರ್ಜಿತಂ ।
ತಸ್ಯ ಭಾನುಸ್ಸ ಸಂದಹ್ಯ ದೂರೀಕುರ್ಯಾತ್ಸದಾ ದ್ವಿಜ ॥ ೧೫ ॥

ತಾವಕಂ ದಧಿಮಿಶ್ರಂ ತು ಪಾತ್ರೇ ಔದುಂಬರೇ ಸ್ಥಿತಂ ।
ಸೋಮಾಯ ಪೌರ್ಣಮಸ್ಯಾಂ ಹಿ ದತ್ವಾ ಪಾಪೈಃ ಪ್ರಮುಚ್ಯತೇ ॥ ೧೬ ॥

---

೧೨. ಹಸುವಿನ ಮೊಲೆಯಿಂದ ಹೊರಡುವ ಹಾಲಿನ ಧಾರೆಯನ್ನು ಶಿರಸ್ಸಿನಲ್ಲಿ ವಹಿಸುವವರು ಪಾಪಗಳಿಂದ ವಿಮುಕ್ತರಾಗುವರು.

೧೩. ಬ್ರಾಹ್ಮಣನು ನಿತ್ಯವೂ ಸ್ನಾನಮಾಡಿ, ಶುಚಿಯಾಗಿ ಪರಮಭಕ್ತಿಯಿಂದ ಗೋವನ್ನು ನಮಸ್ಕರಿಸಿ ಪಾಪವನ್ನು ಕಳೆದುಕೊಳ್ಳುವನು

೧೪. ಉದಯಿಸುತ್ತಿರುವ ಸೂರ್ಯನನ್ನು ಪರಮಭಕ್ತಿಯಿಂದ ಪರಿಶುದ್ಧನಾಗಿ ವಂದಿಸುವವನು ಪಾಪಗಳನ್ನು ಕಳೆದುಕೊಳ್ಳುವನು.

೧೫. ದ್ವಿಜನೇ, ಶುಚಿ ರ್ಭೂತರಾಗಿ ಮೊಸರು, ಅಕ್ಷತೆ, ಅಂಜಲಿ (ಮುಗಿದ ಕೈ) ಈ ಮೂರರಿಂದ ಸೂರ್ಯನನ್ನು ಪೂಜಿಸುವವರಿಗೆ ಆತನು ಒಲಿದು, ಅವರು ಮಾಡಿ ಕೂಡಿಟ್ಟಿರುವ ಪಾಪವನ್ನು ಸುಟ್ಟು ದೂರಹಾರಿಸುವನು.

೧೬. ಅತ್ತಿಯ ಮರದಿಂದ ಮಾಡಿದ ಪಾತ್ರೆಯಲ್ಲಿ ಮೊಸರಿನೊಡಗೂಡಿದ ತಾವಕವನ್ನು ಪೌರ್ಣಿಮೆಯದಿನ ಚಂದ್ರನಿಗೆ ಅರ್ಪಿಸುವುದರಿಂದ ಮನುಷ್ಯರು ಪಾಪಗಳನ್ನು ಕಳೆದುಕೊಳ್ಳುವರು.

ಅರುಂಧತೀಂ ಬುಧಂ ಚೈವ ತಥಾ ಸರ್ವಾನ್ಮಹಾಮುನೀನ್ |
ಅಭ್ಯರ್ಚ್ಯ ವೇದವಿಧಿನಾ ತೇಭ್ಯೋ ದತ್ವಾ ಚ ತಾವಕಂ || ೧೭ ||

ಏಕಾಗ್ರಮಾನಸೋ ಭೂತ್ವಾ ಯೋ ನಮಸ್ಯೇತ್ಕೃತಾಂಜಲಿಃ |
ಕಿಲ್ಬಿಷಂ ತಸ್ಯ ವೈ ಸರ್ವಂ ತತ್ಕ್ಷಣಾದೇವ ನಶ್ಯತಿ || ೧೮ ||

ದ್ವಿಜಂ ಶುಶ್ರೂಷತೇ ಯಸ್ತು ತರ್ಪಯಿತ್ವಾತಿಭಕ್ತಿತಃ |
ನಮಸ್ಯೇತ್ಪ್ರಯತೋ ಭೂತ್ವಾ ಸ ಪಾಪೇಭ್ಯಃ ಪ್ರಮುಚ್ಯತೇ || ೧೯ ||

ವಿಷುವೇಷು ಚ ಯೋಗೇಷು ಶುಚಿರ್ದತ್ವಾ*ಪಯೋನರಃ |
ತಸ್ಯ ಜನ್ಮಕೃತಂ ಪಾಪಂ ತತ್ಕ್ಷಣಾದೇವ ನಶ್ಯತಿ || ೨೦ ||

ಪ್ರಾಚೀನಾಗ್ರಾನ್ಕುಶಾನ್ಕೃತ್ವಾ ಸ್ಥಾಪಯಿತ್ವಾ†ವೃಷಂ ನರಃ |
ದ್ವಿಜೈಸ್ಸಹ ನಮಸ್ಕೃತ್ಯ ಸರ್ವಪಾಪೈಃ ಪ್ರಮುಚ್ಯತೇ || ೨೧ ||

೧೭–೧೮. ಅರುಂಧತಿಯನ್ನೂ, ಬುಧನನ್ನೂ, ಎಲ್ಲಾ ಮುನಿಗಳನ್ನೂ ವೇದೋಕ್ತವಿಧಿಯಿಂದ ಪೂಜಿಸಿ, ಅವರಿಗೆ ತಾವಕವನ್ನು ಅರ್ಪಿಸಿ, ಏಕಾಗ್ರಮನಸ್ಕರಾಗಿ ಕೈಮುಗಿದು ವಂದಿಸುವವರ ಪಾಪವೆಲ್ಲವೂ ಒಡನೆಯೇ ನಾಶವಾಗುವುದು.

೧೯, ಭಕ್ತಿಯಿಂದ ದ್ವಿಜರನ್ನು ತೃಪ್ತಿಪಡಿಸಿ, ಅವರ ಶುಶ್ರೂಷೆಮಾಡಿ ವಂದಿಸುವವರು ಪಾಪಗಳನ್ನು ಕಳೆದುಕೊಳ್ಳುವರು.

೨೦. ವಿಷುವತ್ಪುಣ್ಯಕಾಲಗಳಲ್ಲಿ ಶುದ್ಧರಾಗಿ *ಪಯೋದಾನಮಾಡುವುದರಿಂದ ಮನುಷ್ಯರ ಜನ್ಮದ ಪಾಪವೆಲ್ಲವೂ ಆಕ್ಷಣದಲ್ಲಿಯೇ ನಾಶವಾಗುವುದು.

೨೧. ಪೂರ್ವಾಗ್ರಗಳಾಗಿ ದರ್ಭೆಗಳನ್ನು ಹಾಸಿ, *ವೃಷಸ್ಥಾಪನೆಮಾಡಿ, ಬ್ರಾಹ್ಮಣರೊಡನೆ ನಮಸ್ಕರಿಸಿ ಮನುಷ್ಯರು ಸರ್ವಪಾಪಗಳನ್ನೂ ಕಳೆದುಕೊಳ್ಳುವರು.

---

*ಪಯ= ಹಾಲು, ನೀರು †ವೃಷ= ಈಶ್ವರ, ವಿಷ್ಣು, ವೃಷಭ (ಎತ್ತು)

ದಕ್ಷಿಣಾವರ್ತಸವ್ಯೇನ ಕೃತ್ವಾ ಪಾಕ್ಸ್ರೋತಸಂ ನದೀಂ |
ಕೃತ್ವಾಭಿಷೇಕಂ ವಿಧಿವತ್ತತಃ ಪಾಪಾತ್ಪ್ರಮುಚ್ಯತೇ ॥ ೨೨ ॥

ದಕ್ಷಿಣಾವರ್ತಶಂಖೇನ ಕೃತ್ವಾ ಚೈವಕರೇ ಜಲಂ |
ಶಿರಸಾ ತದ್ಗೃಹೀತ್ವಾ ತು ವಿಪ್ರೋ ಹೃಷ್ಟಮನಾಃ ಶುಚಿಃ ॥ ೨೩ ॥

ತಸ್ಯ ಜನ್ಮಕೃತಂ ಪಾಪಂ ತತ್ಕ್ಷಣಾದೇವ ನಶ್ಯತಿ ॥ ೨೪ ॥

ಪ್ರಾಕ್ಸ್ರೋತಸಂ ನದೀಂ ಗತ್ವಾ ನಾಭಿಮಾತ್ರಜಲೇ ಸ್ಥಿತಃ |
ಸ್ನಾತ್ವಾ ಕೃಷ್ಣತಿಲೈರ್ಮಿಶ್ರಾ ದದ್ಯಾತ್ಸಪ್ತಾಂಜಲೀರ್ನರಃ ॥ ೨೫ ॥

ಪ್ರಾಣಾಯಾಮತ್ರಯಂ ಕೃತ್ವಾ ಬ್ರಹ್ಮಚಾರೀ ಜಿತೇಂದ್ರಿಯಃ |
ಯಾವಜ್ಜೀವಕೃತಂ ಪಾಪಂ ತತ್ಕ್ಷಣಾದೇವ ನಶ್ಯತಿ ॥ ೨೬ ॥

---

೨೨. ಪೂರ್ವಾಭಿಮುಖವಾಗಿ ಹರಿಯುವ ನದಿಯಲ್ಲಿ ಪ್ರವಾಹಕ್ಕೆದುರಾಗಿ ನಿಂತು, ಪ್ರದಕ್ಷಿಣವಾಗಿ ಸುಳಿ ಬರುವಂತೆ ಮಾಡಿ, ವಿಧಿಯಂತೆ ಸ್ನಾನ ಮಾಡುವುದರಿಂದ ಪಾಪವನ್ನು ಕಳೆದುಕೊಳ್ಳುವರು.

೨೩-೨೪. ಬ್ರಾಹ್ಮಣನು ಶುಚಿಯಾಗಿ ಬಲಮುರಿ ಶಂಖದಿಂದ ಕೈಗೆ ತೀರ್ಥವನ್ನು ತೆಗೆದುಕೊಂಡು, ಸಂತೋಷದಿಂದ ಕೂಡಿದ ಮನವುಳ್ಳವನಾಗಿ ತಲೆಗೆ ಪ್ರೋಕ್ಷಿಸಿಕೊಂಡರೆ ಅವನು ಜನ್ಮದಲ್ಲಿ ಮಾಡಿದ ಪಾಪವು ಆಕ್ಷಣದಲ್ಲಿಯೇ ನಾಶವಾಗುವುದು.

೨೫-೨೬. ಪೂರ್ವಕ್ಕೆ ಹರಿಯುವ ನದಿಗೆ ಹೋಗಿ, ಹೊಕ್ಕಳವರೆಗೆ ನೀರು ಬರುವಷ್ಟು ಆಳದಲ್ಲಿ ನಿಂತು, ಸ್ನಾನಮಾಡಿ, ಮೂರು ಪ್ರಾಣಾಯಾಮಗಳನ್ನು ಮಾಡಿ, ಕರಿಯ ಎಳ್ಳಿನಿಂದ ಕೂಡಿದ ಏಳು ಬೊಗಸೆ ನೀರನ್ನು ದಾನಮಾಡುವ ಜಿತೇಂದ್ರಿಯನಾದ ಬ್ರಹ್ಮಚಾರಿಯು ಆತನ ಜೀವಿತಕಾಲದಲ್ಲಿ ಮಾಡಿದ ಪಾಪವೆಲ್ಲವನ್ನೂ ಒಡನೆಯೇ ಕಳೆದುಕೊಳ್ಳುವನು.

ಅಚ್ಛಿದ್ರಪದ್ಮಪತ್ರೇಣ ಸರ್ವರತ್ನೋದಕೇನ ತು ।
ತ್ರಿಧಾ ಯಸ್ತು ನರಃ ಸ್ನಾಯಾತ್ಸರ್ವಪಾಪೈಃ ಪ್ರಮುಚ್ಯತೇ ॥ ೨೭ ॥

ಅನ್ಯಚ್ಚ ತೇ ಪ್ರವಕ್ಷ್ಯಾಮಿ ಗುಹ್ಯಾದ್ಗುಹ್ಯತರಂ ಮುನೇ ।
ಕಾರ್ತಿಕೇಽಮಲಪಕ್ಷೇ ತು ಸ್ಮೃತಾ ಹ್ಯೇಕಾದಶೀ ತಿಥಿಃ ॥ ೨೮ ॥

ಭುಕ್ತಿಮುಕ್ತಿಪ್ರದಾ ಯಾ ತು ನಾಮ್ನಾ ಖ್ಯಾತಾ ಪ್ರಬೋಧಿನೀ ॥ ೨೯ ॥

ಯಾ ಸಾ ವಿಷ್ಣೋಃ ಪರಾ ಮೂರ್ತಿರವ್ಯಕ್ತಾನೇಕರೂಪಿಣೀ ।
ಸಾ ಕ್ಷಿಪ್ತಾ ಮಾನುಷೇ ಲೋಕೇ ದ್ವಾದಶೀ ಮುನಿಪುಂಗವ ॥ ೩೦ ॥

ಯೇ ಉಪೋಷ್ಯಂತಿ ವಿಧಿವನ್ನಾರಾಯಣಪರಾಯಣಾಃ ।
ನ ತೇಷಾಮಶುಭಂ ಕಿಂಚಿಜ್ಜನ್ಮಕೋಟಿಕೃತಂ ಮುನೇ ॥ ೩೧ ॥

---

೨೭. ರಂಧ್ರವಿಲ್ಲದ ತಾವರೆಯ ಎಲೆಯಲ್ಲಿ ಸರ್ವರತ್ನೋದಕವನ್ನು ತುಂಬಿ ಅದರಿಂದ ಮೂರುಸಾರಿ ಸ್ನಾನಮಾಡುವವರು ಸರ್ವಪಾಪಗಳಿಂದಲೂ ವಿಮುಕ್ತರಾಗುವರು.

೨೮–೨೯. ಮುನಿಯೇ, ರಹಸ್ಯವಾದುದರಲ್ಲಿಯೂ ಅತಿರಹಸ್ಯವಾದ ಬೇರೊಂದು ವಿಚಾರವನ್ನು ನಿನಗೆ ಹೇಳುತ್ತೇನೆ. ಕಾರ್ತಿಕಮಾಸದ ಶುಕ್ಲಪಕ್ಷದ ಉತ್ಥಾನೈಕಾದಶಿಯೆಂಬ ಹೆಸರಿನ ಏಕಾದಶಿಯು ಭುಕ್ತಿಪ್ರದವೂ, ಮುಕ್ತಿಪ್ರದವೂ ಆದುದೆಂದು ಹೇಳಿದೆ.

೩೦. ಅಲ್ಲದೆ ಅದರ ಮಾರನೆಯದಿನವಾದ ಉತ್ಥಾನದ್ವಾದಶಿಯೆಂಬುದು ವಿಷ್ಣುವಿನ ಅವ್ಯಕ್ತವಾದ ಅನೇಕ ಮೂರ್ತಿಗಳಲ್ಲಿ ಅತ್ಯುತ್ತಮ ಮೂರ್ತಿಯಾಗಿದೆ. ಮುನಿವರ್ಯನೇ, ಆ ದ್ವಾದಶೀಮೂರ್ತಿಯನ್ನು ಮನುಷ್ಯಲೋಕದಲ್ಲಿ ಪರಮಾತ್ಮನು ನೆಲೆಗೊಳಿಸಿರುವನು.

೩೧. ನಾರಾಯಣಪರಾಯಣರಾದ ಯಾರು ವಿಧಿಯಂತೆ ಆ ಏಕಾದಶಿಯಲ್ಲಿ ಉಪವಾಸಮಾಡುವರೋ ಅವರಿಗೆ ಕೋಟಿಜನ್ಮಗಳಲ್ಲಿ ಮಾಡಿದ ಪಾಪವೂ ಇಲ್ಲವಾಗುವುದು.

ಏಕಾದಶೀಂ ಸಮಾಶ್ರಿತ್ಯ ಪುರಾ ಪೃಷ್ಟೋ ಮಹೇಶ್ವರಃ |
ವಾರಾಹರೂಪೀ ಧರಯಾ ಸರ್ವಲೋಕಹಿತಾಯ ವೈ || ೩೨ ||

|| ಧರಣ್ಯುವಾಚ ||

ಅಸ್ಮಿನ್ಕಲಿಯುಗೇ ಘೋರೇ ನರಾಃ ಪಾಪರತಾಃ ಪ್ರಭೋ |
ಬ್ರಹ್ಮಸ್ವಹರಣೇ ಯುಕ್ತಾ ತಥಾ ಬ್ರಾಹ್ಮಣಘಾತಕಾಃ || ೩೩ ||

ಗುರುದ್ರೋಹರತಾ ದೇವ ಮಿತ್ರದ್ರೋಹರತಾಸ್ತಥಾ |
ಸ್ವಾಮಿದ್ರೋಹರತಾಶ್ಚೈವ ಪರದಾರಾಭಿಮರ್ಶಕಾಃ || ೩೪ ||

ಪರದ್ರವ್ಯಾಪಹರಣೇ ಸಂಸಕ್ತಾಶ್ಚ ಸುರೇಶ್ವರ |
ಅಭಕ್ಷ್ಯಭಕ್ಷಣರತಾ ವೇದಬ್ರಾಹ್ಮಣನಿಂದಕಾಃ || ೩೫ ||

ದಾಂಭಿಕಾ ಭಿನ್ನಮರ್ಯಾದಾ ನಾಯಮಸ್ತೀತಿ ವಾದಿನಃ |
ಅಸತ್ಪ್ರತಿಗ್ರಹೇ ಸಕ್ತಾ ಅಗಮ್ಯಾಗಮನೇ ರತಾಃ || ೩೬ ||

ಏತೈಶ್ಚಾನ್ಯೈಶ್ಚ ಪಾಪೈಶ್ಚ ಸಂಸಕ್ತಾ ಯೇ ನರಾ ವಿಭೋ |
ಕಿಮಾಸಾದ್ಯ ಗತಿರ್ದೇವ ತೇಷಾಂ ವದ ಸುರೇಶ್ವರ || ೩೭ ||

---

೩೨. ಪೂರ್ವದಲ್ಲಿ ಭೂದೇವಿಯು, ಸರ್ವಲೋಕಹಿತಾರ್ಥವಾಗಿ ಶ್ರೀ ವರಾಹರೂಪಿಯಾದ ಈಶ್ವರನನ್ನು ಏಕಾದಶಿಯ ವಿಚಾರವಾಗಿ ಪ್ರಶ್ನಿಸಿದಳು.

೩೩–೩೭. ಭೂದೇವಿ:— ಪ್ರಭೂ, ಸುರೇಶ್ವರಾ, ಘೋರವಾದ ಈ ಕಲಿಯುಗದಲ್ಲಿ ಮನುಷ್ಯರು ಪಾಪರತರಾಗಿ ಬ್ರಹ್ಮಸ್ವಾಪಹಾರಿಗಳೂ, ಬ್ರಾಹ್ಮಣ ಘಾತಕರೂ, ಗುರುದೇವ ಮಿತ್ರಸ್ವಾಮಿದ್ರೋಹಾಸಕ್ತರೂ, ಪರಸ್ತ್ರೀಗಾಮಿಗಳೂ, ಪರದ್ರವ್ಯಾಪಹಾರಾಸಕ್ತರೂ, ಅಭಕ್ಷ್ಯಭಕ್ಷಣನಿರತರೂ, ದೇವಬ್ರಾಹ್ಮಣದೂಷಕರೂ ದಾಂಭಿಕರೂ, ನಿಯಮವಿಲ್ಲದವರೂ, ದೇವರೇ ಇಲ್ಲವೆಂದು ವಾದಿಸುವವರೂ, ಅಸತ್ಪ್ರತಿಗ್ರಹಾಸಕ್ತರೂ, ಅಗಮ್ಯಾಗಮನರತರೂ ಆಗಿರುವರಲ್ಲದೆ ಇನ್ನೂ ಬೇರೆಯ ಪಾಪಗಳಿಂದಲೂ ಕೂಡಿದವರಾಗಿರುವರು. ವಿಭುವೇ, ದೇವ, ದೇವೇಶ್ವರ, ಅವರಿಗೆ ಗತಿಯೇನೆಂಬುದನ್ನು ಹೇಳು.

॥ ಶ್ರೀವರಾಹ ಉವಾಚ ॥

ಸಾಧು ದೇವಿ ಮಹಾಭಾಗೇ ಯತ್ತ್ವಂ ಪೃಷ್ಟೋಽಹಂ ವರಾನನೇ ।
ರಹಸ್ಯಂ ತೇ ಪ್ರವಕ್ಷ್ಯಾಮಿ ಲೋಕಾನಾಂ ಹಿತಕಾಮ್ಯಯಾ ॥ ೩೮ ॥

ಮಹಾಪಾತಕಯುಕ್ತಾ ಯೇ ನರಾಸ್ಸುಕೃತವರ್ಜಿತಾಃ ।
ತೇಷಾಂ ಮಯಾ ಹಿತಾರ್ಥಾಯ ನಿರ್ಮಿತಂ ತಚ್ಛೃಣುಷ್ವ ಮೇ ॥ ೩೯ ॥

ಯಾ ಸಾ ವಿಷ್ಣೋಃ ಪರಾ ಶಕ್ತಿರವ್ಯಕ್ತಾನೇಕರೂಪಿಣೀ ।
ಸಾ ಮರ್ತ್ಯೇ ನಿರ್ಮಿತಾ ಭೂಮೇ ದ್ವಾದಶೀರೂಪಧಾರಿಣೀ ॥ ೪೦ ॥

ತಾಮುಪೋಷ್ಯ ನರಾ ಭದ್ರೇ ಮಹಾಪಾಪರತಾಶ್ಚ ಯೇ ।
ಪುಣ್ಯಪಾಪವಿನಿರ್ಮುಕ್ತಾ ಗಚ್ಛಂತಿ ಪದಮವ್ಯಯಂ ॥ ೪೧ ॥

ಉಪಾಯೋಽತಃ ಪರೋ ನಾನ್ಯೋ ವಿದ್ಯತೇ ಹಿ ವಸುಂಧರೇ ।
ಏಕಾದಶೀಂ ವಿನಾ ಯೇನ ಸರ್ವಪಾಪಕ್ಷಯೋ ಭವೇತ್ ॥ ೪೨ ॥

---

೩೮. ಶ್ರೀವರಾಹ:— ಒಳ್ಳೆಯದು! ಮಹಾಭಾಗ್ಯೇ, ದೇವಿ, ಸುಂದರ ಮುಖೀ, ಲೋಕಹಿತಾರ್ಥವಾಗಿ ನೀನು ನನ್ನನ್ನು ಕೇಳಿದುದರಿಂದ, ನಿನಗೆ ರಹಸ್ಯವನ್ನು ಹೇಳುತ್ತೇನೆ.

೩೯. ಸುಕೃತವಿಲ್ಲದೆ ಮಹಾಪಾಪಯುಕ್ತರಾಗಿರುವ ಅಂತಹ ಮನುಷ್ಯರ ಹಿತಕ್ಕಾಗಿ ನಾನು ಸೃಷ್ಟಿಸಿರುವುದನ್ನು ಕೇಳು.

೪೦–೪೧ ಭೂಮೀ, ಅವ್ಯಕ್ತಳೂ, ಅನೇಕರೂಪಿಣಿಯೂ ಆದ ವಿಷ್ಣುವಿನ ಪರಾಶಕ್ತಿಯೇ, ಮನುಷ್ಯಲೋಕದಲ್ಲಿ ದ್ವಾದಶೀರೂಪಳಾಗಿ ನಿರ್ಮಿತಳಾಗಿರುವಳು. ಭದ್ರೇ, ಆದುದರಿಂದ ಏಕಾದಶಿಯದಿನ ಉಪವಾಸಮಾಡಿ ಆ ದ್ವಾದಶಿಯ ವ್ರತವನ್ನು ಮಾಡುವುದರಿಂದ ಮಹಾಪಾಪನಿರತರಾದವರು ಕೂಡ ಪುಣ್ಯಪಾಪ ವಿನಿರ್ಮುಕ್ತರಾಗಿ ನಾಶರಹಿತವಾದ ಮೋಕ್ಷಪದವನ್ನು ಪಡೆಯುವರು.

೪೨. ವಸುಂಧರೇ, ಸರ್ವಪಾಪಗಳನ್ನೂ ನಾಶಮಾಡುವ ಏಕಾದಶಿಯನ್ನು ಬಿಟ್ಟರೆ ಪಾಪಿಗಳಿಗೆ ಅದಕ್ಕಿಂತ ಉತ್ತಮವಾದ ಬೇರಾವ ಉಪಾಯವೂ ಇಲ್ಲ.

ಯಥಾ ಶುಕ್ಲಾ ತಥಾ ಕೃಷ್ಣಾ ಹ್ಯುಪೋಷ್ಯಾ ಸಾ ಪ್ರಯತ್ನತಃ ।
ಶುಕ್ಲಾ ಭಕ್ತಿಪ್ರದಾ ನಿತ್ಯಂ ಕೃಷ್ಣಾ ಮುಕ್ತಿಂ ಪ್ರಯಚ್ಛತಿ ॥ ೪೩ ॥

ತಸ್ಮಾತ್ಸರ್ವಪ್ರಯತ್ನೇನ ಕರ್ತವ್ಯಾ ದ್ವಾದಶೀ ಸದಾ ।
ಯದೀಚ್ಛೇದ್ವೈಷ್ಣವಂ ಲೋಕಂ ಗಂತುಂ ವೈ ಭೂತಧಾರಿಣಿ ॥ ೪೪ ॥

ಮನಸಾ ವಚಸಾ ಚೈವ ಕರ್ಮಣಾ ಸಮುಪಾರ್ಜಿತಂ ।
ಪಾಪಂ ಮಾಸಕೃತಂ ಪುಂಸಾಂ ದಹತ್ಯೇಕಾದಶೀ ಕೃತಾ ॥ ೪೫ ॥

ದಹಂತೀಹ ಪುರಾಣಾನಿ ಭೂಯೋ ಭೂಯೋ ವರಾನನೇ ।
ನ ಭಕ್ತ್ತೋವ್ಯಂ ನ ಭಕ್ತ್ತೋವ್ಯಂ ಸಂಪ್ರಾಪ್ತೇ ಹರಿವಾಸರೇ ॥ ೪೬ ॥

ಯದೀಚ್ಛೇಯುರ್ನರಾ ಗಂತುಂ ತದ್ವಿಷ್ಣೋಃ ಪರಮಂಪದಂ ।
ನ ಭೋಕ್ತವ್ಯಂ ನ ಭೋಕ್ತವ್ಯಂ ತದಾ ಕೇಶವವಾಸರೇ ॥ ೪೭ ॥

೪೩–೪೪ ಪ್ರಾಣ್ಯಾಶ್ರಯೇ, ಶುಕ್ಲಪಕ್ಷದ ಏಕಾದಶಿಯಲ್ಲಿ ಹೇಗೋ ಹಾಗೆಯೇ ಕೃಷ್ಣಪಕ್ಷದ ಏಕಾದಶಿಯಲ್ಲಿಯೂ ಪ್ರಯತ್ನದಿಂದ ಉಪವಾಸಮಾಡಬೇಕು. ಶುಕ್ಲೈಕಾದಶಿಯು ಭಕ್ತಿಯನ್ನೂ, ಕೃಷ್ಣೈಕಾದಶಿಯು ಮುಕ್ತಿಯನ್ನೂ ಕೊಡುವುದು. ಆದುದರಿಂದ ಮನುಷ್ಯರು ವೈಷ್ಣವಲೋಕವನ್ನು ಸೇರಲಿಚ್ಛಿಸುವುದಾದರೆ ಸರ್ವಪ್ರಯತ್ನದಿಂದಲೂ ಯಾವಾಗಲೂ ಏಕಾದಶೀದ್ವಾದಶೀವ್ರತವನ್ನಾಚರಿಸಬೇಕು.

೪೫. ಉಪವಾಸಮಾಡಿದ ಒಂದು ಏಕಾದಶಿಯು ಮನಸ್ಸಿನಿಂದಲೂ, ಮಾತಿನಿಂದಲೂ, ಕಾರ್ಯದಿಂದಲೂ ತಿಂಗಳಲ್ಲಿ ಮನುಷ್ಯರಿಗೆ ಸಂಭವಿಸಿದ ಪಾಪವನ್ನು ಸುಟ್ಟುಬಿಡುವುದು.

೪೬. ಸುಂದರಮುಖೀ, ಏಕಾದಶೀವ್ರತವು ತಿಂಗಳ ಪಾಪವನ್ನು ಮಾತ್ರವೇ ಅಲ್ಲದೆ ಹಿಂದಿನ ಪಾಪಗಳನ್ನೂ, ಮತ್ತೆಮತ್ತೆ ಸುಟ್ಟುಬಿಡುವುದು. ಆದುದರಿಂದ ಹರಿವಾಸರ ಅಥವಾ ಏಕಾದಶಿಯಲ್ಲಿ ಖಂಡಿತವಾಗಿಯೂ ಊಟಮಾಡಬಾರದು.

೪೭ ಮನುಷ್ಯರು ವಿಷ್ಣುವಿನ ಆಪರಮಪದಕ್ಕೆ ಹೋಗಲು ಬಯಸುವುದಾದರೆ ಕೇಶವ ವಾಸರ (ಏಕಾದಶಿ)ದಲ್ಲಿ ಸರ್ವಥಾ ಊಟಮಾಡಬಾರದು.

ಊರ್ಧ್ವಬಾಹುರ್ವಿರೌಮ್ಯೇಷ ಪ್ರಲಾಪಂ ಮೇ ಶೃಣುಷ್ವ ತಂ ।
ಆರಾಧಯಸ್ವ ವಿಶ್ವೇಶಮೇಕಾದಶ್ಯಾಮತಂದ್ರಿತಃ ॥ ೪೮ ॥

ನ ಶಂಖೇನ ಪಿಬೇತ್ತೋಯಂ ನ ಹನ್ಯಾನ್ಮತ್ಸ್ಯಸೂಕರೌ ।
ಏಕಾದಶ್ಯಾಂ ನ ಭುಂಜೀತ ಪಕ್ಷಯೋರುಭಯೋರಪಿ ॥ ೪೯ ॥

ಸ ಬ್ರಹ್ಮಹಾ ಸುರಾಪಶ್ಚ ಸ ಸ್ತೇಯೀ ಗುರುತಲ್ಪಗಃ ।
ಏಕಾದಶ್ಯಾಂ ತು ಯೋ ಭುಂಕ್ತೇ ಪಕ್ಷಯೋರುಭಯೋರಪಿ ॥ ೫೦ ॥

ಕಿಂ ತೇನ ನ ಕೃತಂ ಪಾಪಂ ದುರ್ವೃತ್ತೇನಾತ್ಮಘಾತಿನಾ ।
ಏಕಾದಶ್ಯಾಂ ವಿಶಾಲಾಕ್ಷಿ ಭುಕ್ತಂ ಯೇನ ವಿಜಾನತಾ ॥ ೫೧ ॥

ಏಕಾದಶೀಂ ಚ ಯಶ್ಶುಕ್ಲಾಮಸಮರ್ಥ ಉಪೋಷಿತುಂ ।
ತದಾ ನಕ್ತಂ ಪ್ರಕರ್ತವ್ಯಂ ತಥಾಯಾಚಿತಮೇವ ವಾ ॥ ೫೨ ॥

---

೪೮. ಕೈಯನ್ನು ಮೇಲೆತ್ತಿ ನಾನು ಸಾರಿಹೇಳುತ್ತೇನೆ. ನನ್ನ ಈ ಕೂಗನ್ನು ಕೇಳು. ಏಕಾದಶಿಯದಿನ ಬೇಸರಪಡದೆ ವಿಶ್ವೇಶನನ್ನು ಆರಾಧಿಸು

೪೯. ಶಂಖದಿಂದ ನೇರವಾಗಿ ನೀರನ್ನು ಕುಡಿಯಬಾರದು. ಮೀನನ್ನೂ ಹಂದಿಯನ್ನೂ ಕೊಲ್ಲಬಾರದು. ಎರಡು ಪಕ್ಷಗಳ ಏಕಾದಶಿಯಲ್ಲಿಯೂ ಊಟ ಮಾಡಬಾರದು.

೫೦ ಯಾವ ಪಕ್ಷದ ಏಕಾದಶಿಯಲ್ಲಾದರೂ ಯಾರು ಊಟಮಾಡುವನೋ ಅವನು ಬ್ರಹ್ಮಹತ್ಯವನ್ನೂ, ಸುರಾಪಾನವನ್ನೂ, ಕಳ್ಳತನವನ್ನೂ, ಗುರುಪತ್ನೀಗಮನವನ್ನೂ ಮಾಡಿದವನಾಗುವನು.

೫೧. ವಿಶಾಲಾಕ್ಷೀ, ತಿಳಿದೂ ಏಕಾದಶಿಯ ದಿನ ಊಟಮಾಡುವ ದುರ್ವೃತ್ತನಾದ ಆತ್ಮದ್ರೋಹಿಯು ಯಾವ ಪಾಪವನ್ನುತಾನೆ ಮಾಡಿದಂತಾಗುವುದಿಲ್ಲ!

೫೨. ಒಂದುವೇಳೆ ಆಕಸ್ಮಾತ್ತಾಗಿ ಶುಕ್ಲೈಕಾದಶಿಯಲ್ಲಿ ಪೂರ್ಣವಾಗಿ ಉಪವಾಸಮಾಡಲು ಅಶಕ್ತನಾಗಿದ್ದರೆ, ಆಗ ರಾತ್ರಿಯಾದರೂ ಉಪವಾಸಮಾಡಬೇಕು.

ಏಕಭಕ್ತೇನ ದಾನೇನ ಕರ್ತವ್ಯಂ ದ್ವಾದಶೀವ್ರತಂ ।
ನ ಕರೋತಿ ಯದಾ ಭೂಮೇ ವ್ರತಂವಾದಾನಮೇವವಾ ।
ಮಹಾಪಾತಕಭಾಗೀ ಸ್ಯಾತ್ಸುಗತಿಂ ನಾಪ್ನುಯಾತ್ಕ್ವಚಿತ್ ॥ ೫೩ ॥

ಉಪವಾಸಾಸಮರ್ಥಾನಾಂ ತಥೈವ ಪೃಥುಲೋಚನೇ ।
ಏಕಾ ಸಾ ದ್ವಾದಶೀ ಪುಣ್ಯಾ ಉಪೋಷ್ಯಾ ಸಾ ಪ್ರಬೋಧಿನೀ ॥ ೫೪ ॥

ತಸ್ಯಾಮಾರಾಧ್ಯ ವಿಶ್ವೇಶಂ ಜಗತಾಮೀಶ್ವರೇಶ್ವರಂ ।
ಪ್ರಾಪ್ನೋತಿ ಸಫಲಂ ಚೈತದ್ದ್ವಾದಶದ್ವಾದಶೀಫಲಂ ॥ ೫೫ ॥

ಪೂರ್ವಾಭದ್ರಪದಾಯೋಗೇ ಸೈವ ಯಾ ದ್ವಾದಶೀ ಭವೇತ್ ।
ಅತೀವ ಮಹತೀ ತಸ್ಯಾಂ ಸರ್ವಂ ಕೃತಮಿಹಾಕ್ಷಯಂ ॥ ೫೬ ॥

ಉತ್ತರಾಭದ್ರಸಹಿತಾ ಯದಿ ಸೈಕಾದಶೀ ಭವೇತ್ ।
ತದಾ ಕೋಟಿಗುಣಂ ಪುಣ್ಯಂ ಕೇಶವಾಲ್ಲಭತೇ ಫಲಂ ॥ ೫೭ ॥

---

೫೩. ನಿಶ್ಚಲವಾದಭಕ್ತಿಯಿಂದ ದಾನಮಾಡಿ, ದ್ವಾದಶೀವ್ರತವನ್ನು ಮಾಡಬೇಕು. ಭೂಮೀ, ಏಕಾದಶೀವ್ರತವನ್ನಾಗಲಿ, ದ್ವಾದಶಿಯ ದಾನವನ್ನಾಗಲಿ ಮಾಡದಿರುವರು ಮಹಾಪಾಪಕ್ಕೆ ಭಾಗಿಗಳಾಗುವರು. ಸುಗತಿಯನ್ನೆಂದೂ ಪಡೆಯುವುದಿಲ್ಲ.

೫೪-೫೫. ವಿಶಾಲಾಕ್ಷೀ, ಎಲ್ಲಾ ಏಕಾದಶಿಗಳಲ್ಲಿಯೂ ಉಪವಾಸಮಾಡಲಸಮರ್ಥರಾದವರು ಬಹು ಪುಣ್ಯಪ್ರದವಾದ ಉತ್ಥಾನದ್ವಾದಶಿಗೆ ಸೇರಿದ ಏಕಾದಶಿಯದಿನವಾದರೂ ಉಪವಾಸ ಮಾಡಬೇಕು. ಆ ಏಕಾದಶಿದ್ವಾದಶಿಗಳಲ್ಲಿ ಬ್ರಹ್ಮಾದಿದೇವತೆಗಳಿಗೂ ಈಶ್ವರನಾದ ಪರಮಾತ್ಮನನ್ನು ಆರಾಧಿಸಿ, ಮನುಷ್ಯರು ಹನ್ನೆರಡು ದ್ವಾದಶಿಯವ್ರತಫಲವನ್ನೂ ಪಡೆಯುವರು.

೫೬. ಉತ್ಥಾನದ್ವಾದಶಿಯು ಪೂರ್ವಾಭಾದ್ರಪದಾ ನಕ್ಷತ್ರದ ಸಂಬಂಧವುಳ್ಳದಾಗಿದ್ದರೆ ಅದು ಅತಿಮಹಿಮೆಯುಳ್ಳದಾಗುವುದು. ಆ ಏಕಾದಶಿದ್ವಾದಶಿಗಳಲ್ಲಿ ಮಾಡಿದುದೆಲ್ಲವೂ ಅಕ್ಷಯವಾಗುವುದು.

೫೭-೫೮ ಭೂತಧಾರಿಣೀ, ಉತ್ಥಾನೈಕಾದಶಿಯು ಉತ್ತರಾಭಾದ್ರಪದಾ ನಕ್ಷತ್ರದಿಂದ ಕೂಡಿದುದಾಗಿದ್ದರೆ ಅದರಲ್ಲಿ ಒಂದುಸಾರಿ ಕೇಶವನನ್ನು ಅರ್ಚಿಸಿದ

ಸಕೃದ್ದೇವೇರ್ಚಿತೇ ತಸ್ಯಾಂ ಲಭತೇ ಭೂಧಧಾರಿಣಿ ॥ ೫೮ ॥
ಯಥಾ ಪ್ರಬೋಧಿನೀ ಪುಣ್ಯಾ ತಥಾ ಯಸ್ಯಾಂ ಸ್ವಪೇದ್ಧರಿಃ ।
ಉಪೋಷ್ಯಾ ಹಿ ಮಹಾಭಾಗೇ ತ್ವನಂತಫಲದಾ ಹಿ ಸಾ ॥ ೫೯ ॥
ಶಯನೇ ಬೋಧನೇ ಚೈವ ಹರೇಸ್ತು ಪರಿವರ್ತನೇ ।
ಉಪೋಷ್ಯೈವ ವಿಧಾನೇನ ನರೋ ನಿರ್ಮಲತಾಂ ವ್ರಜೇತ್ ॥ ೬೦ ॥
ತಸ್ಮಾತ್ಸರ್ವಪ್ರಯತ್ನೇನ ದ್ವಾದಶೀಂ ಸಮುಪೋಷಯೇತ್ ।
ಯದೀಚ್ಛೇತ್ತು ವಿಶಾಲಾಕ್ಷಿ ಶಾಶ್ವತೀಂ ಗತಿಮಾತ್ಮನಃ ॥ ೬೧ ॥
ಏಕಾದಶೀ ಸೋಮಯುತಾ ಕಾರ್ತಿಕೇ ಮಾಸಿ ಭಾಮಿನಿ ।
ಉತ್ತರಾಭಾದ್ರಸಂಯೋಗೇ ಅನಂತಫಲದಾ ಹಿ ಸಾ ॥ ೬೨ ॥
ತಸ್ಯಾಂ ಯತ್ಕ್ರಿಯತೇ ಭದ್ರೇ ತದನಂತಗುಣಂ ಸ್ಮೃತಂ ॥ ೬೩ ॥

ಮಾತ್ರದಲ್ಲಿಯೇ ಆ ದೇವನಿಂದ ಕೋಟಿಗುಣಪುಣ್ಯಫಲವು ಅರ್ಚಿಸಿದವನಿಗೆ ಲಭಿಸುವುದು

೫೯. ಉತ್ಥಾನೈಕಾದಶಿದ್ವಾದಶಿಗಳು ಹೇಗೋ ಹಾಗೆಯೇ ಹರಿಯು ಮಲಗುವ ಆಶಾಢಶುಕ್ಲೈಕಾದಶಿದ್ವಾದಶಿಗಳೂ ಪುಣ್ಯಪ್ರದಗಳು. ಆದುದರಿಂದ ಅನಂತಫಲದಾಯಕವಾದ ಶಯನೈಕಾದಶಿಯಲ್ಲಿಯೂ ಉಪವಾಸಮಾಡಬೇಕು.

೬೦. ವಿಷ್ಣುವು ಶಯನಿಸುವ ಮತ್ತು ಏಳುವ ಏಕಾದಶಿಗಳಲ್ಲಿಯೂ, ಪರಿವರ್ತನೈಕಾದಶಿಯೆಂಬ, ಆ ದೇವನು ಹೊರಳಿಕೊಳ್ಳುವ ಭಾದ್ರಪದಶುಕ್ಲೈಕಾದಶಿಯಲ್ಲೂ ವಿಧಿಯಂತೆ ಉಪವಾಸಮಾಡಿ, ಮನುಷ್ಯರು ಪಾಪರಹಿತರಾಗಿ ನಿರ್ಮಲರಾಗುವರು.

೬೧. ವಿಶಾಲನೇತ್ರೇ, ಮನುಷ್ಯರು ತಮಗೆ ಶಾಶ್ವತಗತಿಯನ್ನು ಬಯಸುವುದಾದರೆ ಸರ್ವಪ್ರಯತ್ನದಿಂದಲೂ ಮೇಲೆ ಹೇಳಿದ ದ್ವಾದಶಿಗಳಿಗೆ ಸಂಬಂಧಿಸಿದ ಏಕಾದಶಿಗಳಲ್ಲಿ ಉಪವಾಸಮಾಡಬೇಕು.

೬೨-೬೩. ಭಾಮಿನೀ, ಕಾರ್ತಿಕಶುಕ್ಲೈಕಾದಶಿಯು ಸೋಮವಾರದಿಂದಲೂ, ಉತ್ತರಾಭಾದ್ರಪದಾ ನಕ್ಷತ್ರದಿಂದಲೂ ಕೂಡಿದುದಾಗಿದ್ದರೆ ಅದು ಅನಂತಫಲಪ್ರದವಾಗುವುದು. ಭದ್ರೇ, ಆ ಏಕಾದಶಿಯಲ್ಲಿ ಮಾಡುವ ಕರ್ಮವೂ ಅನಂತಗುಣವುಳ್ಳದಾಗುವುದು.

ಏಕಾದಶೀ ಭೌಮಯುತಾ ಯದಾ ಸ್ಯಾದ್ಭೂತಧಾರಿಣಿ ।
ಸ್ನಾತ್ವಾ ದೇವಂ ಸಮಭ್ಯರ್ಚ್ಯ ಪ್ರಾಪ್ನೋತಿ ಪರಮಂಫಲಂ ।
ಪ್ರಾಪ್ನೋತಿ ಸಕಲಂ ಚೈವ ದ್ವಾದಶದ್ವಾದಶೀಫಲಂ ॥ ೬೪ ॥

ಜಲಪೂರ್ಣಂ ತಥಾ ಕುಂಭಂ ಸ್ಥಾಪಯಿತ್ವಾ ವಿಚಕ್ಷಣಃ ।
ಪಂಚರತ್ನಸಮೋಪೇತಂ ಘೃತಪಾತ್ರಯುತಂ ತಥಾ ॥ ೬೫ ॥

ತಸ್ಯೋಪರಿ ನ್ಯಸೇನ್ಮತ್ಸ್ಯಸ್ವರೂಪಂ ತು ಜನಾರ್ದನಂ ।
ನಿಷ್ಕಮಾತ್ರಸುವರ್ಣೇನ ಘಟಿತಂ ತು ವರಾನನೇ ॥ ೬೬ ॥

ಪಂಚಾಮೃತೇನ ಸಂಸ್ನಾಪ್ಯ ಕುಂಕುಮೇನ ವಿಲೇಪಿತಂ ।
ಪೀತವಸ್ತ್ರಯುಗಚ್ಛನ್ನಂ ಛತ್ರೋಪಾನದ್ಯುಗಾನ್ವಿತಂ ॥ ೬೭ ॥

ಪೂಜಯೇತ್ಕಮಲೈರ್ದೇವಿ ಮದ್ಭಕ್ತಸ್ಸಂಯತೇಂದ್ರಿಯಃ ॥ ೬೮ ॥

---

೬೪. ಭೂತಧಾರಿಣಿ, ಕಾರ್ತಿಕ-ಶುಕ್ಲೈಕಾದಶಿಯು ಮಂಗಳವಾರವಾದರೆ ಆದಿನ ಸ್ನಾನಮಾಡಿ, ದೇವನನ್ನು ಚೆನ್ನಾಗಿ ಪೂಜಿಸಿ ಪರಮಫಲವನ್ನೂ, ಹನ್ನೆರಡು ದ್ವಾದಶಿಗಳ ಸಕಲಫಲವನ್ನೂ ಪಡೆಯುವನು.

೬೫-೬೬. ವರಾನನೇ, ತಿಳಿದವನು ಉತ್ಥಾನೈಕಾದಶಿಯೇ ಮೊದಲಾದುದರಲ್ಲಿ, ಪಂಚರತ್ನಗಳಿಂದಲೂ, ಶುದ್ಧೋದಕದಿಂದಲೂ, ಪೂರ್ಣವಾದ ತುಪ್ಪದ ಪಾತ್ರೆಯಿಂದ ಕೂಡಿದ ಕಲಶವನ್ನು ಸ್ಥಾಪಿಸಿ ಅದರಮೇಲೆ ನಿಷ್ಕದಷ್ಟು ಸುವರ್ಣದಿಂದ ಯುತನಾದ ಮತ್ಸ್ಯರೂಪನಾದ ನಾರಾಯಣನನ್ನು ಇಡಮಾಡಿಸಿಬೇಕು

೬೭-೬೮. ದೇವಿ, ನನ್ನ ಭಕ್ತನು ಜಿತೇಂದ್ರಿಯನಾಗಿ ಆ ದೇವನಿಗೆ ಪಂಚಾಮೃತದಿಂದ ಅಭಿಷೇಕಮಾಡಿ, ಕುಂಕುಮವನ್ನು ಲೇಪಿಸಿ, ಪೀತಾಂಬರಗಳೆರಡನ್ನು ಧರಿಸಿ, ಛತ್ರಿಯನ್ನೂ, ಪಾದುಕೆಗಳನ್ನೂ ಅರ್ಪಿಸಿ, ತಾವರೆಯ ಹೂಗಳಿಂದ ಪೂಜಿಸಬೇಕು.

ಮತ್ಸ್ಯಂ ಕೂರ್ಮಂ ವರಾಹಂ ಚ ನರಸಿಂಹಂ ಚ ವಾಮನಂ ।
ರಾಮಂ ರಾಮಂ ಚ ಕೃಷ್ಣಂ ಚ ಬುದ್ಧಂ ಚೈವ ಚ ಕಲ್ಕಿನಂ ।
ಏವಂ ದಶಾವತಾರಾಂಶ್ಚ ಪೂಜಯೇದ್ಭಕ್ತಿಸಂಯುತಃ ॥ ೬೯ ॥

ಪುಷ್ಪೈರ್ಧೂಪೈಸ್ತಥಾ ದೀಪೈರ್ನೈವೇದ್ಯೈರ್ವಿವಿಧೈರಪಿ ।
ಸಂಪೂಜ್ಯೈವಮಲಂಕಾರೈರ್ವಿವಿಧೈರುಪಶೋಭಿತಂ ॥ ೭೦ ॥

ರಾತ್ರೌ ಚೋತ್ಥಾಪನಂ ಕಾರ್ಯಂ ದೇವದೇವಸ್ಯ ಸುವ್ರತೇ ॥ ೭೧ ॥

ಪ್ರಭಾತೇ ವಿಮಲೇ ಸ್ನಾತ್ವಾ ಭಕ್ತ್ಯಾ ಸಂಪೂಜ್ಯ ಕೇಶವಂ ।
ಪುಷ್ಪಧೂಪಾದಿನೈವೇದ್ಯೈಃ ಫಲೈರ್ನಾನಾವಿಧೈಶ್ಶುಭೈಃ ।
ತತಸ್ತು ಪೂಜಯೇದ್ವಿದ್ವಾನಾಚಾರ್ಯಂ ಭಕ್ತಿಸಂಯುತಃ ॥ ೭೨ ॥

ಅಲಂಕಾರೋಪಹಾರೈಶ್ಚ ವಸ್ತ್ರಾದ್ಯೈಶ್ಚ ಸ್ವಶಕ್ತಿತಃ ।
ಪೂಜಯಿತ್ವಾ ವಿಧಾನೇನ ತಂ ದೇವಂ ಪ್ರತಿಪಾದಯೇತ್ ॥ ೭೩ ॥

---

೬೯. ಶ್ರೀಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ವಾಮನ, ಪರಶುರಾಮ, ಶ್ರೀರಾಮ, ಕೃಷ್ಣ, ಬುದ್ಧ, ಕಲ್ಕಿ ಎಂಬ ಪರಮಾತ್ಮನ ದಶಾವತಾರ ಮೂರ್ತಿಗಳನ್ನೂ ಹೀಗೆಯೇ ಭಕ್ತಿಯಿಂದ ಪೂಜಿಸಬೇಕು.

೭೦–೭೧. ಸುವ್ರತೇ, ಗಂಧಪುಷ್ಪಧೂಪದೀಪವಿವಿಧನೈವೇದ್ಯಾದಿಗಳಿಂದ ದೇವನನ್ನು ಪೂಜಿಸಿ, ವಿವಿಧಾಲಂಕಾರಗಳಿಂದ ಸಿಂಗರಿಸಿ, ಏಕಾದಶಿಯ ರಾತ್ರಿ ಉತ್ಥಾಪನೆಯನ್ನು ಮಾಡಬೇಕು.

೭೨. ಬೆಳಗಾಗುತ್ತಲೂ ಸ್ನಾನಮಾಡಿ, ಕೇಶವನನ್ನು ಭಕ್ತಿಯುಳ್ಳವನಾಗಿ ಶುಭಕರವಾದ ಗಂಧಪುಷ್ಪಧೂಪದೀಪನೈವೇದ್ಯನಾನಾವಿಧಫಲಾದಿಗಳಿಂದ ಪೂಜಿಸಿ, ಬಳಿಕ ಗುರುವನ್ನು ಭಕ್ತಿಯಿಂದ ಪೂಜಿಸಬೇಕು.

೭೩–೭೪. ಗುರುವನ್ನು ತನ್ನ ಶಕ್ತಿಗನುಸಾರವಾಗಿ ಅಲಂಕಾರೋಪಹಾರ ವಸ್ತ್ರಾದಿಗಳಿಂದ ವಿಧಿಪೂರ್ವಕವಾಗಿ ಪೂಜಿಸಿ, " ಜಗದಾದಿಯೂ, ಜಗದ್ರೂಪನೂ,

ಜಗದಾದಿರ್ಜಗದ್ರೂಪೋ ಜಗದಾದಿರನಾದಿವಾನ್ ।
ಜಗದಾದಿರ್ಜಗದ್ಯೋನಿಃ ಪ್ರೀಯತಾಂ ಮೇ ಜನಾರ್ದನಃ ॥ ೭೪ ॥

ಅನೇನೈವ ವಿಧಾನೇನ ಕುರ್ಯಾದೇಕಾದಶೀವ್ರತಂ ।
ತಸ್ಯ ಪುಣ್ಯಂ ಭವೇದ್ಯತ್ತು ತಚ್ಛೃಣುಷ್ವ ವಸುಂಧರೇ ॥ ೭೫ ॥

ಯದಿ ವಕ್ತ್ರಸಹಸ್ರಾಣಾಂ ಸಹಸ್ರಾಣಿ ಭವಂತಿ ತೈಃ ।
ಸಂಖ್ಯಾತುಂ ನೈವ ಶಕ್ಯಂತೇ ಪ್ರಬೋಧಿನ್ಯಾಸ್ತಥಾಗುಣಾಃ ॥ ೭೬ ॥

ತಥಾಪ್ಯುದ್ದೇಶಮಾತ್ರೇಣ ಶಕ್ತ್ಯಾ ವಕ್ಷ್ಯಾಮಿ ತಚ್ಛೃಣು ॥ ೭೭ ॥

ಚಂದ್ರತಾರಾರ್ಕಸಂಕಾಶಮಧಿಷ್ಠಾಯಾನುಜೀವಿಭಿಃ ।
ಸಹೈವ ಯಾನಮಾಗಚ್ಛೇನ್ಮಮ ಲೋಕಂ ವಸುಂಧರೇ ॥ ೭೮ ॥

ಅನಾದಿಯೂ, ಅನಂತನೂ, ಜಗತ್ಕಾರಣನೂ ಆದ ಜನಾರ್ದನನು ನನಗೆ ಪ್ರೀತನಾಗಲಿ" ಎಂಬರ್ಥದ ಮೇಲಿನ ೭೪ ನೇಯ ಶ್ಲೋಕವನ್ನು ಹೇಳಿ, ಆ ಮತ್ಸ್ಯದೇವನನ್ನು ಆ ಗುರುವಿಗೆ ಅರ್ಪಿಸಬೇಕು.

೭೫. ವಸುಂಧರೇ, ಈ (ಮೇಲೆಹೇಳಿದ) ವಿಧಿಯಿಂದ ದ್ವಾದಶೀವ್ರತವನ್ನು ಮಾಡಬೇಕು. ಆದರಿಂದ ಯಾವ ಪುಣ್ಯವೆಂಬುದನ್ನು ಕೇಳು.

೭೬–೭೭. ಉತ್ಥಾನೈಕಾದಶೀದ್ವಾದಶಿಗಳ ಗುಣಗಳನ್ನು ಹತ್ತುಲಕ್ಷ ಮುಖಗಳೂ, ಬಾಯಿಗಳೂ ಆದರೂ ಅವುಗಳಿಂದಲೂ ಗಣಿಸಲು ಸಾಧ್ಯವಾಗುವುದಿಲ್ಲ. ಆದರೂ ಉದ್ದೇಶಪೂರ್ವಕವಾಗಿ ಶಕ್ತಿಯಿರುವಷ್ಟು ಹೇಳುತ್ತೇನೆ. ಕೇಳು.

೭೮. ವಸುಂಧರೇ, ಈ ಏಕಾದಶೀವ್ರತವನ್ನಾಚರಿಸಿದವರು ಚಂದ್ರಸೂರ್ಯ ನಕ್ಷತ್ರಸದೃಶವಾದ ವಿಮಾನವನ್ನು ತಮ್ಮ ಆಶ್ರಿತರೊಡನೆಯೇ ಏರಿದವರಾಗಿ ನನ್ನ (ವಿಷ್ಣು) ಲೋಕವನ್ನು ಸೇರುವರು.

ತತಃ ಕಲ್ಪಸಹಸ್ರಾಂತೇ ಸಪ್ತದ್ವೀಪೇಶ್ವರೋ ಭವೇತ್ ।
ಆಯುರಾರೋಗ್ಯಸಂಪನ್ನೋ ಜನ್ಮಾತೀತೋ ಭವೇತ್ತತಃ ॥ ೭೯ ॥
ಬ್ರಹ್ಮಘ್ನಶ್ಚ ಸುರಾಪಶ್ಚ ಸ್ತೇಯೀ ಚ ಗುರುತಲ್ಪಗಃ ।
ಪಾಪಾನ್ಯೇತಾನಿ ಸರ್ವಾಣಿ ಶ್ರವಣೇನೈವ ನಾಶಯೇತ್ ॥ ೮೦ ॥

ಪಶ್ಯೇಚ್ಚ ಧೀಮಾನಧನೋಽಪಿ ಭಕ್ತ್ಯಾ ।
ಸ್ಪೃಶೇನ್ಮನುಷ್ಯಂ ಇಹ ಚಿಂತ್ಯಮಾನಃ ।
ಶೃಣೋತಿ ಭಕ್ತಸ್ಯ ಮತಿಂ ದದಾತಿ ।
ವಿಕಲ್ಮಷಸ್ಸೋಽಪಿ ದಿವಂ ಪ್ರಯಾತಿ ॥ ೮೧ ॥
ದುಸ್ಸ್ವಪ್ನಃ ಪ್ರಶಮಮುಪೈತಿ ಪಠ್ಯಮಾನೇ ।
ಮಾಹಾತ್ಮ್ಯೇ ಭವಭಯಹಾರಕೇ ನರಸ್ಯ ।
ಯಃ ಕುರ್ಯಾದ್ವ್ರತವರಮೇತದವ್ಯಯಾಯಾಃ ।
ಬೋಧಿನ್ಯಾಃ ಕಿಮುತ ಫಲಂತು ತಸ್ಯ ವಾಚ್ಯಂ ॥ ೮೨ ॥

---

೭೯. ಬಳಿಕ ಸಾವಿರಕಲ್ಪಗಳು ಕಳೆದಮೇಲೆ ಸಪ್ತದ್ವೀಪೇಶ್ವರರಾಗಿ ಆಯುರಾರೋಗ್ಯಾದಿಗಳಿಂದ ಸಂಪನ್ನರಾಗಿದ್ದು, ಕಡೆಯಲ್ಲಿ, ಜನ್ಮರಹಿತರಾಗಿ ಮುಕ್ತರಾಗುವರು.

೮೦. ಬ್ರಹ್ಮಹತ್ಯೆಮಾಡಿದವನೂ, ಮದ್ಯಪಾಯಿಯೂ, ಚೋರನೂ ಗುರುಪತ್ನೀಗಾಮಿಯೂ ಇದನ್ನು ಕೇಳುವುದರಿಂದಲೇ ಅವನ ಸರ್ವಪಾಪಗಳನ್ನೂ ಕಳೆದುಕೊಳ್ಳುವನು.

೮೧. ದರಿದ್ರನಾಗಿದ್ದು ಮೇಲೆ ಹೇಳಿದ ಮತ್ಸ್ಯಮೂರ್ತಿಯ ವ್ರತವನ್ನು ಮಾಡಿ ದಾನಮಾಡಲು ಅಶಕ್ತನಾಗಿರುವ ವಿದ್ವಾಂಸನೂ, ವ್ರತವನ್ನಾಚರಿಸುವ ಮತ್ತೊಬ್ಬನ ದರ್ಶನದಿಂದಲೂ, ಸ್ಪರ್ಶನದಿಂದಲೂ, ಸ್ಮರಣೆಯಿಂದಲೂ, ವ್ರತವಿಚಾರವನ್ನು ಕೇಳುವುದರಿಂದಲೂ, ಭಕ್ತನಾದವನಿಗೆ ವ್ರತವಿಚಾರವನ್ನು ಪದೇಶಿಸುವುದರಿಂದಲೂ, ಪಾಪರಹಿತನಾಗಿ ಸ್ವರ್ಗವನ್ನು ಪಡೆಯುವನು.

೮೨. ಸಂಸಾರಭಯವನ್ನು ಹೋಗಲಾಡಿಸುವ ಉತ್ಥಾನೈಕಾದಶೀವ್ರತದ ಮಹಿಮೆಯನ್ನು ಹೇಳಿದರೆ ಅಥವಾ ಓದಿದರೇ ಮನುಷ್ಯರ ದುಸ್ಸ್ವಪ್ನವು ನಾಶವಾಗುವುದು ಎಂದ ಬಳಿಕ ಅಕ್ಷಯವಾದ ಉತ್ಥಾನೈಕಾದಶೀದ್ವಾದಶೀವರ ವ್ರತವನ್ನು ಆಚರಿಸುವವರ ಪುಣ್ಯಫಲವನ್ನು ಹೇಳಬೇಕಾದುದೇನಿದೆ !

ತೇ ಧನ್ಯಾಸ್ತೇ ಕೃತಾರ್ಥಾಶ್ಚ ತೈರೇವ ಸುಕೃತಂ ಕೃತಂ ।
ತೈರಾತ್ಮಜನ್ಮ ಸಫಲಂ ಕೃತಂ ಯೇ ವ್ರತಕಾರಕಾಃ ॥ ೮೩ ॥

ನಾರಾಯಣಾಚ್ಯುತಾನಂತ ವಾಸುದೇವೇತಿ ಯೋ ನರಃ ।
ಸತತಂ ಕೀರ್ತಯೇದ್ಭೂಮೇ ಯಾತಿ ಮಲ್ಲಯತಾಂ ಪ್ರಿಯೇ ॥ ೮೪ ॥

ಕಿಂ ಪುನಶ್ಶ್ರದ್ಧಯಾ ಯುಕ್ತಾಃ ಪೂಜಯೇನ್ಮಾಮನನ್ಯಧೀಃ ।
ಗುರೂಪದಿಷ್ಟಮಾರ್ಗೇಣ ಯಾತಿ ಮಲ್ಲಯತಾಂ ನರಃ ॥ ೮೫ ॥

ತಸ್ಯ ಯಜ್ಞವರಾಹಸ್ಯ ವಿಷ್ಣೋರಮಿತತೇಜಸಃ ।
ಪ್ರಯಾಣಂ ಯೇ ಚ ಕುರ್ವಂತಿ ತೇ ಪೂಜ್ಯಾಸ್ಸತತಂ ಸುರೈಃ ॥ ೮೬ ॥

ತಸ್ಮಾತ್ಸುನಿಯತೈರ್ಭಾವ್ಯಂ ವೈಷ್ಣವಂ ಮಾರ್ಗಮಾಸ್ಪದಂ ।
ದುರ್ಲಭಂ ವೈಷ್ಣವತ್ವಂ ಹಿ ತ್ರಿಷು ಲೋಕೇಷು ಸುಂದರಿ ॥ ೮೭ ॥

---

೮೩. ಯಾರು ಉತ್ಥಾನೈಕಾದಶೀದ್ವಾದಶೀವ್ರತವನ್ನಾಚರಿಸುವರೋ ಅವರೇ ಧನ್ಯರು, ಅವರೇ ಕೃತಾರ್ಥರು, ಅವರೇ ಪುಣ್ಯಮಾಡಿದವರು ಅವರು ತಮ್ಮ ಜನ್ಮವನ್ನು ಸಫಲಮಾಡಿಕೊಂಡವರಾಗುವರು.

೮೪-೮೫. ಪ್ರಿಯೇ, ಭೂದೇವೀ, ಯಾವಾಗಲೂ 'ನಾರಾಯಣ, ಅಚ್ಯುತ, ಅನಂತ, ವಾಸುದೇವ ಎಂದು ಕೀರ್ತಿಸುವವರೇ ನನ್ನಲ್ಲಿ ಐಕ್ಯರಾಗುವರು. ಹೀಗಿರುವಾಗ ಅನನ್ಯಮನಸ್ಕರಾಗಿ ಆಸಕ್ತಿಯಿಂದ ಗುರುವು ಉಪದೇಶಿಸಿದ ಕ್ರಮದಲ್ಲಿ ನನ್ನನ್ನು ಪೂಜಿಸುವವರು ನನ್ನಲ್ಲಿ ಐಕ್ಯರಾಗುವರೆಂಬುದನ್ನು ಹೇಳುವುದೇನಿದೆ.

೮೬. ಅಮಿತತೇಜನಾದ ಶ್ರೀಯಜ್ಞವರಾಹವಿಷ್ಣುಕ್ಷೇತ್ರಯಾತ್ರೆಯನ್ನು ಮಾಡುವವರು ದೇವತೆಗಳಿಂದಲೂ ಸದಾ ಪೂಜ್ಯರಾಗುವರು.

೮೭. ಆದುದರಿಂದ ಉತ್ತಮನಿಯಮದಿಂದಿರುವುದು ವೈಷ್ಣವತ್ವಕ್ಕೆ ಆಸ್ಪದವಾದ ಮಾರ್ಗವಾಗಿದೆ. ಸುಂದರಿ, ವೈಷ್ಣವತ್ವವು ಮೂರುಲೋಕಗಳಲ್ಲಿಯೂ ದುರ್ಲಭವಾದುದಲ್ಲವೆ !

ಜನ್ಮಾಂತರಸಹಸ್ರೇಷು ಸಮಾರಾಧ್ಯ ವೃಷಧ್ವಜಂ ।
ವೈಷ್ಣವತ್ವಂ ಲಭೇತ್ಕಶ್ಚಿತ್ಸರ್ವಪಾಪಕ್ಷಯೇ ಸತಿ ॥ ೮೮ ॥
ಪಾಪಕ್ಷಯಮವಾಪ್ನೋತಿ ಚೇಶ್ವರಾರಾಧನೇ ಕೃತೇ ॥ ೮೯ ॥
ಜ್ಞಾನಮನ್ವಿಚ್ಛತಾ ರುದ್ರಂ ಪೂಜಯೇತ್ಪರಮೇಶ್ವರಂ ।
ಮಾಮಾರಾಧ್ಯ ತಥಾ ಯಾತಿ ತದ್ವಿಷ್ಣೋಃ ಪರಮಂಪದಂ ॥ ೯೦ ॥
ವೈಷ್ಣವಾ ಹಿ ಮಹಾಭಾಗಾಃ ಪುನಂತಿ ಸಕಲಂ ಜಗತ್ ॥ ೯೧ ॥
ಸಂಸ್ಮೃತಃ ಕೀರ್ತಿತೋ ವಾಪಿ ದೃಷ್ಟಃ ಸ್ಪೃಷ್ಟೋಽಪಿ ವಾ ಪ್ರಿಯೇ ।
ಪುನಾತಿ ಭಗವದ್ಭಕ್ತಶ್ಚಾಂಡಾಲೋಽಪಿ ಯದೃಚ್ಛಯಾ ॥ ೯೨ ॥
ಏತಜ್ಜ್ಞಾತ್ವಾ ತು ವಿದ್ವದ್ಭಿಃ ಪೂಜನೀಯೋ ಜನಾರ್ದನಃ ।
ವೇದೋಕ್ತವಿಧಿನಾ ಭದ್ರೇ ಆಗಮೋಕ್ತೇನ ವಾ ಸುಧೀಃ ॥ ೯೩ ॥

೮೮-೮೯. ವೃಷಭಧ್ವಜನಾದ ಶಿವನನ್ನು ಸಾವಿರಾರು ಜನ್ಮಾಂತರಗಳಲ್ಲಿ ಚೆನ್ನಾಗಿ ಆರಾಧಿಸಿ, ಸರ್ವಪಾಪವೂ ಕ್ಷಯವಾಗಲಾಗಿ ಸುಕೃತಿಯಾದವನು ವೈಷ್ಣವತ್ವವನ್ನು ಪಡೆಯುವನು. ವಿಷ್ಣುವನ್ನಾರಾಧಿಸಿದರೆ ಮನುಷ್ಯರು ಪಾಪವನ್ನು ಕಳೆದುಕೊಳ್ಳುವರು.

೯೦. ಜ್ಞಾನವನ್ನು ಬಯಸುವವನು ಪರಮೇಶ್ವರನಾದ ರುದ್ರನನ್ನು ಪೂಜಿಸಬೇಕು. ನನ್ನನ್ನು ಆರಾಧಿಸುವುದರಿಂದ ವಿಷ್ಣುವಾದ ನನ್ನ ಆ ಪರಮ ಪದವನ್ನು ಪಡೆಯುವನು.

೯೧-೯೨. ಮಹಾಭಾಗ್ಯಶಾಲಿಗಳೂ, ಪೂಜ್ಯರೂ ಆದ ವಿಷ್ಣುಭಕ್ತರು ಸಕಲಜಗತ್ತನ್ನೂ ಪವಿತ್ರಮಾಡುವರು. ಪ್ರಿಯೇ, ಆಕಸ್ಮಾತ್ತಾಗಿ ಸ್ಮರಿಸಿದ, ಕೀರ್ತಿಸಿದ, ನೋಡಿದ ಅಥವಾ ಮಾತನಾಡಿಸಿದ ಭಗವದ್ಭಕ್ತನಾದ ಚಂಡಾಲನು ಕೂಡ ಮನುಷ್ಯರನ್ನು ಪವಿತ್ರರನ್ನಾಗಿ ಮಾಡುವನು.

೯೩. ಭದ್ರೇ, ಇದನ್ನರಿತು, ಒಳ್ಳೆಯ ಬುದ್ಧಿಯುಳ್ಳ ವಿದ್ವಾಂಸರು ಜನಾರ್ದನನನ್ನು ವೇದೋಕ್ತವಾದ ಅಥವಾ ಆಗಮೋಕ್ತವಾದ ವಿಧಿಯಿಂದ ಪೂಜಿಸಬೇಕು.

॥ ಯಮ ಉವಾಚ ॥

ಏತಚ್ಛ್ರುತ್ವಾ ಮಹಾಭಾಗಾ ಧರಣೀ ಸಂಶಿತವ್ರತಾ ।
ಸಮಾರಾಧ್ಯ ಜಗನ್ನಾಥಂ ವಿಧಿನಾ ತಲ್ಲಯಂಗತಾ ॥ ೯೪ ॥

ಅತೋ ಯತ್ನೇನ ವೈ ಸಾಧ್ಯಂ ವೈಷ್ಣವತ್ವಂ ವಿಪಶ್ಚಿತಾ ॥ ೯೫ ॥

ಯೇ ವೈಷ್ಣವಾ ಮಹಾತ್ಮಾನೋ ವಿಷ್ಣುಪೂಜನತತ್ಪರಾಃ ।
ತೇಷಾಂ ನೈವಾಸ್ತ್ಯಯಂ ಲೋಕೋ ಯಾಂತಿ ತತ್ಪರಮಂ ಪದಂ ॥ ೯೬ ॥

ಯೇ ಸಕೃದ್ದ್ವಾದಶೀಮೇತಾಮುಪೋಷ್ಯಂತಿ ವಿಧಾನತಃ ।
ಪ್ರಬೋಧನಾಖ್ಯಾಂ ಸುಧಿಯಸ್ತೇ ಯಾಂತಿ ಪರಮಂಪದಂ ॥ ೯೭ ॥

ನ ಯಮಂ ಯಾತನಾದಂಡಾನ್ನರಕಂ ನ ಚ ಕಿಂಕರಾನ್ ।
ಪಶ್ಯಂತಿ ದ್ವಿಜಶಾರ್ದೂಲ ಇತಿ ಸತ್ಯಂ ಮಯೋದಿತಂ ॥ ೯೮ ॥

---

೯೪. ಯಮ—ಮಹಾಭಾಗ್ಯೆಯೂ, ಅತಿತೀಕ್ಷ್ಣವ್ರತೆಯೂ ಆದ ಭೂದೇವಿಯು ಶ್ರೀವರಾಹನ ಈ (ಮೇಲಿನ) ಮಾತನ್ನು ಕೇಳಿ, ಜಗನ್ನಾಥನಾದ ಆ ದೇವನನ್ನು ವಿಧಿಯಂತೆ ಚೆನ್ನಾಗಿ ಆರಾಧಿಸಿ, ಆ ಸ್ವಾಮಿಯಲ್ಲಿಯೇ ಐಕ್ಯಳಾದಳು.

೯೫. ಆದುದರಿಂದ ವಿದ್ವಾಂಸನಾದವನು ಪ್ರಯತ್ನದಿಂದ ವೈಷ್ಣವತೆಯನ್ನು ಸಾಧಿಸಬೇಕು.

೯೬. ವಿಷ್ಣುಪೂಜಾನಿರತರೂ, ಮಹಾತ್ಮರೂ ಆದ ವೈಷ್ಣವರಿಗೆ ಮತ್ತೆ ಈ ಲೋಕವಿಲ್ಲ. ಅವರು ಆ ಪರಮಪದವನ್ನು ಸೇರುವರು.

೯೭–೯೮. ದ್ವಿಜೋತ್ತಮನೇ, ಉತ್ಥಾನದ್ವಾದಶಿಗೆ ಸಂಬಂಧಿಸಿದ ಏಕಾದಶಿಯೊಂದರಲ್ಲಿ ವಿಧಿಯಂತೆ ಉಪವಾಸಮಾಡುವ ಪಂಡಿತರೂ ಪರಮಪದ (ಮೋಕ್ಷ)ವನ್ನು ಪಡೆಯುವರು. ಅವರು ಯಮನಾದ ನನ್ನನ್ನಾಗಲಿ, ಹಿಂಸಾದಂಡವನ್ನಾಗಲಿ, ನರಕವನ್ನಾಗಲಿ. ನನ್ನ ಕಿಂಕರರನ್ನಾಗಲಿ ನೋಡುವುದಿಲ್ಲವೆಂಬ ಸತ್ಯವನ್ನು ನಾನು ಹೇಳಿದ್ದೇನೆ

ಏತತ್ತೇ ಸರ್ವಮಾಖ್ಯಾತಂ ಯಥಾದೃಷ್ಟಂ ಯಥಾಶ್ರುತಂ ।
ಕಥಿತಂ ಮೇ ಮಹಾಭಾಗ ಯತ್ತ್ವಯಾ ಪರಿಪೃಚ್ಛಿತಂ ॥ ೯೯ ॥

ಸ್ವಯಂಭುವಾ ಯಥಾ ಪ್ರೋಕ್ತಂ ಗುಹ್ಯಾಖ್ಯಾನಂ ಮಹಾಮುನೇ।
ತತ್ತೇ ಸರ್ವಂ ಸಮಾಸೇನ ವ್ಯಾಖ್ಯಾತಂ ಧರ್ಮವತ್ಸಲ ॥ ೧೦೦ ॥

ಇತಿ ಶ್ರೀವರಾಹಪುರಾಣೇ ಪಾಪನಾಶೋಪಾಯವರ್ಣನಂ ನಾಮ
ಏಕಾದಶಾಧಿಕದ್ವಿಶತತಮೋಽಧ್ಯಾಯಃ

---

೯೯. ಪೂಜ್ಯನೇ, ನೀನು ಪ್ರಶ್ನಿಸಿದುದರಿಂದ ಇದೆಲ್ಲವನ್ನೂ ನಾನು ಹೇಗೆ ನೋಡಿರುವೆನೋ, ಕೇಳಿರುವೆನೋ ಹಾಗೆಯೇ ನಿನಗೆ ಹೇಳಿದುದಾಯಿತು.

೧೦೦ ಧರ್ಮವತ್ಸಲನಾದ ಮಹಾಮುನಿಯೇ, ಬ್ರಹ್ಮನು ಈ ರಹಸ್ಯ ವಿಚಾರವನ್ನು ಹೇಗೆ ಹೇಳಿದ್ದನೋ ಹಾಗೆಯೇ ನಾನು ಎಲ್ಲವನ್ನೂ ಸಂಗ್ರಹಿಸಿ, ನಿನಗೆ ಸರಿಯಾಗಿ ಹೇಳಿದ್ದೇನೆ.

ಅಧ್ಯಾಯದ ಸಾರಾಂಶ—

ಯಮರಾಜನು ನಾರದಮುನಿಗೆ ಹೇಳಿದ — ಚಾತುರ್ವರ್ಣ್ಯದವರೂ ಆಚರಿಸಬಹುದಾದ ಪಾಪಪರಿಹಾರಕವಾದ ಗೋಸೇವೆ, ಸೂರ್ಯನಮಸ್ಕಾರ, ಪುಣ್ಯತೀರ್ಥಸ್ನಾನ, ಏಕಾದಶೀವ್ರತ ಇವೇ ಮೊದಲಾದುವುಗಳ ವಿಚಾರವನ್ನೂ, ಮುಖ್ಯವಾಗಿ ಉತ್ಥಾನೈಕಾದಶೀದ್ವಾದಶೀವ್ರತವು ಸರ್ವಸುಲಭವೂ, ಪಾಪಪರಿಹಾರಕವೂ, ಮುಕ್ತಿಪ್ರದವೂ ಆದ ಉಪಾಯವೆಂಬ ವರಾಹೋಕ್ತಿಯನ್ನೂ, ಅದನ್ನಾಚರಿಸುವ ವಿಷ್ಣುಭಕ್ತರ ಮಹಿಮೆಯನ್ನೂ ನಚಿಕೇತನು ವಿವರವಾಗಿ ಋಷಿಗಳಿಗೆ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರಹನ್ನೊಂದನೆಯ ಅಧ್ಯಾಯ.

|| ಶ್ರೀ ||

ದ್ವಾದಶಾಧಿಕದ್ವಿಶತತಮೋಽಧ್ಯಾಯಃ

ಅಥ ಸಂಸಾರಚಕ್ರೋಪಾಖ್ಯಾನಪ್ರಬೋಧನೀಯವರ್ಣನಂ

|| ನಾರದ ಉವಾಚ ||

ಸಾಧು ಸಾಧು ಮಹಾರಾಜ ಸರ್ವಧರ್ಮವಿದಾಂ ವರ |
ತ್ವಯಾ ತು ಕಥಿತಾ ದಿವ್ಯಾ ಕಥೇಯಂ ಧರ್ಮಸಂಹಿತಾ |
ಅತೋಽಹಮಪಿ ಸುಪ್ರೀತಸ್ತ್ವವ ಧರ್ಮಪಥೇ ಸ್ಥಿತಃ || ೧ ||
ತವ ವಾಕ್ಯಾನ್ಯಿಸ್ಸೃತಾನಿ ಪ್ರೋಕ್ತಾನಿ ಚ ಶ್ರುತಾನಿ ಚ |
ತ್ವಯಾಹಂ ಚೈವ ರಾಜೇಂದ್ರ ಪೂಜಿತಶ್ಚ ವಿಶೇಷತಃ || ೨ ||
ಗಚ್ಛಾಮಿ ತ್ವರಿತೋ ಲೋಕಾನ್ಯತ್ರ ಮೇ ರಮತೇ ಮನಃ |
ಸ್ವಸ್ತಿ ತೇಽಸ್ತು ಮಹಾರಾಜ ಅಕಂಪ್ರೋ ಭವ ಸುವ್ರತ || ೩ ||

ಇನ್ನೂರಹನ್ನೆರಡನೆಯ ಅಧ್ಯಾಯ

ಸಂಸಾರಚಕ್ರೋಪಾಖ್ಯಾನ ಪ್ರಬೋಧನೀಯವರ್ಣನೆ.

೧. ನಾರದ—ಮಹಾರಾಜ, ಸರ್ವಧರ್ಮಜ್ಞೋತ್ತಮಾ, ಭಾಪು ! ಭಾಪು ! ನೀನು ಧರ್ಮಯುಕ್ತವಾದ ಈ ದಿವ್ಯಕಥೆಯನ್ನು ಹೇಳಿದೆ. ಆದುದರಿಂದ ನಾನೂ ಸುಪ್ರೀತನಾಗಿ ನಿನ್ನ ಧರ್ಮಮಾರ್ಗವನ್ನನುಸರಿಸುತ್ತೇನೆ.

೨-೩. ರಾಜೇಂದ್ರ, ನೀನು ಹೇಳಿದುವು ಶಾಸ್ತ್ರಗಳು. ಅವನ್ನು ನಾನು ಕೇಳಿದ್ದೇನೆ. ಅಲ್ಲದೆ ನಿನ್ನಿಂದ ನಾನು ವಿಶೇಷವಾಗಿ ಪೂಜಿತನಾಗಿದ್ದೇನೆ. ಇನ್ನು ನನ್ನ ಮನಸ್ಸಿಗೆ ಸಂತೋಷವಾಗುವ ಬೇರೆಯ ಲೋಕಗಳಿಗೆ ಬೇಗನೆ ಹೋಗುತ್ತೇನೆ. ಮಹಾರಾಜ, ನಿನಗೆ ಮಂಗಳವಾಗಲಿ. ಸುವ್ರತನೇ, ಭಯರಹಿತನಾಗು.

॥ ನಚಿಕೇತ ಉವಾಚ ॥

ಏವಮುಕ್ತ್ವಾ ತತೋ ಯಾತೋ ನಾರದೋ ಮುನಿಸತ್ತಮಃ ।
ತೇಜಸಾ ದ್ಯೋತಯನ್ಸರ್ವಂ ಗಗನಂ ಭಾಸ್ಕರೋ ಯಥಾ ॥ ೪ ॥

ವಿಚಚಾರ ದಿವಂ ರಮ್ಯಾಂ ಕಾಮಚಾರೋ ಮಹಾಮುನಿಃ ॥ ೫ ॥

ಗತೇ ತಸ್ಮಿಂಸ್ತು ಸುಚಿರಂ ಸ ರಾಜಾ ಧರ್ಮವತ್ಸಲಃ ।
ಮಾಂ ದೃಷ್ಟ್ವಾ ಸುಮನಾ ವಿಪ್ರಾ ವಾಕ್ಯೈಶ್ಚಿತ್ರೈಶ್ಚವಂದಯನ್ ॥ ೬ ॥

ಕೃತ್ವಾ ಪೂಜಾಂ ಚ ಮೇ ಯುಕ್ತಾಂ ಪ್ರಿಯಮುಕ್ತ್ವಾ ಚ ಸುವ್ರತ ।
ವಿಸರ್ಜಯಾಮಾಸ ವಿಭುಃ ಸುಪ್ರೀತೇನಾಂತರಾತ್ಮನಾ ॥ ೭ ॥

ಏತದ್ವಃ ಕಥಿತಂ ವಿಪ್ರಾಸ್ತಸ್ಯ ರಾಜ್ಞಃ ಪುರೋತ್ತಮೇ ।
ಯಥಾ ದೃಷ್ಟಂ ಶ್ರುತಂ ಚೈವ ಯಥಾ ಚೇಹಾಗತೋಽಹ್ಯಹಂ ॥ ೮ ॥

೪–೫. ನಚಿಕೇತ—ಮುನಿವರ್ಯನಾದ ನಾರದನು ಹೀಗೆ ಹೇಳಿ ಅಲ್ಲಿಂದ ಹೊರಟುಹೋದನು. ಬೇಕಾದಕಡೆ ಸಂಚರಿಸುವ ಆ ಮಹಾಮುನಿ ಸೂರ್ಯನಂತೆ ತನ್ನ ತೇಜಸ್ಸಿನಿಂದ ಆಕಾಶವೆಲ್ಲವನ್ನೂ ಪ್ರಕಾಶಗೊಳಿಸುತ್ತ ರಮ್ಯವಾದ ಸ್ವರ್ಗಕ್ಕೆ ತೆರಳಿದನು.

೬–೭. ಬ್ರಾಹ್ಮಣರೇ, ನಾರದನು ಹೊರಟು ಹೋಗಲಾಗಿ ಸುವ್ರತನೂ, ಧರ್ಮವತ್ಸಲನೂ ಆದ ಆ ಯಮರಾಜನು ಬಹಳಹೊತ್ತು ನನ್ನನ್ನು ನೋಡಿ, ಒಳ್ಳೆಯ ಮನಸ್ಸುಳ್ಳವನಾಗಿ ವಿಚಿತ್ರವಾದ ವಾಕ್ಯಗಳಿಂದ ಸ್ತುತಿಸುತ್ತ ಉಚಿತವಾದ ರೀತಿಯಲ್ಲಿ ಪೂಜಿಸಿ, ಹಿತೋಕ್ತಿಯನ್ನಾಡಿ ಬಹು ಪ್ರೀತಿಯುತವಾದ ಮನಸ್ಸಿನಿಂದ ಅಲ್ಲಿಂದ ಕಳುಹಿಸಿಕೊಟ್ಟನು.

೮. ಬ್ರಾಹ್ಮಣರೇ, ಆ ಯಮರಾಜನ ಪಟ್ಟಣದಲ್ಲಿ ನಾನು ನೋಡಿದುದನ್ನೂ, ಕೇಳಿದುದನ್ನೂ, ನಾನು ಇಲ್ಲಿಗೆ ಹೇಗೆ ಬಂದೆನೆಂಬುದನ್ನೂ ನಿಮಗೆ ಹೇಳಿದುದಾಯಿತು.

॥ ವೈಶಂಪಾಯನ ಉವಾಚ ॥

ತಸ್ಯ ತದ್ವಚನಂ ಶ್ರುತ್ವಾ ಹೃಷ್ಟಪುಷ್ಟಾಸ್ತಪೋಧನಾಃ ।
ಕೇಚಿದ್ವ್ಯಾಖ್ಯಾನಸಾಸ್ತತ್ರ ಕೇಚಿದಾಸನ್ನಿರಾಸನಾಃ ॥ ೯ ॥
ಸಾಧು ಸಾಧ್ವಿತಿ ಚೈವೋಕ್ತ್ವಾ ವಿಸ್ಮಯೋತ್ಫುಲ್ಲಲೋಚನಾಃ ।
ಯಾಯಾವರಾಸ್ತಥಾ ಚಾನ್ಯೇ ವಾನಪ್ರಸ್ಥಾಸ್ತಥಾಪರೇ ॥ ೧೦ ॥
ಶಾಲೀನಾಶ್ಚ ತಥಾ ಕೇಚಿತ್ಕಾ*ಪೋತೀಂ ವೃತ್ತಿಮಾಸ್ಥಿತಾಃ ।
ತಥಾ ಚಾನ್ಯೇ ಜಗುರ್ವೃತ್ತಿಂ ಸರ್ವಭೂತದಯಾಂ ಶುಭಾಂ ॥ ೧೧ ॥
ಶಿಲೋಂಛಾಶ್ಚ ತಥೈವಾನ್ಯೇ ರಾಷ್ಟ್ರಾದಾಶ್ಚ ಮಹೌಜಸಃ ।
ಅಪಾಕಪಾಚಿನಃ ಕೇಚಿತ್ಪಾಕಿನಶ್ಚ ಕ್ವಚಿತ್ಪುನಃ ॥ ೧೨ ॥
ನಾನಾವಿಧಿಧರಾಃ ಕೇಚಿಜ್ಜಿತಾತ್ಮಾನಸ್ತು ಕೇಚನ ।
ಸ್ಥಾನಮೌನವ್ರತಾಃ ಕೇಚಿತ್ತಥಾನ್ಯೇ ಜಲಶಾಯಿನಃ ॥ ೧೩ ॥

---

೯. ವೈಶಂಪಾಯನಮುನಿ:— ನಚಿಕೇತನ ಆ ಮಾತನ್ನು ಕೇಳಿ ತಪೋಧನರು ಹರ್ಷದಿಂದುಬ್ಬಿದವರಾದರು. ಕೆಲವರು ವಾನಪ್ರಸ್ಥರು ಸಂತೋಷದಿಂದ ನೆಗೆದರು.

೧೦. ಭಿಕ್ಷಾವೃತ್ತಿಯಿಂದಿರುವ ಮತ್ತೆಕೆಲವರು ವಾನಪ್ರಸ್ಥರು ಆಶ್ಚರ್ಯದಿಂದ ಅರಳಿದ ಕಣ್ಣುಳ್ಳವರಾಗಿ “ಸಾಧು! ಸಾಧು! (ಚೆನ್ನು ಚೆನ್ನು)” ಎಂದರು.

೧೧. ದಿಟ್ಟತನವಿಲ್ಲದ ಕೆಲವರು ಕಪೋತಗಳಂತೆ ಮೆತ್ತಗೆ ಹೂಂಕಾರದಿಂದ ತಮ್ಮ ಸಂತೋಷವನ್ನು ಸೂಚಿಸಿದರು. ಕೆಲವರು ಧೀರರು ಸರ್ವಭೂತದಯೆಯು ಶುಭಕರವಾದ ವೃತ್ತಿಯೆಂದು ಹಾಡಿದರು.

೧೨–೧೫. ಬಳಿಕ ಜಿತೇಂದ್ರಿಯರೂ, ಮಹೌಜಸರೂ, ಶಿಲೋಂಛಾದಿ ವೃತ್ತಿಗಳುಳ್ಳವರೂ ಆದ ಋಷಿಗಳು ನಾನಾವಿಧಿಗಳನ್ನನುಸರಿಸಿ ಕೆಲವರು ಸ್ಥಾನವ್ರತಿಗಳಾಗಿಯೂ, ಕೆಲವರು ಮೌನವ್ರತಿಗಳಾಗಿಯೂ, ಕೆಲವರು ಜಲಶಾಯಿಗಳಾಗಿಯೂ, ಕೆಲವರು ಮುಖವನ್ನು ಮೇಲಕ್ಕೆ ಮಾಡಿ ಮಲಗಿಯೂ, ಕೆಲವರು

---

* ಕಾಯೋತೀಂ (ಕಂ.)

ತಥೋರ್ಧ್ವಶಾಯಿಕಾಶ್ಚಾನ್ಯೇ ತಥಾನ್ಯೇ ಮೃಗಚಾರಿಣಃ ।
ಪಂಚಾಗ್ನಯಸ್ತಥಾ ಕೇಚಿತ್ಕೇಚಿತ್ಪರ್ಣಫಲಾಶಿನಃ ॥ ೧೪ ॥

ಅಬ್ಭಕ್ಷಾ ವಾಯುಭಕ್ಷಾಶ್ಚ ತಥಾನ್ಯೇ ಶಾಕಭಕ್ಷಿಣಃ ।
ಅತೋನ್ಯೇಽಪ್ಯತಿತೀವ್ರಂ ವೈ ತಪಶ್ಚೈವ ಪ್ರಪೇದಿರೇ ॥ ೧೫ ॥

ತಪಸೋನ್ಯನ್ನ ಚಾಸ್ತೀತಿ ಚಿಂತಯಿತ್ವಾ ಪುನಃ ಪುನಃ ।
ಜನ್ಮನೋ ಮರಣಾಚ್ಚೈವ ಕೇಚಿದ್ಧೀರಾ ಮಹರ್ಷಯಃ ॥ ೧೬ ॥

ತ್ಯಕ್ತ್ವಾ ಧರ್ಮಮಧರ್ಮಂ ಚ ಶಾಶ್ವತೀಂ ಧಿಯಮಾಸ್ಥಿತಾಃ ।
ಶ್ರುತ್ವಾ ಚೈವ ಕಥಾಮೇತಾಮೃಷಯೋ ದಿವ್ಯವರ್ಚಸಃ ॥ ೧೭ ॥

ಜಗೃಹುರ್ನಿಯಮಾಂಸ್ತಾಂಸ್ತಾನ್ಭಯಹೇತೋರನಿಂದಿತಾಃ ॥ ೧೮ ॥

ಮೃಗಗಳಂತೆ ಚರಿಸುವವರಾಗಿಯೂ, ಪಂಚಾಗ್ನಿಮಧ್ಯದಲ್ಲಿರುವವರಾಗಿಯೂ, ಕೆಲವರು ಪರ್ಣಾಹಾರಿಗಳಾಗಿಯೂ, ಕೆಲವರು ಫಲಾಹಾರಿಗಳಾಗಿಯೂ, ಕೆಲವರು ಕೇವಲ ಜಲಾಹಾರಿಗಳಾಗಿಯೂ, ಕೆಲವರು ಶಾಕಾಹಾರಿಗಳಾಗಿಯೂ, ಮತ್ತೆಕೆಲವರು ವಾಯುಭಕ್ಷರು ಅಥವಾ ನಿರಾಹಾರಿಗಳಾಗಿಯೂ ಅತಿತೀವ್ರವಾದ ತಪಸ್ಸನ್ನು ಆಚರಿಸಲಾರಂಭಿಸಿದರು.

೧೬–೧೮. ಜನನಮರಣಗಳಿಗೆ ಹೆದರದೆ ಧೀರರಾಗಿ ತಪಸ್ಸಿಗಿಂತಲೂ ಬೇರೆಯಾದುದಾವುದೂ ಇಲ್ಲವೆಂದು ಮತ್ತೆಮತ್ತೆ ಆಲೋಚಿಸಿ ಉಳಿದ ಧರ್ಮಗಳನ್ನು ಬಿಟ್ಟು ಅದರಲ್ಲೇ ಸ್ಥಿರಬುದ್ಧಿಯಿಂದಿದ್ದ ದಿವ್ಯತೇಜರೂ, ಅನಿಂದಿತರೂ ಆದ ಕೆಲವರು ಮಹರ್ಷಿಗಳು ನಚಿಕೇತನು ಹೇಳಿದ ಈ ಕಥೆಯನ್ನು ಕೇಳಿ ನರಕಭಯವನ್ನು ತಪ್ಪಿಸಿಕೊಳ್ಳಲು ಯಮನು ಹೇಳಿದ ಬೇರೆಬೇರೆಯ ನಿಯಮಗಳನ್ನು ಕೈಗೊಂಡರು.

***ಉದ್ದಾಲಕೋಽಪಿ ಧರ್ಮಾತ್ಮಾ ಪುತ್ರಂ ದೃಷ್ಟ್ವಾ ತಪೋಧನಂ ।**
ಪ್ರೀತ್ಯಾ ಪರಮಯಾ ಯುಕ್ತೋ ಧರ್ಮಮೇವಾನ್ವಚಿಂತಯತ್ ॥ ೧೯ ॥

ವೇದಾರ್ಥಮಮಿತಂ ವಿಷ್ಣುಂ ಶುದ್ಧಂ ಚಿನ್ಮಯಮೀಶ್ವರಂ ।
ಚಿಂತಯಾಮಾಸ ಧರ್ಮಾತ್ಮಾ ತಪಃ ಪರಮಮಾಸ್ಥಿತಃ ॥ ೨೦ ॥

ಇದಂ ತು ಪರಮಾಖ್ಯಾನಂ ಭಗವದ್ಭಕ್ತಿಕಾರಕಂ ।
ಶೃಣುಯಾಚ್ಛ್ರಾವಯೇದ್ವಾಪಿ ಸರ್ವಕಾಮಾನವಾಪ್ನುಯಾತ್ ॥ ೨೧ ॥

ಇತಿ ಶ್ರೀವರಾಹಪುರಾಣೇ ಪ್ರಾಗಿತಹಾಸೇ ಸಂಸಾರಚಕ್ರೋಪಾಖ್ಯಾನೇ ಪ್ರಬೋಧನೀಯಂ ನಾಮ ದ್ವಾದಶಾಧಿಕದ್ವಿಶತತಮೋಽಧ್ಯಾಯಃ

---

೧೯. ಧರ್ಮಾತ್ಮನಾದ ಉದ್ದಾಲಕನೂ, ಯಮಲೋಕದಿಂದ ಬಂದು' ಅಲ್ಲಿನ ವಿಚಾರವನ್ನೆಲ್ಲಾ ತಿಳಿಸಿದ ತಪೋಧನನಾದ ಮಗನನ್ನು ನೋಡಿ, ಪರಮ ಪ್ರೀತಿಯುಳ್ಳವನಾಗಿ, ಧರ್ಮವನ್ನೇ ಆಲೋಚಿಸುತ್ತಿದ್ದನು.

೨೦. ಆ ಧರ್ಮಾತ್ಮನು ಪರಮತಪಸ್ಸಿನಲ್ಲಿ ನೆಲಸಿ, ವೇದಪ್ರತಿಪಾದ್ಯನೂ, ಅಪ್ರಮೇಯನೂ, ಶುದ್ಧನೂ, ಚಿನ್ಮಯನೂ, ಈಶ್ವರನೂ ಆದ ವಿಷ್ಣುವನ್ನು ಧ್ಯಾನಿಸುತ್ತಿದ್ದನು.

೨೧. ಭಗವದ್ಭಕ್ತಿಯನ್ನುಂಟುಮಾಡುವ ಈ ಪರಮಾಖ್ಯಾನವನ್ನು ಕೇಳು ವವರೂ, ಇತರರಿಗೆ ಕೇಳಿಸುವವರೂ, ಸರ್ವೇಷ್ಟಾರ್ಥಗಳನ್ನೂ ಪಡೆಯುವರು.

ಅಧ್ಯಾಯದ ಸಾರಾಂಶ—

ಈ ಅಧ್ಯಾಯದಲ್ಲಿ ಯಮಲೋಕದಿಂದ ನಾರದನು ಹೊರಟುಹೋದುದು, ಯಮನು ನಚಿಕೇತನನ್ನು ಗೌರವಿಸಿ ಹಿಂದಕ್ಕೆ ಕಳುಹಿಸಿದ ಬಗೆ, ನಚಿಕೇತನ ಭಾಷಣವನ್ನು ಕೇಳಿದ ಋಷಿಗಳೇ ಮೊದಲಾದವರ ಸ್ಥಿತಿ ಇವೇ ಮೊದಲಾದು ವನ್ನು ತಿಳಿಸಿದೆ.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರಹನ್ನೆರಡನೆಯ ಅಧ್ಯಾಯ

---

* ನಾಚಿಕೇತೋಽಪಿ.

॥ ಶ್ರೀಃ ॥

ತ್ರಯೋದಶಾಧಿಕದ್ವಿಶತತಮೋಽಧ್ಯಾಯಃ
ಅಥ ಗೋಕರ್ಣೇಶ್ವರಮಾಹಾತ್ಮ್ಯಂ

॥ ಸೂತ ಉವಾಚ ॥

ಪುರಾ ದೇವೈರ್ವಿನಿಹತೇ ಸಂಗ್ರಾಮೇ ತಾರಕಾಮಯೇ ।
ಅತ್ಯುಚ್ಛ್ರಿತೇ ಪ್ರತಿಬಲೇ ದಾನವಾನಾಂ ಬಲೇ ತಥಾ ॥ ೧ ॥

ಸಹಸ್ರಾಕ್ಷೇ ಲಬ್ಧಪದೇ ಕ್ಷೀಣಶತ್ರೌ ಗತಾಸ್ಪದೇ ।
ಸಮ್ಯಕ್ಪ್ರಸೂತಿಮಾಪನ್ನೇ ತ್ರೈಲೋಕ್ಯೇ ಸಚರಾಚರೇ ॥ ೨ ॥

ಶೃಂಗೇ ಚೈವಾಚಲೇಂದ್ರಸ್ಯ ಮೇರೋಸ್ಸ್ವರ್ಣಹಿರಣ್ಮಯೇ ।
ಮಣಿವಿದ್ರುಮವಿದ್ಧೇ ಚ ವಿಪುಲೇ ಪಂಕಜಾಸನೇ ॥ ೩ ॥

ಇನ್ನೂರಹದಿಮೂರನೆಯ ಅಧ್ಯಾಯ
ಗೋಕರ್ಣೇಶ್ವರಮಹಿಮೆ.

೧-೨. ಪೂರ್ವದಲ್ಲಿ ದೇವತೆಗಳಿಗೂ ತಾರಕಾಸುರನಿಗೂ ನಡೆದ ಯುದ್ಧದಲ್ಲಿ ದೇವವಿರೋಧಿಗಳಾದ ದಾನವರ ಸೇನಾಬಲವು ಅತ್ಯಧಿಕವಾಗಿದ್ದರೂ ದೇವತೆಗಳು ಅವರನ್ನು ನಾಶಗೊಳಿಸಿ ತಾರಕನನ್ನೂ ಸಂಹರಿಸಿದ ಬಳಿಕ ದೇವೇಂದ್ರನು ತನ್ನ ಪದವಿಯನ್ನು ಪಡೆದು ಸುಖದಿಂದಿರುತ್ತಿರಲು ಚರಾಚರಗಳಿಂದ ಕೂಡಿ ಮೂರುಲೋಕವೂ ಚೆನ್ನಾಗಿ ಪ್ರಜಾಪೂರ್ಣವಾಗಿದ್ದಿತು.

೩-೫. ಆಗ ಪೂರ್ಣವಾಗಿ ಸುವರ್ಣಮಯವೂ, ಪರ್ವತೋತ್ತಮವೂ ಆದ ಮೇರುವಿನ ರತ್ನಖಚಿತವೂ, ವಿಸ್ತಾರವೂ ಆದ ಶಿಖರದಲ್ಲಿ ಕಮಲಪೀಠದ

ಸುಖೋಪವಿಷ್ಟಮೇಕಾಗ್ರಂ ಸ್ಥಿರಚಿತ್ತಂ ಕೃತೇಕ್ಷಣಂ ।
ನಿವೃತ್ತಕಾರ್ಯಂ ಮುದಿತಂ ಸೂರ್ಯವೈಶ್ವಾನರದ್ಯುತಿಂ ॥ ೪ ॥

ಪ್ರಣಮ್ಯ ಮೂರ್ಧ್ನಾ ಚರಣಾವುಪಗೃಹ್ಯ ಸಮಾಹಿತಃ ।
ಬ್ರಹ್ಮಾಣಂ ಪರಿಪಪ್ರಚ್ಛ ಕುಮಾರೋ ನತಿಪೂರ್ವಕಃ ॥ ೫ ॥

॥ ಸನತ್ಕುಮಾರ ಉವಾಚ ॥

ಭಗವನ್ ಶ್ರೋತುಮಿಚ್ಛಾಮಿ ಪುರಾಣಮೃಷಿಸಂಸ್ತುತಂ ।
ಪುರಾಣಂತು ಮಹಾಭಾಗ ತ್ವತ್ತಸ್ತತ್ತ್ವವಿದಾಂ ವರ ॥ ೬ ॥

ಕಥಮುತ್ತರಗೋಕರ್ಣಂ ದಕ್ಷಿಣಂ ಚ ಕಥಂ ವಿಭೋ ।
ಶೃಂಗೇಶ್ವರಸ್ಯ ಪರಮಂ ಕಥಂ ಸಮ್ಯಕ್ಪ್ರತಿಷ್ಠಿತಂ ॥ ೭ ॥

ಕ್ಷೇತ್ರಸ್ಯ ಕಿಂ ಪ್ರಮಾಣಂ ಸ್ಯಾತ್ಕಿಂ ಚ ತೀರ್ಥಫಲಂ ಸ್ಮೃತಂ ।
ಕಥಂ ಪಶುಪತಿಸ್ತತ್ರ ಭಗವಾನ್ಮೃಗರೂಪಧೃಕ್ ॥ ೮ ॥

ಮೇಲೆ, ತನ್ನ ಕಾರ್ಯವನ್ನು ನೆರವೇರಿಸಿ, ಸುಖದಿಂದ ಕುಳಿತು ಏಕಾಗ್ರಸ್ಥಿರ ಚಿತ್ತನೂ, ಸಂತೋಷವುಳ್ಳವನೂ ಆಗಿ ತನ್ನನ್ನು ನೋಡಿದ ಸೂರ್ಯಾಗ್ನಿಸಮ ತೇಜನಾದ ಬ್ರಹ್ಮನನ್ನು ಆತನ ಪಾದಗಳ ಮೇಲೆ ಶಿರವನ್ನಿಟ್ಟು ವಂದಿಸಿದ ಬ್ರಹ್ಮ ಪುತ್ರನಾದ ಸನತ್ಕುಮಾರನು, ವಿನಯಸಮಾಧಾನಗಳಿಂದ ಕೇಳಿದನು.

೬. ಸನತ್ಕುಮಾರ:— ತತ್ವಜ್ಞೋತ್ತಮನೂ, ಪೂಜ್ಯನೂ ಆದ ಭಗವಂತನೇ, ಪುರಾಣವು ಋಷಿಸ್ತುತವಾದುದಲ್ಲವೆ! ಅದನ್ನು ನಾನು ಕೇಳಲಿಷ್ಟ ಪಡುತ್ತೇನೆ.

೭–೮. ವಿಭುವೇ, ಉತ್ತಮವಾದ ಉತ್ತರಗೋಕರ್ಣಕ್ಷೇತ್ರವೂ, ದಕ್ಷಿಣ ಗೋಕರ್ಣಕ್ಷೇತ್ರವೂ ಹೇಗೆ ಚೆನ್ನಾಗಿ ಪ್ರತಿಷ್ಠಿತವಾಯಿತು? ಶೃಂಗೇಶ್ವರಕ್ಷೇತ್ರದ ಪ್ರಮಾಣವೇನು? ಅಲ್ಲಿನ ತೀರ್ಥ ಫಲವೇನು? ಈಶ್ವರನು ಆ ಕ್ಷೇತ್ರದಲ್ಲಿ ಹೇಗೆ ಮೃಗರೂಪವನ್ನು ಧರಿಸಿದ್ದನು?

ಸರ್ವೈಸ್ತ್ವತ್ಪ್ರಮುಖೈರ್ದೇವೈಃ ಕಥಮಾಸಾದಿತಂ ಪ್ರಭೋ ।
ಮೃಗರೂಪಂ ಕಥಂ ಚಾಸ್ಯ ಶರೀರಂ ಕ್ವ ಪ್ರತಿಷ್ಠಿತಂ ॥ ೯ ॥

ಯಥಾ ಯತ್ರ ಚ ಯಸ್ತತ್ರ ವಿಧಿಸ್ಸಮ್ಯಗನುಷ್ಠಿತಃ ।
ತತ್ಸರ್ವಂ ನಿಖಿಲೇನಾಶು ಬ್ರೂಹಿ ಮೇ ವಾಗ್ವಿದಾಂ ವರ ॥ ೧೦ ॥

ಏವಮುಕ್ತಸ್ಸ ಭಗವಾನ್ಬ್ರಹ್ಮಾ ಬ್ರಹ್ಮವಿದಾಂ ವರಃ ।
ಉವಾಚ ತಸ್ಮೈ ಪುತ್ರಾಯ ಗುಹ್ಯಮೇತತ್ಪುರಾತನಂ ॥ ೧೧ ॥

॥ ಬ್ರಹ್ಮೋವಾಚ ॥

ಶೃಣು ವತ್ಸ ಮಹಾಭಾಗ ಯಥಾತತ್ತ್ವಂ ಬ್ರವೀಮಿ ತೇ ।
ಪುರಾಣಮೇತದ್ಬ್ರಹ್ಮರ್ಷೇ ಸರಹಸ್ಯಂ ಯಥಾಶ್ರುತಂ ॥ ೧೨ ॥

ಅಸ್ತಿ ಭೂಧರರಾಜಸ್ಯ ಮಂದರಸ್ಯೋತ್ತರೇ ಶುಚೌ ।
ಮುಂಜವಾನ್ನಾಮ ಶಿಖರೀ ನಂದನೋಪವನದ್ಯುತಿಃ ॥ ೧೩ ॥

---

೯. ಮೃಗರೂಪಧರನಾದ ಆತನ ದೇಹವು ಎಲ್ಲಿದ್ದುದು ಹೇಗೆ ನಿನ್ನನ್ನು ಮುಂದಿಟ್ಟುಕೊಂಡು ಹೋದ ದೇವತೆಗಳಿಗೆ ಲಭಿಸಿತು ?

೧೦. ನೀವು ಎಲ್ಲೆಲ್ಲಿ ಯಾವಯಾವ ಉತ್ತಮವಿಧಿಯನ್ನು ಹೇಗೆ ಅನುಸರಿಸಿದಿರಿ ? ವಾಗ್ಮಿವರ್ಯನೇ, ಅದೆಲ್ಲವನ್ನೂ ನನಗೆ ಬೇಗನೆ ಹೇಳು.

೧೧. ಸನತ್ಕುಮಾರನು ಹಾಗೆ ಕೇಳಲು ಬ್ರಹ್ಮಜ್ಞೋತ್ತಮನೂ, ಪೂಜ್ಯನೂ ಆದ ಚತುರ್ಮುಖಬ್ರಹ್ಮನು ತನ್ನ ಪುತ್ರನಾದ ಆತನಿಗೆ ಪುರಾತನವಾದ ಈ (ಮುಂದಿನ) ರಹಸ್ಯವನ್ನು ಹೇಳಿದನು.

೧೨. ಬ್ರಹ್ಮ:— ಮಹಾಭಾಗ್ಯ, ವತ್ಸ, ಬ್ರಹ್ಮರ್ಷೀ, ರಹಸ್ಯವಾಗಿರುವ ಈ ಪುರಾಣವನ್ನು ನಿಜವಾಗಿ ನಾನು ಕೇಳಿಯೂ ನೋಡಿಯೂ ಇರುವಂತೆ ನಿನಗೆ ಹೇಳುತ್ತೇನೆ. ಕೇಳು.

೧೩. ಪರ್ವತರಾಜನೆನಿಸಿಕೊಂಡಿರುವ ಮಂದರದ ಉತ್ತರದ ಪರಿಶುದ್ಧವಾದೆಡೆಯಲ್ಲಿ ನಂದನವನದಂತೆ ಹೊಳೆಯುವ ಮುಂಜವಂತನೆಂಬ ಹೆಸರಿನ ಪರ್ವತವಿದೆ.

ವಜ್ರಸ್ಫಟಿಕಪಾಷಾಣಃ ಪ್ರವಾಲಾಂಕುರಶರ್ಕರಃ ।
ನೀಲಾಮಲಶಿಲಾವರ್ಣೋ ಗುಹಾನಿರ್ಝರಕಂದರಃ ॥ ೧೪ ॥

ವಿಚಿತ್ರಕುಸುಮೋಪೇತೈರ್ಲತಾಮಂಜರಿಧಾರಿಭಿಃ ।
ರೇಜೇ ಯಃ ಪ್ರಾಂಶುಭಿಶ್ಶೃಂಗೈರುಲ್ಲಿಖದ್ಭಿರಿವಾಂಬರಂ ॥ ೧೫ ॥

ದರ್ಯಸ್ತತ್ರಾಧಿಕಂ ರೇಜುರ್ನಾಧಾತುಪರಿಸ್ರವೈಃ ।
ಶಿಲೀಂಧ್ರಕುಸುಮೋಪೇತಾಶ್ಚಿತ್ರಿತಾ ಇವ ಸರ್ವತಃ ॥ ೧೬ ॥

ತತ್ರ ಕೇತಕಿಖಂಡಾಶ್ಚ ಕುಂದಖಂಡಾಶ್ಚ ಪುಷ್ಪಿತಾಃ ।
ಉನ್ಮೀಲಿತಾ ಇವಾಭಾಂತಿ ಧಾತಕೀವನರಾಜಿಭಿಃ ॥ ೧೭ ॥

ಭಿನ್ನೇಂದ್ರನೀಲವಿಮಲೈರ್ಧೌತೈಃ ಪ್ರಸ್ರವಣಾಂಬುಭಿಃ ।
ಚಿತ್ರೈಃ ಕುಸುಮಸಂಛನ್ನೈಃ ಶಿಲಾಪ್ರಸ್ತರವಿಸ್ತರೈಃ ॥ ೧೮ ॥

೧೪-೧೫. ಅದು ವಜ್ರದ ಹರಳುಗಲ್ಲುಗಳೂ, ಸಣ್ಣಸಣ್ಣ ಹವಳಗಳೆಂಬ ಮರಳೂ, ಶುದ್ಧವಾದ ನೀಲಮಣಿವರ್ಣದ ಗುಹೆಗಳೂ, ಝರಿಗಳೂ ಉಳ್ಳುದಾಗಿ ವಿಚಿತ್ರವಾದ ಹೂಗೊಂಚಲುಗಳಿಂದ ಕೂಡಿದ ಬಳ್ಳಿಗಳ ಪೊದೆಗಳುಳ್ಳುವಾಗಿ ಆಕಾಶವನ್ನು ಚುಚ್ಚುವಂತೆ ಇರುವ ಉನ್ನತವಾದ ಶಿಖರಗಳಿಂದ ಹೊಳೆಯುತ್ತಿರುವುದು.

೧೬. ಎಲ್ಲಾ ಕಡೆಯೂ ಜಾಲಾರಿಹೂಗಳಿಂದ ಕೂಡಿ ಚಿತ್ರಿತವಾದಂತಿರುವ ಬೆಟ್ಟದ ಗುಹೆಗಳು ನಾನಾವಿಧವಾದ ಧಾತುವಸ್ತುಗಳ ಒರತೆಗಳಿಂದ ಅಧಿಕವಾಗಿ ಹೊಳೆಯುತ್ತಿರುವುವು.

೧೭. ಅಲ್ಲಿ ಹೂಬಿಟ್ಟಿರುವ ಕೇದಗೆ (ತಾಳೆ)ಯು ಮತ್ತು ಮೊಲ್ಲೆಯ ಪೊದೆಗಳೂ, ಧಾತಕೀ (ಆರೆ) ವನಗಳ ಸಾಲುಗಳೂ, ಕಣ್ಣುಗಳನ್ನು ತೆರೆದಿರುವಂತೆ ಹೊಳೆಯುತ್ತಿವೆ.

೧೮-೨೦. ಉತ್ತಮವಾದ ಆ ಪರ್ವತವು ಒಡೆದ ಇಂದ್ರನೀಲಮಣಿಯೊಳ ಭಾಗದಂತೆ ಹೊಳೆಯುವ ಶುದ್ಧವಾದ ಬೆಟ್ಟಜಾಗುನೀರಿನಿಂದಲೂ, ವಿಚಿತ್ರವಾದ ಹೂಗಳು ಹರಡಿರುವುದರಿಂದ (ಇಂದ್ರಚಾಪ) ಕಾಮನಬಿಲ್ಲಿನಂತೆ ಮನೋಹರ

ಶಕ್ರಚಾಪಸನಿಭೈ ರಮ್ಯೈಃ ಕುಬೇರಭವನದ್ಯುತೌ ।
ತಸ್ಮಿನ್ನಗವರೇ ರಮ್ಯೇ ಮಹೋರಗನಿಷೇವಿತೇ ॥ ೧೯ ॥
ಕ್ರೀಡದ್ಭಿರ್ದೇವಮಿಥುನೈರ್ನೃತ್ಯದ್ಭಿಶ್ಚಾಪ್ಸರೋಗಣೈಃ ।
ಕೂಜದ್ಭಿಶ್ಶಿಖಿಭಿರ್ಮತ್ತೈಸ್ಸೇವಿತೇ ಚ ನಗೋತ್ತಮೇ ॥ ೨೦ ॥
ಕಲ್ಹಾರಕುಸುಮೋಪೇತೈಃ ಹಂಸಸಾರಸಸೇವಿತೈಃ ।
ಪ್ರಸನ್ನಸಲಿಲಾಕೀರ್ಣೈಃ ಸರೋಭಿಃಫುಲ್ಲಪಂಕಜೈಃ ॥ ೨೧ ॥
ಗಜಯೂಥಾನುಕೀರ್ಣಾಭಿರ್ಜುಷ್ಟಾಭಿರ್ಮೃಗಪಕ್ಷಿಭಿಃ ।
ಸೇವಿತಾಭಿರ್ಮುನಿಗಣೈಸ್ಸರಿದ್ಭಿರುಪಶೋಭಿತೇ ॥ ೨೨ ॥
ಕಿನ್ನರೋದ್ಗೀತಕುಹರೇ ಪರಪುಷ್ಟನಿನಾದಿತೇ ।
ವಿದ್ಯಾಧರಶತಾಕೀರ್ಣೇ ದೇವಗಂಧರ್ವಸೇವಿತೇ ॥ ೨೩ ॥
ಧಾರಾಪಾತೈಶ್ಚ ತೋಯಾನಾಂ ವಿಸ್ಫುಲಿಂಗೈಸ್ಸಹಸ್ರಶಃ ।
ಪ್ರಜ್ವಾಲಿತೇತುಲೇ ಶೃಂಗೇ ರಮ್ಯೇ ಹರಿತಶಾದ್ವಲೇ ॥ ೨೪ ॥

ವಾದ ಹಲವು ಹಾಸುಗಲ್ಲುಗಳಿಂದ ಕುಬೇರನ ಅರಮನೆಯಂತೆ ಹೊಳೆಯುತ್ತ ಮಹೋರಗಗಳ ನೆಲೆಯಾಗಿ, ವಿಹರಿಸುವ ದೇವದಂಪತಿಗಳಿಂದಲೂ, ನರ್ತಿಸುವ ಅಪ್ಸರಸ್ತ್ರೀಯರ ಗುಂಪಿನಿಂದಲೂ, ಕೇಕಾಧ್ವನಿಯನ್ನು ಮಾಡುವ ಮದಿಸಿದ ನವಿಲುಗಳಿಂದಲೂ ಒಪ್ಪುತ್ತಿರುವುದು.

೨೧–೨೨ ಅಲ್ಲದೆ ಅರಳಿದ ಸೌಗಂಧಿಕ, ಕಮಲಪುಷ್ಪಗಳಿಂದಲೂ, ಹಂಸ ಸಾರಸಪಕ್ಷಿಗಳಿಂದಲೂ, ಒಪ್ಪುವ ನಿರ್ಮಲೋದಕಪೂರ್ಣಗಳಾದ ಸರೋವರ ಗಳಿಂದಲೂ, ಆನೆಗಳ ಗುಂಪುಗಳಿಂದಲೂ, ಮೃಗಪಕ್ಷಿಸಮೂಹದಿಂದಲೂ, ಋಷಿ ಗಣಸೇವಿತಗಳಾದ ನದಿಗಳಿಂದಲೂ ಸೊಗಸುತ್ತಿರುವುದು.

೨೩-೨೪. ಮತ್ತು ಅಲ್ಲಿ (ಗುಹೆಗಳಲ್ಲಿ) ಕಿನ್ನರರು ಗಾನಮಾಡುತ್ತಿರುವರು. ಕೋಗಿಲೆಗಳು ಧ್ವನಿಗೈಯ್ಯುತ್ತಿರುವುವು. ನೂರಾರುಜನ ವಿದ್ಯಾಧರರೂ, ದೇವ ಗಂಧರ್ವರೂ, ಇರುವರು. ಹಲವು ಜಲಪಾತಗಳಿರುವುವು. ಆ ಪರ್ವತದ ಶಿಖ ರವು ಸಾವಿರಾರು ಕಿಡಿಗಳಿಂದ ಬೆಳಕುಳ್ಳದಾಗಿರುವುದು. ಆ ಪರ್ವತಪ್ರದೇಶವು ಹುಲ್ಲಿನ ಬಯಲುಗಳಿಂದ ಹಸುರಾಗಿರುವುದು.

ಸರ್ವರ್ತುಕವನೋದ್ಯಾನೇ ಪುಷ್ಪಾಕರಸುಶೋಭಿತೇ ।
ಯಕ್ಷಕಿಂಪುರುಷಾವಾಸೇ ಗುಹ್ಯಕಾನಾಮಥಾಶ್ರಯೇ ॥ ೨೫ ॥

ತಸ್ಮಿನ್ಗಿರಿವರೇ ರಮ್ಯೇ ಸೇವಿತವ್ಯೇ ಸುಶೋಭನೇ ।
ಧರ್ಮಾರಣ್ಯೇ ತಪಃಕ್ಷೇತ್ರೇ ಮುನಿಸಿದ್ಧನಿಷೇವಿತೇ ॥ ೨೬ ॥

ವರದಸ್ತತ್ರ ಭಗವಾನ್ ಸ್ಥಾಣುರ್ನಾಮ ಮಹೇಶ್ವರಃ ।
ಸರ್ವಾಮರಗುರುರ್ದೇವೋ ನಿತ್ಯಂ ಸನ್ನಿಹಿತಃ ಪ್ರಭುಃ ॥ ೨೭ ॥

ಭಕ್ತಾನುಕಂಪೀ ಸ ಶ್ರೀಮಾನ್ಗಿರೀಂದ್ರಸುತಯಾ ಸಹ ।
ಸ ಹ್ಯಧ್ಯಾಸ್ತೇ ಗಿರಿವರಂ ಪಾರ್ಷದೈಶ್ಚ ಗುಹೇನ ಚ ॥ ೨೮ ॥

ವಿಮಾನಯಾಯಿನಸ್ಸರ್ವೇ ತಂ ದೇವಮಜಮವ್ಯಯಂ ।
ಆಜಗ್ಮುಸ್ಸೇವಿತುಂ ದೇವಾ ವರೇಣ್ಯಮಜಮವ್ಯಯಂ ।
ಅನ್ಯೇ ದೇವನಿಕಾಯಾಶ್ಚ ಸೇವಿತುಂ ಪಪ್ರತಂತಿ ತಂ ॥ ೨೯ ॥

---

೨೫. ಅಲ್ಲಿನ ವನೋದ್ಯಾನಗಳು ಸರ್ವಋತುಗಳಲ್ಲೂ ಫಲಪುಷ್ಪಾದಿಗಳಿಂದ ತುಂಬಿ ಚೆನ್ನಾಗಿ ಶೋಭಿಸುವುವು. ಅಲ್ಲಿ ಯಕ್ಷರೂ, ಕಿಂಪುರುಷರೂ, ಗುಹ್ಯಕರೂ ವಾಸಿಸುವರು.

೨೬–೨೭. ಬಹು ರಮ್ಯವೂ, ಮಂಗಳಕರವೂ ಆಗಿ ಸೇವ್ಯವಾಗಿರುವ ಆ ಉತ್ತಮಗಿರಿಯ ಧರ್ಮಾರಣ್ಯದಲ್ಲಿ ಮುನಿಗಳೂ, ಸಿದ್ಧರೂ ನೆಲಸಿರುವ ತಪಃಕ್ಷೇತ್ರದಲ್ಲಿ ವರದನೂ, ಭಗವಂತನೂ, ಸರ್ವಾಮರಗುರುವೂ, ಪ್ರಭುವೂ, ದೇವನೂ ಆದ ಈಶ್ವರನು ಸ್ಥಾಣುವೆಂಬ ಹೆಸರಿನಿಂದ ಯಾವಾಗಲೂ ನೆಲಸಿರುವನು.

೨೮. ಆ ದೇವನು ಅಲ್ಲಿ ಪಾರ್ವತೀಷಣ್ಮುಖರೊಡನೆಯೂ, ಪ್ರಮಥರೊಡನೆಯೂ ಭಕ್ತದಯಾಪರನಾಗಿ ವಾಸಿಸುವನು.

೨೯. ಅಜನೂ, ಅವ್ಯಯನೂ, ಶ್ರೇಷ್ಠನೂ ಆದ ದೇವನನ್ನು ಸೇವಿಸಲು ವಿಮಾನಗಾಮಿಗಳಾದ ದೇವತೆಗಳೆಲ್ಲರೂ ಅಲ್ಲದೆ ಇತರ ಎಲ್ಲಾ ದೇವತೆಗಳೂ ಅಲ್ಲಿಗೆ ಬರುವರು.

ತತ್ರ ತ್ರೇತಾಯುಗೇ ಕಾಲೇ ನಂದೀ ನಾಮ ಮಹಾಮುನಿಃ ।
ಆರಿರಾಧಯಿಷುಶ್ಶರ್ವಂ ತಪಸ್ತೇಪೇ ಸುದಾರುಣಂ ॥ ೩೦ ॥

ಗ್ರೀಷ್ಮೇ ಪಂಚತಪಾಸ್ತಿಷ್ಠೇಚ್ಛಿಶಿರೇ ಸಲಿಲಾಶ್ರಯಃ ।
ಊರ್ಧ್ವಬಾಹುರ್ನಿರಾಲಂಬಸ್ತ್ರೋಯಾನಿಲಹುತಾಶನೈಃ ॥ ೩೧ ॥

ವ್ರತೈಶ್ಚ ವಿವಿಧೈರುಗ್ರೈಸ್ತಪೋಭಿರ್ನಿಯಮೈಸ್ತಥಾ ।
ಜಪಪುಷ್ಪೋಪಹಾರೈಶ್ಚ ಕಾಲೇ ಕಾಲೇ ಮುನಿಸ್ಸದಾ ॥ ೩೨ ॥

ಶಂಕರಂ ವಿಧಿವದ್ಭಕ್ತ್ಯಾ ಸೋಽರ್ಚಯದ್ದ್ವಿಜಪುಂಗವಃ ।
ಉಗ್ರೇಣ ತಪಸಾತ್ಮಾನಂ ಯೋಜಯಾಮಾಸ ಸುವ್ರತಃ ॥ ೩೩ ॥

ಕಾಷ್ಠಭೂತೋ ಯದಾ ವಿಪ್ರಃ ಕೃಶೋ ಧರ್ಮಸುಸಂತತಃ ।
ಶ್ಯಾಮೋಽಭೂತ್ಕೃಷ್ಣವರ್ಣಶ್ಚ ತತಃ ಪ್ರೀತಶ್ಚ ಶಂಕರಃ ॥ ೩೪ ॥

---

೩೦. ತ್ರೇತಾಯುಗದಲ್ಲಿ ನಂದಿಯೆಂಬ ಮಹರ್ಷಿಯು ಶಂಕರನನ್ನು ಸಂತೋಷಪಡಿಸಲಿಚ್ಛೆಯುಳ್ಳವನಾಗಿ ಅಲ್ಲಿ ಅತಿತೀವ್ರವಾದ ತಪಸ್ಸನ್ನು ಮಾಡಿದನು.

೩೧-೩೩. ಆ ಮುನಿವರ್ಯನು ಬೇಸಗೆಯಲ್ಲಿ ಪಂಚಾಗ್ನಿಮಧ್ಯದಲ್ಲಿಯೂ, ಚಳಿಗಾಲದಲ್ಲಿ ನೀರಿನಲ್ಲಿಯೂ, ತೋಳುಗಳನ್ನು ಮೇಲೆತ್ತಿ ಜಲಾನಿಲಾಗ್ನಿಗಳಲ್ಲದೆ ಬೇರೆ ಆಶ್ರಯವಿಲ್ಲವವನಾಗಿ ನಿಂತು ಬಗೆಬಗೆಯ ಉಗ್ರತಪಸ್ಸುಗಳಿಂದಲೂ ನಿತ್ಯವೂ ಭಕ್ತಿಪೂರ್ವಕವಾಗಿ ಆಯಾಕಾಲದಲ್ಲಿ ಜಪಪತ್ರಪುಷ್ಪೋಪಹಾರಗಳಿಂದ ವಿಧಿಪೂರ್ವಕವಾಗಿ ಪೂಜಿಸುವುದರಿಂದಲೂ ಆ ಶಂಕರನನ್ನು ಆರಾಧಿಸುತ್ತಿದ್ದನು. ಹೀಗೆ ಆ ಸುವ್ರತನು ಘೋರವಾದ ತಪಸ್ಸಿನಲ್ಲಿ ನಿರತನಾಗಿದ್ದನು.

೩೪. ಧರ್ಮನಿರತನಾದ ಆ ಬ್ರಾಹ್ಮಣನು ಹಾಗೆ ಕೃಶನಾಗಿ ಕಡ್ಡಿಯಂತೆ ಕುಂದಿ ಕಪ್ಪಾದ ಬಳಿಕ ಶಂಕರನು ಆತನಿಗೊಲಿದನು.

ಸಮ್ಯಗಾರಾಧಿತೋ ಭಕ್ತ್ಯಾ ನಿಯಮೇನ ಚ ತೋಷಿತಃ ।
ತದಾತ್ಮದರ್ಶನಂ ಪ್ರಾದಾತ್ಸ ಮುನೇರ್ವೃಷಭಧ್ವಜಃ ॥ ೩೫ ॥

ಉಕ್ತವಾಂಶ್ಚ ಮುನಿಂ ಶರ್ವಶ್ಚಕ್ಷುರ್ದಿವ್ಯಂ ದದಾಮಿ ತೇ ।
ಅದೃಶ್ಯಂ ಪಶ್ಯ ಮೇ ರೂಪಂ ವತ್ಸಪ್ರೀತೋಸ್ಮಿತೇ ಮುನೇ ॥ ೩೬ ॥

ಯತ್ಪಶ್ಯಂತೀಹ ವಿದ್ವಾಂಸೋ ರೂಪಮಪ್ರತಿಮೌಜಸಂ ।
ಸಹಸ್ರಸೂರ್ಯಕಿರಣಂ ಜ್ವಾಲಾಮಾಲಿನಮೂರ್ಜಿತಂ ॥ ೩೭ ॥

ಬಾಲಾರ್ಕಮಂಡಲಾಕಾರಂ ಪ್ರಭಾಮಂಡಲಮಂಡಿತಂ ।
ಜಟಾಜೂಟತಟಾಶ್ಲಿಷ್ಟಚಂದ್ರಾಲಂಕೃತಶೇಖರಂ ॥ ೩೮ ॥

ಜಗದಾಲೋಚನಂ ಶ್ರೀಮತ್ಪ್ರದೀಪ್ತಂ ತಂ ತ್ರಿಲೋಚನಂ ।
ಪ್ರದೇಶಮಾತ್ರಂ ರುಚಿರಂ ಶತಶೀರ್ಷಂ ಶತೋದರಂ ॥ ೩೯ ॥

---

೩೫. ಭಕ್ತಿಯಿಂದ ಚೆನ್ನಾಗಿ ಆರಾಧಿತನೂ, ತಪೋನಿಯಮದಿಂದ ಸಂತೋಷಿತನೂ ಆದ ವೃಷಭಧ್ವಜನಾದ ಆ ಶಂಕರನು ಆ ಮುನಿಗೆ ಪ್ರತ್ಯಕ್ಷನಾದನು.

೩೬. ಅಲ್ಲದೆ ಆ ಶಂಕರನು ಆ ಮುನಿಯನ್ನು ಕುರಿತು 'ವತ್ಸ, ನಿನಗೆ ಒಲಿದಿದ್ದೇನೆ. ಮುನಿಯೇ, ನಿನಗೆ ದಿವ್ಯದೃಷ್ಟಿಯನ್ನು ಕೊಡುತ್ತೇನೆ. ಸಾಮಾನ್ಯ ದೃಷ್ಟಿಗೆ ಅದೃಶ್ಯವಾದ ನನ್ನ ರೂಪವನ್ನು ನೋಡು' ಎಂದು ಹೇಳಿದನು.

೩೭-೪೨. ಜ್ಞಾನಿಗಳು ಯಾವ ಅಸದೃಶವಾದ ದೀಪ್ತಿಬಲಗಳುಳ್ಳದೂ, ಸಹಸ್ರಸೂರ್ಯಕಿರಣವುಳ್ಳದೂ ಆದ ರೂಪವನ್ನು ನೋಡುವರೋ ಆ ರೂಪವನ್ನು ಎಂದರೆ ಅತ್ಯಧಿಕವಾದ ಜ್ವಾಲಾಮಾಲೆಯುಳ್ಳವನೂ, ಬಾಲಸೂರ್ಯಮಂಡಲಾಕಾರನೂ, ಕಾಂತಿಮಂಡಲಾಲಂಕೃತನೂ, ಜಡೆಮುಡಿಯನ್ನಾಶ್ರಯಿಸಿರುವ ಚಂದ್ರನೆಂಬ ಶಿರೋಮಾಲೆಯಿಂದಲಂಕೃತನೂ, ಜಗತ್ತಿನ ವಿಚಾರವಾದ ಆಲೋಚನೆಯುಳ್ಳವನೂ, ಶ್ರೀಮಂತನೂ, ಹೊಳೆಯುವವನೂ, ತ್ರಿಲೋಚನನೂ

ಸಹಸ್ರಬಾಹುಚರಣಂ ಸಹಸ್ರಾಕ್ಷಿಶಿರೋಮುಖಂ ।
ಅಣೀಯಸಾಮಣೀಯಾಂಸಂ ಬೃಹತಾಂ ತು ಬೃಹತ್ತರಂ ॥ ೪೦ ॥

ಅಕ್ಷಮಾಲಾಪವಿತ್ರಾಂಗಂ ಕಮಂಡಲುಕರೋದ್ಯತಂ ।
ಸಿಂಹಚರ್ಮಾಂಬರಧರಂ ವ್ಯಾಲಯಜ್ಞೋಪವೀತಿನಂ ॥ ೪೧ ॥

ದೃಷ್ಟ್ವಾ ದೇವಂ ಮಹಾದೇವಂ ಹೃಷ್ಟರೋಮಾ ಮಹಾತಪಾಃ ।
ಪ್ರಾಂಜಲಿಃ ಪ್ರಣತೋ ಭೂತ್ವಾಽಗೃಣಾದ್ಬ್ರಹ್ಮ ಸನಾತನಂ ॥ ೪೨ ॥

ನಮೋ ಧಾತ್ರೇ ವಿಧಾತ್ರೇ ಚ ಶಂಭವೇ ವರದಾಯ ಚ ।
ಜಗದ್ಭೋಕ್ತ್ರೇ ತ್ರಿಣೇತ್ರಾಯ ಶಂಕರಾಯ ಶಿವಾಯ ಚ ॥ ೪೩ ॥

ಭವಾಯ ಭವಗೋಪ್ತ್ರೇ ಚ ಮುನಯೇ ಕೃತ್ತಿವಾಸಸೇ ।
ನೀಲಕಂಠಾಯ ಭೀಮಾಯ ಭೂತಭವ್ಯಭವಾಯ ಚ ॥ ೪೪ ॥

ಪ್ರಾದೇಶಮಾತ್ರ (ಚೋಟುದ್ದದವ)ನೂ, ಮನೋಹರನೂ, ನೂರು ತಲೆಗಳೂ ನೂರು ಉದರಗಳೂ ಸಾವಿರ ಕೈಕಾಲುಗಳೂ ಸಾವಿರ ಕಣ್ಣುಗಳೂ ಉಳ್ಳವನೂ, ಅಣುಗಳಲ್ಲಿ ಅಣುರೂಪನೂ, ಮಹತ್ತಾದುವುಗಳಿಗಿಂತ ಮಹತ್ತರನೂ, ಅಕ್ಷಮಾಲೆಯಿಂದ ಪವಿತ್ರದೇಹನೂ, ಕಮಂಡಲುಧಾರಿಯೂ, ಸಿಂಹಚರ್ಮಾಂಬರಧರನೂ, ಸರ್ಪಯಜ್ಞೋಪವೀತನೂ ಆದ ಮಹಾದೇವನನ್ನು ಸಂದರ್ಶಿಸಿ ರೋಮಾಂಚಿತನಾದ ಆ ನಂದಿಯು ಆ ಸನಾತನಬ್ರಹ್ಮನಿಗೆ ಪ್ರಣಾಮಮಾಡಿ, ಕೈಮುಗಿದುಕೊಂಡು ಸ್ತುತಿಸಿದನು.

೪೩. 'ಧಾತೃವಿಗೆ ನಮಸ್ಕಾರ. ವಿಧಾತೃವಿಗೆ ನಮಸ್ಕಾರ. ಶಂಭುವಿಗೆ ನಮಸ್ಕಾರ. ವರದನಿಗೆ ನಮಸ್ಕಾರ. ಜಗದ್ಭೋಕ್ತೃವಿಗೆ, ತ್ರಿಣೇತ್ರನಿಗೆ, ಶಂಕರನಿಗೆ, ಶಿವನಿಗೆ ನಮಸ್ಕಾರ.

೪೪. ಭವನೂ, ಭವರಕ್ಷಕನೂ, ಮುನಿಯೂ ಚರ್ಮಾಂಬರನೂ, ನೀಲಕಂಠನೂ, ತ್ರಿಲೋಕಭಯಂಕರನೂ, ಹಿಂದೆ ಇದ್ದವನೂ, ಈಗ ಇರುವವನೂ, ಮುಂದೆಯೂ ಇರುವವನೂ ಆದ ದೇವನಿಗೆ ವಂದಿಸುತ್ತೇನೆ.

ಲಂಬಭ್ರುವೇ *ಕರಾಲಾಯ ಹರಿನೇತ್ರಾಯ ಮೀಢುಷೇ ।
ಕಪರ್ದಿನೇ ವಿಶಾಲಾಯ ಮುಂಜಕೇಶಾಯ ಧೀಮತೇ ॥ ೪೫ ॥

ಶೂಲಿನೇ ಪಶುಪತಯೇ ವಿಭವೇ ಸ್ಥಾಣವೇ ತಥಾ ।
ಗಣಾನಾಂ ಪತಯೇ ಸ್ರಷ್ಟ್ರೇ ಸಂಕ್ಷೇಪ್ತ್ರೇ ಭೀಷಣಾಯ ಚ ॥ ೪೬ ॥

ಸೌಮ್ಯಾಯ ಸೌಮ್ಯತಪಸೇ ಭೀಮಾಯ ತ್ರ್ಯಂಬಕಾಯ ಚ ।
ಪ್ರೇತಾವಾಸನಿವಾಸಾಯ ರುದ್ರಾಯ ವರದಾಯ ಚ ॥ ೪೭ ॥

ಕಪಾಲಮಾಲಿನೇ ತಸ್ಮೈ ಹರಿಶ್ಮಶ್ರುಧರಾಯ ಚ ।
ಭಕ್ತಪ್ರಿಯಾಯ ಸತತಂ ನಮೋಽಸ್ತು ಪರಮಾತ್ಮನೇ ॥ ೪೮ ॥

ಏವಂ ನಂದೀ ಭವಂ ಸ್ತುತ್ವಾ ನಮಸ್ಕೃತ್ಯ ಚ ಸರ್ವಶಃ ।
ಪ್ರಣಮ್ಯ ಶಿರಸಾ ದೇವಂ ಪುನಃಪುನರವಂದತ ॥ ೪೯ ॥

---

೪೫. ನೀಲವಾದ ಹುಬ್ಬುಳ್ಳವನೂ, *ಕರಾಳನೂ, ಚಂದ್ರಸೂರ್ಯನೇತ್ರನೂ, ಕಾಮದನೂ, ಕಪರ್ದವೆಂಬ ಜಡೆಮುಡಿಯುಳ್ಳವನೂ, ವಿಶಾಲನೂ, ಮುಂಜಕೇಶನೂ, ವಿದ್ವಾಂಸನೂ ಆದ ಶಂಕರನಿಗೆ ವಂದಿಸುತ್ತೇನೆ.

೪೬. ಶೂಲಧಾರಿಯೂ, ಪಶುಪತಿಯೂ, ವಿಭುವೂ, ಪ್ರಳಯಕಾಲದಲ್ಲಿಯೂ ಇರುವವನೂ, ಪ್ರಮಥಗಣಗಳಿಗೆ ನಾಥನೂ, ಲೋಕದ ಸೃಷ್ಟಿಸಂಹಾರಕರ್ತೃವೂ, ಶತ್ರುಭೀಷಣನೂ ಆದ ಶಂಕರನಿಗೆ ವಂದಿಸುತ್ತೇನೆ.

೪೭-೪೮. ಸೌಮ್ಯನೂ, ಸೌಮ್ಯ ತಪಸ್ಕನೂ, ಭೀಮನೂ, ಮೂರುಕಣ್ಣುಗಳುಳ್ಳವನೂ, ಶ್ಮಶಾನವಾಸಿಯೂ, ರುದ್ರನೂ, ವರಪ್ರದನೂ, ಕಪಾಲಮಾಲಾಧಾರಿಯೂ, ಕೆಮ್ಮೀಸೆಯುಳ್ಳವನೂ, ಯಾವಾಗಲೂ ಭಕ್ತಪ್ರಿಯನೂ ಆದ ಆ ಪರಮಾತ್ಮನಿಗೆ ನಮಸ್ಕಾರ '.

೪೯. ನಂದಿಯು ಹೀಗೆ ಈಶ್ವರನನ್ನು ಸ್ತೋತ್ರಮಾಡಿ, ಆತನ ಎಲ್ಲಾ ಕಡೆಯಲ್ಲಿಯೂ ಪ್ರಣಾಮಮಾಡಿ ನಮಸ್ಕರಿಸಿ, ಮತ್ತೆಮತ್ತೆ ತಲೆಬಾಗಿ ವಂದಿಸಿದನು.

---

* ಕರಾಳ= ಭಯಂಕರ ; ಉದ್ದವಾದವನು.

ತತಸ್ತು ಭಗವಾನ್ಪ್ರೀತಸ್ತಸ್ಮೈ ವಿಪ್ರಾಯ ಶಂಕರಃ ।
ಉವಾಚ ಚ ವಚಸ್ಸಾಕ್ಷಾತ್ತಮೃಷಿಂ ವರದಃ ಪ್ರಭುಃ ॥ ೩೦ ॥

ವರಾನ್ವೃಣೀಷ್ವ ವಿಪ್ರೇಂದ್ರ ಯಾನಿಚ್ಛಸಿ ಮಹಾಮುನೇ ।
ತಾಂಸ್ತೇ ಸರ್ವಾನ್ಪ್ರಯಚ್ಛಾಮಿ ದುರ್ಲಭಾನಪಿ ಮಾರಿಷ ॥ ೩೧ ॥

ಪ್ರಭುತ್ವಮಮರತ್ವಂ ವಾ ಶಕ್ರತ್ವಮಪಿ ವಾ ಪ್ರಭೋ ।
ಬ್ರಹ್ಮತ್ವಂ ಲೋಕಪಾಲತ್ವಮಪವರ್ಗಮಥಾಪಿ ವಾ ॥ ೩೨ ॥

ಅಥಾಷ್ಟಗುಣಮೈಶ್ವರ್ಯಂ ಗಾಣಪತ್ಯಮಥಾಪಿ ವಾ ।
ಯದಿಚ್ಛಸಿ ಮುನೇ ಶೀಘ್ರಂ ತದ್ಬ್ರೂಹಿ ದ್ವಿಜಪುಂಗವ ॥ ೩೩ ॥

ಇತ್ಯುಕ್ತೋಽಸೌ ಭಗವತಾ ಶರ್ವೇಣ ಮುನಿಪುಂಗವಃ ।
ಪ್ರೋವಾಚ ವರದಂ ದೇವಂ ಪ್ರಹೃಷ್ಟೇನಾಂತರಾತ್ಮನಾ ॥ ೩೪ ॥

---

೩೦. ಬಳಿಕ ಆ ಬ್ರಾಹ್ಮಣನಿಗೆ ಒಲಿದ ಭಗವಂತನೂ, ವರದನೂ ಪ್ರಭುವೂ ಆದ ಆ ಶಂಕರನು ತಾನೇ ಸಾಕ್ಷಾತ್ತಾಗಿ ಆ ಋಷಿಗೆ ಮುಂದಿನ ಮಾತನ್ನು ಹೇಳಿದನು.

೩೧. ‘ಮಹಾಮುನಿಯೇ, ಬ್ರಾಹ್ಮಣೋತ್ತಮಾ, ಮಾರಿಷ, ನಿನಗೆ ಬೇಕಾದ ವರಗಳನ್ನು ಬೇಡು. ದುರ್ಲಭವಾಗಿದ್ದರೂ ಅವೆಲ್ಲವನ್ನೂ ನಿನಗೆ ಕೊಡುತ್ತೇನೆ.

೩೨–೩೩. ಪ್ರಭುವೇ ! ಪ್ರಭುತ್ವವನ್ನೋ, ದೇವತ್ವವನ್ನೋ, ಇಂದ್ರತ್ವವನ್ನೋ, ಬ್ರಹ್ಮಪದವಿಯನ್ನೋ, ಲೋಕಪಾಲಕತ್ವವನ್ನೋ, ಅಷ್ಟೈಶ್ವರ್ಯವನ್ನೋ ಗಣಾಧಿಪತ್ಯವನ್ನೋ, ಅಥವಾ ಮೋಕ್ಷವನ್ನೋ, ಮುನಿಯೇ ಯಾವುದನ್ನು ಬಯಸುವೆ ? ದ್ವಿಜೋತ್ತಮನೇ, ಅದನ್ನು ಬೇಗನೆ ಹೇಳು.’

೩೪. ಭಗವಂತನಾದ ಶಂಕರನಿಂದ ಹೀಗೆ ಹೇಳಿಸಿಕೊಂಡ ಆ ಮುನಿವರ್ಯನು ಅತಿಸಂತೋಷಗೊಂಡ ಮನಸ್ಸಿನಿಂದ ವರಪ್ರದನಾದ ಆ ದೇವನಿಗೆ ಇಂತು ಬಿನ್ನೈಸಿದನು.

ನ ಪ್ರಭುತ್ವಂ ನ ದೇವತ್ವಂ ನೇಂದ್ರತ್ವಮಪಿ ವಾ ಪ್ರಭೋ ।
ಬ್ರಹ್ಮತ್ವಂ ಲೋಕಪಾಲತ್ವಂ ನಾಪವರ್ಗಂ ವರಪ್ರದ ॥ ೫೫ ॥

ನೈವಾಷ್ಟಗುಣಮೈಶ್ವರ್ಯಂ ಗಾಣಪತ್ಯಂ ನ ಚ ಪ್ರಭೋ ॥ ೫೬ ॥

ಸ್ಪೃಹಯೇ ದೇವದೇವೇಶ ಪ್ರಸನ್ನೇ ತ್ವಯಿ ಶಂಕರ ।
ಯದಿ ಪ್ರೀತೋಸಿ ಭಗವನ್ನನುಕ್ರೋಶತಯಾ ಮಮ ।
ಅನುಗ್ರಾಹ್ಯೋ ಹ್ಯಯಂ ದೇವ ತ್ವಯಾವಶ್ಯಂ ಸುರಾಧಿಪ ॥ ೫೭ ॥

ಯಥಾನ್ಯೇ ನ ಭವೇದ್ಭಕ್ತಿಸ್ತ್ವತ್ತೋ ನಿತ್ಯಂ ಮಹೇಶ್ವರ ।
ತಥಾಹಂ ಭಕ್ತಿಮಿಚ್ಛಾಮಿ ಸರ್ವಭೂತಾಶ್ರಯೇ ತ್ವಯಿ ॥ ೫೮ ॥

ಯಥಾ ಚ ನ ಭವೇದ್ವಿಘ್ನಂ ತಪಸ್ಯಾನಿರತಸ್ಯ ಮೇ ।
ಕೋಟಿಜಪ್ಯೇನ ರುದ್ರಾಣಾಮಾರಾಧನಪರಸ್ಯ ಚ ॥ ೫೯ ॥

೫೫–೫೬. "ಪ್ರಭುವೇ, ವರಪ್ರದನೇ, ನನಗೆ ಪ್ರಭುತ್ವವೂ ಬೇಡ. ದೇವತ್ವವೂ ಬೇಡ. ಇಂದ್ರತ್ವವೂ ಬೇಡ. ಬ್ರಹ್ಮತ್ವವಾಗಲಿ, ಲೋಕಪಾಲಕತ್ವವಾಗಲಿ, ಅಷ್ಟೈಶ್ವರ್ಯವಾಗಲಿ, ಗಣಾಧಿಪತ್ಯವಾಗಲಿ, ಮೋಕ್ಷವೇ ಆಗಲಿ ನನಗೆ ಬೇಕಿಲ್ಲ.

೫೭. ದೇವದೇವೇಶ, ಶಂಕರ, ನೀನು ಸಂತುಷ್ಟನಾಗಿ ನನ್ನಲ್ಲಿ ದಯೆಯಿಂದ ಒಲಿದಿರುವೆಯಾದರೆ ನಾನು ಇದನ್ನು ಅಪೇಕ್ಷಿಸುತ್ತೇನೆ. ಸುರಾಧಿಪನೇ, ನೀನು ಅವಶ್ಯವಾಗಿ ಇದನ್ನೇ ನನಗೆ ಅನುಗ್ರಹಿಸಬೇಕು.

೫೮–೫೯. ಮಹೇಶ್ವರನೇ, ನಿನ್ನನ್ನು ಬಿಟ್ಟು ಬೇರೆಯವರಲ್ಲಿ ನನಗೆ ಭಕ್ತಿಯುಂಟಾಗದೆ, ಸರ್ವಭೂತಾಶ್ರಯನಾದ ನಿನ್ನಲ್ಲಿಯೇ ಭಕ್ತಿಯುಂಟಾಗಬೇಕೆಂದು ಬಯಸುತ್ತೇನೆ. ಅಲ್ಲದೆ ತಪೋನಿರತನಾಗಿ ಕೋಟಿರುದ್ರಮಂತ್ರಜಪದಿಂದ ರುದ್ರಾರಾಧನಾಸಕ್ತನಾಗುವ ನನಗೆ ವಿಘ್ನವಾಗಬಾರದೆಂದು ಬಯಸುತ್ತೇನೆ. ದಯೆಪಾಲಿಸು."

ಏತತ್ತು ವಚನಂ ಶ್ರುತ್ವಾ ನಂದಿನಸ್ಯ ಮಹೇಶ್ವರಃ ।
ಪ್ರಹಸ್ಯೋವಾಚ ತಂ ಪ್ರೀತ್ಯಾ ತತೋ ಮಧುರಯಾ ಗಿರಾ ॥ ೬೦ ॥

ಪ್ರೀತೋಽಸ್ಮ್ಯತ್ರಿಸ್ಥ ವಿಪ್ರರ್ಷೇ ತಪ್ಯಮಾನೇನ ಸುವ್ರತ ।
ಆರಾಧಿತಶ್ಚ ಭಕ್ತ್ಯಾಹಂ ತ್ವಯಾ ಶುದ್ಧೇನ ಚೇತಸಾ ॥ ೬೧ ॥

ಪರ್ಯಾಪ್ತಂ ತೇ ಮಹಾಭಾಗ ತಪಃ ಕರ್ತುಂ ತಪೋಧನ ।
ನಿವರ್ತಯಂತಿ ಮಾಂ ವತ್ಸ ಮತ್ಪಾದಾರಾಧನೇ ರತಃ ॥ ೬೨ ॥

ಜಪ್ತ್ವಾ ತೇ ತ್ರಿಗುಣಾ ಕೋಟೀ ರುದ್ರಾಣಾಂ ಪುರತೋಮಮ ।
ಪೂರ್ಣಂ ವರ್ಷಸಹಸ್ರಂ ಚ ತಪಸ್ತೀವ್ರಂ ಮಹಾಮುನೇ ॥ ೬೩ ॥

ನ ಕೃತಂ ಯತ್ಪುರಾ ದೇವೈರ್ನಾಸುರೈಃಋಷಿಭಿರ್ನ ಚ ।
ಕೃತಂ ಸುಮಹದಾಶ್ಚರ್ಯಂ ತ್ವಯಾ ಕರ್ಮ ಸುದುಷ್ಕರಂ ॥ ೬೪ ॥

---

೬೦. ಆ ಮಹೇಶ್ವರನು ನಂದಿಯ ಆಮಾತನ್ನು ಕೇಳಿ, ಗಟ್ಟಿಯಾಗಿ ನಕ್ಕು, ಬಳಿಕ ಇಂಪಾದ ಮಾತಿನಿಂದ ಪ್ರೀತಿಪೂರ್ವಕವಾಗಿ ಆತನಿಗೆ ಹೇಳಿದನು.

೬೧. " ಬ್ರಹ್ಮರ್ಷಿಯೇ, ಸುವ್ರತನೇ, ಶುದ್ಧವಾದ ಮನಸ್ಸಿನಿಂದ ನೀನು ಮಾಡಿದ ತಪಸ್ಸಿನಿಂದಲೂ, ಭಕ್ತಿಯಿಂದಲೂ ಆರಾಧಿತನಾದ ನಾನು ಪ್ರೀತನಾಗಿದ್ದೇನೆ. ಏಳು.

೬೨-೬೩. ಮಹಾಭಾಗ್ಯನೇ, ತಪೋಧನನೇ, ನೀನು ತಪಸ್ಸನ್ನು ಮಾಡಿದುದು ಸಾಕು. ಮಹಾಮುನಿಯೇ, ಸಾವಿರವರ್ಷಕಾಲ ಪೂರ್ಣವಾಗಿ ತೀವ್ರವಾದ ತಪಸ್ಸನ್ನು ಮಾಡಿದ್ದೀಯೆ ನನ್ನ ಎದುರಿಗೇ ಮೂರುಕೋಟಿರುದ್ರಮಂತ್ರವನ್ನು ಜಪಿಸಿದ್ದೀಯೆ.

೬೪. ಪೂರ್ವದಲ್ಲಿ ದೇವತೆಗಳಾಗಲಿ, ರಾಕ್ಷಸರಾಗಲಿ, ಋಷಿಗಳಾಗಲಿ ಮಾಡದಿರುವ ಅತ್ಯಾಶ್ಚರ್ಯಕರವೂ, ಅತಿದುಃಷ್ಕರವೂ ಆದ ಕರ್ಮವನ್ನು ನೀನು ಮಾಡಿದ್ದೀಯೆ.

ಸಂಕ್ಷೋಭಿತಮಿದಂ ಸರ್ವಂ ತ್ರೈಲೋಕ್ಯಂ ಸಚರಾಚರಂ ।
ಆಗಮಿಷ್ಯಂತಿ ತೇ ದ್ರಷ್ಟುಂ ದೇವಾಸ್ಸರ್ವೇ ಸವಾಸವಾಃ || ೭೫ ||

ಅಕ್ಷಯಶ್ಚಾವ್ಯಯಶ್ಚ ತ್ವಮತರ್ಕ್ಯಸ್ಸುರಾಸುರೈಃ ।
ದಿವ್ಯತೇಜೋವಪೂ ಶ್ರೀಮಾನ್ದಿವ್ಯಾಭರಣಭೂಷಿತಃ || ೭೬ ||

ಮತ್ತುಲ್ಯೋ ಮತ್ಪ್ರಭಾವಶ್ಚ ತ್ವಮೇಕಸ್ಸುರಾಸುರೈಃ ।
ಮದ್ರೂಪಧಾರೀ ಮತ್ತೇಜಾಸ್ತ್ರ್ಯಕ್ಷಸ್ಸರ್ವಗುಣೋತ್ತಮಃ || ೭೭ ||

ಭವಿಷ್ಯಸಿ ನ ಸಂದೇಹೋ ದೇವದಾನವಪೂಜಿತಃ || ೭೮ ||

ಅನೇನೈವ ಶರೀರೇಣ ಜರಾಮರಣವರ್ಜಿತಃ ।
ದುಷ್ಪ್ರಾಪ್ಯೇಯಮವಾಪ್ತಾ ತೇ ದೇವೈರ್ಗಾಣೇಶ್ವರೀ ಗತಿಃ || ೭೯ ||

---

೭೫. ಚರಾಚರಸಹಿತವಾದ ಈ ತ್ರಿಲೋಕವೆಲ್ಲಾ ನಿನ್ನ ತಪಸ್ಸಿನಿಂದ ಸಂಚಲಿತವಾಗಿದೆ. ಇಂದ್ರಸಹಿತರಾಗಿ ದೇವತೆಗಳೆಲ್ಲರೂ ನಿನ್ನನ್ನು ನೋಡಲು ಇಲ್ಲಿ ಬರುವರು.

೭೬. ದಿವ್ಯತೇಜೋಯುಕ್ತದೇಹನೂ, ಶ್ರೀಮಂತನೂ, ದಿವ್ಯಾಭರಣಾಲಂಕೃತನೂ, ಅಕ್ಷಯನೂ, ಅವ್ಯಯನೂ ಆದ ನೀನು ಸುರಾಸುರರಿಗೂ ಅತರ್ಕ್ಯನಾಗಿದ್ದೀಯೆ.

೭೭-೭೮. ಸುರಾಸುರರಲ್ಲಿ ನೀನೊಬ್ಬನೇ ನನಗೆ ಸಮಾನನೂ, ನನ್ನಂತೆ ಮಹಿಮೆಯುಳ್ಳವನೂ, ನನ್ನ ರೂಪವನ್ನೇ ಧರಿಸಿರುವವನೂ, ನನ್ನ ತೇಜಸ್ಸೇ ಉಳ್ಳವನೂ, ನನ್ನಂತೆ ಮೂರು ಕಣ್ಣುಗಳುಳ್ಳವನೂ, ಸರ್ವಗುಣೋತ್ತಮನೂ, ದೇವದಾನವಪೂಜಿತನೂ ಆಗುವೆ. ಸಂಶಯವಿಲ್ಲ.

೭೯. ನೀನು ಮುಪ್ಪು, ಸಾವೂ ಇಲ್ಲದವನಾಗಿ ಈ ದೇಹದಿಂದಲೇ ದೇವತೆಗಳಿಗೂ ದುರ್ಲಭವಾದ ಈ ಗಣೇಶ್ವರಪದವಿಯನ್ನು ಪಡೆದಿದ್ದೀಯೆ.

ಪಾರ್ಷದಾನಾಂ ಪರಿಷ್ಕೃತ್ವಂ ಮಾಮಕಾನಾಂ ದ್ವಿಜೋತ್ತಮ ।
ನಂದೀಶ್ವರ ಇತಿ ಖ್ಯಾತೋ ಭವಿಷ್ಯಸಿ ನ ಸಂಶಯಃ ॥ ೭೦ ॥

ಪ್ರಾಪ್ತಮಷ್ಟಗುಣಂ ಸತ್ಯಮೈಶ್ವರ್ಯಂ ತೇ ತಪೋಧನ ।
ದ್ವಿತೀಯಾಂ ಮೇ ತನುಂ ತ್ವಾಂ ತು ನಮಸ್ಯಂತಿ ಚ ದೇವತಾಃ ॥ ೭೧ ॥

ಅದ್ಯಪ್ರಭೃತಿ ದೇವಾಗ್ರ್ಯ ದೇವಕಾರ್ಯೇಷು ಸರ್ವತಃ ।
ಪ್ರಭುಸ್ತ್ವಂ ಭವಿತಾ ಲೋಕೇ ಮತ್ಪ್ರಸಾದಾನ್ಮುನೀಶ್ವರ ॥ ೭೨ ॥

ತ್ವಾಮೇವಾಭ್ಯರ್ಚಯಿಷ್ಯಂತಿ ಸರ್ವಭೂತಾನಿ ಸರ್ವತಃ ।
ಮತ್ತಸ್ಸಮಭಿವಾಂಛಂತಿ ಪ್ರಸಾದಂ ಪಾರ್ಷದಾಧಿಪ ॥ ೭೩ ॥

ವರಾನ್ವರಾರ್ಥಿನಾಂ ದಾತಾ ವಿಧಾತಾ ಜಗತಸ್ಸದಾ ।
ಭವಿಷ್ಯಸಿ ಚ ಧರ್ಮಜ್ಞ ಭೀತಾನಾಮಭಯಪ್ರದಃ ॥ ೭೪ ॥

---

೭೦. ದ್ವಿಜೋತ್ತಮನೇ, ನನ್ನ ಸಾಮಾಜಿಕರಲ್ಲಿ ನೀನೇ ಅತಿಶ್ರೇಷ್ಠನಾಗಿ ನದೀಶ್ವರನೆಂದು ಪ್ರಖ್ಯಾತನಾಗುವುದರಲ್ಲಿ ಸಂಶಯವಿಲ್ಲ.

೭೧. ತಪೋಧನನೇ, ನಿನಗೆ ಅಷ್ಟಗುಣಗಳೂ, ಸತ್ಯವೂ, ಐಶ್ವರ್ಯವೂ ಲಭಿಸಿವೆ. ನನ್ನ ಅಪರಾವತಾರದ ನಿನ್ನನ್ನು ದೇವತೆಗಳೂ ವಂದಿಸುವರು.

೭೨. ಮುನೀಶ್ವರ, ದೇವಾಗ್ರೇಸರ, ಇಂದಿನಿಂದ ಮೊದಲುಗೊಂಡು ನನ್ನ ಅನುಗ್ರಹದಿಂದ ದೇವಕಾರ್ಯಗಳೆಲ್ಲೆಲ್ಲಾ ಪ್ರಭುವಾಗುವೆ.

೭೩. ಪ್ರಮಥಾಧಿಪನೇ, ನನ್ನ ಪ್ರಸಾದವನ್ನು ಬಯಸುವ ಸರ್ವಭೂತಗಳೂ, ಸರ್ವರೂ ನಿನ್ನನ್ನೇ ಪೂಜಿಸುವರು.

೭೪. ಧರ್ಮಜ್ಞನೇ, ನೀನೇ ವರವನ್ನು ಬೇಡುವವರಿಗೆ ಅದನ್ನು ಕೊಡುವವನೂ, ಜಗತ್ತಿಗೆ ವಿಧಾಯಕನೂ, ಭೀತರಿಗೆ ಅಭಯಪ್ರದಾಯಕನೂ ಆಗುವೆ.

ಯಸ್ತ್ವಾಂ ದ್ವೇಷ್ಟಿ ಸ ಮಾಂ ದ್ವೇಷ್ಟಿ ಯಸ್ತ್ವಾಮನು ಸ ಮಾಮನು ।
ನಾವಯೋರಂತರಂ ಕಿಂಚಿದಂಬರಾನಿಲಯೋರಿವ ॥ ೭೫ ॥

ದ್ವಾರೇ ತು ದಕ್ಷಿಣೇ ನಿತ್ಯಂ ತ್ವಯಾ ಸ್ಥೇಯಂ ಗಣಾಧಿಪ ।
ವಾಮೇ ತು ವಿಭುನಾ ಚಾಪಿ ಮಹಾಕಾಲೇನ ಸರ್ವದಾ ॥ ೭೬ ॥

ಪ್ರತೀಹಾರೋ ಭವಾನದ್ಯ ಸರ್ವದಾ ತ್ರಿದಶೋತ್ತಮ ।
ಶಿರೋ ಮೇ ರಕ್ಷತು ಭವಾನ್ಮಹಾಕಾಲೋಽಪಿ ಮೇ ಗಣಃ ॥ ೭೭ ॥

ನ ವಜ್ರೇಣ ನ ದಂಡೇನ ನ ಚಕ್ರೇಣ ನ ಚಾಗ್ನಿನಾ ।
ಕಶ್ಚಿಚ್ಛಕ್ನೋತಿ ವೈ ಬಾಧಾಂ ಕರ್ತುಂ ವೈ ಭುವನತ್ರಯೇ ॥ ೭೮ ॥

ದೇವದಾನವಗಂಧರ್ವಾ ಯಕ್ಷರಾಕ್ಷಸಪನ್ನಗಾಃ ।
ತ್ವಾಮೇವ ಸಂಶ್ರಯಿಷ್ಯಂತಿ ಮದ್ಭಕ್ತಾಃ ಪುರುಷಾಶ್ಚ ಯೇ ॥ ೭೯ ॥

---

೭೫. ನಿನ್ನನ್ನು ದ್ವೇಷಿಸುವವನು ನನ್ನನ್ನು ದ್ವೇಷಿಸಿದವನಾಗುವನು. ನಿನ್ನನ್ನನುಸರಿಸಿದವನು ನನ್ನನ್ನನುಸರಿಸಿದವನಾಗುವನು. ಆಕಾಶವಾಯುಗಳಿಗೆ ಹೇಗೋ ಹಾಗೆ ನಮ್ಮಿಬ್ಬರಿಗೆ ಸ್ವಲ್ಪವೂ ಅಂತರ (ಭೇದ) ವಿಲ್ಲ.

೭೬. ಗಣಾಧಿಪನೇ, ನೀನು ಯಾವಾಗಲೂ ನನ್ನ ನಿವಾಸದ ದಕ್ಷಿಣದ ಬಾಗಿಲಲ್ಲಿರಬೇಕು. ಎಡಗಡೆಯ ಅಥವಾ ಉತ್ತರದ ಬಾಗಿಲಲ್ಲಾದರೋ ಯಾವಾಗಲೂ ವಿಭುವಾದ ಮಹಾಕಾಲನಿರಬೇಕು.

೭೭. ದೇವೋತ್ತಮನೇ, ಈಗ ನೀನು ಸದಾ ನನ್ನ ದ್ವಾರಪಾಲಕನು. ನನ್ನ ಗಣದ ನೀನೂ, ಮಹಾಕಾಲನೂ ನನ್ನ ಶಿರಸ್ಸನ್ನು ರಕ್ಷಿಸಿರಿ.

೭೮. ವಜ್ರಾಯುಧದಿಂದಾಗಲಿ, ದಂಡದಿಂದಾಗಲಿ, ಚಕ್ರದಿಂದಾಗಲಿ, ಅಗ್ನಿಯಿಂದಾಗಲಿ ಮೂರು ಲೋಕದಲ್ಲಾರೂ ನಮಗೆ ಬಾಧೆಮಾಡಲು ಶಕ್ತರಾಗಲಾರರು.

೭೯. ನನ್ನ ಭಕ್ತರಾದ ದೇವದಾನವಗಂಧರ್ವರೂ, ಯಕ್ಷರಾಕ್ಷಸನಾಗರೂ ಮನುಷ್ಯರೂ ನಿನ್ನನ್ನೇ ಆಶ್ರಯಿಸುವರು.

ತ್ವಯಿ ತುಷ್ಟೇ ಹ್ಯಹಂ ತುಷ್ಟಃ ಕುಪಿತೇ ಕುಪಿತಸ್ತ್ವಹಮ್ ।
ತ್ವತ್ತಃ ಪ್ರಿಯತರೋ ನಾಸ್ತಿ ಮಮಾನ್ಯೋ ದ್ವಿಜಪುಂಗವ ॥ ೮೦ ॥

ಏವಂ ತಸ್ಮೈ ವರಾನ್ದತ್ವಾ ಪ್ರೀತಸ್ತ್ರ್ಯಯಮುಮಾಪತಿಃ ।
ಉವಾಚ ಭೂಯಃ ಸ್ಪಷ್ಟೇನ ಸ್ವರೇಣಾಂಬರಚಾರಿಣಾ ॥ ೮೧ ॥

ಆಗತಾನ್ವಿದ್ಧಿ ಸರ್ವಾನ್ತ್ವಂ ತ್ರಿದಶಾನ್ಸಮರುದ್ಗಣಾನ್ ।
ದಿದೃಕ್ಷಯಾ ಚ ಭದ್ರಂ ತೇ ಕೃತಕೃತ್ಯಶ್ಚ ಸಾಂಪ್ರತಂ ॥ ೮೨ ॥

ಯದೀರಿತಂ ಮಯಾ ವತ್ಸ ವರಂಪ್ರತಿವಚಸ್ತ್ವಯಿ ।
ಪ್ರವಿಷ್ಟಂ ನ ಶ್ರುತಿಪಥಂ ದಿವಿ ಸರ್ವದಿವೌಕಸಾಂ ॥ ೮೩ ॥

ನಾರಾಯಣಂ ಪುರಸ್ಕೃತ್ಯ ಸೇಂದ್ರಾಸ್ತೇ ಸಮರುದ್ಗಣಾಃ ।
ಪ್ರೇಮಾರ್ಥೇ ಚಾಗಮಿಷ್ಯಂತಿ ವರಾರ್ಥಂ ತಪಸಾಮರಾಃ ॥ ೮೪ ॥

---

೮೦. ನೀನು ಸಂತುಷ್ಟನಾದರೆ ನಾನು ಸಂತುಷ್ಟನಾಗುವೆನು. ನೀನು ಯಾರಲ್ಲಾದರೂ ಕೋಪವುಳ್ಳವನಾದರೆ ನಾನೂ ಅವರ ಮೇಲೆ ಕೋಪವುಳ್ಳವನಾಗುವೆನು. ದ್ವಿಜವರ್ಯನೇ, ನಿನಗಿಂತಲೂ ಅಧಿಕಪ್ರಿಯನು ನನಗೆ ಬೇರಾವನೂ ಇಲ್ಲ.

೮೧. ಪ್ರೀತನಾದ ಪಾರ್ವತೀಪತಿಯು ಆನಂದಿಗೆ ತಾನೇ ಹೀಗೆ ವರಗಳನ್ನು ಕೊಟ್ಟು, ಆಕಾಶದಲ್ಲಿ ಹರಡುವ ಸ್ಪಷ್ಟವಾದ ಸ್ವರದಿಂದ ಮತ್ತೆ ಆತನಿಗೆ ಹೇಳಿದನು-

೮೨. " ನೀನು ಈಗ ಧನ್ಯನಾಗಿದ್ದೀಯೆ. ನಿನಗೆ ಮಂಗಳವು. ನಿನ್ನನ್ನು ನೋಡಲಿಚ್ಛೆಯಿಂದ ಮರುದ್ಗಣಗಳಿಂದ ಕೂಡಿದ ದೇವದೆಗಳು ಇಲ್ಲಿಗೆ ಬಂದರೆಂದು ತಿಳಿ.

೮೩-೮೪. ವತ್ಸ, ವರದ ವಿಚಾರದಲ್ಲಿ ನಿನಗೆ ನಾನು ಹೇಳಿದ ಮಾತು ಸ್ವರ್ಗದಲ್ಲಿ ದೇವತೆಗಳೆಲ್ಲರ ಕಿವಿಗೂ ಬಿದ್ದಿಲ್ಲ. ಮರುದ್ಗಣದೊಡನೆಯೂ, ಇಂದ್ರನೊಡನೆಯೂ ಕೂಡಿದ ದೇವತೆಗಳು ನಾರಾಯಣನನ್ನು ಮುಂದಿಟ್ಟುಕೊಂಡು ನಮ್ಮ ಪ್ರೀತಿಗಾಗಿಯೂ, ತಪಸ್ಸಿನಿಂದ ವರಪಡೆಯುವುದಕ್ಕಾಗಿಯೂ ಇಲ್ಲಿ ಬರುವರು.

ಯಕ್ಷವಿದ್ಯಾಧರಗಣಾಃ ಸಿದ್ಧಗಂಧರ್ವಪನ್ನಗಾಃ ।
ಮುನಯಶ್ಚ ಮಹಾತ್ಮಾನಸ್ತಪೋಲಬ್ಧಾಸ್ಸಹಸ್ರಶಃ ॥ ೮೫ ॥

ತೇ ಬುದ್ಧ್ವಾ ತ್ವದ್ಗತಾಮೃದ್ಧಿಮ್ಸ್ಪ್ರತಪ್ತಾಃ ಪರಮೇಷ್ಯಯಾ ।
ತಪಾಂಸಿ ವಿವಿಧಾನ್ಯತ್ರ ವಿವಿಧಾನ್ನಿಯಮಾಂಸ್ತಥಾ ॥ ೮೬ ॥

ಚರ್ತುಂ ಸಮಭಿವಾಂಛಂತಿ ಸದಾಭ್ಯಾಸೇ ವರಾರ್ಥಿನಃ ॥ ೮೭ ॥

ವರದಂ ಮಾಮಭಿಜ್ಞಾಯ ಗಿರೌ ಮೌಂಜವತಿ ಸ್ಥಿತಂ ॥ ೮೮ ॥

ಅತ್ರೈತೇ ಯಾವದಾಗಮ್ಯ ನ ಮಾಂ ಪಶ್ಯಂತಿ ಮಾನವಾಃ ।
ತಾವದೇವ ತ್ವಿತಶ್ಶೀಘ್ರಂ ಗಮಿಷ್ಯಾಮಿ ಮಹಾಮುನೇ ॥ ೮೯ ॥

ಅದ್ಯ ತೇ ತು ಮಯಾ ಸರ್ವೇ ದೇವಾ ಬ್ರಹ್ಮಪುರೋಗಮಾಃ ।
ದ್ರಷ್ಟವ್ಯಾಶ್ಚಾನುಮಂತವ್ಯಾ ಮತ್ತೋಽನುಗ್ರಹಕಾಂಕ್ಷಿಣಃ ॥ ೯೦ ॥

೮೫-೮೮ ಆ ಯಕ್ಷವಿದ್ಯಾಧರರೂ, ಸಿದ್ಧಗಂಧರ್ವನಾಗರೂ, ತಪಸ್ವಿಗಳಾದ ಮಹಾಮುನಿಗಳೂ ಸಾವಿರಾರುಜನ ನಿನಗುಂಟಾದ ಏಳ್ಗೆಯನ್ನು ಅರಿತು ಪರಮೇಷ್ಯೆಯಿಂದ ಸಂತಪ್ತರಾಗಿ, ವರದನಾದ ನಾನು ಮುಂಜವತ್ಪರ್ವತದಲ್ಲಿರುವುದನ್ನು ತಿಳಿದು ವರಾರ್ಥಿಗಳಾಗಿ ಇಲ್ಲಿ ನನ್ನ ಸಮೀಪದಲ್ಲಿಯೇ ಯಾವಾಗಲೂ ವಿಧವಿಧವಾದ ತಪಸ್ಸನ್ನೂ, ಬಗೆಬಗೆಯ ವ್ರತಗಳನ್ನೂ ಮಾಡಲು ಅಪೇಕ್ಷಿಸುವರು.

೮೯. ಮಹಾಮುನಿಯೇ, ಆ ಮನುಷ್ಯರೇ ಮೊದಲಾದವರು ಇಲ್ಲಿ ಬಂದು ನನ್ನನ್ನು ನೋಡುವಷ್ಟರಲ್ಲಿಯೇ ನಾನು ಇಲ್ಲಿಂದ ಬೇಗನೆ ಹೊರಟುಹೋಗುತ್ತೇನೆ.

೯೦-೯೧. ಬ್ರಹ್ಮನೇ ಮೊದಲಾದ ಆ ದೇವತೆಗಳೆಲ್ಲರನ್ನೂ ನಾನು ನೋಡಬೇಕಾಗುವುದಲ್ಲದೆ ಅನುಮತಿಸಬೇಕಾಗುವುದು. ದ್ವಿಜೋತ್ತಮನೇ, ಅವರು ನನ್ನಿಂದ ಅನುಗ್ರಹವನ್ನು ಬಯಸುವವರಾಗಿರುವರು. ಅವರೆಲ್ಲರ ಅಭಿಪ್ರಾಯ

ಅಭಿಪ್ರಾಯಂ ಚ ಸರ್ವೇಷಾಂ ಜಾನಾಮಿ ದ್ವಿಜಸತ್ತಮ ।
ಅನುಗೃಹ್ಯ ವರೈಸ್ತೈಶ್ಚ ತತ್ರೈವಾಂತರಧೀಯತ ॥ ೯೧ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಗೋಕರ್ಣೇಶ್ವರಮಾಹಾತ್ಮ್ಯಂ ನಾಮ ತ್ರಯೋದಶಾಧಿಕದ್ವಿಶತತಮೋಽಧ್ಯಾಯಃ

ವನ್ನು ನಾನು ಬಲ್ಲೆನು." ಎಂದು ಹೇಳಿ, ಹಿಂದಿನ ಆವರಗಳನ್ನು ಅನುಗ್ರಹಿಸಿ ಶಂಕರನು ಅಂತರ್ಧಾನವನ್ನೈದಿದನು.

ಅಧ್ಯಾಯದ ಸಾರಾಂಶ—

ಬ್ರಹ್ಮನು ತನ್ನನ್ನು ಪ್ರಶ್ನಿಸಿದ ಸನತ್ಕುಮಾರಮುನಿಗೆ ಗೋಕರ್ಣೇಶ್ವರ ಮಹಿಮೆಯನ್ನು ವಿವರಿಸುತ್ತ ಮಂದರಗಿರಿಯ ಉತ್ತರದಲ್ಲಿರುವ ಮುಂಜವಂತ ಪರ್ವತದ ಆಶ್ರಮದಲ್ಲಿ ಶಂಕರನನ್ನು ಕುರಿತು ಉಗ್ರವಾದ ತಪಸ್ಸನ್ನು ಮಾಡಿ, ಗಣೇಶ್ವರಪದವಿಯನ್ನು ಪಡೆದ ನಂದಿಯೆಂಬ ಬ್ರಹ್ಮರ್ಷಿಯ ಕಥೆಯನ್ನು ವಿವರವಾಗಿ ಹೇಳಿದನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರಹದಿಮೂರನೆಯ ಅಧ್ಯಾಯ.

|| ಶ್ರೀ ||

ಚತುರ್ದಶಾಧಿಕದ್ವಿಶತತಮೋಽಧ್ಯಾಯಃ

ಪುನಃ ಗೋಕರ್ಣಮಾಹಾತ್ಮ್ಯನಂದಿಕೇಶ್ವರವರಪ್ರದಾನವರ್ಣನಂ

|| ಬ್ರಹ್ಮೋವಾಚ ||

ಅಂತರ್ಹಿತೇ ತತಸ್ತಸ್ಮಿನ್ಛಿವೇ ವೈ ಭೂತನಾಯಕೇ ।
ಬಭೂವ ದಿವ್ಯಸ್ಸ ತದಾ ನಂದೀ ಗಣಚಮೂಪತಿಃ ॥ ೧ ॥

ಚತುರ್ಭುಜಸ್ತ್ರಿಣಯನೋ ದಿವ್ಯಸಂಸ್ಥಾನಸಂಸ್ಥಿತಃ ।
ದಿವ್ಯವರ್ಣವಪುಶ್ಚಾರುರ್ದಿವ್ಯಾಗುರುಸಮನ್ವಿತಃ ॥ ೨ ॥

ತ್ರಿಶೂಲೀ ಪರಿಘೀ ದಂಡೀ ಪಿನಾಕೀ ಮೌಂಜಮೇಖಲೀ ।
ಶುಶುಭೇ ತೇಜಸಾ ತತ್ರ ದ್ವಿತೀಯ ಇವ ಶಂಕರಃ ॥ ೩ ॥

ಇನ್ನೂರಹದಿನಾಲ್ಕನೆಯ ಅಧ್ಯಾಯ

ಗೋಕರ್ಣಮಹಿಮೆಯಲ್ಲಿ ನಂದಿಕೇಶ್ವರವರಪ್ರದಾನ ವರ್ಣನೆ.

೧. ಬ್ರಹ್ಮ:— ಭೂತನಾಯಕನಾದ ಆ ಶಂಕರನು ಅಂತರ್ಧಾನವನ್ನು ಪಡೆದ ಬಳಿಕ ಆ ನಂದಿಯು ದಿವ್ಯನಾದ ಗಣಸೇನಾಪತಿಯಾದನು.

೨-೩. ಆತನು ಚತುರ್ಭುಜನೂ, ತ್ರಿಣೇತ್ರನೂ, ದಿವ್ಯವಾದ ಅವಯವ ಸನ್ನಿವೇಶವೂ ದಿವ್ಯವರ್ಣವೂ ಉಳ್ಳ ಮನೋಹರವಾದ ದೇಹವುಳ್ಳವನೂ, ದಿವ್ಯಾಗುರುವಿನಿಂದ ಕೂಡಿದವನೂ, ತ್ರಿಶೂಲ ಪರಿಘ ದಂಡ ಪಿನಾಕ (ಬಿಲ್ಲು) ಮೌಂಜಿಕಟಿಸೂತ್ರಗಳನ್ನು ಧರಿಸಿದವನೂ ಆಗಿ, ಎರಡನೆಯ ಶಂಕರನಂತೆ ತೇಜದಿಂದ ಹೊಳೆಯುತ್ತಿದ್ದನು.

ಆಸ್ಥಿತಃ ಪಾದಮಾಕೃಷ್ಯ ಹ್ಯಾಹ್ವಯನ್ನಿವ ಸ ದ್ವಿಜಃ ।
ತ್ರಿಭಿಃ ಕ್ರಮ್ಯೈಃ ಕ್ರಾಂತುಮನಾಸ್ತ್ರಿವಿಕ್ರಮ ಇವೋದ್ಯತಃ ॥ ೪ ॥

ತಂ ದೃಷ್ಟ್ವಾ ಖೇಚರಾಸ್ಸರ್ವಾ ದೇವತಾಃ ಪರಿಶಂಕಿತಾಃ ।
ಆಖ್ಯಾತುಂ ಪುರುಹೂತಾಯ ಸಂಭ್ರಾಂತಾಃ ಪ್ರಯಯುರ್ದಿವಂ ॥ ೫ ॥

ತೇಭ್ಯಶ್ಶ್ರುತ್ವಾ ಸಹಸ್ರಾಕ್ಷಃ ಸರ್ವೇ ಚಾನ್ಯೇ ದಿವೌಕಸಃ ।
ವಿಷಾದಂ ಪರಮಂ ಗತ್ವಾ ಚಿಂತಾಮಾಪೇದಿರೇ ಭೃಶಂ ॥ ೬ ॥

ಅಯಂ ಕಶ್ಚಿದ್ವರಂ ಲಬ್ಧ್ವಾ ಹ್ಯುಮಾಕಾಂತಾನ್ಮಹೇಶ್ವರಾತ್ ।
ಅತ್ಯೂರ್ಜಿತಬಲಶ್ಶ್ರೀಮಾಂಸ್ತ್ರೈಲೋಕ್ಯಂ ಪ್ರಪತ್ಸ್ಯತಿ ಧ್ರುವಂ ॥ ೭ ॥

ಯಾದೃಶೋಸ್ಯ ಮಹೋತ್ಸಾಹಸ್ತೇಜೋಬಲಸಮನ್ವಿತಃ ।
ನೂನಮೇಷ ಮಹಾಸತ್ವೋ ಹರೇತ್ಸ್ಥಾನಂ ದಿವೌಕಸಾಂ ॥ ೮ ॥

---

೪. ಆ ದ್ವಿಜವೃಷಭನು ಒಂದು ಕಾಲಿನಿಂದ ನೆಲವನ್ನು ಕೆರೆಯುತ್ತ (ಯಾರನ್ನೋ) ಕರೆಯುವನಂತೆಯೂ, ಮೂರು ಕಾಲುಗಳಿಂದ ನಡೆಯಲಿಷ್ಟವುಳ್ಳವನಾಗಿ ತ್ರಿವಿಕ್ರಮನಂತೆ ಲೋಕವನ್ನೆಲ್ಲಾ ಆಕ್ರಮಿಸಲು ಪ್ರಯತ್ನಿಸುತ್ತಿರುವನಂತೆಯೂ ಕಾಣಿಸುತ್ತಿದ್ದನು.

೫. ಆಕಾಶಗಾಮಿಗಳಾದ ದೇವತೆಗಳೆಲ್ಲರೂ ಅವನನ್ನು ನೋಡಿ, ಭಯಭ್ರಾಂತಿಗಳುಳ್ಳವರಾಗಿ ಆ ವಿಚಾರವನ್ನು ಇಂದ್ರನಿಗೆ ಹೇಳಲು ಸ್ವರ್ಗಕ್ಕೆ ಹೋದರು.

೬. ಅವರಿಂದ ಆ ವಿಚಾರವನ್ನು ಕೇಳಿದ ಸಹಸ್ರಾಕ್ಷನಾದ ಇಂದ್ರನೂ ಇತರ ಎಲ್ಲಾ ದೇವತೆಗಳೂ ಬಹುವಿಷಾದವುಳ್ಳವರಾಗಿ ಅತಿಚಿಂತೆಗೊಳಗಾದರು.

೭. ‘ಇವನೊಬ್ಬನು ಪಾರ್ವತೀಪತಿಯಾದ ಮಹೇಶ್ವರನಿಂದ ವರವನು, ಪಡೆದು, ಅತ್ಯಧಿಕವಾದ ಬಲವುಳ್ಳವನೂ, ಶ್ರೀಮಂತನೂ ಆಗಿರುವನು. ತಪ್ಪದೆ ತ್ರಿಲೋಕವನ್ನೂ ಆಕ್ರಮಿಸುವನು.

೮. ಈತನ ಮಹೋತ್ಸಾಹವು ಎಂತಹುದಾಗಿದೆ! ತೇಜೋಬಲಗಳಿಂದ ಕೂಡಿದ ಮಹಾಸತ್ವನಾದ ಈತನು ನಿಜವಾಗಿಯೂ ದೇವತೆಗಳ ಸ್ಥಾನವನ್ನಪಹರಿಸುವನು.

ಯಾವಚ್ಛಕ್ತ್ಯೌಜಸಾ ನಾಕಮಸೌ ಚಂಕ್ರಮತೇ ಪ್ರಭುಃ ।
ಪ್ರಸಾದಯಾಮೋ ವರದಂ ತಾವದೇವ ಮಹೇಶ್ವರಂ ॥ ೯ ॥
ಏವಮುಕ್ತ್ವಾ ತು ತೇ ತತ್ರ ಮಯಾ ಸಹ ಸುರೋತ್ತಮಾಃ ।
ಗಿರೇರ್ಮೌಂಜವತಶ್ಶೃಂಗಮಾಜಗ್ಮುರ್ದೇವನಿರ್ಮಿತಂ ॥ ೧೦ ॥
ವಿಧಾತಾ ಭಗವಾನ್ವಿಷ್ಣುಃ ಪ್ರಭುಸ್ತ್ರಿಭುವನೇಶ್ವರಃ ।
ಅಭ್ಯಧಾವಂಸ್ತತಸ್ತೋಽಥ ಸ ಹಿ ಜಾನಾತಿ ಹೃದ್ಗತಂ ॥
ಕೃತೇನ ತೇನ ವಿಬುಧಾಃ ಪಶ್ಯಂತಿ ಮುನಯಶ್ಚ ತೇ ॥ ೧೧ ॥
ತತಸ್ಸ ಭಗವಾನ್ವಿಷ್ಣುಸ್ಸಹದೇವಸ್ಸಧಾತೃಕಃ ।
ಜಗಾಮ ತತ್ರ ಯತ್ರಾಸೌ ನಂದೀ ತಿಷ್ಠತಿ ದೇವವತ್ ॥ ೧೨ ॥

॥ ನಂದ್ಯುವಾಚ ॥

ಸಫಲಂ ಜೀವಿತಂ ಮೇದ್ಯ ಸಫಲಶ್ಚ ಪರಿಶ್ರಮಃ ।
ಯನ್ಮೇ ದೃಷ್ಟಸ್ಸುರಾಧ್ಯಕ್ಷಸ್ಸರ್ವಲೋಕಗುರುರ್ಹರಿಃ ॥ ೧೩ ॥

---

೯. ಈಪ್ರಭುವು ತನ್ನ ಬಲದಿಂದ ಸ್ವರ್ಗವನ್ನು ಆಕ್ರಮಿಸುವುದಕ್ಕೆ ಮೊದಲೇ ನಾವು ಮಹೇಶ್ವರನನ್ನು ಪ್ರಸನ್ನನನ್ನಾಗಿ ಮಾಡಿಕೊಳ್ಳೋಣ" ಎಂದರು.

೧೦. ಆ ಸುರೋತ್ತಮರು ಅಲ್ಲಿ ಹಾಗೆ ಹೇಳಿ, ನನ್ನೊಡನೆ ದೇವನಿರ್ಮಿತವಾದ ಮೌಂಜವದ್ಗಿರಿಶಿಖರಕ್ಕೆ ಬಂದರು.

೧೧. "ತ್ರಿಲೋಕೇಶ್ವರನೂ, ಪ್ರಭುವೂ, ಭಗವಂತನೂ ಆದ ವಿಷ್ಣುವು ನಮಗೆ ವಿಧಾಯಕನು. ಆತನು ನಮ್ಮ ಮನಸ್ಸಿನಲ್ಲಿರುವುದನ್ನು ಬಲ್ಲನು" ಎಂದುಕೊಂಡು ಬಳಿಕ ಆತನ ಬಳಿಗೆ ಓಡಿದರು. ಆ ವಿಷ್ಣುವಿನಿಂದ ಪರ್ಯಾಪ್ತರಾಗಿ ಆ ಮುನಿಗಳೂ ದೇವತೆಗಳೂ ಈಶ್ವರನನ್ನು ನೋಡಲಿಚ್ಛಿಸಿದರು.

೧೨. ಪೂಜ್ಯನಾದ ಆವಿಷ್ಣುವು ಬಳಿಕ ದೇವತೆಗಳೊಡನೆಯೂ, ನನ್ನೊಡನೆಯೂ ಕೂಡಿದವನಾಗಿ, ನಂದಿಯು ಈಶ್ವರನಂತೆ ಎಲ್ಲಿದ್ದನೋ ಅಲ್ಲಿಗೆ ಹೋದನು.

೧೩. ನಂದಿ:— ನನಗೆ, ಸುರಾಧ್ಯಕ್ಷನೂ, ಸರ್ವಲೋಕಗುರುವೂ ಆದ ಹರಿಯ ಸಂದರ್ಶನವಾದುದರಿಂದ ಇಂದು ನನ್ನ ಜನ್ಮವು ಸಫಲವಾಯಿತು. ನನ್ನ ಪರಿಶ್ರಮವೂ ಸಾರ್ಥಕವಾಯಿತು.

ಪರ್ಯಾಪ್ತಂ ತನ್ಮಮಾದ್ಯೇಹ ಕೃತಕೃತ್ಯೋಽಸ್ಮಿ ತೇನ ವೈ ।
ಯಚ್ಚ ಮೇ ಪ್ರಭುರವ್ಯಗ್ರಃ ಪ್ರೀತಃ ಪಾಪಹರೋ ಹರಃ ॥ ೧೪ ॥

ವಿಧಾಯ ಪಾರ್ಷದತ್ವಂ ಮೇ ವರಾನಿಷ್ಟಾನ್ದದೌ ಶಿವಃ ।
ಹರೋ ಮೇಽನುಗ್ರಹಸ್ತ್ವೋಽತ್ರ ಪೂತೋಽಸ್ಮಿ ಖಲು ಸಾಂಪ್ರತಂ ॥ ೧೫ ॥

ಯಚ್ಚೋಕ್ತಂ ವಿಧಿನಾ ವಾಕ್ಯಂ ದೇವಾನ್ಪ್ರತಿ ಮಹಾತ್ಮನಾ ।
ಮಾಮುದ್ದಿಶ್ಯ ಹಿತಂ ತಥ್ಯಂ ತಥೈವ ಚ ನ ಚಾನ್ಯಥಾ ॥ ೧೬ ॥

ಯನ್ಮಾಂ ದೇವರ್ಷಯಃ ಪ್ರೀತ್ಯಾ ಸಮಾಗತ್ಯ ಪ್ರಿಯಂವದಾಃ ।
ತೇನಾಸ್ಮಿ ಪರಮಪ್ರೀತ ಆದೃತಃ ಪರಮೇಷ್ಠಿನಾ ॥ ೧೭ ॥

॥ ದೇವಾ ಊಚುಃ ॥

ವಯಂ ತಂ ವರದಂ ದೇವಂ ದ್ರಷ್ಟುಮಿಚ್ಛಾಮಹೇ ವರಪ್ರದಂ ।
ತವೈಷ ತಪಸಾ ತುಷ್ಟಸ್ಸ್ವಯಂ ಪ್ರತ್ಯಕ್ಷತಾಂ ಗತಃ ॥ ೧೮ ॥

---

೧೪. ಅವ್ಯಾಕುಲನೂ, ಪಾಪಹರನೂ ಪ್ರಭುವೂ ಆದ ಹರನು ನನಗೆ ಒಲಿದುದರಿಂದ ನಾನು ಕೃತಕೃತ್ಯನಾಗಿದ್ದೇನೆ. ನನ್ನ ಆ ಕೃತಕೃತ್ಯತೆಯು ಈಗ ಇಲ್ಲಿ ಹರಿದರ್ಶನದಿಂದ ಪರಿಪೂರ್ಣವಾಯಿತು.

೧೫. ಶಿವನು ನನಗೆ ಶಿವಗಣಾಧಿಪತ್ಯವನ್ನು ವಹಿಸಿ, ಇಷ್ಟವರಗಳನ್ನೂ ದಯೆಪಾಲಿಸಿದನು ಇಲ್ಲಿ ವಿಷ್ಣುದರ್ಶನವು ನನಗೆ ಇನ್ನೂ ಪರಮಾನುಗ್ರಹ ವಾಯಿತು. ಈ ನಾನು ಪವಿತ್ರನಾದೆನಲ್ಲವೆ!

೧೬. ಆ ಮಹಾತ್ಮನು ದೇವತೆಗಳ ವಿಚಾರವಾಗಿ ಹೇಳಿದ ಮಾತೂ ನನ ಗೋಸ್ಕರವಾಗಿ ಹೇಳಿದ ಹಿತೋಕ್ತಿಯೂ ಹಾಗೆಯೇ ಸತ್ಯವಾಯಿತು. ತಪ್ಪಲಿಲ್ಲ.

೧೭. ದೇವರ್ಷಿಗಳು ಪ್ರೀತಿಯಿಂದ ನನ್ನ ಸಮೀಪಕ್ಕೆ ಬಂದು ಪ್ರಿಯವಾದ ಮಾತನ್ನಾಡಿದುದರಿಂದಲೂ, ಬ್ರಹ್ಮನೂ ನನ್ನನ್ನು ಆದರಿಸಿದುದರಿಂದಲೂ ನಾನು ಪರಮಸಂತೋಷವುಳ್ಳವನಾಗಿದ್ದೇನೆ.

೧೮. ದೇವತೆಗಳು:— ನಿನ್ನ ತಪಸ್ಸಿನಿಂದ ಸಂತುಷ್ಟನಾಗಿ ತಾನೇ ಪ್ರತ್ಯಕ್ಷ ನಾಗಿ ನಿನಗೆ ವರವನ್ನುಅನುಗ್ರಹಿಸಿದ ಆವರದದೇವನನ್ನು ನಾವೂ ನೋಡಬೇಕು.

ಇತ್ಯುಕ್ತವಂತಸ್ತೇ ದೇವಾಃ ಪುನರೂಚುರ್ದ್ವಿಜೋತ್ತಮಂ ।
ಕುತ್ರ ದ್ರಕ್ಷ್ಯಾಮಹೇ ದೇವಂ ಭಗವಂತಂ ಕಪಾಲಿನಂ ॥ ೧೯ ॥

॥ ನಂದ್ಯುವಾಚ ॥

ಅನುಗೃಹ್ಯ ತು ಮಾಂ ದೇವಸ್ತತ್ರೈವಾದರ್ಶನಂ ಗತಃ ।
ನ ಜಾನೇ ಕುತ್ರ ವಾ ದೇವಂ ಕುತ್ರಾಸ್ತೇ ತದ್ಗವೇಷ್ಯತಾಂ ॥ ೨೦ ॥

॥ ಸನತ್ಕುಮಾರ ಉವಾಚ ॥

ಕಿಮಾಹ ನಂದಿನಂ ದೇವೋ ಯೇನಾಸೌ ನೋಕ್ತವಾನ್ಪ್ರಭುಂ ।
ತನ್ಮೇ ಕಥಯ ದೇವೇಶ ಗುಹ್ಯಂ ಕಿಂ ಚಾಸ್ತಿ ಶೂಲಿನಃ ॥ ೨೧ ॥

॥ ಬ್ರಹ್ಮೋವಾಚ ॥

ಯದುಕ್ತವಾನ್ಮಹೇಶಾನೋ ನಾಖ್ಯೇಯೋಸ್ತಿ ಸುರಾನ್ಪ್ರತಿ ।
ಕಿಮುಕ್ತವಾನ್ಮಹಾದೇವೋ ನಂದಿನಂ ತಚ್ಛೃಣುಷ್ವ ಮೇ ॥ ೨೨ ॥

---

೧೯. ಹೀಗೆ ಹೇಳಿದ ಆ ದೇವತೆಗಳು, ದ್ವಿಜೋತ್ತಮನಾದ ಆ ನಂದಿಯನ್ನು "ಕಪಾಲಿಯೂ, ಭಗವಂತನೂ ಆದ ಆ ದೇವನನ್ನು ನಾವು ಎಲ್ಲಿ ನೋಡಬಹುದು?" ಎಂದು ಕೇಳಿದರು.

೨೦. ನಂದಿ:— ಆ ದೇವನು ನನಗೆ ಅನುಗ್ರಹಿಸಿ, ಅಲ್ಲೇ ಅದೃಶ್ಯನಾದನು. ಆತನು ಎಲ್ಲಿರುವನೆಂಬುದನ್ನು ನಾನರಿಯೆನು. ದೇವನು ಎಲ್ಲಿರುವನೋ ! ನೀವೇ ಅವನನ್ನು ಅರಸಬೇಕಾಗಿದೆ.

೨೧. ಸನತ್ಕುಮಾರ:— ದೇವೇಶ(ಬ್ರಹ್ಮ)ನೇ, ದೇವನಾದ ಶಂಕರನು ನಂದಿಗೆ ಏನು ಹೇಳಿದ್ದನು ? ಏತಕ್ಕಾಗಿ ಪ್ರಭುವಾದ ಆ ನಂದಿಯು ಅವನಿರುವೆಡೆಯನ್ನು ದೇವತೆಗಳಿಗೆ ಹೇಳಲಿಲ್ಲ ? ಆ ಶಿವನ ರಹಸ್ಯವೇನೋ ಇರಬೇಕು. ಅದನ್ನು ನನಗೆ ಹೇಳು,

೨೨. ಬ್ರಹ್ಮ:— ಈಶ್ವರನು ದೇವತೆಗಳ ವಿಚಾರದಲ್ಲಿ ಏನು ಹೇಳಿದನೆಂಬುದನ್ನು ನಾನು ಹೇಳುವಂತಿಲ್ಲ ಆ ದೇವನು ನಂದಿಗೆ ಏನು ಹೇಳಿದ್ದನೆಂಬುದನ್ನು ತಿಳಿಸುತ್ತೇನೆ. ಕೇಳು.

॥ ಈಶ್ವರ ಉವಾಚ ॥

ಅಸ್ತಿ ಕಶ್ಚಿತ್ಸಮುದ್ದೇಶಃ ಕ್ಷಿತೇಃ ಸಿದ್ಧೋದ್ರಿಸಂಕಟಃ ।
ಪಾರೇ ಹಿಮವತಃ ಪುಣ್ಯೇ ತಪೋವನಗಣೈರ್ಯುತಃ ॥ ೨೩ ॥

ತತ್ರ ಶ್ಲೇಷ್ಮಾತಕೋ ನಾಮ ವಸತೇ ಪನ್ನಗೋತ್ತಮಃ ।
ಸೋನುಗ್ರಾಹ್ಯೋ ಮಯಾವಶ್ಯಂ ತಪಸಾ ದಗ್ಧಕಿಲ್ಬಿಷಃ ॥ ೨೪ ॥

ತದಭ್ಯಾಸೇ ಚ ರುಚಿರಂ ನ ಚಾಸೌ ವಾನರಾಶ್ರಯಃ ।
ತಸ್ಯ ನಾಮ್ನಾ ಚ ತತ್‌ಸ್ಥಾನಂ ದಿವ್ಯಂ ಚಿರತಪೋಭೃತಂ ॥ ೨೫ ॥

ಶ್ಲೇಷ್ಮಾತಕವನಂ ನಾಮ ಪುಣ್ಯಶೀಲಶಿಲೋಚ್ಚಯಂ ॥ ೨೬ ॥

ಮೃಗರೂಪೇಣ ಚರತಾ ತತ್ರ ವೈ ತ್ರಿದಶಾ ಮಯಾ ।
ದೃಷ್ಟವ್ಯಾ ಸಂಜಿಘೃಕ್ಷಂತಃ ಖಿನ್ನಾಶ್ಚಾನ್ವೇಷಣೇ ಮಮ ॥ ೨೭ ॥

---

೨೩. ಈಶ್ವರ:— ಪವಿತ್ರವಾದ ಹಿಮವತ್ಪರ್ವತದ ಪಕ್ಕದಲ್ಲಿ ಬೆಟ್ಟಗಳಿಂದ ಇಕ್ಕಟ್ಟಾಗಿ ತಪೋವನಗಳಿಂದ ಕೂಡಿ, ಸಿದ್ಧಿಪ್ರದವಾಗಿರುವ ಭೂಪ್ರದೇಶವೊಂದಿದೆ.

೨೪ ಅಲ್ಲಿ ಶ್ಲೇಷ್ಮಾತಕನೆಂಬ ಹೆಸರಿನ ನಾಗೋತ್ತಮನು ವಾಸಿಸುವನು. ತಪಸ್ಸಿನಿಂದ ಪಾಪಗಳನ್ನು ಕಳೆದುಕೊಂಡಿರುವ ಆತನಿಗೆ ನಾನು ಅವಶ್ಯವಾಗಿ ಅನುಗ್ರಹಿಸಬೇಕಾಗಿದೆ.

೨೫-೨೬. ಆವನಿರುವ ಮನೋಹರವೂ, ದಿವ್ಯವೂ, ಬಹುಕಾಲದಿಂದ ತಪಸ್ಸಿಗೆ ನೆಲೆಯೂ ಆಗಿರುವ ಶ್ಲೇಷ್ಮಾತಕವನವೆಂದು ಅವನ ಹೆಸರಿನಿಂದಲೇ ಪ್ರಸಿದ್ಧವಾಗಿರುವ ಆ ಪ್ರದೇಶವು ಪುಣ್ಯಶೀಲಪರ್ವತವುಳ್ಳುದಾಗಿದೆ. ಅದು ವಾನರರು ವಾಸಿಸದೆಡೆಯಾಗಿದೆ.

೨೭. ನನ್ನನ್ನು ಹಿಡಿಯಬೇಕೆಂದು ನನ್ನನ್ನು ಹುಡುಕುವುದರಲ್ಲಿ ಖಿನ್ನರಾದ ದೇವತೆಗಳನ್ನು ಅಲ್ಲಿ ಮೃಗ (ಜಿಂಕೆ) ರೂಪದಿಂದ ಸಂಚರಿಸುತ್ತಾ ನಾನು ನೋಡಬೇಕೆಂದಿರುತ್ತೇನೆ.

ನಾಖ್ಯಾತವ್ಯಂ ತ್ವಯಾ ತೇಷಾಂ ದೇವತಾಪ್ಸರಸಾಮಿದಂ |
ಅನುಗೃಹ್ಯ ವರೈಸ್ತ್ಯೈಶ್ಚ ತತ್ರೈವಾಂತರಧೀಯತ || ೨೮ ||

ವಿದ್ಯೋತಯನ್ದಿಶಸ್ಸರ್ವಾಸ್ತ್ರಿದಶೈಃ ಪರಿವಾರಿತಃ ।
ಬಾಲಕೇಂದುನಿಭಂ ದಿವ್ಯಮರ್ಚಿತಂ ದಿವ್ಯಬಿಂದುಭಿಃ || ೨೯ ||

ಕಾಮಗಂ ರಥಮಾರುಹ್ಯ ಮಹೇಂದ್ರಸ್ಸಮರುದ್ಗಣಃ |
ಆಯಾತಶ್ಶೈಲಪೃಷ್ಠಂ ತನ್ತೇಜಸಾ ಪೂರಯನ್ನಿವ || ೩೦ ||

ಗಣಾವೃತಶ್ಚ ವರದೋ ವರುಣೋ ಯಾದಸಾಂಪತಿಃ |
ವಜ್ರಸ್ಫಟಿಕಚಿತ್ರೇಣ ವಿಮಾನೇನಾತಿತೇಜಸಾ || ೩೧ ||

ತಪ್ತಕಾಂಚನವರ್ಣೇನ ರತ್ನಚಿತ್ರೇಣ ಭಾಸ್ವತಾ |
ವಿಮಾನೇನಾಗತಶ್ಶೃಂಗೇ ದ್ಯೋತಯನ್ವೈ ಧನಾಧಿಪಃ |
ವಿಮಾನಶತಕೋಟೀಭಿರಾಗತೋ ಯಕ್ಷರಾಕ್ಷಸೈಃ || ೩೨ ||

---

೨೮. ನೀನು ಈ ವಿಚಾರವನ್ನು ಆ ದೇವತೆಗಳಿಗೂ, ಅಪ್ಸರಸರಿಗೂ ಹೇಳಕೂಡದು. ಎಂದು ಆ ವರಗಳಿಂದ ಅನುಗ್ರಹಿಸಿ ಶಿವನು ಅಲ್ಲೇ ಕಣ್ಮರೆಯಾದನು.

೨೯-೩೦. ಮರುದ್ಗಣಗಳೊಡಗೂಡಿ ದೇವತೆಗಳಿಂದ ಪರಿವಾರಿತನಾದ ದೇವೇಂದ್ರನು, ಬಾಲಚಂದ್ರಸದೃಶವಾಗಿ ದಿವ್ಯಬಿಂದುಗಳಿಂದರ್ಚಿತವಾದ ಇಷ್ಟಾನುಸಾರವಾಗಿ ಚಲಿಸುವ ದಿವ್ಯರಥವನ್ನೇರಿ, ಕಾಂತಿಯಿಂದ ದಿಕ್ಕುಗಳೆಲ್ಲವನ್ನೂ ಪ್ರಕಾಶಗೊಳಿಸುತ್ತ ಆ ಪರ್ವತದ ತಪ್ಪಲನ್ನೂ ಆ ಕಾಂತಿಯಿಂದ ತುಂಬುವುನಂತೆ ಅಲ್ಲಿಗೆ ಬಂದನು.

೩೧. ಜಲಜಂತುಗಳಿಗೊಡೆಯನೂ, ವರಪ್ರದನೂ, ಆದ ವರುಣನೂ ತನ್ನ ಪರಿವಾರದೊಡನೆ ವಜ್ರಸ್ಫಟಿಕಗಳಿಂದ ಚಿತ್ರವಾಗಿ ಬಹಳವಾಗಿ ಹೊಳೆಯುವ ವಿಮಾನದಲ್ಲಿ ಅಲ್ಲಿಗೆ ಬಂದನು.

೩೨. ಪುಟವಿಟ್ಟ ಚಿನ್ನದ ಬಣ್ಣದ ರತ್ನಚಿತ್ರಗಳಿಂದ ಹೊಳೆಯುವ ಅತಿ ಕಾಂತಿಯುಳ್ಳ ವಿಮಾನದಲ್ಲಿ ಕುಬೇರನು ಯಕ್ಷರಾಕ್ಷಸರಿಂದ ತುಂಬಿದ ನೂರು ಕೋಟಿವಿಮಾನಗಳಿಂದ ಪರಿವೃತನಾಗಿ ಆ ಶಿಖರವನ್ನು ಪ್ರಕಾಶಗೊಳಿಸುತ್ತ ಅಲ್ಲಿ ಬಂದನು.

ಶ್ರೀಮದ್ಭಿರ್ಬಹುಭಿರ್ದಿವ್ಯೈರ್ವಿಮಾನೈಃಸೂರ್ಯಸನ್ನಿಭೈಃ |
ಅಧಿಷ್ಠಿತಸ್ಸುಕೃತಿಭಿಃ ಪ್ರಾಯಾದ್ವೈವಸ್ವತೋ* ಯಮಃ || ೩೩ ||

ಚಂದ್ರಾದಿತ್ಯೌ ಗ್ರಹಾಸ್ಸರ್ವೇ ಸಮಗ್ರಂ ಋಕ್ಷಮಂಡಲಂ |
ವಿಮಾನೈರಗ್ನಿತುಲ್ಯಾಭೈರಾಜಗ್ಮುಃ ಖಾನ್ಮಹೀಧರಂ || ೩೪ ||

ರುದ್ರಾಸ್ತ್ವೇಕಾದಶಾಯಾತಾಃ ಸೂರ್ಯಾ ದ್ವಾದಶ ಚೈವ ತು |
ಆಗತಾವಶ್ವಿನೌ ದೇವೌ ಮೌಂಜವಂತಂ ಮಹಾಗಿರಿಂ || ೩೫ ||

ವಿಶ್ವೇದೇವಾಶ್ಚ ಸಾಧ್ಯಾಶ್ಚ ಗುರುಶ್ಚ ತಪಸಾನ್ವಿತಃ |
ಸಂಛಾದ್ಯೈರಾವತಪಥಂ ಸಹಸಾಭ್ಯಾಯಯುದ್ರುತಂ || ೩೬ ||

ಸ್ಕಂದಶ್ಚೈವ ವಿಶಾಖಶ್ಚ ಭಗವಾಂಶ್ಚ ವಿನಾಯಕಃ |
ಸಂಪ್ರಾಪ್ತಸ್ತಂ ಗಿರಿವರಂ ಮಯೂರಶತನಾದಿತಂ || ೩೭ ||

---

೩೩. ಸೂರ್ಯಪುತ್ರನಾದ ಯಮನೂ, ಸೂರ್ಯನಂತೆ ಹೊಳೆಯುವ ಹಲವು ದಿವ್ಯ ವಿಮಾನಗಳಲ್ಲಿ ಸುಕೃತಿಗಳಿಂದೊಡಗೂಡಿದವನಾಗಿ ಅಲ್ಲಿಗೆ ಬಂದನು.

೩೪. ಚಂದ್ರಸೂರ್ಯರೂ, ಇತರಸರ್ವಗ್ರಹಗಳೂ, ನಕ್ಷತ್ರಮಂಡಲದವರೂ, ಅಗ್ನಿಯಂತೆ ಹೊಳೆಯುವ ವಿಮಾನಗಳಲ್ಲಿ ಆಕಾಶದಿಂದ ಆ ಪರ್ವತಕ್ಕೆ ಬಂದರು.

೩೫. ಏಕಾದಶರುದ್ರರೂ, ದ್ವಾದಶಾದಿತ್ಯರೂ, ಅಶ್ವಿನೀದೇವತೆಗಳೂ ಆ ಮೌಂಜವನ್ಮಹಾಗಿರಿಗೆ ಬಂದರು.

೩೬. ವಿಶ್ವದೇವರೂ, ಸಾಧ್ಯರೂ, ತಪೋನಿಷ್ಠನಾದ ಗುರುವೂ ಆಕಾಶ ಮಾರ್ಗವನ್ನು ತುಂಬುತ್ತ ಬೇಗನೆ ಅಲ್ಲಿಗೆ ಬಂದರು.

೩೭. ಮಯೂರವಾಹನನಾದ ಷಣ್ಮುಖನೂ, ಪೂಜ್ಯನಾದ ವಿನಾಯಕನೂ ನೂರಾರು ನವಿಲುಗಳ ಕೇಕಾಧ್ವನಿಯುಳ್ಳ ಆ ಉತ್ತಮಗಿರಿಗೆ ಬಂದರು.

---

* ಪಮಃ.

ನಾರದಸ್ತುಂಬುರುಶ್ಚೈವ ವಿಶ್ವಾವಸುಪರಾವಸೂ ।
ಹಾಹಾಹೂಹೂಸ್ತಥಾ ಚಾನ್ಯೇ ಸರ್ವೇ ಗಂಧರ್ವಸತ್ತಮಾಃ ।
ವೈಹಾಯಸೈರ್ಯಾನವರೈರ್ವಿವಿಧೈರ್ವಾಸವಾಜ್ಞಯಾ ॥ ೩೮ ॥

ಅನಿಲಶ್ಚಾನಲಶ್ಚೈವ ಧರ್ಮಸ್ಸತ್ಯೋ ಧ್ರುವೋಽಪರಃ ॥ ೩೯ ॥

ದೇವರ್ಷಯಶ್ಚ ಸಿದ್ಧಾಶ್ಚ ಯಕ್ಷಾ ವಿದ್ಯಾಧರಾಸ್ತಥಾ ।
ಗುಹ್ಯಕಾಶ್ಚ ಮಹಾತ್ಮಾನಃ ಸರ್ವ ಏವ ಸಮಾಗತಾಃ ॥ ೪೦ ॥

ಗಂಧಕಾಲೀ ಘೃತಾಚೀ ಚ ಬುದ್ಧಾ*ಗೌರೀ ತಿಲೋತ್ತಮಾ ।
ಉರ್ವಶೀ ಮೇನಕಾ ರಂಭಾ ಪಂಚಸ್ಥಾ ಚ ತಥಾಪರಾ ॥ ೪೧ ॥

ಏತಾಶ್ಚಾನ್ಯಾಶ್ಚ ತಚ್ಛೈಲಮಾಜಗ್ಮುರ್ದೇವಯೋಷಿತಃ ॥ ೪೨ ॥

---

೩೮. ನಾರದನೂ, ತುಂಬುರನೂ, ವಿಶ್ವಾವಸುಪರಾವಸುಗಳೂ, ಹಾಹಾಹೂಹೂಗಳೂ, ಇತರ ಎಲ್ಲಾ ಗಂಧರ್ವೋತ್ತಮರೂ ಬಗೆಬಗೆಯ ಉತ್ತಮ ವಿಮಾನಗಳಿಂದ ಇಂದ್ರನ ಅಪ್ಪಣೆಯಂತೆ ಅಲ್ಲಿ ಬಂದರು.

೩೯–೪೦. ಮಹಾತ್ಮರಾದ ವಾಯುವೂ, ಅಗ್ನಿಯೂ, ಧರ್ಮನೂ, ಸತ್ಯನೂ, ಧ್ರುವನೂ, ದೇವರ್ಷಿಗಳೂ, ಸಿದ್ಧರೂ, ಯಕ್ಷರೂ, ವಿದ್ಯಾಧರರೂ, ಗುಹ್ಯಕರೂ ಎಲ್ಲರೂ ಅಲ್ಲಿ ಬಂದು ಸೇರಿದರು.

೪೧–೪೨. ಗಂಧಕಾವಲೀ, ಘೃತಾಚೀ, ಬುದ್ಧೆ, *ಗೌರಿ, ತಿಲೋತ್ತಮೆ, ಊರ್ವಶಿ, ಮೇನಕೆ, ರಂಭೆ, ಪಂಚಸ್ಥೆ ಎಂಬ ಇವರೂ, ಇತರ ದೇವವನಿತೆಯರೂ ಆ ಪರ್ವತಕ್ಕೆ ಬಂದರು.

---

* ಗೌರೀ— ಒಬ್ಬ ದೇವವೇಶ್ಯೆ. ಪಾರ್ವತಿಯಲ್ಲ.

ಪುಲಸ್ತ್ಯೋऽತ್ರಿರ್ಮರೀಚಿಶ್ಚ ವಸಿಷ್ಠೋ ಭೃಗುರೇವ ಚ ।
ಕಶ್ಯಪಃ ಪುಲಹಶ್ಚಾಪಿ ವಿಶ್ವಾಮಿತ್ರೋऽಥ ಗೌತಮಃ ॥ ೪೩ ॥

ಭಾರದ್ವಾಜೋऽಗ್ನಿವೇಶ್ಯಶ್ಚ ತಥಾ ವೃದ್ಧಪರಾಶರಃ ।
ಮಾರ್ಕಂಡೇಯೋಽಂಗಿರಾ ಗರ್ಗಸ್ಸಂವರ್ತಃಕ್ರತುರೇವ ಚ ॥ ೪೪ ॥

ಮರೀಚಿರ್ಜಮದಗ್ನಿಶ್ಚ ಭಾರ್ಗವಶ್ಚ್ಯವನಸ್ತಥಾ ।
ನಿಯೋಗಾನ್ಮಮ ವಿಷ್ಣೋಶ್ಚ ಶಕ್ರಸ್ಯ ತ್ರಿದಿವಸ್ಪತೇಃ ॥ ೪೫ ॥

ಸಿಂಧುಶ್ಚ ಪುರುಷಶ್ಚೈವ ಸರಯೂಶ್ಚ ಮಹಾನದೀ ।
ತಾಮ್ರಾರುಣಾ ಚಾರುಭಾಗಾ ವಿತಸ್ತಾಕೌಶಿಕೀ ತಥಾ ॥ ೪೬ ॥

ಪುಣ್ಯಾ ಸರಸ್ವತೀ ಕೋಕಾ ನರ್ಮದಾ ಬಾಹುದಾ ತಥಾ ।
ಶತದ್ರೂಶ್ಚ ವಿಪಾಶಾ ಚ ಗಂಡಕೀ ಚ ಸರಿದ್ವರಾ ॥ ೪೭ ॥

ಗೋದಾವರೀ ಚ ವೇಣೀ ಚ ತಾಪೀ ಚ ಸರಿದುತ್ತಮಾ ।
ಕರತೋಯಾ ಚ ಶೀತಾ ಚ ತಥಾ ಚೀರವತೀ ನದೀ ॥ ೪೮ ॥

೪೩–೪೫. ಪುಲಸ್ತ್ಯ, ಅತ್ರಿ, ಮರೀಚಿ, ವಸಿಷ್ಠ, ಭೃಗು ಕಶ್ಯಪ, ಪುಲಹ, ವಿಶ್ವಾಮಿತ್ರ, ಗೌತಮ, ಭಾರದ್ವಾಜ, ಅಗ್ನಿವೇಶ್ಯ, ವೃದ್ಧಪರಾಶರ, ಮಾರ್ಕಂಡೇಯ, ಆಂಗಿರಸ್ಸು, ಗರ್ಗ, ಸಂವರ್ತ, ಕ್ರತು, ಮರೀಚ ಜಮದಗ್ನಿ, ಭಾರ್ಗವ, ಚ್ಯವನ ಎಂಬ ಋಷಿಗಳೂ, ನನ್ನ, ವಿಷ್ಣುವಿನ ಮತ್ತು ಸ್ವರ್ಗಾಧಿಪತಿಯಾದ ಇಂದ್ರನ ಅನುಜ್ಞೆಯಿಂದ ಅಲ್ಲಿಗೆ ಬಂದರು.

೪೬–೫೧. ಸಿಂಧು, ಪುರುಷ, ಸರಯು, ಮಹಾನದಿ, ತಾಮ್ರಾರುಣಾ, ಚಾರುಭಾಗಾ, ವಿತಸ್ತಾ, ಕೌಶಿಕೀ, ಸರಸ್ವತಿ, ಕೋಕಾ, ನರ್ಮದಾ, ಬಾಹುದಾ, ಶತದ್ರೂ, ವಿಪಾಶಾ, ಸರಿದ್ವರೆಯಾದ ಗಂಡಕೀ, ಗೋದಾವರೀ, ವೇಣೀ, ತಾಪೀ, ಕರತೋಯಾ, ಶೀತಾ, ಚೀರವತೀ, ನಂದಾ, ಪರನಂದಾ, ಚರ್ಮಣ್ವತಿ, ಪರ್ಣಾಶಾ ದ್ವೈವಿಕಾ, ಮತ್ತೊಂದು ವಿತಸ್ತೆ, ಮತ್ತೊಂದು ಸಿಂಧು, ಪುರುಷ, ಪ್ರಭಾಸ,

ನಂದಾ ಚ ಪರನಂದಾ ಚ ತಥಾ ಚರ್ಮಣ್ವತೀ ನದೀ |
ಪರ್ಣಾಶಾ ದೈವಿಕಾ ಚೈವ ವಿತಸ್ತಾ ಚ ತಥಾಪರಾ || ೪೯ ||

ಸಿಂಧುಶ್ಚ*ಪುರುಷಶ್ಚೈವ ಪ್ರಭಾಸಸ್ಸೋಮ ಏವ ಚ |
ಲೋಹಿತಶ್ಚಾಯಯುಸ್ತತ್ರ ಗಂಗಾ ಸಾಗರ ಏವ ಚ || ೫೦ ||

ಅನ್ಯಾನಿ ಚಾಪಿ ಮೇದಿನ್ಯಾಂ ತೀರ್ಥಾನ್ಯಾಯತನಾನಿ ಚ |
ನಿಜಸ್ವರೂಪೇಣಾಜಗ್ಮುಸ್ತತ್ರ ಪುಣ್ಯಾನ್ಯನೇಕಶಃ || ೫೧ ||

ಉಪಾಗತಾನಿ ಚೇಂದ್ರಸ್ಯ ನಿಯೋಗಾದುತ್ತಮಂ ಗಿರಿಂ |
ಶೈಲೋತ್ತಮೋ ಮಹಾಮೇರುಃ ಕೈಲಾಸೋ ಗಂಧಮಾದನಃ || ೫೨ ||

ಹಿಮವಾನ್ ಹೇಮಕೂಟಶ್ಚ ನಿಷಧಶ್ಚ ಮಹಾಗಿರಿಃ |
ವಿಂಧ್ಯೋ ಮಹೇಂದ್ರಸ್ಸಹ್ಯಶ್ಚ ಮಲಯೋದರ್ದುರಸ್ತಥಾ || ೫೩ ||

ಮಾಲ್ಯವಾಂಶ್ಚಿತ್ರಕೂಟಶ್ಚ ತಥಾ ದ್ರೋಣಶ್ಶಿಲೋಚ್ಚಯಃ |
ಶ್ರೀಪರ್ವತೋ ಲತಾವೇಷ್ಟಃ ಪಾರಿಯಾತ್ರಶ್ಚ ಶೈಲರಾಟ್ |
ಆಗತಾಸ್ಸರ್ವ ಏವೈತೇ ಶೈಲೇಂದ್ರಾಃ ಕಾನನೌಕಸಃ || ೫೪ ||

ಸೋಮ, ಲೋಹಿತ, ಗಂಗೆ ಎಂಬ ನದಿಗಳೂ, ಸಾಗರವೂ, ಭೂಮಿಯಮೇಲಿರುವ ಬೇರೆಯ ತೀರ್ಥಕ್ಷೇತ್ರಗಳೂ ಅನೇಕವಾಗಿ ತಮ್ಮ ನಿಜರೂಪದಿಂದ ಅಲ್ಲಿಗೆ ಆಗಮಿಸಿದುವು.

೫೨–೫೪. ಇಂದ್ರನ ಅಪ್ಪಣೆಯಿಂದ ಅರಣ್ಯವಾಸಿಗಳೂ, ಪರ್ವತೋತ್ತಮಗಳೂ ಆದ ಮಹಾಮೇರು, ಕೈಲಾಸ, ಗಂಧಮಾದನ, ಹಿಮವಂತ, ಹೇಮಕೂಟ, ನಿಷಧ, ವಿಂಧ್ಯ, ಮಹೇಂದ್ರ, ಮಲಯ, ಸಹ್ಯ, ದರ್ದುರ, ಮಾಲ್ಯವಂತ, ಚಿತ್ರಕೂಟ, ದ್ರೋಣಪರ್ವತ, ಶ್ರೀಪರ್ವತ, ಲತಾವೇಷ್ಟ, ಪಾರಿಯಾತ್ರ ಎಂಬಿವು ಆ ಉತ್ತಮಗಿರಿಗೆ ಬಂದುವು.

---

* ಪುರುಷ ಎಂಬುದು ಒಂದುನದಿಯೆಂದೋ ಅಥವಾ ಸಿಂಧುವು ಪುರುಷನದಿಯೆಂದೋ ಸ್ಪಷ್ಟವಾಗುವುದಿಲ್ಲ.

ಸರ್ವೇ ಯಜ್ಞಾಸ್ಸರ್ವವಿದ್ಯಾ ವೇದಾಶ್ಚತ್ವಾರ ಏವ ಚ ।
ಧರ್ಮಸ್ಸತ್ಯಂ ದಮಸ್ಸ್ವರ್ಗಃ ಕಪಿಲಶ್ಚ ಮಹಾನೃಷಿಃ ॥ ೫೫ ॥

ವಾಸುಕಿಶ್ಚ ಮಹಾಭಾಗಶ್ಚಾಮೃತಾಶೀ ಭುಜಂಗರಾಟ್ ।
ಜ್ವಲತ್ಫಣಾಸಹಸ್ರೇಣ ಅನಂತಶ್ಚ ಧರಾಧರಃ ॥ ೫೬ ॥

ಫಣೀಂದ್ರೋ ಧೃತರಾಷ್ಟ್ರಶ್ಚ ಕಿರ್ಮೀರಾಂಗಶ್ಚ ನಾಗರಾಟ್ ।
ಅಂಭೋಧರಶ್ಚ ಸ ಶ್ರೀಮಾನ್ನಾಗರಾಜೋ ಮಹಾದ್ಯುತಿಃ ॥ ೫೭ ॥

ಅರ್ಬುದೋ ನ್ಯರ್ಬುದಬಲಸ್ತಥಾ ಚಕ್ಷುಃಶ್ರವಾಧಿಪಃ ।
ವಿದ್ಯುಜ್ಜಿಹ್ವೋ ದ್ವಿಜಿಹ್ವೇಂದ್ರಃ ಶಂಖವರ್ಚಾ ಮಹಾದ್ಯುತಿಃ ॥ ೫೮ ॥

ಖ್ಯಾತಸ್ತ್ರಿಭುವನೇ ಧೀಮಾನ್ನಹುಷೋಽನಿಮಿಷೇಶ್ವರಃ ।
ವಿರೋಚನಸುತಸ್ಸತ್ಯಃ ಸ್ಫಟಿಕೋ ಮಣಿಶತೈಶ್ಚಿತಃ ॥ ೫೯ ॥

---

೫೫. ಸರ್ವಯಜ್ಞಗಳೂ, ಸರ್ವವಿದ್ಯೆಗಳೂ, ನಾಲ್ಕು ವೇದಗಳೂ, ಧರ್ಮ ಸತ್ಯದಮಗಳೂ, ಸ್ವರ್ಗವೂ, ಕಪಿಲಮಹಾಮುನಿಯೂ ಅಲ್ಲಿಗೆ ಬಂದರು.

೫೬–೬೨. ಸರ್ಪರಾಜನೂ, ಅಮೃತಾಶನನೂ, ಮಹಾಭಾಗ್ಯನೂ ಆದ ವಾಸುಕಿ, ಹೊಳೆಯುವ ಸಾವಿರಹೆಡೆಗಳುಳ್ಳ ಭೂಧರನಾದ ಫಣೀಂದ್ರ, ಅನಂತ, ಧೃತರಾಷ್ಟ್ರ, ನಾಗರಾಜನಾದ ಕಿರ್ಮೀರಾಂಗ, ಅಂಭೋಧರ, ಶ್ರೀಮಂತನಾದ ನಾಗರಾಜ, ಮಹಾಕಾಂತಿವಂತನಾದ ಅರ್ಬುದ, ಉರ ೨ಧಿಪನಾದ ನ್ಯರ್ಬುದಬಲ ದ್ವಿಜಿಹೇಂದ್ರನಾದ ವಿದ್ಯುಜ್ಜಿಹ್ವ, ಮಹಾಕಾಂತಿವಂತನಾದ ಶಂಖವರ್ಚಸ್ಸು, ಮೂರು ಲೋಕದಲ್ಲೂ ಪ್ರಸಿದ್ಧನಾದ ಧೀಮಂತ, ಅನಿಮಿಷೇಶ್ವರನಾದ ನಹುಷ, ವಿರೋಚನಸುತನಾದ ಸತ್ಯ, ನೂರಾರು ರತ್ನಗಳಿಂದ ಕೂಡಿದ ಸ್ಫಟಿ, ಬಹು ಶಿಖರಗಳುಳ್ಳ ಪರ್ವತದಂತಿರುವ ನೂರು ಹೆಡೆಗಳುಳ್ಳ ರೂಪಿ, ಅರಿಮೇಜಯ

ಫಣಾಶತಧರೋ ರೂಪೀ ಭೂರಿಶೃಂಗ ಇವಾಚಲಃ ।
ಅರಿಮೋಜಯಸಂಯುಕ್ತಃ ಪ್ರಜ್ಞಾವಾನ್ ಭುಜಗೇಶ್ವರಃ ॥ ೬೦ ॥

ವಿನೀತೋ ನಾಗರಾಜಶ್ಚ ಕಂಬಲಾಶ್ವತರೌ ತಥಾ ।
ಭುಜಗಾಧಿಪತಿರ್ವೀರ ಏಲಾಪತ್ರಸ್ತಥೈವ ಚ ॥ ೬೧ ॥

ಉರಗಾನಾಮಧಿಪತೀಃ ಕರ್ಕೋಟಕಧನಂಜಯೌ ।
ಏವಮಾದ್ಯಾಸ್ಸಮಾಯಾತಾ ಭುಜಗೇಂದ್ರಾ ಮಹಾಬಲಾಃ ॥ ೬೨ ॥

ಅಹೋರಾತ್ರೇ ತಥಾ ಪಕ್ಷಾ ಮಾಸಾಸ್ಸಂವತ್ಸರಾಸ್ತಥಾ ।
ದ್ಯೌರ್ಮೇದಿನೀ ದಿಶಶ್ಚೈವ ವಿದಿಶಶ್ಚ ಸಮಾಗತಾಃ ॥ ೬೩ ॥

ತತಶ್ಚೈವಾಗತೈರ್ದೇವೈರ್ಯಕ್ಷೈಸ್ಸಿದ್ಧೈಶ್ಚ ಸರ್ವಶಃ ।
ಅಪೂರ್ಯತ ಗಿರೇಶ್ಶೃಂಗಂ ವೇಲಾಕಾಲೇ ಯಥೋದಧೇಃ ॥ ೬೪ ॥

ತಸ್ಮಿನ್ದೇವಸಮಾಜೇ ತು ರಮ್ಯೇ ಶೈಲೇಂದ್ರಮೂರ್ಧನಿ ।
ಪುಷ್ಪಾಣಿ ಮುಮುಚುಸ್ತತ್ರ ತರವೋ ಹ್ಯನಿಲಾರ್ದಿತಾಃ ॥ ೬೫ ॥

ಯುಕ್ತನೂ, ಪ್ರಜ್ಞಾವಂತನೂ ಆದ ಭುಜಗೇಶ್ವರ, ನಾಗರಾಜನಾದ ವಿನತ, ಕಂಬಲ, ಅಶ್ವತರ, ಭುಜಗಾಧಿಪತಿಯಾದ ವೀರ, ಏಲಾಪತ್ರ, ಉರಗಾಧಿಪರಾದ ಕರ್ಕೋಟಕ ಧನಂಜಯರು ಇವರೇ ಮೊದಲಾದ ಮಹಾಬಲಶಾಲಿಗಳಾದ ಭುಜಗೇಂದ್ರರೂ ಅಲ್ಲಿಗೆ ಬಂದರು.

೬೩. ಅಹೋರಾತ್ರಿಗಳೂ, ಪಕ್ಷಗಳೂ, ಮಾಸಗಳೂ, ಸಂವತ್ಸರಗಳೂ, ಭೂಮ್ಯಾಕಾಶಗಳೂ, ದಿಕ್ಕುಗಳೂ, ವಿದಿಕ್ಕುಗಳೂ ಅಲ್ಲಿಗೆ ಬಂದುವು.

೬೪. ಹಾಗೆ ಬಂದ ದೇವಯಕ್ಷ ಸಿದ್ಧಾದಿಗಳೆಲ್ಲರಿಂದ ಆ ಗಿರಿಶಿಖರವು ಹುಣಿಮೆಯ ಸಮುದ್ರತೀರದಂತೆ ತುಂಬಿಹೋಯಿತು.

೬೫. ಆ ಗಿರಿರಾಜಶಿಖರದಲ್ಲಿ ರಮ್ಯವಾದ ಆ ದೇವಾದಿಗಳ ಸಮೂಹದ ಮೇಲೆ, ಗಾಳಿಯಿಂದ ಅಲುಗಿದ ಅಲ್ಲಿನ ಮರಗಳು, ಹೂಗಳನ್ನು ಸುರಿಸಿದುವು.

ಪ್ರಗೀತಾ ದೇವಗಂಧರ್ವಾಃ ಪ್ರನೃತ್ತಾಪ್ಸರಸಾಂ ಗಣಾಃ ।
ಪಕ್ಷಿಣಸ್ಸಂಪ್ರಹೃಷ್ಟಾಶ್ಚ ಕೂಜಂತಿ ಮಧುರಂ ತದಾ ॥ ೬೬ ॥

ಪುಣ್ಯಗಂಧಾಸ್ಸುಖಸ್ಪರ್ಶಾಸ್ತತ್ರ ವಾಂತಿ ಚ ವಾಯವಃ ॥ ೬೭ ॥

ಏವಮಾಗತ್ಯ ತೇ ಸರ್ವೇ ದೇವಾ ವಿಷ್ಣುಪುರೋಗಮಾಃ ।
ಶ್ರಿಯಾ ಜ್ವಲಂತಂ ದದೃಶುರ್ನಂದಿನಂ ಪುರತಃ ಸ್ಥಿತಂ ॥ ೬೮ ॥

ಸ ಚ ತಾನಾಗತಾನ್ದೃಷ್ಟ್ವಾ ಗಂಧರ್ವಾಪ್ಸರಸಾಂ ಗಣಾನ್ ।
ಸಹಿತಾನ್ದೇವರಾಜೇನ ಸಾರ್ಧಮನ್ಯೈಶ್ಚ ದೈವತೈಃ ॥ ೬೯ ॥

ಮೂರ್ಧ್ನಾ ಪ್ರಣಮ್ಯ ಚರಣೌ ಪ್ರಾಂಜಲಿಃ ಪ್ರಯತಾತ್ಮವಾನ್ ।
ಸಂಭ್ರಾಂತಸ್ಸಹಸಾ ತೇಭ್ಯೋ ನಮಸ್ಕರ್ತುಂ ಪ್ರಚಕ್ರಮೇ ॥ ೭೦ ॥

೬೬–೬೭. ದೇವಗಂಧರ್ವರು ಚೆನ್ನಾಗಿ ಹಾಡಿದರು. ಅಪ್ಸರ ಸಮೂಹದವರು ನರ್ತನಮಾಡಿದರು. ಪಕ್ಷಿಗಳು ಸಂತೋಷದಿಂದ ಇಂಪಾಗಿ ದನಿಗೈದುವು. ಸುಗಂಧವೂ, ಸುಖಸ್ಪರ್ಶವೂ ಉಳ್ಳ ಗಾಳಿ ಬೀಸಿತು.

೬೮. ವಿಷ್ಣುವೇ ಮೊದಲಾದ ಆ ಸರ್ವದೇವತೆಗಳೂ ಹೀಗೆ ಅಲ್ಲಿಗೆ ಬಂದು, ಮುಂದಿದ್ದ, ಕಾಂತಿಯಿಂದ ಹೊಳೆಯುವ ನಂದಿಯನ್ನು ಕಂಡರು.

೬೯–೭೦. ಪರಿಶುದ್ಧಾತ್ಮನಾದ ಆ ನಂದಿಯೂ ಹಾಗೆ ವಿಷ್ಣುವಿನೊಡನೆಯೂ, ಇತರ ದೇವತೆಗಳೊಡನೆಯೂ ಬಂದ ಗಂಧರ್ವಾಪ್ಸರಸರೇ ಮೊದಲಾದವರ ಸಮೂಹಗಳನ್ನು ನೋಡಿ, ವಿಷ್ಣುವಿನ ಪಾದಗಳಿಗೆ ತಲೆಬಾಗಿ ವಂದಿಸಿ, ಕೈಮುಗಿದು, ಭ್ರಾಂತನಾಗಿ ತಟ್ಟನೆ ಆ ದೇವತೆಗಳಿಗೂ ನಮಸ್ಕರಿಸಲು ಆರಂಭಿಸಿದನು.

ನಮಸ್ಕೃತ್ಯ ಚ ತಾನ್ಸರ್ವಾನ್ ಸ್ವಾಗತಾನಭಿಭಾಷ್ಯ ಚ ।
ಅರ್ಘ್ಯಪಾದ್ಯಾದಿಭಿಶ್ಚೈವ ಪ್ರವರಾಸನೈಶ್ಚ ನ್ಯಮಂತ್ರಯತ್ ॥ ೭೧ ॥

ಪ್ರಣಿಧಾನೇನ ತಸ್ಯಾರ್ಥಂ ಶ್ರುತ್ವಾ ತತ್ಪ್ರತಿಪೂಜಯೇತ್ ।
ಆದಿತ್ಯಾ ವಸವೋ ರುದ್ರಾ ಮರುತಶ್ಚಾಶ್ವಿನಾವಪಿ ॥
ಸಾಧ್ಯಾ ವಿಶ್ವೇ ಸಗಂಧರ್ವಾ ಗುಹ್ಯಕಾಶ್ಚ ಪ್ರಪೂಜಯೇತ್ ॥ ೭೨ ॥

ವಿಶ್ವಾವಸುರ್ಹಾಹಾಹೂಹೂ ತಥಾ ನಾರದತುಂಬುರೂ ।
ಚಿತ್ರಸೇನಾದಯಸ್ಸರ್ವೇ ಗಂಧರ್ವಾಸ್ತಮಪೂಜಯನ್ ॥ ೭೩ ॥

ತಂ ವಾಸುಕಿಪ್ರಭೃತಯಃ ಪನ್ನಗೇಂದ್ರಾ ಮಹೌಜಸಃ ।
ಸೌಮ್ಯಮಭ್ಯರ್ಚಯಂತಿ ಸ್ಮ ದೃಷ್ಟ್ವಾ ನಂದೀಶ್ವರಂ ತಥಾ ॥ ೭೪ ॥

---

೭೧. ನಂದಿಯು ಅವರೆಲ್ಲರಿಗೂ ನಮಸ್ಕರಿಸಿ ಸುಖಾಗಮನವನ್ನು ಹೇಳಿ, ಬೇಗನೆ ಅರ್ಘ್ಯಪಾದ್ಯಾದಿಗಳಿಂದಲೂ, ಆಸನಗಳಿಂದಲೂ ಆದರಿಸಿದನು.

೭೨. ಪ್ರಯತ್ನ ಅಥವಾ ಸಮಾಧಿಯಿಂದ ಅವನ ಶಾಸ್ತ್ರ ಅಥವಾ ಕಾರಣವನ್ನು ಕೇಳಿ, ಆ ನಂದಿಯನ್ನು ಪ್ರತಿಯಾಗಿ ಪೂಜಿಸಬೇಕು. ಹಾಗೆಯೇ, ಆದಿತ್ಯರೂ, ವಸುಗಳೂ, ರುದ್ರರೂ, ಮರುತ್ತುಗಳೂ, ಅಶ್ವಿನೀದೇವರೂ, ಸಾಧ್ಯರೂ, ವಿಶ್ವೇದೇವತೆಗಳೂ, ಗಂಧರ್ವಸಹಿತರಾದ ಗುಹ್ಯಕರೂ ಆತನನ್ನು ಪೂಜಿಸಿದರು.

೭೩. ವಿಶ್ವಾವಸುವೂ, ಹಾಹಾಹೂಹುಗಳೂ, ನಾರದತುಂಬುರರೂ, ಚಿತ್ರಸೇನಾದಿಗಳೂ, ಗಂಧರ್ವರೂ, ಆ ನಂದಿಯನ್ನು ಪೂಜಿಸಿದರು.

೭೪. ಮಹೌಜಸರಾದ ವಾಸುಕಿಯೇ ಮೊದಲಾದ ನಾಗೇಂದ್ರರೂ ಸೌಮ್ಯನಾದ ಆ ನಂದೀಶ್ವರನನ್ನು ನೋಡಿ ಪೂಜಿಸಿದರು.

ಸಿದ್ಧಚಾರಣಸಂಘಾಶ್ಚ ವಿದ್ಯಾಶ್ಚಾಪ್ಸರಸಾಂ ಗಣಾಃ ।
ಸತ್ಕೃತಂ ದೇವದೇವೇನ ಗಣಾಸ್ತಮಭಿಪೂಜಯನ್ ॥ ೭೫ ॥

ಯಕ್ಷವಿದ್ಯಾಧರಾಶ್ಚೈವ ಗ್ರಹಾಸ್ಸಾಗರಪರ್ವತಾಃ ।
ಸಿದ್ಧಾ ಬ್ರಹ್ಮರ್ಷಯಶ್ಚೈವ ಗಂಗಾದ್ಯಾಸ್ಸರಿತಸ್ತಥಾ ॥ ೭೬ ॥

ಆಶಿಷಃ ಪ್ರದದುಸ್ತಸ್ಯ ಸರ್ವ ಏವ ಮುದಾನ್ವಿತಾಃ ॥ ೭೭ ॥

॥ ದೇವಾ ಊಚುಃ ॥

ಸ ಸುಪ್ರೀತೋಽಸ್ತು ತೇ ದೇವಸ್ಸದಾ ಪಶುಪತಿರ್ಮುನೇ ।
ಸರ್ವತ್ರ ಚಾಪ್ರತಿಹತಾ ಗತಿಶ್ಚಾಸ್ತು ತವಾನಘ ॥ ೭೮ ॥

ಭವಾನ್ದೇವೈಸ್ತು ವಾ ನ ಸ್ಯಾದತ ಊರ್ಧ್ವಂ ದ್ವಿಜೋತ್ತಮ ।
ನಿರಾಮಯೋಽಮೃತೀಭೂತಶ್ಚರಿಷ್ಯತಿ ವಿಭುಸ್ಸುಖೀ ॥ ೭೯ ॥

---

೭೫. ಸಿದ್ಧಚಾರಣಸಂಘದವರೂ, ವಿದ್ಯಾಧರಾಪ್ಸರಸಮೂಹದವರೂ, ದೇವದೇವನಿಂದ ಸತ್ಕೃತನಾದ ಆ ನಂದಿಯನ್ನು ಪೂಜಿಸಿದರು.

೭೬–೭೭. ಯಕ್ಷವಿದ್ಯಾಧರರೂ, ಗ್ರಹಗಳೂ, ಸಾಗರಪರ್ವತಗಳೂ, ಸಿದ್ಧರೂ, ಬ್ರಹ್ಮರ್ಷಿಗಳೂ, ಗಂಗಾದಿನದಿಗಳೂ ಎಲ್ಲರೂ ಸಂತೋಷದಿಂದ ಆನಂದಿಗೆ ಆಶೀರ್ವಾದಮಾಡಿದರು.

೭೮. ದೇವತೆಗಳು—ಮುನಿಯೇ, ಪಶುಪತಿಯಾದ ಆ ದೇವನು ನಿನಗೆ ಯಾವಾಗಲೂ ಸುಪ್ರೀತನಾಗಿರಲಿ. ದೋಷರಹಿತನೇ, ನನಗೆ ಎಲ್ಲೆಲ್ಲೂ ತಡೆಯಿಲ್ಲದ ಗಮನವುಂಟಾಗಲಿ.

೭೯–೮೦. ದ್ವಿಜೋತ್ತಮನೇ, ನಾಶರಹಿತನೇ, ವಿಭುವೇ, ನೀನು (ನಮಗೆ) ದೇವತೆಗಳಿಗೆ ಸಮನಾಗಿ ಅಥವಾ ಅವರಿಗಿಂತ ಮೇಲಾದವನಾಗಿ ಅರೋಗನೂ, ಶಾಶ್ವತನೂ, ಸುಖಿಯೂ ಆದ ವಿಭುವಾಗಿ ಸಪ್ತಲೋಕಗಳಲ್ಲೂ ಶಂಕರನೊಡನೆ

ಲೋಕೇಷು ಸಪ್ತಸು ವಿಭೋ ತ್ರ್ಯಂಬಕೇನ ಸಹಾಚ್ಯುತ ।
ಇತ್ಯುಕ್ತಸ್ತ್ರಿದಶೈರ್ನಂದೀ ಪುನಸ್ತಾನ್ಪ್ರತ್ಯುವಾಚ ಹ ॥ ೮೦ ॥

॥ ನಂದಿಕೇಶ್ವರ ಉವಾಚ ॥

ಯದ್ಭವದ್ಭಿಃ ಪ್ರಿಯಂ ಸರ್ವೈಃ ಪ್ರೀತಿಮದ್ಭಿಸ್ಸುರೋತ್ತಮೈಃ ।
ಆಶಿಷಾನುಗೃಹೀತೋಽಸ್ಮಿ ನಿಯೋಜ್ಯೋಽಹಂ ಸದಾ ಹಿ ವಃ ॥ ೮೧ ॥

ಬ್ರೂತ ಯೂಯಂ ಕಿಮಸ್ಮಾಭಿಃ ಕರ್ತವ್ಯಂ ಭವತಾಮಿಹ ।
ಆಜ್ಞಾಪಯಧ್ವಮಾಜ್ಞಪ್ತಸ್ತಸ್ಮಾದ್ವಿಬುಧಸತ್ತಮಾಃ ॥ ೮೨ ॥

ತಸ್ಯ ತದ್ವಚನಂ ಶ್ರುತ್ವಾ ಶಕ್ರಃ ಪ್ರೋವಾಚ ತಂ ತದಾ । ॥ ೮೩ ॥

॥ ಶಕ್ರ ಉವಾಚ ॥

ಕುತ್ರಾಸೌ ಪ್ರಸ್ಥಿತೋ ಭದ್ರ ಕುತ್ರ ವಾ ಸ ಗತೋಽಪಿ ವಾ ।
ಪಶ್ಯಾಮೋ ವಿಪ್ರ ತಂ ಸರ್ವೇ ದೇವಾನಾಮಧಿಪಂ ವಿಭುಂ ॥ ೮೪ ॥

ಸಂಚರಿಸುವೆ. ಎಂದು ದೇವತೆಗಳಿಂದ ಹೇಳಿಸಿಕೊಂಡ ನಂದೀಶ್ವರನು ಮತ್ತೆ ಅವರಿಗೆ ಹೀಗೆ ಹೇಳಿದನು.

೮೧-೮೨. ನಂದಿಃ–ಪೂಜ್ಯರೂ, ಸುರೋತ್ತಮರೂ ಆದ ನೀವೆಲ್ಲರೂ ಪ್ರೀತಿಯುಳ್ಳವರಾಗಿ ನನಗೆ ಪ್ರಿಯವಾದುದನ್ನು ಆಶೀರ್ವಾದದಿಂದ ಅನುಗ್ರಹಿಸಿರುವುದರಿಂದ ನಾನು ಸರ್ವದಾ ನಿಮಗೆ ಸೇವಕನಾಗಿದ್ದೇನೆ. ಆದುದರಿಂದ ದೇವೋತ್ತಮರೇ, ನಿಮ್ಮಿಂದ ಆಜ್ಞಪ್ತನಾದ ನಾನು ನಿಮಗೆ ಇಲ್ಲಿ ಮಾಡಬೇಕಾದ ದೇನೆಂಬುದನ್ನು ನೀವು ನನಗೆ ಅಪ್ಪಣೆಮಾಡಿರಿ.

೮೩. ನಂದಿಕೇಶ್ವರನ ಆ ಮಾತನ್ನು ಕೇಳಿ, ಇಂದ್ರನು ಆಗ ಆತನನ್ನು ಕುರಿತು ಈ ಮುಂದಿನ ಮಾತನ್ನು ಹೇಳಿದನು.

೮೪. ಇಂದ್ರಃ–ಭದ್ರ, ಬ್ರಾಹ್ಮಣನೇ, ಆ ಶಂಕರನು ಎಲ್ಲಿಗೆ ಹೊರಟನು ? ಅಥವಾ ಎಲ್ಲಿ ಹೋಗಿರುವನು ? ದೇವಾಧಿಪನೂ, ವಿಭುವೂ, ಆದ ಆತನನ್ನು ದೇವತೆಗಳಾದ ನಾವೆಲ್ಲರೂ ಎಲ್ಲಿ ನೋಡಬಹುದು ?

ಸ್ಥಾಣುಮುಗ್ರಂ ಶಿವಂ ದೇವಂ ಶರ್ವಮೇವ ಸ್ವಯಂ ಮುನೇ ।
ಯದಿ ಜಾನಾಸಿ ಭಗವಾನೀಶ್ವರೋ ಯತ್ರ ತಿಷ್ಠತಿ ॥ ೮೫ ॥

ತತ್ ಸ್ಥಾನಂ ನಸ್ಸಮಾಖ್ಯಾಹಿ ಮಹರ್ಷೇ ಶೀಘ್ರಮೇವ ಹಿ ॥ ೮೬ ॥

ತಚ್ಛ್ರುತ್ವಾ ವಚನಂ ಧೀಮದುದೀರಿತಂ ವಜ್ರಪಾಣಿನಾ ।
ಪ್ರತ್ಯುವಾಚ ತತಶ್ಶಕ್ರಂ ನಂದೀ ಪಶುಪತಿಂ ಸ್ಮರನ್ ॥ ೮೭ ॥

॥ ನಂದಿಕೇಶ್ವರ ಉವಾಚ ॥

ಶ್ರೋತುಮರ್ಹಸಿ ದೇವೇಂದ್ರ ಯಥಾ ತತ್ವಂ ದಿವಸ್ಪತೇ ।
ಅಸ್ಮಿನ್ಗಿರೌ ಮುಂಜವತಿ ಸ್ಥಾಣುರಭ್ಯರ್ಚಿತೋ ಮಯಾ ॥ ೮೮ ॥

ಪ್ರೀತೋಽಸೌ ಮಾಂ ವರೈರ್ದಿವ್ಯೈರನುಗೃಹ್ಯ ರಹಃ ಪ್ರಭುಃ ।
ಪ್ರೀತೋ ವಿನಿರ್ಗತ ಇತಸ್ತಂ ವಿಜ್ಞಾತುಂ ಬಿಭೇಮ್ಯಹಂ ॥ ೮೯ ॥

೮೫-೮೬. ಮುನಿಯೇ! ಸ್ಥಾಣು, ಉಗ್ರ, ಶರ್ವ, ಶಿವ ಎಂಬ ಅನೇಕ ನಾಮಗಳ ಆ ದೇವನನ್ನು ಎಲ್ಲಿ ನೋಡಬಹುದು ? ಭಗವಂತನಾದ ಆ ಈಶ್ವರನು ಸಾಕ್ಷಾತ್ತಾಗಿ ಎಲ್ಲಿರುವನೋ ಆ ಸ್ಥಳವನ್ನು ನೀನು ತಿಳಿದಿದ್ದರೆ ಮಹರ್ಷೀ, ಬೇಗನೆ ನಮಗೆ ಹೇಳು.

೮೭. ಇಂದ್ರನು ಹೇಳಿದ ಬುದ್ಧಿವಂತಿಕೆಯ ಆ ಮಾತನ್ನು ಕೇಳಿ ಆ ನಂದೀಶ್ವರನು ಈಶ್ವರನನ್ನು ಸ್ಮರಿಸುತ್ತ ಇಂದ್ರನಿಗೆ ಉತ್ತರವನ್ನು ಹೇಳಿದನು.

೮೮-೮೯. ನಂದಿಕೇಶ್ವರ—ಸ್ವರ್ಗಾಧಿಪಾ, ದೇವೇಂದ್ರನೇ, ನಿಜವಾಗಿ ಇರುವ ವಿಚಾರವನ್ನು ಕೇಳು. ಈ ಮುಂಜವದ್ಗಿರಿಯಲ್ಲಿ ನನ್ನಿಂದ ಪೂಜಿತನಾದ ಪ್ರಭುವಾದ ಆ ಈಶ್ವರನು ಪ್ರೀತನಾಗಿ ನನ್ನನ್ನು ದಿವ್ಯವರಗಳಿಂದ ಅನುಗ್ರಹಿಸಿ, ಸಂತೋಷವುಳ್ಳವನಾಗಿ ಇಲ್ಲಿಂದ ಹೊರಟು ಹೋದನು. ಅವನೆಲ್ಲಿರುವನೆಂಬುದನ್ನು ತಿಳಿಯಲು ನಾನು ಅಂಜುತ್ತೇನೆ.

ಯದ್ಯಾಜ್ಞಾಪಯಸೇ ದೇವ ಚಾಹಂ ತ್ವಚ್ಛಾಸನೇ ಸ್ಥಿತಃ ।
ಮಾರ್ಗಯಾಮೋ ಹಿ ಯತ್ನೇನ ಭಗವಂತಂ ತು ವಾಸವ ॥ ೯೦ ॥

ಇತಿ ಶ್ರೀವರಾಹಪುರಾಣೇ ಗೋಕರ್ಣಮಾಹಾತ್ಮ್ಯೇ ನಂದಿಕೇಶ್ವರವರ ಪ್ರದಾನಂನಾಮ ಚತುರ್ದಶಾಧಿಕದ್ವಿಶತತಮೋಽಧ್ಯಾಯಃ

---

೯೦. ದೇವೇಂದ್ರನೇ, ನಾನು ನಿನ್ನ ಆಜ್ಞಾಧೀನನಾಗಿದ್ದೇನೆ. ನೀನು ಆಜ್ಞಾಪಿಸುವುದಾದರೆ, ಆ ಭಗವಂತನನ್ನು ನಾವು ಪ್ರಯತ್ನದಿಂದ ಹುಡುಕೋಣ.

ಅಧ್ಯಾಯದ ಸಾರಾಂಶ—

ಈಶ್ವರನ ವರದಿಂದ ನಂದಿಯು ತ್ರಿಣೇತ್ರಚತುರ್ಭುಜಾದಿಗಳನ್ನೂ ಗಣಾಧಿಪತ್ಯವನ್ನೂ ಪಡೆದು ಮಹಿಮೆಯುಳ್ಳವನಾಗಿದ್ದನು. ಅದನ್ನರಿತ ದೇವೇಂದ್ರನು ತನ್ನ ಪದವಿಗೆ ಅವನಿಂದ ಚ್ಯುತಿಯುಂಟಾಗಬಹುದೆಂಬ ಭೀತಿಯಿಂದ ಬ್ರಹ್ಮವಿಷ್ಣುಗಳೆಡೆಗೆ ಹೋಗಿ ಅವರನ್ನು ಮುಂದೆಬಿಟ್ಟುಕೊಂಡು ಸಮಸ್ತದೇವತೆಗಳೊಡನೆ ಈಶ್ವರದರ್ಶನಕ್ಕಾಗಿ ಮುಂಜವತ್ಪರ್ವತಕ್ಕೆ ಬಂದನು ಅಲ್ಲಿ ನಂದಿಯನ್ನು ಸಂದರ್ಶಿಸಿ, ಆತನನ್ನು ಪೂಜಿಸಿ, ವರವನ್ನು ಕೊಟ್ಟು, ಶಂಕರನು ಎಲ್ಲಿರುವನೆಂಬುದನ್ನು ಪ್ರಶ್ನಿಸಿದನೆಂಬುದೇ ಮೊದಲಾದುದನ್ನು ಹೇಳಿದೆ.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರಹದಿನಾಲ್ಕನೆಯ ಅಧ್ಯಾಯ.

॥ ಶ್ರೀ ॥

ಪಂಚದಶಾಧಿಕದ್ವಿಶತತಮೋಽಧ್ಯಾಯಃ
ಅಥ ಗೋಕರ್ಣೇಶ್ವರಜಲೇಶ್ವರಮಹಾತ್ಮ್ಯವರ್ಣನಂ

॥ ಬ್ರಹ್ಮೋವಾಚ ॥

ತತಶ್ಶಕ್ರಸ್ಸುರಗಣೈಸ್ಸಹ ಸರ್ವೈಸ್ಸಮೇತ್ಯ ಚ ।
ಬುದ್ಧಿಂ ಚಕಾರ ಗಮನೇ ಮಾರ್ಗಿತುಂ ಯತ್ರ ಶಂಕರಃ ॥ ೧ ॥

ತತ ಉತ್ಥಾಯ ತೇ ದೇವಾಸ್ಸರ್ವ ಏವ ಶಿಲೋಚ್ಚಯಾತ್ ।
ವಿಹಾಯಸಾ ಯಯುಶ್ಶೀಘ್ರಂ ತೇನೈವ ಸಹ ನಂದಿನಾ ॥ ೨ ॥

ಸ್ವರ್ಲೋಕಂ ಬ್ರಹ್ಮಲೋಕಂ ಚ ನಾಗಲೋಕಂ ಚ ಸರ್ವಶಃ ।
ಬಭ್ರಮುಸ್ತ್ರಿದಶಾಸ್ಸರ್ವೇ ರುದ್ರಾನ್ವೇಷಣತತ್ಪರಾಃ ॥ ೩ ॥

ಇನ್ನೂರಹದಿನೈದನೆಯ ಅಧ್ಯಾಯ
ಗೋಕರ್ಣೇಶ್ವರಜಲೇಶ್ವರಮಾಹಾತ್ಮ್ಯವರ್ಣನೆ.

೧. ಬ್ರಹ್ಮ—ಬಳಿಕ ಇಂದ್ರನು ಎಲ್ಲಾ ದೇವತೆಗಳ ಸಮೂಹದೊಡಗೂಡಿ, ಶಂಕರನು ಎಲ್ಲಿರುವನೆಂದರಸಲು ಹೊರಡಬೇಕೆಂದು ಆಲೋಚಿಸಿದನು.

೨. ಆಮೇಲೆ ದೇವತೆಗಳೆಲ್ಲರೂ ಆ ಮುಂಜವತ್ಪರ್ವತದಿಂದ ಆ ನಂದಿಯೊಡನೆ ಎದ್ದು ಆಕಾಶಮಾರ್ಗದಿಂದ ಬೇಗನೆ ಹೊರಟರು.

೩–೪. ರುದ್ರನನ್ನು ಹುಡುಕುವುದರಲ್ಲಿ ಆಸಕ್ತರಾದ ಆ ದೇವತೆಗಳೆಲ್ಲರೂ ಸ್ವರ್ಗಲೋಕದಲ್ಲಿಯೂ, ಬ್ರಹ್ಮಲೋಕದಲ್ಲಿಯೂ, ನಾಗಲೋಕದಲ್ಲಿಯೂ ಎಲ್ಲಾ

ಖಿನ್ನಾಃ ಕ್ಲಿಷ್ಟಾಶ್ಚ ಸುಭೃಶಂ ನ ಪುನಸ್ತತ್ಪದಂ ವಿದುಃ ॥ ೪ ॥

ಚತುಸ್ಸಮುದ್ರಪರ್ಯಂತಸಪ್ತದ್ವೀಪವತೀಂ ಮಹೀಂ ।
ಸಶೈಲಕಾನನೋಪೇತಾಂ ಮಾರ್ಗಯದ್ಭಿರ್ಹಿ ತಂ* ಹರಂ ॥ ೫ ॥

ಕಂದರೇಷು ಮಹಾದ್ರೀಣಾಂ ತುಂಗೇಷು ಶಿಖರೇಷು ಚ ।
ವಿತತೇಷು ನಿಕುಂಜೇಷು ವಿಹಾರೇಷು ಚ ಸರ್ವತಃ ॥ ೬ ॥

ವಿಚಿನ್ವದ್ಭಿಃ ಕ್ಷಿತಿಮಿಮಾಂ ತೃಣಂ ದ್ವಿವಿದಲೀಕೃತಂ ।
ನ ಪ್ರವೃತ್ತಿಃ ಕ್ವಚಿದಪಿ ಶಂಭೋರಾಸಾದ್ಯತೇ ಸುರೈಃ ॥ ೭ ॥

ಯದಾ ನಿರ್ವಿಣ್ಣಮನಸೋ ಮಾರ್ಗಮಾಣಾಸ್ಸುರಾಸ್ತದಾ ।
ನ ಪಶ್ಯಂತಿ ಶಿವಂ ತತ್ರ ತದೇಷಾಂ ಭಯಮಾವಿಶತ್ ॥ ೮ ॥

ಕಡೆಯಲ್ಲಿಯೂ ಸುತ್ತಿದರು. ಅದರಿಂದ ಕ್ಲೇಶಗೊಂಡು ಬಹು ಖಿನ್ನರಾದರೇ ಹೊರತು ಅವನಿರುವೆಡೆಯನ್ನು ತಿಳಿಯಲಿಲ್ಲ.

೫–೭. ಚತುಸ್ಸಮುದ್ರದವರೆಗೂ ಸಪ್ತದ್ವೀಪಗಳಿಂದ ಕೂಡಿದ ಪರ್ವತವನ ಸಹಿತವಾದ ಭೂಮಿಯನ್ನೆಲ್ಲಾ ಮಹಾಪರ್ವತಗಳ ಗುಹೆಗಳಲ್ಲಿಯೂ, ಉನ್ನತ ಶಿಖರಗಳಲ್ಲಿಯೂ, ವಿಶಾಲವಾದ ಪೊದೆ ಅಥವಾ ಲತಾಗೃಹಗಳಲ್ಲಿಯೂ, ವಿಹಾರಗಳಲ್ಲಿಯೂ, ಆ ಹರನನ್ನು ಅರಸುವ ಆ ದೇವತೆಗಳು ಹುಲ್ಲನ್ನು ಕೂಡ ಎರಡುಭಾಗವಾಗಿ ಸೀಳಿನೋಡಿದರು. ಆದರೂ ಎಲ್ಲೂ ಆ ಈಶ್ವರನ ಸಮಾಚಾರವೇ ತಿಳಿಯಲಿಲ್ಲ.

೮. ಚಿಂತೆಯಿಂದ ಕೂಡಿದ ಮನಸುಳ್ಳವರಾಗಿ ಹುಡುಕಿದರೂ ಶಿವನನ್ನು ಕಾಣದಿರಲು ಆ ದೇವತೆಗಳಿಗೆ ಭಯವುಂಟಾಯಿತು.

---

* ಸುರಂ.

ಭೀತಾಸ್ತೇ ಸಂವಿದಂ ಕೃತ್ವಾ ಸಂಚಿಂತ್ಯ ಗುರುಲಾಘವಂ ।
ಸಂಭೂಯಾನ್ಯೋನ್ಯಮಮರಾ ಮಾಮೇವ ಶರಣಂ ಯಯುಃ ॥ ೯ ॥

ತಮೇಕಾಗ್ರೇಣ ಮನಸಾ ಶಂಕರಂ ಲೋಕಶಂಕರಂ ।
ಉಪಾಯಮಾತ್ರಂ ದೃಷ್ಟಂ ಮೇ ಧ್ಯಾಯಂಸ್ತದ್ವೇಷಭೂಷಣೈಃ ।
ಯಥಾ ಯತ್ರ ಚ ಸೋಽಸ್ಮಾಭಿರ್ದ್ರಷ್ಟವ್ಯೋ ವೃಷಭಧ್ವಜಃ ॥ ೧೦ ॥

ಸರ್ವಂ ತ್ರೈಲೋಕ್ಯಮಸ್ಮಾಭಿರ್ವಿಚಿತಂ ವೈ ನಿರಂತರಂ ।
ಶ್ಲೇಷ್ಮಾತಕವನೋದ್ದೇಶಂ ಸ್ಥಾನಂ ಮುಕ್ತ್ವಾ ಮಹೀತಲೇ ॥ ೧೧ ॥

ಆಗಚ್ಛಧ್ವಂ ಗಮಿಷ್ಯಾಮಸ್ತಮುದ್ದೇಶಂ ಸುರೋತ್ತಮಾಃ ॥ ೧೨ ॥

ಇತ್ಯೇವಮುಕ್ತ್ವಾ ತೈಸ್ಸರ್ವೈಸ್ತಾಮಾಶಾಂ ಪ್ರಸ್ಥಿತಾ ವಯಂ ।
ತತ್ಕ್ಷಣಾದೇವ ಸಂಪ್ರಾಪ್ತಾ ವಿಮಾನೈಶ್ಶೀಘ್ರಯಾಯಿಭಿಃ ।
ಶ್ಲೇಷ್ಮಾತಕವನಂ ಪುಣ್ಯಂ ಸಿದ್ಧಚಾರಣಸೇವಿತಂ ॥ ೧೩ ॥

---

೯. ಭೀತರಾದ ಆ ಅಮರರು ಅನ್ಯೋನ್ಯವಾಗಿ ಸೇರಿ, ಮಾತನಾಡಿ, ಗುರುಲಾಘವವನ್ನು ಚೆನ್ನಾಗಿ ಆಲೋಚಿಸಿ ನಿರ್ಣಯಿಸಿಕೊಂಡು, ನನ್ನನ್ನೇ ಮರೆಹೊಕ್ಕರು.

೧೦. ಏಕಾಗ್ರಮನಸ್ಸಿನಿಂದ ಲೋಕಸುಖಕರನಾದ ಆ ಶಂಕರನನ್ನು ಅವನ ವೇಷಭೂಷಣಗಳೊಡನೆ ಧ್ಯಾನಿಸಿದ ನನಗೆ ಎಲ್ಲಿ ಹೇಗೆ ಆ ವೃಷಭಧ್ವಜನನ್ನು ನೋಡಬಹುದೆಂಬ ವಿಚಾರದಲ್ಲಿ ಒಂದು ಉಪಾಯವು ತೋಚಿತು.

೧೧-೧೨. ಭೂತಲದಲ್ಲಿ ಶ್ಲೇಷ್ಮಾತಕವನಪ್ರದೇಶವೊಂದನ್ನು ಬಿಟ್ಟು ಮೂರುಲೋಕಗಳಲ್ಲೂ ಪೂರ್ತಿಯಾಗಿ ಒಂದೆಡೆಯನ್ನೂ ಬಿಡದೆ ನಾವು ಈಶ್ವರನನ್ನು ಹುಡುಕಿದ್ದೇವೆ. ಸುರೋತ್ತಮರೇ, ಬನ್ನಿ, ಆ ಸ್ಥಳಕ್ಕೆ ಹೋಗೋಣ ಎಂದೆನು.

೧೩. ಹಾಗೆ ಹೇಳಿ, ಅವರೆಲ್ಲರೊಡನೆ ನಾವು ಆ ದಿಕ್ಕಿಗೆ ಹೊರಟು, ವೇಗವಾಗಿ ಸಂಚರಿಸುವ ವಿಮಾನಗಳಿಂದ ಒಡನೆಯೇ ಸಿದ್ಧಚಾರಣಸೇವಿತವೂ, ಪುಣ್ಯವೂ, ಆದ ಶ್ಲೇಷ್ಮಾತಕವನವನ್ನು ಸೇರಿದೆವು.

ತಸ್ಮಿನ್ಸುರಮಣೀಯಾನಿ ವಿವಿಧಾನಿ ಶುಚೀನಿ ಚ ।
ಧ್ಯಾನಸ್ಥಾನಾನಿ ರಮ್ಯಾಣಿ ಬಹೂನಿ ಗುಣವಂತಿ ಚ ॥ ೧೪ ॥

ಆಶ್ರಮಾರಣ್ಯಭಾಗೇಷು ದರೀಣಾಂ ವಿವರೇಷು ಚ ।
ವಿಭ್ರಾಜದ್ವನರಾಜೀಕಾ ನದ್ಯಶ್ಚ ವಿಮಲೋದಕಾಃ ॥ ೧೫ ॥

ಸಿಂಹಶಾರ್ದೂಲಮಹಿಷಗೋಲಾಂಗೂಲರ್ಕ್ಷವಾನರೈಃ ।
ನಾದಿತಂ ಗಜಯೂಥೈಶ್ಚ ಮೃಗಯೂಥೈಶ್ಚ ತದ್ವನಂ ॥ ೧೬ ॥

ಪ್ರಮುಖೇ ವಾಸವಂ ಕೃತ್ವಾ ವಿವಿಶುಸ್ತೇ ಸುರಾಸ್ತದಾ ।
ವಿಮುಚ್ಯ ರಥಯಾನಾನಿ ಪದ್ಭಿಃ ಸಿದ್ಧಾದಿಸಂಕಟಂ ॥ ೧೭ ॥

ಕಂದರೋದರಕೋಟೀಷು ತರೂಣಾಂ ಗಹನೇಷು ಚ ।
ಸರ್ವದೇವಮಯಂ ರುದ್ರಂ ಮಾರ್ಗಮಾಣಾಶ್ಯನೈಶ್ಶನೈಃ ।
ಪ್ರವಿಶಂತಶ್ಚ ತೇ ದೇವಾ ವನೋದ್ದೇಶೇ ಕ್ವಚಿಚ್ಛುಭೇ ॥ ೧೮ ॥

೧೪–೧೫. ಆ ಶ್ಲೇಷ್ಮಾತಕವನದಲ್ಲಿ ಆಶ್ರಮಾರಣ್ಯಭಾಗದಲ್ಲೂ, ಗುಹೆಗಳಲ್ಲೂ ಬಹು ರಮಣೀಯಗಳೂ, ಶುದ್ಧವಾದುವೂ, ಬಹುಗುಣವುಳ್ಳುವೂ, ಆದ ಬಗೆಬಗೆಯ ಹಲವು ಧ್ಯಾನಪ್ರದೇಶಗಳು ಮನೋಹರವಾಗಿದ್ದುವು. ವನಪಂಕ್ತಿಗಳು ಹೊಳೆಯುತ್ತಿದ್ದುವು. ನದಿಗಳು ನಿರ್ಮಲೋದಕವುಳ್ಳುವಾಗಿದ್ದುವು.

೧೬. ಆ ಶ್ಲೇಷ್ಮಾತಕವನವು ಸಿಂಹಗಳು, ಹುಲಿಗಳು, ಕಾಡೆಮ್ಮೆಗಳು, ಬಗೆಬಗೆಯ ಕಪಿಗಳು ಇವುಗಳಿಂದಲೂ, ಆನೆಗಳ ಗುಂಪಿನಿಂದಲೂ, ಮೃಗಗಳ ಗುಂಪಿನಿಂದಲೂ, ಗದ್ದಲವುಳ್ಳುದಾಗಿದ್ದಿತು.

೧೭. ಆ ವನದ ಹತ್ತಿರ ಹೋಗಿ ರಥವಿಮಾನಾದಿಗಳನ್ನು ಬಿಟ್ಟಿಳಿದು ಇಂದ್ರನನ್ನು ಮುಂದೆಬಿಟ್ಟುಕೊಂಡು ದೇವತೆಗಳೆಲ್ಲರೂ ಕಾಲುನಡೆಯಿಂದ ಸಿದ್ಧಾದಿಗಳಿಂದ ತುಂಬಿರುವ ಆ ವನವನ್ನು ಪ್ರವೇಶಿಸಿದರು.

೧೮. ಅಲ್ಲಿ ಗುಹೆಗಳ ಒಳಭಾಗಗಳಲ್ಲೂ, ಶಿಖರಗಳಲ್ಲೂ, ಮರಗಳ ಇಕ್ಕಟ್ಟುಗಳಲ್ಲೂ ಮೆಲ್ಲಮೆಲ್ಲಗೆ ಸರ್ವದೇವಮಯನಾದ ರುದ್ರನನ್ನು ಅರಸುತ್ತ ಆ ದೇವತೆಗಳು ಆ ವನದ ಶುಭಕರವಾದ ಒಂದೆಡೆಯನ್ನು ಹೊಕ್ಕರು.

ಕದಲೀವನಸಂಛನ್ನೇ ಫುಲ್ಲಪಾದಪಶೋಭಿತೇ ।
ಗಿರಿನದ್ಯಾಸ್ತು ಪುಲಿನೇ ಹಂಸಕುಂದೇಂದುಸನ್ನಿಭೇ ॥ ೧೯ ॥

ಗಂಧಾಮೋದೇನ ಪುಷ್ಪಾಣಾಂ ವಾಸಿತಂ ಮಧುಗಂಧಿನಾ ।
ಮುಕ್ತಾಚೂರ್ಣನಿಕಾಶಾಭಿರ್ವಾಲುಕಾಭಿಸ್ತತಸ್ತತಃ ॥ ೨೦ ॥

ವಿಕ್ರೀಡಮಾನಾಂ ದದೃಶುಃ ಕನ್ಯಾಂ ಕಾಂಚಿನ್ಮನೋರಮಾಂ ॥ ೨೧ ॥

ತತ್ರ ತೇ ವಿಬುಧಾ ದೃಷ್ಟ್ವಾ ಸರ್ವೇ ಮಾಂ ಸಮಚೋದಯನ್ ।
ಆದ್ಯೋಽಹಂ ಸರ್ವದೇವಾನಾಂ ಕಥಮೇತದ್ಭವೇದಿತಿ ॥ ೨೨ ॥

ಮುಹೂರ್ತಂ ಧ್ಯಾನಮಾಸ್ಥಾಯ ವಿಜ್ಞಾತಾ ಸಾ ಮಯಾ ತದಾ ।
ಧ್ರುವಂ ಶೈಲೇಂದ್ರಪುತ್ರೀಯಮುಮಾ ವಿಶ್ವೇಶ್ವರೇಶ್ವರೀ ॥ ೨೩ ॥

೧೯–೨೧. ಅಲ್ಲಿ ಬಾಳೆಯ ಗಿಡಗಳ ಗುಂಪುಗಳಿಂದಲೂ, ಹೂಬಿಟ್ಟಿರುವ ಮರಗಳಿಂದಲೂ ಸೊಗಸುತ್ತಿರುವ ಹಂಸ ಕುಂದಕುಸುಮ ಚಂದ್ರರಂತೆ ಬೆಳ್ಳಗೆ ಹೊಳೆಯುವ ಗಿರಿನದಿಯ ಮರಳುದಿಣ್ಣೆಯಮೇಲೆ, ಹೂಗಳ ಸುಗಂಧದಿಂದಲೂ, ಮಕರಂದಗಂಧದಿಂದಲೂ ಕೂಡಿದ ಮುತ್ತಿನ ಪುಡಿಯಂತಿರುವ ಮಳಲುಗಳಿಂದ ಅಲ್ಲಲ್ಲೇ ಆಡುತ್ತಿರುವ ಮನೋಹರಳಾದ ಒಬ್ಬಳು ಕನ್ಯೆಯನ್ನು ನೋಡಿದರು.

೨೨–೨೩. ಆ ದೇವತೆಗಳೆಲ್ಲರೂ ಅಲ್ಲಿ ಆಕೆಯನ್ನು ಕಂಡು ಆಕೆಯ ವಿಚಾರವನ್ನು ತಿಳಿಯಲು ನನಗೆ ಪ್ರೇರಿಸಿದರು. ಸರ್ವದೇವತೆಗಳಿಗೂ ಮೊದಲನೆಯವನಾದ ನಾನು, ಇದೇನು ? ಈಕೆ ಯಾರಾಗಿರಬಹುದು ? ಎಂದು ಸ್ವಲ್ಪಹೊತ್ತು ಧ್ಯಾನಾಸಕ್ತನಾಗಿದ್ದು, ಈಕೆ ನಿಜವಾಗಿಯೂ ಹಿಮವತ್ಪುತ್ರಿಯೂ, ವಿಶ್ವೇಶ್ವರನ ಪತ್ನಿಯೂ ಆದ ಪಾರ್ವತಿಯೆಂದು ನಿರ್ಧರಿಸಿದೆನು.

ತತಸ್ತದುಚ್ಚಶಿಖರಮಾರುಹ್ಯ ವಿಬುಧೇಶ್ವರಾಃ ।
ಅಧೋ ವಿಲೋಕ್ಯತೇ ಸರ್ವೇ ದದೃಶುಸ್ತಂ ಸುರೋತ್ತಮಂ ॥ ೨೪ ॥

ಮಧ್ಯೇ ಮೃಗಸಮೂಹಸ್ಯ ಗೋಪ್ತಾರಮಿವ ಸಂಸ್ಥಿತಂ ॥ ೨೫ ॥

ಏಕಶೃಂಗೈಕಚರಣಂ ತಪ್ತಹಾಟಕವರ್ಚಸಂ ।
ಚಾರುವಕ್ತ್ರಾಕ್ಷಿದಶನಂ ಪೃಷ್ಠತಶ್ಶುಕ್ಲಬಿಂದುಭಿಃ ॥ ೨೬ ॥

ಶುಕ್ಲೇನೋದರಭಾಗೇನ ರಾಜತೈರುಪಶೋಭಿತಂ ।
ಪೀನೋನ್ನತಕಟಿಸ್ಕಂಧಂ ನಿಮುಗ್ನಾಂಸಶಿರೋಧರಂ ॥ ೨೭ ॥

ಬಿಂಬೋಷ್ಠಂ ತಾಮ್ರಜಿಹ್ವಾಸ್ಯಂ ದಂಷ್ಟ್ರಾಂಕುರವಿರಾಜಿತಂ ।
ತಂ ದೃಷ್ಟ್ವಾ ವಿಬುಧಾಸ್ಸರ್ವೇ ಶಿಖರಾತ್ಪ್ರತಿಧಾವಿತಾಃ ॥ ೨೮ ॥

ಸರ್ವೋದ್ಯಮೇನ ತರಸಾ ತಂ ಮೃಗೇಂದ್ರಂ ಜಿಘೃಕ್ಷವಃ । ॥ ೨೯ ॥

೨೪–೨೫. ಬಳಿಕ ದೇವವರ್ಯರೆಲ್ಲರೂ ಆ ಗಿರಿಯ ಉನ್ನತಶಿಖರವನ್ನೇರಿ, ಅಲ್ಲಿಂದ ಕೆಳಗೆ ನೋಡಿ, ಮೃಗಗಳ ಗುಂಪಿನ ನಡುವೆ ರಕ್ಷಕನಂತಿದ್ದ ಸುರೋತ್ತಮನಾದ ಶಂಕರನನ್ನು ಸಂದರ್ಶಿಸಿದರು.

೨೬–೨೯. ಒಂದು ಕೋಡೂ, ಒಂದು ಕಾಲು ಉಳ್ಳದಾಗಿ ಪುಟವಿಟ್ಟ ಚಿನ್ನದಂತೆ ಹೊಳೆಯುವ, ಮನೋಹರವಾದ ಮುಖವೂ ಕಣ್ಣುಹಲ್ಲುಗಳೂ ಇರುವ, ಬೆಳ್ಳಗಿರುವ ಉದರಭಾಗದಿಂದಲೂ ಬೆನ್ನಮೇಲೆ ಬೆಳ್ಳಿಯ ಬಿಳಿಯ ಚುಕ್ಕಿಗಳಿಂದಲೂ ಒಪ್ಪುತ್ತಿರುವ, ದಪ್ಪವಾಗಿಯೂ, ಎತ್ತರವಾಗಿಯೂ ಇರುವ ನಡುವೂ ಹೆಗಲೂ, ತೆಳ್ಳಗಿರುವ ಭುಜವೂ, ಕತ್ತೂ, ತೊಂಡೆಯ ಹಣ್ಣಿನಂತಿರುವ ತುಟಿಯೂ, ಕೆಂಪಾದ ಬಾಯಿನಾಲಗೆಗಳೂ, ಮೊಳಕೆಯಂತಿರುವ ದಾಡೆಗಳೂ ಸೊಗಸಾಗಿರುವ, ಮೃಗರೂಪದ ಆ ದೇವನನ್ನು ನೋಡಿ, ಸರ್ವಪ್ರಯತ್ನದಿಂದಲೂ ಅದನ್ನು ಬೇಗನೆ ಹಿಡಿಯಬೇಕೆಂದು ದೇವತೆಗಳೆಲ್ಲರೂ ಶಿಖರದಿಂದ ಸಿಟ್ಟೋಟ ಓಡಿದರು.

ಶೃಂಗಾಗ್ರಂ ಪ್ರಥಮಂ ಧೃತ್ವಾ ಗೃಹಿತೋ ವಜ್ರಪಾಣಿನಾ ।
ಮಧ್ಯಂ ಮಯಾ ತಸ್ಯ ತದಾ ಗೃಹೀತಂ ಪ್ರಣತಾತ್ಮನಾ ।
ಜಗ್ರಾಹ ಕೇಶವಶ್ಚಾಪಿ ಮೂಲಂ ತಸ್ಯ ಮಹಾತ್ಮನಃ ॥ ೩೦ ॥
ತ್ರಿಭಿರೇವಂ ಗೃಹೀತಂ ತು ತ್ರಿಧಾ ಭೂತಮಭಜ್ಯತ ॥ ೩೧ ॥
ಶಕ್ರಸ್ಯಾಗ್ರಂ ಸ್ಥಿತಂ ಹಸ್ತೇ ಮಧ್ಯಂ ಹಸ್ತೇ ಮಮ ಸ್ಥಿತಂ ।
ವಿಷ್ಣೋರ್ಮೂಲಂ ಸ್ಥಿತಂ ಹಸ್ತೇ ಪ್ರವಿಭಕ್ತಂ ತ್ರಿಧಾಗತಂ ॥ ೩೨ ॥
ಶೃಂಗಸ್ಯೈವ ಗೃಹೀತಸ್ಯ ತ್ರಿಧಾಸ್ಮಾಕಂ ಮೃಗಾಧಿಪಃ ।
ವಿಷಾಣರಹಿತ*ಸ್ತೋಽಥ ಪ್ರನಷ್ಟಃ ಪುನರತ್ರ ವೈ ॥ ೩೩ ॥
ಅಂತರ್ಹಿತೋಽಂತರಿಕ್ಷಸ್ಥಃ ಪ್ರೋವಾಚಾಸ್ಮಾನುಪಾಲಭನ್ ।
ಭೋ ಭೋ ದೇವಾ ಮಯಾ ಯೂಯಂ+ವಂಚಿತಾಸ್ತ್ವಾನವಾಪ್ಸ್ಯಥ॥೩೪॥

---

೩೦. ಇಂದ್ರನು ಮೊದಲು ಆ ಮೃಗದ ಕೊಂಬಿನ ತುದಿಯನ್ನು ಹಿಡಿದುಕೊಂಡನು. ಪ್ರಣತನಾದ ನಾನು (ಬ್ರಹ್ಮ) ಕೊಂಬಿನ ಮಧ್ಯಭಾಗವನ್ನು ಹಿಡಿದುಕೊಂಡೆನು. ವಿಷ್ಣುವು ಆ ಮಹಾತ್ಮನ ಶೃಂಗದ ಮೊದಲಭಾಗವನ್ನು ಹಿಡಿದುಕೊಂಡನು.

೩೧-೩೨. ಹಾಗೆ ನಾವು ಮೂವರೂ ಹಿಡಿದುಕೊಂಡ ಆ ಶೃಂಗವು ಮೂರು ತುಂಡಾಗಿ ಮುರಿಯಿತು. ಮುರಿದ ತುಂಡುಗಳಲ್ಲಿ ಇಂದ್ರನ ಕೈಯ್ಯಲ್ಲಿ ಅಂತ್ಯಭಾಗವೂ, ನನ್ನ ಕೈಯಲ್ಲಿ ಮಧ್ಯಭಾಗವೂ, ವಿಷ್ಣುವಿನ ಕೈಯ್ಯಲ್ಲಿ ಆದಿಭಾಗವೂ ನಿಂತಿತು.

೩೩. ನಾವು ಮೂರು ಭಾಗವಾದ ಶೃಂಗವನ್ನು ಹಿಡಿದುಕೊಂಡಿರಲು ಆ ಶೃಂಗವನ್ನು ಕಳೆದುಕೊಂಡ ಆ ಉತ್ತಮಮೃಗವು ಅಲ್ಲೇ ಅದೃಶ್ಯವಾಯಿತು.

೩೪. ಹಾಗೆ ಅದೃಶ್ಯನಾಗಿ ಅಂತರಿಕ್ಷದಲ್ಲಿ ನಿಂತ ದೇವನು ನಮ್ಮನ್ನು ತಿರಸ್ಕರಿಸುತ್ತ ಹೇಳಿದನು. ಎಲೈ ದೇವತೆಗಳೇ, ನನ್ನಿಂದ ವಂಚಿತರಾದ ನೀವು ನಿಮಗೆ ದೊರೆತಿರುವ ಶೃಂಗಭಾಗಗಳನ್ನು ಪಡೆಯುವಿರಿ.

---

* ಸ್ತಸ್ಯ.

\+ ವಂಚ್ಯಮಾನಾ.

ಸಶರೀರೋಽಹಂ ಯುಷ್ಮಾಭಿರ್ವಶಾಽಪ್ತಃ ಪ್ರಗತಸ್ತ್ವಿತಃ ।
ಶೃಂಗಮಾತ್ರೇಣ ಸಂತುಷ್ಟಾ ಭವಂತಸ್ತೇನ ವಂಚಿತಾಃ ॥ ೩೫ ॥

ಯದ್ಯಹಂ ಸಶರೀರಃ ಸ್ಯಾಂ ಗೃಹಿತ್ವಾ ಸ್ಥಾಪಿತೋಽಭವಂ ।
ತದಾ ಚತುಷ್ಪಾತ್ಸಕಲೋ ಧರ್ಮಸ್ಸ್ಯಾತ್ಪ್ರತಿಪಾದಿತಃ ॥ ೩೬ ॥

ಕಾಮಂ ಶೃಂಗಾಣಿ ಮೇತ್ರ್ಯೈವ ಶ್ಲೇಷ್ಮಾತಕವನೇಽಮರಾಃ ।
ನ್ಯಾಯತಃ ಸ್ಥಾಪಯಿಷ್ಯಧ್ವಂ ಲೋಕಾನುಗ್ರಹಕಾಮ್ಯಯಾ ॥ ೩೭ ॥

ಅತ್ರಾಪಿ ಮಹತೀ ವೃಷ್ಟಿರ್ಭವಿಷ್ಯತಿ ನ ಸಂಶಯಃ ।
ಪುಣ್ಯಕ್ಷೇತ್ರೇ ಸುಮಹತಿ ಮತ್ಪ್ರಭಾವಾನುಭಾವಿತೇ ॥ ೩೮ ॥

ಯಾವಂತಿ ಭುವಿ ತೀರ್ಥಾನಿ ಹ್ಯಾಸಮುದ್ರಸರಾಂಸಿ ಚ ।
ಕ್ಷೇತ್ರೇಽಸ್ಮಿಂಸ್ತಾನಿ ತೀರ್ಥಾನಿ ಚಾಗಮಿಷ್ಯಂತಿ ಮತ್ಕೃತೇ ॥ ೩೯ ॥

---

೩೫. ಸಶರೀರನಾಗಿ ನಿಮಗೆ ವಶನಾಗಿದ್ದ ನಾನು ಇಲ್ಲಿಗೆ ಬಂದಿದ್ದೇನೆ. ಆದರಿಂದ ವಂಚಿತರಾದ ನೀವು ಆ ಶೃಂಗಮಾತ್ರದಿಂದಲೇ ತೃಪ್ತರಾಗಿರಿ.

೩೬. ಸಶರೀರನಾದ ನನ್ನನ್ನು ನೀವು ಹಿಡಿದು ಭೂಮಿಯಲ್ಲಿ ನೆಲೆಗೊಳಿಸಿದ್ದರೆ ನಾಲ್ಕುಪಾದಗಳುಳ್ಳ ಪೂರ್ಣಧರ್ಮವು ಪ್ರತಿಷ್ಠಿತವಾಗುತ್ತಿದ್ದಿತು.

೩೭. ಅಮರರೇ, ಈ ಶ್ಲೇಷ್ಮಾತಕವನದಲ್ಲೇ ನನ್ನ ಶೃಂಗಗಳನ್ನು ನಿಮಗೆ ಬೇಕಾದಂತೆ ಲೋಕಾನುಗ್ರಹೇಚ್ಛೆಯಿಂದ ನ್ಯಾಯವಾಗಿ ಸ್ಥಾಪಿಸಿರಿ.

೩೮. ನನ್ನ ಪ್ರಭಾವಯುಕ್ತವಾದ ಈ ಮಹಾಪುಣ್ಯಕ್ಷೇತ್ರದಲ್ಲೂ ಫಲಸಮೃದ್ಧಿಯು ಅತಿಯಾಗುವುದರಲ್ಲಿ ಸಂದೇಹವಿಲ್ಲ.

೩೯. ಭೂಮಿಯಲ್ಲಿ ಸಮುದ್ರಸರೋವರಗಳೇ ಮೊದಲಾದ ಎಷ್ಟು ಪುಣ್ಯತೀರ್ಥಗಳಿವೆಯೋ ಅಷ್ಟೂ ನನಗಾಗಿ ಈ ಕ್ಷೇತ್ರಕ್ಕೆ ಬರುವುವು.

ಅಹಂ ಪುನಃ ಶೈಲಪತೇಃ ಪಾದೇ ಹಿಮವತಶ್ಶುಭೇ ।
ನೇಪಾಲಾಖ್ಯೇ ಸಮುತ್ಪತ್ಸ್ಯೇ ಸ್ವಯಮೇವ ಮಹೀತಲಾತ್ ॥ ೪೦ ॥

ದೀಪ್ತತೇಜೋಮಯಶಿರಾಃ ಶರೀರಂಚ ಚತುರ್ಮುಖಂ ।
ಶರೀರೇಶ ಇತಿ ಖ್ಯಾತಸ್ಸರ್ವತ್ರ ಭುವನತ್ರಯೇ ॥ ೪೧ ॥

ತತ್ರ ನಾಗಹ್ರದೇ ಘೋರೇ ಸ್ಥಾಸ್ಯಾಮ್ಯಂತರ್ಜಲೇ ಹ್ಯಹಂ ।
ತ್ರಿಂಶದ್ವರ್ಷಸಹಸ್ರಾಣಿ ಸರ್ವಭೂತಹಿತೇ ರತಃ ॥ ೪೨ ॥

ಯದಾ ವೃಷ್ಣಿಕುಲೋತ್ಪನ್ನಃ ಕೃಷ್ಣಃಚಕ್ರೇಣ ಪರ್ವತಾನ್ ।
ಪಾಟಯಿತ್ವೇಂದ್ರವಚನಾದ್ದಾನವಾನ್ನಿಹನಿಷ್ಯತಿ ।
ತದಾ ಸ ದೇಶೋ ಭವಿತಾ ಸರ್ವಮ್ಲೇಚ್ಛೈರಧಿಷ್ಠಿತಃ ॥ ೪೩ ॥

ತತೋನ್ಯೇ ಸೂರ್ಯವಂಶೀಯಾಃಕ್ಷತ್ರಿಯಾಸ್ತಾನ್ನಿಹತ್ಯ ಚ ।
ವಸಿಷ್ಯಂತಿ ಚ ತಂ ದೇಶಂ ಬ್ರಾಹ್ಮಣೈಸ್ಸಂಪ್ರವರ್ತಿತಾನ್ ।
ಧರ್ಮಾನ್ಸಂಸ್ಥಾಪಯಿಷ್ಯಂತಿ ರಾಜ್ಯಂ ಪ್ರಾಪ್ಸ್ಯಂತಿ ಶಾಶ್ವತಂ ॥ ೪೪ ॥

೪೦-೪೧. ನಾನು ಶುಭವಾದ ಹಿಮವತ್ಪರ್ವತದ ಪಾದದಲ್ಲಿ ನೇಪಾಳವೆಂಬ ಹೆಸರಿನ ಪ್ರದೇಶದಲ್ಲಿ ನಾನಾಗಿಯೇ ಭೂತಲದಿಂದ ಆವಿರ್ಭವಿಸುವೆನು. ಉಜ್ವಲಕಾಂತಿಯುಕ್ತದೇಹಶಿರಸ್ಸುಗಳುಳ್ಳವನೂ, ಚತುರ್ಮುಖನೂ ಆಗಿ ಶರೀರೇಶನೆಂದು ಮೂರುಲೋಕಗಳಲ್ಲಿಲ್ಲಿಲ್ಲೂ ಪ್ರಸಿದ್ಧನಾಗುವೆನು.

೪೨. ಸರ್ವಭೂತಹಿತಾಸಕ್ತನಾಗಿ ನಾನು ಅಲ್ಲಿ ಘೋರವಾದ ನಾಗಹ್ರದದಲ್ಲಿ ನೀರೊಳಗೆ ಮೂವತ್ತುಸಾವಿರವರ್ಷಕಾಲ ಇರುವೆನು.

೪೩. ವೃಷ್ಣಿಕುಲದಲ್ಲಿ ಉದಿಸುವ ಕೃಷ್ಣನು ಇಂದ್ರನ ಮಾತಿನಂತೆ ಚಕ್ರದಿಂದ ಪರ್ವತಗಳನ್ನು ಒಡೆದು ದಾನವರನ್ನು ಕೊಂದಾಗ ಆ (ನೇಪಾಳ) ದೇಶವು ಸರ್ವಮ್ಲೇಚ್ಛರ ನೆಲೆಯಾಗುವುದು.

೪೪. ಬಳಿಕ ಸೂರ್ಯವಂಶದ ಬೇರೆಯ ಕ್ಷತ್ರಿಯರು ಆ ಮ್ಲೇಚ್ಛರನ್ನು ಕೊಂದು ಆ ದೇಶಗಳಲ್ಲಿ ವಾಸಿಸುವರು. ಅವರು ಬ್ರಾಹ್ಮಣರು ಅನುಷ್ಠಾನ ಮಾಡುವ ಧರ್ಮಗಳನ್ನು ಸ್ಥಾಪಿಸುವರು. ಅಲ್ಲದೆ ಶಾಶ್ವತವಾಗಿ ರಾಜ್ಯವನ್ನು ಪಡೆಯುವರು.

ತತೋ ಲಿಂಗಾರ್ಚನಂ ತತ್ರ ಪ್ರತಿಷ್ಠಾಸ್ಯಂತಿ ಪಾರ್ಥಿವಾಃ ।
ಕ್ಷತ್ರಿಯಾಸ್ಸೂರ್ಯವಂಶೀಯಾಶ್ಶೂನ್ಯೇ ಲಪ್ಸ್ಯಂತಿ ಮಾಂ ನೃಪಾಃ॥ ೪೫ ॥
ತತೋ ಜನಪದಸ್ತತ್ರ ಭವಿಷ್ಯತಿ ಮಹಾಂಸ್ತದಾ ।
ಸ್ಥಿತೋ ಬ್ರಾಹ್ಮಣಭೂಯಿಷ್ಠಸ್ಸರ್ವವರ್ಣಾಶ್ರಮೈರ್ಯುತಃ ।
ಸಮ್ಯಕ್ಪ್ರವೃತ್ತಾ ರಾಜಾನೋ ಭವಿಷ್ಯಂತ್ಯಾಯತೌ ಸ್ಥಿತಾಃ ॥ ೪೬ ॥
ಏವಂ ಸಮ್ಯಕ್ಸ್ಥಿತೇ ತಸ್ಮಿನ್ದೇಶೇ ಪೌರಜನೇ ತಥಾ ।
ತತ್ರ ಮಾಮರ್ಚಯಿಷ್ಯಂತಿ ಸರ್ವಭೂತಾನಿ ಸರ್ವದಾ ॥ ೪೭ ॥
ತತ್ರಾಹಂ ಯೈಸ್ಸಕೃದ್ದೃಷ್ಟೋ ವಿಧಿವದ್ವಂದಿತಸ್ತು ಯೈಃ ।
ಗತ್ವಾ ಶಿವಪುರಂ ತೇ ಮಾಂ ದ್ರಕ್ಷ್ಯಂತೇ ದಗ್ಧಕಿಲ್ಬಿಷಾಃ ॥ ೪೮ ॥
ಉತ್ತರೇಣ ತು ಗಂಗಾಯಾ ದಕ್ಷಿಣೇ ಚಾಶ್ವಿನೀಮುಖಾತ್ ।
ಕ್ಷೇತ್ರಂ ಹಿ ಮಮ ತಜ್ಜ್ಞೇಯಂ ಯೋಜನಾನಿ ಚತುರ್ದಶ ॥ ೪೯ ॥

---

೪೫. ಆ ಸೂರ್ಯವಂಶೀಯರಾದ ಕ್ಷತ್ರಿಯರಾಜರು ಆ ಶೂನ್ಯ ಪ್ರದೇಶದಲ್ಲಿ ಲಿಂಗಾರ್ಚನೆಯನ್ನು ನೆಲೆಗೊಳಿಸಿ, ನನ್ನನ್ನು ಪಡೆಯುವರು.

೪೬. ಆಗ ಆ ಪ್ರದೇಶವು ದೊಡ್ಡ ಜನಪದವಾಗಿ ಬಹುಬ್ರಾಹ್ಮಣರ ನೆಲೆಯೂ, ಸರ್ವವರ್ಣಾಶ್ರಮಯುಕ್ತವೂ ಆಗುವುದು. ರಾಜರೂ ಸದ್ವರ್ತನೆಯುಳ್ಳವರೂ, ಧೈರ್ಯಪ್ರಭಾವವುಳ್ಳವರೂ ಆಗುವರು.

೪೭ ಹಾಗೆ ಆ ದೇಶವೂ, ಪುರಜನರೂ ಉತ್ತಮವಾಗಿರಲು, ಅಲ್ಲಿ ಸರ್ವಭೂತಗಳೂ ಸರ್ವದಾ ನನ್ನನ್ನು ಪೂಜಿಸುವುವು.

೪೮. ಅಲ್ಲಿ ನನ್ನನ್ನು ಒಂದುಸಾರಿ ಸಂದರ್ಶಿಸುವವರೂ, ವಿಧಿಯಂತೆ ಪೂಜಿಸುವವರೂ, ಪಾಪವನ್ನು ಕಳೆದುಕೊಂಡು ಕೈಲಾಸಕ್ಕೆ ಬಂದು, ನನ್ನನ್ನು ನೋಡುವರು.

೪೯. ಗಂಗೆಯ ಉತ್ತರದಲ್ಲಿಯೂ, ಅಶ್ವಿನೀಮುಖದ ದಕ್ಷಿಣದಲ್ಲಿಯೂ ಇರುವ ಹದಿನಾಲ್ಕುಯೋಜನ ಪ್ರದೇಶವನ್ನು ನನ್ನ ಕ್ಷೇತ್ರವೆಂದು ತಿಳಿಯಬೇಕು.

ಹಿಮಾದ್ರೇಸ್ತುಂಗಶಿಖರಾತ್ಪ್ರೋದ್ಭೂತಾ ವಾಗ್ಮತೀ ನದೀ |
ಭಾಗೀರಥ್ಯಾಶ್ಶತಗುಣಂ ಪವಿತ್ರಂ ತಜ್ಜಲಂ ಸ್ಮೃತಂ || ೩೦ ||

ತತ್ರ ಸ್ನಾತ್ವಾ ಹರೇರ್ಲೋಕಾನುಪಸ್ಪೃಶ್ಯ ದಿವಸ್ಪತೇಃ |
ಮುಕ್ತ್ವಾ ದೇಹಂ ನರಾ ಯಾಂತಿ ಮಮ ಲೋಕಂ ನ ಸಂಶಯಃ || ೩೧ ||

ಅಪಿ ದುಷ್ಕೃತಕರ್ಮಾಣಃ ಕ್ಷೇತ್ರೇಽಸ್ಮಿನ್ನಿವಸಂತಿ ಯೇ |
ನಿಯತಂ ಪುರುಹೂತಸ್ಯ ಶ್ರಿತಾಃ ಸ್ಥಾನೇ ವಸಂತಿ ತೇ || ೩೨ ||

ದೇವದಾನವಗಂಧರ್ವಾಸ್ಸಿದ್ಧವಿದ್ಯಾಧರೋರಗಾಃ |
ಮುನಯೋಽಪ್ಸರಸೋ ಯಕ್ಷಾ ಮೋಹಿತಾ ಮಮ ಮಾಯಯಾ || ೩೩ ||

ತದ್ವೈ ಗುಹ್ಯಂ ನ ಜಾನಂತಿ ಯತ್ರ ಸನ್ನಿಹಿತೋಽಹ್ಯಹಂ || ೩೪ ||

---

೩೦. ಉನ್ನತಶಿಖರವುಳ್ಳ ಹಿಮಾದ್ರಿಯಿಂದ ವಾಗ್ಮತಿಯೆಂಬ ನದಿಯುದಿಸುವುದು. ಆ ನದಿಯ ನೀರು ಭಾಗೀರಥೀನದಿಯ ನೀರಿನ ನೂರರಷ್ಟು ಪವಿತ್ರವಾದುದು.

೩೧. ಆ ವಾಗ್ಮತಿಯಲ್ಲಿ ಸ್ನಾನಮಾಡಿ ಮೃತರಾಗುವವರು ಇಂದ್ರಲೋಕವನ್ನು ಮುಟ್ಟಿ, ಬಳಿಕ ನನ್ನ ಲೋಕವನ್ನು ಸೇರುವರು.

೩೨. ಆ ಕ್ಷೇತ್ರದಲ್ಲಿ ವಾಸಮಾಡುವ ಪಾಪಕರ್ಮಿಗಳುಕೂಡ ನಿಜವಾಗಿಯೂ ಇಂದ್ರಲೋಕದಲ್ಲಿ ನೆಲಸುವರಾಗುವರು.

೩೩-೩೪. ನನ್ನ ಮಾಯೆಯಿಂದ ಮೋಹಿತರಾದ ದೇವದಾನವಗಂಧರ್ವರೂ, ಸಿದ್ಧವಿದ್ಯಾಧರನಾಗರೂ, ಮುನಿಗಳೂ, ಅಪ್ಸರಸರೂ, ಯಕ್ಷರೂ ಕೂಡ ನಾನು ಅಲ್ಲಿ ಸನ್ನಿಹಿತನಾಗಿರುವೆನೆಂಬುದನ್ನು ತಿಳಿಯುವುದಿಲ್ಲ.

ತಪಸ್ವಿನಾಂ ತಪೋಧನಾನಾಂ ಚ ಸಿದ್ಧಕ್ಷೇತ್ರಂ ಹಿ ತತ್ಸ್ಮೃತಂ ।
ಪ್ರಭಾಸಾಚ್ಚ ಪ್ರಯಾಗಾಚ್ಚ ನೈಮಿಷಾತ್ಪುಷ್ಕರಾದಪಿ ॥ ೫೫ ॥
ಕುರುಕ್ಷೇತ್ರಾದಪಿ ಬುಧಾಃ ಕ್ಷೇತ್ರಮೇತದ್ವಿಶಿಷ್ಯತೇ ॥ ೫೬ ॥

ಶ್ವಶುರೋ ಮೇ ಸ್ಥಿತೋ ಯತ್ರ ಹಿಮವಾನ್ ಭೂಧರೇಶ್ವರಃ ।
ಪ್ರಭವಂತಿ ಯತಸ್ಸರ್ವಾ ಗಂಗಾದ್ಯಾಸ್ಸರಿತಾಂ ವರಾಃ ॥ ೫೭ ॥

ತಸ್ಮಿನ್ ಕ್ಷೇತ್ರವರೇ ಪುಣ್ಯೇ ಪುಣ್ಯಾಸ್ಸರ್ವಾಸ್ಸರಿದ್ವರಾಃ ।
ಸರ್ವೇ ಪ್ರಸ್ರವಣಾಃ ಪುಣ್ಯಾಸ್ಸರ್ವೇ ಪುಣ್ಯಾಶ್ಶಿಲೋಚ್ಚಯಾಃ ॥ ೫೮ ॥

ಆಶ್ರಮಸ್ತತ್ರ ಭವಿತಾ ಸಿದ್ಧಚಾರಣಸೇವಿತಃ ।
ಶೈಲೇಶ್ವರ ಇತಿ ಖ್ಯಾತಶ್ಶರೀರಂ ಯತ್ರ ಮೇ ಸ್ಥಿತಂ ॥ ೫೯ ॥

ಸ್ರವಂತೀನಾಂ ವರಾ ಪುಣ್ಯಾ ವಾಗ್ಮತೀ ಪರ್ವತೋತ್ತಮಾತ್ ।
ಭಾಗೀರಥೀ ವೇಗವತೀ ಕಲುಷಂ ದಹತೇ ನೃಣಾಂ ॥ ೬೦ ॥

೫೫–೫೬. ದೇವತೆಗಳೇ, ಅದು ತಪಸ್ವಿಗೂ, ತಪಸ್ವಿಗಳಿಗೂ ಸಿದ್ಧಿಕ್ಷೇತ್ರವೆನಿಸಿಕೊಂಡಿದೆ. ಪ್ರಭಾಸ, ಪ್ರಯಾಗ, ನೈಮಿಷಾರಣ್ಯ, ಪುಷ್ಕರ ಎಂಬ ಕ್ಷೇತ್ರಗಳಿಗಿಂತಲೂ, ಕುರುಕ್ಷೇತ್ರಕ್ಕಿಂತಲೂ, ಅದು ಮೇಲಾದುದು.

೫೭. ಅಲ್ಲಿ ನನ್ನ ಮಾವನೂ, ಪರ್ವತರಾಜನೂ, ಗಂಗೆಯೇ ಮೊದಲಾದ ಶ್ರೇಷ್ಠವಾದ ನದಿಗಳ ಜನಕನೂ ಆದ ಹಿಮವಂತನಿರುವನು.

೫೮. ಪವಿತ್ರವಾದ ಆ ಉತ್ತಮಕ್ಷೇತ್ರದಲ್ಲಿರುವ ಎಲ್ಲಾ ನದಿಗಳೂ ಪುಣ್ಯವಾದುವು. ಎಲ್ಲಾ ಚಿಲುಮೆಗಳೂ, ಎಲ್ಲಾ ಬೆಟ್ಟಗಳೂ ಪವಿತ್ರವಾದುವು.

೫೯. ನನ್ನ ದೇಹವಿದ್ದ ಸ್ಥಳವು ಸಿದ್ಧಚಾರಣಸೇವಿತವೂ, ಶೈಲೇಶ್ವರವೆಂದು ಪ್ರಸಿದ್ಧವೂ ಆದ ಆಶ್ರಮವಾಗುವುದು.

೬೦. ಆ ಹಿಮವತ್ಪರ್ವತದಿಂದುದಿಸುವ ನದಿಗಳಲ್ಲಿ ವಾಗ್ಮತಿಯು ಬಹು ಪುಣ್ಯಪ್ರದವಾದುದು. ವೇಗವಾಗಿ ಹರಿಯುವ ಭಾಗೀರಥಿಯೂ ಮನುಷ್ಯರ ಪಾಪಗಳನ್ನು ತೊಳೆದುಬಿಡುವುದು.

ಕೀರ್ತನಾದೇವ ಸಂಶುದ್ಧೋ ದರ್ಶನಾದ್ಭೂತಿಮಾಪ್ನುಯಾತ್ ।
ಪಾನಾವಗಾಹನಾತ್ತಸ್ಯಾಸ್ತಾರಯೇತ್ಸಪ್ತ ವೈ ಕುಲಾನ್ ॥ ೬೧ ॥

ಲೋಕಪಾಲಸ್ತು ಚರತಿ ತೀರ್ಥಖ್ಯಾತಿಂ ಚ ತತ್ಸ್ವಯಂ ।
ತತ್ರ ಸ್ನಾತ್ವಾ ದಿವಂ ಯಾಂತಿ ಮೃತಾಸ್ತೇ ತ್ವಪುನರ್ಭವಾಃ ॥ ೬೨ ॥

ಸ್ನಾತ್ವಾ ಸ್ನಾತ್ವಾ ತು ಯೇ ತತ್ರ ನಿತ್ಯಮಭ್ಯರ್ಚಯಂತಿ ಮಾಂ ।
ಉದ್ಧರಾಮ್ಯಹಮೇತಾನ್ವೈ ಪ್ರೀತಸ್ಸಂಸಾರಸಾಗರಾತ್ ॥ ೬೩ ॥

ಯಸ್ತಸ್ಯ ವಾರಿಣಾ ಪೂರ್ಣಮೇಕಂ ಚ ಘಟಮುದ್ಧರೇತ್ ।
ಸ್ನಾಪನಾರ್ಥೇ ಮಮ ಶುಚಿಃ ಶ್ರದ್ಧಧಾನೋಽನಸೂಯಕಃ ॥ ೬೪ ॥

ವೇದವೇದಾಂಗವಿದುಷಾ ಶ್ರೋತ್ರಿಯೇಣ ವಿಶೇಷತಃ ।
ಆಹೃತಸ್ಯಾಗ್ನಿಹೋತ್ರಸ್ಯ ಯತ್ಫಲಂ ತಸ್ಯ ತದ್ಭವೇತ್ ॥ ೬೫ ॥

---

೬೧. ಅದರ ಕೀರ್ತನದಿಂದಲೇ ಮನುಷ್ಯನು ಪರಿಶುದ್ಧನಾಗುವನು. ದರ್ಶನದಿಂದ ಐಶ್ವರ್ಯವನ್ನು ಪಡೆಯುವನು. ಸ್ನಾನಪಾನಗಳಿಂದ ತನ್ನ ಕುಲದ ಏಳುತಲೆಯವರನ್ನೂ ಉತ್ತಾರಣಗೊಳಿಸುವನು.

೬೨. ಅಲ್ಲದೆ ತಾನು ಲೋಕಪಾಲನಾಗಿ ಆ ತೀರ್ಥಮಹಿಮೆಯನ್ನು ಅನುಭವಿಸುವನು. ಆ ನದಿಯಲ್ಲಿ ಸ್ನಾನಮಾಡಿದವರು ಸ್ವರ್ಗವನ್ನು ಪಡೆಯುವರು. ಅಲ್ಲಿ ಮೃತರಾದವರು ಪುನರ್ಜನ್ಮವಿಲ್ಲದವರಾಗುವರು.

೬೩. ಆ ನದಿಯಲ್ಲಿ ನಿತ್ಯವೂ ಸ್ನಾನಮಾಡಿ, ನನ್ನನ್ನು ಪೂಜಿಸುವವರನ್ನು ಪ್ರೀತನಾದ ನಾನು ಸಂಸಾರಸಾಗರದಿಂದ ಉದ್ಧರಿಸುವೆನು.

೬೪-೬೫. ನನ್ನ ಅಭಿಷೇಕಕ್ಕಾಗಿ ಶುಚಿರ್ಭೂತನಾಗಿ ಆ ವಾಗ್ಮತೀ ನದಿಯಿಂದ ಒಂದು ಕೊಡದತುಂಬ ನೀರನ್ನು ತೆಗೆದುಕೊಂಡು ಹೋಗುವ ಆಸಕ್ತನೂ, ಅಸೂಯೆಯಿಲ್ಲದವನೂ ಆದ ಮನುಷ್ಯನು, ವೇದವೇದಾಂಗ ಪಾರಂಗತನಾದ ಶ್ರೋತ್ರಿಯನು ವಿಶೇಷವಾಗಿ ಮಾಡಿದ ಅಗ್ನಿಹೋತ್ರದಿಂದ ಪಡೆಯುವ ಫಲವನ್ನು ಪಡೆಯುವನು.

ತಸ್ಯಾಸ್ತೀರೇ ಜಲೋದ್ಭೇದಂ ಮನ್ಮೂಲಾದಭಿನಿಸ್ಸೃತಂ ।
ಮೃಗಶೃಂಗೋದಕಂ ನಾಮ ನಿತ್ಯಂ ಮುನಿಜನಪ್ರಿಯಂ ॥ ೧೬ ॥

ತತ್ರಾಭಿಷೇಕಂ ಕುರ್ವೀತ ಉಪಸ್ಪೃಶ್ಯ ಸಮಾಹಿತಃ ।
ಯಾವಜ್ಜೀವಕೃತಂ ಪಾಪಂ ತತ್ಕ್ಷಣಾದೇವ ನಶ್ಯತಿ ॥ ೧೭ ॥

ತೀರ್ಥಂ ಪಂಚನದಂ ಪ್ರಾಪ್ಯ ಪುಣ್ಯಂ ಬ್ರಹ್ಮರ್ಷಿಸೇವಿತಂ ।
ಅಗ್ನಿಷ್ಟೋಮಫಲಂ ತತ್ರ ಸ್ನಾನಮಾತ್ರಃ ಪ್ರಪದ್ಯತೇ ॥ ೧೮ ॥

ಷಷ್ಟಿಂ ಧೇನುಸಹಸ್ರಾಣಿ ಯಾನಿ ರಕ್ಷಂತಿ ವಾಗ್ಮತೀಂ ।
ನ ತಾಂ ಪಾಪಾಃ ಕೃತಘ್ನಾ ವಾ ಕದಾಚಿತ್ಪ್ರಾಪ್ನುಯಾನ್ನರಃ ॥ ೧೯ ॥

ಶುಚಯಶ್ಶ್ರದ್ಧಧಾನಾಶ್ಚ ಸತ್ಯಸಂಧಾಶ್ಚ ಯೇ ನರಾಃ ।
ವಾಗ್ಮತ್ಯಾಂ ತೇ ನರಾಃ ಸ್ನಾಂತಿ ಲಭಂತೇ ಚೋತ್ತಮಾಂ ಗತಿಂ ॥ ೨೦ ॥

---

೧೬. ಆ ವಾಗ್ಮತಿಯ ತೀರದಲ್ಲಿ ನನ್ನ ಪಾದಮೂಲದಿಂದ ಹೊರಟಿರುವ ಒರತೆಯ ನೀರಿನ ಮೃಗಶೃಂಗೋದಕವೆಂಬ ಪ್ರವಾಹವು ಯಾವಾಗಲೂ ಮುನಿಜನರಿಗೆ ಪ್ರಿಯವಾದುದಾಗಿದೆ.

೧೭. ಆ ಮೃಗಶೃಂಗೋದಕದಲ್ಲಿ ಸಮಾಧಾನಚಿತ್ತನಾಗಿ ಸ್ನಾನಾಚಮನಗಳನ್ನು ಮಾಡುವವರ ಜೀವಿತಕಾಲದ ಪಾಪವೆಲ್ಲವೂ ಸ್ನಾನಮಾಡಿದ ಕ್ಷಣದಲ್ಲೇ ನಾಶವಾಗುವುದು.

೧೮-೧೯. ಬ್ರಹ್ಮರ್ಷಿಗಳಿಂದ ಸೇವಿತವಾದ ಪಂಚನದತೀರ್ಥಕ್ಕೆ ಹೋಗಿ ಸ್ನಾನಮಾಡಿದ ಮಾತ್ರದಲ್ಲೇ ಮನುಷ್ಯರು ಅಗ್ನಿಷ್ಟೋಮಫಲವನ್ನೂ, ಅರವತ್ತುಸಾವಿರ ಗೋವುಗಳ ರಕ್ಷಣೆಯ ಫಲವನ್ನೂ ಪಡೆಯುವರು. ಆ ವಾಗ್ಮತಿಯನ್ನು ಕೇವಲ ಪಾಪಿಗಳೂ, ಕೃತಘ್ನರೂ ಎಂದಿಗೂ ಪಡೆಯಲಾರರು.

೨೦. ಶುಚಿಗಳೂ, ಶ್ರದ್ಧಾಳುಗಳೂ, ಸತ್ಯಸಂಧರೂ ಆದವರು ಆ ವಾಗ್ಮತೀನದಿಯಲ್ಲಿ ಸ್ನಾನಮಾಡಿ, ಉತ್ತಮಗತಿಯನ್ನು ಪಡೆಯುವರು.

ಆರ್ತಾ ಭೀತಾಶ್ಚ ಸಂತಪ್ತಾ ವ್ಯಾಧಿತೋಽವ್ಯಾಧಿತೋಽಪಿ ವಾ ।
ವಾಗ್ಮತ್ಯಾಸ್ಸಲಿಲೇ ಸ್ನಾತ್ವಾ ಯೋ ಮಾಂ ಪಶ್ಯತಿ ಸಂಸ್ಕೃತಾಃ ॥ ೭೧ ॥

ತೇಷಾಂ ಶಾಂತಿರ್ಭವೇನ್ನಿತ್ಯಂ ಪುರುಷಾಣಾಂ ನ ಸಂಶಯಃ ।
ಮತ್ಪ್ರಭಾವಾತ್ತು ಸ್ನಾತಸ್ಯ ಸರ್ವಂ ನಶ್ಯತಿ ಕಿಲ್ಬಿಷಂ ॥ ೭೨ ॥

ಈತಯಸ್ಸಮುದೀರ್ಣಾಶ್ಚ ಪ್ರಶಮಂ ಯಾಂತಿ ಸರ್ವಶಃ ।
ವಾಗ್ಮತ್ಯಾಸ್ಸಲಿಲೇ ಸ್ನಾತ್ವಾ ಯೇ ಮಾಂ ಪಶ್ಯಂತಿ ಸಂಸ್ಕೃತಾಃ ॥ ೭೩ ॥

ವಾಗ್ಮತೀ ಸರಿತಾಂ ಶ್ರೇಷ್ಠಾ ಯತ್ರ ಯತ್ರಾವಗಾಹ್ಯತೇ ।
ತತ್ರ ತತ್ರ ಫಲಂ ದದ್ಯಾದ್ರಾಜಸೂಯಾಶ್ವಮೇಧಯೋಃ ॥ ೭೪ ॥

ಯೋಜನಾಭ್ಯಂತರಂ ಕ್ಷೇತ್ರಂ ಸಮಂತಾತ್ಸರ್ವತೋ ದಿಶಂ ।
ಮೂಲಕ್ಷೇತ್ರಂ ತು ವಿಜ್ಞೇಯಂ ರುದ್ರೇಣಾಧಿಷ್ಠಿತಂ ಸ್ವಯಂ ॥ ೭೫ ॥

೭೧-೭೨. ಆತರೂ, ಭೀತರೂ, ವ್ಯಾಧಿಯಿಂದಲೋ, ಬೇರೆಯ ವಿಧದಿಂದಲೋ ಸಂತಾಪವುಳ್ಳವರೂ ವಾಗ್ಮತಿಯ ತೀರ್ಥದಲ್ಲಿ ಸ್ನಾನಮಾಡಿ, ಶುದ್ಧರಾಗಿ ನನ್ನನ್ನು ಸಂದರ್ಶಿಸಿದರೆ ಸಂಶಯವಿಲ್ಲದೆ ನಿತ್ಯಶಾಂತಿ ಯುಂಟಾಗುವುದು. ಸ್ನಾನಮಾಡಿದವರ ಪಾಪವು ನನ್ನ ಮಹಿಮೆಯಿಂದ ನಾಶವಾಗುವುದು

೭೩. ವಾಗ್ಮತೀನದಿಯ ತೀರ್ಥದಲ್ಲಿ ಸ್ನಾನಮಾಡಿ ಸಂಸ್ಕೃತರಾಗಿ ನನ್ನ ದರ್ಶನವನ್ನು ಪಡೆಯುವವರ ಅಧಿಕವಾದ ಈತಿಬಾಧೆಗಳೆಲ್ಲವೂ ಪೂರ್ಣವಾಗಿ ಪರಿಹಾರವಾಗುವುವು.

೭೪. ನದಿಗಳಲ್ಲಿ ಶ್ರೇಷ್ಠವಾದ ವಾಗ್ಮತಿಯು ತನ್ನ ತೀರ್ಥದಲ್ಲೆಲ್ಲಲ್ಲಿ ಸ್ನಾನಮಾಡಿದರೆ ಅಲ್ಲಲ್ಲಿ ರಾಜಸೂಯಾಶ್ವಮೇಧಯಜ್ಞಗಳ ಫಲವನ್ನು ಕೊಡುವುದು.

೭೫. ಶೈಲೇಶ್ವರಮೂಲಕ್ಷೇತ್ರದಲ್ಲಿ ರುದ್ರನು ಸಾಕ್ಷಾತ್ತಾಗಿ ನೆಲೆಸಿರುವನು. ಆ ಕ್ಷೇತ್ರವು ಸುತ್ತಲೂ ಎಂದರೆ ಎಲ್ಲಾ ದಿಕ್ಕುಗಳಲ್ಲೂ ಯೋಜನದಷ್ಟು ವಿಸ್ತಾರವುಳ್ಳದಾಗಿರುವುದು.

ತತ್ರ ಪೂರ್ವೋತ್ತರೇ ಪಾರ್ಶ್ವೇ ವಾಸುಕಿರ್ನಾಮ ನಾಗರಾಟ್ ।
ವೃತೋ ನಾಗಸಹಸ್ರೈಸ್ತು ದ್ವಾರಿ ತಿಷ್ಠತಿ ಮೇ ಸದಾ ॥ ೭೬ ॥

ಸ ವಿಘ್ನಂ ಕುರುತೇ ನೄಣಾಂ ತತ್ ಕ್ಷೇತ್ರಂ ವಿಶತಾಂ ಸದಾ ।
ಪ್ರಥಮಂ ಸ ನಮಸ್ಕಾರ್ಯಸ್ತತೋಽಹಂ ತದನಂತರಂ ॥ ೭೭ ॥

ಅನೇನ ವಿಧಿನಾ ಪುಂಸಾಮವಿಘ್ನಂ ವಿಶತಾಂ ಭವೇತ್ ॥ ೭೮ ॥

ವಂದತೇ ಪರಯಾ ಭಕ್ತ್ಯಾ ಯೋ ಮಾಂ ತತ್ರ ನರಸ್ಸದಾ ।
ಪೃಥಿವ್ಯಾಂ ಸ ಭವೇದ್ರಾಜಾ ಸರ್ವಲೋಕನಮಸ್ಕೃತಃ ॥ ೭೯ ॥

ಗಂಧೈರ್ಮಾಲ್ಯೈಶ್ಚ ಮೇ ಮೂರ್ತಿಮಭ್ಯರ್ಚಯತಿ ಯೋ ನರಃ ।
ಉತ್ಪದ್ಯತೇ ಸ ದೇವೇಷು ತುಷಿತೇಷು ನ ಸಂಶಯಃ ॥ ೮೦ ॥

ಯಸ್ತು ದದ್ಯಾತ್ಪ್ರದೀಪಂ ಮೇ ಪರ್ವತೇ ಶ್ರದ್ಧಯಾನ್ವಿತಃ ।
ಸೂರ್ಯಪ್ರಭೇಷು ದೇವೇಷು ತಸ್ಯೋತ್ಪತ್ತಿರ್ವಿಧೀಯತೇ ॥ ೮೧ ॥

೭೬–೭೮. ಅಲ್ಲಿ ಈಶಾನ್ಯಭಾಗದಲ್ಲಿ ವಾಸುಕಿಯೆಂಬ ನಾಗರಾಜನು ಸಹಸ್ರನಾಗರಿಂದ ಪರಿವೃತನಾಗಿ ನನ್ನ ಕ್ಷೇತ್ರದ ಬಾಗಿಲಲ್ಲಿ ಯಾವಾಗಲೂ ಇರುವನು. ಆತನು ಆ ಕ್ಷೇತ್ರವನ್ನು ಪ್ರವೇಶಿಸುವವರಿಗೆ ಯಾವಾಗಲೂ ತಡೆಯನ್ನುಂಟುಮಾಡುವನು. ಆದುದರಿಂದ ಮೊದಲು ಆತನಿಗೆ ನಮಸ್ಕಾರ ಮಾಡಿ, ಬಳಿಕ ನನಗೆ ಮಾಡಬೇಕು. ಹಾಗೆ ಮಾಡುವುದರಿಂದ ಕ್ಷೇತ್ರಪ್ರವೇಶ ಮಾಡುವವರಿಗೆ ತಡೆಯಿಲ್ಲದಂತಾಗುವುದು.

೭೯. ಆ ಕ್ಷೇತ್ರದಲ್ಲಿ ಪರಮಭಕ್ತಿಯಿಂದ ಯಾವಾಗಲೂ ನನ್ನನ್ನು ವಂದಿಸುವವನು ಭೂಮಿಯಲ್ಲಿ ಸರ್ವಜನವಂದ್ಯನಾದ ದೊರೆಯಾಗುವನು

೮೦. ಅಲ್ಲಿ ನನ್ನಮೂರ್ತಿಯನ್ನು ಗಂಧಮಾಲ್ಯಾದಿಗಳಿಂದ ಪೂಜಿಸುವವನು ಮುಂದೆ ತುಷಿತರೆಂಬ ಗಣದೇವತೆಗಳಲ್ಲಿ ಉದಿಸುವುದರಲ್ಲಿ ಸಂಶಯವಿಲ್ಲ.

೮೧. ಆ ಪರ್ವತದಲ್ಲಿ ನನಗೆ ಆಸಕ್ತಿಯಿಂದ ದೀಪವನ್ನು ಹತ್ತಿಸುವವನು ಮುಂದೆ ಸೂರ್ಯನಂತೆ ಹೊಳೆಯುವ ದೇವತೆಗಳಲ್ಲಿ ಉದಿಸುವನು.

ಗೀತವಾದಿತ್ರನೃತ್ಯೈಸ್ತು ಸ್ತುತಿಭಿರ್ಜಾಗರೇಣ ವಾ ।
ಯೇ ಮೇ ಕುರ್ವಂತಿ ಸೇವಾಂ ನೈ ಮತ್ಸಂಸ್ಥಾಸ್ತೇ ಭವಂತಿ ಹಿ ॥ ೮೨ ॥

ದಧ್ನಾ ಕ್ಷೀರೇಣ ಮಧುನಾ ಸರ್ಪಿಷಾ ಸಲಿಲೇನ ವಾ ।
ಸ್ನಾಪನಂ ಯೇ ಪ್ರಯುಚ್ಛಂತಿ ತೇ ತರಂತಿ ಜರಾಂತಕೌ ॥ ೮೩ ॥

ಯಃ ಶ್ರಾದ್ಧೇ ಭೋಜನಂ ದದ್ಯಾದ್ವಿಪ್ರೇಭ್ಯಶ್ಶ್ರದ್ಧಯಾನ್ವಿತಃ ।
ಸೋಽಮೃತಾಶೀ ಭವೇನ್ನೂನಂ ತ್ರಿದಿವೇ ಸುರಪೂಜಿತಃ ॥ ೮೪ ॥

ವ್ರತೋಪವಾಸೈರ್ಹೋಮೈರ್ವಾ ನೈವೇದ್ಯೈಶ್ಚಾರುಭಿಸ್ತಥಾ ।
ಯಜಂತೇ ಬ್ರಾಹ್ಮಣಾ ಯೇ ಮಾಂ ಪರಯಾಶ್ರದ್ಧಯಾನ್ವಿತಾಃ ॥ ೮೫ ॥

ಷಷ್ಟಿವರ್ಷಸಹಸ್ರಾಣಿ ಚೋಷಿತ್ವಾ ದಿವಿ ತೇ ತತಃ ।
ಐಶ್ವರ್ಯಂ ಪ್ರತಿಪದ್ಯಂತೇ ಮರ್ತ್ಯಲೋಕೇ ಪುನಃ ಪುನಃ ॥ ೮೬ ॥

---

೮೨. ನೃತ್ತಗೀತವಾದ್ಯಗಳಿಂದಾಗಲಿ, ಸ್ತೋತ್ರಗಳಿಂದ ಜಾಗರಮಾಡುವುದರಿಂದಾಗಲಿ ನನ್ನ ಸೇವೆಮಾಡುವವರು ಮುಂದೆ ನನ್ನಲ್ಲೇ ನೆಲಸುವವರಾಗುವರು.

೮೩. ಹಾಲಿನಿಂದಾಗಲಿ, ಮೊಸರಿನಿಂದಾಗಲಿ, ತುಪ್ಪದಿಂದಾಗಲಿ, ಜೇನುತುಪ್ಪದಿಂದಾಗಲಿ, ಕಡೆಗೆ ನೀರಿನಿಂದಾಗಲಿ ನನಗೆ ಅಭಿಷೇಕಮಾಡುವವರು ಜರಾಮರಣವಿಲ್ಲದವರಾಗುವರು.

೮೪. ನನ್ನ ಕ್ಷೇತ್ರದಲ್ಲಿ ಶ್ರಾದ್ಧಮಾಡಿ, ಶ್ರದ್ಧೆಯಿಂದ ಬ್ರಾಹ್ಮಣರಿಗೆ ಭೋಜನಮಾಡಿಸುವವನು ನಿಜವಾಗಿಯೂ ಸ್ವರ್ಗದಲ್ಲಿ ಅಮೃತಪಾನ ಮಾಡುವವನಾಗಿ ದೇವಪೂಜಿತನಾಗುವನು.

೮೫-೮೬. ಆ ಕ್ಷೇತ್ರದಲ್ಲಿ ಅಧಿಕವಾದ ಆಸಕ್ತಿಯಿಂದ ವ್ರತೋಪವಾಸಗಳಿಂದಾಗಲಿ, ಹೋಮಗಳಿಂದಾಗಲಿ, ಉತ್ತಮವಾದ ನೈವೇದ್ಯಗಳಿಂದಾಗಲಿ, ನನ್ನನ್ನು ಪೂಜಿಸುವ ಬ್ರಾಹ್ಮಣರು ಅರವತ್ತುಸಾವಿರವರ್ಷಕಾಲ ಸ್ವರ್ಗದಲ್ಲಿ ವಾಸಿಸಿ, ಬಳಿಕ ಮತ್ತೆಮತ್ತೆ ಭೂಲೋಕದಲ್ಲಿ ಐಶ್ವರ್ಯವನ್ನು ಪಡೆಯುವರು.

ಬ್ರಾಹ್ಮಣಾಃ ಕ್ಷತ್ರಿಯೋ ವೈಶ್ಯಶ್ಶೂದ್ರಃ ಸ್ತ್ರೀವಾಪಿ ಸಂಗತಾಃ |
ಶೈಲೇಶ್ವರಂ ಕು ತತ್ಸ್ಥಾನಂ ಭಕ್ತಿತಸ್ಸಮುಪಾಸತೇ |
ಮತ್ಪಾರ್ಷದಾಸ್ತೇ ಜಾಯಂತೇ ಸತತಂ ಸಹಿತಾಸ್ಸುರೈ || ೮೭ ||

ಶೈಲೇಶ್ವರಂ ಪರಂ ಗುಹ್ಯಂ ಗತಿಶ್ಶೈಲೇಶ್ವರಃ ಪರಾ |
ಶೈಲೇಶ್ವರಾತ್ಪರಂ ಕ್ಷೇತ್ರಂ ನ ಕ್ವಚಿದ್ಭುವಿ ವಿದ್ಯತೇ || ೮೮ ||

ಬ್ರಹ್ಮಹಾ ಗುರುಹಾ ಗೋಘ್ನಃ ಸ್ಪೃಷ್ಟೋ ವೈ ಸರ್ವಪಾತಕೈಃ |
ಕ್ಷೇತ್ರಮೇತದನುಪ್ರಾಪ್ಯ ನಿರ್ಮಲೋ ಜಾಯತೇ ನರಃ || ೮೯ ||

ವಿವಿಧಾನ್ಯತ್ರ ತೀರ್ಥಾನಿ ಸಂತಿ ಪುಣ್ಯಾನಿ ದೇವತಾಃ |
ಯೇಷಾಂ ತೋಯೈರ್ನರಃ ಸ್ಪೃಷ್ಟಃ ಸರ್ವಪಾಪೈಃ ಪ್ರಮುಚ್ಯತೇ || ೯೦ ||

ಕ್ರೋಶಂ ಕ್ರೋಶಂ ಸುರೈ ರೂಪಂ ತಚ್ಚ ಸಂಹೃತ್ಯ ನಿರ್ಮಿತಂ |
ತೀರ್ಥಂ ಕ್ರೋಶೋದಕಂ ನಾಮ ಪುಣ್ಯಂ ಮುನಿಜನಪ್ರಿಯಂ || ೯೧ ||

---

೮೭. ಶೈಲೇಶ್ವರಕ್ಷೇತ್ರಕ್ಕೆ ಬಂದು, ಭಕ್ತಿಯಿಂದ ಸೇವಿಸುವ ಬ್ರಾಹ್ಮಣರೂ ಕ್ಷತ್ರಿಯರೂ, ವೈಶ್ಯರೂ, ಸ್ತ್ರೀಯರೂ ದೇಹಾವಸಾನದಲ್ಲಿ ದೇವತೆಗಳೊಡನೆ ಯಾವಾಗಲೂ ನನ್ನ ಪಾರಿಷದರಾಗಿರುವರು.

೮೮. ಶೈಲೇಶ್ವರಕ್ಷೇತ್ರವು ಪರಮರಹಸ್ಯವಾದುದು. ಶೈಲೇಶ್ವರವು ಉತ್ತಮವಾದ ಗತಿ. ಶೈಲೇಶ್ವರಕ್ಕಿಂತ ಶ್ರೇಷ್ಠವಾದ ಶಿವಕ್ಷೇತ್ರವು ಭೂಲೋಕದಲ್ಲೆಲ್ಲೂ ಇಲ್ಲ.

೮೯. ಬ್ರಹ್ಮಹತ್ಯ, ಗುರುಹತ್ಯ, ಗೋಹತ್ಯ, ಮೊದಲಾದ ಸರ್ವಪಾತಕಗಳಿಂದ ಕೂಡಿದವರೂ ಶೈಲೇಶ್ವರಕ್ಷೇತ್ರಕ್ಕೆ ಬಂದರೆ ಆ ಪಾಪಗಳಿಂದ ವಿಮುಕ್ತರಾಗಿ ಪರಿಶುದ್ಧರಾಗುವರು.

೯೦. ನೀರನ್ನು ಮುಟ್ಟಿದ ಮಾತ್ರದಲ್ಲೇ ಮನುಷ್ಯರನ್ನು ಸರ್ವಪಾಪವಿಮುಕ್ತರನ್ನಾಗಿ ಮಾಡುವ ಪುಣ್ಯಕರವಾದ ಬಗೆಬಗೆಯ ತೀರ್ಥಗಳು ಶೈಲೇಶ್ವರಕ್ಷೇತ್ರದಲ್ಲಿವೆ.

೯೧-೯೩. ದೇವತೆಗಳು ವಿಸ್ತಾರವಾದ ತೀರ್ಥಗಳನ್ನು ಸಂಕೋಚವಾಗಿ ಮಾಡಿ ಪ್ರತಿಯೊಂದು ಹರಿದಾರಿಯಲ್ಲೂ ನಿರ್ಮಿಸಿರುವರು. ಅವುಗಳಲ್ಲಿ

ತತ್ರ ಸ್ನಾತ್ವಾ ಶುಚಿರ್ದಾಂತಸ್ಸತ್ಯಸಂಧೋ ಜಿತೇಂದ್ರಿಯಃ ।
ವಿಮುಕ್ತಃ ಕಿಲ್ಬಿಷೈಸ್ಸರ್ವೈಸ್ಸರ್ವಮೇವ ಫಲಂ ಲಭೇತ್ ॥ ೯೨ ॥
ಅನಾಶಕಂ ವ್ರಜೇದ್ಯಸ್ತು ದಕ್ಷಿಣೇನ ಮಹಾತ್ಮನಃ ।
ಶೈಲೇಶ್ವರಸ್ಯ ಪುರುಷಃ ಸ ಗಚ್ಛೇತ್ಪರಮಾಂ ಗತಿಂ ॥ ೯೩ ॥
ಭೃಗುಪ್ರಪತನಂ ಕೃತ್ವಾ ಕಾಮಕ್ರೋಧವಿವರ್ಜಿತಃ ।
ವಿಮಾನೇನ ದಿವಂ ಗಚ್ಛೇದ್ವೃತಸ್ಸೋಽಪ್ಸರಸಾಂ ಗಣೈಃ ॥ ೯೪ ॥
ಭೃಗುಮೂಲೇ ಪರಂ ತೀರ್ಥಂ ಬ್ರಹ್ಮಣಾ ನಿರ್ಮಿತಂ ಸ್ವಯಂ ।
ಬ್ರಹ್ಮೋದ್ಭೇದೇತಿ ವಿಖ್ಯಾತಂ ತಸ್ಯಾಪಿ ಶೃಣು ಯತ್ಫಲಂ ॥ ೯೫ ॥
ಸಂವತ್ಸರಂ ತು ಯಸ್ತತ್ರ ಸ್ನಾಸ್ಯಂಸ್ತು ನಿಯತೇಂದ್ರಿಯಃ ।
ಸ ಬ್ರಹ್ಮಲೋಕೇ ವಿರಜೇ ಗಚ್ಛೇನ್ನಾಸ್ತ್ಯತ್ರ ಸಂಶಯಃ ॥ ೯೬ ॥

ಕ್ರೋಶೋದಕವೆಂಬ ಹೆಸರಿನ ತೀರ್ಥವು ಮುನಿಜನ ಪ್ರಿಯವಾದುದು ಅದರಲ್ಲಿ ಸ್ನಾನಮಾಡಿದವನು ನಿರ್ಮಲನೂ, ಶಾಂತನೂ, ಸತ್ಯಸಂಧನೂ, ಜಿತೇಂದ್ರಿಯನೂ ಆಗಿ ಸರ್ವಪಾಪವಿನಿರ್ಮುಕ್ತನಾಗಿ ಸರ್ವಫಲವನ್ನೂ ಪಡೆಯುವನು.

೯೩. ಮಹಾತ್ಮನಾದ ಶೈಲೇಶ್ವರನಿಗೆ ದಕ್ಷಿಣ (ಬಲ) ಭಾಗದಲ್ಲಿರುವ ಅನಾಶಕತೀರ್ಥಕ್ಕೆ. ಹೋಗುವವನು ಪರಮಗತಿಯನ್ನು ಪಡೆಯುವನು.

೯೪. ಕಾಮಕ್ರೋಧಗಳನ್ನು ಬಿಟ್ಟು ಆ ತೀರ್ಥದಲ್ಲಿ ಮೇಲಿಂದ ಬೀಳುವವನು ಅಪ್ಸರಸ್ಸುಗಳ ಗುಂಪಿನಿಂದ ಕೂಡಿ ವಿಮಾನದಲ್ಲಿ ಸ್ವರ್ಗಕ್ಕೆ ಹೋಗುವನು.

೯೫. ಆ ಬೆಟ್ಟದ ಜರಿಯ ಮೂಲದಲ್ಲಿ ಬ್ರಹ್ಮನು ತಾನೇ ನಿರ್ಮಿಸಿದ ಬ್ರಹ್ಮೋದ್ಭೇದವೆಂಬ ಪ್ರಸಿದ್ಧವಾದ ಮತ್ತೊಂದು ತೀರ್ಥವಿದೆ. ಅದರ ಫಲವೇನೆಂಬುದನ್ನು ಕೇಳು.

೯೬. ಆ ತೀರ್ಥದಲ್ಲಿ ಒಂದುವರ್ಷಕಾಲ ಜಿತೇಂದ್ರಿಯನಾಗಿ ಸ್ನಾನ ಮಾಡುವವನು ರಜೋರಹಿತವಾದ ಬ್ರಹ್ಮಲೋಕವನ್ನು ಸೇರುವುದರಲ್ಲಿ ಸಂಶಯವಿಲ್ಲ.

ತತ್ರ ಗೋರಕ್ಷಕಂ ನಾಮ ಗೋವೃಷಃಪದವಿಕ್ಷತಂ ।
ದೃಷ್ಟ್ವಾ ಚ ತಾನಿ ಹಿ ಪುಮಾನ್ ಗೋಸಹಸ್ರಫಲಂ ಲಭೇತ್ ॥ ೯೭ ॥

ಗೌರ್ಯಾಸ್ತು ಶಿಖರಂ ತತ್ರ ಗಚ್ಛೇತ್ಸಿದ್ಧನಿಷೇವಿತಂ ।
ಯತ್ರ ಸನ್ನಿಹಿತಾ ನಿತ್ಯಂ ಪಾರ್ವತೀ ಶಿಖರಪ್ರಿಯಾ ॥ ೯೮ ॥

ಲೋಕಮಾತಾ ಭಗವತೀ ಲೋಕರಕ್ಷಾರ್ಥಮುದ್ಯತಾ ।
ತಸ್ಯಾಸ್ಸಾಲೋಕ್ಯಮಾಯಾತಿ ದೃಷ್ಟ್ವಾ ಸ್ಪೃಷ್ಟ್ವಾಭಿವಾದ್ಯ ಚ ॥ ೯೯ ॥

ತ್ಯಜತೀ ಪತಿತಃ ತಸ್ಯಾ ಅಧಸ್ತಾದ್ವಾಗ್ಮತೀತಟೇ ।
ಉಮಾಲೋಕಂ ವ್ರಜೇದಾಶು ವಿಮಾನೇನ ವಿಹಾಯಸಾ ॥ ೧೦೦ ॥

ಸ್ತನಕುಂಡೇ ಉಮಾಯಾಸ್ತು ಯಃ ಸ್ನಾಯಾತ್ಸ್ವಲು ಮಾನವಃ ।
ಸ್ಕಂದಲೋಕಮವಾಪ್ನೋತಿ ಭೂತ್ವಾ ವೈಶ್ವಾನರದ್ಯುತಿಃ ॥ ೧೦೧ ॥

---

೯೭. ಅಲ್ಲಿ ಗೋರಕ್ಷಕವೆಂಬ ಹೆಸರಿನ ಹಸುಗಳ ಮತ್ತು ವೃಷಭಗಳ ಕಾಲತುಳಿತದಿಂದಾದ ಹಳ್ಳಗಳಿವೆ. ಅವುಗಳನ್ನು ನೋಡುವ ಮನುಷ್ಯನು ಸಾವಿರಗೋದರ್ಶನದ ಫಲವನ್ನು ಪಡೆಯುವನು.

೯೮–೯೯. ಶಿಖರದಲ್ಲಿ ಪ್ರೀತಿಯುಳ್ಳ ಪಾರ್ವತಿಯು ನಿತ್ಯವೂ ಇರುವ ಸಿದ್ಧರ ನೆಲೆಯಾದ ಗೌರೀಶಿಖರವೆಂಬುದಕ್ಕೆ ಯಾತ್ರಿಕನು ಹೋಗಬೇಕು. ಅಲ್ಲಿ ಲೋಕಮಾತೆಯಾದ ಆ ಭಗವತಿಯು ಲೋಕರಕ್ಷಣೆಗಾಗಿ ಉದ್ಯುಕ್ತಳಾಗಿರುವಳು. ಆ ದೇವಿಯನ್ನು ಸಂದರ್ಶಿಸಿ, ಸ್ಪರ್ಶಿಸಿ, ವಂದಿಸುವುದರಿಂದ ದೇವಿಯ ಸಾಲೋಕ್ಯವನ್ನು ಪಡೆಯುವನು.

೧೦೦. ಆ ಶಿಖರದಿಂದ ಕೆಳಗೆ ವಾಗ್ಮತಿಯ ದಡದಲ್ಲಿ ಬಿದ್ದವನು ಆಕಾಶ ದಲ್ಲಿ ವಿಮಾನದಿಂದ ಹೋಗಿ ಬೇಗನೆ ಉಮಾಲೋಕವನ್ನು ಸೇರುವನು.

೧೦೧. ಉಮಾದೇವೀಸ್ತನಕುಂಡವೆಂಬ ತೀರ್ಥದಲ್ಲಿ ಸ್ನಾನಮಾಡುವವನು ಅಗ್ನಿಯಂತೆ ತೇಜಸ್ವಿಯಾಗಿ ಸ್ಕಂದ (ಷಣ್ಮುಖ) ಲೋಕವನ್ನು ಸೇರುವನು.

ತೀರ್ಥಂ ಪಂಚನದಂಪ್ರಾಪ್ಯ ಪುಣ್ಯಂ ಬ್ರಹ್ಮರ್ಷಿಸೇವಿತಂ ।
ಅಗ್ನಿಹೋತ್ರಫಲಂ ತತ್ರ ಸ್ನಾನಮಾತ್ರೇಣ ಲಭ್ಯತೇ ॥ ೧೦೨ ॥

*ಶುಭತೋಯೇನ ಮತಿಮಾನ್ಸ್ನಾಪಯೇತ್ಪ್ರಯತಾತ್ಮವಾನ್ ।
ಜಾತಿಸ್ಮರಸ್ಸ ತು ಭವೇತ್ಸಿಧ್ಯತೇ ಚಾಸ್ಯ ಮಾನಸಂ ॥ ೧೦೩ ॥

ತಸ್ಯೈವೋತ್ತರತಸ್ತೀರ್ಥಮಪರಂ ಸಿದ್ಧಸೇವಿತಂ ।
ನಾಮ್ನಾ ಪ್ರಾಂತಕಪಾನೀಯಂ ಗುಹ್ಯಂ ಗುಹ್ಯಕರಕ್ಷಿತಂ ॥ ೧೦೪ ॥

ಸಂವತ್ಸರಂ ಯಸ್ತುಪೂರ್ಣಂ ತತ್ರ ಸ್ನಾಯಾನ್ನರಸ್ಸದಾ ।
ಗುಹ್ಯಕಸ್ಸ ಭವೇದಾಶು ರುದ್ರಸ್ಯಾನುಚರಸ್ಸುಧೀಃ ॥ ೧೦೫ ॥

ದೇವ್ಯಾಶ್ಶಿಖರವಾಸಿನ್ಯಾ ಜ್ಞೇಯಂ ಪೂರ್ವೋತ್ತರೇಣ ವೈ ।
ದಕ್ಷಿಣೇನ ತು ವಾಗ್ಮತ್ಯಾಃ ಪ್ರಸೃತಂ ಕಂದರೋದರಾತ್ ॥ ೧೦೬ ॥

---

೧೦೨. ಬ್ರಹ್ಮರ್ಷಿಸೇವಿತವಾದ ಪಂಚನದ ಪುಣ್ಯತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಮಾಡಿದ ಮಾತ್ರದಲ್ಲಿ ಮನುಷ್ಯನು ಅಗ್ನಿಹೋತ್ರ ಫಲವನ್ನು ಪಡೆಯುವನು.

೧೦೩. ಬುದ್ಧಿವಂತನಾದವನು ಪರಿಶುದ್ಧಾತ್ಮನಾಗಿ ಆ ಪಂಚನದೋದಕದಿಂದ ನನಗೆ ಅಭಿಷೇಕಮಾಡಿದರೆ ಆತನು ತನ್ನ ಪೂರ್ವಜನ್ಮ ಸ್ಮರಣೆಯುಳ್ಳವನಾಗುವನು. ಅಲ್ಲದೆ ಅವನ ಮನೋಭಿಲಷಿತವೂ ಸಿದ್ಧಿಸುವುದು.

೧೦೪-೧೦೫. ಆ ಪಂಚನದತೀರ್ಥಕ್ಕೆ ಉತ್ತರದಲ್ಲಿ ಗುಹ್ಯವೂ, ಗುಹ್ಯಕರಕ್ಷಿತವೂ, ಸಿದ್ಧಸೇವಿತವೂ ಆದ ಪ್ರಾಂತಕಪಾನೀಯವೆಂಬ ಹೆಸರಿನ ಮತ್ತೊಂದು ತೀರ್ಥವಿದೆ. ಆ ತೀರ್ಥದಲ್ಲಿ ಒಂದುವರ್ಷ ಪೂರ್ಣವಾಗಿ ಸ್ನಾನ ಮಾಡುವವನು ಬೇಗನೆ ವಿದ್ವಾಂಸನೂ, ಗುಹ್ಯಕನೂ ಆಗಿ ರುದ್ರಾನುಚರನಾಗುವನು.

೧೦೬-೧೦೭. ಶಿಖರವಾಸಿನಿಯಾದ ಪಾರ್ವತೀದೇವಿಯ ನಿಲಯದ ಈಶಾನ್ಯದಲ್ಲಿ ವಾಗ್ಮತಿಗೆ ದಕ್ಷಿಣದಲ್ಲಿ ಗುಹೆಯ ಒಳಭಾಗದಿಂದ ಪ್ರವಹಿಸುವ

---

* ನಕುಲೋಹೇನ.

ತೀರ್ಥಂ ಬ್ರಹ್ಮೋದಯಂ ನಾಮ ಪುಣ್ಯಂ ಪಾಪಪ್ರಣಾಶನಂ ।
ತತ್ರ ಗತ್ವಾ ಜಲಂ ಸ್ಪೃಷ್ಟ್ವಾ ಸ್ನಾತ್ವಾ ಚಾಭ್ಯುಕ್ಷ್ಯ ಮಾನವಃ ॥
ಮೃತ್ಯುಲೋಕಂ ನ ಪಶ್ಯೇತ್ಸ ಕೃಚ್ಛ್ರೇಷು ಚ ನ ಸೀದತಿ ॥ ೧೦೭ ॥

ಗತ್ವಾ ಸುಂದರಿಕಾತೀರ್ಥಂ ವಿಧಿನಾ ತೀರ್ಥಮಾದಿಮಂ ।
ತತ್ರ ಸ್ನಾತ್ವಾ ಭವೇತ್ಸೋಽಯೋ ರೂಪವಾನುತ್ತಮದ್ಯುತಿಃ ॥ ೧೦೮ ॥

ತ್ರಿಸಂಧ್ಯಂ ತತ್ರ ಗಚ್ಛೇತ್ತು ಪೂರ್ವೇಣ ವಿಧಿವನ್ನರಃ ।
ತತ್ರ ಸಂಧ್ಯಾಮುಪಾಸ್ಯಾಥ ದ್ವಿಜೋಮುಚ್ಯೇತ ಕಿಲ್ಬಿಷಾತ್ ॥ ೧೦೯ ॥

ವಾಗ್ಮತ್ಯಾ ಮಣಿವತ್ಯಾಶ್ಚ ಸಂಭೇದೇ ಪಾಪನಾಶನೇ ।
ಅಹೋರಾತ್ರಂ ವಸೇದ್ಯಸ್ತು ರುದ್ರಜಾಪೋ ದ್ವಿಜಶ್ಶುಚಿಃ ॥ ೧೧೦ ॥

ಸ ಭವೇದ್ವೇದವಿದ್ವಿದ್ವಾನ್ಯಜ್ವಾ ಪಾರ್ಥಿವಪೂಜಿತಃ ।
ತಾರಿತಂ ಚ ಕುಲಂ ತೇನ ಸರ್ವಂ ಭವತಿ ಸಾಧುನಾ ॥ ೧೧೧ ॥

ಬ್ರಹ್ಮೋದಯವೆಂಬ ಪುಣ್ಯತೀರ್ಥವು ಪಾಪಪ್ರಣಾಶಕವಾದುದು. ಅಲ್ಲಿಗೆ ಹೋಗಿ ತೀರ್ಥವನ್ನು ಮುಟ್ಟಿ ಪ್ರೋಕ್ಷಿಸಿಕೊಂಡು ಸ್ನಾನಮಾಡುವ ಮನುಷ್ಯನು ಯಮಲೋಕವನ್ನು ನೋಡಬೇಕಾದುದಿಲ್ಲ. ಕಷ್ಟಗಳಿಂದ ದುಃಖಪಡ ಬೇಕಾದುದೂ ಇಲ್ಲ.

೧೦೮ ಆದಿಯಿಂದ ಅಲ್ಲಿರುವ ಸುಂದರಿಕಾತೀರ್ಥವೆಂಬುದಕ್ಕೆ ಹೋಗಿ, ಆ ತೀರ್ಥದಲ್ಲಿ ವಿಧ್ಯುಕ್ತನಾಗಿ ಸ್ನಾನಮಾಡುವವನು ರೂಪವಂತನೂ, ಉತ್ತಮ ಕಾಂತಿವಂತನೂ ಆಗುವನು.

೧೦೯. ತ್ರಿಸಂಧ್ಯಾಕಾಲದಲ್ಲೂ ಆ ತೀರ್ಥಕ್ಕೆ ಹೋಗಿ, ಪೂರ್ವದಲ್ಲಿ ಹೇಳಿರುವ ನಿಯಮದಂತೆ ಆ ತೀರ್ಥದಲ್ಲಿ ಸಂಧ್ಯಾವಂದನೆಯನ್ನು ಮಾಡುವ ದ್ವಿಜನು ಪಾಪವಿಮುಕ್ತನಾಗುವನು.

೧೧೦-೧೧೧. ವಾಗ್ಮತೀ ಮಣಿವತೀನದಿಗಳ ಪಾಪನಾಶಕವಾದ ಸಂಗಮದಲ್ಲಿ ಹಗಲೂ ರಾತ್ರಿಯೂ ಇದ್ದು ಶುಚಿರ್ಭೂತನಾಗಿ ರುದ್ರಜಪವನ್ನು ಮಾಡುವ ದ್ವಿಜನು ವೇದಜ್ಞನೂ, ವಿದ್ವಾಂಸನೂ, ವಿಧ್ಯುಕ್ತವಾಗಿ ಯಜ್ಞಮಾಡುವವನೂ, ರಾಜಪೂಜಿತನೂ ಆಗುವನು. ಆ ಸಾಧುವು ತನ್ನ ಕುಲವೆಲ್ಲವನ್ನೂ ಉತ್ತಾರಣಗೊಳಿಸುವನು.

ವರ್ಣಾವರೋಽಪಿ ಯಃ ಕಶ್ಚಿತ್ಸ್ನಾತ್ವಾ ದದ್ಯಾತ್ತಿಲೋದಕಂ ।
ತರ್ಪಿತಾಃ ಪಿತರಸ್ತೇನ ಭವೇಯುರ್ನಾತ್ರ ಸಂಶಯಃ ॥ ೧೧೨ ॥

ಯತ್ರ ಯತ್ರ ಚ ವಾಗ್ಮತ್ಯಾಂ ಸ್ನಾತಿ ವೈ ಮಾನವೋತ್ತಮಃ ।
ತಿರ್ಯಗ್ಯೋನಿಂ ನ ಗಚ್ಛೇತ್ತು ಸಮೃದ್ಧೇ ಜಾಯತೇ ಕುಲೇ ॥ ೧೧೩ ॥

ವಾಗ್ಮತೀಮಣಿವತ್ಯೋಶ್ಚ ಸಂಭೇದಶ್ಚರ್ಷಿಸೇವಿತಃ ।
ಧೀಮಾನ್ಗಚ್ಛೇತ್ತು ವಿಧಿನಾ ಕಾಮಕ್ರೋಧವಿವರ್ಜಿತಃ ॥ ೧೧೪ ॥

ಗಂಗಾದ್ವಾರೇ ತು ಯತ್ಪ್ರೋಕ್ತಂ ಸ್ನಾನಪುಣ್ಯಫಲಂ ಮಹತ್ ।
ಸ್ನಾನಸ್ಯ ತದ್ದಶಗುಣಂ ಭವೇದತ್ರ ನ ಸಂಶಯಃ ॥ ೧೧೫ ॥

ಅತ್ರ ವಿದ್ಯಾಧರಾಸ್ಸಿದ್ಧಾ ಗಂಧರ್ವಾ ಮುನಯಸ್ಸುರಾಃ ।
ಸ್ನಾನಮೇತದುಪಾಸಂತೇ ಯಕ್ಷಾಶ್ಚ ಭುಜಗೈಸ್ಸಹ ॥ ೧೧೬ ॥

---

೧೧೨. ಅನುತ್ತಮವರ್ಣದವನಾದರೂ ಆ ತೀರ್ಥದಲ್ಲಿ ಸ್ನಾನಮಾಡಿ, ಪಿತೃಗಳಿಗೆ ತಿಲೋದಕವನ್ನು ಕೊಟ್ಟನಾದರೆ ಆ ಪಿತೃಗಳು ತೃಪ್ತರಾಗುವುದರಲ್ಲಿ ಸಂಶಯವಿಲ್ಲ.

೧೧೩. ವಾಗ್ಮತೀನದಿಯಲ್ಲಿ ಎಲ್ಲೇ ಆದರೂ ಸ್ನಾನಮಾಡುವ ಉತ್ತಮ ಮನುಷ್ಯನು ತಿರ್ಯಗ್ಜನ್ಮಕ್ಕೆ ಹೋಗದೆ ಸಮೃದ್ಧಿಯುಳ್ಳ ಉತ್ತಮಕುಲದಲ್ಲಿ ಜನಿಸುವನು.

೧೧೪-೧೧೫. ವಾಗ್ಮತೀಮಣಿವತೀನದಿಗಳ ಸಂಗಮವು ಋಷಿಸೇವಿತವಾದುದು. ವಿದ್ವಾಂಸನಾದವನು ಕಾಮಕ್ರೋಧಗಳನ್ನು ಬಿಟ್ಟು ಆ ಸಂಗಮ ತೀರ್ಥಯಾತ್ರೆಯನ್ನು ಮಾಡಿದರೆ, ಗಂಗಾದ್ವಾರದಲ್ಲಿ ಸ್ನಾನಮಾಡಿದರೆ ಲಭಿಸುವುದರ ಹತ್ತರಷ್ಟು ಮಹಾಪುಣ್ಯವು ಲಭಿಸುವುದರಲ್ಲಿ ಸಂಶಯವಿಲ್ಲ.

೧೧೬. ಆ ಸಂಗಮದಲ್ಲಿ ವಿದ್ಯಾಧರರೂ, ಸಿದ್ಧರೂ, ಗಂಧರ್ವರೂ, ಮುನಿಗಳೂ, ಸುರರೂ, ಯಕ್ಷರೂ, ನಾಗರೂ ಸ್ನಾನವನ್ನು ಮಾಡುವರು.

ಸ್ವಲ್ಪಮಪ್ಯತ್ರ ಯತ್ಕಿಂಚಿದ್ದ್ವಿಜೇಭ್ಯೋ ದೀಯತೇ ಧನಂ ।
ತದಕ್ಷಯಂ ಭವೇದ್ದಾತುರ್ದಾನಪುಣ್ಯಫಲಂ ಮಹತ್ ॥ ೧೧೭ ॥

ತಸ್ಮಾತ್ಸರ್ವಪ್ರಯತ್ನೇನ ಕರಣೀಯಂ ಚ ದೇವತಾಃ ।
ವರಿಷ್ಠಂ ಕ್ಷೇತ್ರಮೇತಸ್ಮಾನ್ನಾನ್ಯದೇವ ಹಿ ವಿದ್ಯತೇ ॥ ೧೧೮ ॥

ತಸ್ಮಿನ್ ಶ್ಲೇಷ್ಮಾತಕವನೇ ಪುಣ್ಯೇ ತ್ರಿದಶಸೇವಿತೇ ।
ಯತ್ರ ಯತ್ರ ಮಯಾ ದೇವಾಶ್ಚರಿತಾ ಮೃಗರೂಪಿಣಾ ॥ ೧೧೯ ॥

ಆಸಿತಂ ಸ್ವಪಿತಂ ಯಾತಂ ವಿಹೃತಂ ವಾ ಸಮಂತತಃ ।
ತತ್ರ ತತ್ರಾಭವತ್ಸರ್ವಂ ಪುಣ್ಯಕ್ಷೇತ್ರಂ ಚ ಸರ್ವಶಃ ॥ ೧೨೦ ॥

ಶೃಂಗಮೇತತ್ತ್ರಿಧಾಭೂತಂ ಸಮ್ಯಕ್ಸಂಶ್ರೂಯತಾಂ ಸುರಾಃ ।
ಗೋಕರ್ಣೇಶ್ವರ ಇತ್ಯೇತತ್ಪೃಥಿವ್ಯಾಂ ಖ್ಯಾತಿಮೇಷ್ಯತಿ ॥ ೧೨೧ ॥

---

೧೧೭. ಅಲ್ಲಿ ಬ್ರಾಹ್ಮಣರಿಗೆ ಸ್ವಲ್ಪಧನವನ್ನು ದಾನಮಾಡಿದರೂ ಅದು ದಾನಿಗೆ ಅಕ್ಷಯವಾದ ಮಹಾಪುಣ್ಯಫಲವನ್ನುಂಟುಮಾಡುವುದು.

೧೧೮. ದೇವತೆಗಳೇ, ಆದುದರಿಂದ ಸರ್ವಪ್ರಯತ್ನದಿಂದಲೂ ಈ ತೀರ್ಥಕ್ಷೇತ್ರಯಾತ್ರೆಯನ್ನು ಮಾಡಬೇಕು. ಈ ಕ್ಷೇತ್ರಕ್ಕಿಂತಲೂ ಶ್ರೇಷ್ಠವಾದುದು ಬೇರಾವುದೂ ಇಲ್ಲ.

೧೧೯-೧೨೦. ದೇವತೆಗಳೇ, ನಿಮ್ಮಿಂದ ಸೇವಿತವಾದ ಆ ಶ್ಲೇಷ್ಮಾತಕ ವನದಲ್ಲಿ ಮೃಗರೂಪದಿಂದ ಸಂಚರಿಸುತ್ತಿದ್ದ ನಾನು ಎಲ್ಲೆಲ್ಲಿ ನಿಂತಿದ್ದೆನೋ, ಮಲಗಿದ್ದೆನೋ, ಓಡಾಡಿದೆನೋ, ಸುತ್ತಲೂ ವಿಹರಿಸಿದೆನೋ ಆ ಸ್ಥಳವೆಲ್ಲವೂ ಪುಣ್ಯಕ್ಷೇತ್ರವಾಗಿದೆ.

೧೨೧-೧೨೨. ದೇವತೆಗಳೇ, ನಾನು ಹೇಳುವುದನ್ನು ಚೆನ್ನಾಗಿ ಕೇಳಿರಿ. ಮೂರುಭಾಗವಾಗಿ ಆದ ಈ ಶೃಂಗವಿರುವೆಡೆಯು ಗೋಕರ್ಣೇಶ್ವರವೆಂದು

ಏವಂ ಸಂದಿಶ್ಯ ವಿಬುಧಾನ್ದೇವದೇವಸ್ಸನಾತನಃ |
ಅದೃಶ್ಯ ಏವ ವಿಬುಧೈಃ ಪ್ರಯಯಾವುತ್ತರಾಂ ದಿಶಂ || ೧೨೨ ||

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಭಗವದ್ಗೋಕರ್ಣೇಶ್ವರ ಮಾಹಾತ್ಮ್ಯೇ ಜಲೇಶ್ವರಮಾಹಾತ್ಮ್ಯವರ್ಣನಂ ನಾಮ ಪಂಚ ದಶಾಧಿಕದ್ವಿಶತತಮೋಽಧ್ಯಾಯಃ

ಭೂಮಿಯಲ್ಲಿ ಪ್ರಸಿದ್ಧವಾಗುವುದು". ಎಂದು ದೇವತೆಗಳಿಗೆ ಹೇಳಿ, ಆ ಸನಾತನ ದೇವನು ಅವರಿಗೆ ಅದೃಶ್ಯನಾಗಿ ಉತ್ತರದಿಕ್ಕಿಗೆ ಹೊರಟು ಹೋದನು..

ಅಧ್ಯಾಯದ ಸಾರಾಂಶ—

ಬ್ರಹ್ಮನು ಸನತ್ಕುಮಾರಮುನಿಗೆ—ನಂದೀಶ್ವರನ ಮಹಿಮೆಯಿಂದ ಭೀತರಾದ ದೇವತೆಗಳು ಶಿವನ ಸಂದರ್ಶನವನ್ನು ಮಾಡಲಪೇಕ್ಷಿಸಿ, ಆತನನ್ನು ಬ್ರಹ್ಮವಿಷ್ಣುಗಳೊಡನೆ ಮೂರುಲೋಕದಲ್ಲೂ ಅರಸಿ, ಕಾಣದೆ ಕಡೆಗೆ ಹಿಮವತ್ಪರ್ವತದ ಶ್ಲೇಷ್ಮಾತಕವನದಲ್ಲಿ ಮೃಗರೂಪದಿಂದಿದ್ದ ಆ ಶಿವನನ್ನು ಸಂದರ್ಶಿಸಿದುದನ್ನೂ, ಅವರಿಗೆ ಈಶ್ವರನು ಹೇಳಿದ ಶೈಲೇಶ್ವರಕ್ಷೇತ್ರದ ಮಹಿಮೆಯನ್ನೂ ವಿವರವಾಗಿ ಹೇಳುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರಹದಿನೈದನೆಯ ಅಧ್ಯಾಯ.

|| ಶ್ರೀ ||

ಷೋಡಶಾಧಿಕದ್ವಿಶತತಮೋಽಧ್ಯಾಯಃ

ಅಥ ಗೋಕರ್ಣಶೃಂಗೇಶ್ವರಾದಿಮಾಹಾತ್ಮ್ಯಂ

|| ಬ್ರಹ್ಮೋವಾಚ ||

ತಸ್ಮಾತ್ ಸ್ಥಾನಾದಪಕ್ರಾಂತೇ ತ್ರ್ಯಂಬಕೇ ಮೃಗರೂಪಿಣಿ ।
ಅನ್ಯೋನ್ಯಂ ಮಂತ್ರಯಿತ್ವಾ ತು ಮಯಾ ಸಹ ಸುರೋತ್ತಮಾಃ || ೧ ||

ತ್ರಿಧಾ ವಿಭಕ್ತಂ ತಚ್ಛೃಂಗಂ ಪೃಥಕ್ಪೃಥಗವಸ್ಥಿತಂ ।
ಸಮ್ಯಕ್ ಸ್ಥಾಪಯಿತುಂ ದೇವಾ ವಿಧಿದೃಷ್ಟೇನ ಕರ್ಮಣಾ || ೨ ||

ಸ್ಥಾಪಿತಂ ದಿವಿ ನೀತ್ವಾ ವೈ ಶೃಂಗಾಗ್ರಂ ವಜ್ರಪಾಣಿನಾ ।
ಮಯಾ ತತ್ರೈವ ತನ್ಮಧ್ಯಂ ಸ್ಥಾಪಿತಂ ವಿಧಿವತ್ಪ್ರಭೋಃ || ೩ ||

ಇನ್ನೂರಹದಿನಾರನೆಯ ಅಧ್ಯಾಯ

ಗೋಕರ್ಣಶೃಂಗೇಶ್ವರಾದಿಮಹಿಮೆ.

೧-೨. ಬ್ರಹ್ಮ—ಆ ಶ್ಲೇಷ್ಮಾತಕವನದಿಂದ ಮೃಗರೂಪಧರನಾದ ಈಶ್ವರನು ಹೊರಟು ಹೋಗಲಾಗಿ ದೇವೋತ್ತಮರು ನನ್ನೊಡನೆ ಆಲೋಚಿಸಿ, ಮೂರುಭಾಗವಾಗಿ ಬೇರೆ ಬೇರೆಯಾದ ಆ ಮೃಗಶೃಂಗವನ್ನು ವಿಧ್ಯುಕ್ತವಾದ ಕ್ರಮದಿಂದ ಪ್ರತಿಷ್ಠಿಸಬೇಕೆಂದು ನಿರ್ಣಯಿಸಿದರು.

೩. ಇಂದ್ರನು ತನ್ನ ಕಯ್ಯಲ್ಲಿದ್ದ ಶೃಂಗಾಗ್ರವನ್ನು ಸ್ವರ್ಗಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಸ್ಥಾಪಿಸಿದನು. ನಾನು ನನ್ನ ಕಯ್ಯಲ್ಲಿದ್ದ ಆ ಪ್ರಭುವಿನ ಶೃಂಗದ ಮಧ್ಯಭಾಗವನ್ನು ಆ ಕ್ಷೇತ್ರದಲ್ಲಿಯೇ ವಿಧ್ಯುಕ್ತವಾಗಿ ಸ್ಥಾಪಿಸಿದೆನು.

ದೇವೈರ್ದೇವರ್ಷಿಭಿಶ್ಚೈವ ಸಿದ್ಧೈರ್ಬ್ರಹ್ಮರ್ಷಿಭಿಸ್ತಥಾ ।
ಗೋಕರ್ಣ ಇತಿ ವಿಖ್ಯಾತಿಃ ಕೃತಾ ವೈಶೇಷಿಕೀ ವರಾ ॥ ೪ ॥

ವಿಷ್ಣುನಾ ದೇವತೀರ್ಥೇನ ತನ್ಮೂಲಂ ಸ್ಥಾಪಿತಂ ತತಃ ।
ತಸ್ಯ ಶೃಗೇಶ್ವರ ಇತಿ ನಾಮ ತತ್ರಾಭವನ್ಮಹತ್ ॥ ೫ ॥

ತತ್ರ ತತ್ರೈವ ಭಗವಾಂಸ್ತಸ್ಮಿನ್ಶೃಗೇ ತ್ರಿಧಾ ಸ್ಥಿತೇ ।
ಸಾನ್ನಿಧ್ಯಂ ಕಲ್ಪಯಾಮಾಸ ಭಾಗೇನೈಕೇನ ಚೋನ್ಮನಾಃ ॥ ೬ ॥

ಶತಂ ತೇನ ತು ಭಾಗಾನಾಮಾತ್ಮನೋ ನಿಹಿತಂ ಮೃಗೇ ।
ತಸ್ಮಾದ್ದ್ವಿಕಂ ತು ಭಾಗಾನಾಂ ಶೃಂಗಾಣಾಂ ತ್ರಿತಯೇನ್ಯಧಾತ್ ॥ ೭ ॥

ಮಾರ್ಗೇಣ ತಚ್ಛರೀರೇಣ ನಿರ್ಯಯೌ ಭಗವಾನ್ವಿಭುಃ ।
ಶೈಶಿರಸ್ಯ ಗಿರೇಃ ಪಾದಂ ಪ್ರಪೇದೇ ಸ್ವಯಮಾತ್ಮನಃ ॥ ೮ ॥

---

೪. ನಾನು ಸ್ಥಾಪಿಸಿದ ವಿಶೇಷಗುಣವುಳ್ಳ ಆ ಉತ್ತಮಕ್ಷೇತ್ರವು ದೇವತೆಗಳಿಂದಲೂ, ದೇವರ್ಷಿಗಳಿಂದಲೂ, ಸಿದ್ಧರಿಂದಲೂ, ಬ್ರಹ್ಮರ್ಷಿಗಳಿಂದಲೂ, ಗೋಕರ್ಣವೆಂಬ ಹೆಸರಿನಿಂದ ಪ್ರಸಿದ್ಧವಾಯಿತು.

೫. ಆಮೇಲೆ ವಿಷ್ಣುವು ಶಿವನ ಶೃಂಗದ ಮೂಲಭಾಗವನ್ನು ದೇವತೀರ್ಥದಿಂದ ಸ್ಥಾಪಿಸಿದನು. ಆ ಕ್ಷೇತ್ರಕ್ಕೆ ಶೃಂಗೇಶ್ವರವೆಂಬ ಉತ್ತಮ ನಾಮವಾಯಿತು.

೬. ತನ್ನ ಆ ಶೃಂಗವು ಮೂರುಭಾಗವಾಗಿ ಬೇರೆಬೇರೆ ಎಡೆಯಲ್ಲಿ ಸ್ಥಾಪಿತವಾಗಲು ಭಗವಂತನಾದ ಈಶ್ವರನು ಉತ್ಸುಕನಾಗಿ ಆ ಸ್ಥಳಗಳಲ್ಲಿ ತನ್ನ ಒಂದು ಅಂಶದಿಂದ ಸಾನ್ನಿಧ್ಯವನ್ನುಂಟುಮಾಡಿದನು.

೭. ಈಶ್ವರನು ಮೃಗರೂಪದಲ್ಲಿ ತನ್ನ ಶತಾಂಶವನ್ನೂ ಎಂದರೆ ಪೂರ್ಣಭಾಗವನ್ನೂ ಉಪಯೋಗಿಸಿದನು. ಆ ನೂರರಲ್ಲಿ ಎರಡಂಶಗಳನ್ನು ತನ್ನ ಶೃಂಗದ ಮೂರು ಭಾಗಗಳಲ್ಲಿ ನೆಲೆಗೊಳಿಸಿದನು.

೮. ವಿಭುವಾದ ಆ ಭಗವಂತನು ಕೊಂಬನ್ನು ಮಾತ್ರ ಬಿಟ್ಟು ಉಳಿದ ಮೃಗದೇಹದಿಂದ ಹೊರಟುಹೋಗಿ, ತನ್ನ ಹಿಮಗಿರಿಯ ತಪ್ಪಲನ್ನು ತಾನು ಸೇರಿದನು.

ಶತಸಂಖ್ಯಾ ಸ್ಮೃತಾ ವೃದ್ಧಿಸ್ತಸ್ಮಿನ್ಶೈಲೇಶ್ವರೇ ವಿಭೋಃ ।
ತ್ರಿಧಾ ವಿಭಕ್ತೇ ಶೃಂಗೇಸ್ಮಿನ್ನೇಕಾಗ್ರಗತಿನಿ ಪ್ರಭೋ ॥ ೯ ॥

ತತಸ್ಸುರಾಸುರಗುರುಂ ದೇವಂ ಭೂತಮಹೇಶ್ವರಂ ।
ತಪಸೋಗ್ರೇಣ ಸಂಸೇವ್ಯ ವವ್ರಿರೇ ವಿವಿಧಾನ್ವರಾನ್ ॥ ೧೦ ॥

ದೇವದಾನವಗಂಧರ್ವಾಸ್ಸಿದ್ಧಯಕ್ಷಮಹೋರಗಾಃ ।
ಶ್ಲೇಷ್ಮಾತಕವನಂ ಕೃತ್ಸ್ನಂ ಸರ್ವತಃ ಪರಿಮಂಡಲಂ ॥
ತೀರ್ಥಯಾತ್ರಾಂ ಪುರಸ್ಕೃತ್ಯ ಪ್ರಾದಕ್ಷಿಣ್ಯಂ ಚ ಚಕ್ರಿರೇ ॥ ೧೧ ॥

ಫಲಾನ್ನಿರ್ದಿಶ್ಯ ತೀರ್ಥಾನಾಂ ತಥಾ ಕ್ಷೇತ್ರಫಲಂ ಮಹತ್ ।
ಯಥಾಸ್ಥಾನಾನಿ ತೇ ತಸ್ಮಾನ್ನಿವೃತ್ತಾಶ್ಚ ಸುರಾದಯಃ ॥ ೧೨ ॥

ಏವಂ ತಸ್ಮಾನ್ನಿವೃತ್ತೇಷು ದೈವತೇಷು ತದಾ ತತಃ ।
ಪೌಲಸ್ತ್ಯೋ ರಾವಣೋ ನಾಮ ಭ್ರಾತೃಭಿಸ್ಸಹ ರಾಕ್ಷಸೈಃ ॥ ೧೩ ॥

---

೯. ತನ್ನ ಶೃಂಗವು ಮೂರು ತುಂಡಾಗಲು ಏಕಾಗ್ರಗತಿಯಿಂದ ಆ ಪ್ರಭುವು ಹೊರಟುಹೋದ ಆ ಶೈಲೇಶ್ವರದಲ್ಲಿ ವಿಭುವಾದ ಆ ಈಶ್ವರನ ಫಲಸಮೃದ್ಧಿಯು ಪೂರ್ಣವಾಗಿ (ನೂರುಸಂಖ್ಯೆಯುಳ್ಳದಾಗಿ) ಇರುವುದು.

೧೦-೧೧ ಬಳಿಕ ಸುರಾಸುರಗುರುವೂ, ಭೂತನಾಥನೂ ಆದ ಮಹೇಶ್ವರನನ್ನು ದೇವದಾನವಗಂಧರ್ವರೂ, ಸಿದ್ಧಯಕ್ಷಮಹಾನಾಗರೂ ಉಗ್ರವಾದ ತಪಸ್ಸಿನಿಂದ ಸೇವಿಸಿ, ಬಗೆಬಗೆಯ ವರಗಳನ್ನು ಪಡೆದರು. ಶ್ಲೇಷ್ಮಾತಕ ವನವನ್ನು ಪೂರ್ತಿಯಾಗಿ ತೀರ್ಥಯಾತ್ರೆಯ ಉದ್ದೇಶದಿಂದ ಸಂಚರಿಸಿ, ಪ್ರದಕ್ಷಿಣೆಯನ್ನು ಮಾಡಿದರು.

೧೨. ದೇವಾದಿಗಳು ಹಾಗೆ ತೀರ್ಥಫಲಗಳನ್ನೂ, ಕ್ಷೇತ್ರಮಹಾ ಫಲಗಳನ್ನೂ ಲೋಕಕ್ಕೆ ತೋರಿಸಿ, ಅಲ್ಲಿಂದ ತಮ್ಮ ತಮ್ಮೆಡೆಗೆ ಹಿಂದಿರುಗಿದರು.

೧೩-೧೪. ಹಾಗೆ ದೇವಾದಿಗಳು ಅಲ್ಲಿಂದ ಹೊರಟುಹೋಗಲಾಗಿ, ಬಳಿಕ ಪುಲಸ್ತ್ಯಬ್ರಹ್ಮಪುತ್ರನಾದ ರಾವಣನು ತನ್ನ ಸಹೋದರರಾದ ರಾಕ್ಷಸರೊಡನೆ

ಆಗಮ್ಯೋಗ್ರೇಣ ತಪಸಾ ದೇವಮಾರಾಧಯದ್ವಿಭುಂ ।
ಶುಶ್ರೂಷಯಾ ಚ ಪರಯಾ ಗೋಕರ್ಣೇಶ್ವರಮವ್ಯಯಂ ॥ ೧೪ ॥

ಯದಾ ತು ತಸ್ಯ ತುಷ್ಟೋ ವೈ ವರದಶ್ಶಂಕರಸ್ಸ್ವಯಂ ।
ತದಾ ತ್ರೈಲೋಕ್ಯವಿಜಯಂ ವರಂ ವವ್ರೇ ಸ ರಾಕ್ಷಸಃ ॥ ೧೫ ॥

ಪ್ರಸಾದಾತ್ತಸ್ಯ ತತ್ಸರ್ವಂ ವಾಂಛಿತಂ ಮನಸಾ ಹಿ ಯತ್ ।
ಅವಾಪ್ಯ ಚ ದಶಗ್ರೀವಸ್ತದಿಷ್ಟಂ ಪರಮೇಶ್ವರಾತ್ ॥ ೧೬ ॥

ತ್ರೈಲೋಕ್ಯವಿಜಯಾಯಾಶು ತತ್ಕ್ಷಣಾದೇವ ನಿರ್ಯಯೌ ॥ ೧೭ ॥

ತ್ರೈಲೋಕ್ಯಂ ಸ ವಿನಿರ್ಜಿತ್ಯ ಶಕ್ರಂ ಚ ತ್ರಿದಶಾಧಿಪಂ ।
ತದುತ್ಪಾಟ್ಯಾನಯಾಮಾಸ ಪುತ್ರೇಣೇಂದ್ರಜಿತಾ ಸಹ ॥ ೧೮ ॥

ಶೃಂಗಾಗ್ರಂ ಯತ್ಪುರಾ ನೀತ್ವಾ ಸ್ಥಾಪಿತಂ ವಜ್ರಪಾಣಿನಾ ।
ತದುತ್ಪಾಟ್ಯಾನಯಾಮಾಸ ಪುತ್ರೇಣೇಂದ್ರಜಿತಾ ಸಹ ॥ ೧೯ ॥

ಅಲ್ಲಿಗೆ ಬಂದು ಉಗ್ರವಾದ ತಪಸ್ಸಿನಿಂದಲೂ, ಅತಿಶಯವಾದ ಸೇವೆಯಿಂದಲೂ ಅವ್ಯಯನೂ, ವಿಭುವೂ, ದೇವನೂ ಆದ ಗೋಕರ್ಣೇಶ್ವರನನ್ನು ಆರಾಧಿಸಿದನು.

೧೫. ವರದನಾದ ಶಂಕರನು ತೃಪ್ತನಾಗಿ ಅವನಿಗೊಲಿಯಲು, ಆ ರಾಕ್ಷಸನು ತ್ರಿಲೋಕವಿಜಯವನ್ನೇ ತನಗೆ ವರವಾಗಿ ಬೇಡಿದನು.

೧೬-೧೭. ಆ ರಾವಣನು ಆ ಪರಮೇಶ್ವರನ ಅನುಗ್ರಹದಿಂದ ತನ್ನ ಮನೋಭಿಲಷಿತವನ್ನೆಲ್ಲಾ ಪಡೆದು ತ್ರಿಲೋಕವಿಜಯಕ್ಕಾಗಿ ಬೇಗನೆ ಆ ಕ್ಷಣದಲ್ಲೇ ಹೊರಟನು.

೧೮-೧೯. ಆತನು ಇಂದ್ರಜಿತುವಿನೊಡನೆ ಹೋಗಿ, ಮೂರುಲೋಕಗಳನ್ನೂ, ದೇವಾಧಿಪನಾದ ಇಂದ್ರನನ್ನೂ ಜಯಿಸಿ, ವಜ್ರಪಾಣಿಯಾದ ಆತನು ಹಿಂದೆ ಶ್ಲೇಷ್ಮಾತಕವನದಿಂದ ತೆಗೆದುಕೊಂಡು ಹೋಗಿ ಸ್ವರ್ಗದಲ್ಲಿ ಸ್ಥಾಪಿಸಿದ್ದ ಮೃಗರೂಪಧರನಾದ ಶಿವನ ಶೃಂಗದ ಅಗ್ರಭಾಗವನ್ನು ಕಿತ್ತುತಂದನು.

ತದ್ಯಾವದ್ರಾವಣಃ ಸ್ಥಾಪ್ಯ ಮುಹೂರ್ತಮುದಧೇಸ್ತಟೇ ।
ಸಂಧ್ಯಾಮುಪಾಸತೇ ತತ್ರ ಲಗ್ನಸ್ತಾವದಸೌ ಭುವಿ ॥ ೨೦ ॥

ನ ಶಶಾಕ ಯದಾ ರಕ್ಷಸ್ತದುತ್ಪಾಟಯಿತುಂ ಬಲಾತ್ ।
ವಜ್ರಕಲ್ಪಂ ಸಮುತ್ಸೃಜ್ಯ ತದಾ ಲಂಕಾಂ ವಿನಿರ್ಯಯೌ ॥ ೨೧ ॥

ಸ ತು ದಕ್ಷಿಣಗೋಕರ್ಣೋ ವಿಜ್ಞೇಯಸ್ತೇ ಮಹಾಮತೇ ।
ಸ್ವಯಂ ಪ್ರತಿಷ್ಠಿತಸ್ತತ್ರ ಸ್ವಯಂಭೂತಪತಿಶ್ಶಿವಃ ॥ ೨೨ ॥

ಏತತ್ತೇ ಕಥಿತಂ ಸರ್ವಂ ಮಯಾ ವಿಸ್ತರತೋ ಮುನೇ ।
ಯಥಾವದುತ್ತರಸ್ಥಸ್ಯ ಗೋಕರ್ಣಸ್ಯ ಮಹಾತ್ಮನಃ ॥ ೨೩ ॥

ದಕ್ಷಿಣಸ್ಯ ಚ ವಿಪ್ರರ್ಷೇ ತಥಾ ಶೃಂಗೇಶ್ವರಸ್ಯ ಚ ।
ಶೈಲೇಶ್ವರಸ್ಯ ಚ ವಿಭೋಸ್ಸ್ಥಿತ್ಯುತ್ಪತ್ತಿರ್ಯಥಾಕ್ರಮಂ ॥ ೨೪ ॥

---

೨೦. ಹಾಗೆ ಇಂದ್ರಜಿತುವಿನೊಡನೆ ಹೋಗಿ, ಇಂದ್ರಲೋಕದಿಂದ ಕಿತ್ತುತಂದ ಶೃಂಗಾಗ್ರಭಾಗವನ್ನು ಪಶ್ಚಿಮಸಮುದ್ರತೀರದಲ್ಲಿ ಸ್ವಲ್ಪಕಾಲವಿಟ್ಟು, ಸಂಧ್ಯಾವಂದನೆಯನ್ನು ಆಚರಿಸುವಷ್ಟರಲ್ಲಿಯೇ ಆ ಶೃಂಗವು ಭೂಮಿಯಲ್ಲಿ ನಾಟಿಕೊಂಡಿತು.

೨೧. ಸಂಧ್ಯಾವಂದನೆಯನ್ನು ಮಾಡಿಬಂದ ರಾವಣನು, ದೃಢವಾಗಿ ನಾಟಿಕೊಂಡಿದ್ದ ವಜ್ರಸಮಾನವಾದ ಆ ಶೃಂಗವನ್ನು ಬಲದಿಂದಲೂ ಕೀಳಲಾರದೆ ಅಲ್ಲಿಯೇ ಬಿಟ್ಟು ಲಂಕೆಗೆ ಹೊರಟು ಹೋದನು.

೨೨. ಮಹಾಮತಿಯೇ, ಹಾಗೆ ಶೃಂಗವು ತಾನಾಗಿ ನೆಲಸಿದ ಆ ಕ್ಷೇತ್ರವೇ ದಕ್ಷಿಣಗೋಕರ್ಣವೆನಿಸಿಕೊಂಡಿದೆ. ಭೂತಪತಿಯಾದ ಶಿವನು ಅಲ್ಲಿ ತಾನಾಗಿ ಪ್ರತಿಷ್ಠಿತನಾದನು.

೨೩-೨೪. ಬ್ರಹ್ಮರ್ಷಿಯೇ, ಮಹಾತ್ಮನಾದ ಉತ್ತರಗೋಕರ್ಣೇಶ್ವರನು ದಕ್ಷಿಣಗೋಕರ್ಣೇಶ್ವರನ ಮತ್ತು ಶೃಂಗೇಶ್ವರ ಶೈಲೇಶ್ವರರ ಸೃಷ್ಟಿಸ್ಥಿತಿಗಳನ್ನೂ,

ವೃಷ್ಟಿಃ ಕ್ಷೇತ್ರಸ್ಯ ಮಹತೀ ತೀರ್ಥಾನಾಂ ಚ ಸಮುದ್ಭವಃ ।
ಪ್ರೋಕ್ತಂ ಸರ್ವಂ ಮಯಾ ವತ್ಸ ಕಿಮನ್ಯಚ್ಛ್ರೋತುಮಿಚ್ಛಸಿ ॥ ೨೫ ॥

ಇತಿ ಶ್ರೀವರಾಹಪುರಾಣೇ ಗೋಕರ್ಣಶೃಂಗೇಶ್ವರಾದೀನಾಂ ಮಹಾತ್ಮ್ಯಂ ನಾಮ ಷೋಡಶಾಧಿಕದ್ವಿಶತತಮೋಽಧ್ಯಾಯಃ

ಕ್ಷೇತ್ರದ ಮಹಾಫಲಸಮೃದ್ಧಿಯನ್ನೂ, ತೀರ್ಥೋತ್ಪತ್ತಿಮಹಿಮೆಗಳನ್ನೂ ವಿಸ್ತಾರವಾಗಿಯೂ, ಅನುಕ್ರಮವಾಗಿಯೂ ನಿನಗೆ ಹೇಳಿದೆನು. ವತ್ಸಾ, ಮತ್ತೇನನ್ನು ಕೇಳಲು ಬಯಸುವೆಯೋ ಹೇಳು.

ಅಧ್ಯಾಯದ ಸಾರಾಂಶ—

ಬ್ರಹ್ಮನು ಸನತ್ಕುಮಾರಮುನಿಗೆ ಶ್ಲೇಷ್ಮಾತಕವನದಲ್ಲಿ ಮೃಗರೂಪದಿಂದ ವಿಹರಿಸುತ್ತಿದ್ದ ಈಶ್ವರನ ಶೃಂಗದ ಮೂರುಭಾಗಗಳಲ್ಲಿ ಬ್ರಹ್ಮನ (ತನ್ನ) ಭಾಗವು ಸ್ಥಾಪಿತವಾದುದೇ ಉತ್ತರಗೋಕರ್ಣಕ್ಷೇತ್ರವೆಂದೂ, ವಿಷ್ಣುವಿನ ಭಾಗವು ಸ್ಥಾಪಿತವಾದುದೇ ಶೃಂಗೇಶ್ವರಕ್ಷೇತ್ರವೆಂದೂ, ಇಂದ್ರನ ಭಾಗವು ರಾವಣನ ಮೂಲಕವಾಗಿ ಬಂದು ಸ್ವಯಂಸ್ಥಾಪಿತವಾದುದೇ ದಕ್ಷಿಣಗೋಕರ್ಣಕ್ಷೇತ್ರವೆಂದೂ ತಿಳಿಸುವನು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರಹದಿನಾರನೆಯ ಅಧ್ಯಾಯ.

॥ ಶ್ರೀಃ ॥

ಸಪ್ತದಶಾಧಿಕದ್ವಿಶತತಮೋಽಧ್ಯಾಯಃ

ಅಥ ಧರಣೀವರಾಹಸಂವಾದಫಲಶ್ರುತಿವರ್ಣನಂ

॥ ಸನತ್ಕುಮಾರ ಉವಾಚ ॥

ಉಕ್ತಂ ಭಗವತಾ ಸರ್ವಂ ಯಥಾವತ್ಪರಮೇಷ್ಠಿನಾ ।
ಪೃಷ್ಟೇನ ಸಂಶಯಂ ಸಮ್ಯಕ್ಪರಂ ಕೃತ್ವಾರ್ಥನಿಶ್ಚಯಂ ॥ ೧ ॥

ಭಗವದ್ವಿಶ್ವರೂಪಸ್ಯ ಸ್ಥಾಣೋರಪ್ರತಿಮೌಜಸಃ ।
ಕ್ರೀಡತೋ ಲೋಕನಾಥಸ್ಯ ಕಾನನೇ ಮೃಗರೂಪಿಣಃ ॥ ೨ ॥

ಯಥಾ ಶರೀರಂ ಶೃಂಗಂ ಚ ಪುಣ್ಯಕ್ಷೇತ್ರೇ ಪ್ರತಿಷ್ಠಿತಂ ।
ಹಿತಾಯ ಜಗತಸ್ತತ್ರ ತೀರ್ಥಾನಿ ಚ ಯಥಾಭವನ್ ॥ ೩ ॥

ಇನ್ನೂರಹದಿನೇಳನೆಯ ಅಧ್ಯಾಯ

ಧರಣೀವರಾಹಸಂವಾದಫಲಶ್ರುತಿವರ್ಣನೆ.

೧. ಸನತ್ಕುಮಾರ—ಸಂದೇಹವಾದುದನ್ನು ನಾನು ಕೇಳಲಾಗಿ ಪರಮೇಷ್ಠಿಯೂ, ಭಗವಂತನೂ, ಆದ ನೀನು ಎಲ್ಲಾ ವಿಚಾರವನ್ನೂ ಚೆನ್ನಾಗಿ ನಿರ್ಣಯಿಸಿ ನನಗೆ ಹೇಳಿದೆ.

೨-೪. ಜಗತ್ಪತೀ, ಪೂಜ್ಯನೇ, ಅಸದೃಶವಾದ ತೇಜೋಬಲಗಳುಳ್ಳವನೂ, ವಿಶ್ವರೂಪನೂ, ಲೋಕನಾಥನೂ ಆದ ಆ ಭಗವಂತನು ಅರಣ್ಯದಲ್ಲಿ ಮೃಗ (ಜಿಂಕೆ)ರೂಪದಿಂದ ಹೇಗೆ ವಿಹರಿಸುತ್ತಿದ್ದನೋ, ಅವನ ದೇಹವೂ, ಶೃಂಗವೂ

ತನ್ಮೇ ಬ್ರೂಹಿ ಮಹಾಭಾಗ ಯಥಾತತ್ವಂ ಜಗತ್ಪತೇ ॥ ೪ ॥

॥ ಬ್ರಹ್ಮೋವಾಚ ॥

ಪುಲಸ್ತ್ಯೋ ವಕ್ಷ್ಯತೇ ಶೇಷಂ ಯದತೋಽನ್ಯನ್ಮಹಾಮುನೇ ।
ಸರ್ವೇಷಾಮೇವ ತೀರ್ಥಾನಾಮೇಷಾಂ ಫಲವಿನಿಶ್ಚಯಂ ॥ ೫ ॥

ಕುರುರಾಜ್ಯಂ ಪುರಸ್ಕೃತ್ಯ ಮುನೀನಾಂ ಪುರತೋ ವನೇ ।
ಪುತ್ರೋ ಮೇ ಮತ್ಸಮಸ್ಸಮ್ಯಗ್ವೇದವೇದಾಂಗತತ್ವವಿತ್ ॥ ೬ ॥

ಯಚ್ಛ್ರುತ್ವಾ ಪುರುಷಸ್ತಾತ ವಿಮುಕ್ತಸ್ಸರ್ವಕಿಲ್ಬಿಷೈಃ ।
ಯಶಸ್ವೀ ಕೀರ್ತಿಮಾನ್ಭೂತ್ವಾವಂದ್ಯತೇ ಪ್ರೇತ್ಯ ಚೇಹ ಚ ॥ ೭ ॥

ಶ್ರೋತವ್ಯಮೇತತ್ಸತತಂ ಚಾತುರ್ವರ್ಣ್ಯೈಸ್ಸುಸಂಯುತೈಃ ।
ಮಂಗಲ್ಯಂ ಚ ಶಿವಂ ಚೈವ ಧರ್ಮಕಾಮಾರ್ಥಸಾಧಕಂ ॥
ಶ್ರೀಭೂತಿಜನನಂ ಪುಣ್ಯಮಾಯುಷ್ಯಂ ವಿಜಯಾವಹಂ ॥ ೮ ॥

ಹೇಗೆ ಪುಣ್ಯಕ್ಷೇತ್ರದಲ್ಲಿ ಪ್ರತಿಷ್ಠಿತವಾಯಿತೋ, ಅಲ್ಲಿ ಲೋಕಹಿತಾರ್ಥವಾಗಿ ತೀರ್ಥಗಳು ಹೇಗೆ ಉಂಟಾದುವೋ ಅದನ್ನೂ ನನಗೆ ಹೇಳು.

೫–೬. ಬ್ರಹ್ಮ—ಮಹಾಮುನಿಯೇ, ನನ್ನ ಮಾನಸಪುತ್ರನೂ, ವೇದ ವೇದಾಂಗತತ್ವಜ್ಞನಾಗಿ ನನಗೆ ಸಮಾನನೂ ಆದ ಪುಲಸ್ತ್ಯಬ್ರಹ್ಮನು ವನದಲ್ಲಿ ಋಷಿಗಳೆದುರಿಗೆ ಕುರುರಾಜ್ಯವಿಚಾರವನ್ನು ಮೊದಲುಮಾಡಿಕೊಂಡು, ಉಳಿದ ಆ ಸರ್ವತೀರ್ಥಗಳ ಫಲಮಹಿಮೆಯನ್ನೂ ನಿರ್ಣಯವಾಗಿ ಹೇಳುವನು.

೭. ಅಪ್ಪಾ (ಸನತ್ಕುಮಾರ), ಪುಲಸ್ತ್ಯನು ಹೇಳುವ ಅದನ್ನು ಕೇಳುವ ಪುರುಷನು ಸರ್ವಪಾಪಗಳಿಂದಲೂ ವಿಮುಕ್ತನಾಗಿ ಕೀರ್ತಿವಂತನಾಗಿ ಇಹಪರಗಳಲ್ಲಿ ವಂದ್ಯನಾಗುವನು.

೮. ಮಂಗಳಕರವೂ, ಧರ್ಮಾರ್ಥಕಾಮಸಾಧಕವೂ, ಶ್ರೀಭೂತಿಪ್ರದವೂ, ಪವಿತ್ರವೂ, ಆಯುಷ್ಕರವೂ, ವಿಜಯಪ್ರದವೂ ಆದ ಆ ತೀರ್ಥಮಹಿಮಾದಿಗಳನ್ನು ಚತುರ್ವರ್ಣದವರೂ ಸಮಾಧಾನದಿಂದ ಯಾವಾಗಲೂ ಕೇಳಬೇಕು.

ಧನ್ಯಂ ಯಶಸ್ಯಂ ಪಾಪಘ್ನಂ ಸ್ವಸ್ತಿಕೃಚ್ಛಾಂತಿಕಾರಕಂ ।
ಶ್ರುತ್ವೈವಂ ಪುರುಷಸ್ಸಮ್ಯಕ್ ನ ದುರ್ಗತಿಮವಾಪ್ನುಯಾತ್ ॥ ೯ ॥

ಕೀರ್ತಯಿತ್ವಾ ವ್ರಜೇತ್ಸ್ವರ್ಗಂ ಕಲ್ಯಮುತ್ಥಾಯ ಮಾನವಃ ॥ ೧೦ ॥

॥ ಸೂತ ಉವಾಚ ॥

ಇತ್ಯುಕ್ತ್ವಾ ಭಗವಾನ್ದೇವಃ ಪರಮೇಷ್ಠೀ ಪ್ರಜಾಪತಿಃ ।
ಸನತ್ಕುಮಾರಂ ಸಂದಿಶ್ಯ ವಿರರಾಮ ಮಹಾಯಶಾಃ ॥ ೧೧ ॥

ಏತದ್ವಃ ಕಥಿತಂ ಸರ್ವಂ ಮಯಾ ತತ್ತ್ವೇನ ಸತ್ತಮಾಃ ।
ವರಾಹಭೂಮಿಸಂವಾದಂ ಸಾರಮುದ್ಧೃತ್ಯ ಸತ್ತಮಾಃ ॥ ೧೨ ॥

ಯಶ್ಚೈವ ಕೀರ್ತಯೇನ್ನಿತ್ಯಂ ಶೃಣುಯಾದ್ವಾಪಿ ಭಕ್ತಿತಃ ।
ಸರ್ವಪಾಪವಿನಿರ್ಮುಕ್ತಸ್ಸ ಯಾತಿ ಪರಮಾಂ ಗತಿಂ ॥ ೧೩ ॥

೯-೧೦. ಧನ್ಯವೂ, ಯಶಸ್ಕರವೂ, ಪಾಪನಾಶಕವೂ, ಸ್ವಸ್ತಿಶಾಂತಿಪ್ರದವೂ ಆದ ಇದನ್ನು ಕೇಳುವವನು ದುರ್ಗತಿಯನ್ನು ಪಡೆಯುವುದಿಲ್ಲ. ಪ್ರಾತಃಕಾಲದಲ್ಲೆದ್ದು ಇದನ್ನು ಹೇಳುವವನು ಸ್ವರ್ಗವನ್ನು ಪಡೆಯುವನು.

೧೧. ಸೂತಮುನಿ—, ಉತ್ತಮಸ್ಥಾನದಲ್ಲಿರುವವನೂ, ಭಗವಂತನೂ ಮಹಾಯಶನೂ ಆದ ಬ್ರಹ್ಮದೇವನು, ಹೀಗೆ ಸನತ್ಕುಮಾರಮುನಿಗೆ ಉಪದೇಶಿಸಿ ವಿಶ್ರಾಂತನಾದನು.

೧೨. ಸತ್ಪುರುಷೋತ್ತಮರೇ, ಈ ಶ್ರೀವರಾಹಭೂಮಿಸಂವಾದವನ್ನೆಲ್ಲಾ ಸಾರವನ್ನು ಸಂಗ್ರಹಿಸಿ ತಾತ್ವಿಕವಾಗಿ ನಿಮಗೆ ಹೇಳಿದುದಾಯಿತು.

೧೩. ಇದನ್ನು ನಿತ್ಯವೂ ಭಕ್ತಿಯಿಂದ ಕೇಳುವವರೂ, ಹೇಳುವವರೂ ಸರ್ವಪಾಪಗಳನ್ನೂ ಕಳೆದುಕೊಂಡು ಪರಮಗತಿಯನ್ನು ಪಡೆಯುವರು.

ಪ್ರಭಾಸೇ ನೈಮಿಷಾರಣ್ಯೇ ಗಂಗಾದ್ವಾರೇಽಥ ಪುಷ್ಕರೇ ।
ಪ್ರಯಾಗೇ ಬ್ರಹ್ಮತೀರ್ಥೇ ಚ ತೀರ್ಥೇ ಚಾಮರಕಂಟಕೇ ॥
ಯತ್ಪುಣ್ಯಫಲಮಾಪ್ನೋತಿ ತತ್ಕೋಟಿಗುಣಿತಂ ಭವೇತ್ ॥ ೧೪ ॥

ಕಪಿಲಾಂ ದ್ವಿಜಮುಖ್ಯಾಯ ಸಮ್ಯಗ್ದತ್ವಾ ತು ಯತ್ಫಲಂ ।
ಪ್ರಾಪ್ನೋತಿ ಸಕಲಂ ಶ್ರುತ್ವಾ ಚಾಧ್ಯಾಯಂ ತು ನ ಸಂಶಯಃ ॥ ೧೫ ॥

ಶ್ರುತ್ವಾಸ್ಯೈವ ದಶಾಧ್ಯಾಯಂ ಶುಚಿರ್ಭೂತ್ವಾ ಸಮಾಹಿತಃ ।
ಅಗ್ನಿಷ್ಟೋಮಾತಿರಾತ್ರಾಭ್ಯಾಂ ಫಲಂ ಪ್ರಾಪ್ನೋತಿ ಮಾನವಃ ॥ ೧೬ ॥

ಯಃ ಪುನಸ್ಸತತಂ ಶೃಣ್ವನ್ನೈರಂತರ್ಯೇಣ ಬುದ್ಧಿಮಾನ್ ।
ಪಾರಯೇತ್ಪರಯಾ ಭಕ್ತ್ಯಾ ತಸ್ಯಾಪಿ ಶೃಣು ಯತ್ಫಲಂ ॥ ೧೭ ॥

---

೧೪. ಪ್ರಭಾಸಕ್ಷೇತ್ರ, ನೈಮಿಷಾರಣ್ಯ, ಗಂಗಾದ್ವಾರ, ಪುಷ್ಕರಕ್ಷೇತ್ರ, ಪ್ರಯಾಗ, ಬ್ರಹ್ಮತೀರ್ಥ, ಅಮರಕಂಟಕ (ನರ್ಮದಾಮೂಲ) ತೀರ್ಥ ಇವುಗಳ ಯಾತ್ರೆಯಿಂದ ಪಡೆಯಬಹುದಾದ ಪುಣ್ಯಫಲದ ಕೋಟಿಗುಣಫಲವನ್ನು ಶ್ರೀವರಾಹಪುರಾಣಶ್ರವಣಪಠನಗಳಿಂದ ಪಡೆಯ ಬಹುದು.

೧೫. ಬ್ರಾಹ್ಮಣೋತ್ತಮನಿಗೆ ಗೋದಾನವನ್ನು ಸರಿಯಾಗಿ ಮಾಡಿ ಪಡೆಯುವ ಫಲವನ್ನು ಪೂರ್ಣವಾಗಿ ವರಾಹಪುರಾಣದ ಒಂದು ಅಧ್ಯಾಯವನ್ನು ಕೇಳುವುದರಿಂದ ಪಡೆಯುವುದರಲ್ಲಿ ಸಂಶಯವಿಲ್ಲ.

೧೬. ಈ ಶ್ರೀವರಾಹಪುರಾಣದ ಹತ್ತು ಅಧ್ಯಾಯಗಳನ್ನು ಶುಚಿಯೂ, ಸಮಾಧಾನಚಿತ್ತನೂ ಆಗಿ ಕೇಳಿದರೆ ಅಗ್ನಿಷ್ಟೋಮಾತಿರಾತ್ರಗಳ ಫಲವನ್ನು ಪಡೆಯುವನು.

೧೭. ಬುದ್ಧಿವಂತನಾದ ಯಾರು ಪರಮಭಕ್ತಿಯಿಂದ ಇದನ್ನು ನಿರಂತರವಾಗಿ ಕೇಳುವನೋ ಅಥವಾ ತಾನೇ ಪಾರಾಯಣಮಾಡುವನೋ ಅವನಿಗೆ ಲಭಿಸುವ ಫಲವನ್ನು ಕೇಳು.

ಸರ್ವಯಜ್ಞೇಷು ಯತ್ಪುಣ್ಯಂ ಸರ್ವದಾನೇಷು ಯತ್ಫಲಂ ।
ಸರ್ವತೀರ್ಥಾಭಿಷೇಕೇನ ಯತ್ಫಲಂ ಮುನಿಭಿಸ್ಸ್ಮೃತಂ ॥ ೧೮ ॥
ತತ್ಪ್ರಾಪ್ನೋತಿ ನ ಸಂದೇಹೋ ವರಾಹವಚನಂ ಯಥಾ ॥ ೧೯ ॥

॥ ಶ್ರೀವರಾಹ ಉವಾಚ ॥

ಯದೇತತ್ಪಾರಯೇದ್ಭಕ್ತ್ಯಾ ಮಮ ಮಾಹಾತ್ಮ್ಯಮುತ್ತಮಂ ।
ಅಪುತ್ರಸ್ಯ ಭವೇತ್ಪುತ್ರಃ ಸಪುತ್ರಸ್ಯ ಸುಪೌತ್ರಕಃ ॥ ೨೦ ॥
ಯಸ್ಯೇದಂ ಲಿಖಿತಂ ಗೇಹೇ ತಿಷ್ಠೇತ್ಸಂಪೂಜ್ಯತೇ ಸದಾ ।
ತಸ್ಯ ನಾರಾಯಣೋ ದೇವಃ ಸಂತುಷ್ಟಸ್ಸ್ಯಾದ್ಧಿ ಸರ್ವದಾ ॥ ೨೧ ॥
ಯಶ್ಚೈತಚ್ಛೃಣುಯಾದ್ಭಕ್ತ್ಯಾ ನೈರಂತರ್ಯೇಣ ಮಾನವಃ ।
ಶ್ರುತ್ವಾ ತು ಪೂಜಯೇಚ್ಛಾಸ್ತ್ರಂ ಯಥಾವಿಷ್ಣುಂ ಸನಾತನಂ ॥ ೨೨ ॥
ಗಂಧಪುಷ್ಪೈಸ್ತಥಾ ವಸ್ತ್ರೈರ್ಬ್ರಾಹ್ಮಣಾನಾಂ ಚ ತರ್ಪಣೈಃ ।
ಯಥಾಶಕ್ತಿ ನೃಪೋಗ್ರಾಮ್ಯೈಃ ಪೂಜಯೇಚ್ಚ ವಸುಂಧರೇ ॥ ೨೩ ॥

---

೧೮. ಆತನು ಸರ್ವಯಜ್ಞಗಳಿಂದಲೂ, ಸರ್ವದಾನಗಳಿಂದಲೂ ಸರ್ವ ತೀರ್ಥಸ್ನಾನಗಳಿಂದಲೂ ಯಾವ ಪುಣ್ಯಫಲವನ್ನು ಮುನಿಗಳು ಹೇಳಿರುವರೋ ಆ ಫಲವನ್ನು ಸಂದೇಹವಿಲ್ಲದೆ ಪಡೆಯುವನು. ಈ ವಿಚಾರದಲ್ಲಿ ಶ್ರೀವರಾಹ ದೇವನ ವಚನವನ್ನು ಕೇಳಿ.

೧೯-೨೦. ಶ್ರೀವರಾಹ:-ನನ್ನ ಈ ಉತ್ತಮಮಹಿಮೆಯನ್ನು ಭಕ್ತಿಯಿಂದ ಹೇಳುವ ಅಥವಾ ಹೇಳಿಸುವ ಅಪುತ್ರವಂತನಿಗೆ ಪುತ್ರನೂ ಪುತ್ರವಂತನಿಗೆ ಪೌತ್ರನೂ ಲಭಿಸುವರು.

೨೧. ಈ ವರಾಹಪುರಾಣ ಗ್ರಂಥವನ್ನು ಮನೆಯಲ್ಲಿ ಯಾವಾಗಲೂ ಇಟ್ಟುಕೊಂಡು ಪೂಜೆಮಾಡುವವರಿಗೆ ಶ್ರೀಮನ್ನಾರಾಯಣನು ಸದಾ ಒಲಿಯುವನು.

೨೨-೨೪. ಭೂದೇವಿ, ಈ ಪುರಾಣವನ್ನು ನಿರಂತರವಾಗಿ ಭಕ್ತಿಯಿಂದ ಕೇಳಿ ಸನಾತನನಾದ ವಿಷ್ಣುವಿನಂತೆಯೇ ಈ ಶಾಸ್ತ್ರ(ಪುರಾಣ)ವನ್ನೂ ಶುಚಿಭೂತರಾಗಿ ಪೂಜಿಸಿ, ಯಥಾಶಕ್ತಿಯಾಗಿ ಗಂಧಪುಷ್ಪವಸ್ತ್ರಗ್ರಾಮಾದಿದಾನ ಗಳಿಂದ ಬ್ರಾಹ್ಮಣರನ್ನೂ ಪೌರಾಣಿಕನನ್ನೂ ತೃಪ್ತಿಪಡಿಸುವ ಸಾಮಾನ್ಯ

ಶ್ರುತ್ವಾ ತು ಪೂಜಯೇದ್ಯಃ ಪೌರಾಣಿಕಂ ನಿಯತಶ್ಶುಚಿಃ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಸಾಯುಜ್ಯಮಾಪ್ನುಯಾತ್ ॥ ೨೪ ॥

*ಸ್ಥಿತೇಮನಸಿ ಸುಸ್ವಸ್ಥೇ ಶರೀರೇ ಸತಿ ಯೋನರಃ ।
ಧಾತುಸಾಮ್ಯೇ ಸ್ಥಿತೇ ಸ್ಮರ್ತಾ ವಿಶ್ವರೂಪಂ ಚ ಮಾಮಜಂ ॥ ೨೫ ॥

*ತತಸ್ತಂ ಮ್ರಿಯಮಾಣಂತು ಕಾಷ್ಠಪಾಷಾಣಸನ್ನಿಭಂ ।
ಅಹಂ ಸ್ಮರಾಮಿ ಮದ್ಭಕ್ತಂ ನಯಾಮಿ ಪರಮಾಂ ಗತಿಂ ॥ ೨೬ ॥

ಇತಿ ಶ್ರೀವರಾಹಪುರಾಣೇ ಭಗವಚ್ಛಾಸ್ತ್ರೇ ಧರಣೀವರಾಹಸಂವಾದೇ
ಫಲಶ್ರುತಿರ್ನಾಮ ಸಪ್ತದಶಾಧಿಕದ್ವಿಶತತಮೋಽಧ್ಯಾಯಃ
ವಾರಾಹಂ ಮಹಾಪುರಾಣಂ ಸಂಪೂರ್ಣಂ ಶುಭಂ

ಮನುಷ್ಯರೂ ರಾಜರೂ ಪಾಪಗಳನ್ನೆಲ್ಲಾ ಕಳೆದುಕೊಂಡು ಶ್ರೀವಿಷ್ಣು ಸಾಯುಜ್ಯವನ್ನು ಪಡೆಯುವರು.

೨೫–೨೬. ಮನಸ್ಸೂ ದೇಹವೂ ಸುಸ್ವಸ್ಥವಾಗಿದ್ದು ವಾತಪಿತ್ತಶ್ಲೇಷ್ಮ ವಸಾಸೃಗಾದಿಧಾತುಗಳು ಸಮಸ್ಥಿಯಲ್ಲಿರುವಾಗ ಎಂದರೆ ಆರೋಗನೂ ಸರಿಯಾದ ಜ್ಞಾನವುಳ್ಳವನೂ ಸಮಾಧಾನಚಿತ್ತನೂ ಆಗಿರುವಾಗ, ವಿಶ್ವರೂಪನೂ ಅನಾದ್ಯನಂತನೂ ಆದ (ಪರಮಾತ್ಮನನ್ನು) ನನ್ನನ್ನು ಸ್ಮರಿಸುವವನು ಕಡೆಗೆ ಎಂದರೆ ಅಂತ್ಯಕಾಲದಲ್ಲಿ ನನ್ನಸ್ಮರಣೆಯಿಲ್ಲದೆ ಕಾಷ್ಠಶಿಲಾಸದೃಶನಾಗಿ ಸತ್ತರೂ ಆ ನನ್ನ ಭಕ್ತನನ್ನು ನಾನು ಜ್ಞಾಪಕದಲ್ಲಿಟ್ಟುಕೊಂಡು ಪರಮಗತಿಗೊಯ್ಯುವೆನು.

ಅಧ್ಯಾಯದ ಸಾರಾಂಶ:—

ಈ ಅಧ್ಯಾಯದಲ್ಲಿ ಶ್ರೀವರಾಹಭೂದೇವಿಯರ ಸಂವಾದದ ಪರಮಫಲವು ಕಾಣಿಸುವುದು.

ಇಲ್ಲಿಗೆ ಶ್ರೀವರಾಹಪುರಾಣದಲ್ಲಿ ಇನ್ನೂರಹದಿನೇಳನೆಯ ಅಧ್ಯಾಯವು.

ವರಾಹಮಹಾಪುರಾಣಂ ಸಂಪೂರ್ಣಂ ಶುಭಂ.

---

* ಈ ಎರಡು ಶ್ಲೋಕಗಳು ಬೊಂ. ಕ. ಮುದ್ರಿತಪುಸ್ತಕಗಳಲ್ಲಿಲ್ಲ. ಆದರೂ ಶ್ರೀಮದ್ವೇದಾಂತದೇಶಿಕರವರೇಮೊದಲಾದ ಪೂರ್ವಾಚಾರ್ಯರು ವಾರಾಹಚರಮಶ್ಲೋಕವೆಂದು ರಹಸ್ಯಶಿಖಾಮಣಿಯೆಂಬುದೇ ಮೊದಲಾದ ಹೆಸರಿನಿಂದ ಈ ಶ್ಲೋಕಗಳನ್ನು ವ್ಯಾಖ್ಯಾನಿಸಿರುವರು. ಅಲ್ಲದೆ ಶಿಷ್ಯರನೇಕರು ಶ್ರೀಗೀತಾಚರಮಶ್ಲೋಕದಂತೆಯೇ ಇವನ್ನೂ ಅನುಸಂಧಾನದಲ್ಲಿ ರಿಸಿಕೊಂಡಿರುವರು ಆದುದರಿಂದ ಇವನ್ನೂ ಇಲ್ಲಿ ಸೇರಿಸಿವೆ.

॥ ಶ್ರೀ ॥

ಅಷ್ಟಾದಶಾಧಿಕದ್ವಿಶತತಮೋಽಧ್ಯಾಯಃ

ಅಥ ಪುರಾಣವಿಷಯಾನುಕ್ರಮಣಿಕಾಧ್ಯಾಯಃ

ತ್ರಿಸ್ಸಪ್ತಷಟ್ಕ್ಷಿತಿಮಿತೇ ನೃಪವಿಕ್ರಮಸ್ಯ ।
ಕಾಲೇ ಗತೇ ಭಗವತೋ ಹರಿಬೋಧನಸ್ಯ ।
ವೀರೇಶ್ವರೇಣ ಸಹ ಮಾಧವಭಟ್ಟನಾಮ್ನಾ ।
ಕಾಶ್ಯಾಂ ವರಾಹಕಥಿತಂ ಲಿಖಿತಂ ಪುರಾಣಂ ॥ ೧ ॥

ವರಾಹಸ್ಯ ಪುರಾಣಸ್ಯ ವೃತ್ತಾಂತಾನ್ಪ್ರಬ್ರವೀಮ್ಯಹಂ ।
ಆದೌ ಸಂಬಂಧಕಥನಂ ವೃತ್ತಾಂತಶ್ಚಾದಿಕರ್ಮಕಃ ॥ ೨ ॥

ಆದಿಸೃಷ್ಟಿಸ್ತತಃ ಪ್ರೋಕ್ತಾ ಚರಿತಂ ದುರ್ಜಯಸ್ಯ ಚ ।
ವೃತ್ತಾಂತೋದ್ದೇಶಭಾಗಶ್ಚ ಶ್ರಾದ್ಧಕಲ್ಪಸ್ತತಃಪರಂ ॥ ೩ ॥

ಇನ್ನೂರಹದಿನೆಂಟನೆಯ ಅಧ್ಯಾಯ

ಪುರಾಣವಿಷಯಾನುಕ್ರಮಣಿಕಾಧ್ಯಾಯ.

೧. ವಿಕ್ರಮಾರ್ಕನೃಪಶಕ ೧೬೨೧ ರಲ್ಲಿ ಶ್ರೀ ಮಹಾವಿಷ್ಣುವು ಶೇಷಶಯ್ಯೆಯಿಂದೆದ್ದಾಗ ಎಂದರೆ ಕಾರ್ತಿಕಶುದ್ಧ(ಉತ್ಥಾನ)ದ್ವಾದಶಿಯಾದ ಬಳಿಕ ವೀರೇಶ್ವರನೊಡಗೂಡಿದ ಮಾಧವಭಟ್ಟನೆಂಬುವನು ಶ್ರೀವರಾಹೋಕ್ತಪುರಾಣವನ್ನು ಕಾಶಿಯಲ್ಲಿ ಬರೆದೆನು.

೨. ವರಾಹಪುರಾಣದಲ್ಲಿರುವ ವೃತ್ತಾಂತಗಳನ್ನು ಅನುಕ್ರಮವಾಗಿ ಹೇಳುತ್ತೇನೆ. ಆದಿಯಲ್ಲಿ ಸಂಬಂಧವನ್ನು ಎಂದರೆ ಪುರಾಣವು ಜನಿಸಲು ಕಾರಣವನ್ನು ಹೇಳಿ, ಬಳಿಕ ಆದಿಕರ್ಮವೃತ್ತಾಂತವನ್ನು ಹೇಳಿದೆ.

೩. ಬಳಿಕ ಆದಿಸೃಷ್ಟ್ಯಾದಿವಿಚಾರವನ್ನೂ, ದುರ್ಜಯನೆಂಬ ರಾಜನ ಚರಿತ್ರೆಯನ್ನೂ ಹೇಳಿದೆ. ಆಮೇಲೆ ಶ್ರಾದ್ಧಕಲ್ಪವಿದೆ.

ಆದಿವೃತ್ತಾಂತಕಥನೇ ಸರಮಾಖ್ಯಾನಮೇವ ಚ ।
ಮಹಾತಪೋಽಪಾಖ್ಯಾನಂ ಚ ಅಗ್ನ್ಯುತ್ಪತ್ತಿಸ್ತತಃ ಪರಂ ॥ ೪ ॥

ಅಶ್ವಿನೋರಪಿ ಚೋತ್ಪತ್ತಿರ್ಗೌರ್ಯುತ್ಪತ್ತಿಸ್ತಥೈವ ಚ ।
ವಿನಾಯಕಸ್ಯ ಚೋತ್ಪತ್ತಿರ್ನಾಗೋತ್ಪತ್ತಿಸ್ತಥೈವ ಚ ॥ ೫ ॥

ಸ್ಕಂದೋತ್ಪತ್ತಿಶ್ಚ ಭಾನೋಶ್ಚ ಉತ್ಪತ್ತಿಸ್ಸಮುದಾಹೃತಾ ।
ಕಾಮಾದೀನಾಂ ತಥೋತ್ಪತ್ತಿಃ ದೇವ್ಯುತ್ಪತ್ತಿಸ್ತಥೈವ ಚ ॥ ೬ ॥

ಧನದಸ್ಯ ತಥೋತ್ಪತ್ತಿಃ ಪರಾಪರವಿನಿರ್ಣಯಃ ।
ಧರ್ಮೋತ್ಪತ್ತಿಸ್ತಥೋತ್ಪತ್ತೀ ರುದ್ರಸ್ಯ ಚ ತತಸ್ಸ್ಮೃತಾ ॥ ೭ ॥

ಸೋಮೋತ್ಪತ್ತಿರಹಸ್ಯಂ ಚ ಕ್ಷಿತೇಶ್ಚಾಪಿ ಸಮಾಸತಃ ।
ಉಕ್ತಃ ಪ್ರಾಗಿತಿಹಾಸಶ್ಚ ವ್ಯಾಧೋಪಾಖ್ಯಾನಮೇವ ಚ ॥ ೮ ॥

---

೪. ಆದಿವೃತ್ತಾಂತಗಳಲ್ಲಿ ಸರಮೋಪಾಖ್ಯಾನವನ್ನೂ, ಮಹಾತಪ ಮುನಿಯ ಚರಿತ್ರೆಯನ್ನೂ, ಅಗ್ನಿಯ ಉತ್ಪತ್ತಿವಿಚಾರವನ್ನೂ ಆಮೇಲೆ ಹೇಳಿದೆ.

೫-೬. ಅನಂತರ ಅಶ್ವಿನೀದೇವತೆಗಳ ಉತ್ಪತ್ತಿವಿಚಾರ, ಗೌರ್ಯುತ್ಪತ್ತಿ ವಿಚಾರ, ವಿನಾಯಕೋತ್ಪತ್ತಿವಿಚಾರ, ಸ್ಕಂದ (ಷಣ್ಮುಖ)ಜನನವಿಚಾರ, ಆದಿತ್ಯಸೃಷ್ಟಿವಿಚಾರ, ಕಾಮಾದಿಗಳು ಅಷ್ಟಮಾತೃಗಳಾದ ವಿಚಾರ, ದುರ್ಗಾ ದೇವಿಯ ವಿಚಾರ, ಇವುಗಳನ್ನು ಹೇಳಿದೆ.

೭. ಬಳಿಕ ಕುಬೇರಜನ್ಮವಿಚಾರವೂ, ಪರಾಪರನಿರ್ಣಯವಿಚಾರವೂ, ಧರ್ಮೋತ್ಪತ್ತಿ ರುದ್ರೋತ್ಪತ್ತಿವಿಚಾರಗಳೂ ಇವೆ.

೮-೧೧. ಅನಂತರ ಸೋಮೋತ್ಪತ್ತಿರಹಸ್ಯವನ್ನೂ, ಪ್ರಾಚೀನೇತಿಹಾಸವನ್ನು ವ್ಯಾಧೋಪಾಖ್ಯಾನವನ್ನೂ, ಸ ತ್ಯ ತ ಪೋ ಪಾ ಖ್ಯಾ ನ ವ ನ್ನೂ, ಮತ್ಸ್ಯದ್ವಾದಶೀ ಕೂರ್ಮದ್ವಾದಶೀ ವರಾಹದ್ವಾದಶೀ ನರಸಿಂಹದ್ವಾದಶೀ

ತತಸ್ಸತ್ಯತಪೋಽಪಾಖ್ಯಾ ಮತ್ಸ್ಯದ್ವಾದಶಿಕಾ ತಥಾ ।
ಕೂರ್ಮದ್ವಾದಶಿಕಾ ಚಾಪಿ ವರಾಹದ್ವಾದಶೀ ತಥಾ ॥ ೯ ॥

ನೃಸಿಂಹದ್ವಾದಶೀ ಚಾಪಿ ವಾಮನದ್ವಾದಶೀ ತಥಾ ।
ಭಾರ್ಗವದ್ವಾದಶೀ ಚಾಪಿ ಶ್ರೀರಾಮದ್ವಾದಶೀ ತಥಾ ॥ ೧೦ ॥

ಕೃಷ್ಣದ್ವಾದಶಿಕಾ ಚಾಪಿ ಬುದ್ಧದ್ವಾದಶಿಕಾ ತಥಾ ।
ಕಲ್ಕಿದ್ವಾದಶಿಕಾ ಚಾಪಿ ಪದ್ಮನಾಭಸ್ಯ ದ್ವಾದಶೀ ॥ ೧೧ ॥

ತತೋ ವ್ರತಂ ಧರಣ್ಯಾಶ್ಚ ಗೀತಾಗಸ್ತ್ಯಸ್ಯ ಚೋತ್ತಮಾ ।
ಪಶುಪಾಲಸ್ಯ ಚಾಖ್ಯಾನಂ ಭರ್ತೃಪ್ರಾಪ್ತಿವ್ರತಂ ತಥಾ ॥ ೧೨ ॥

ಶುಭವ್ರತಂ ಧನ್ಯವ್ರತಂ ಕಾಂತಿವ್ರತಮತಸ್ಸ್ಮೃತಂ ।
ಸೌಭಾಗ್ಯವ್ರತಮಾಖ್ಯಾತಮವಿಘ್ನವ್ರತಮೇವ ಚ ॥ ೧೩ ॥

ಶಾಂತಿವ್ರತಂ ಕಾಮವ್ರತಮಾರೋಗ್ಯವ್ರತಮೇವ ಚ ।
ಪುತ್ರಪ್ರಾಪ್ತಿವ್ರತಂ ಶೌರ್ಯವ್ರತಂ ವೈ ಸಾರ್ವಭೌಮಿಕಂ ॥ ೧೪ ॥

ವಾಮನದ್ವಾದಶೀ ಪರಶುರಾಮದ್ವಾದಶೀ ಶ್ರೀರಾಮದ್ವಾದಶೀ ಕೃಷ್ಣದ್ವಾದಶೀ ಬುದ್ಧದ್ವಾದಶೀ ಕಲ್ಕಿದ್ವಾದಶೀ ಪದ್ಮನಾಭದ್ವಾದಶೀ ವ್ರತಗಳ ವಿಚಾರವನ್ನೂ ಹೇಳಿದೆ.

೧೨. ಆಮೇಲೆ ಧರಣೀವ್ರತ ಅಥವಾ ದಾಮೋದರದ್ವಾದಶೀವ್ರತವನ್ನು ಹೇಳಿ, ಉತ್ತಮವಾದ ಅಗಸ್ತ್ಯಗೀತೆಯಲ್ಲಿ ಪಶುಪಾಲೋಪಾಖ್ಯಾನವನ್ನೂ, ಉತ್ತಮಪತಿಪ್ರಾಪ್ತಿವ್ರತವನ್ನೂ ಹೇಳಿದೆ.

೧೩–೧೪. ಬಳಿಕ ಶುಭವ್ರತ, ಧನ್ಯವ್ರತ, ಕಾಂತಿವ್ರತ, ಸೌಭಾಗ್ಯವ್ರತ ಅವಿಘ್ನವ್ರತ, ಶಾಂತಿವ್ರತ, ಕಾಮವ್ರತ, ಆರೋಗ್ಯವ್ರತ, ಪುತ್ರಪ್ರಾಪ್ತಿವ್ರತ, ಶೌರ್ಯವ್ರತ, ಸಾರ್ವಭೌಮವ್ರತ ಇವುಗಳ ವಿಚಾರವಿದೆ.

ಪುರಾಣಸ್ತವನಂ ಚೈವ ನಾರಾಯಣೇಶ್ವರೇಣ ಚ ।
ರುದ್ರಗೀತಾ ತತಃ ಪುಂಸಾಂ ಪ್ರಕೃತೇಶ್ಚಾಪಿ ನಿರ್ಣಯಃ ॥ ೧೫ ॥

ತತೋ ಭುವನಕೋಶಸ್ಯ ವರ್ಣನಂ ಸಮುದಾಹೃತಂ ।
ಜಂಬೂದ್ವೀಪಸ್ಯ ಮರ್ಯಾದಾವರ್ಣನಂ ಪರಿಕೀರ್ತಿತಂ ॥ ೧೬ ॥

ಭಾರತಾದಿಸಮುದ್ದೇಶಃ ಸೃಷ್ಟಿಸಂಭಾಗ ಏವ ಚ ।
ನಾರದಸ್ಯ ಚ ಸಂವಾದೋ ಮಹಿಷೇಣ ಪ್ರಕೀರ್ತಿತಃ ॥ ೧೭ ॥

ಶಕ್ತಿಮಾಹಾತ್ಮ್ಯಕಥನಂ ಮಹಿಷಾಸುರಘಾತನಂ ।
ರುದ್ರಮಾಹಾತ್ಮ್ಯಕಥನಂ ಪರ್ವಾಧ್ಯಾಯಸ್ತತಃ ಪರಂ ॥ ೧೮ ॥

ಶ್ವೇತೋಪಾಖ್ಯಾನಮುತ್ಪ್ರೋಕ್ತಂ ತಿಲಧೇನುವಿಧಿಸ್ತತಃ ।
ಜಲಧೇನೋ ರಸಧೇನೋರ್ಗುಡಧೇನೋರ್ವಿಧಿಃ ಪರಂ ॥ ೧೯ ॥

ತತಶ್ಚ ಶರ್ಕರಾಧೇನೋರ್ಮಧುಧೇನೋಸ್ತತಃ ಪರಂ ।
ದಧಿಧೇನೋಶ್ಚ ಲವಣಧೇನೋಃ ಕಾರ್ಪಾಸಧೇನುಕಾ ॥ ೨೦ ॥

೧೫-೧೬. ಅನಂತರ ಪುರಾಣಪ್ರಶಂಸೆ, ರುದ್ರಗೀತೆ, ಪ್ರಕೃತಿಪುರುಷನಿರ್ಣಯವಿಚಾರ, ಭುವನಕೋಶವರ್ಣನೆ, ಜಂಬೂದ್ವೀಪಮರ್ಯಾದಾವರ್ಣನೆ ಇವು ಇವೆ.

೧೭-೧೮. ಆಮೇಲೆ ಭಾರತಾದಿವರ್ಷಗಳ ವಿಚಾರ, ನಾರದಮಹಿಷಾಸುರರ ಸಂವಾದ, ಶಕ್ತಿಮಹಿಮೆ, ಮಹಿಷಾಸುರವಧೆ, ರುದ್ರಮಹಿಮೆ, ಪರ್ವಾಧ್ಯಾಯ ಇವುಗಳನ್ನು ಹೇಳಿದೆ.

೧೯-೨೧. ಬಳಿಕ ಶ್ವೇತೋಪಾಖ್ಯಾನ, ತಿಲಧೇನುದಾನ, ಜಲಧೇನುದಾನ, ರಸಧೇನುದಾನ, ಗುಡಧೇನುದಾನ, ಶರ್ಕರಾಧೇನುದಾನ, ಮಧುಧೇನುದಾನ, ದಧಿಧೇನುದಾನ, ಲವಣಧೇನುದಾನ, ಕಾರ್ಪಾಸ (ಹತ್ತಿ)ಧೇನುದಾನ, ಧಾನ್ಯ

ಧಾನ್ಯಧೇನುಶ್ಚ ಭಗವಚ್ಛಾಸ್ತ್ರಲಕ್ಷಣಮೇವ ಚ ।
ವಿಷ್ಣೋಃಸ್ತೋತ್ರಂ ತತೋ ನಾನಾಪ್ರಶ್ನಾಃಪ್ರೋಕ್ತಾ ಹರಿಂ ಪ್ರತಿ॥ ೨೦ ॥
ತತೋ ಭಾಗವತಾನಾಂ ಚ ಲಕ್ಷಣಂ ಪರಿಕೀರ್ತಿತಂ ।
ಲಕ್ಷಣಂ ಸುಖದುಃಖಾನಾಂ ದ್ವಾತ್ರಿಂಶದಪರಾಧಕಾಃ ॥ ೨೨ ॥
ನಾನಾಮಂತ್ರಾಸ್ತತಃ ಪ್ರೋಕ್ತಾ ದೇವೋಪಕರಣೇ ವಿಧಿಃ ।
ಭೋಜ್ಯಾಭೋಜ್ಯಸ್ಯ ಕಥನಂ ಸಂಧ್ಯೋಪಸ್ಥಾನಕಾರಣಂ ॥ ೨೩ ॥
ವಿಯೋಗಿಗರ್ಭಮೋಕ್ಷಶ್ಚ ಕೋಕಾಮುಖಪ್ರಶಂಸನಂ ।
ಭಗವಚ್ಛಾಸ್ತ್ರಕಥನೇ ಮಾಹಾತ್ಮ್ಯಂ ಪುಷ್ಪಗಂಧಯೋಃ ॥ ೨೪ ॥
***ಋತೂಪಸ್ಕರಣಂ ಪ್ರೋಕ್ತಂ ಮಾಯಾಚಕ್ರಂ ತತಃ ಪರಂ ।**
ಕುಬ್ಜಾಮ್ರಕಸ್ಯ ಮಹಾತ್ಮ್ಯಂ ವರ್ಣದೀಕ್ಷಾ ತತಃ ಪರಂ ॥ ೨೫ ॥

ಧೇನುದಾನ ಇವುಗಳ ವಿಚಾರವನ್ನೂ, ಭಗವಚ್ಛಾಸ್ತ್ರಲಕ್ಷಣವನ್ನೂ, ವಿಷ್ಣು ಸ್ತೋತ್ರವನ್ನೂ, ಭೂದೇವಿಯು ಶ್ರೀವರಾಹನಲ್ಲಿ ಕೇಳಿದ ವಿವಿಧಪ್ರಶ್ನೆಗಳನ್ನೂ ಹೇಳಿದೆ.

೨೨–೨೩. ಅದೂ ಅದಮೇಲೆ ಭಗವದ್ಭಕ್ತರ ಲಕ್ಷಣಗಳೂ, ಸುಖ ದುಃಖಗಳ ಸ್ವರೂಪವೂ, ಪೂಜಾದಿಕರ್ಮಪರರು ತ್ಯಜಿಸಬೇಕಾದ ಮೂವತ್ತೆರಡು ಅಪರಾಧಗಳೂ, ನಾನಾಮಂತ್ರಗಳೂ, ದೇವಪೂಜೋಪಸ್ಕರಣವಿಧಿಯೂ ಭೋಜ್ಯಾಭೋಜ್ಯವಿಧಿಯೂ ಸಂಧ್ಯೋಪಸ್ಥಾನ ಮಂತ್ರವೂ ಉಕ್ತವಾಗಿವೆ.

೨೪–೨೫. ಬಳಿಕ ಯೋಗಿಗಳಲ್ಲದವರೂ ಪುನರ್ಜನ್ಮವನ್ನು ತಪ್ಪಿಸಿ ಕೊಳ್ಳುವ ಮಾರ್ಗವನ್ನೂ, ಕೋಕಾಮುಖವೆಂಬ ಕ್ಷೇತ್ರದ ಮಹಿಮೆಯನ್ನೂ, ಭಗವಚ್ಛಾಸ್ತ್ರದಲ್ಲಿ ಗಂಧಪುಷ್ಪಗಳ ಮಹಿಮೆಯನ್ನೂ, (ಋತೂಪಸ್ಕರ) ಭಿನ್ನ ಋತುಗಳಲ್ಲಿ ಪೂಜೆಗೆ ಅವಶ್ಯವಾದ ಪುಷ್ಪಾದಿಗಳ ವಿಚಾರವನ್ನೂ, ಮಾಯಾ ಚಕ್ರವನ್ನೂ, ಕುಬ್ಜಾಮ್ರಕಕ್ಷೇತ್ರಮಾಹಾತ್ಮ್ಯವನ್ನೂ, ವರ್ಣದೀಕ್ಷಾ ವಿಚಾರವನ್ನೂ ಹೇಳಿದೆ.

---

* ರೂಪಕಾರಣಮುಕ್ತ್ರೋಕ್ತಂ.

ಕಂಕತಾಂಜನದರ್ಪಣಾನಾಂ ಮಂತ್ರಾಃ ಪ್ರೋಕ್ತಾಸ್ತತಃ ಪರಂ ।
ರಾಜಾನ್ನಭಕ್ಷಣೇ ಪ್ರಾಯಶ್ಚಿತ್ತಂ ಪ್ರೋಕ್ತಂ ತತಃ ಪರಂ ॥ ೨೬ ॥

ದಂತಕಾಷ್ಠಾದ್ಯಕರಣೇ ಪ್ರಾಯಶ್ಚಿತ್ತಂ ತತಃ ಪರಂ ।
ಶವಾದಿಸ್ಪರ್ಶನೇ ಮಂತ್ರತ್ಯಾಗೇ ಚೋಕ್ತಂ ತತಃ ಪರಂ ॥ ೨೭ ॥

ನೀಲವಸ್ತ್ರಪರಿಧಾನೇ ಕ್ರೋಧಯುಕ್ತಸ್ಯ ಚಾರ್ಚನೇ ।
ರಕ್ತವಸ್ತ್ರಪರಿಧಾನೇ ಅಂಧಕಾರೇ ಪ್ರಪೂಜನೇ ॥ ೨೮ ॥

ಕೃಷ್ಣವಸ್ತ್ರಪರಿಧಾನೇಽಧೌತವಸ್ತ್ರಸ್ಯ ಧಾರಣೇ ।
ಕ್ರೋಡಾದಿಮಾಂಸಭಕ್ಷೇ ಚ ಪ್ರಾಯಶ್ಚಿತ್ತಂ ಪ್ರಕೀರ್ತಿತಂ ॥ ೨೯ ॥

ದೀಪೋಚ್ಛಿಷ್ಟಸ್ಯ ತೈಲಸ್ಯ ಕರಲೇಪೇನ ಪೂಜನೇ ।
ಶ್ಮಶಾನಗಮನೇ ಸ್ಪೃಷ್ಟಪೂಜನೇ ಚೈವ ಶೋಧನೇ ॥ ೩೦ ॥

೨೬–೨೮. ಅನಂತರ ದೇವರಿಗೆ ಅಂಜನದರ್ಪಣಾದಿಗಳನ್ನು ಅರ್ಪಿಸುವ ಮಂತ್ರಗಳನ್ನೂ, ರಾಜಾನ್ನಭಕ್ಷಣಪ್ರಾಯಶ್ಚಿತ್ತವನ್ನೂ, ಹಲ್ಲುಜ್ಜದೆ ಕರ್ಮಗಳನ್ನಾಚರಿಸಿದರೆ ಮಾಡಬೇಕಾದ ಪ್ರಾಯಶ್ಚಿತ್ತವನ್ನೂ, ಶವಾದಿಸ್ಪರ್ಶಮಾಡಿ ವಿಧಿಯಂತೆ ಪರಿಶುದ್ಧನಾಗದೆ ದೇವಪೂಜಾದಿಗಳನ್ನು ಮಾಡಿದುದಕ್ಕೂ, ಮಂತ್ರತ್ಯಾಗಮಾಡಿದುದಕ್ಕೂ, ನೀಲವಸ್ತ್ರವನ್ನು ಧರಿಸಿ, ಕೋಪವುಳ್ಳವನಾಗಿ ರಕ್ತವಸ್ತ್ರಧಾರಿಯಾಗಿ ಅಥವಾ ಕತ್ತಲೆಯಲ್ಲಿ ದೇವಪೂಜೆ ಮಾಡಿದುದಕ್ಕೂ ಪ್ರಾಯಶ್ಚಿತ್ತವನ್ನೂ ಹೇಳಿದೆ.

೨೯–೩೦. ಆಮೇಲೆ ಕಪ್ಪುಬಟ್ಟೆಯನ್ನು ಅಥವಾ ಮೈಲಿಗೆಯ ಬಟ್ಟೆಯನ್ನುಟ್ಟು ದೇವರನ್ನು ಪೂಜಿಸಿದುದಕ್ಕೂ, ವರಾಹಾದಿಮಾಂಸಭಕ್ಷಣಕ್ಕೂ, ದೀಪದ ಎಣ್ಣೆಯನ್ನು ಮುಟ್ಟಿ ಹಸ್ತಶುದ್ಧಿಮಾಡಿಕೊಳ್ಳದೆಯೂ ಶ್ಮಶಾನಕ್ಕೆ ಹೋಗಿ ಸ್ನಾನಮಾಡದೆಯೂ ದೇವಸ್ಪರ್ಶಪೂಜಾದಿಗಳನ್ನು ಮಾಡಿದುದಕ್ಕೂ ಪ್ರಾಯಶ್ಚಿತ್ತವು ವಿಹಿತವಾಗಿದೆ.

ಪಿಣ್ಯಾಕಭಕ್ಷಣೇ ಚೈವ ಉಪಾನದ್ಗೂಢಪಾದಕೇ ।
ಭಗವಚ್ಛಾಸ್ತ್ರವಿಹಿತಾಕರಣೇ ಶೋಧನೇ ತತಃ ॥ ೩೧ ॥

ಸೂಕರಕ್ಷೇತ್ರಮಹಿಮಾ ತತೋ ಜಂಬುಕಗೃಧ್ರಯೋಃ ।
ಖಂಜರೀಟಸ್ಯ ಚಾಖ್ಯಾನಂ ಪುನಃ ಕೋಕಾಮುಖಸ್ಯ ಚ ॥ ೩೨ ॥

ಬದರೀಷಂಡಮಾಹಾತ್ಮ್ಯಂ ಗುಹ್ಯಧರ್ಮಪ್ರಕೀರ್ತನಂ ।
ಮಂದಾರಗುಹ್ಯಮಹಿಮಾ ಶಾಲಗ್ರಾಮಪ್ರಶಂಸನಂ ॥ ೩೩ ॥

ಸೋಮೇಶ್ವರಸ್ಯ ಮಹಿಮಾ ಮುಕ್ತಿಕ್ಷೇತ್ರಸ್ಯ ಚಾಪಿ ಹಿ ।
ತ್ರಿವೇಣ್ಯಾಶ್ಚೈವ ಮಾಹಾತ್ಮ್ಯಂ ಮಾಹಾತ್ಮ್ಯಂ ಗಂಡಕೀಭವಂ ॥ ೩೪ ॥

ಚಕ್ರತೀರ್ಥಸ್ಯ ಮಹಿಮಾ ಹರಿಕ್ಷೇತ್ರಸಮುದ್ಭವಃ ।
ದೇವಹ್ರದಸ್ಯ ಚಾಖ್ಯಾನಂ ರುರುಕ್ಷೇತ್ರಸ್ಯ ಚಾಪಿ ಹಿ ॥ ೩೫ ॥

---

೩೧. ಬಳಿಕ ಹಿಂಡಿಯನ್ನು ತಿಂದು ದೇವರ ಪೂಜೆಯನ್ನು ಮಾಡಿದರೂ, ಪಾದರಕ್ಷೆಯನ್ನು ಹಾಕಿಕೊಂಡು ದೇವಾಲಯಾದಿಗಳಿಗೆ ಹೋದರೂ, ಭಗವಚ್ಛಾಸ್ತ್ರದಲ್ಲಿ ಹೇಳಿರುವಂತೆ ಪೂಜಾದಿಗಳನ್ನು ಮಾಡದಿದ್ದರೂ ಆಚರಿಸಬೇಕಾದ ಪ್ರಾಯಶ್ಚಿತ್ತವು ಉಕ್ತವಾಗಿದೆ.

೩೨-೩೩. ಆಮೇಲೆ ವರಾಹ ಅಥವಾ ಸೂಕರಕ್ಷೇತ್ರಮಹಿಮೆಯನ್ನೂ ನರಿಹದ್ದುಗಳ ಮತ್ತು ಖಂಜರೀಟವೆಂಬ ಹಕ್ಕಿಯ ಕಥೆಯನ್ನೂ, ಮತ್ತೆ ಕೋಕಾಮುಖಕ್ಷೇತ್ರಮಹಿಮೆಯನ್ನೂ, ಬದರಿಕಾಶ್ರಮಮಹಿಮೆಯನ್ನೂ, ರಹಸ್ಯ ಧರ್ಮವನ್ನೂ, ಮಂದಾರಮಹಿಮೆಯನ್ನೂ, ಶಾಲಗ್ರಾಮಪ್ರಶಂಸೆಯನ್ನೂ ಹೇಳಿದೆ.

೩೪-೩೫. ಬಳಿಕ ಸೋಮೇಶ್ವರಕ್ಷೇತ್ರ, ಮುಕ್ತಿಕ್ಷೇತ್ರ, ತ್ರಿವೇಣಿ, ಗಂಡಕಿ ಇವುಗಳ ಮಹಿಮೆಯೂ, ಚಕ್ರತೀರ್ಥ, ಹರಿಕ್ಷೇತ್ರ, ದೇವಹ್ರದ ರುರುಕ್ಷೇತ್ರ ಇವುಗಳ ಮಹಿಮೆಯೂ ಉಕ್ತವಾಗಿದೆ.

ಗೋನಿಷ್ಕ್ರಮಸ್ಯ ಮಹಿಮಾ ದ್ವಾರವತ್ಯಾಸ್ತತಃ ಪರಂ ।
ತತ್ರತ್ಯತೀರ್ಥಮಹಿಮಾ ಲೋಹಾರ್ಗಲಮತಃ ಪರಂ ॥ ೩೬ ॥

ಮಥುರಾತೀರ್ಥಮಾಹಾತ್ಮ್ಯಂ ಪ್ರಾದುರ್ಭಾವಸ್ತಥೈವ ಚ ।
ಯಮುನಾತೀರ್ಥಮಾಹತ್ಮ್ಯಮಕ್ರೂರಸ್ಯ ಚ ತೀರ್ಥಕಂ ॥ ೩೭ ॥

ದೇವಾರಣ್ಯಸ್ಯ ಮಾಹಾತ್ಮ್ಯಂ ಚಕ್ರತೀರ್ಥಸ್ಯ ಚೋತ್ತಮಂ ।
ಕಪಿಲಸ್ಯಾಪಿ ಮಹಿಮಾ ತಥಾ ಗೋವರ್ಧನಸ್ಯ ಚ ॥ ೩೮ ॥

ತಥಾ ಆಖ್ಯಾಯಿಕಾಯುಕ್ತಂ ವಿಶ್ರಾಂತೇಶ್ಚ ತತಃ ಪರಂ ।
ಗೋಕರ್ಣಸ್ಯ ಚ ಮಾಹಾತ್ಮ್ಯಂ ಸರಸ್ವತ್ಯಾಸ್ತಥೈವ ಚ ॥ ೩೯ ॥

ಯಮುನೋದ್ಭೇದಮಹಿಮಾ ಕಾಲಿಂಜರಸಮುದ್ಭವಃ ।
ಗಂಗೋದ್ಭೇದಸ್ಯ ಮಹಿಮಾ ಶಾಪಸ್ಸಾಂಬಸ್ಯ ವೈ ತಥಾ ॥ ೪೦ ॥

ಮಧುಕಪ್ರತಿಮಾಯಾಶ್ಚ ಸ್ಥಾಪನಂ ಸಂಪ್ರಕೀರ್ತಿತಂ ।
ಶೈಲಾರ್ಚಾಸ್ಥಾಪನಂ ಚಾಪಿ ಮೃನ್ಮಯಾರ್ಚಾವಿಧಿಸ್ತಥಾ ॥ ೪೧ ॥

---

೩೬. ಅನಂತರ ಗೋನಿಷ್ಕ್ರಮಕ್ಷೇತ್ರ, ದ್ವಾರಕೀ ಮತ್ತು ಅಲ್ಲಿರುವ ತೀರ್ಥಗಳು, ಲೋಹಾರ್ಗಲ(ವೆಂಬ)ಕ್ಷೇತ್ರ ಇವುಗಳ ಮಹಿಮೆಯನ್ನು ಹೇಳಿದೆ.

೩೭–೩೯. ಬಳಿಕ ಮಥುರಾತೀರ್ಥಮಹಿಮೆ, ಮಥುರೆಯ ಪ್ರಾದುರ್ಭಾವ ಯಮುನಾತೀರ್ಥಾಕ್ರೂರತೀರ್ಥಗಳಮಹಿಮೆ, ದೇವಾರಣ್ಯಮಹಿಮೆ, ಚಕ್ರತೀರ್ಥ ಪ್ರಾಶಸ್ತ್ಯ, ಕಪಿಲಗೋವರ್ಧನಕ್ಷೇತ್ರಗಳಮಹಿಮೆ, ಉಪಾಖ್ಯಾನಸಹಿತವಾದ ವಿಶ್ರಾಂತಿತೀರ್ಥಮಹಿಮೆ, ಗೋಕರ್ಣತೀರ್ಥಮಹಿಮೆ, ಸರಸ್ವತಿಯಮಹಿಮೆ ಇವುಗಳನ್ನು ಹೇಳಿದೆ.

೪೦. ಆಮೇಲೆ ಯಮುನಾಸಂಗಮಮಹಿಮೆ, ಕಾಲಿಂಜರಕ್ಷೇತ್ರಮಹಿಮೆ, ಗಂಗೋದ್ಭೇದಮಹಿಮೆ, ಸಾಂಬನ ಶಾಪವಿಚಾರ ಇವುಗಳನ್ನು ಹೇಳಿದೆ.

೪೧–೪೩. ಅನಂತರ ದೇವನ ಮಧುಕ ಪ್ರತಿಮೆಯು, ಶಿಲಾಮೂರ್ತಿಯು, ಮೃಣ್ಮಯಮೂರ್ತಿಯು, ತಾಮ್ರಮೂರ್ತಿಯು, ಕಾಂಸ್ಯಮೂರ್ತಿಯು, ರಜತ

ತಾಮ್ರಾರ್ಚಾಸ್ಥಾಪನಂ ಚಾಪಿ ಕಾಂಸ್ಯಾರ್ಚಾಸ್ಥಾಪನಂ ತಥಾ ।
ರೌಪ್ಯಾರ್ಚಾಸ್ಥಾಪನಂ ಚಾಥ ಸೌವರ್ಣಪ್ರತಿಮಾಸ್ಥಿತಿಃ ॥ ೪೨ ॥

ಶ್ರಾದ್ಧೋತ್ಪತ್ತಿಸ್ತತಃ ಪ್ರೋಕ್ತಂ ಪಿಂಡಸಂಕಲ್ಪ ಏವ ಚ ।
ಪಿಂಡೋತ್ಪತ್ತಿಸ್ತತಃ ಪ್ರೋಕ್ತಾ ಪಿತೃಯಜ್ಞವಿನಿರ್ಣಯಃ ॥ ೪೩ ॥

ಮಧುಪರ್ಕಫಲಂದಾನೇ ಸಂಸಾರಚಕ್ರವರ್ಣನಂ ।
ದುಷ್ಕೃತ್ಯಕರಣಂ ಚೈವ ಸುಖವರ್ಣನಮೇವ ಚ ॥ ೪೪ ॥

ಕೃತಾಂತದೂತಕಥನಂ ಯಾತನಾರೂಪಮೇವ ಚ ।
ವರ್ಣನಂ ನರಕಾಣಾಂ ಚ ಕಿಂಕರಾಣಾಂಚವರ್ಣನಂ ॥ ೪೫ ॥

ತಥಾ ಕರ್ಮವಿಪಾಕಂ ಚ ಯಾದೃಶಂ ಕರ್ಮತಾದೃಶಂ ।
ಪಾಪಕೃತ್ಯಸ್ಯ ಕಥನಂ ದೂತಪ್ರೇಷಣಕರ್ಮಚ ॥ ೪೬ ॥

ಮೂರ್ತಿಯ ಮತ್ತು ಸುವರ್ಣಮೂರ್ತಿಯ ಪ್ರತಿಷ್ಠಾದಿಕ್ರಮವನ್ನು ಹೇಳಿದೆ.

೪೩. ಬಳಿಕ ಶ್ರಾದ್ಧೋತ್ಪತ್ತಿ ಪಿಂಡಸಂಕಲ್ಪ ಪಿಂಡೋತ್ಪತ್ತಿ ಪಿತೃಯಜ್ಞ ನಿರ್ಣಯ ಇವುಗಳ ವಿಚಾರವಿದೆ.

೪೪. ಅನಂತರ ಮಧುಪರ್ಕೋತ್ಪತ್ತಿ ಮಧುಪರ್ಕದಾನವಿಧಿ ಫಲಾದಿಗಳ ವಿಚಾರವೂ, ಸಂಸಾರಚಕ್ರವರ್ಣನೆಯೂ, ದುಷ್ಕೃತ ಸುಕೃತಗಳ ಮತ್ತು ಸುಖದುಃಖಗಳ ವರ್ಣನೆಯೂ ಇವೆ.

೪೫–೪೬. ಬಳಿಕ ಯಮದೂತರ ಮತ್ತು ಅವರ ಯಾತನೆಯ ಸ್ವರೂಪವನ್ನೂ, ನರಕಗಳ ಮತ್ತು ಅಲ್ಲಿಯ ಕಿಂಕರರ ವರ್ಣನೆಯುನ್ನೂ, ಕರ್ಮಾನುಸಾರವಾದ ಪರಿಣಾಮ ಅಥವಾ ಫಲವಿಚಾರವನ್ನೂ, ಪಾಪಕರ್ಮಗಳನ್ನೂ, ಯಮನು ದೂತರನ್ನು ಆಜ್ಞಾಪಿಸಿ ಕಳುಹಿಸುವುದನ್ನೂ ಹೇಳಿದೆ.

ಶುಭಾಶುಭಸ್ಯ ಕಥನಂ ಶುಭಕರ್ಮಫಲೋದಯಂ ।
ಲೋಭನಂ ಪುರುಷಸ್ಯಾಪಿ ನಿಮೇರಾಖ್ಯಾನಮದ್ಭುತಂ ॥ ೪೭ ॥

ಪಾಪನಾಶಕಥಾಂ ದಿವ್ಯಾಂ ಗೋಕರ್ಣೇಶಸಮುದ್ಭವಂ ।
ನಂದಿನೋ ವರದಾನಂ ಚ ಜಲಶೈಲೇಶಯೋಸ್ತಥಾ ॥
ಶೃಂಗೇಶ್ವರಸ್ಯ ಮಹಿಮಾ ಚೈವಂ ವೃತ್ತಾಂತಸಂಗ್ರಹಃ ॥ ೪೮ ॥

ಏತಚ್ಛ್ರುತ್ವಾಪ್ನುಯಾತ್ಸರ್ವೋ ವರಾಹಶ್ರುತಿಜಂ ಫಲಂ ॥ ೪೯ ॥

ಇತಿ ವಿಷಯಾನುಕ್ರಮಣಿಕಾ ನಾಮ ಅಷ್ಟಾದಶಾಧಿಕದ್ವಿಶತತಮೋಽಧ್ಯಾಯಃ ಸಮಾಪ್ತಂ ವಾರಾಹಂಮಹಾಪುರಾಣಂ ಶುಭಂ

---

೪೭. ಅನಂತರ ಶುಭಾಶುಭವಿಚಾರವೂ, ಶುಭಕರ್ಮಫಲೋದಯ ವಿಚಾರವೂ, ಮನುಷ್ಯಪ್ರಲೋಭನವಿಚಾವೂ, ನಿಮಿಚಕ್ರವರ್ತಿಯ ಅದ್ಭುತ ಕಥೆಯೂ ಇವೆ.

೪೮-೪೯. ಆಮೇಲೆ ಪಾಪನಾಶಮಾರ್ಗಗಳನ್ನೂ, ದಿವ್ಯಕಥೆಗಳನ್ನೂ, ಗೋಕರ್ಣೇಶ್ವರಕ್ಷೇತ್ರಮಹಿಮೆಯನ್ನೂ ನಂದಿಗೆ ಶಂಕರನ ವರದಾನವನ್ನೂ, ಜಲೇಶ್ವರ ಶೈಲೇಶ್ವರ ಶೃಂಗೇಶ್ವರ ಮಹಿಮೆಯನ್ನೂ, ವರಾಹಪುರಾಣಶ್ರವಣ ಪಠನಾದಿಗಳ ಫಲವನ್ನೂ ಹೇಳಿದೆ. ಇದು ವರಾಹಪುರಾಣದ ವೃತ್ತಾಂತಸಂಗ್ರಹ ಇದನ್ನು ಕೇಳುವವರು ವರಾಹಪುರಾಣಶ್ರವಣದ ಫಲವನ್ನು ಪಡೆಯುವರು.

ಇದು ಶ್ರೀವರಾಹಪುರಾಣವಿಷಯಾನುಕ್ರಮಣಿಕೆಯೆಂಬ ಇನ್ನೂರಹದಿನೆಂಟನೆಯ ಅಧ್ಯಾಯ. ಶ್ರೀ ವರಾಹಮಹಾಪುರಾಣಂ ಸಂಪೂರ್ಣಂ ಶುಭಂ.